UNIVERSAL LIBRARY
OU_202163
UNIVERSAL LIBRARY

ಶ್ರಿಯೈ ನಮಃ

ಶ್ರೀನಿವಾಸಾಯ ನಮಃ

ಶ್ರೀಮತೇ ರಾಮಾನುಜಾಯ ನಮಃ

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ



# ದ್ವಯಾಧಿಕಾರೋಽಷ್ಟಾವಿಂಶಃ

ಮೂ. ಆಕರ್ಣಿತೋ ವಿಶನುತೇ ಕೃತಕೃತ್ಯ ಕಕ್ಷ್ಯಾಂ ।
ಮಾಮ್ರೇಡಿತೋ ದಿಶತಿ ಯಶ್ಚ ಕೃತಾರ್ಥ ಭಾವಮ್ ॥

---

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯ ನಮಃ

ಅವತಾರಿಕೆಯು—ಹಿಂದೆ ಮೂಲಮನ್ತ್ರಾಧಿಕಾರದಲ್ಲಿ "ಸರ್ವಮಷ್ಟಾಕ್ಷರಾಂತಸ್ಥಮ್" ಎಂದು ಹೇಳಿರುವಹಾಗೆ, ಉಪಾಯಾನುಷ್ಠಾನಕ್ಕೆ ಬೇಕಾದ ಸರ್ವಾಭಿಪ್ರಾಯಗಳೂ ಅಡಗಿರುವಾಗ ಇತರ ಮನ್ತ್ರಗಳ ಅಪೇಕ್ಷೆಯು ಏತಕ್ಕೆ? ಈ ಮನ್ತ್ರದ ಆವಶ್ಯಕತೆ ಏನು? ಎಂದರೆ "ಸಕೃದುಚ್ಚಾರ ಸ್ಸಂಸಾರ ತಾರಣಂ ಭವತಿ" ಎಂಬಲ್ಲಿ ಹೇಳಿರುವ ಹಾಗೆ, ಒಂದುಸಲ ಗುರುಮುಖೇನ ದ್ವಯೋಚ್ಚಾರಣೆಯನ್ನು ಮಾಡಿದರೆ ಸಂಸಾರ ವಿಮೋಚನೆಯಾಗುತ್ತೆಂದೂ "ದ್ವಯೇನ ಶರಣಂ ವ್ರಜೇತ್" ಎಂದೂ, ಹೇಳಿರುವದರಿಂದಲೂ, ಇದು ಶರಣ ಮನ್ತ್ರವು ಎಂದರೆ ಅನುಷ್ಠಾನ ಮನ್ತ್ರವು. ಈ ಮನ್ತ್ರದ ಪದ ವಾಕ್ಯ ಯೋಜನಾದಿಗಳು ಇದರ ಮಾಹಾತ್ಮ್ಯೆಯ ಪ್ರದರ್ಶನಕ್ಕಾಗಿ ಆವಶ್ಯಕವೆಂದು ಉಪಪಾದಿಸುತ್ತಾರೆ.

ಆಗಲಿ ಇದನ್ನು ಶರಣಮನ್ತ್ರವಾಗಿ ಭಾವಿಸಲು ಪ್ರಮಾಣಗಳೂ ಸಂಪ್ರದಾಯವೂ ಉಂಟೋ? ಎಂದರೆ ಪ್ರಥಮತಃ ಪ್ರಮಾಣಗಳುಂಟೆಂದು ತಿಳಿಸುತ್ತಾರೆ. (೧) ಕಠಶ್ರುತಿಯಲ್ಲಿ ಇದರ ಅನುಸಂಧಾನದ ಪ್ರಕಾರವ ಹೇಳಲ್ಪಟ್ಟಿರುವದರಿಂದಲೂ. (೨) ಪ್ರಶ್ನಸಂಹಿತೆಯಲ್ಲಿ ಇದರ ಮಾಹಾತ್ಮ್ಯೆಯು ಉಪಪಾದಿಸಲ್ಪಟ್ಟಿರುವದರಿಂದಲೂ (೩) ಇದು ಸಾಕ್ಷಾತ್ತಾಗಿ ಭಗವಂತನಿಂದಲೇ ಲಕ್ಷ್ಮಿಗೆ ಉಪದೇಶಿಸಲ್ಪಟ್ಟಿತೆಂದು ಪಾದ್ಮವಾಕ್ಯವಿರುವದರಿಂದಲೂ, (೪) ತನ್ಮೂಲಕ ಆದಿಯಲ್ಲಿ ಚತುರ್ಮುಖನು ಉಪದೇಶಿಸಲ್ಪಟ್ಟನೆಂದು ಅಲ್ಲಿಯೇ ಹೇಳಲ್ಪಟ್ಟಿರುವದರಿಂದಲೂ (೫) ಪೂರ್ವಾಚಾರ್ಯರುಗಳು ಇದನ್ನು ಶರಣಮನ್ತ್ರವಾಗಿ ಭಾವಿಸಿ ...ಅನುಷ್ಠಿಸಿ,

ಪ್ರತ್ಯೂಷತಾಂ ಭಜತಿ ಸಂಸೃತಿ ಕಾಳರಾತ್ರೇಃ ।
ಷಡ್ಪ್ಯಾಸಹಾಯ ಶರಣಾಗತಿ ಮನ್ತ್ರವಿಷಃ ॥

ಶಿಷ್ಯರುಗಳೂ ಅನುಷ್ಠಿಸುವ ಹಾಗೆ ಮಾಡಿರುವದರಿಂದಲೂ, ಈ ಮನ್ತ್ರವು ಪರಮ ಗ್ರಾಹ್ಯವೆಂದು ಭಾವಿಸತಕ್ಕದ್ದಾಗಿರುತ್ತದೆ. ಪಾದ್ಮಪುರಾಣದ ಭಗವದ್ವಾಕ್ಯಗಳು ಯಾವುವೆಂದರೆ—

"ಮಾಮೇಕಂಚ ಶ್ರಿಯಾಯುಕ್ತಂ ಭಕ್ತಿಯುಕ್ತೋ ನರೋತ್ತಮಃ ।
ದ್ವಯೇನ ಮನ್ತ್ರರತ್ನೇನ ಮತ್ಪ್ರಿಯೇಣ ಭಜೇತ್ಸದಾ ।
ಅಚಿರಾನ್ಮತ್ಪ್ರಸಾದೇನ ಮಲ್ಲೋಕಂಚ ಗಮಿಷ್ಯತಿ ।
ದುರ್ವೃತ್ತೋ ವಾ ಸುವೃತ್ತೋ ವಾ ಮೂರ್ಖಃ ಪಂಡಿತ ಏವ ವಾ ।
ಲಕ್ಷ್ಮೀಶಂ ಮಾಂ ಸುರೇಶೇಶಂ ದ್ವಯೇನ ಶರಣಂಗತಃ ।
ಮಲ್ಲೋಕ ಮಚಿರಾಲ್ಲಬ್ಧ್ವಾ ಮತ್ಸಾಯುಜ್ಯಂ (ಚ) ಸ ಗಚ್ಛತಿ ॥
ಪುರಾ ಮನ್ತ್ರದ್ವಯಂ ಬ್ರಹ್ಮನ್ ವಿಷ್ಣುಲೋಕೇ ಮಹಾಪುರೇ ।
ತಸ್ಮಿನ್ನಂತಃ ಪುರೇ ಲಕ್ಷ್ಮ್ಯೈ ಮಯಾದತ್ತಂ ಸನಾತನಮ್ ।
ಲಕ್ಷ್ಮ್ಯಾ ಲಬ್ಧಂ ತ್ವಯಾಚೈವ ಮನ್ತ್ರರತ್ನಂ ದ್ವಯಂ ವಿಭೋ ॥"

ಇವರ ಅರ್ಥವೇನೆಂದರೆ—"ಓ ಚತುರ್ಮುಖಬ್ರಹ್ಮನೇ, ಲಕ್ಷ್ಮೀಯುಕ್ತನಾದ ನನ್ನೊಬ್ಬನನ್ನೇ ಭಕ್ತಿಯುಕ್ತನಾದ ಮುಮುಕ್ಷುವಾದ ಪುರುಷಶ್ರೇಷ್ಠನು ದುಷ್ಕೃತಿಯೋ ಆಗಲಿ ಸುಕೃತಿಯೋ ಆಗಲಿ ಮೂರ್ಖನೇ ಆಗಲಿ ಪಂಡಿತನೇ ಆಗಲೀ ಲಕ್ಷ್ಮೀಪತಿಯಾಗಿಯೂ ಎಲ್ಲಾ ದೇವತೆಗಳಿಗೂ ಸ್ವಾಮಿಯಾಗಿರುವ ನನ್ನನ್ನು ದ್ವಯಮನ್ತ್ರವನ್ನು ಉಚ್ಚರಿಸುತ್ತಾ ಶರಣ ಹೊಂದುವನೋ, ಆತನು ಶೀಘ್ರದಲ್ಲಿ, ಎಂದರೆ ಪುನರ್ಜನ್ಮಗಳಿಲ್ಲದೇನೇ ನನ್ನ ಲೋಕವಾದ ವೈಕುಂಠವನ್ನು ಕುರಿತು ಹೋಗುವನು. ಚಕಾರದಿಂದ ಇಂತಹ ಮೋಕ್ಷವನ್ನು ಕೊಡುವ ಶಕ್ತಿಯು ಇನ್ನು ಯಾರಿಗೂ ಇಲ್ಲವೆಂಬ ಭಾವವು. ಹೀಗೆ ನನ್ನ ಲೋಕವನ್ನು ಶೀಘ್ರದಲ್ಲಿ ಹೊಂದಿ ನನ್ನ ಸಾಯುಜ್ಯವನ್ನು ಹೊಂದುವನು ಎಂದರೆ ನನಗೆ ಸಮಾನವಾದ ಆನಂದವನ್ನು ಹೊಂದುವನು; ಬಹಳ ಕಾಲದ ಹಿಂದೆ ಓ ಬ್ರಹ್ಮನೇ ಈ ದ್ವಯವೆಂಬ ಮನ್ತ್ರವು ವಿಷ್ಣುಲೋಕವೆಂಬ ಮಹಾ ಪಟ್ಟಣದಲ್ಲಿ ಅಂತಃಪುರವಾಸಿಯಾದ ಲಕ್ಷ್ಮಿಗೆ ನನ್ನಿಂದ ಉಪದೇಶಿಸಲ್ಪಟ್ಟಿತು. ತನ್ಮೂಲಕ ನಿನಗೂ ಕೂಡ ಅದು ಉಪದೇಶಿಸಲ್ಪಟ್ಟಿತು." ಎಂಬುದು. ಹೀಗೆ ತುಂಬಾ ಮಾಹಾತ್ಮ್ಯಯುಳ್ಳ ಮನ್ತ್ರವಾದುದರಿಂದ ಅಧಿಕಾರಾದಿಯಲ್ಲಿ ಇದನ್ನು ಕೊಂಡಾಡುತ್ತಾರೆ.—

**ಅರ್ಥವು—ಯಃ** – ಯಾವ **ಈ** ಪ್ರಸಿದ್ಧವಾದ ಶರಣಾಗತ್ಯನುಷ್ಠಾನ ಮನ್ತ್ರವು, ಯಚ್ಛಬ್ದವು ಪ್ರಸಿದ್ಧಿಯನ್ನು ಪ್ರದರ್ಶಿಸುತ್ತದೆ, **ಆಕರ್ಣಿತಃ**-ಪರಮಾಚಾರ್ಯರಿಂದ-ಸುಮ್ಮನೆ ಒಂದು ಸಲ ಕೇಳಲ್ಪಟ್ಟರೂ, ಇದರಿಂದ ತಾನು ಉಚ್ಚರಿಸಬೇಕಾದುದು ಕೂಡ ಅವಶ್ಯಕವಿಲ್ಲವೆಂಬ ಭಾವವು, **ಕೃತಕೃತ್ಯ ಕ್ಯಕಕ್ಷ್ಯಂ** - ಸಾರ

ದೀಪಿಕೆಯವರು ಕೃತಕೃತ್ಯನಾದ ದಶೆಯನ್ನು ಎಂದೂ, ಸಾರವಿವರಣಿಯವರು ಕೃತಕೃತ್ಯನ ಮರ್ಯಾದೆಯನ್ನೂ ಎಂದೂ ಅರ್ಥಮಾಡಿರುತ್ತಾರೆ, ಕೃತಕೃತ್ಯರ ಗೋಷ್ಠಿಯನ್ನು ಎಂಬ ತಾತ್ಪರ್ಯವು, **ವಿತನುತೇ**-ಉಂಟುಮಾಡುತ್ತದೋ, ಕೃತಕೃತ್ಯನು ಹೇಗೆಂಬುದು ಕೃತಕೃತ್ಯಾಧಿಕಾರದಲ್ಲಿ ಉಪಪಾದಿತವು. "**ಆಕರ್ಣಿತೋಪಿ ತನುತೇ**" ಎಂದು ಪಾಠಾಂತರವು. ಕಿವಿಯಿಂದ ಕೇಳಿದರೂ ಕೂಡ ಉಂಟುಮಾಡುತ್ತದೆ ಎಂಬರ್ಥವಾಗುವದರಿಂದ ಅರ್ಥಭೇದವೇನೂಇಲ್ಲವು **ಆಮ್ರೇಡಿತಂ** "**ಆಮ್ರೇಡಿತಂ" ದ್ವಿಸ್ತ್ರಿರುಕ್ತಂ**" ಎಂಬ ನಿಘಂಟುವಿನ ಪ್ರಕಾರ ಆ ಮನ್ತ್ರವನ್ನೇ ಎರಡು ಮೂರುಸಲ ಉಚ್ಚರಿಸಿದರೆ, **ಯಶ್ಚ**-ಯಾವ ಪ್ರಸಿದ್ಧವಾದ ಈ ಮನ್ತ್ರವು, **ಕೃತಾರ್ಥಭಾವಮ್**- ಕೃತಪ್ರಯೋಜನನಾಗಿರುವ ಭಾವವನ್ನು, ಸ್ವಾಮಿಗೆ ಸಮಾನವಾದ ಆನಂದವನ್ನು ಹೊಂದಿ ಆತನಿಗೆ ನಿತ್ಯಕೈಂಕರ್ಯವನ್ನೆಸಗುವ ಭಾವವನ್ನು, **ದಿಶತಿ**-ಪ್ರದರ್ಶಿಸುತ್ತದೋ, ಮತ್ತು ಯಾವ ಮನ್ತ್ರವು, **ಸಂಸೃತಿಕಾಳರಾತ್ರೇಃ** ಸಂಸಾರವೆಂಬ ಗಾಢಾಂಧಕಾರವುಳ್ಳ ರಾತ್ರಿಗೆ, **ಪ್ರತ್ಯೂಷತಾಂ** ಅರುಣೋದಯವೆಂಬ ಭಾವವನ್ನು, ಭಜತಿ–ಹೊಂದುತ್ತದೋ, ಅಂತಹ **ಪದ್ಮಾಸಹಾಯಶರಣಾಗತಿಮನ್ತ್ರಃ** - ಲಕ್ಷ್ಮಿಯನ್ನೇ ಯಾವಾಗಲೂ ಅಗಲದೇ ಸಹಧರ್ಮಚಾರಿಣಿಯಾಗಿ ಹೊಂದಿರುವ ಶ್ರೀಮನ್ನಾರಾಯಣನನ್ನು ಶರಣುಹೊಂದುವ ಮನ್ತ್ರವು, **ಏಷಃ**-ಇದು. "**ನಿವೇದಯೀತ ಸ್ವಾತ್ಮಾನಂ ವಿಷ್ಣಾವಮಲತೇಜಸಿ । ತದಾತ್ಮಾ ತನ್ಮನಾಶ್ಯಾನ್ತಸ್ತದ್ವಿಷ್ಣೋರಿತಿಮನ್ತ್ರತಃ**" ಎಂಬಲ್ಲಿ "**ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯನ್ತಿ ಸೂರಯಃ । ದಿವೀವ ಚಕ್ಷುರಾತತಂ ತದ್ವಿಪ್ರಾಸೋ ವಿಪನ್ಯವೋ ಜಾಗ್ರವಾಗ್ಂಸಃ ಸಮಿಂಧತೇ । ವಿಷ್ಣೋರ್ಯತ್ಪರಮಂ ಪದಮ್**" ಎಂಬ ಶರಣಮನ್ತ್ರದಿಂದ ಶರಣಾಗತಿಯನ್ನು ಅನುಷ್ಠಿಸತಕ್ಕದ್ದೆಂದು ಹೇಳಿರುತ್ತದೆ. **ಮೂಲಮನ್ತ್ರೇಣ ಸ್ವಾತ್ಮಾನಂ ಭಗವತೇ ನಿವೇದಯೇತ್** ಮತ್ತು "**ವಸುರಣ್ಯೋವಿಭೂರಸಿ**" ಎಂದಾರಂಭಿಸಿ, "**ಓಮಿತ್ಯಾತ್ಮಾನಂ ಯುಂಜೀತ**" ಎಂದು ಮುಗಿಸಿದ ಮನ್ತ್ರದಿಂದಲೂ ಶರಣಾಗತಿಯನ್ನು ಅನುಷ್ಠಿಸತಕ್ಕದ್ದೆಂದು ತೈತ್ತರೀಯಶ್ರುತಿಯು ಉಪದೇಶಿಸಿರುತ್ತದೆ. ಹೀಗೆ ಈ ಮನ್ತ್ರಗಳೂ ಶರಣಮನ್ತ್ರವಾದರೆ ಈ ದ್ವಯಮನ್ತ್ರಕ್ಕೆ ಪ್ರಾಶಸ್ತ್ಯವು ಹೇಗೆ? ಎಂದರೆ, ಇದಕ್ಕೆ ವಿಶೇಷ ಮಾಹಾತ್ಮ್ಯೆಯೂ ಅರ್ಥಸ್ವಾರಸ್ಯವೂ, ಪೂರ್ವಾಚಾರ್ಯರು ಅನುಷ್ಠಿಸಿದಸತ್ಸಂಪ್ರದಾಯವೂ ಇರುವದರಿಂದಲೂ ಇದನ್ನು ಕೊಂಡಾಡಿರುತ್ತಾರೆ.

**ತಾತ್ಪರ್ಯವು**— ಮೇಲೆ ಹೇಳಿದಹಾಗೆ ಇತರ ಶರಣಮನ್ತ್ರಗಳೂ ಇರುವಾಗ ಇದನ್ನೇ ಮುಖ್ಯವಾಗಿ **ಶರಣಾಗತಿಮನ್ತ್ರ ಏಷಃ** ಎಂದುಹೇಳಲು ಮುಖ್ಯಕಾರಣವೇನೆಂದರೆ? ಇದು ಸಂಪ್ರದಾಯರೀತ್ಯಾ ಬಂದುದು. ನಾಥಮುನಿಗಳ ಕಾಲದಿಂದಲೂ ಈ ದ್ವಯಕ್ಕೇನೇ ಮಾಹಾತ್ಮ್ಯೆಯು. ಶ್ರೀಯಾಮುನರ್ಯರು ಈ ಮನ್ತ್ರೋಪದೇಶವನ್ನು ತಮ್ಮ ಆಚಾರ್ಯರಾದ ಪೆರಿಯನಂಬಿಯಿಂದ ಹೊಂದಿದರು.

ಈ ಗುಹ್ಯತಮವಾದ ಮನ್ತ್ರದ ವಿಶೇಷಾರ್ಥಗಳನ್ನೆಲ್ಲಾ **ತಿರುಕ್ಕೋಟ್ಟಿಯೂರ್ ನಂಬಿಯಿಂದ** ಪಡೆದರು. ೧೮ ನೆಯ ಸಲ ಪ್ರಾರ್ಥಿಸಿದನಂತರ ಈ ನಂಬಿಯು ಶ್ರೀ ಭಾಷ್ಯಕಾರರಿಗೂ ಇವರ ಶಿಷ್ಯರಾದ ಕೂರೇಶದಾಶರಥಿಗಳಿಗೂ ಉಪದೇಶಿಸಿದರೆಂಬ ಇತಿಹಾಸವುಂಟು. ಈ ಮನ್ತ್ರವನ್ನು ಒಂದೇಸಲ ಆಚಾರ್ಯರು ಉಚ್ಚರಿಸಿದುದನ್ನು ಆಶ್ರಯಿಸಿದವನು ಕೇಳಿ ಉಚ್ಚರಿಸಿದರೆ, ಅವರು ಅನಂತರ ಆಶ್ರಿತನಿಗೆ ತಾವೇ ಭರಸಮರ್ಪಣವನ್ನು ಮಾಡಿ. ದೇಹಾವಸಾನಾನಂತರ ತಮ್ಮ ಆಶ್ರಿತನಿಗೆ ಮುಕ್ತಿಯನ್ನು ಕೊಡುವಹಾಗೆ ಶ್ರೀಮನ್ನಾರಾಯಣನನ್ನು ಪ್ರಾರ್ಥಿಸುತ್ತಾರೆ.– ೮೦೧-೮೦೪ ನೆಯ ಪುಟಗಳನ್ನು ನೋಡಿ. ಆದುದರಿಂದಲೇ ಇದಕ್ಕೆ ಶರಣಾಗತಿ ಮನ್ತ್ರವೆಂದು ಹೆಸರು. ಮೂಲಮನ್ತ್ರದಿಂದ, ತನ್ನ ಸ್ವರೂಪ ಪರಸ್ವರೂಪ, ಉಪಾಯಪುರುಷಾರ್ಥಗಳ ಜ್ಞಾನವನ್ನು ಹೊಂದಿ, ಅನಂತರ ಈ ಮನ್ತ್ರದ ಮೂಲಕ ಆಚಾರ್ಯಮುಖೇನ ಶರಣಾಗತಿಯನ್ನು ಅನುಷ್ಠಿಸುವದು ಕ್ರಮವಾದುದರಿಂದ, ಮೂಲಮಂತ್ರವಾದ ನಂತರ ಈ ದ್ವಯನಮನ್ತ್ರದ ಉಪಪಾದನೆಯು ಆರಂಭಿಸಲ್ಪಟ್ಟಿತು. ಆಚಾರ್ಯರು ಪುರುಷಕಾರರೂಪದಲ್ಲಿ ಅವಶ್ಯಕವಾದುದರಿಂದ, ಶ್ರೀಯಃಪತಿಯು ಅವರ ಪ್ರಾರ್ಥನೆಗೆ ಕಟ್ಟುಬಿದ್ದು ನಡೆಸಿಕೊಡಬೇಕಾಗಿರುವದರಿಂದ ಸಾಮಾನ್ಯರನ್ನು ಆಚಾರ್ಯರೆಂದು ವರಿಸತಕ್ಕದ್ದಲ್ಲವು. ತುಂಬಾ ಜ್ಞಾನನಿಷ್ಠೆ ಆಚಾರ್ಯನಿಷ್ಠೆಗಳಿಂದ ಶೋಭಿಸಿಕೊಂಡಿರುವ ಮಹಾವೈರಾಗ್ಯಶಿಖಾಮಣಿಯನ್ನೇ ಆಶ್ರಯಿಸಿಕೊಂಡಿರತಕ್ಕದ್ದಾಗಿರುತ್ತದೆ. ಈ ಸಂದರ್ಭದಲ್ಲಿ ಶ್ರೀಯತಿವರ್ಯರು ಹೇಳಿರುವುದೇನೆಂದರೆ; **ಆಚಾರ್ಯಸ್ಯ, ಜ್ಞಾನವತ್ತ್ವಂ ಅನುಮಾಯ ತದುಪಸತ್ತಿಃ ಕ್ರಿಯತೇ** ಎಂಬುದಾಗಿ ಜ್ಞಾನನಿಷ್ಠೆಯನ್ನು ವಿಚಾರಿಸಿ ತಿಳಿದು ಆಶ್ರಯಿಸಬೇಕೆಂದು ಹೇಳಿದರೆ, ಕರ್ಮನಿಷ್ಠೆಯು ಬೇಡವೋ? ಎಂದರೆ ಅದೂ ಅದರಲ್ಲೇ ಅಂತರ್ಗತವು.

ಇದರಿಂದ ಮೋಕ್ಷಾರ್ಥಿಯು ಶರಣಾಗತಿಯನ್ನು ಪರತತ್ವ ಶ್ರೀಮನ್ನಾರಾಯಣನ ಪಾದಾರವಿಂದದಲ್ಲೇ ಅನುಷ್ಠಿಸತಕ್ಕದ್ದಾದುದರಿಂದ, ಅನ್ಯದೇವತೆಗಳಾಗಿ ನಮ್ಮಹಾಗೆಯೇ ಜೀವಕೋಟಿಗೆಸೇರಿ ಉತ್ಕೃಷ್ಟಲೋಕಾಧಿಪತ್ಯಗಳನ್ನು ಹೊಂದಿರುವ ಬ್ರಹ್ಮರುದ್ರೇಂದ್ರಾದಿಗಳನ್ನೆಲ್ಲಾ ನಿರಾಕರಿಸಿ, **ಪದ್ಮಾಸಹಾಯ ಶರಣಾಗತಿ** ಎಂದು ಪ್ರಯೋಗಿಸಿರುತ್ತಾರೆ. **ಪದ್ಮಾಸಹಾಯ** ಪ್ರಯೋಗವು ಪ್ರಥಮತಃ ಶರಣಾಗತಿಯು ಲಕ್ಷ್ಮಿಯಲ್ಲೂ, ಅನಂತರ ನಾರಾಯಣನಲ್ಲೂ ಶ್ರೀಯತಿವರ್ಯರು ಶರಣಾಗತಿಗದ್ಯದಲ್ಲಿ ತೋರಿರುವ ಸಂಪ್ರದಾಯವನ್ನು ಸಮರ್ಥಿಸುತ್ತದೆ. ಸಿದ್ಧೋಪಾಯನು ಬರೀ ನಾರಾಯಣಮಾತ್ರವೇ ಅಲ್ಲವೆಂದೂ ಲಕ್ಷ್ಮೀಯೊಂದಿಗೇನೇ ಸಿದ್ಧೋಪಾಯನು ಎಂಬುದು **ಪದ್ಮಾಸಹಾಯ** ಎಂಬಪ್ರಯೋಗವು ಸೂಚಿಸುತ್ತದೆ. ಲಕ್ಷ್ಮೀಸಹಾಯುಕನಾಗಿಯೇ ಸರ್ವೇಶ್ವರನ ಎಲ್ಲಾ ಲೋಕಗಳ ಮತ್ತು ಈ ಲೋಕದ ಸರ್ವಪ್ರವೃತ್ತಿಗಳೂ, ಚೇತನರಿಗೆ ಸರ್ವವಿಧಶ್ರೇಯಃಪರಂಪರೆಗಳೂ **ಪದ್ಮಾಸಹಾಯ**ನಾಗಿಯೇ, ಮಹರ್ಷಿಯ "**ಸಹಧರ್ಮಚರೀ ತವ**" (ರಾ. ಬಾ.) ಎಂಬ

ದಿವ್ಯಸೂಕ್ತಿಯು ಅನುವಾದವೇ **ಪದ್ಮಾ ಸಹಾಯ** ಎಂಬುದು. ಇದರಿಂದ ಲಕ್ಷ್ಮಿಗೆ ಉಪಾಯಕೋಟಿಯಲ್ಲಿ ಅನ್ವಯ ವಿಲ್ಲವೆಂದು ಹೇಳುವ ಕೆಲವರ ವಾದವು ಶಾಸ್ತ್ರಸಮ್ಮತವಲ್ಲವೆಂಬ ಭಾವವೂ ದ್ಯೋತಿತವು ಲಕ್ಷ್ಮಿಯು ಯಾವಾಗಲೂ ಪತಿಯನ್ನಗಲದೇ ಇರುವವಳೆಂದು **"ವಿಷ್ಣೋರನಪಾಯಿನೀ"** ಎಂಬ ಮಹರ್ಷಿಯ ಪ್ರಯೋಗವುಂಟು **"ನ ಚ ಸೀತಾ ತ್ವಯಾ ಹೀನಾ ನ ಚಾಹಮಪಿ ರಾಘವ । ಮುಹೂರ್ತಮಪಿ ಜೀವಾವಃ ಮತ್ಸ್ಯಾವಿವ ಜಲಾದ್ಧೃತೌ "** ಎಂಬ ಲಕ್ಷ್ಮಣೋಕ್ತಿಯು ಅನುಸಂಧೇಯವು. (ರಾ ಅಯೋಧ್ಯಾ.) **ಪದ್ಮಾಸಹಾಯಃ** ಎಂದು ಇವರು ಹೇಳಿರುವ ಹಾಗೆ ಪರತತ್ತ್ವವು **"ಬ್ರಹ್ಮಣಿ ಶ್ರೀನಿವಾಸೇ"** ಎಂದೇ ಶ್ರೀ ಯತಿವರ್ಯರು ತಮ್ಮ ಶ್ರೀ ಭಾಷ್ಯದ ಮಙ್ಗಳಶ್ಲೋಕದಲ್ಲಿ ಪ್ರಯೋಗಿಸಿರುತ್ತಾರೆ. ಆದುದರಿಂದ ನಮಗೆ ದಿವ್ಯದಂಪತಿಗಳಿಬ್ಬರೂ ಸೇರಿ **"ಶ್ರೀಮನ್ನಾರಾಯಣಃ"** ಪರತತ್ತ್ವವು ಸನ್ನಿಯೋಗಶಿಷ್ಟನ್ಯಾಯದ ಪ್ರಕಾರ ನಿತ್ಯಯೋಗವುಳ್ಳವರಾದುದರಿಂದ ಇಬ್ಬರೂ ಉಪಾಯಕೋಟಿಯಲ್ಲಿ ಸೇರಿದವರೇ **ಪದ್ಮಾಸಹಾಯ** ಪದವು ಈ ನಿತ್ಯಯೋಗವನ್ನು ಪ್ರಕಟಿಸುತ್ತದೆ. ಆದುದರಿಂದಲೇ ಆಕೆಗೆ ಪುರುಷಕಾರತ್ವವೂ ಏರ್ಪಟ್ಟಿತು. ಹೀಗೆ ನಮಗೆ ಇಬ್ಬರೂ ಶರಣ್ಯರು, ಇಬ್ಬರೂ ಶೇಷಿಗಳು. ಲಕ್ಷ್ಮಿಯು ತನ್ನ ವಾಲ್ಲಭ್ಯಾತಿಶಯದಿಂದ, ನಿಗ್ರಹಸಙ್ಕಲ್ಪನಾದ ತನ್ನ ಪತಿಯನ್ನು ತಿರುಗಿಸಿ ಅನುಗ್ರಹಸಙ್ಕಲ್ಪನನ್ನಾಗಿ ಮಾಡುವ ಶಕ್ತಿಯುಳ್ಳ ಅನುಗ್ರಹಮಯಳು. **ಪದ್ಮಾಸಹಾಯ** ಪ್ರಯೋಗವು ಇಬ್ಬರ ಮಙ್ಗಳವಿಗ್ರಹತ್ವವನ್ನೂ, ಕಲ್ಯಾಣಗುಣ ವಿಭವೈಶ್ವರ್ಯಾದಿ ಪೂರ್ತಿಯನ್ನೂ ಸೂಚಿಸುತ್ತದೆ ಉಪಾಯತ್ವ ಪುರುಷಕಾರತ್ವವೆರಡೂ ಲಕ್ಷ್ಮಿಗೆ ಹೇಗೆ? ಎಂಬಾಕ್ಷೇಪಕ್ಕೆ ಹಾಗೆ ಉಂಟೆಂದು ಶಾಸ್ತ್ರಪಙ್ಕ್ತಿಗಳೂ ಇರುವದಲ್ಲದೆ, ಲೋಕದಲ್ಲೂ ಸಹ ರಾಜನ ಮುಖ್ಯಮಂತ್ರಿಗೆ ಈ ಎರಡು ಶಕ್ತಿಗಳೂ ಇರುವದನ್ನು ಕಂಡಿರುವೆವು

ಈ ಮಂತ್ರದ ಮಾಹಾತ್ಮ್ಯೆಯು ಮೂರು ವಾಕ್ಯಗಳಿಂದ ಹೇಳಲ್ಪಟ್ಟಿತು ಈ ಮಂತ್ರವು—

(೧) ಮೋಕ್ಷಾರ್ಥಿಯನ್ನು ಕೃತಕೃತ್ಯನನ್ನಾಗಿ ಮಾಡುತ್ತದೆ
(೨) ಕೃತಾರ್ಥನನ್ನಾಗಿ ಮಾಡುತ್ತದೆ.
(೩) ಸಂಸಾರದಿಂದ ಬಿಡಿಸುತ್ತದೆ. ಎಂಬದಾಗಿ

ಈ ಮಂತ್ರದ ಮೂಲಕ ಉಪಾದಾನಪ್ರಸಕ್ರಮವು ಪ್ರಥಮಪಾದದಿಂದ ಬೋಧಿತವು ಮನ್ತ್ರವು **ಆಕರ್ಣಿತ**ವಾಗಬೇಕು. ಯಾರಮೂಲಕ? ಪರಮಾಚಾರ್ಯರಿಂದ, ಸರ್ವಗುಣಯುಕ್ತರಾದ ಸರ್ವೋತ್ಕೃಷ್ಟರಾದವರ ಮೂಲಕ ಮುಂದಿನ ಪಾದದಲ್ಲಿ **ಆಮ್ರೇಡಿತ** ಶಬ್ದವಿರುವದರಿಂದ ಈ ಮನ್ತ್ರದ ಆಚಾರ್ಯೋಚ್ಚಾರಣೆಯೂ ಸಕೃತ್ತೆಂದು ವ್ಯಕ್ತಪಡುತ್ತದೆ. ಅದಕ್ಕೆ ಪ್ರಮಾಣಗಳುಂಟೋ? ಎಂದರೆ **"ಸಕೃದುಚ್ಚಾರಸ್ಸಂಸಾರತಾರಣಂ ಭವತಿ" "ಸಕೃಜ್ಜಪ್ತೇನ ಮನ್ತ್ರೇಣ ಕೃತಕೃತ್ಯ**

**ಸ್ಸುಖೀ ಭವೇತ್" "ಸಕೃದೇವಹಿ ಶಾಸ್ತ್ರಾರ್ಥಃ ಕೃತೋಽಯಂ ತಾರಯೇ ನ್ನರಮ್" "ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ"** ಇತ್ಯಾದಿ ಪ್ರಮಾಣಗಳುಂಟು.

ಒಂದೇಸಲ ಉಚ್ಚರಿಸಿದ ಮಾತ್ರದಿಂದ ಉಪಾಯಾನುಷ್ಠಾನವು ಸಿದ್ಧಿಸಿ. ಮೋಕ್ಷಾರ್ಥಿಗೆ ಅಭಯಪ್ರದಾನವು ದೊರೆತು ಕೃತಕೃತ್ಯನಾಗುವನೆಂದು ಶಾಸ್ತ್ರವು ಹೇಳಿತು. ಅನಂತರ ಈ ಮನ್ತ್ರದ ಆವಶ್ಯಕತೆಯುಂಟೋ? ಎಂದರೆ, ತಾನು ಕೃತಕೃತ್ಯನಾದೆನೆಂದು ಮನಸ್ಸು ಬಂಪಹಾಗೆ ಇರಬಹುದೋ? ಎಂದರೆ ಕೂಡದು. ಕೃತಕೃತ್ಯನಿಗೂ ಇತಿಕರ್ತವ್ಯಗಳುಂಟೆಂದು ೧೨ ವಿಧ ಉತ್ತರ ಕೃತ್ಯಗಳು ಉತ್ತರ ಕೃತ್ಯಾಧಿಕಾರದಲ್ಲಿ ಹಿಂದೆ ಹೇಳಲ್ಪಟ್ಟವು. ಅವುಗಳಲ್ಲಿ ಒಂದು ಯಾವುದು ಎಂದರೆ ಭಗವದ್ಭಾಗವತ ಕೈಙ್ಕರ್ಯವು. ಈ ಮನ್ತ್ರದಿಂದ ಯಾವಾಗ ಕೃತಕೃತ್ಯನಾದನೋ ಈ ಮನ್ತ್ರಾರ್ಥಾನುಸಂಧಾನವನ್ನು ಮನ್ತ್ರಜಪ ಮೂಲಕ ಕೈಙ್ಕರ್ಯರೂಪದಲ್ಲಿ ನಡೆಸುವದು ಈತನ ಕೃತಜ್ಞತೆಗೆ ಸೇರಿದುದು. ಆದುದರಿಂದ ಅಸಕೃತ್ ಪದೇ ಪದೇ ಉಚ್ಚರಿಸುತ್ತಾ ಅನುಸಂಧಾನ ಮಾಡತಕ್ಕದ್ದೆಂಬುದನ್ನು ವ್ಯಕ್ತಪಡಿಸಿ, ಇಂತಹ ಪುನಃ ಪುನಃ ಮನ್ತ್ರಪಠನದಿಂದ ಕೃತಕೃತ್ಯನು ಕೃತಾರ್ಥನಾಗುವನೆಂದು **"ದಿಶತಿ ಯಶ್ಚ ಕೃತಾರ್ಥಭಾವಮ್"** ಎಂಬುದರಿಂದ ತಿಳಿಸಿದರು. ಹೀಗೆ ಪುನಃ ಪುನಃ ಪಠನವನ್ನು ಜಪರೂಪದಲ್ಲಿ ಸಂಧ್ಯಾಕಾಲಗಳಲ್ಲಿ ಗಾಯತ್ರೀ ಉಪಸ್ಥಾನವನ್ನು ಮುಗಿಸಿ ಆಚಾರ್ಯರುಗಳ ತನಿಯುಗಳನ್ನು ಹೇಳಿ ಮೂಲಮನ್ತ್ರ ಜಪವಾದ ನಂತರ ಚರಮಶ್ಲೋಕ ಜಪಕ್ಕೆ ಪೂರ್ವಭಾವಿಯಾಗಿ ನಡೆಸತಕ್ಕದ್ದು. ಮತ್ತು ವಿರಾಮವಿರುವ ಕಾಲಗಳಲ್ಲೂ, ಶ್ರೀ ಯತಿವರ್ಯರು **"ದ್ವಯಮರ್ಥಾನುಸಂಧಾನೇನ ಸಹ ಸದೈವಂ ವಕ್ತಾ"** ಎಂಬಲ್ಲಿ ಹೇಳಿರುವ ಹಾಗೂ, **"ಸಕಲಂಕಾಲಂ ದ್ವಯೇನ ಕ್ಷಿಪ"** ಎಂದು ಆಚಾರ್ಯರೇ ಸಾರಸಙ್ಗ್ರಹಾಧಿಕಾರದಲ್ಲಿ ಹೇಳಿರುವ ಹಾಗೂ, ಈ ಮನ್ತ್ರವನ್ನು ಉಚ್ಚರಿಸತಕ್ಕದ್ದೆಂದು ತಿಳಿಸುವದಕ್ಕಾಗಿ ಇಲ್ಲಿ **ಆಮ್ರೇಡಿತ** ಶಬ್ದ ಪ್ರಯೋಗವು. ಸಕಲಕಾಲದಲ್ಲೂ ದ್ವಯೋಚ್ಚಾರಣೆಯು ಸಾಧ್ಯವಿಲ್ಲವುದರಿಂದ ಅದರ ಅಭಿಪ್ರಾಯವೇನೆಂಬುದು ೨೩೭ ನೆಯ ಪುಟದಲ್ಲಿ ವ್ಯಕ್ತಪಡಿಸಿರುತ್ತದೆ. **ಕೃತಾರ್ಥಭಾವವು** ಭಗವಂತನಿಗೆ ಕೈಂಕರ್ಯವನ್ನೆಸಗುವದೇ. ಈ ಸಂದರ್ಭದಲ್ಲಿ ಪುನಃ ಪುನಃ ದ್ವಯೋಚ್ಚಾರಣೆಯು ವಾಚಕಕೈಙ್ಕರ್ಯವು

ಹೀಗೆ ಪ್ರಪದನವನ್ನು ಈ ದ್ವಯಮನ್ತ್ರದ ಮೂಲಕ ಅನುಷ್ಠಿಸಿದವನಿಗೆ ಮುಕ್ತಿಯು ಸಿದ್ಧವು. ಇದು ಹಿಂದೆಯೇ ಅಪರಾಧಪರಿಹಾರಾಧಿಕಾರದಲ್ಲಿ **ಅನಘರ್ಯ ಕ್ರೋಡೀಕರೋತಿ ಪ್ರಭುಃ** ಎಂಬಲ್ಲೂ, ಅಭಯಪ್ರದಾನಸಾರದಲ್ಲೂ, ಮತ್ತು ಇತರ ಸ್ಥಳಗಳಲ್ಲೂ ವ್ಯಕ್ತವು. ಅದನ್ನೇ ಇಲ್ಲಿಯೂ **"ಸಂಸೃತಿ ಕಾಳರಾತ್ರೇಃ ಪ್ರತ್ಯೂಷತಾಂ ಭಜತಿ"** ಎಂಬುದರಿಂದ ಹೇಳಿದರು. ಮೂಲಮನ್ತ್ರಕ್ಕೆ **"ಸರ್ವಮಷ್ಟಾಕ್ಷರಸ್ಥಂ"** ಎಂಬಲ್ಲಿ ಹೇಳಿರುವಹಾಗೆ ಮಾಹಾತ್ಮ್ಯೆಯು.

ಈ ದ್ವಯಕ್ಕಾದರೋ ಸಕೃದುಚ್ಚಾರಣೆಯಿಂದ ಕೃತಕೃತ್ಯನಾಗಿ ಅನಂತರ ಅದರ ಜಪ ಮತ್ತು ಉಕ್ತಿಗಳಿಂದ ಕೃತಾರ್ಥನಾಗಿ ಮುಕ್ತಸದೃಶನಾಗುವ ಮಾಹಾತ್ಮ್ಯೆಯು ಉಪದೇಶಿಸಲ್ಪಟ್ಟಿತು. ಗುರುಮುಖೇನ ಕೇಳಿದುದನ್ನು ಸಕೃದುಚ್ಚರಿಸುವದು ಮೋಕ್ಷಹೇತುವಾದರೆ, **ಜ್ಞಾನಾನ್ಮೋಕ್ಷಃ**-ಎಂದು ಶ್ರೀ ಶಂಕರಾಚಾರ್ಯರು ಹೇಳಿದುದನ್ನು ಶ್ರೀ ಯತಿವರ್ಯರು ಅನುಮೋದಿಸಿ ಹೇಳಿದುದಕ್ಕೆ ವಿರೋಧವಾಗುವದಿಲ್ಲವೇ? ಎಂದರೆ ಶ್ರೀ ಶಂಕರಾಚಾರ್ಯರು ಹೇಳಿದಹಾಗೆ **ತತ್ವಮಸಿ** ಎಂಬ ವಾಕ್ಯಜನ್ಯಜ್ಞಾನವಲ್ಲವೆಂದೂ, ಧ್ಯಾನಪ್ರಪದನರೂಪಾನುಷ್ಠಾನದಿಂದ ಕೂಡಿದ ಜ್ಞಾನದಿಂದ ಮೋಕ್ಷವೆಂದು ತಿಳಿಯತಕ್ಕದ್ದು ಸ್ವಾಮಿ ಪಾದದಲ್ಲಿ ಮಾಡಿದ ಶರಣಾಗತಿಯಿಂದ ಜ್ಞಾನ ಬೆಳಕು ದೊರೆತು, ಅಜ್ಞಾನಾಂಧಕಾರವು ತೊಲಗುತ್ತದೆ. ಸಂಸಾರವನ್ನು ಕಾಳರಾತ್ರಿ ಎಂದು ರೂಪಿಸಿರುವದು, ಸಂಸಾರದಲ್ಲಿ ಕಣ್ಣು ಕಾಣದೆ ಮುಗ್ಗರಿಸಿ ಬೀಳುತ್ತಾ ದೇಹಕ್ಕುಂಟಾಗುವ ಬಾಧಗಳಿಂದ, ದುಃಖ ಪೀಡಿತನಾಗಿರುವ ದುರವಸ್ಥೆಯು ಬೋಧಿತವು ಶ್ರೀ ಯಾಮುನಮುನಿಗಳು ಇದನ್ನೊಂದು ವಿಧವಾಗಿ **"ಅವಿವೇಕ ಘನಾಂಧ ದಿಙ್ಮುಖೇ"** ಎಂದಾರಂಭಿಸಿ **"ಪಥಸ್ಸ್ಖಲಿತಮ್"** ಎಂದು ಮುಗಿಸಿದ ಶ್ಲೋಕವು ಅನುಸಂಧೇಯವು

ಈ ಸಂದರ್ಭದಲ್ಲಿ ಕೆಲವು ಪಂಡಿತರೂ ಪೂರ್ವಪಕ್ಷವನ್ನು ಮಾಡುವರು, ಹೇಗೆಂದರೆ? ಈ ದ್ವಯದ ಸಕೃದುಚ್ಚಾರಣೆಯು ಅಷ್ಟು ಸುಲಭವಾಗಿ ಹೇಗೆ ಮೋಕ್ಷದಾಯಕವಾದೀತು? ಶ್ರೀ ಯತಿವರ್ಯರು ಶರಣಾಗತಿ ಗದ್ಯವನ್ನು ರಚಿಸಿರುವದನ್ನು ಪರಿಶೀಲನೆ ಮಾಡಿದರೆ ಪ್ರತಿದಿನವೂ ಪಠಿಸಿದರ ಮೋಕ್ಷಪ್ರಾಪ್ತಿಯು, ಅನ್ಯಥಾ ಇಲ್ಲವೆಂದು ವಾದಿಸಿರುವದನ್ನು ಕೇಳಿರುವೆವು. ಶ್ರೀ ಯತಿವರ್ಯರ ಶರಣಾಗತಿ ಗದ್ಯವು. ಕೃತಕೃತ್ಯನಾದ ಪ್ರಪನ್ನನು ಪ್ರತಿದಿನವು ವಾಚಿಕ ಕೈಂಕರ್ಯರೂಪದಲ್ಲಿ ಪಠನಕ್ಕೆಂದು ಭಾವಿಸದೆ, ಹೀಗೆ ಅಪಾರ್ಥಕಲ್ಪನೆಯು ಅವರಿಗೆ ಸಕೃಚ್ಛರಣಾಗತಿ ಕಾಲದಲ್ಲಿ ಮಹಾವಿಶ್ವಾಸದ ಅಭಾವವನ್ನು ಪ್ರಕಟಿಸುವದಲ್ಲದೆ, ಭರನ್ಯಾಸವು ಸಕೃದನುಷ್ಠೇಯವೆಂಬ ಶಾಸ್ತ್ರಕ್ಕೆ ವಿರೋಧವನ್ನೂ ಕಲ್ಪಿಸಿದಂತಾಗುವದು ಆದುದರಿಂದ **ಆಮ್ರೇಡಿತೋಕ್ತಿಯು** ಕೈಂಕರ್ಯರೂಪವು. ಶರಣಾಗತಿಗದ್ಯವು ದ್ವಯಮಂತ್ರದ ವಿವರಣೆಯೆಂದೇ ಭಾವಿಸತಕ್ಕದ್ದು.

ಇಲ್ಲಿ **ಆಕರ್ಣಿತೋಽಪಿ** ಎಂದು ಹೇಳಿರುವದೇನು ಉಕ್ತಿನಿಷ್ಠೆಯೋ ಆಚಾರ್ಯನಿಷ್ಠೆಯೋ ಎಂಬ ವಿವಾದದಲ್ಲಿ, ಆಚಾರ್ಯನಿಷ್ಠದ **ಆಕರ್ಣಿತಃ** ಎಂಬ ಪ್ರಯೋಗವೇ ಕೂಡುವದಿಲ್ಲವಾದುದರಿಂದಲೂ, ಅನಂತರ ಆಚಾರ್ಯರು ನಮಗಾಗಿ ಶರಣಾಗತಿಯನ್ನು ಅನುಷ್ಠಿಸಿರುವದರಿಂದ ಅವೆರಡೂ ಅನ್ಯೋನ್ಯ ಸಂಪ್ರೇಕ್ಷನವು.

**ಈ ಮನ್ತ್ರವು ಅಷ್ಟಾಕ್ಷರದ ವಿವರಣವು.**

---

ಮುಂದೆ ದ್ವಯಮಂತ್ರವು, ಮೂಲಮಂತ್ರದ ನಮಃಶಬ್ದದಲ್ಲಿ ತೋರುವ

## ಮನ್ತ್ರ ವಿಷಃ, ಅಷ್ಟಾಕ್ಷರಸ್ಯ ವಿವರಣಮ್

**ಮೂ. ತಿರುಮನ್ತ್ರತ್ತಿಲ್ ಮಧ್ಯಮಪದತ್ತಿಲ್ ಆರ್ಥಮಾಗವಾದಲ್, ಶಾಬ್ದಮಾಗವಾದಲ್, ಚೊನ್ನಉಪಾಯ ವಿಶೇಷತ್ತೈಯುಮ್, ಇದಿನ್ ಫಲಮಾಗ ತೃತೀಯ ಪದತ್ತಿಲ್ ಚೊನ್ನಪುರುಷಾರ್ಥ ವಿಶೇಷತ್ತೈಯುಮ್ ವಿಶದಮಾಗ ಪ್ರಕಾಶಿಪ್ಪಿಕ್ಕಿರದು ದ್ವಯಮ್.**

---

ಶರಣಾಗತಿಯು ಮತ್ತು **ನಾರಾಯಣಾಯ** ಎಂಬಲ್ಲಿ ತೋರುವ ಕೈಂಕರ್ಯರೂಪ ಪ್ರಯೋಜನ, ಇವುಗಳನ್ನು ವಿವರಿಸುತ್ತದೆಂದು ಉಪದೇಶಿಸುತ್ತಾರೆ--**ತಿರುಮನ್ತ್ರತ್ತಿಲ್** - ಮೂಲ ಮನ್ತ್ರದಲ್ಲಿ, **ಮಧ್ಯಮಪದತ್ತಿಲ್** - ಮಧ್ಯಮ ಪದವಾದ **ನಮಃ** ಎಂಬಲ್ಲಿ, **ಆರ್ಥಮಾಗವಾದಲ್** - ಸೂಕ್ಷ್ಮಯೋಜನೆಯು ಅನಿಷ್ಟ ನಿವೃತ್ತಿಯ ಪರವಾಗಿ ಅರ್ಥವಾಗಿ ತೋರಿಬರುವದರಿಂದಾಗಲಿ, **ಶಾಬ್ದಮಾಗವಾದಲ್**-ಸ್ಥೂಲಯೋಜನೆಯು ಸಾಧ್ಯೋಪಾಯವಾದ ಭರನ್ಯಾಸವನ್ನು ಬೋಧಿಸುವ ಶಬ್ದರೂಪವಾಗಿಯಾಗಲಿ, **ಚೊನ್ನಉಪಾಯವಿಶೇಷತ್ತೈಯುಮ್** - ಹೇಳಲ್ಪಟ್ಟ ಉಪಾಯ ವಿಶೇಷವಾದ ಶರಣಾಗತಿಯನ್ನೂ **ಇದಿನ್ ಫಲಮಾಗ**-ಇದರ ಫಲವಾಗಿ, **ತೃತೀಯಪದತ್ತಿಲ್ ಚೊನ್ನ**-ಮೂರನೆಯ ಪದವಾದ **ನಾರಾಯಣಾಯ** ಎಂಬ ಪದದ ವ್ಯಕ್ತಚತುರ್ಥಿಯಲ್ಲಿ ಹೇಳಲ್ಪಟ್ಟ, **ಪುರುಷಾರ್ಥವಿಶೇಷತ್ತೈಯುಮ್** - ಮುಕ್ತದಶೆಯಲ್ಲುಂಟಾಗುವ ಶ್ರಿಯಃಪತಿಗೆ ಮಾಡುವ ನಿತ್ಯ ಕೈಂಕರ್ಯಪ್ರಾಪ್ತಿಯನ್ನೂ, **ವಿಶದವಾಗಿ, ದ್ವಯಂ ಪ್ರಕಾಶಿಪ್ಪಿಕ್ಕಿರದು**-ದ್ವಯವು ಪ್ರಕಾಶಪಡಿಸುತ್ತದೆ. ಮೂಲಮನ್ತ್ರದ ನಮಶ್ಶಬ್ದವೂ, ನಾರಾಯಣಾಯ ಎಂಬಲ್ಲಿರುವ ಚತುರ್ಥಿಯೂ, ಇವೆರಡರ ಅರ್ಥವನ್ನು ಈ ದ್ವಯಮನ್ತ್ರವು ಉಪಪಾದಿಸಿ ಹೇಳುವದರಿಂದ ಮೂಲಮನ್ತ್ರದ ವಿವರಣೆಯು. ಆದುದರಿಂದ ಮೂಲಮನ್ತ್ರೋಪಪಾದನೆಯಾದ ನಂತರ ದ್ವಯಮನ್ತ್ರದ ಉಪಪಾದನೆಯು. ಇದು ಹೇಗೆ ದ್ವಯವೆಂದರೆ, ಇದರ ಪೂರ್ವಖಂಡವು ಸಾಂಗಭರಸಮರ್ಪಣರೂಪ ಉಪಾಯಪರವಾಗಿಯೂ, ಉತ್ತರಖಂಡವು ಪುರುಷಾರ್ಥಪರವಾಗಿಯೂ ಇರುವದರಿಂದ ಎಂದು ಭಾವಿಸತಕ್ಕದ್ದು. ಇದು ಮುಂದೆ ಉಪಪಾದಿತವು, ಇಲ್ಲಿಯೂ ಸೂಚಿತವು. ನಮಶ್ಶಬ್ದದ ಸ್ಥೂಲಯೋಜನೆಯಲ್ಲಿ ಸಪರಿಕರ ಸಾಧ್ಯೋಪಾಯವಾದ ಶರಣಾಗತಿಯೂ, ಸೂಕ್ಷ್ಮಯೋಜನೆಯಲ್ಲಿ ಅನಿಷ್ಟನಿವೃತ್ತಿಯೂ ಅರ್ಥವಾಗಿ ತೋರಿಬರುತ್ತದೆಂದು ಹಿಂದೆಯೇ ಹೇಳಲ್ಪಟ್ಟಿತು ಉತ್ತರಖಂಡದಲ್ಲಿ ಭಗವಂತನಿಗೆ ಮಾಡುವ ನಿತ್ಯಕೈಂಕರ್ಯವು ಬೋಧಿತವು **ಉಪಾಯವಿಶೇಷತ್ತೈ** ಎಂಬಲ್ಲಿನ ವಿಶೇಷಭಾವವು ಯಾವುದೆಂದರೆ ಕಲ್ಯಾಣಗುಣಗಣ. ದಿವ್ಯಮಂಗಳ ವಿಗ್ರಹ, ಲಕ್ಷ್ಮಿಯ ಸಾಹಚರ್ಯಾದಿಗಳಿಂದ ಕೂಡಿರುವಿಕೆಯು. **ಪುರುಷಾರ್ಥವಿಶೇಷತ್ತೈ**

## ಅಯಂ ಶ್ರುತಿಮೂಲ ತಾನ್ತ್ರಿಕಮನ್ತ್ರಃ

**ಇದು ಕಠವಲ್ಲಿಯಿಲೇ ಪಿರಿಯವ್ವೋದಿಚ್ಚೇರ್ತ್ತನುಸಂಧಿಕ್ಕ ವಿಧಿಕ್ಕೈಯಾಲುಮ್, ಭಗವಚ್ಛಾಸ್ತ್ರತ್ತಿಲೇ ಶ್ರೀ ಪ್ರಶ್ನಸಂಹಿತಾದಿಗಳಿಲೇ ವರ್ಣೋದ್ಧಾರಾದಿಗಳುಮ್ಪಣ್ಣಿ ಪ್ರತಿಪಾದಿಕ್ಕೈಯಾಲುಮ್, ಶ್ರುತಿಮೂಲಮಾನ ತಾನ್ತ್ರಿಕ ಮನ್ತ್ರಮ್.**

ಎಂಬುವದರಿಂದ ತೋರಿಬರುವದೇನೆಂದರೆ ? ಅಪರಾಧಪರಿಹಾರದೊಂದಿಗೆ, ಪುನಸ್ಸಂಸಾರಭೀತಿ ಇಲ್ಲದೆ ಇದ್ದುಕೊಂಡು ದೇಹಾವಸಾನಾನಂತರ ಪರಿಪೂರ್ಣಬ್ರಹ್ಮಾನುಭವದೊಂದಿಗೆ ಉಂಟಾಗುವ ಶ್ರಿಯಃಪತಿಗೆ ಮಾಡುವ ಸರ್ವವಿಧ ಕೈಙ್ಕರ್ಯಪ್ರಾಪ್ತಿಯನ್ನು ಸೂಚಿಸುತ್ತದೆ.

ಮೂಲಮನ್ತ್ರವು ನಾರಾಯಣೋಪನಿಷತ್ತು. ಶಾಂಡಿಲ್ಯಾದಿಸ್ಮೃತಿ, ಪುರಾಣಾದಿಗಳಲ್ಲೂ ಉಪಪಾದಿತವಾಗಿರುವಹಾಗೆ, ದ್ವಯವೂ ವೇದ, ಸ್ಮೃತಿ, ಪುರಾಣಾದಿಗಳಲ್ಲಿ ಉಪಪಾದಿತವೋ ? ಎಂದರೆ ಉಪಪಾದಿತವೆಂದು ಪ್ರಮಾಣಗಳನ್ನು ಉದಾಹರಿಸುತ್ತಾರೆ ಆದುದರಿಂದ ಇದು ಬರೀ ತಾನ್ತ್ರಿಕಮನ್ತ್ರವಲ್ಲವು. ವೈದಿಕವೂ ಹೌದು ಎಂದು ಶ್ರುತಿಪ್ರಮಾಣವನ್ನು ಉದಾಹರಿಸುತ್ತಾರೆ

## ದ್ವಯವು ಶ್ರುತಿಮೂಲ ತಾನ್ತ್ರಿಕಮನ್ತ್ರವು.

**ಇದು** - ಈ ದ್ವಯವು, **ಕಠವಲ್ಲಿಯಿಲೇ, ಪಿರಿಯ ಓದಿ** - ವಿಭಾಗಿಸಿ ಹೇಳಲ್ಪಟ್ಟು, ನಾರಾಯಣೋಪನಿಷತ್ತಿನಲ್ಲಿ **" ಓಮಿತ್ಯೇಕಾಕ್ಷರಂ, ನಮ ಇತಿ ದ್ವೇ ಅಕ್ಷರೇ ನಾರಾಯಣಾಯೇತಿ ಪಂಚಾಕ್ಷರಾಣಿ"** ಮೂಲಮನ್ತ್ರವು ಹೇಗೆ ಮೂರು ಪದವಾಗಿ ವಿಭಾಗಿಸಿ ಹೇಳಲ್ಪಟ್ಟಿರುವದೋ, ಹಾಗೆಯೇ ದ್ವಯವೂ ವಿಭಾಗಿಸಲ್ಪಟ್ಟಿದೆ. ಅನಂತರ, **ಚೇರ್ತು ಅನುಸಂಧಿಕ್ಕವಿಧಿಕ್ಕೈಯಾಲೇ** - ಎಲ್ಲವನ್ನೂ ಒಟ್ಟುಸೇರಿಸಿ ಮನ್ತ್ರವಾಗಿ ಅನುಸಂಧಾನ ಮಾಡತಕ್ಕದ್ದೆಂದು ವಿಧಿಸಿರುವದರಿಂದಲೂ, ಮತ್ತು ಭಗವಚ್ಛಾಸ್ತ್ರದಲ್ಲೂ, ಶ್ರೀ ಪ್ರಶ್ನಸಂಹಿತವೇ ಮೊದಲಾದವುಗಳಲ್ಲೂ, **ವರ್ಣೋದ್ಧಾರಾದಿಗಳುಂ ಪಣ್ಣಿ** - ಯಾವ ಯಾವ ವರ್ಣಗಳು ಕ್ರಮವಾಗಿ ಸೇರಿವೆ ಎಂಬುದನ್ನು ತೋರ್ಪಡಿಸಿ, **ಶ್ರೀ ಪ್ರಶ್ನಸಂಹಿತಾದಿ** ಎಂಬಲ್ಲಿನ ಆದಿಪದದಿಂದ ಪಾದ್ಮಪುರಾಣವು ಹೇಳಲ್ಪಟ್ಟಿತು. ಇಲ್ಲಿನ ಎರಡನೆಯ ಆದಿಪದದಿಂದ ಆದರ ಮಾಹಾತ್ಮ್ಯೆಯು ಹೇಳಲ್ಪಟ್ಟಿತು. **ಪ್ರತಿಪಾದಿಕ್ಕೈಯಾಲುಮ್**- ಪ್ರತಿಪಾದಿಸಿ ಹೇಳಿರುವದರಿಂದಲೂ, **ಶ್ರುತಿಮೂಲವಾದ ತಾಂತ್ರಿಕಮಂತ್ರವು.** ಇದು **ತಾಂತ್ರಿಕಮಂತ್ರವು** ಹೇಗೆ ? ಎಂದರೆ ಪಾಂಚರಾತ್ರತಂತ್ರದಲ್ಲಿ ಹೇಳಿರುವದರಿಂದಾಗಲಿ ಅಥವಾ ಅನುಷ್ಠಾನರೂಪ ಕರಣಮಂತ್ರವೆಂದಾಗಲಿ **ತಾನ್ತ್ರಿಕವು. ಈ** ಶಬ್ದದಿಂದ ನಾಲ್ಕುವರ್ಣದವರಿಗೂ ಇದರಲ್ಲಿ ಅಧಿಕಾರ ಉಂಟೆಂದು ಹೇಳ

ಬಹುದು. ಶೂದ್ರರಿಗೆ ಅಧಿಕಾರ ಉಂಟೇ ಎಂದು ಶಂಕಿಸಬೇಕಾಗಿಲ್ಲವು. ಏಕೆಂದರೆ ಅವರು ಸ್ವತಃ ಅನುಷ್ಠಿಸದೇ ಭಾಗವತರು ಅನುಷ್ಠಿಸುವದರಲ್ಲೇ ಅಂತರ್ಗತರು. ಮುಂದೆ **ಈ** ಮನ್ತ್ರವು ತಾಂತ್ರಿಕವಾಗಿ ಸರ್ವಾಧಿಕಾರವುಳ್ಳದ್ದೆಂದು ಉಪಪಾದಿಸಲ್ಪಡುತ್ತದೆ. ಕಠವಲ್ಲಿಯಲ್ಲಿ ಎಲ್ಲಿ ಬರುತ್ತದೋ ಗೊತ್ತಾಗಲಿಲ್ಲವು. ಶ್ರೀ ದೇಶಿಕರವರ ವ್ಯಾಖ್ಯಾತೃಗಳೂ ಕಠವಲ್ಲಿಯಲ್ಲಿರುವದೆಂದು ತಿಳಿಸಿರುತ್ತಾರೆ. ಅಲ್ಲಿ ದ್ವಯದ ಎರಡು ಖಂಡಗಳೂ ಬೇರೆಬೇರೆಯಾಗಿ ಹೇಳಲ್ಪಟ್ಟಿವೆ. ಮೊದಲು **"ಶ್ರೀಮನ್ನಾರಾಯಣ ಚರಣೌ ಶರಣಂ ಪ್ರಪದ್ಯೇ"** ಎಂದು ಪಠಿಸಲ್ಪಟ್ಟು, ಮಧ್ಯೆ **"ಇದಂ ಪೂರ್ಣಮದಃ ಪೂರ್ಣಂ"** ಎಂಬ ವಾಕ್ಯವಿದ್ದು, ಅನಂತರ **"ಶ್ರೀಮತೇ ನಾರಾಯಣಾಯ ನಮಃ"** ಎಂದಿರುವದರಿಂದ, **"ಪಿರಿಯ ಓದಿಚ್ಚೇರ್‌ತ್ತು ಅನುಸಂಧಿಕ್ಕೈಯಾಲುಮ್"** ಎಂದು ಪ್ರಯೋಗಿಸಿರುತ್ತಾರೆ. ಇವೆರಡನ್ನೂ ಸೇರಿಸಿ ಮನ್ತ್ರವಾಗಿ ಉಚ್ಚರಿಸಬೇಕೆಂದು ಅಲ್ಲಿಯೇ ಹೇಳಲ್ಪಟ್ಟಿರುತ್ತದೆ. ಹೀಗೆ ಸಾರದೀಪಿಕಾ ವ್ಯಾಖ್ಯಾನವು. ಸಾರಪ್ರಕಾಶಿಕೆಯವರು ಪಿರಿಯ ಓದಿ ಎಂಬುದಕ್ಕೆ ವ್ಯಾಖ್ಯಾನವಾಗಿ ಉದಾಹರಿಸಿರುತ್ತಾರೆ ಹೇಗೆಂದರೆ—**"ಅಥಾತಶ್ಶ್ರೀಮದ್ದ್ವಯೋತ್ಪತ್ತಿಃ- ವಾಕ್ಯೇ ದ್ವಿತೀಯಃ, ಷಟ್ಪದಾನಿ, ಅಷ್ಟಾದಶ, ಪಂಚವಿಂಶತ್ಯಕ್ಷರಾಣಿ, ಪಂಚದಶಾಕ್ಷರಂ ಪ್ರಥಮಂ ದಶಾಕ್ಷರಂ ಪರಂ ನವಾಕ್ಷರಂ ಪ್ರಥಮಂ ಪದಂ, ದ್ವಿತೀಯ ತೃತೀಯ ಚತುರ್ಥಾಸ್ತ್ರ್ಯಕ್ಷರಾಣಿ, ಪಂಚಾಕ್ಷರಂ ಪಂಚಮಂ, ದ್ವ್ಯಕ್ಷರಷ್ಷಷ್ಠಃ"** ಎಂದು ಹೀಗೆ ವಿಭಾಗಿಸಲ್ಪಟ್ಟಿರುತ್ತದೆ. ಶ್ರೀಮದ್ದ್ವಯಮನ್ತ್ರವಿರುವ ಕ್ರಮವು ಮುಂದೆ ಹೇಳಲ್ಪಡುತ್ತದೆ; ಅವರಲ್ಲಿ ವಾಕ್ಯಗಳೆರಡು ಪೂರ್ವ ಉತ್ತರಖಂಡಗಳೆಂಬದಾಗಿ ಪದಗಳು ೬ ಹೇಗೆಂದರೆ ಎಣಿಸಿ ನೋಡಬಹುದು. ಆ ಮನ್ತ್ರಕ್ಕೆ ಅರ್ಥಗಳು ಹತ್ತು. ಇವುಗಳನ್ನು ಶ್ರೀ ಪರಾಶರ ಭಟ್ಟರವರು ಅಷ್ಟಶ್ಲೋಕಿಯಲ್ಲಿ **"ನೇತೃತ್ವಂ ನಿತ್ಯಯೋಗಂ"** ಎಂಬಲ್ಲಿ ವ್ಯಕ್ತಪಡಿಸಿರುತ್ತಾರೆ (ಶ್ಲೋ. ೫) ಮನ್ತ್ರದಲ್ಲಿ ಅಕ್ಷರಗಳು ೨೫, ಪ್ರಥಮವಾಕ್ಯದಲ್ಲಿ ೧೫ ಅಕ್ಷರಗಳು, ಎರಡನೆಯ ವಾಕ್ಯದಲ್ಲಿ ೧೦ ಅಕ್ಷರಗಳು. ಮುಂದೆ ಆರು ಪದಗಳಲ್ಲೂ ಎಷ್ಟು ಅಕ್ಷರಗಳೆಂಬುದು ಹೇಳಲ್ಪಡುತ್ತದೆ. ಪ್ರಥಮಪದದಲ್ಲಿ ೯ ಅಕ್ಷರಗಳು, ಎರಡು ಮೂರು ನಾಲ್ಕನೆಯ ಪದಗಳಲ್ಲಿ ಮೂರು ಮೂರು ಅಕ್ಷರಗಳು, ಐದನೆಯದರಲ್ಲಿ ಐದು ಅಕ್ಷರಗಳು, ಆರನೆಯದರಲ್ಲಿ ಎರಡಕ್ಷರಗಳು ಹೀಗೆ ವಿಭಾಗಿಸಿ ಹೇಳಲ್ಪಟ್ಟಿರುತ್ತದೆಂದು ಅಪ್ಪಣೆ ಕೊಡಿಸಿರುತ್ತಾರೆ.—ಮನ್ತ್ರೋದ್ಧಾರ ಕ್ರಮವೂ ಹೇಳಲ್ಪಟ್ಟಿರುತ್ತದ್ದೆಂದು ತಿಳಿಸುತ್ತಾರೆ, ಹೇಗೆಂದರೆ—**"ನವಾರ್ಣಂ ವಿದ್ಧಿ ಹೃದಯಂ ತ್ರಿತಯಾರ್ಣಂ ಶಿರೋಮತಮ್ । ಶಿಖಾರ್ಣಂ ತ್ರ್ಯಕ್ಷರಂ ವಿದ್ಧಿ, ಕವಚಂ ತದ್ವದೇವಹಿ । ಅಸ್ತ್ರಂ ಪಂಚಾಕ್ಷರಂ, ನೇತ್ರಂ ದ್ವ್ಯಕ್ಷರಂ ಪರಿಕೀರ್ತಿತಮ್ । ಶ್ರೀಮಚ್ಛಬ್ದಾತ್ಪರೇಯುಕ್ತಂ ನಾರಾಯಣ ಇತೀಷ್ಯತೇ । ತತ್ಪಾದೌ ಚರಣೌ ಶಬ್ದಸ್ತತ್ಪರೇ ಶರಣಂ ತಥಾ । ಪ್ರಪದ್ಯೇ ತತ್ಪರೇಯುಕ್ತಂ ನಮ**

**ಶ್ಯಬ್ದಮತಃ ಪರಮ್ । ಶ್ರೀಮತೇ ಚ ತಥಾಯುಕ್ತಂ ಪರೇನಾರಾಯಣಾಯ ಚ"** ಮನ್ತ್ರಕ್ರಮವು ಹೇಗೆಂದರೆ ಮೊಗಲಿನಿಂದ ಕ್ರಮವಾಗಿ **"ಶ್ರೀಮತ್, ನಾರಾಯಣ ಚರಣೌ, ಶರಣಂ ಪ್ರಪದ್ಯೇ । ನಮಃ ಶ್ರೀಮತೇ ನಾರಾಯಣಾಯ"** ಎಂದು ಹೇಳಲ್ಪಟ್ಟಿರುತ್ತದೆ ಆದರೆ ನಾವು ಈಗ ಪಠಿಸುವದು ಸ್ವಲ್ಪ ವ್ಯತ್ಯಸ್ತವು, **"ಶ್ರೀಮತೇ ನಾರಾಯಣಾಯ ನಮಃ"** ಏಕೆಂದರೆ ಹಿಂದೆ ಪದಗಳಲ್ಲಿ ಎಷ್ಟೆಷ್ಟು ಅಕ್ಷರಗಳಿರಬೇಕೆಂದು ಹೇಳುವುದರಲ್ಲಿ ೪ನೆಯ ಪದವು ಮೂರಕ್ಷರವನ್ನೂ ಐದನೆಯ ಪದವು ಐದಕ್ಷರವನ್ನೂ, ಆರನೆಯ ಪದವು ಎರಡಕ್ಷರವನ್ನೂ ಉಳ್ಳದ್ದಾಗಿರಬೇಕೆಂಬ ವಿಧಿಗೆ ಅನುಸಾರವಾಗಿ ಹೀಗೆ ಹೇಳುತ್ತೇವೆ. **ನವಾರ್ಣಂ ವಿದ್ಧಿಹೃದಯಂ** ಎಂದಾರಂಭಿಸಿ ಈ ಮಂತ್ರಕ್ಕೆ ಜಪಕಾಲದಲ್ಲಿ ಮಾಡತಕ್ಕ ಹೃದಯಾದಿ ನ್ಯಾಸವು ಹೇಳಲ್ಪಟ್ಟಿತು ; ಹೇಗೆಂದರೆ —

**ಶ್ರೀಮನ್ನಾರಾಯಣ ಚರಣೌ–ಜ್ಞಾನಾಯ ಹೃದಯಾಯನಮಃ** -೯ ಅಕ್ಷರವು.
**ಶರಣಂ–ಐಶ್ವರ್ಯಾಯ ಶಿರಸೇಸ್ವಾಹಾ**— ಇದರಲ್ಲಿ ಮೂರು ಅಕ್ಷರವು.
**ಪ್ರಪದ್ಯೇ–ಶಕ್ತ್ಯೈ ಶಿಖಾಯೈವೌಷಟ್**— ಇದರಲ್ಲೂ ಮೂರು ಅಕ್ಷರಗಳು
**ಶ್ರೀಮತೇ–ಬಲಾಯ ಕವಚಾಯಹುಮ್**— ಹಾಗೆಯೇ ಮೂರು ಅಕ್ಷರವು.
**ನಾರಾಯಣಾಯ–ವೀರ್ಯಾಯ ಅಸ್ತ್ರಾಯಫಟ್**— ಐದು ಅಕ್ಷರವು.
**ನಮಃ–ತೇಜಸೇ ನೇತ್ರಾಭ್ಯಾಂ ಔಷಟ್**— ಎರಡು ಅಕ್ಷರವು.

ಹೀಗೆ ಹೃದಯಾದಿ ನ್ಯಾಸಕ್ರಮವು ಆದರೆ ಕೆಲವರು ಮೊದಲು **ತೇಜಸೇ ನೇತ್ರಾಭ್ಯಾಂ ಔಷಟ್** ಎಂದು ಹೇಳಿ, ಅನಂತರ **ವೀರ್ಯಾಯ ಅಸ್ತ್ರಾಯಫಟ್** ಎಂದು ಹೇಳಿರುತ್ತಾರೆ. ಸಾರಸಂಗ್ರಹ ವ್ಯಾಖ್ಯಾತೃವು **ಶ್ರೀಮನ್ನಾರಾಯಣೇತ್ಯಾದಿ ಜಪೇತ್ಪಂಚ ದಶಾಕ್ಷರಮ್ । ಉಪಾಯತ್ವ ಪರಂತಸ್ಯೋಪೇಯತ್ವ ಪರಂದಶ । ಅಕಿಂಚನೋ ಮಿಳಿತ್ವೈವ ನ್ಯಾಸೇನೈವ ವಿಶುದ್ಧಯೇ । ಲಬ್ಧನ್ಯಾಸೋಽಚಿರಾದೇವ ವಿಶುದ್ಧಿಂ ಲಭತೇ ಪರಾಂ"** ಎಂಬ ಕಠವಲ್ಲಿ ಶ್ರುತಿಯ ಅಭಿಪ್ರಾಯದಿಂದ **ಕಠವಲ್ಲಿಯಿಲೇ** ಎಂದು ಪ್ರಯೋಗಿಸಿರುತ್ತಾರೆ. ಇದರ ಅರ್ಥವೇನೆಂದರೆ—**"ಶ್ರೀಮನ್ನಾರಾಯಣಚರಣೌ ಶರಣಂ ಪ್ರಪದ್ಯೇ"** ಎಂದು ೧೫ ಅಕ್ಷರಗಳುಳ್ಳ ಮನ್ತ್ರವನ್ನು ಮೋಕ್ಷಾರ್ಥಿಯು ಜಪಿಸತಕ್ಕದ್ದು ಈ ಮನ್ತ್ರದ ಪೂರ್ವಾರ್ಧವು ಉಪಾಯವಾದ ಶರಣಾಗತಿಯನ್ನು ಬೋಧಿಸುವಂತಾದ್ದು. ಉತ್ತರಾರ್ಧವಾದ **ಶ್ರೀಮತೇ ನಾರಾಯಣಾಯ ನಮಃ** ಎಂಬುದು ಹತ್ತು ಅಕ್ಷರಗಳುಳ್ಳ ಮನ್ತ್ರವು ಉಪೇಯಭಾಗವಾದ ಪ್ರಾಪ್ಯದೆಶೆಯಲ್ಲುಂಟಾಗುವ ನಿತ್ಯಕೈಙ್ಕರ್ಯವನ್ನು ಬೋಧಿಸುತ್ತದೆ. ಬೇರೆ ಗತಿಯು ಸಾಧ್ಯವಿಲ್ಲದ ಅಕಿಂಚನನಾದ ಅಶಕ್ತನು ಇವೆರಡು ಭಾಗಗಳನ್ನೂ ಒಟ್ಟುಕೂಡಿಸಿ ತನ್ನ ಸರ್ವಪಾಪಗಳೆಲ್ಲಾ ತೊಲಗಿ ಪರಿಶುದ್ಧಾತ್ಮಸ್ವರೂಪಪ್ರಾಪ್ತಿಗಾಗಿ ಭರನ್ಯಾಸವನ್ನು ಅನುಷ್ಠಿಸತಕ್ಕದ್ದು.

**ಇತ್ತೈ ಪೂರ್ವಾಚಾರ್ಯವಾಕ್ಯಮೆನ್ರು ಶಿಲರ್‌ಶೊನ್ನದವುಮ್, ಆಪ್ತ**

ಓೀಗೆ ಶ್ರೀಪ್ರದಲ್ಲೇ ಸ್ವೀಕೃತ ಭರನಾಗಿ ಕೃತಕೃತ್ಯನಾದರೆ ಸರ್ವಶ್ರೇಷ್ಠವಾದ ಪರಿಶುದ್ಧಾತ್ಮಸ್ವರೂಪವನ್ನು ಹೊಂದಿ, ದಿವ್ಯವೈಕುಂಠವನ್ನು ಸೇರುವನು" ಎಂಬುದು **ಶ್ರೀ ಪ್ರಶ್ನಸಂಹಿತಾದಿ** ಎಂಬಲ್ಲಿರುವ ಆದಿಪದದಿಂದ **ಪಾಂಚರಾತ್ರ ಮಹೋಪನಿಷತ್ತಿನ** ವಾಕ್ಯವು ಸೂಚಿಸಲ್ಪಟ್ಟಿತು. ಪ್ರಥಮಾಧ್ಯಾಯದಲ್ಲಿ, **"ಅಥಾದೌ ಪ್ರಣವಸ್ಯಾರ್ಥಂ ತಥೈವಾಷ್ಟಾಕ್ಷರಸ್ಯಚ। ಮನ್ತ್ರರತ್ನಸ್ಯ ಗಾಯತ್ರ್ಯಾಃ ಸಮ್ಯಗ್ವಕ್ಷ್ಯೇ ವಿಧಾನತಃ"** ಪ್ರಥಮದಲ್ಲಿ ಪ್ರಣವದ ಅರ್ಥವನ್ನು, ಹಾಗೆಯೇ ಅಷ್ಟಾಕ್ಷರ ಮನ್ತ್ರಾರ್ಥವನ್ನೂ ಅನಂತರ ಮನ್ತ್ರರತ್ನವಾದ ದ್ವಯದ ಅರ್ಥವನ್ನೂ ಹಾಗಯೇ ಗಾಯತ್ರೀ ಮನ್ತ್ರಾರ್ಥವನ್ನೂ ಶಾಸ್ತ್ರರೀತ್ಯಾ ಚನ್ನಾಗಿ ಹೇಳುವೆನೆಂದು ಪ್ರತಿಜ್ಞಾವಾಕ್ಯದಿಂದ ತಿಳಿಸಿ, ದ್ವಯಮನ್ತ್ರದ ವಿಷಯವಾಗಿ **ಲಕ್ಷ್ಮೀನಾರಾಯಣ ಮಯಂ ಪ್ರಣವಾರ್ಥಪ್ರಕಾಶಕಮ್। ಸತ್ಯಜ್ಞಾನಾನಂದ ರೂಪಂ ಶ್ರೀಕರಂ ತಂ ನವಾವ್ಯೂಹಮ್"** ಎಂದು ಪ್ರಾರಂಭಿಸಿ ವರ್ಣೋದ್ಧಾರಕ್ರಮವನ್ನು ತಿಳಿಸಿ, ಅಲ್ಲಿಯೇ **"ಶ್ರೀಮನ್ನಾರಾಯಣಸ್ಯೇವ ಪರಸ್ಯ ಪರಮಾತ್ಮನಃ। ದ್ವಿಜಾನಾಂ ಮುಕ್ತಿದಂ ಮನ್ತ್ರಂ ದ್ವಯಂ ತಚ್ಛೃದ್ಧ ಸಾತ್ವಿಕಮ್। ಮನ್ತ್ರರತ್ನಾಖ್ಯ ಸಂದರ್ಭಂ ಪಂಚವಿಂಶತಿ ವರ್ಣಕಮ್। ಪಂಚವಿಂಶತಿ ತತ್ವಾಢ್ಯಂ ಪಂಚೋಪನಿಷದಾತ್ಮಕಮ್।"** ಎಂದು ದ್ವಯವು ೨೫ ವರ್ಣಗಳುಳ್ಳದೆಂದೂ, ಅದು ಮನ್ತ್ರರತ್ನವೆಂದೂ, ಮುಕ್ತಿಯನ್ನು ಕೊಡುವ ಕರಣಮನ್ತ್ರವೆಂದೂ ಶ್ಲಾಘಿಸಲ್ಪಟ್ಟಿರುತ್ತದೆ. **ವರ್ಣೋದ್ಧಾರ** ಎಂದರೆ ಮೊದಲಕ್ಷರ ಶ್ರೀ, ಎರಡನೆಯ ಅಕ್ಷರ ಮ, ಮೂರನೆಯ ಅಕ್ಷರ ನಕಾರ ಹೀಗೆಂದು ಮುಂದಕ್ಕೂ ತಿಳಿಸೋಣವು.

**ಶ್ರುತಿಮೂಲಮಾನ ತಾಂತ್ರಿಕಮನ್ತ್ರಮ್** ಎಂದು ಹೇಳಿರುವದರಿಂದ ಚಾತುರ್ವರ್ಣ್ಯದವರಿಗೂ ಅರ್ಹವಾದುದು ಈ ಮನ್ತ್ರವೆಂದೂ, ಶೂದ್ರಾದಿಗಳಿಗೆ ಮನ್ತ್ರಾನ್ತರವನ್ನಾಗಲಿ ಅಥವಾ ಭಾಷಾರೂಪದಲ್ಲಾಗಲಿ ಪ್ರಯೋಗಿಸಬಹುದೆಂದು ಸಾರದೀಪಿಕೆಯವರು ಅಭಿಪ್ರಾಯಪಟ್ಟಿರುತ್ತಾರೆ. ಆದರೆ ಕೆಲವರು ಈ ಮನ್ತ್ರವು ಪೂರ್ವಾಚಾರ್ಯರ ವಾಕ್ಯವೆಂದು ಕೆಲವರು ಹೇಳುತ್ತಾರಲ್ಲಾ ಆದರ ಅಭಿಪ್ರಾಯವೇನೆಂದರೆ— ಮುಂದಿನ ವಾಕ್ಯದಿಂದ ತಿಳಿಸುತ್ತಾರೆ —

**ಇತ್ತೈ** - ಈ ಮನ್ತ್ರವನ್ನು, **ಪೂರ್ವಾಚಾರ್ಯವಾಕ್ಯಂ ಎನ್ರು**-ಎಂಬದಾಗಿ, **ಶಿಲರ್ ಶೊನ್ನದುವುಮ್** - ಕೆಲವರು ಹೇಳಿರುವುದು, ಏತರಿಂದ ಎಂದರೆ ಎರಡು ಕಾರಣಗಳನ್ನು ತಿಳಿಸುತ್ತಾರೆ (೧) **ಆಪ್ತರುಪದೇಶಿತ್ತಾರೆನ್ರು** - ಆಪ್ತರಾದ ಪರಮಾಚಾರ್ಯರು ಉಪದೇಶಿಸಿದರೆಂದು, **ಆದರಿಕ್ಕೈಕ್ಕಾಗಮಾದಲ್**-ಅಂತವರುಗಳ ಮಾತಿನಲ್ಲಿ, ಪರಮಾದರವನ್ನು ಸೂಚಿಸುವದಕ್ಕಾಗಿ ಪರಮಾಚಾರ್ಯ

**ರುಪದೇಶಿತ್ತಾರೆನ್ರು ಆದರಿಕ್ಕೈಕ್ಕಾಗವಾದಲ್, ಪರಮಾಚಾರ್ಯನಾನ ಸರ್ವೇಶ್ವರರ್ ಭಗವಚ್ಛಾಸ್ತ್ರತ್ತಿಲೇ ಅರುಳಿಚ್ಚೆಯ್‌ಗೈಯಾಲೇ ಯೊದಲಾವುತ್ತನ್ನೈ.**

**ಇದುಕ್ಕು ಋಷ್ಯಾದಿಗಳುವ್ ಮೂಲಮನ್ತ್ರಾದಿಕಳಿಲ್ ಪೋಲೇ ಅಪೇಕ್ಷಮಾಣರ್‌ಕ್ಕು ಮನ್ತ್ರವ್ಯಾಕರಣಾದಿಗಳಿಲ್ ಪಡಿಯೇ ಕಣ್ಡುಕೊಳ್ಳಲಾಮ್.**

---

ವಾಕ್ಯವೆಂದು ಹೇಳಿರಬಹುದೆಂಬ ತಾತ್ಪರ್ಯವು ಅಥವಾ (೨) **ಪರಮಾಚಾರ್ಯನಾದ ಸರ್ವೇಶ್ವರನು ಭಗವಚ್ಛಾಸ್ತ್ರತ್ತಿಲೇ**-ಭಗವಚ್ಛಾಸ್ತ್ರದ ಪಾದ್ಮಸಂಹಿತೆಯಲ್ಲಿ, **ಅರುಳಿಚ್ಚೆಯ್‌ಗೈಯಾಲೇ** - ತಾನೇ ಕೃಪಯಾ ಈ ಮನ್ತ್ರದ ಮಹಿಮೆಯನ್ನು ಉಪಪಾದಿಸಿ ಹೇಳಿದುದರಿಂದಾಗಲಿ, ಸರ್ವೇಶ್ವರನು ಎಲ್ಲರಿಗಿಂತಲೂ ಆದಿಯಾದ ಪೂರ್ವಾಚಾರ್ಯನಾದುದರಿಂದಾಗಲಿ ಪೂರ್ವಾಚಾರ್ಯ ವಾಕ್ಯ ಎಂದು ಕೆಲವರು ಹೇಳಿರಬಹುದೆಂಬ ತಾತ್ಪರ್ಯವು; **ಅತ್ತನ್ನೈ**-ಅಷ್ಟೇ; ಹಾಗೆ ಹೇಳುವವರ ಅಭಿಪ್ರಾಯವೇ ವಿನಾ ಶ್ರುತ್ಯಭಿಮತವಾದ ತಾಂತ್ರಿಕಮಂತ್ರವೆಂಬುದು ಸಿದ್ಧವೆಂಬ ಭಾವವು. ಸರ್ವೇಶ್ವರನು ಹೇಗೆ ಪರಮಾಚಾರ್ಯನೆಂಬ ಉಪಪಾದನೆಗೆ ಗುರುಪರಂಪರಾಸಾರದ ೫೪-೫೮ನೆಯ ಪುಟಗಳನ್ನು ಪರಾಂಬರಿಸಿ. ಭಗವಂತನಿಂದಲೇ ಇದು ಉಪದಿಷ್ಟವಾಯಿತು ಎಂಬ ಶಾಸ್ತ್ರವಚನವಿರುವುದರಿಂದ ಆತನೇ ಎಲ್ಲರಿಗೂ ಪರಮಾಚಾರ್ಯನಾದುದರಿಂದ ಪೂರ್ವಾಚಾರ್ಯವಾಕ್ಯವೆಂಬುದನ್ನು ಒಪ್ಪಬಹುದು ಎಂಬುದನ್ನು ಸೂಚಿಸಿರುತ್ತಾರೆ. ತಮ್ಮ ಸ್ವಾಚಾರ್ಯರ ವಾಕ್ಕಿಗಿಂತ ಪೂರ್ವಾಚಾರ್ಯ ವಾಕ್ಕು ಉಪಾದೇಯವೆಂಬ ಭಾವದಿಂದ ಹಾಗೆ ಪ್ರಯೋಗವು. **ಇದುಕ್ಕು**-ಈ ದ್ವಯಮನ್ತ್ರಕ್ಕೆ, **ಋಷ್ಯಾದಿಗಳುವ್**-ಋಷಿ, ಛಂದಸ್ಸು, ದೇವತೆಗಳು, **ಮೂಲಮನ್ತ್ರಾದಿಗಳಿಲ್ ಪೋಲೇ** - ಮೂಲಮನ್ತ್ರ ಮೊದಲಾದವುಗಳಲ್ಲಿ ಹೇಳಲ್ಪಟ್ಟ ಹಾಗೆ, **ಅಪೇಕ್ಷಮಾಣರ್‌ಕ್ಕು**-ಮಂತ್ರಜಪ ಕಾಲದಲ್ಲಿ ಪಠನಮಾಡಿ ಅಂಗನ್ಯಾಸಕರನ್ಯಾಸಾದಿ ನ್ಯಾಸಗಳನ್ನು ಮಾಡಬೇಕೆಂಬ ಅಪೇಕ್ಷೆ ಇರುವವರಿಗೆ, **ಮನ್ತ್ರವ್ಯಾಕರಣಾದಿಗಳಿಲ್ ಪೋಲೇ** - ಮನ್ತ್ರತನ್ತ್ರ ಮೊದಲಾದವುಗಳಲ್ಲಿ ಹೇಳಿರುವಹಾಗೆ, **ಕಂಡುಕೊಳ್ಳಲಾಮ್**-ತಿಳಿದುಕೊಳ್ಳಬಹುದು **ಮಂತ್ರ ವ್ಯಾಕರಣಾದಿಗಳಿಲ್ ಪಡಿಯೇ** ಎಂಬ ವಿಷಯದಲ್ಲಿ **"ಅಂತರ್ಯಾಮಿ ಋಷಿಸ್ತಸ್ಯ ದೇವೀಗಾಯತ್ರ್ಯುದಾಹೃತಾ। ಛಂದಸ್ತು ದೇವತಾವಿಷ್ಣುಃ ಪರಮಾತ್ಮಾ ಸನಾತನಃ। ಶ್ರೀಮನ್ನಾರಾಯಣಸ್ಸಾಕ್ಷಾತ್ ಪರಂಬ್ರಹ್ಮ ಪರಾತ್ಪರಮ್। ದೇಹನ್ಯಾಸಂ ತತಃ ಕುರ್ಯಾತ್ ಮನ್ತ್ರರತ್ನೇನ ಮನ್ತ್ರವಿತ್। ಷಟ್ಪದಾನಿ ಚ ಮನ್ತ್ರಸ್ಯ ಷಡಂಗಾನ್ಯೇವ ವಿನ್ಯಸೇತ್"** ಎಂಬವು ಅನುಸಂಧೇಯವು ಇಲ್ಲಿ ಹೇಳಿರುವ ಪ್ರಕಾರ ಗ್ರಹಿಸಬಹುದೆಂಬ ತಾತ್ಪರ್ಯವು ಇಲ್ಲಿ **ಆದಿ** ಶಬ್ದದಿಂದ ಭಗವಚ್ಛಾಸ್ತ್ರವು ಸಂಗ್ರಹಿಸಲ್ಪಟ್ಟಿತು **ಅಪೇಕ್ಷಮಾಣರ್ಕ್ಕು** ಎಂದು ಹೇಳಿರುವುದರಿಂದ ಅವುಗಳ ಆವಶ್ಯಕತೆ ಅಷ್ಟೇನೂ ಇಲ್ಲವೆಂಬ ಭಾವವು. ಆದರ

ಪ್ರತಿದಿನವೂ ಸಂಧ್ಯಾವಂದನಾನಂತರ ಜಪಮಾಡುವ ಕಾಲದಲ್ಲಿ ಈ ಮನ್ತ್ರದೇವತೆಯನ್ನೂ ಹೇಳಿ ಅಂಗನ್ಯಾಸ ಕರನ್ಯಾಸಗಳೊಂದಿಗೆ ಜಪಿಸುವದು ಉಚಿತವು. ಹಾಗೆಯೇ ಸಂಪ್ರದಾಯವೂ ಕೂಡ. ಮೂಲಮನ್ತ್ರಕ್ಕೆ ಋಷಿ ಛಂದಸ್ಸು ದೇವತೆ ಅಂಗನ್ಯಾಸಹೃದಯಾದಿ ನ್ಯಾಸಗಳು ಅವಶ್ಯಾಪೇಕ್ಷಿತಗಳೆಂದು ಹೇಳಲ್ಪಟ್ಟಿತು. ಈ ಮನ್ತ್ರಕ್ಕೆ ಅಧಿಕಾರಿಗಳು ಆ ಋಷ್ಯಾದಿ ಜ್ಞಾನಕ್ಕೆ ಯೋಗ್ಯರಲ್ಲದ ಸ್ತ್ರೀಶೂದ್ರಾದಿಗಳಿಗೂ ಅಧಿಕಾರವು ಹೇಳಲ್ಪಡುವದರಿಂದ ಈ ಸಂದರ್ಭದಲ್ಲಿ ಅವಶ್ಯಕವಿಲ್ಲವೆಂದು **ಅಪೇಕ್ಷಮಾಣರ್ಕ್ಕು** ಎಂಬುದರಿಂದ ಹೇಳಲ್ಪಟ್ಟಿತು. “**ನಾನುಕೂಲ್ಯಂನನಕ್ಷತ್ರಂ ನತೀರ್ಥಾದಿ ನಿಷೇವಣಮ್ । ನಪುನಶ್ಚರಣಂ ವಾಪಿ ಮನ್ತ್ರೋಽಹ್ಯಯಮಪೇಕ್ಷತೇ**” ಎಂಬೀ ಪಾದ್ಮವಚನದಲ್ಲಿ ತೋರಿಬರುವಹಾಗೆ ಯಾವುವೂ ಅಪೇಕ್ಷಿತವಲ್ಲವೆಂದು ಹೇಳಲ್ಪಟ್ಟಿತು. ಈ ಮನ್ತ್ರವನ್ನು ಉಪಾಯರೂಪದಲ್ಲಿ ಕರಣಮನ್ತ್ರವಾಗಿ ಉಪಯೋಗಿಸುವದಕ್ಕೆ ಯಾವ ವಿಧ ಆನುಕೂಲ್ಯವನ್ನಾಗಲಿ, ಶುಭನಕ್ಷತ್ರವನ್ನಾಗಲಿ, ಪುಣ್ಯತೀರ್ಥವೇ ಮೊದಲಾದವುಗಳಲ್ಲಿ ಸ್ನಾನವನ್ನಾಗಲಿ, ಪುನಶ್ಚರಣವನ್ನಾಗಲಿ ಅಪೇಕ್ಷಿಸುವದಿಲ್ಲವೆಂದು ಹೇಳಲ್ಪಟ್ಟಿರುತ್ತದೆ. ಆದರೆ ಜಪಶೀಲರಿಗೆ ಅಪೇಕ್ಷಿತವಲ್ಲವೋ? ಆದರಿಂದ ಜಪವು ವೀರ್ಯವತ್ತರವಾಗುವದಿಲ್ಲವೋ? ಎಂದರೆ ಅಂಥವರು ಮನ್ತ್ರ ವ್ಯಾಕರಣಾದಿಗಳಲ್ಲಿ ಹೇಳಿರುವಹಾಗೆ ಪಠನ ಮತ್ತು ನ್ಯಾಸಗಳನ್ನು ಅನುಷ್ಠಿಸಬಹುದೆಂದು ಹೇಳಿದರು. ಅಲ್ಲಿ ಹೇಳಿರುವ ಕ್ರಮವು ಹೇಗೆಂದರೆ–“**ನವಾರ್ಣಂ ವಿದ್ಧಿ ಹೃದಯಂ**” ಎಂದಾರಂಭಿಸಿ ಹೇಳಿರುವ ಶ್ಲೋಕಗಳನ್ನು ಅನುಸರಿಸಿ ಎಂಬ ಭಾವವು. ಈ ಶ್ಲೋಕಗಳಿಗಾಗಿ ೩೪೩೮ ನೆಯ ಪುಟವನ್ನು ನೋಡಿ.

## ಜಪಕ್ರಮವು

ಜಪಕ್ರಮವನ್ನು ಸಂಕ್ಷೇಪವಾಗಿ ತಿಳಿಸುವೆವು ಹೇಗೆಂದರೆ—

ಮೂಲಮನ್ತ್ರವನ್ನು ೩೦ ಸಲ ಪಠಿಸುತ್ತಾ ಪ್ರಾಣಾಯಾಮವನ್ನು ಮಾಡಿ ಶ್ರೀಭಗವದಾಜ್ಞಯಾ ಶ್ರೀಮನ್ನಾರಾಯಣ ಪ್ರೀತ್ಯರ್ಥಂ ಶರಣಾಗತಿ ಮಹಾಮನ್ತ್ರ ಜಪಂಕರಿಷ್ಯೇ ಎಂದು ಸಙ್ಕಲ್ಪಿಸತಕ್ಕದ್ದು. ಅನಂತರ, “ಅಸ್ಯ ಶ್ರೀ ಶರಣಾಗತಿ ಮಹಾಮನ್ತ್ರಸ್ಯ ಲಕ್ಷ್ಮೀನಾರಾಯಣಋಷಿಃ ದೇವೀಗಾಯತ್ರೀಛಂದಃ ಪರಮಾತ್ಮಾ ಶ್ರೀಲಕ್ಷ್ಮೀನಾರಾಯಣೋ ದೇವತಾ, ಶ್ರೀಂ ಬೀಜಂ ನಮಶ್ಶಕ್ತಿಃ ಲಕ್ಷ್ಮೀನಾರಾಯಣ ಪ್ರೀತ್ಯರ್ಥೇ ಜಪೇ ವಿನಿಯೋಗಃ, ಓಂ ವೀರ್ಯಾಯ ಅಸ್ತ್ರಾಯಫಟ್.

**ಕರನ್ಯಾಸವು**—ಶ್ರೀಮನ್ನಾರಾಯಣ ಚರಣೌ ಅಂಗುಷ್ಠಾಭ್ಯಾಂ ನಮಃ, ಶರಣಂ ತರ್ಜನೀಯಾಭ್ಯಾಂ ನಮಃ, ಪ್ರಪದ್ಯೇ ಮಧ್ಯಮಾಭ್ಯಾಂ ನಮಃ, ಶ್ರೀಮತೇ ಅನಾಮಿಕಾಭ್ಯಾಂ ನಮಃ ನಾರಾಯಣಾಯ ಕನಿಷ್ಠಿಕಾಭ್ಯಾಂ ನಮಃ, ನಮಃ ಕರತಲ ಕರಪೃಷ್ಠಾಭ್ಯಾಂ ನಮಃ.

## ದ್ವಯಶಬ್ದಪ್ರವೃತ್ತಿ ನಿಮಿತ್ತಮಾಹ

**ಇಮ್ಮನ್ತ್ರಮ್ (೧) "ಸಭ್ರಾತುಶ್ಚರಣೌಗಾಢಂ" (೨) "ಭವಾಂಸ್ತು ಸಹ ವೈದೇಹ್ಯಾ" ಎಂಗಿರಶ್ಲೋಕದ್ವಯತ್ತಿಲ್ ವಿವಕ್ಷಿತಮಾನ ಉಪಾ**

**ಹೃದಯಾದಿನ್ಯಾಸಃ**— ಶ್ರೀಮನ್ನಾರಾಯಣ ಚರಣೌ ಜ್ಞಾನಾಯ ಹೃದಯಾಯ ನಮಃ; ಶರಣಂ ಐಶ್ವರ್ಯಾಯ ಶಿರಸೇ ಸ್ವಾಹಾ; ಪ್ರಪದ್ಯೇ ಶಕ್ತ್ಯೈ ಶಿಖಾಯೈ ವೌಷಟ್; ಶ್ರೀಮತೇ ಬಲಾಯ ಕವಚಾಯ ಹುಮ್; ನಾರಾಯಣಾಯ ತೇಜಸೇ ನೇತ್ರಾಭ್ಯಾಂ ವೌಷಟ್; ನಮಃ ವೀರ್ಯಾಯಾಸ್ತ್ರಾಯಫಟ್; ಭೂರ್ಭುವಸ್ಸುವರೋಮಿತಿ ದಿಗ್ಬಂಧಃ.

### ಧ್ಯಾನಮ್

**"ಕ್ಷೀರಾಮ್ಭೋನಿಧಿ ರತ್ನ ಮಂಟಪ ಮಹಾಸೌವರ್ಣ ಸಿಂಹಾಸನೇ।**
**ವಾಮಾಂಕೇ ಸ್ಥಿತಯಾ ಪ್ರಸನ್ನವದನಂ ಶ್ರೀಕಾಂತಯಾಲಿಂಗಿತಮ್॥**
**ದೋರ್ದಂಡಾಂಕಿತ ಶಂಖ ಪಂಕಜಗದಾ ಚಕ್ರೈರುದಾರಶ್ರಿಯಮ್।**
**ತ್ವಾಂ ನಿತ್ಯಂ ಕಲಯಾಮಿ ಜನ್ಮವಿಮುಖೋ ಲಕ್ಷ್ಮೀಶ ನಾರಾಯಣ॥**

ಹೀಗೆ ಧ್ಯಾನಿಸಿ ಶಕ್ತ್ಯನುಸಾರ ಜಪಮಾಡತಕ್ಕದ್ದು. ಅನೇಕರು ೧೦೮ ಸಲ ಜಪವನ್ನು ಮಾಡುತ್ತಾರೆ—

ಕ್ಷೀರಸಮುದ್ರಮಧ್ಯದಲ್ಲಿರುವ ರತ್ನಮಂಟಪದ ಸುವರ್ಣದ ಸಿಂಹಾಸನದಲ್ಲಿ ಬಿಜಮಾಡಿಸಿರುವನಾಗಿಯೂ ಎಡತೊಡೆಯಲ್ಲಿರುವ ಲಕ್ಷ್ಮೀ ಎಂಬ ಪತ್ನಿಯಿಂದ ಆಲಿಂಗಿಸಲ್ಪಟ್ಟವನಾಗಿಯೂ, ಪ್ರಸನ್ನವಾದ ಮುಖವನ್ನುಳ್ಳವನಾಗಿಯೂ, ಬಾಹುಗಳಲ್ಲಿ ಧರಿಸಿರುವ ಶಂಖ, ಪದ್ಮ, ಗದೆ, ಚಕ್ರಗಳಿಂದ ಕೂಡಿ ಹೆಚ್ಚಾದ ಲಾವಣ್ಯ ಶೋಭಾಯುಕ್ತನಾದ ಅಂತಹ ನಿನ್ನನ್ನು ಓ ಲಕ್ಷ್ಮೀಪತಿಯಾದ ನಾರಾಯಣನೇ ಜನ್ಮ ಜರಾಮರಣಗಳ ಬಾಧೆಯಿಂದ ತಪ್ಪಿಸಿಕೊಳ್ಳುವದಕ್ಕಾಗಿ ಆಶ್ರಯಿಸಿ ಧ್ಯಾನಿಸುತ್ತೇನೆ ಎಂಬುದು ಈ ಶ್ಲೋಕಾರ್ಥವು

**ದ್ವಯವೆಂಬ ವ್ಯವಹಾರಕ್ಕೆ ಕಾರಣವನ್ನು ತಿಳಿಸುತ್ತಾರೆ.**

**ಇಮ್ಮನ್ತ್ರಮ್**-ಈ ಮನ್ತ್ರವು, "**ಸಭ್ರಾತುಶ್ಚರಣೌಗಾಢಂ**" ಎಂಬ ಮತ್ತು "**ಭವಾಂಸ್ತು ಸಹವೈದೇಹ್ಯಾ**" ಎಂಬ **ಶ್ಲೋಕದ್ವಯತ್ತಿಲ್**-ಎರಡು ಶ್ಲೋಕದಲ್ಲೂ, **ವಿವಕ್ಷಿತಮಾನ**-ಉಪದೇಶಿಸಲ್ಪಟ್ಟ, **ಉಪಾಯೋಪೇಯರೂಪಮಾದ, ಅರ್ಥದ್ವಯತ್ತೈ** ಎರಡರ್ಥವನ್ನು **ಪ್ರತಿಪಾದಿಕ್ಕೈಯಾಲೇ**-ಉಪಪಾದಿಸಿ ಹೇಳುವದರಿಂದ, **ದ್ವಯಮೆನ್ರು-"ದ್ವಯ"** ವೆಂಬ, **ಪೇರ್ ಪೆತ್ತದು** ಹೆಸರನ್ನು ಹೊಂದಿತು ಈ ಮನ್ತ್ರದಲ್ಲಿ ಪೂರ್ವಾರ್ಧವು ಉಪಾಯಪರವಾ

(೧) ರಾ. ಅಯೋಧ್ಯಾ ೩೧-೨೭ (೨) ರಾ ಅಯೋಧ್ಯಾ ೩೧-೨.

**ಯೋಪೇಯರೂಪಮಾನ ಅರ್ಥದ್ವಯತ್ತೈ ಪ್ರತಿಪಾದಿಕ್ಕೈಯಾಲೇ "ದ್ವಯು" ಮೆನ್ರು ಪೇರ್ ಪೆತ್ತದು.**

---

ಗಿಯೂ ಉತ್ತರಾರ್ಥವು ಉಪೇಯಪರವಾಗಿಯೂ ಅರ್ಥವುಳ್ಳದ್ದಾಗಿ ಹೀಗೆ ಎರಡು ಖಂಡಗಳಿರುವದರಿಂದ ಇದಕ್ಕೆ ದ್ವಯವೆಂಬ ಹೆಸರು ಎಂಬ ತಾತ್ಪರ್ಯವು. ಈ ಎರಡರ್ಥವೂ ಶ್ರೀಮದ್ರಾಮಾಯಣದಲ್ಲಿ ಲಕ್ಷ್ಮಣ ವಾಕ್ಯದಲ್ಲಿ ಉಪಪಾದಿತ ವಾಗಿದೆ ಎಂದು ಅವುಗಳನ್ನು ಉದಾಹರಿಸಿರುತ್ತಾರೆ. ಅವುಗಳು ಯಾವುದೆಂದರೆ– **ಸಭ್ರಾತುಶ್ಚರಣೌ ಗಾಢಂ ನಿಪೀಡ್ಯ ರಘುನಂದನಃ। ಸೀತಾಮುವಾಚಾತಿ ಯಶಾ ರಾಘವಂ ಚ ಮಹಾವ್ರತಮ್"** ಎಂಬುದು ಪೂರಾ ಶ್ಲೋಕವು. ಯಾವಾಗ ಶ್ರೀರಾಮಚಂದ್ರ ಪ್ರಭುವು ತನ್ನ ಪತ್ನಿಯಾದ ಸೀತೆಯನ್ನು ವನಕ್ಕೆ ತನ್ನೊಂದಿಗೆ ಕರೆದುಕೊಂಡು ಹೋಗಲು ಒಪ್ಪಿದನೋ, ಆಗ ಲಕ್ಷ್ಮಣನೂ ತಾನೂ ಜೊತೆಯಲ್ಲಿ ಹೋಗುವುದಕ್ಕೆ ಆಶೆಪಟ್ಟು ಬೇರೊಂದೂ ಮಾರ್ಗವೂ ತೋಚದೆ ಐದು ಅಙ್ಗಗಳಿಂದಲೂ ಕೂಡಿದ ಪೂರ್ಣ ಶರಣಾಗತಿಯನ್ನು ಅನುಷ್ಠಿಸುತ್ತಾನೆ. **ರಘುನಂದನಃ**–ಶರಣಾಗತರಕ್ಷಣದೀಕ್ಷರಾದ ರಘುವಂಶದಲ್ಲಿ ಜನಿಸಿ, ಶರಣಾಗತಿಮಾಹಾತ್ಮ್ಯಯನ್ನರಿತ ಮತ್ತು **ಅತಿಯಶಾಃ** ಮಹತ್ತಾದ ಖ್ಯಾತಿಯನ್ನು ಹೊಂದಿದ, ಎಂದರೆ ಆನುಕೂಲ್ಯಸಙ್ಕಲ್ಪ ಪ್ರಾತಿಕೂಲ್ಯ ವರ್ಜನೆಗಳಿಂದ ಘನತೆಯನ್ನು ಹೊಂದಿದವನಾದ, **ಸಃ**-ಬೇರೆ ಉಪಾಯಗಳು ಯಾವುವೂ ತೋಚದೆ ಆ ಕಾರಣದಿಂದ **"ಬಾಷ್ಪಪರ್ಯಾಕುಲೇಕ್ಷಣ"** ನಾದ ಆ ಲಕ್ಷ್ಮಣನು ಇದರಿಂದ ಕಾರ್ಪಣ್ಯವು ಸೂಚಿತವು. **ಭ್ರಾತುಃ**-ಜ್ಯೇಷ್ಠಭ್ರಾತಾವಾಗಿ ಪಿತೃಸಮನಾಗಿ ತನಗೆ ಶರಣ್ಯನಾದ ಅಣ್ಣನ, **ಚರಣೌ** – ಎರಡುಕಾಲುಗಳನ್ನೂ, **ಗಾಢಂ** - ಬಹು ಗಟ್ಟಿಯಾಗಿ ಇದರಿಂದ ಕಾರ್ಪಣ್ಯವೂ, ಮಹಾವಿಶ್ವಾಸವೂ ಬೋಧಿತವು. **ನಿಪೀಡ್ಯ**-ಹಿಡಿದುಕ್ಕೊಂಡು (ಇದರಿಂದ ಶರಣಾಗತಿಯು ಬೋಧಿತವು) **ಸೀತಾಂ**-ಲೋಕಪಿತಾ ಒಂದುವೇಳೆ ಒಪ್ಪದಿದ್ದರೂ ಮಹಾತಾಯಿಯನ್ನು ಕುರಿತು ಹೇಳಿಕೊಂಡರೆ ಎಂದಿಗೂ ವಿಫಲವಾಗದೆಂಬ ಭರವಸೆಯುಳ್ಳವನಾದುದರಿಂದಲೇ, ಸೀತೆಯನ್ನೂ (ಇದರಿಂದ ಸೀತೆಯ ಉಪಾಯತ್ವ ಪುರುಷಕಾರತ್ವಗಳು ವ್ಯಕ್ತವು) **ಮಹಾವ್ರತಮ್- "ನತ್ಯಜೇಯಂ ಕಥಂಚನ"** ಶರಣಾಗತನನ್ನು ಎಂದಿಗೂ ಬಿಡೆನು, ಎಂಬ ಮತ್ತು **"ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ। ಅಭಯಂ ಸರ್ವ ಭೂತೇಭ್ಯೋ ದದಾಮ್ಯೇತದ್ವ್ರತಂ ಮಮ"** ಒಂದುಸಲ ಶರಣಾಗತಿಯನ್ನು ಮಾಡಿದವನು ಆತನು ಯಾರೇ ಆಗಲಿ, ಆತನಿಗೆ ಅಭಯವನ್ನು ಕೊಡುವದೇ ನನ್ನ ವ್ರತವು ಎಂದೂ ಹೇಳಿದ, ಮಹಾವ್ರತವನ್ನು ಕೈಕೊಂಡಿರುವ, **ರಾಘವಂ ಚ** ಶ್ರೀರಾಮನನ್ನೂ ಸಹ ಕುರಿತು, **ಉವಾಚ**-ತನ್ನ ಅಪೇಕ್ಷೆಯನ್ನು ಕುರಿತು ಹೇಳುತ್ತಾನೆ. **ಮಹಾವ್ರತಂ** ಎಂಬುದರಿಂದಲೂ ಮಹಾ ವಿಶ್ವಾಸವು ಸೂಚಿತವು.

**ರಾಘವಂಚ**-ಎಂಬಲ್ಲಿ ಚಕಾರದಿಂದ ರಾಮನು ಉಪಾಯಕೋಟಿಯಲ್ಲಿ ಸೇರಿದರೆ **ಸೀತಾಂ**ಎಂಬಲ್ಲಿ ಉಪಾಯತ್ವವು ನಿಸ್ಸಂದೇಹ ವಿಷಯವೆಂಬುದು ತೋರಿಬರುತ್ತದೆ ಮೊದಲು ಪ್ರಾಧಾನ್ಯದಿಂದ **ಸೀತಾಂ** ಎಂದುಹೇಳಿ ಅನಂತರ **ರಾಮಂಚ** ಎಂದು ಹೇಳಿರುವದರಿಂದ ಪುರುಷಕಾರಮಾತ್ರವೇ ಅಲ್ಲದೆ ಉಪಾಯತ್ವದಲ್ಲೂ ಅನ್ವಯ ಉಂಟೆಂಬುದು ವ್ಯಕ್ತವು. ಸ್ವಾಮಿಯು ತಾನೊಬ್ಬನೇ ಸ್ವತಂತ್ರಿಸಿ ಶರಣ್ಯನಾಗು ವುದಿಲ್ಲವು ಯದ್ಯಪಿ ಶ್ರೀರಾಮಚಂದ್ರ ಪ್ರಭುವಿಗೆ ಪಟ್ಟಾಭಿಷೇಕಮಹೋತ್ಸವದಲ್ಲಿ ಅತ್ಯದ್ಭುತವಾದ ಉಪಕಾರವನ್ನೆಸಗಿ ಮಹಾಪ್ರಾಜ್ಞನಾಗಿ ಶರ್ವಶಕ್ತನಾದ ಆಂಜ ನೇಯನಿಗೆ ಒಂದುಹಾರವನ್ನು ಅನುಗ್ರಹಿಸಬೇಕೆಂಬ ಕುತೂಹಲವಿದ್ದರೂ ಇಂತಹ ಅನುಗ್ರಹಾದಿಗಳಲ್ಲಿ ಸೀತೆಯೊಂದಿಗೇನೇ ನಡೆಸತಕ್ಕವನೆಂದು ತೋರಿಸುವದಕ್ಕಾಗಿ **"ಪ್ರದೇಹಿ ಸುಭಗೇಹಾರಂ ಯಸ್ಯತುಷ್ಟಾಸಿ ಭಾಮಿನಿ। ಪೌರುಷಂ ವಿಕ್ರಮೋ ಬುದ್ಧಿರ್ಯಸ್ಮಿನ್ನೇತಾನಿ ಸರ್ವಶಃ"** ಎಂದು ಹೇಳಿದ ಪ್ರಭುವಾದುದರಿಂದ ಸೀತೆಯ ಲ್ಲದೆ ತಾನೊಬ್ಬನೇ ಉಪಾಯವಾಗುವದಿಲ್ಲವೆಂಬಭಾವವನ್ನು ಗ್ರಹಿಸಬಹುದು. ಆದು ದರಿಂದಲೇ **ಲಕ್ಷ್ಮ್ಯಾಸಹಹೃಷೀಕೇಶೋ ದೇವ್ಯಾಕಾರುಣ್ಯರೂಪಾಯಾ। ರಕ್ಷಕ ಸರ್ವಸಿದ್ಧಾನ್ತೇ ವೇದಾನ್ತೇಷು ಚ ಗೀಯತೇ** ಎಂದು ಹೇಳಲ್ಪಟ್ಟಿರುತ್ತದೆ. ಇದು ದ್ವಯದ ಪೂರ್ವಖಂಡದ ಉಪಾಯಾರ್ಥವನ್ನು ಬೋಧಿಸುವ ಶ್ಲೋಕವು.

ಎರಡನೆಯ ಶ್ಲೋಕವು ಉಪೇಯತ್ವವನ್ನು ಬೋಧಿಸುತ್ತದೆ. ಅದು ಯಾವುದೆಂದರೆ :

**ಭವಾಂಸ್ತು ಸಹವೈದೇಹ್ಯಾ ಗಿರಿಸಾನುಷು ರಂಸ್ಯತೇ ।**
**ಅಹಂ ಸರ್ವಂ ಕರಿಷ್ಯಾಮಿ ಜಾಗ್ರತ ಸ್ಸ್ವಪತಶ್ಚ ತೇ ॥**

ಹಿಂದಿನ ಶ್ಲೋಕದಲ್ಲಿ ಇಬ್ಬರನ್ನು ಕುರಿತು ಶರಣಾಗತಿಯನ್ನು ಮಾಡುವಾಗ ನಾಲ್ಕು ಅಂಗಗಳು ಮಾತ್ರ ಪ್ರದರ್ಶಿಸಲ್ಪಟ್ಟಿತು. ಶರಣಾಗತಿಯು ಏತಕ್ಕಾಗಿ ಎಂಬುದು ಲಕ್ಷ್ಮಣನ ಪ್ರವೃತ್ತಿಯಿಂದಲೂ ಶ್ರೀರಾಮಚಂದ್ರನು ಸರ್ವಜ್ಞನಾದುದ ರಿಂದಲೂ ವ್ಯಕ್ತವು ಅದನ್ನು ವ್ಯಕ್ತವಾಗಿ **"ಕುರುಷ್ವಮಾಮನುಚರಂ ವೈಧ ರ್ಮ್ಯಂ ನೇಹವಿದ್ಯತೇ"** ತನ್ನ ಸ್ವರೂಪಕ್ಕೆ ಯೋಗ್ಯವಾದುದನ್ನೇ ಪ್ರಾರ್ಥಿಸಿರು ತ್ತೇನೆಂದು ತನ್ನನ್ನುಯಾವಾಗಲೂ ದಾಸನಾಗಿಮಾಡಿಕೊ, ದಾಸವೃತ್ತಿಯು ತನ್ನ ಸಹಜ ಧರ್ಮವು, ಆದುದರಿಂದ ನಿಮ್ಮಿಬ್ಬರಿಗೂ ಸರ್ವದೇಶ ಸರ್ವಕಾಲ ಸರ್ವಾವಸ್ಥೋ ಚಿತ ಕೈಙ್ಕರ್ಯವನ್ನೆಲ್ಲಾ ಮಾಡುವ ವೃತ್ತಿಯಲ್ಲಿ ನೇಮಿಸು ಎಂಬ ಪ್ರಾರ್ಥನೆಯನ್ನು ಮಾಡುತ್ತಾನೆ. **ವೈದೇಹ್ಯಾಸಹ**-ಸೀತೆಯೊಂದಿಗೆ ಇದರಿಂದ ಉಪೇಯತ್ವದಲ್ಲೂ ಸೀತೆಗೆ ಅನ್ವಯ ಉಂಟೆಂದು ಹೇಳಿದಂತಾಯಿತು. ಆದುದರಿಂದ, ದ್ವಯದಲ್ಲಿ ಪೂರ್ವಖಂಡದ ಉಪಾಯದೆಶೆಯಲ್ಲೂ, ಉತ್ತರಖಂಡದ ಉಪೇಯದೆಶೆಯಲ್ಲೂ ಲಕ್ಷ್ಮಿಯ ಅನ್ವಯವನ್ನು **ಶ್ರೀಮಚ್ಛಬ್ದವು** ತೋರಿಸುತ್ತದೆ, ಎಂಬುದು

## ಅಸ್ಯ ಮನ್ತ್ರಸ್ಯ ಅಧಿಕಾರೀಕಃ ?

**ಇಪ್ಪಡಿ ಇರುಕ್ಕೈಯಾಲುಮ್ ಉಪಾಯಾನ್ತರಙ್ಗಳಿಲುಮ್ ಉಪೇಯಾನ್ತರಙ್ಗಳಿಲುಮ್ ತುವಕ್ಕತ್ತರ್ವ ಮನ್ತ್ರತ್ತುಕ್ಕು ಪೂರ್ಣಾಧಿಕಾರೀ.**

---

ಮುಂದೆ ಉಪಪಾದಿತವು. ಹಿಂದೆಯೂ ಸ್ವಾಪ್ರಸ್ಥಳಗಳಲ್ಲಿ ಬೋಧಿತವು. **ಭವಾಂಸ್ತು**-ನೀವಾದರೋ, **ಗಿರಿಸಾನುಷು**-ಪರ್ವತದ ತೊಪ್ಪಲುಗಳಲ್ಲಿ **ರಂಸ್ಯತೇ**-ವಿಹರಿಸಿ, **ತೇ**-ಸೀತಾಸಮೇತನಾದ ನಿನಗೆ, ಹಿಂದೆ **ಸಹವೈದೇಹ್ಯಾ** ಎಂದಿರುವದರಿಂದ ಈ ಅರ್ಥವು ದ್ಯೋತಿತವು **ಜಾಗ್ರತಸ್ಸ್ವಪತಶ್ಚ**-ಎದ್ದಿರುವಾಗಲೂ ಮಲಗಿರುವಾಗಲೂ, ಆಯಾಪ್ರದೇಶದಲ್ಲಿ, ಆಯಾಕಾಲದಲ್ಲಿ ಆಯಾವಸ್ಥೆಗಳಲ್ಲಿ ಉಚಿತವಾದ ಕೈಙ್ಕರ್ಯಗಳನ್ನೆಲ್ಲಾ, **ಅಹಂ ಕರಿಷ್ಯಾಮಿ** - ನಾನು ಮಾಡುವೆನು ಎಂಬರ್ಥವು. ದಿವ್ಯವೈಕುಂಠದಲ್ಲಿ ಮುಕ್ತದೆಶೆಯಲ್ಲಿ ಅಪೇಕ್ಷಿತವಾದುದೇ ಇಂತಹ ಕೈಙ್ಕರ್ಯವು. ಅಂತಹ ನಿತ್ಯವೈಕುಂಠವನ್ನೇ ಈಗ ಅಪೇಕ್ಷಿಸಿರುತ್ತಾನೆ.

ಇದರಿಂದ ಸೂಕ್ಷ್ಮವಾಗಿ ದ್ವಯವು ಲಕ್ಷ್ಮೀನಾರಾಯಣರ ಶರಣವರಣ ಮನ್ತ್ರವು. ಫಲವು ಲಕ್ಷ್ಮೀನಾರಾಯಣಕೈಙ್ಕರ್ಯವು. ಇವೆರಡುಶ್ಲೋಕಗಳೇ ದ್ವಯ ಮನ್ತ್ರಾರ್ಥಗಳನ್ನು ಸೂಚಿಸುತ್ತವೆ ಹೀಗೆ ಪೂರ್ವಖಂಡವು ಉಪಾಯವನ್ನೂ ಉತ್ತರ ಖಂಡವು ಉಪೇಯವನ್ನೂ ಬೋಧಿಸುವದರಿಂದ ಈ ಮನ್ತ್ರಕ್ಕೆ ದ್ವಯವೆಂಬ ಹೆಸರು. ಅನೇಕ ಪ್ರಮಾಣಗಳು ಉಪಾಯೋಪೇಯ ಭಾವಗಳನ್ನು ಬೋಧಿಸುವಂತವು ಇರುವಾಗ ಶ್ರೀಮದ್ರಾಮಾಯಣದಲ್ಲಿ ಬೋಧಿಸಲ್ಪಟ್ಟ ಪ್ರಮಾಣಗಳನ್ನೇ ಏಕೆ ಉದಾಹರಿಸಿದರು ಎಂದರೆ ದ್ವಯವು ಶರಣಾಗತ್ಯನುಷ್ಠಾನ ಮನ್ತ್ರವಾಗಿಯೂ ಶರಣಾಗತಿ ಸಾರಭೂತವಾದ ಗ್ರಂಥವು ರಾಮಾಯಣವಾದುದಾಗಿಯೂ ಇರುವದರಿಂದ ಅಂತಹಪ್ರಮಾಣಗಳೇ ಇಲ್ಲಿ ಪರಮೋಪಾದೇಯವು. ಆದುದರಿಂದ ಪ್ರಥಮ ಖಂಡವು ಸಪತ್ನೀಕನಾದ ನಾರಾಯಣನಲ್ಲೇ ಶರಣಾಗತಿ ರೂಪವಾದ ಅನುಷ್ಠಾನವನ್ನು ಕೈಕೊಳ್ಳಬೇಕೆಂದೂ, ಅದರಿಂದುಂಟಾಗುವ ಉಪೇಯವು ಅವರೇಯಾಗಿ ಸಪತ್ನೀಕನಾಗಿರುವ ನಾರಾಯಣನಿಗೆ ಮಾಡುವ ಕೈಙ್ಕರ್ಯಪ್ರಾಪ್ತಿಯೇ ಎಂದೂ ದ್ವಿತೀಯಖಂಡವು ಹೇಳುತ್ತದೆಂಬುದು ತಾತ್ಪರ್ಯವು.

## ಈ ಮನ್ತ್ರಕ್ಕೆ ಅಧಿಕಾರಿಯು ಯಾರು ?

**ಇಪ್ಪಡಿ ಇರುಕ್ಕೈಯಾಲುಮ್**-ಹೀಗೆ ಇರುವದರಿಂದಲೇ ಎಂದರೆ ಉಪಾಯವು ಈ ಮನ್ತ್ರದಮೂಲಕ ಮಾಡುವ ಶರಣಾಗತಿಯಾಗಿಯೂ ಉಪೇಯವು ಪರಿಪೂರ್ಣಬ್ರಹ್ಮಾನುಭವದೊಂದಿಗೆ ಅವರುಗಳಿಗೆಮಾಡುವ ಕೈಙ್ಕರ್ಯವೂ ಆಗಿರುವದರಿಂದಲೇ, **ಉಪಾಯಾನ್ತರಙ್ಗಳಿಲುಮ್** - ಕರ್ಮಯೋಗ, ಜ್ಞಾನಯೋಗ

ಗಳಿಂದ ಕೂಡಿದ ಭಕ್ತಿಯೋಗಪ್ರವೃತ್ತಿಗಳಲ್ಲೂ, ಉಪೇಯಾನ್ತರಙ್ಗಳಲ್ಲೂ- ಅನ್ಯದೇವತಾ ಸಾಯುಜ್ಯ ಮೊದಲಾದ ಪ್ರಾಪ್ಯಗಳಲ್ಲೂ, ತುವಕ್ಕತ್ತುವರ್ - ಸಂಬಂಧವನ್ನು ತ್ಯಜಿಸಿದವನೇ, ಪೂರ್ಣಾಧಿಕಾರೀ - ಸಂಪೂರ್ಣಾಧಿಕಾರಿಯು, ಶರಣಾಗತಿಯೇ ಪರಮೋಪಾಯವೆಂಬ ಮಹಾವಿಶ್ವಾಸವಿರುವವನಿಗೆ ಮಾತ್ರವೇ ಉಪಾಯುವಾಗುವದರಿಂದ ಅಂತಹ ವಿಶ್ವಾಸವಿಲ್ಲದಿದ್ದರೆ ಅದು ಉಪಾಯವೇ ಆಗುವದಿಲ್ಲವಾದುದರಿಂದ ಅಕಿಂಚನ್ಯದಿಂದ ಪ್ರಾಪ್ತವಾಗುವ ಮಹಾವಿಶ್ವಾಸಯುಕ್ತನಾಗಿ ಅನುಷ್ಠಿಸುವನಿಗೆ ಮಾತ್ರವೇ ಇದು ಉಪಾಯವಾಗುವದರಿಂದ ಉಪಾಯಾನ್ತರದ ತುವಕ್ಕನ್ನು ಎಂದರೆ ಸಂಬಂಧವನ್ನು ಸಂಪೂರ್ಣ ಪರಿತ್ಯಾಗಮಾಡಿದವನಿಗೇ ಅಧಿಕಾರವೆಂದು ಹೇಳಲ್ಪಟ್ಟಿತು. ಅನನ್ಯಗತಿತ್ವವೂ ಶರಣಾಗತಿಗೆ ಅಙ್ಗವಾದುದರಿಂದ, ಅದು ಇರುವವನಿಗೆ ಅಧಿಕಾರವೇ ವಿನಾ, ಅನ್ಯದೇವತಾ ಸಂಬಂಧವೂ ಅನ್ಯಪ್ರಯೋಜನದ ಸಂಬಂಧವೂ ಇದಕ್ಕೆ ಪ್ರಬಲ ವಿರೋಧವಾದದರಿಂದ, ಉಪೇಯಾನ್ತರವನ್ನೂ ಸಂಪೂರ್ಣವಾಗಿ ತ್ಯಾಗಮಾಡಿರುವವನಿಗೆ ಅಧಿಕಾರವೆಂದು ಹೇಳಿದರು. ಇವೆರಡೂ, ಎಂದರೆ ಉಪಾಯಾನ್ತರದಲ್ಲೂ ಸಂಬಂಧವಿಲ್ಲದಿರೋಣವೂ ಮತ್ತು ಉಪೇಯಾನ್ತರದಲ್ಲೂ ಸಂಬಂಧವಿಲ್ಲದಿರೋಣವೂ ಎರಡೂ ಅಧಿಕಾರಕ್ಕೆ ಆವಶ್ಯಕವೇ ? ಇಲ್ಲವೇ ಯಾವುದಾದರೂ ಒಂದೇ ಸಾಕೆ ? ಎಂಬ ವಿಷಯದಲ್ಲಿ ಎರಡೂ ಆವಶ್ಯಕವೆಂದು ಹೇಳಿದರು ಏಕೆಂದರೆ ಮಹಾವಿಶ್ವಾಸವೂ ಅನನ್ಯಗತಿತ್ವವೂ ಎರಡೂ ಅಙ್ಗಗಳಾದುದರಿಂದ ಇವೆರಡು ಪರಿಕರಗಳೂ ಆವಶ್ಯಕವು. ಹಾಗಿಲ್ಲವಾದರೆ ಅಧಿಕಾರವೇ ಸಿದ್ಧಿಸುವದಿಲ್ಲವು. ಹೀಗೆ ಇರುವದರಿಂದ ವರ್ಣಾಶ್ರಮ ತಾರತಮ್ಯವೇನೂ ನಿಬಂಧನವಿಲ್ಲವೆಂದು ಇದರಿಂದ ಹೇಳಿದಂತಾಯಿತು. ಸಾರಾಸ್ವಾದಿನಿಯವರು ಪೂರ್ಣಾಧಿಕಾರತ್ವವನ್ನು ಇನ್ನೊಂದು ವಿಧವಾಗಿ ಉಪಪಾದಿಸಿರುತ್ತಾರೆ. ಅಧಿಕಾರದಲ್ಲಿ ಮನ್ತ್ರವು ವೈದಿಕವಾದುದಾದರೆ ತ್ರೈವರ್ಣಿಕರಿಗೆ ಮಾತ್ರವೇ ಅನ್ವಯವು. ತಾಂತ್ರಿಕವಾದರೆ ಸಾಧಾರಣವಾಗಿ ಎಲ್ಲರಿಗೂ ಅನ್ವಯವು. ಹೀಗೆ ಈ ಎರಡುವಿಧ ಅಧಿಕಾರವಿದ್ದರೆ ಪೂರ್ಣಾಧಿಕಾರಿಯು ಎಂಬ ಭಾವನೆಯು. ಅರ್ಧಾಧಿಕಾರವಿಲ್ಲದಿದ್ದರೆ ಅಪೂರ್ಣಾಧಿಕಾರಿ ಎಂದು ತಿಳಿಸಿರುತ್ತಾರೆ. ಆಚಾರ್ಯನಿಷ್ಠೆಯುವ ಮೂಲಕ ಆಚಾರ್ಯರ ಈ ಮನ್ತ್ರೋಚ್ಚಾರಣೆಯ ಮೂಲಕವಾಗಿ ತನ್ನನ್ನಾಶ್ರಯಿಸಿದ ಶೂದ್ರಾದಿಗಳಿಗೂ ಕೂಡ ಶರಣಾಗತಿಯಲ್ಲಿ ಅಧಿಕಾರ ಉಂಟೆಂಬುದು ಸೂಚಿತವು. "ಸರ್ವಸ್ಯ ಶರಣಂ ಸುಹೃತ್" ಎಂಬ ಶ್ರುತ್ಯರ್ಥಾನುಗುಣವಾಗಿ ಸರ್ವಾಧಿಕಾರತ್ವವು ಬೋಧಿತವು. ಆಗಲಿ "ಕಿಂ ನು ತಸ್ಯ ಚ ಮನ್ತ್ರಸ್ಯ ಕರ್ಮಣಃ ಕಮಲಾಸನ। ನಲಭ್ಯತೇಧಿಕಾರೀ ವಾ ಶ್ರೋತುಕಾಮೋ ಽಪಿ ವಾ ನರಃ" ಎಂದು ಈ ದ್ವಯಮನ್ತ್ರದ ಮೂಲಕ ಶರಣಾಗತಿಯನ್ನು ಅನುಷ್ಠಿಸುವ ಅಧಿಕಾರಿಯು ಲಭಿಸುವದೇ ಇಲ್ಲವು ಎಂದು ಹೇಳಿರುವಾಗ ಇದಕ್ಕೆ ಸರ್ವಾಧಿಕಾರವುಂಟು ಎಂದು ಸ್ಥಾಪಿಸಿದುದು ಹೇಗೆ? ಎಂದರೆ

## ದ್ವಯಶಬ್ದಸ್ಯ ಅರ್ಥಾನ್ತರವ್ಯೂಹ

---

ಇವ್ಮನ್ತ್ರಮ್ ವರಣ ಸಮರ್ಪಣಙ್ಗಳೈ ಆಡೃವೆ ಪ್ರತಿಪಾದಿಕ್ಕೈಯಾಲೇ ದ್ವಯಮೆನ್ರು ಶೊಲ್ಲಪ್ಪಡುಗಿರದೆನ್ರುಮ್ ಶಿಲರ್ ಶೊಲ್ಲುವರ್ಗಳ್.

---

ಈ ಪ್ರಣವದ ಅಭಿಪ್ರಾಯವು ಗೀತೆಯಲ್ಲಿ "ಸಮಹಾತ್ಮಾ ಸು ದುರ್ಲಭಃ" ಎಂದು ಹೇಳಿರುವಹಾಗೆ ಅಂತಹ ಅಧಿಕಾರಿಗಳು ದೊರೆಯುವ ದೌರ್ಲಭ್ಯವನ್ನು ಮಾತ್ರ ಉಪಪಾದಿಸಿತೇ ವಿನಾ, ಸರ್ವಾಧಿಕಾರತ್ವಕ್ಕೆ ನ್ಯೂನತೆಯನ್ನೇನೂ ಹೇಳಲಿಲ್ಲವು. ಹೀಗೆ ಉಪಾಯಾನ್ತರಗಳಲ್ಲಿ ಸಂಬಂಧವಿಲ್ಲದೆ, ಅರ್ಥವಾಗಿ ಉಪೆಯಾನ್ತರದಲ್ಲೂ ಸಂಬಂಧವಿಲ್ಲದವನೇ ಅಧಿಕಾರಿ ಎಂದು ಶ್ರೀ ಯಾಮುನಮುನಿಗಳು "ನ ಧರ್ಮನಿಷ್ಠೋಽಸ್ಮಿ ನ ಚಾತ್ಮವೇದೀ ನ ಭಕ್ತಿಮಾಂಸ್ತ್ವಚ್ಚರಣಾರವಿಂದೇ। ಅಕಿಂಚನೋಽನನ್ಯಗತಿ ಶ್ಶರಣ್ಯ ತ್ವತ್ಪಾದಮೂಲಂ ಶರಣಂ ಪ್ರಪದ್ಯೇ" ಎಂಬ ಸ್ತೋತ್ರರತ್ನ ಶ್ಲೋಕದಲ್ಲಿ (೨೨) ವ್ಯಕ್ತಪಡಿಸಿರುತ್ತಾರೆ.

ಮನ್ತ್ರಗಳಲ್ಲಿ ಅಧಿಕಾರವು ಎರಡು ವಿಧವು. (೧) ಶಬ್ದಕೃತವಾಗಿ, (೨) ಅರ್ಥಕೃತವಾಗಿ. ಮನ್ತ್ರವು ವೈದಿಕವಾದರೆ ಶಬ್ದಕೃತವಾದ ಅಧಿಕಾರವು ತ್ರೈವರ್ಣಿಕರಿಗೆ ಮಾತ್ರವೇ ಎಂಬುದು ನಿಯತವು. ಅರ್ಥಕೃತವಾಗಿ ತಾಂತ್ರಿಕವಾದರೆ ಸರ್ವರಿಗೂ ಅಧಿಕಾರವು.

ಅರ್ಥಕೃತ ಅಧಿಕಾರವಾದರೋ ಮನ್ತ್ರದಿಂದ ಬೋಧಿಸಲ್ಪಟ್ಟ ಕ್ರಿಯೆಯನ್ನು ಸರಿಯಾಗಿ ನಡೆಸೋಣವೂ. ಹೀಗೆ ಇವೆರಡು ಅಧಿಕಾರ ಉಂಟಾದರೆ ಅಧಿಕಾರಿಯು ಪೂರ್ಣಾಧಿಕಾರಿ ಎನಿಸುವನು? ಅರ್ಥಕೃತ ಅಧಿಕಾರಿಯು ಪೂರ್ಣಾಧಿಕಾರಿಯಲ್ಲವು. ಆದುದರಿಂದ ಶಬ್ದಕೃತವಾಗಿ ಇರುವ ಅಧಿಕಾರಿಯು ಅರ್ಥಕೃತ ಅಧಿಕಾರಿಯೂ ಆಗುವದರಿಂದ ಪೂರ್ಣಾಧಿಕಾರಿಯು. ತ್ರಿವರ್ಣದವರೆಲ್ಲಾ ಪೂರ್ಣಾಧಿಕಾರಿಗಳು; ಶೂದ್ರಾದಿಗಳು ಮಾತ್ರ ಅಪೂರ್ಣಾಧಿಕಾರಿಗಳು. ಪ್ರಯೋಜನಾಂತರಪರರೂ ಅಪೂರ್ಣಾಧಿಕಾರಿಗಳು. ಶ್ರೀ ನಿಗಮಾನ್ತರವರ ಪೂರ್ಣಾಧಿಕಾರ ಪ್ರಯೋಗವೇ ಅಪೂರ್ಣಾಧಿಕಾರಿಗಳೂ ಉಂಟೆಂಬದನ್ನು ಬೋಧಿಸುತ್ತದೆ. ಎರಡೂ ಇದ್ದರೆ ಪೂರ್ಣಾಧಿಕಾರಿಯು, ಅವುಗಳಲ್ಲಿ ಒಂದೇ ಇದ್ದರೆ ಅಪೂರ್ಣಾಧಿಕಾರಿಯು ಎಂದು ಇಟ್ಟುಕೊಳ್ಳಬಹುದು.

### ದ್ವಯಶಬ್ದಕ್ಕೆ ಬೇರೆ ಅರ್ಥವನ್ನು ಹೇಳುತ್ತಾರೆ.

---

ಇವ್ಮನ್ತ್ರಮ್ - ಈ ದ್ವಯಮನ್ತ್ರವು, ವರಣಸಮರ್ಪಣಙ್ಗಳೈ-ಪೂರ್ವಖಂಡದಲ್ಲಿ ಗೋಪ್ತೃತ್ವವರಣವನ್ನು, ರಕ್ಷಿಸು ಎಂದು ಶರಣಾಗತಿಯ ಶರಣವರಣವನ್ನು ಉಪಾಯತಾ ಪ್ರಾರ್ಥನೆಯನ್ನೂ ಉತ್ತರಖಂಡದಿಂದ ಭರಸಮರ್ಪಣವನ್ನು

ಇಪ್ಪಡಿ "ಶ್ರೀಮನ್ನಾರಾಯಣಸ್ವಾಮಿನ್" ಇತ್ಯಾದಿ ಮನ್ತ್ರಾನ್ತರತ್ತಿಲುಮ್ "ದ್ವಯ" ಶಬ್ದಪ್ರಯೋಗತ್ತುಕ್ಕು ಇನ್ನೈಯೇ ನಿಮಿತ್ತಮ್.

---

**ಆದ್ಧೈವೆ** - ಅನುಷ್ಠಾನವನ್ನೂ, ಪ್ರತಿಪಾದಿಕ್ಕೈಯಾಲೇ- ಪ್ರತಿಪಾದಿಸುವದರಿಂದು **ದ್ವಯಮೆನ್ರು ಶೊಲ್ಲಪ್ಪಡುಗಿರದೆನ್ರು**-"ದ್ವಯ"ವೆಂದು ಹೇಳಲ್ಪಡುತ್ತದೆಂದು **ಶಿಲರ್ ಶೊಲ್ಲುವರ್‌ಗಳ್** - ಕೆಲವರು ಹೇಳುವ ಸಂಪ್ರದಾಯವೂ ಉಂಟು. **ಪೂರ್ವಖಂಡವು** ಅಂಗಗಳನ್ನು ಪ್ರತಿಪಾದಿಸುತ್ತದೆಂದೂ, ಉತ್ತರಖಂಡವು ಅಂಗಿಯನ್ನು ಬೋಧಿಸುತ್ತದೆಂದೂ ಹೀಗೆ ಅಙ್ಗಾಙ್ಗಿಗಳು ಹೇಳಲ್ಪಡುವದರಿಂದ ದ್ವಯವೆಂದು ಹೇಳಿಸಿಕೊಳ್ಳುತ್ತವೆಂದು ಕೆಲವರ ಅಭಿಪ್ರಾಯವು. ಕೆಲವರ ಅಭಿಪ್ರಾಯವೆಂದು ಹೇಳಿದುದರಿಂದ ತಮ್ಮ ಅಭಿಪ್ರಾಯವು ಉಪಾಯೋಪೇಯ ಪ್ರತಿಪಾದಿಸುವದರಿಂದಲೇ ದ್ವಯವೆಂಬ ವ್ಯವಹಾರವೆಂಬುದು ಸೂಚಿತವು ಆದರೆ ಸಾಂಪ್ರದಾಯಾರ್ಥವಿರುವಾಗ, ಇದು ಸಂಪೂರ್ಣವಾಗಿ ತ್ಯಾಜ್ಯವೋ ಎಂದರೆ ಇವರೂ ಕೂಡ ಪ್ರಮಾಣ ಬಲವಿಲ್ಲದೇ ಹೇಳಿಲಿಲ್ಲವು. ಇದು ಅರುಳಾಳಪ್ಪೆರು ಮಾಳಿಂಬೆರುಮಾನಾರ್ ಎಂಬುವರ ವ್ಯಾಖ್ಯಾನದಲ್ಲಿ ಹೇಳಲ್ಪಟ್ಟಿರುತ್ತದೆ. ಇವರು ಮೊದಲಿಗೆ ಅದ್ವೈತಸಿದ್ಧಾನ್ತದಲ್ಲಿ ಯಜ್ಞಮೂರ್ತಿ ಎಂದು ತುಂಬಾ ಪ್ರಖ್ಯಾತರಾಗಿ, ದಿಗ್ವಿಜಯವನ್ನು ಮಾಡಿಕ್ಕೊಂಡು ಶ್ರೀರಂಗಕ್ಕೆ ಶ್ರೀಭಾಷ್ಯಕಾರರನ್ನೂ ಜಯಿಸಬೇಕೆಂದು ಬಂದಾಗ,ಯಾರು ವಾದದಲ್ಲಿ ಗೆಲ್ಲುತ್ತಾರೋ ಅವರಿಗೆ ಸೋತವರು ಶಿಷ್ಯರಾಗಬೇಕೆಂಬ ಶಪಥದೊಂದಿಗೆ, ೧೮ ದಿನ ವಾಯಿದೆ ಇಟ್ಟುಕೊಂಡು, ೧೭ನೆಯ ದಿನದವರೆಗೂ ಯಜ್ಞಮೂರ್ತಿಯೇ ವಾದದಲ್ಲಿ ಮೇಲಾಗಿರುವದನ್ನು ಕಂಡು ಶ್ರೀ ಭಾಷ್ಯಕಾರರು ಶ್ರೀ ರಂಗನಾಥನಲ್ಲಿ ಶರಣಾಗತಿಯನ್ನನುಷ್ಠಿಸಿ ತಮಗೆ ಜಯವನ್ನು ಪ್ರಾರ್ಥಿಸಲಾಗಿ, ಆಗ ಶ್ರೀ ರಂಗನಾಥನು ನಿಮ್ಮ ಗುರುಗಳಾದ ಯಾಮುನಮುನಿಯ ಸಿದ್ಧಿತ್ರಯವನ್ನು ಮರೆತರೇನು ಎಂದು ಸ್ವಪ್ನದಲ್ಲಿ ಕೇಳಿದಾಗ, ಅಲ್ಲಿನ ವಾದಮಹಿಮೆಯಿಂದ ಅವರನ್ನು ಗೆದ್ದು, ಅವರನ್ನು ಶಿಷ್ಯರಾಗಿ ಮಾಡಿಕೊಂಡು ಪಂಚಸಂಸ್ಕಾರಾದಿಗಳನ್ನು ಅವರಿಗೆ ಅನುಗ್ರಹಿಸಿ ಅವರಿಗೆ ಅರುಳಾಳ್ ಪೆರುಮಾಳಿಂಬೆರುಮಾನಾರ್ ಎಂಬ ಹೆಸರನ್ನು ದಯಪಾಲಿಸಿದರೆಂಬ ವೃತ್ತಾಂತವು ಆರಾಯಿರಪ್ಪಡಿ ಗುರುಪರಂಪರಾಪ್ರಭಾವದಲ್ಲಿದೆ. ಆದುದರಿಂದ ಆ ಅಭಿಪ್ರಾಯವೂ ಆಗಬಹುದು. ಹಾಗೆ ಹೇಳಲು ಕಾರಣವೇನು ? ಪ್ರಮಾಣ ಬಲವು ಯಾವುದು ಎಂದರೆ ಉದಾಹರಿಸುತ್ತಾರೆ. **ಇಪ್ಪಡಿ** - ಹೀಗೆ ಎಂದರೆ ದ್ವಯದ ಪೂರ್ವ ಖಂಡವು •ಶರಣಾಗತ್ಯನುಷ್ಠಾನದ ಅಙ್ಗಗಳನ್ನೂ, ಉತ್ತರ ಖಂಡವು ಅಙ್ಗಿಯಾದ ಶರಣಾಗತ್ಯನುಷ್ಠಾನವನ್ನೂ ನಮಶ್ಶಬ್ದದ ಮೂಲಕ ಬೋಧಿಸುತ್ತದೆ ಎಂದೂ, ಹೀಗೆ ಹೇಳುವದಕ್ಕೆ "ಶ್ರೀಮನ್ನಾರಾಯಣ ಸ್ವಾಮಿನ್" ಇತ್ಯಾದಿ ಎಂಬಿವೇ ಮೊದಲಾದ, ಮನ್ತ್ರಾನ್ತರತ್ತಿಲುಮ್ - ಬೇರೆ

ಮನ್ತ್ರದಿಂದಲೂ, ದ್ವಯಶಬ್ದಪ್ರಯೋಗತ್ತುಕ್ಕು - ದ್ವಯವೆಂಬ ವ್ಯವಹಾರಕ್ಕೆ, ಇವ್ವೈಯೇ ನಿಮಿತ್ತಮ್ - ಇದೇ ಕಾರಣವು. ಆ ಪೂರ್ವ ಪ್ರಮಾಣವು ಯಾವುದೆಂದರೆ—

ಶ್ರೀಮನ್ನಾರಾಯಣ ಸ್ವಾಮಿನ್ ದಾಸೋಽಹಂ ತವ ತಸ್ಯ ವೈ ।
ಪರಮಾಪ್ತುಸ್ತ್ವಮೇ ವಾರ್ಥ ಮನುಕೂಲೋ ವಿವರ್ಜಯನ್ ।
ಪ್ರಾತಿಕೂಲ್ಯಂ ಸುವಿಸ್ರಬ್ಧಸ್ಸಂಪ್ರಾರ್ಥ್ಯ ಶರಣಂ ಪರಮ್ ।
ವ್ರಜಾಮಿ ಯುಷ್ಮಚ್ಚರಣಂ ತತ್ರೈವಾಹಂ ಮಯಾರ್ಪಿತಃ ॥

ಮೊದಲಿನ ಶ್ಲೋಕವು ಅಂಗಗಳನ್ನುಪಪಾದಿಸಿ, ಎರಡನೆಯ ಶ್ಲೋಕವೂ ಅಂಗಿಯಾದ ಶರಣಾಗತಿಯನ್ನು ಅನುಷ್ಠಿಸುವದರಿಂದ ಈ ಎರಡು ಶ್ಲೋಕಕ್ಕೂ ಸಹ ದ್ವಯವೆಂಬ ಹೆಸರನ್ನು ಕೆಲವರು ಕೊಟ್ಟಿರುತ್ತಾರೆ. ಓ ಲಕ್ಷ್ಮೀಯುಕ್ತನಾದ ನಾರಾಯಣನೇ ಸ್ವಾಮಿಯೇ, ನಿನಗೆ ನಾನು ದಾಸನು, ಪರಮಾತ್ಮನನ್ನು ಹೊಂದಬೇಕೆಂಬುವ ನನಗೆ ನೀನೇ ಗತಿಯು,ಕಾರಣವು ; ಆದುದರಿಂದ ಅನುಕೂಲನಾಗಿ ಪ್ರತಿಕೂಲಭಾವವನ್ನು ತೊರೆದು ಮಹಾವಿಶ್ವಾಸದಿಂದ ನಿಸ್ಸಂಶಯನಾಗಿ ಚೆನ್ನಾಗಿ ರಕ್ಷಿಸು ಎಂದು ಪ್ರಾರ್ಥಿಸಿ (ಗೋಪ್ತೃತ್ವವರಣವು ಇದೆಲ್ಲಾ ಪ್ರಥಮ ಶ್ಲೋಕಾರ್ಥವು.) ನಿಮ್ಮ ಪಾದಕಮಲವನ್ನು ಹೊಂದುವೆನು, ಅಲ್ಲಿಯೇ ನನ್ನಿಂದ ನಾನೇ ಸಮರ್ಪಿಸಲ್ಪಟ್ಟಿರುವೆನು" ಎಂಬುದು ಶ್ಲೋಕಗಳ ತಾತ್ಪರ್ಯವು. ಆದುದರಿಂದ ದ್ವಯಶಬ್ದದ ಈ ಎರಡನೆಯ ಅರ್ಥಕ್ಕೂ ಸಂಪ್ರದಾಯ ಪ್ರಮಾಣಗಳೂ ಉಂಟು. ಆದರೆ ದ್ವಯಶಬ್ದಕ್ಕೆ ಸಮಂಜಸವಾದ ಸಂಪ್ರದಾಯಾರ್ಥವು ಮೊದಲು ಹೇಳಿದ ಉಪಾಯೋಪೇಯಾರ್ಥಗಳಾದ ಎರಡು ಅಭಿಪ್ರಾಯಗಳಿಂದ ಕೂಡಿದುದು ಎಂಬುದೇ ಎಂಬ ತಾತ್ಪರ್ಯವು. ಏತರಿಂದ ಹೀಗೆ ನಿರ್ಧರಿಸುತ್ತೀರಿ ? ಎಂದರೆ, ಮೊದಲಿನ ದ್ವಯಾರ್ಥವನ್ನು ಹೇಳುವಾಗ "ದ್ವಯಮೆನ್ರು ಪೇರ್‌ಪೆತ್ತದು" ಎಂದು ವ್ಯಕ್ತವಾಗಿ ಹೇಳಿರುವದರಿಂದಲೂ ಎರಡನೆಯ ಅರ್ಥವನ್ನು ಹೇಳುವಾಗ ದ್ವಯಶಬ್ದ ಪ್ರಯೋಗತ್ತುಕ್ಕು ಇವ್ವೈಯೇ ನಿಮಿತ್ತಮ್" ಎಂದು ಹೇಳಿರುವದರಿಂದಲೂ ಪ್ರಥಮ ಯೋಜನೆಯೇ ನ್ಯಾಯವಾದುದು ಎಂಬುದು ಸ್ಪಷ್ಟವು.

ಈ ಸಂದರ್ಭದಲ್ಲಿ ಸಾರಸಙ್ಗ್ರಹ ವ್ಯಾಖ್ಯಾತೃವು, "ಶ್ರೀಮನ್ನಾರಾಯಣ ಸ್ವಾಮಿನ್" ಎಂಬುದು ಪಂಚರಾತ್ರತಂತ್ರಮಂತ್ರವಾದ "ಶ್ರೀಮನ್ನಾರಾಯಣ ಸ್ವಾಮಿನ್ ಅನನ್ಯ ಶರಣಸ್ತ್ವವ । ಚರಣೌ ಶರಣಂ ಯಾತಃ ತವೈವಾಸ್ಮ್ಯಹಮಚ್ಯುತ" ಎಂಬುದನ್ನು ಜ್ಞಾಪಿಸುತ್ತದೆ ಎಂದು ತಿಳಿಸಿರುತ್ತಾರೆ. ಶ್ರೀ ದೇಶಿಕರವರು ಮನ್ತ್ರಾನ್ತರತ್ತಿಲುಮ್ ಎಂದು ಪ್ರಯೋಗಿಸಿರುವದರಿಂದ ಇದೇಸರಿಯಾದ ಅಭಿಪ್ರಾಯವಾಗಿತೋರುತ್ತದೆ.

ಹೀಗೆ ದ್ವಯವು, ಉಪಾಯೋಪೇಯವನ್ನು ಬೋಧಿಸುವದರಿಂದ ಶ್ರೇಷ್ಠವಾದ ಶರಣಮನ್ತ್ರವು; ಎಂದರೆ ಭರನ್ಯಾಸವನ್ನು ಅನುಷ್ಠಿಸುವ ಮನ್ತ್ರವು ಎಂದು

## ದ್ವಯಾನುಷ್ಠಾನಕ್ರಮಃ

೧ “ಮನ್ತ್ರರಾಜಮಿದಂ ವಿದ್ಯಾದ್ಗುರುವಂದನ ಪೂರ್ವಕಮ್ । ಗುರುರೇವ ಪರಂಬ್ರಹ್ಮ ಗುರುರೇವ ಪರಾಗತಿಃ । ಗುರುರೇವ ಪರಾವಿದ್ಯಾ ಗುರುರೇವ

---

ಸ್ಥಾಪಿಸಿದರಲ್ಲಾ, “ತದ್ವಿಷ್ಣೋಃ ಪರಮಂ ಪದಂ” ಎಂಬ ಶ್ರುತಿಪ್ರತಿಪಾದ್ಯ ಮನ್ತ್ರಕ್ಕಾದರೋ ಗುರೂಪಸದನಾದಿಗಳನ್ನು ಬೋಧಿಸಿ ಗುರುಮೂಲಕವಾಗಿಯೇ ಅನುಷ್ಠಿಸತಕ್ಕದ್ದೆಂದು ಸಾತ್ಯಕಿ ತಂತ್ರವು ಬೋಧಿಸುವದರಿಂದ ಈ ಮನ್ತ್ರಾನ್ತರವಾದ “ತದ್ವಿಷ್ಣೋಃ ಪರಮಂ ಪದಮ್” ಎಂಬುದನ್ನಾಗಲಿ “ಶ್ರೀವನ್ನಾರಾಯಣ ಸ್ವಾಮಿನ್” ಎಂಬುದನ್ನಾಗಲಿ ಅನುಷ್ಠಾನಮನ್ತ್ರವಾಗಿ ಇಟ್ಟುಕೊಳ್ಳುವದು ನ್ಯಾಯವಲ್ಲವೋ ಎಂಬ ಶಙ್ಕೆ ಉಂಟಾದರೆ ಈಗ ಮೇಲೆ ಹೇಳಿದ ದ್ವಯಮನ್ತ್ರದಲ್ಲೂ ಅನುಷ್ಠಾನಪ್ರಕ್ರಿಯೆಯೂ ಹಾಗೆಯೇ ಇರುತ್ತದೆ ಎಂದು ಅನುಷ್ಠಾನಪ್ರಕಾರವನ್ನು ಉಪಪಾದಿಸುತ್ತಾರೆ. ಅದಕ್ಕಾಗಿ ಸಾತ್ಯಕಿತಂತ್ರಶ್ಲೋಕಗಳನ್ನೇ ಉದಾಹರಿಸುತ್ತಾರೆ.

### ದ್ವಯಮನ್ತ್ರದ ಅನುಷ್ಠಾನಕ್ರಮವು

ಮೂಲಮನ್ತ್ರವಲ್ಲಾಗಲಿ, ದ್ವಯವಲ್ಲಾಗಲಿ, ಈ ಶರಣಾಗತಿಯನ್ನು ಗುರುಮೂಲಕವಾಗಿಯೇ ಅನುಷ್ಠಿಸತಕ್ಕದ್ದೆಂದು ಹೇಳಿದುದರ ಔಚಿತ್ಯಕ್ಕೆ ಕಾರಣವೇನೆಂದರೆ, ಅದಕ್ಕೆ ಮುಂದಿನ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಾರೆ. ವಿಕಲ್ಪರೂಪದಲ್ಲಿ ಮನ್ತ್ರಾನ್ತರಗಳಲ್ಲಿ ಹೇಳಿದ ಕ್ರಮವೇ ಇಲ್ಲಿಯೂ ಅನುಷ್ಠೇಯವೆಂದು ತಿಳಿಸುವದಕ್ಕಾಗಿ ಆ ಪ್ರಮಾಣಗಳನ್ನೇ ಉದಾಹರಿಸುತ್ತಾರೆ.

**ಇದಂ**–ಈ “ತದ್ವಿಷ್ಣೋಃ ಪರಮಂ ಪದಂ” ಎಂಬ ಮನ್ತ್ರವನ್ನು **ಮನ್ತ್ರರಾಜಂ**-ಮನ್ತ್ರಶ್ರೇಷ್ಠವನ್ನಾಗಿ, **ಗುರುವನ್ದನಪೂರ್ವಕಮ್**–ತುಂಬಾ ಮಾಹಾತ್ಮ್ಯವುಳ್ಳ ಗುರುವನ್ನು ಆಶ್ರಯಿಸಿ ನಮಸ್ಕಾರಪೂರ್ವಕವಾಗಿ, **ವಿದ್ಯಾತ್** - ಆತನಿಂದ ಅದರ ಮಾಹಾತ್ಮ್ಯವನ್ನು ತಿಳಿಯತಕ್ಕದ್ದು. **ಗುರುರೇವ ಪರಂಬ್ರಹ್ಮ**-ಗುರುವೇ ಪರಬ್ರಹ್ಮನಿಗೆ ಸಮಾನನು. ಅಥವಾ ಪರಬ್ರಹ್ಮನಲ್ಲಿರುವ ಹತ್ತು ಗುಣಗಳೂ ಒಳ್ಳೇ ಸದ್ಗುರುವಿನಲ್ಲೂ ಉಂಟೆಂದು ಮಧುರಕವಿಯಾಳ್ವಾರರು ಉಪದೇಶಿಸಿರುವದರಿಂದಲೂ ಅದನ್ನೇ ಶ್ರೀ ದೇಶಿಕರವರು “ಇನ್ಬತ್ತಿಲ್” ಎಂಬ ಪಾಶುರದಲ್ಲೂ “ಅಜ್ಞಾನಧ್ವಾಂತರೋಧಾತ್” ಎಂಬ ಶ್ಲೋಕದಲ್ಲೂ ಹೇಳಿರುವದರಿಂದಲೂ, **ಗುರುರೇವಪರಂಬ್ರಹ್ಮ**ವೆಂದು ಹೇಳಲ್ಪಟ್ಟಿತು. ಗುರುಪರಂಪರಾಸಾರದ ೪೦ ರಿಂದ ೪೭ ಪುಟಗಳನ್ನು ಪರಾಂಬರಿಸಿ. ಆದುದರಿಂದಲೇ ಶ್ರುತಿಯೂ **ಆಚಾರ್ಯದೇವೋಭವ** ಎಂದು ಹೇಳಿತು. **ಗುರುರೇವ ಪರಾಗತಿಃ** - ಈ ಮನ್ತ್ರದ ಮಾಹಾತ್ಮ್ಯವನ್ನು ಪದೇಶಿಸಿ, ಉಪಾಯಾನುಷ್ಠಾನವನ್ನು ಮಾಡುವ ರೀತಿಯನ್ನು ಬೋಧಿಸಿ,

---

(೧) ಸಾತ್ಯಕಿ ತನ್ತ್ರಮ್.

**ಪರಾಯಣಮ್ । ಗುರುರೇವ ಪರಃಕಾಮೋ ಗುರುರೇವ ಪರಂಧನಮ್ ।**
**ಯಸ್ಮಾತ್ತದುಪದೇಷ್ಟಾಸೌ ತಸ್ಮಾದ್ಗುರುತರೋ ಗುರುಃ । ನಾನುಕೂಲ್ಯಂ**
**ನನಕ್ಷತ್ರಂ ನತೀರ್ಥಾದಿ ನಿಷೇವಣಮ್ । ನಪುನ (ನಪುರ) ಶ್ಚರಣಂ ನಿತ್ಯಂ**

---

ಮೋಕ್ಷವನ್ನು ಹೊಂದುವಹಾಗೆ ಮಾಡುವದರಿಂದ **ಪರಾಗತಿಯು** ಗುರುವೇ ಶ್ರೇಷ್ಠವಾದ ಸಾಧನವು. **ಗುರುರೇವಪರಾವಿದ್ಯಾ** - ಬ್ರಹ್ಮವಿದ್ಯೆಯು **ಉಪಾ ಯಾನುಷ್ಠಾನ**ಕ್ರಮವನ್ನು ಬೋಧಿಸಿ ಹೇಗೆ ರಕ್ಷಿಸುತ್ತದೋ, ಹಾಗೆಯೇ ಬ್ರಹ್ಮ ವಿದ್ಯೆಯ ಸ್ಥಾನದಲ್ಲಿ **ಈ** ಮನ್ತ್ರಾನುಷ್ಠಾನವೆಂದು ಉಪದೇಶಿಸಿ, ಬ್ರಹ್ಮವಿದ್ಯಾ ಫಲವನ್ನು ಈ ಮನ್ತ್ರದ ಮೂಲಕ ಹೊಂದುವಹಾಗೆ ಮಾಡುವದರಿಂದ, **ಗುರುರೇವ ಪರಾವಿದ್ಯಾ. ಗುರುರೇವಪರಾಯಣಮ್** - ಗುರುವೇ ಸಿದ್ಧೋಪಾಯನಾದ ಪರ ಮಾತ್ಮನು. ಆತನೇ **ಮಾರ್ಗವನ್ನು** ತೋರಿಸಿ **ಸಾಧ್ಯೋಪಾಯ**ವಾದ ಶರಣಾ **ಗತಿಯನ್ನು** ಅನುಷ್ಠಿಸುವಹಾಗೆ **ಮಾಡುವವನು ;** ಅದು ಈಗ ಈ ಗುರುವಿನ ಮೂಲಕ ನಡೆಯುವದರಿಂದ ಗುರುವೇ ಶ್ರೇಷ್ಠವಾದ ಸಿದ್ಧೋಪಾಯನು. **ಗುರು ರೇವಪರಃಕಾಮಃ**-ಗುರುವೇ ಶ್ರೇಷ್ಠವಾದ ಪುರುಷಾರ್ಥವು. ಆತನ **ಕೃಪೆಯಿಂದ** ಅದು **ಫಲಿ**ಸುವದರಿಂದ ಆತನೇ ಪರಮಪುರುಷಾರ್ಥವು ಎಂದರೆ ಮೋಕ್ಷದಾಯಕ **ನೆಂ**ಬರ್ಥವು. **ಗುರುರೇವ ಪರಂಧನಮ್** - ಪ್ರಪನ್ನನಿಗೆ ಐಹಿಕಧನವು **ಬೇಕಾ** ಗಿಲ್ಲವಾದುದರಿಂದ ಧನರೂಪ ಸಂಪತ್ತು **ಆ**ತನಿಗೆ ಬೇಕಾದುದು, ಜ್ಞಾನಭಕ್ತ್ಯಾದಿ ಸಂಪತ್ತು ; ಅದು ಗುರುಮೂಲಕ ಲಭ್ಯವಾಗತಕ್ಕದ್ದಾದುದರಿಂದ, **ಪರಂಧನಮ್**- ಶ್ರೇಷ್ಠವಾದ ಜ್ಞಾನಭಕ್ತಿರೂಪ ಸಂಪತ್ತು ಎಂಬ ಅರ್ಥ**ವು.** ಈ ಗೃಹಾರಾಮ ಕ್ಷೇತ್ರ**ವಸು ಮೊ**ದಲಾದವೆಲ್ಲಾ ಆತನಿಗೆ ನಿಕೃಷ್ಟವಾದ ಧನವು, ಜ್ಞಾನಸಂಪತ್ತೇ ಆತನಿಗೆ ಶ್ರೇಷ್ಠವಾದ ಧನವು, ಅದನ್ನು ಕೊಡತಕ್ಕವನು ಗುರುವಾದುದರಿಂದ ಗುರು **ರೇವಪರಂಧನಂ** ಎಂದು ಹೇಳಲ್ಪಟ್ಟಿತು. **ಯಸ್ಮಾತ್** - ಯಾವ ಕಾರಣದಿಂದ, **ಅಸೌ** - ಈ ಗುರುವು. **ತದುಪದೇಷ್ಟಾ** - ಅಂತಹ ಅನೋಘವಾದ ಮೋಕ್ಷಪ್ರಾಪಕ ವಾದ ಮನ್ತ್ರವನ್ನು ಉಪದೇಶಿಸುವವನಾದನೋ, **ತಸ್ಮಾತ್** – ಆ **ಕಾರಣದಿಂದ, ಗುರುಃ** - ಇಂತಹ ಗುರುವು, **ಗುರುತರಃ**-ಪೂಜ್ಯರಲ್ಲಿ ವಿಶೇಷ ಪೂಜ್ಯನು. **ಹಿ**- ಯಾವ ಕಾರಣದಿಂದ, **ಅಯಂ** - ಈ "**ತದ್ವಿಷ್ಣೋಃ**" ಎಂಬ ಮನ್ತ್ರವು, **ನಾನು ಕೂಲ್ಯಮಪೇಕ್ಷತೇ** - ತಿಥಿ, ವಾರ, ಸುದಿನ ಮೊದಲಾದ **ಆ**ನುಕೂಲ್ಯವನ್ನೂ ಅಪೇಕ್ಷಿಸುವದಿಲ್ಲವೋ, **ನನಕ್ಷತ್ರಂ**-ಶುಭನಕ್ಷತ್ರವಿರುವ ದಿನವನ್ನೂ ಅಪೇಕ್ಷಿಸುವ ದಿಲ್ಲ**ವೋ,ನತೀರ್ಥಾದಿ ನಿಷೇವಣಮ್** - ಒಳ್ಳೆ ಪುಣ್ಯತೀರ್ಥದಲ್ಲಿ ಸ್ನಾನವನ್ನಾಗಲಿ ಅಪೇಕ್ಷಿಸುವದಿಲ್ಲವೋ, **ನಪುನಶ್ಚರಣಂ** – ಮನ್ತ್ರಸಿದ್ಧಿಗಾಗಿ ಯಾವುದನ್ನಾಗಲಿ ಪುನಃಪುನಃ ಪಠನವನ್ನಾಗಲಿ ಅಪೇಕ್ಷಿಸುವದಿಲ್ಲವೋ, ಹಾಗೆಯೇ **ನಿತ್ಯಂ ಜಪಂ ವಾಪೇಕ್ಷತೇ**-ಪ್ರತಿನಿತ್ಯದಲ್ಲೂ ಯಾವುದರ ಜಪವನ್ನಾಗಲಿ ಅಪೇಕ್ಷಿಸುವದಿಲ್ಲವೋ;

**ಜಪಂ ನಾಪೇಕ್ಷತೇಽಹ್ಯಯಮ್ । ನಮಸ್ಕೃತ್ಯ ಗುರುಂ ದೀರ್ಘಪ್ರಣಾಮೈಸ್ತ್ರಿಭಿರಾದಿತಃ । ತತ್ಪಾದೌಗೃಹ್ಯ ಮೂರ್ಧ್ನಿಸ್ವೇ ನಿಧಾಯ ವಿನಯಾನ್ವಿತಃ । ಗೃಹ್ಣೀಯಾನ್ಮಂತ್ರರಾಜಾನಂ ನಿಧಿಕಾಂಕ್ಷೀವ ನಿರ್ಧನಃ । ಲಬ್ಧ್ವೈವಂ ಮಂತ್ರ**

---

ಇದರಿಂದ ಋಷ್ಯಾದಿಗಳ ಸಂಬಂಧವನ್ನೂ ಮನ್ತ್ರಕ್ಕೆ ಹೇಳಬೇಕಾದುದಿಲ್ಲವೆಂದು ಉಪದೇಶಿಸಲ್ಪಟ್ಟಿತು ಮುಂದೆ ಮನ್ತ್ರಗ್ರಹಣ ಕ್ರಮವು ಹೇಳಲ್ಪಡುತ್ತದೆ. ದೇಹವು ಅನಿತ್ಯವಾಗಿ ಯಾವಾಗ ಇಂತಹ ಶ್ರೇಷ್ಠನಾದ ಗುರುವನ್ನು ಆಶ್ರಯಿಸಬೇಕೆಂಬ ಕುತೂಹಲವುಂಟಾಯಿತೋ, ಒಡನೆಯೇ ದೇಶಕಾಲಾದಿಗಳ ನಿಬಂಧನವೇನೂ ಇಲ್ಲದೆ ಗುರುವನ್ನು ಆಶ್ರಯಿಸತಕ್ಕದ್ದೆಂಬ ಭಾವವು ತೋರಿಬರುತ್ತದೆ. ಏಕೆಂದರೆ ದೇಹವು ಅನಿತ್ಯವಾಗಿಯೂ, ಸದ್ಗುರುವು ದೊರೆಕುವದು ದುರ್ಲಭವಾಗಿಯೂ ಇರುವದರಿಂದ ಮುಮುಕ್ಷುವು ದೊರತಾಗಲೇ ಒಡನೇ ಸದ್ಗುರುವನ್ನು ಕುರಿತು ಪ್ರಾರ್ಥಿಸತಕ್ಕದ್ದೆರಿಬುದು ತಿಳಿಸಿದಂತಾಯಿತು. ಈ ವಿಷಯವು ಶ್ರೀ ಯತಿವರ್ಯರವರ ಪ್ರವೃತ್ತಿಯಿಂದ ವ್ಯಕ್ತವು. ಮಧುರಾಂತಕದಲ್ಲಿ ಶ್ರೀ ಕಾಂಚೀಪೂರ್ಣರ ಮತ್ತು ವರದರಾಜರ ಆಜ್ಞಾನುಸಾರ ಆಶ್ರಯಿಸಬೇಕೆಂದಿದ್ದ ಪೆರಿಯನಂಬಿಗಳು ಯಾದೃಚ್ಛಿಕವಾಗಿದೊರೆತುದರಿಂದ ಮಂತ್ರಾರ್ಥಗಳ ಉಪದೇಶವನ್ನು, ಒಡನೆ ಅಲ್ಲಿಯೇ, ಶ್ರೀರಂಗಕ್ಕಾಗಲಿ, ಕಾಂಚೀಪುರಕ್ಕಾಗಲಿ, ಹೋಗಲು ಸಮ್ಮತಿಸದೆ, ಹೊಂದಿದರೆಂಬ ಇತಿಹಾಸವನ್ನು ಇದಕ್ಕೆ ನಿದರ್ಶನವಾಗಿ ಭಾವಿಸಬಹುದು. ಹಾಗೆಯೇ ಶರಣಾಗತ್ಯನುಷ್ಠಾನವೂ ದೇಶಕಾಲ ತಿಥಿವಾರ ನಕ್ಷತ್ರಾದಿಗಳ ಪ್ರಾಶಸ್ತ್ಯವನ್ನು ಅಪೇಕ್ಷಿಸುವದಿಲ್ಲವು ವಿಭೀಷಣನು ಶ್ರೀರಾಮ ಸನ್ನಿಧಿಗೆ ಹೋಗಿ ಶರಣಾಗತಿಯನ್ನನುಷ್ಠಿಸಲು, ತಿಥಿ ವಾರ ನಕ್ಷತ್ರಾದಿಗಳ ಶುದ್ಧತೆಯನ್ನು ವಿಮರ್ಶಿಸಿ. ಪ್ರಯಾಣಮಾಡಲಿಲ್ಲವು. ಯಾವಾಗ ರಾವಣನು "**ತ್ವಾಂತು ಧಿಕ್ಕುಲಪಾಂಸನಮ್**" ಎಂದು ಸಭೆಯಲ್ಲಿ ನಿಂದಿಸಿದನೋ, ಆ ಕ್ಷಣದಲ್ಲೇ, ಇಂತಹ ದುರಾತ್ಮನ ಸಹವಾಸವು ತನಗೆ ಸರಿಯಲ್ಲವೆಂದು ತಿಳಿದು, ಪ್ರಯಾಣಮಾಡಿದನೆಂದು ಹೇಳಲ್ಪಟ್ಟಿರುತ್ತದೆ. **ಆದಿತಃ** ಆದಿಯಲ್ಲಿ ಎಂದರೆ ಮೊದಲು, **ಗುರುಂ**-ಇಂತಹ ಗುರುವನ್ನು, **ತ್ರಿಭಿಃ** - ಮೂರಾದ **ದೀರ್ಘಪ್ರಣಾಮೈಃ** - ಸಾಷ್ಟಾಂಗಗಳಿಂದ ಕೂಡಿ ದೀರ್ಘಕಾಲ ಮಾಡುವ ಪ್ರಣಾಮಗಳಿಂದ, **ನಮಸ್ಕೃತ್ಯ** - ನಮಸ್ಕಾರವನ್ನು ಮಾಡಿ, **ತತ್ಪಾದೌಗೃಹ್ಯ** - ಆ ಗುರುಗಳ ಪಾದಗಳನ್ನು ತೆಗದುಕೊಂಡು, **ಸ್ವೇಮೂರ್ಧ್ನಿನಿಧಾಯ** - ತನ್ನ ಶಿರಸ್ಸಿನಲ್ಲಿಟ್ಟುಕೊಂಡು, **ವಿನಯಾನ್ವಿತಃ** - ತುಂಬಾ ವಿನಯದಿಂದ ಕೂಡಿದವನಾಗಿ **ನಿರ್ಧನಃ** – ಧನಹೀನನು, **ನಿಧಿಕಾಂಕ್ಷೀವ** - ನಿಧಿಯನ್ನು ಅಪೇಕ್ಷಿಸುವನಹಾಗೆ ಎಂದರೆ ಆದರವುಳ್ಳನಾಗಿಯೂ, ಆತುರನಾಗಿಯೂ, ಶ್ರದ್ಧಾವುಳ್ಳವನಾಗಿಯೂ ಹೇಗೆ ಇರುವನೋ, ಹಾಗೆ ಎಂಬ ಭಾವವು, **ನಿರ್ಧನಃ** ಎಂಬುದರಿಂದ, ಕಾರ್ಪಣ್ಯವೂ, **ನಿಧಿಕಾಂಕ್ಷೀವ** - ಎಂಬುದರಿಂದ ಮಹಾ ವಿಶ್ವಾಸವೂ ತೋರಿಬರುತ್ತದೆ ; **ಮನ್ತ್ರ**

**ರಾಜಾನಂ ಮಾಂಗಚ್ಛೇಚ್ಛರಣಂ ನರಃ । ಅನೇನೈವತು ಮನ್ತ್ರೇಣ ಸ್ವಾತ್ಮಾನಂ ಮಯಿ ನಿಕ್ಷಿಪೇತ್ । ಮಯಿನಿಕ್ಷಿಪ್ತಕರ್ತ್ತವ್ಯಃ ಕೃತಕೃತ್ಯೋಭವಿಷ್ಯತಿ"—ಎನ್ರು ಪ್ರಪತ್ತಿ ಮನ್ತ್ರಾನ್ತರತ್ತಿಲ್ ಚೊನ್ನ ಗುರೂಪಸತ್ತ್ಯಾದಿಗಳ್ ಇಙ್ಗುಮ್ ವರಪ್ರಾಪ್ತಙ್ಗಳ್.**

---

**ರಾಜಾನಂ** - ಈ **"ತದ್ವಿಷ್ಣೋಃ ಪರಮಂ ಪದಂ"** ಎಂಬ ಮನ್ತ್ರಶ್ರೇಷ್ಠವನ್ನು **ಗೃಹ್ಣೀಯಾತ್** – ಗುರುವು ಹೇಳಿಕೊಟ್ಟು ಉಪದೇಶಿಸಿದುದನ್ನು ಸ್ವೀಕರಿಸತಕ್ಕದ್ದೆಂಬ ತಾತ್ಪರ್ಯವು. ಹೀಗೆ ಹೇಳಿರುವದರಿಂದ ಶೇಷತ್ವರೂಪಸಂಬಂಧಜ್ಞಾನವೇ ಪ್ರಪದನವೆಂದು ಹೇಳುವ ಕೆಲವರ ಅಭಿಪ್ರಾಯವು ನಿರಾಕರಿಸಲ್ಪಟ್ಟಿತು. **ಏವಂ** - ಈ ಮೇಲೆ ಹೇಳಿದ ರೀತಿಯಲ್ಲಿ, **ಮನ್ತ್ರರಾಜಾನಂ** – ಈ ಮನ್ತ್ರ ಶ್ರೇಷ್ಠವನ್ನು, **ಲಬ್ಧ್ವಾ** - ಸದ್ಗುರುವಿನಿಂದ ಹೊಂದಿದವನಾಗಿ, **ನರಃ** - ಐಹಿಕದಲ್ಲಿ **ನರಿ** ಮತೀ ಎಂಬ ವ್ಯುತ್ಪತ್ತಿಯಿಂದ ವೈರಾಗ್ಯಯುಕ್ತನಾದ ಮುಮುಕ್ಷುವು **ಮಾಂ** - ನನ್ನನ್ನು, **ಶರಣಂಗಚ್ಛೇತ್** - ಶರಣವಾಗಿ ಹೊಂದತಕ್ಕದ್ದು. ಶರಣಾಗತಿಯನ್ನನುಷ್ಠಿಸತಕ್ಕದ್ದು ಎಂಬ ತಾತ್ಪರ್ಯವು. ಹಾಗೆಂದರೇನೆಂಬುದು ಉಪದೇಶಿಸಲ್ಪಡುತ್ತದೆ. **ಅನೇನೈವತು ಮನ್ತ್ರೇಣ** - ಮೇಲೆ ಹೇಳಿದ **"ತದ್ವಿಷ್ಣೋಃ"** ಎಂಬ ಮನ್ತ್ರದಿಂದ, ಎಂದರೆ ಮನ್ತ್ರವನ್ನು ಹೇಳುತ್ತಾ, **ಸ್ವಾತ್ಮಾನಂ** - ತನ್ನ ಆತ್ಮಾವನ್ನು, **ಮಯಿ** - ಭಗವಂತನಾದ ನನ್ನಲ್ಲಿ, **ನಿಕ್ಷಿಪೇತ್** - ಇಡತಕ್ಕದ್ದು. ಆತ್ಮನಿಕ್ಷೇಪವನ್ನು ಮಾಡತಕ್ಕದ್ದು. ಹಾಗೆಂದರೇನು ಎಂದರೆ, ಈ ಆತ್ಮಾ ನಿನ್ನ ವಸ್ತುವು; ಅದನ್ನು ರಕ್ಷಿಸುವ ಶಕ್ತಿಯು ನನಗಿಲ್ಲವು; ಸ್ವಾಮಿಯಾದ ನಿನ್ನಲ್ಲಿ ಅದರ ರಕ್ಷಣೆಯ ಭರವನ್ನೆಲ್ಲಾ ಇಟ್ಟಿರುತ್ತೇನೆಂಬ ಅನುಸಂಧಾನ ಮಾಡಬೇಕೆಂಬ ತಾತ್ಪರ್ಯವು. ಇವು ಭಗವದ್ವಾಕ್ಯಗಳಾದುದರಿಂದ, **ಮಾಂ ಮಯಿ** - ಇತ್ಯಾದಿ ಪ್ರಯೋಗಗಳು. **ಮಯಿ ನಿಕ್ಷಿಪ್ತ ಕರ್ತ್ತವ್ಯಃ** - ನನ್ನಲ್ಲಿ ತನ್ನ ಆತ್ಮಾವನ್ನು ಹೀಗೆ ಸಮರ್ಪಿಸಿದವನು, **ಕೃತಕೃತ್ಯಃ**-ಏನನ್ನು ಮೋಕ್ಷಪ್ರಾಪ್ತಿಗಾಗಿ ಅನುಷ್ಠಿಸತಕ್ಕದ್ದೋ ಅದನ್ನು ಮಾಡಿದವನು, **ಭವಿಷ್ಯತಿ** - ಆಗುವನು; ಎನ್ರು-ಎಂಬದಾಗಿ, **ಪ್ರಪತ್ತಿ ಮನ್ತ್ರಾನ್ತರತ್ತಿಲ್ಚೊನ್ನ** - ಬೇರೆಯಾದ ಶರಣಾಗತಿಯ ಕರಣಮನ್ತ್ರದ ವಿಷಯವಾಗಿ ಹೇಳಿದ ಎಂದರೆ **"ತದ್ವಿಷ್ಣೋಃ ಪರಮಂ ಪದಮ್"** ಎಂಬ ಮನ್ತ್ರವಿಷಯವಾಗಿ ಹೇಳಿದ, **ಗುರೂಪಸತ್ತ್ಯಾದಿಗಳ್** - ಮೇಲೆ **"ಗುರುರೇವ ಪರಂಬ್ರಹ್ಮ"** ವೆಂದಾರಂಭಿಸಿ, **"ನಿಧಿಕಾಂಕ್ಷೀವ ನಿರ್ಧನಃ"** ಎಂದು ಮುಗಿಸಿ ಹೇಳಿರುವದರಲ್ಲಿ ತೋರುವ, ಗುರುವಿನ ಸಾನ್ನಿಧ್ಯವನ್ನು ಹೊಂದಿ, ಆತನನ್ನು ಆಶ್ರಯಿಸೋಣವೇನು ಆತನ ಪಾದವನ್ನು ಶಿರಸ್ಸಿನಲ್ಲಿ ಧರಿಸುವದೇನು, ಕರಣಮನ್ತ್ರದ ಉಪದೇಶವೇನು, ಇವುಗಳು ಆದಿಪದದಿಂದ ಸಙ್ಗ್ರಹೀತಗಳು, **ಇಙ್ಗುಮ್** – ಶರಣಾಗತಿಯ ಕರಣಮನ್ತ್ರವಾದ ಈ ದ್ವಯಮನ್ತ್ರದಲ್ಲೂ ಕೂಡ, **ವರಪ್ರಾಪ್ತಂ** - ಬರತಕ್ಕವುಗಳಾಗಿವೆ

## ದ್ವಯಮನ್ತ್ರಮಾಹಾತ್ಮ್ಯ ಕಥನಮ್

**ಆಸ್ತಿಕನುಕ್ಕು ಇವ್ವನ್ತ್ರಾರ್ಥತ್ತಿನುಡೈಯ ಸಮುದಾಯ ಜ್ಞಾನ ಪೂರ್ವಕಮಾನ ಸಕೃದುಚ್ಚಾರಣಮೇ ಉತ್ತಾರಕ ಮೆನ್ನುಮಿಡಮ್ ಶಾಸ್ತ್ರ ಸಿದ್ಧಮ್,**

---

ಎಂದರೆ, ಆ ಕ್ರಮಗಳೇ ಈ ಸಂದರ್ಭದಲ್ಲೂ ಉಪಾದೇಯಗಳೆಂಬ ಭಾವವು. ಹೀಗೆ ಗುರುಮೂಲಕವಾಗಿ ಉಪಾಯಾನುಷ್ಠಾನವು ನಡೆದರೇ ಅದಕ್ಕೆ ಮಾಹಾತ್ಮ್ಯೆಯೇ ವಿನಾ, ಹಾಗಲ್ಲದಿದ್ದರೆ **"ಯದೃಚ್ಛಯಾ ಶ್ರುತೋ ಮನ್ತ್ರಶ್ಛನ್ನೇ ವಾ ಥ ಛಲೇನ ವಾ । ಪತ್ರೇಕ್ಷಿತೋವಾ ವ್ಯರ್ಥಸ್ಸ್ಯಾತ್ಪ್ರತ್ಯುತಾನರ್ಥದೋ ಭವೇತ್"** ಎಂದೂ **"ನಪ್ರಸೀದತಿ ವೈ ವಿದ್ಯಾ ವಿನಾ ಸದುಪದೇಶತಃ"** ಎಂದೂ ಹೇಳಲ್ಪಟ್ಟಿರುತ್ತದೆ.

ಆದರೆ ಕ್ಷತ್ರಬಂಧು ಪುಂಡರೀಕ ವೃತ್ತಾಂತಗಳಲ್ಲಿ ಮೂಲಮನ್ತ್ರವು ಮೋಕ್ಷ ಸಾಧನವಾಗಿ ಉಪದೇಶಿಸಿರುತ್ತದೆಯಲ್ಲವೇ ? ಈ ದ್ವಯಮನ್ತ್ರವೇ ಕರಣಮನ್ತ್ರ ವಾಗಿ ಮೋಕ್ಷಸಾಧನವೆಂದು ಹೇಳುವದು ಪರಸ್ಪರ ವಿರೋಧವಾಗುವದಿಲ್ಲವೋ ? ಎಂದರೆ ಮೂಲಮನ್ತ್ರದ ಉಪದೇಶವೂ ಅದರ ಅರ್ಥಗ್ರಹಣವೂ ಭಗವಚ್ಛೇಷ ಭೂತನಾದ ತನ್ನ ಸ್ವರೂಪವನ್ನು ತಿಳಿಸುವ ಜ್ಞಾನವು, ಉಪಾಯಾನುಷ್ಠಾನವಾದ ಆತ್ಮಹವಿಸ್ಸಮರ್ಪಣೆಗೆ ಅತ್ಯಾವಶ್ಯಕವಾದುದರಿಂದ, ಹಾಗೆ ಮೂಲಮನ್ತ್ರಕ್ಕೆ ಪ್ರಾಶಸ್ತ್ಯವು. ಇದರಿಂದ ಪರಸ್ಪರ ವಿರೋಧವೇನೂ ಇಲ್ಲವೆಂಬ ಭಾವವು. ಆ ಕ್ಷತ್ರಬಂಧು ಪುಂಡರೀಕರು ಶರಣಾಗತಿಯನ್ನು ಅನುಷ್ಠಿಸದೇನೇ ಮುಕ್ತಿಯನ್ನು ಹೊಂದಿದರು ಎಂಬ ಅಭಿಪ್ರಾಯವಲ್ಲವು ಅವರೂ ಶರಣಾಗತಿಯನ್ನು ಅನುಷ್ಠಿಸಿದರೆಂದು ಅದಕ್ಕಾಗಿ ಒಂದು ಕರಣಮನ್ತ್ರವು ಅವರಿಗೆ ಉಪದಿಷ್ಟವಾಗಬೇಕೆಂದೂ, ಊಹಿಸಬಹುದಾಗಿರುತ್ತದೆ. ಹಾಗೆ ನೋಡಿದರೆ, ಮೂಲಮನ್ತ್ರವು ಅಸಕೃದು ಚ್ಚಾರಣರೂಪವಾಗಿ ಆವಶ್ಯಕವು. ಈ ದ್ವಯಮನ್ತ್ರವಾದರೋ **ಸಕೃದುಚ್ಚಾರ ಸ್ಸಂಸಾರ ವಿಮೋಚನಂ ಭವತಿ"** ಎಂದರೆ ಸದ್ಗುರುವು ಒಂದು ಸಲ ಹೇಳಿಕೊಟ್ಟ ಈ ಮನ್ತ್ರವನ್ನು ಉಚ್ಚರಿಸುವದೇ ಸಂಸಾರಬಂಧ ವಿಮೋಚಕವಾಗುವದು ಎಂದು ಹೇಳಲ್ಪಟ್ಟಿರುತ್ತದೆ. ಇದನ್ನೇ ಮುಂದಿನ ವಾಕ್ಯದಿಂದ ಉಪದೇಶಿಸುತ್ತಾರೆ.—

### ದ್ವಯಮನ್ತ್ರದ ಮಾಹಾತ್ಮ್ಯೆಯ ಉಪಪಾದನೆಯು

ಆಸ್ತಿಕನುಕ್ಕು-ವೇದಪ್ರಾಮಾಣ್ಯದಲ್ಲಿ ವಿಶ್ವಾಸವಿಟ್ಟು ಪರಮಾತ್ಮನೊಬ್ಬನು ಸರ್ವ ಕಾರಣನಾಗಿ ತನಗೆ ರಕ್ಷಕನಾಗಿದ್ದಾನೆಂದೂ, ತಾನು ಆತನಿಗೆ ದಾಸಭೂತನು ಸಂಪೂರ್ಣ ಪರತಂತ್ರನೆಂಬ ಜ್ಞಾನವಿರುವವನಿಗೆ, ಇವ್ವನ್ತ್ರಾರ್ಥತ್ತಿನುಡೈಯ –

ಈ ದ್ವಯಮನ್ತ್ರದ, ಸಮುದಾಯ ಜ್ಞಾನಪೂರ್ವಕಮಾನ - ಮೂಲಮನ್ತ್ರದ ರಹಸ್ಯಾರ್ಥಗಳು ವಿಶೇಷಾರ್ಥಗಳ ಜ್ಞಾನವಿಲ್ಲದಿದ್ದರೂ ಒಟ್ಟಿನಲ್ಲಿ ಮನ್ತ್ರಾಭಿಪ್ರಾಯವೇನೆಂಬ ಜ್ಞಾನಪೂರ್ವಕವಾಗಿ, ಸಕೃದುಚ್ಚಾರಣಮೇ - ಆಚಾರ್ಯರು ಹೇಳಿಕೊಟ್ಟ ಈ ದ್ವಯುವನ್ತ್ರವನ್ನು ಮಹಾವಿಶ್ವಾಸದಿಂದ ಉಚ್ಚರಿಸುವದೇ, ಎಂದರೆ ಆಚಾರ್ಯರು ತನ್ನ ಶಿಷ್ಯನಿಗೆ ಈ ಮನ್ತ್ರವನ್ನು ಹೇಳಿಕೊಟ್ಟು ಅನಂತರ ಶಿಷ್ಯನಿಗಾಗಿ ತಾವು ಶರಣಾಗತಿಯನ್ನು ಮಾಡಿ ಪ್ರಾರ್ಥಿಸೋಣವು ಎಂಬ ಭಾವವು, ಉತ್ತಾರಕಮೆನ್ನುವಿಡಮ್ - ಪರಮಶ್ರೇಯಸ್ಸಿನ ಪ್ರಾಪಕವು ಎಂಬ ಸಂದರ್ಭವು, ಶಾಸ್ತ್ರಸಿದ್ಧಮ್ - "ಸಕೃದುಚ್ಚಾರಸ್ಸಂಸಾರವಿಮೋಚನಂ ಭವತಿ" ಎಂಬಲ್ಲಿ ಹೇಳಿರುವಹಾಗೆ, ಶಾಸ್ತ್ರದಲ್ಲಿ ಸ್ಥಾಪಿತವು. ಇಲ್ಲಿ ಸಕೃದುಚ್ಚಾರಣಮೇ ಉತ್ತಾರಕವೆಂದು ಅವಧಾರಣವಿರುವಾಗ ವ್ಯಾಖ್ಯಾನದಲ್ಲಿ "ಆಚಾರ್ಯರು ಶರಣಾಗತಿಯನ್ನು ಅನುಷ್ಠಿಸಿ ಪ್ರಾರ್ಥಿಸೋಣವೇ" ಎಂದು ಬರೆದಿರುವದು ನ್ಯಾಯವೋ ? ಎಂದರೆ ಮನ್ತ್ರೋಚ್ಚಾರಣೆಯೇ ಕರಣಮನ್ತ್ರವಾಗಿ ಫಲದಾಯಕವು. ಶ್ರೀಮದಾಚಾರ್ಯರ ಪ್ರಾರ್ಥನೆಯು ಪುರುಷಕಾರರೂಪದಲ್ಲಿ ನಿಸ್ಸಂಶಯವಾಗಿ ಫಲಸಿದ್ಧಿಗೆ ಹೇತುಭೂತವಾಗುತ್ತದೆಂದು ತಿಳಿಯತಕ್ಕದ್ದು. ಆದುದರಿಂದಲೇ ಸಾರಾಸ್ವಾದಿನಿಯವರು ತಮ್ಮ ವ್ಯಾಖ್ಯಾನದಲ್ಲಿ "ಸಕೃದುಚ್ಚಾರಣಂ" ಮೋಕ್ಷಸಾಧನಮಾಗಿಲ್ ನಾನ್ಯಃಪನ್ಥಾ ವಿದ್ಯತೇ ಅಯನಾಯ ಇತ್ಯಾದಿಗಳೋಡೆ ವಿರೋಧಮ್ ಪ್ರಸಜ್ಜಿಕ್ಕೈಯಾಲಿದು ಪ್ರಪತ್ತಿದ್ವಾರಾ ಸಾಧನಮೆನ್ನುಕೊಳ್ಳವೇಣುಮ್" ಎಂದು ಬರೆದಿರುತ್ತಾರೆ. ಈತನು ಸಮುದಾಯ ಜ್ಞಾನಾಧಿಕಾರಿಯಾದುದರಿಂದ ಆಚಾರ್ಯರೇ ಶರಣಾಗತಿಯನ್ನು ಅನುಷ್ಠಿಸುತ್ತಾರೆ. ಆದರೆ ಮನ್ತ್ರಾರ್ಥದ ವಿಶೇಷಜ್ಞಾನವಿರುವನಿಗಾದರೋ ಈ ಗುರುಮುಖೇನ ಉಂಟಾದ ಸಕೃದುಚ್ಚಾರಣವೇ ಸಂಪೂರ್ಣವಾದ ಉಪಾಯಾನುಷ್ಠಾನಕ್ಕೆ ಹೇತುವಾಗಿ ಉತ್ತಾರಕವಾಗುವದರಲ್ಲಿ ಸಂದೇಹವಿಲ್ಲವು. ಆ ಕಾರಣದಿಂದಲಾದರೂ ಅವಧಾರಣವೆಂದು ಭಾವಿಸಬಹುದು. ಆಸ್ತಿಕನಿಗೆ ಸಂಪೂರ್ಣವಾಗಿ ಮನ್ತ್ರಾರ್ಥಜ್ಞಾನವಿಲ್ಲದಿದ್ದರೂ ಸಮುದಾಯಜ್ಞಾನವಾದರೂ ಇರತಕ್ಕದ್ದು ಸ್ವರೂಪವೆಂಬುದು ಇಲ್ಲಿ ವ್ಯಕ್ತವು. ಮನ್ತ್ರೋಪದೇಶಕಾಲದಲ್ಲೇ ಈ ದ್ವಯಮನ್ತ್ರೋಚ್ಚಾರಣೆಯಾಗುತ್ತದೆಯಲ್ಲವೇ ? ಪುನಃ ಭರಸಮರ್ಪಣೆಯ ಕಾಲದಲ್ಲಿ ಗುರುವಿನ ಮೂಲಕವಾಗಿ ಉಚ್ಚಾರಣೆಯು ಆವಶ್ಯಕವೋ ? ಹಾಗೆ ಆವಶ್ಯಕವೆಂದು ಭಾವಿಸಿದರೆ "ಸಕೃಜ್ಜಪ್ತೇನ ಮನ್ತ್ರೇಣ ಕೃತಕೃತ್ಯಸ್ಸುಖೀಭವೇತ್ । ದ್ವಯೇನ ಪ್ರಾಪ್ನುಯಾತ್ಸತ್ರ ತದ್ವಿಷ್ಣೋಃ ಪರಮಂ ಪದಮ್" ಎಂದರೆ ಒಂದು ಸಲ ಜಪಿಸಿದ ಈ ಮನ್ತ್ರದಿಂದ ಮೋಕ್ಷಾರ್ಥಿಯು ಪರಮಪದವನ್ನು ಹೊಂದುವನು ಆತನು ಕೃತಕೃತ್ಯನು. ನಿರತಿಶಯಾನಂದವನ್ನು ಹೊಂದುವನು. ದ್ವಯಮನ್ತ್ರದಿಂದ ದಿವ್ಯವೈಕುಂಠವನ್ನು ಹೊಂದುವನು. ಎಂದು ಭಗವಚ್ಛಾಸ್ತ್ರಸಿದ್ಧವು ಎಂಬ ಭಾವವು. ಹಾಗಾದರೆ

ಅಂತಹ ಮಂತ್ರೋಪದೇಶಕ್ರಮವು ನಿರರ್ಥಕವಲ್ಲವೋ ? ಎಂದರೆ ಈತನಿಗೆ ಸಂಸ್ಕಾರ ಉಂಟಾಗಿ, ಅದರಿಂದ ದೇಹ ಮನಸ್ಸುಗಳ ಪಾರಿಶುದ್ಧ್ಯವುಂಟಾಗಿ ಆ ಮಹಿಮೆಯ ಬಲದಿಂದ, ಶರಣಾಗತಿಯನ್ನು ಅನುಷ್ಠಿಸಬೇಕೆಂಬ ವಿವೇಕಜ್ಞಾನೋತ್ಪತ್ತಿಗೆ ಸಾಧಕವಾಗಬಹುದು. ಕರಣಮಂತ್ರವಾಗಿ ಸಾಧನವಾಗಬೇಕಾದರೆ ಮಂತ್ರಾರ್ಥಸಮುದಾಯಜ್ಞಾನವು ಅವಶ್ಯಕವು. ಇದಕ್ಕೆ ಪ್ರಮಾಣವಾಗಿ **ಇದಂ ಶರಣಮಜ್ಞಾನಾಂ ಇದಮೇವ ವಿಜಾನತಾಂ। ಇದಂ ತಿತೀರ್ಷತಾಂ ಪಾರಮಿದಮಾನನ್ತ್ಯಮಿಚ್ಛತಾಮ್** (ಲ.ತಂ.೧೭-೧೦೦) ಎಂಬ ಪ್ರಮಾಣದಲ್ಲಿ ಉಪಪಾದಿತವು. ಇಲ್ಲಿ ಪ್ರಪದನದಲ್ಲಿ ಅಧಿಕಾರವು ಯಾರು ಯಾರಿಗೆ ಎಂಬುದು ಮೊದಲು ಹೇಳಲ್ಪಡುತ್ತದೆ. **ಇದಂ ಶರಣಮಜ್ಞಾನಾಂ** - ಕರ್ಮಯೋಗಾದಿ ಪರಂಪರೆಯನ್ನು ಅನುಷ್ಠಿಸಲು ಬೇಕಾದ ಜ್ಞಾನವಿಲ್ಲದವರಿಗೆ ಈ ಭರನ್ಯಾಸವು ಉಪಾಯವು. ಅಥವಾ ಪ್ರಪತ್ತಿಯ ಅತಿ ರಹಸ್ಯ ವಿಷಯಜ್ಞಾನವಿಲ್ಲದವರಿಗೂ ಉಪಾಯವು, **ಅಜ್ಞಾನಾಂ** - ಎಂದರೆ ಏನೂ ತಿಳಿಯದೆ ಪಶುಗಳಹಾಗೆ ಇರುವವರು ಎಂಬರ್ಥವಲ್ಲವು. ಆದುದರಿಂದ ಸಮುದಾಯಜ್ಞಾನವಿರುವವನು ಪ್ರಪತ್ತ್ಯನುಷ್ಠಾನಕ್ಕೆ ಅಧಿಕಾರಿಯು ಎಂಬ ಭಾವವು. ಪತ್ತ್ಯ **ಇದಮೇವ ವಿಜಾನತಾಂ** ಭಕ್ತಿಯೋಗಜ್ಞಾನವನ್ನು ಹೊಂದಿದ್ದರೂ ಅದಕ್ಕೆ ಅಶಕ್ತನಾದವನಿಗೇ ಇದೇ ಉಪಾಯವು. ಅಥವಾ ಪ್ರಪತ್ತಿಗೆ ಉಪಯುಕ್ತವಾದ ಶರಣ್ಯನ ಕಲ್ಯಾಣಗುಣಗಳ ಜ್ಞಾನವಿರುವವನೂ ಅಧಿಕಾರಿಯು. **ಇದಂ ತಿತೀರ್ಷತಾಂ ಪಾರಮಿಚ್ಛತಾಂ** - ಭಕ್ತಿಯೋಗಕ್ಕೆ ಬೇಕಾದ ಜ್ಞಾನಶಕ್ತಿಗಳಿದ್ದರೂ, ಅನಿಷ್ಟನಿವೃತ್ತಿ ಇಷ್ಟಪ್ರಾಪ್ತಿಗಳಲ್ಲಿ ತ್ವರಾತಿಶಯವನ್ನುಂಟುಮಾಡತಕ್ಕವರಿಗೂ ಇದು ಉಪಾಯವು; **ಇದಮಾನನ್ತ್ಯಮಿಚ್ಛತಾಂ** - ಸ್ವರೂಪಪ್ರಾಪ್ತವಾದ ಪರಿಪೂರ್ಣಬ್ರಹ್ಮಾನುಭವವನ್ನು ಹೊಂದಿಯಲ್ಲದೆ ತನಗೆ ಆತ್ಮಧಾರಣೆಯೇ ಇಲ್ಲವೆಂದು ಭಾವಿಸುವವನು ಸಹಾ ಈ ಪ್ರಪತ್ತಿಗೆ ಅಧಿಕಾರಿಯು ಎಂಬ ಭಾವವು. ಈ ಶ್ಲೋಕಾರ್ಥಗಳನ್ನೆಲ್ಲಾ ಒಳಗೊಂಡು ಶ್ರೀ ಪರಾಶರ ಭಟ್ಟಾರ್ಯರೂ "**ಅವಿದ್ಯಾತೋ ದೇವೇ ಪರಿಭೃಢತಯಾ ವಾ ವಿದಿತಯಾ ಸ್ವಭಕ್ತೇ ಭೂಮ್ನಾ ವಾ ಜಗತಿ** ಗತಿ ಮನ್ಯಾ ಮವಿದುಷಾಂ" ಎಂಬ ಶ್ಲೋಕದಲ್ಲಿ ಉಪಪಾದಿಸಿರುತ್ತಾರೆ. ಇದನ್ನು ಮುಂದೆ ಚರಮಶ್ಲೋಕಾಧಿಕಾರದಲ್ಲಿ ಪರಾಂಬರಿಸತಕ್ಕದ್ದು, ಆದರೆ ಕರಣಮಂತ್ರೋಚ್ಚಾರಣೆಯ ಅವಶ್ಯಕತೆಯು ಇಲ್ಲದೆ ಶರಣಾಗತಿಯನ್ನು ಆಚಾರ್ಯರೇ ದೂರದಲ್ಲಿರುವ ತನ್ನ ಶಿಷ್ಯನಿಗಾಗಿಯೂ ಜ್ಞಾನಶೂನ್ಯವಾದ ಮಗುವಿಗೂ, ಜ್ಞಾನವಿಲ್ಲದೆ ಮರಣಾವಸ್ಥೆಯಲ್ಲಿರುವವರಿಗೂ ಅನುಷ್ಠಿಸಿರುವದನ್ನು ಕೇಳಿರುವೆವು. ಇದೇನು ಸತ್ಸಂಪ್ರದಾಯವೇ ಹೇಗೆ ? ಇದು ಫಲಕಾರಿಯೋ ಹೇಗೆ ? ಎಂದು ಕೇಳಿದರೆ, ಇದು ಆಚಾರ್ಯನಿಷ್ಠೆ ಎಂದು ಹೇಳಿಸಿಕೊಳ್ಳುವ ಆಚಾರ್ಯರೇ ತಮ್ಮ ಶಿಷ್ಯರಿಗಾಗಿ ಅನುಷ್ಠಿಸುವ ಪ್ರಕ್ರಿಯೆಯು. ಇದು ಈ ಸಂದರ್ಭದಲ್ಲಿ ಹೇಳಲ್ಪಡಲಿಲ್ಲವು. ಇದು ಉಕ್ತನಿಷ್ಠೆಯ ಪ್ರಕರಣವು. ಇಲ್ಲಿ

ಇಮ್ಮನ್ತ್ರಪ್ರಭಾವತ್ತೈ (೧) "ಯೇನಕೇನಾಪಿ ಪ್ರಕಾರೇಣ ದ್ವಯ ವಕ್ತಾತ್ವಮ್" ಎನ್ರು ಮನ್ತ್ರಾನ್ತರಙ್ಗಳಿಲ್ಕಾಟ್ಟಿಲ್ ವ್ಯಾವೃತ್ತಿತೋತ್ತ ಅರುಳಿಚ್ಚೆಯ್ದಾರ್.

---

ಹೇಳಲ್ಪಟ್ಟಿರುವದು ಈ ಮೇಲಿನ ವಾಕ್ಯದಿಂದ ಇತರ ಮನ್ತ್ರಗಳಿಗೆ ಈ ಶಕ್ತಿ ಇಲ್ಲದುದರಿಂದ ಅವೆಲ್ಲವೂ ವ್ಯಾವೃತ್ತವೆಂದು ಭಾವಿಸತಕ್ಕದ್ದು. ಇದು ಮುಂದಿನ ವಾಕ್ಯದಿಂದ ಹೇಳಲ್ಪಡುತ್ತದೆ.

ಶ್ರೀ ಭಾಷ್ಯಕಾರರು ಶರಣಾಗತಿಗದ್ಯದಲ್ಲಿ "ದ್ವಯಮರ್ಥಾನುಸಂಧಾನೇನ ಸಹ ಸದೈವಂ ವಕ್ತಾ" ಎಂದು ದ್ವಯದ ಅರ್ಥಾನುಸಂಧಾನಮಾಡಬೇಕೆಂದು ಹೇಳಿರುವದೂ, ಶ್ರೀ ದೇಶಿಕವರ್ಯರು ಸಾರನಿಷ್ಕರ್ಷಾಧಿಕಾರದಲ್ಲಿ "ಸಕಲಂಕಾಲಂ ದ್ವಯೇನ ಕ್ಷಿಪೇತ್" ಎಂದೂ ಹೇಳಿರುವದೂ, ಈ ಸಕೃದುಚ್ಚಾರಣ ವಿಧಿಗೆ ವಿರೋಧವೋ ಎಂದರೆ ವಿರೋಧವೆಂದಿಗೂ ಇಲ್ಲವು. ಭಗನ್ನ್ಯಾಸಾನುಷ್ಠಾನಕಾಲದಲ್ಲಿ ಈ ದ್ವಯವು ಸಕೃತ್ತೇ ಉಚ್ಚರಿಸಲ್ಪಡತಕ್ಕದ್ದು. ಶ್ರೀ ಯತಿವರರ ಶ್ರೀ ದೇಶಿಕರವರ ದಿವ್ಯಸೂಕ್ತಿಗಳಲ್ಲಿ ಹೇಳಿರುವದು ಕೃತಕೃತ್ಯನಿಗೆ ಆವಶ್ಯಕವಾಗಿ ಬೇಕಾಗಿ ಉತ್ತರ ಕೃತ್ಯಕ್ಕೆ ಸೇರಿದ ದ್ವಯಾರ್ಥಾನುಸಂಧಾನವು ಎಂದು ಭಾವಿಸತಕ್ಕದ್ದು.

ಹೀಗೆ ಶಾಸ್ತ್ರಸಿದ್ಧವಾದುದರಿಂದಲೇ ಶ್ರೀ ಯತಿವರ್ಯರು ಈ ದ್ವಯಮನ್ತ್ರವು ಇತರ ಮನ್ತ್ರಗಳಿಗಿಂತ ಹೆಚ್ಚು ಮಾಹಾತ್ಮ್ಯವುಳ್ಳದೆಂದು ಹೇಳಿರುತ್ತಾರೆಂದು ಅವರ ದಿವ್ಯ ಸೂಕ್ತಿಯನ್ನು ಉದಾಹರಿಸುತ್ತಾರೆ. ಇಮ್ಮನ್ತ್ರ ಪ್ರಭಾವತ್ತೈ ಈ ದ್ವಯಮನ್ತ್ರದ ಮಾಹಾತ್ಮ್ಯವನ್ನು "ಯೇನಕೇನಾಪಿ" ಎನ್ರು - ಯೇನ ಕೇನಾಪಿ ಎಂಬ ವಾಕ್ಯದ ಮೂಲಕವಾಗಿ, ಮನ್ತ್ರಾನ್ತರಙ್ಗಳಿಲ್ಕಾಟ್ಟಿಲ್ - ಇತರ ಎಲ್ಲಾ ಮನ್ತ್ರಗಳಿಗಿಂತ, ವ್ಯಾವೃತ್ತಿತೋತ್ತ - ವೈಲಕ್ಷಣ್ಯವು ತೋರುವ ಹಾಗೆ, ಅರುಳಿಚ್ಚೆಯ್ದಾರ್ - ಕೃಪಯಾ ಉಪದೇಶಿಸಿರುತ್ತಾರೆ. ಆ ಪೂರಾ ವಾಕ್ಯವು ಹೇಗೆಂದರೆ—"ಯೇನಕೇನಾಪಿ ಪ್ರಕಾರೇಣ ದ್ವಯವಕ್ತಾ ತ್ವಂ ಕೇವಲಂ ಮದೀಯಯಾ ದಯಯಾ . ನಿತ್ಯಕಿಂಕರೋಭವ" ಇದು ಭಗವಂತನ ಪ್ರತ್ಯುತ್ತರವು. ಯೇನಕೇನಾಪಿ ಪ್ರಕಾರೇಣ - ಯಾವುದಾದರೂ ಒಂದು ಪ್ರಕಾರವಾಗಿ, ಇದರಿಂದ ನಿನ್ನ ಜಾತಿಗುಣಾವಸ್ಥೆಗಳು ಯಾವುದನ್ನೂ ನಾನು ನೋಡುವದಿಲ್ಲವು. ನೀನು ಎಂತಹ ಅಧಿಕಾರಿಯಾದರೂ, ಅಥವಾ ವಿಶದವಾದ ಅನುಸಂಧಾನವೇ ಇರಲಿ ಅಥವಾ ಸಮುದಾಯಜ್ಞಾನದಿಂದಲಾಗಲಿ, ಹೀಗೆ ಅಲ್ಪಜ್ಞಾನಮಾತ್ರದಿಂದಲೇ ಎಂಬರ್ಥವು, ದ್ವಯವಕ್ತಾ ತ್ವಂ – ದ್ವಯಮನ್ತ್ರದ ಮಾಹಾತ್ಮ್ಯವನ್ನರಿತು ಅದನ್ನು ಉಚ್ಚರಿಸಿದ ನೀನು, ಕೇವಲಂ ಮದೀಯಯಾ ದಯಯಾ – ಕೇವಲ ದಯೆಯ ಮೂಲಕವಾಗಿ, ಎಂದರೆ ನೀನು ನನ್ನ ಪ್ರಾಪ್ತಿ

---

(೧) ಶರಣಾಗತಿಗದ್ಯಮ್.

(೧) "ಅವಶೇನಾಪಿ ಯನ್ನಾಮ್ನಿ ಕೀರ್ತಿತೇ ಸರ್ವಪಾತಕೈಃ ॥ ಪುಮಾನ್ ವಿಮುಚ್ಯತೇ ಸದ್ಯ ಸ್ಸಿಂಹತ್ರಸ್ತೈ ರ್ಮೃಗೈರಿವ" (೨)"ನಾಮ್ನಾಸ್ತೇ ಯಾವತೀ

---

ಗಾಗಿ ಇನ್ನೇನು ಮಾಡುವುದರ ಅವಶ್ಯಕವಿಲ್ಲದೆ, ನನ್ನ ದಯೆಯಿಂದಲೇ ಎಂಬ ಭಾವವು. ನನ್ನ ದಯೆ ಎಂದು ಹೇಳಿದ ದರಿಂದ, ಇನ್ನು ಯಾವ ದೇವತಾಂತರಾದಿಗಳ ದಯೆ ಯಾವುದೂ ಬೇಕಿಲ್ಲವೆಂಬುದೂ, ಸೂಚಿತವು. ಆದೇನು ಅವನ ದಯೆಯು ತನ್ನಲ್ಲಿ ಎಂದರೆ ಯಾವಾಗ ದ್ವಯಮಂತ್ರದ ಮೂಲಕ ಪ್ರಪತ್ತಿಯನ್ನನುಷ್ಠಿಸಿದನೋ, ಆಗ ಆಂತರ್ಯದಲ್ಲಿ ಪರಮಪುರುಷನಿಗೆ ಸಹಜ ದಯೆಯುಂಟಾಗುತ್ತದೆ. ಇದು ಎಂತಹ ದಯೆಯು ಎಂದರೆ "ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ ದೋಷೋ. "ದತ್ತಮಸ್ಯಾಭಯಂ ಮಯಾ" ಎಂದೂ ಹೇಳುವ ಹಾಗೆ ಮಾಡುವ ದಯೆಯಿಂದ ಎಂಬ ತಾತ್ಪರ್ಯವು. ನಿತ್ಯಕಿಂಕರೋಭವ – ದಿವ್ಯ ವೈಕುಂಠದಲ್ಲಿ ಸದಾ ಕೈಂಕರ್ಯವನ್ನು ಮಾಡುವ ಸುಕೃತವನ್ನು ಹೊಂದಿದವನಾಗು. ಇದರಿಂದ ಮೋಕ್ಷಾವಸ್ಥೆಯಲ್ಲಿ ಎಲ್ಲಾ ಸಿದ್ಧಾಂತರೀತ್ಯಾ ಮುಕ್ತನು ಪರಿಪೂರ್ಣ ಬ್ರಹ್ಮಾನುಭವವನ್ನು ಮಾಡುತ್ತಾ ಪರಮಾತ್ಮನಿಗೆ ಸಮಾನವಾದ ಆನಂದವನ್ನು ಅನುಭವಿಸುತ್ತಾ ಶೇಷನಾಗಿರುವುದರಿಂದ ತನಗೆ ಪರಮಪುರುಷನ ನಿತ್ಯ ಕೈಂಕರ್ಯ ಮಾಡುವುದೇ ತನಗೆ ಪ್ರಯೋಜನವೆಂದು ಅಂತಹ ಕೈಂಕರ್ಯವನ್ನು ಎಸಗುತ್ತಾ ಇರುವನೆಂಬ ನಿರ್ಣಯವು ಶ್ರೀಮದ್ರಾಮಾನುಜರ ಪರಿಪೂರ್ಣಬ್ರಹ್ಮಾನುಭವಾಧಿಕಾರದಲ್ಲಿ ಉಪಪಾದಿತವು. ಇದರಿಂದ ಸ್ವರೂಪೈಕ್ಯ ಪಾಷಾಣವತ್ ಅವಸ್ಥೆಯೇ ಮೊದಲಾದ ಸಮಸ್ತ ಅಪಸಿದ್ಧಾಂತಗಳೂ ನಿರಸ್ತವು. ಈ ದ್ವಯೋಚ್ಚಾರಣೆಯು ಇಂತಹ ಮಹಿಮೆಯುಳ್ಳದೆಂದು "ಮನ್ತ್ರಂ ಮುಕ್ತಿಬೀಜಂ ಶರಣಾತಿ ವಶತಃ ಕಲ್ಪತೇ ಸತ್ಯಲಾಯ" ಎಂಬುದಾಗಿ ಹೇಳಿರುವ ಹಾಗೆ ಮುಕ್ತಿಯನ್ನು ಕೊಡತಕ್ಕದ್ದೆಂಬುದು ನಿಸ್ಸಂದೇಹವೆಂಬ ಭಾವವು.

ಈ ಸಮುದಾಯಾರ್ಥಾನುಸಂಧಾನಪೂರ್ವಕವಾದ ಈ ದ್ವಯಮಂತ್ರದ ಸಕೃದುಚ್ಚಾರಣೆಯು ಮೋಕ್ಷವನ್ನು ಸಾಧಿಸುವ ಮಹಾತ್ಮ್ಯವುಳ್ಳದೆಂಬುದು ಕೈಮುತಿಕನ್ಯಾಯಸಿದ್ಧವೆಂದು ಹೇಳುತ್ತಾರೆ. (೧) ಅವಶೇನಾಪಿ - ಇಚ್ಛೆಯಿಲ್ಲದೆಯಾಗಲಿ ಎಂದರೆ ಬುದ್ಧಿಪೂರ್ವಕವಾಗಿ ಅಲ್ಲದೆ ಏನೋ ಆಕಸ್ಮಾತ್ತಾಗಿಯಾಗಲಿ, ಯನ್ನಾಮ್ನಿ - ಯಾವ ಪುರುಷೋತ್ತಮನ ಹೆಸರು, ಕೀರ್ತಿತೇ ಸತಿ - ಸ್ತುತಿಸಲ್ಪಡಲಾಗಿ, ಸರ್ವಪಾತಕೈಃ – ಸಮಸ್ತ ಪಾಪಗಳಿಂದ, ಪುಮಾನ್ ಈ ಪರಿಶುದ್ಧ ಸ್ವರೂಪವುಳ್ಳ ಜೀವಾತ್ಮನು, ಸದ್ಯಃ . ಒಡನೆಯೇ, ವಿಮುಚ್ಯತೇ ಸಂಪೂರ್ಣವಾಗಿ ಬಿಡಲ್ಪಡುವನು ಹೇಗೆಂದರೆ ? ಸಿಂಹತ್ರಸ್ತೈರ್ಮೃಗೈರಿವ–ಸಿಂಹದ ಭಯದಿಂದ ಓಡಿಸಲ್ಪಟ್ಟ ಹುಲ್ಲೆ ತೋಳ ಮೊದಲಾದ ಮೃಗಗಳಹಾಗೆ. ಇಲ್ಲಿ ಸಿಂಹವು ಹೇಗೆ ಹುಲ್ಲೆ, ತೋಳ

---

(೧) ವಿ. ಪು. ೬-೮.೧೯.

**ಶಕ್ತಿಃ ಪಾಪನಿರ್ಹರಣೇ ಹರೇ । ಶ್ವಪಚೋಽಪಿ ನರಃ ಕರ್ತುಂ ಕ್ಷಮಃ ಸ್ತಾವನ್ನ ಕಿಲ್ಬಿಷಂ" ಇತ್ಯಾದಿಗಳಾಲೇ ತಿರುನಾಮ ಸಂಕೀರ್ತನ ಮಾತ್ರತ್ತಿನುಡೈಯ ಪ್ರಭಾವಮಿರುಕ್ಕುಂಪಡಿ ಶರಣ್ಯಶರಣಾಗತಿ ತತ್ಫಲವಿಶೇಷಙ್ಗಳೈ ಪೂರ್ಣಮಾಗ ಪ್ರಕಾಶಿಪ್ಪಿಕ್ಕಿರ ಇವ್ಮನ್ತ್ರ ವಿಶೇಷತ್ತಿನುಡೈಯ ಸಕೃದುಚ್ಚಾರಣ ಮಾತ್ರತ್ತಿಲುಳ್ಳ ಪ್ರಭಾವಮ್ ಶ್ರುತ್ಯಾದಿ ಪ್ರಮಾಣತ್ತಾಲೇ ಸುಗ್ರಹಮ್.**

---

ನರಿ, ಮೊದಲಾದವುಗಳನ್ನು ಓಡಿಸುತ್ತದೋ ಹಾಗೆ ಸರ್ವೇಶ್ವರನ ನಾಮ ಸಂಕೀರ್ತನವು ಸಿಂಹರೂಪವಲ್ಲಿದ್ದು ಪಾತಕಗಳಾದ ತೋಳ ನರಿಗಳನ್ನೆಲ್ಲಾ ಭಯದಿಂದ ಓಡಿ ಹೋಗುವಹಾಗೆ ಮಾಡುತ್ತದೆಂಬ ಭಾವವು. ಮೃಗ ಶಬ್ದಕ್ಕೆ ಜಿಂಕೆ ಎಂಬ ಅರ್ಥವಾದರೂ ಅದು ಪ್ರಾಣಿಘಾತುಕಮೃಗವಲ್ಲದುದರಿಂದ, ಘಾತುಕಮೃಗಗಳಾದ ತೋಳ ನರಿ ಎಂದು ಅರ್ಥಮಾಡುವದೇ ಯುಕ್ತವು. ಏಕೆಂದರೆ ಮಹಾಪಾತಕಗಳು ತೋಳ ನರಿಗಳಹಾಗೆ ಆತ್ಮನಾಶಕಗಳು; ಆದುದರಿಂದ ಹೀಗೆ ಅರ್ಥಮಾಡುವದೇ ಸಾಧುವು. ಈ ಶ್ಲೋಕವು ಹಿಂದೆ ಪ್ರಭಾವರಕ್ಷಾಧಿಕಾರದಲ್ಲಿ ಉದಾಹೃತವು ...ನೆಯ ಪುಟವನ್ನು ಪರಾಂಬರಿಸಿ. **'ಹರಿರ್ಹರತಿ ಪಾಪಾನಿ ದುಷ್ಟಚಿತ್ತೈರಪಿ** ಸ್ಮೃತಃ । **ಅನಿಚ್ಛಯಾಪಿ ಸಂಸ್ಪೃಷ್ಟೋ ದಹತ್ಯೇವಹಿ ಪಾವಕಃ" ಅನಿಚ್ಛಯಾಪಿ** ಎಂಬುದೂ, ಮೇಲಿನ ಶ್ಲೋಕದ **"ಅವಶೇನಾಪಿ"** ಎಂಬುದೂ **ಸಮಾನಾರ್ಥ**ಕಗಳು. (೨) **ಹೇಹರೇ** - ಓ ಪಾಪಹರನಾದ ಶ್ರೀ ಮಹಾವಿಷ್ಣುವೇ **ತೇ** - ನಿನ್ನ, **ನಾಮ್ನಃ** - ಹೆಸರಿಗೆ ಎಂದರೆ ನಾಮಸಂಕೀರ್ತನೆಗೆ, **ಪಾಪನಿರ್ಹರಣೇ** – ಪಾಪವನ್ನು ಹೋಗಲಾಡಿಸುವದರಲ್ಲಿ, **ಯಾವತೀಶಕ್ತಿಃ** - ಎಲ್ಲಿವರೆಗೂ **ಶಕ್ತಿ**ಯುಂಟೋ **ತಾವತ್**-ಅಷ್ಟರವರೆಗೂ, **ಕಿಲ್ಬಿಷಂ**-ಪಾಪವನ್ನು **ಕರ್ತುಂ**-ಮಾಡುವದಕ್ಕೆ **ನರಃ**-ಮನುಷ್ಯನು, **ಶ್ವಪಚೋಽಪಿ** - ನಾಯಿಮಾಂಸವನ್ನು ಭಕ್ಷಿಸುವ ಚಂಡಾಲನಾದರೂ ಕೂಡ, **ನಕ್ಷಮಃ**–ಯೋಗ್ಯನಲ್ಲವು. ಪಾಪಮಾಡುವದರಲ್ಲಿ **ಶ್ವಪಚ**ನು ಗಟ್ಟಿಗನೋ, ಪಾಪವನ್ನು ಹೋಗಲಾಡಿಸುವದರಲ್ಲಿ ನಿನ್ನ ನಾಮಸಂಕೀರ್ತನವು ಹೆಚ್ಚು ಸಾಮರ್ಥ್ಯವುಳ್ಳದೋ ಎಂದು ಪರೀಕ್ಷಿಸಿದರೆ ನಾಮಸಂಕೀರ್ತನಶಕ್ತಿಯೇ ಅತಿಶಯವಾದುದು ಎಂಬ ಭಾವವು. ನಿನ್ನ ನಾಮಸಂಕೀರ್ತನವು **ಶ್ವಪಚ**ನ ಮಹತ್ತಾದ ಕಿಲ್ಬಿಷಗಳನ್ನೆಲ್ಲಾ ಹೋಗಲಾಡಿಸುತ್ತದೆಂಬುದು ಶ್ಲೋಕತಾತ್ಪರ್ಯವು" **ಇತ್ಯಾದಿಗಳಾಲೇ** – ಇವೇ ಮೊದಲಾದ ಪ್ರಮಾಣಗಳಿಂದ **ತಿರುನಾಮಸಙ್ಕೀರ್ತನಮಾತ್ರತ್ತಿನುಡೈಯ** - ಶ್ರೀ ಮಹಾವಿಷ್ಣುವಿನ ನಾಮಸಂಕೀರ್ತನ ಮಾತ್ರದ **ಪ್ರಭಾವಮ್** - ಮಾಹಾತ್ಮ್ಯೆಯು, **ಇರುಕ್ಕುಂಪಡಿ ಕಂಡಾಲ್** – ಯಥಾವಸ್ಥಿತವಾದುದನ್ನು ಅರಿತರೆ, **ಶರಣ್ಯ ಶರಣಾಗತಿ ತತ್ಫಲವಿಶೇಷಙ್ಗಳೈ** - ಸರ್ವರಕ್ಷಕನಾದ ವಿಷ್ಣುವಿನಲ್ಲಿ ಮಾಡುವ ಮಹತ್ತಾದ ಪ್ರಭಾವವುಳ್ಳ ಶರಣಾಗತಿಯನ್ನೂ ಮತ್ತು ಅದರಿಂದುಂಟಾಗುವ ಫಲವಿಶೇಷಗಳನ್ನೂ, **ಪೂರ್ಣಮಾಗಪ್ರಕಾಶಿಪ್ಪಿ**

ಕ್ಕಿರ – ಸಂಪೂರ್ಣವಾಗಿ ಪ್ರಕಾಶಪಡಿಸುವ, ಇನ್ಮಾನ್ತ್ರ ವಿಶೇಷತ್ತಿನುಡ್ಯೆಯು-ಈ ದ್ವಯಮನ್ತ್ರವಿಶೇಷದ, ಸಕೃದುಚ್ಚಾರಣಮಾತ್ರತ್ತಿಲುಳ್ಳ - ಒಂದು ಸಲ ಗುರುವು ಉಪದೇಶಿಸಿದುದನ್ನು ಉಚ್ಚರಿಸುವ ಮಾತ್ರದಿಂದುಂಟಾಗುವ, ಪ್ರಭಾವಮ್. ಮಾಹಾತ್ಮ್ಯೆಯು, ಶ್ರುತ್ಯಾದಿ ಪ್ರಮಾಣ ಬಲತ್ತಾಲೇ - ಶ್ರುತಿ ಸ್ಮೃತಿ ಪುರಾಣೇತಿಹಾಸ ಪ್ರಮಾಣಬಲದಿಂದ, ಸುಗ್ರಹಮ್ – ಚೆನ್ನಾಗಿ ವೇದ್ಯವು. ನಾಮಸಂಕೀರ್ತನದಲ್ಲಿ ಒಂದೊಂದು ನಾಮದಿಂದ ಶ್ರೀ ಮಹಾವಿಷ್ಣುವಿನ ಗುಣಗಳಲ್ಲಿ ಎಲ್ಲೋ ಒಂದೊಂದು ಗುಣಗಳು ಮಾತ್ರವೇ ಹೊಗಳಲ್ಪಡುತ್ತವೆ. ಇಂತಹ ನಾಮಸಂಕೀರ್ತನಕ್ಕೇನೆ ಮೋಕ್ಷವನ್ನು ಕ್ರಮೇಣ ಉಪಾಯಾನುಷ್ಠಾನ ಮೂಲಕ ಹೊಂದಿಸುವ ಶಕ್ತಿಯುಂಟೆಂದು ಅನೇಕ ಪ್ರಮಾಣ ಜಾಲಗಳೇ ಇರುವಾಗ, ವಿಶೇಷಾರ್ಥಗಳನ್ನೆಲ್ಲಾ ಒಳಗೊಂಡು ಇರುವ ಮತ್ತು ನಿರತಿಶಯಾನಂದವನ್ನು ಕೊಡುವ ಮಹಾ ಪ್ರಭವಿಗಿರುವ ಕಲ್ಯಾಣಗುಣಗಣ ಮಹೋದಧಿ ಎಂದು ಹೊಗಳುವ ಪರಮೋಪಾಯವೆಂದು ಶಾಸ್ತ್ರಗಳಲ್ಲಿ ಕೊಂಡಾಡಲ್ಪಟ್ಟಿರುವ ಈ ಮನ್ತ್ರಕ್ಕೆ ಅಂತಹ ಶಕ್ತಿಯುಂಟೆಂಬುದು ಕೈಮುತಿಕನ್ಯಾಯಸಿದ್ಧವೆಂದು ಇಲ್ಲಿ ಉಪಪಾದಿಸಲ್ಪಟ್ಟಿತು. ನಾಮಸಂಕೀರ್ತನಕ್ಕೆ ಕ್ರಮೇಣ ಮೋಕ್ಷವನ್ನು ಸಾಧಿಸಿಕೊಡುವ ಮಹಾಶಕ್ತಿಯುಂಟೆಂಬುದಕ್ಕೆ ಅನೇಕಪ್ರಮಾಣಗಳುಂಟೊ ಎಂದರೆ ಕೆಲವನ್ನು ಉದಾಹರಿಸುವೆವು :—

೧ ಶಮಾಯಾಲಂ ಜಲಂವಹ್ನೇಸ್ತಮಸೋ ಭಾಸ್ಕರೋದಯಃ ।
ಶಾನ್ತಿಃಕಲೇ ರಘೌಘಸ್ಯ ನಾಮಸಂಕೀರ್ತನಂ ಹರೇಃ ॥
೨ ಯಸ್ಯನಾಮ್ನಿ ಸ್ಮೃತೇ ಮರ್ತ್ಯಸ್ಸಮುತ್ಕ್ರಾಂತೇರನಂತರಂ ।
ಪ್ರಾಪ್ನೋತಿ ವೈಷ್ಣವಂ ಸ್ಥಾನಂ ಪುನರಾವೃತ್ತಿ ವರ್ಜಿತಮ್ ॥
೩ ಜ್ಞಾನತೋಽಜ್ಞಾನತೋವಾಪಿ ವಾಸುದೇವಸ್ಯ ಕೀರ್ತನಾತ್ ।
ತತ್ಸರ್ವಂ ವಿಲಯಂಯಾತಿ ತೋಯಸ್ಥಂ ಲವಣಂ ಯಥಾ ॥
೪ ಸಂಸಾರ ಸರ್ಪಸಂದಷ್ಟ ನಷ್ಟಚೇಷ್ಟೈಕ ಭೇಷಜಂ ।
ಕೃಷ್ಣೇತಿ ವೈಷ್ಣವಂ ಮಂತ್ರಂ ಶ್ರುತ್ವಾ ಮುಕ್ತೋಭವೇನ್ನರಃ ॥
೫ ವಾಸುದೇವಾಶ್ರಯೋಮರ್ತ್ಯೋ ವಾಸುದೇವ ಪರಾಯಣಃ ।
ಸರ್ವಪಾಪ ವಿಶುದ್ಧಾತ್ಮಾ ಯಾತಿ ಬ್ರಹ್ಮ ಸನಾತನಮ್ ॥

ಸಹಸ್ರನಾಮಪಠನ ಫಲ ಶ್ರುತಿಯಲ್ಲಿ ಈ ಮುಂದಿನ ವಾಕ್ಯವಿರುತ್ತದೆ. ಅಂತವನು ಉಪಾಯಮುಖೇನ ವಾಸುದೇವಾಶ್ರಯನಾಗಿ ವಾಸುದೇವಪರಾಯಣನಾಗಿ ಸರ್ವ ಪಾಪಗಳೂ ಕಳೆಯುವದರಮೂಲಕ ಪರಿಶುದ್ಧಾತ್ಮನಾಗಿ ಪರಬ್ರಹ್ಮಪ್ರಾಪ್ತಿಯನ್ನು ಹೊಂದುವನೆಂದು ಹೇಳಲ್ಪಟ್ಟಿದೆ. ಮುಂದ

(೬) ಜನ್ಮಮೃತ್ಯುಜರಾವ್ಯಾಧಿ ಭಯಂ ನೈವೋಪಜಾಯತೇ ಎಂದು ಇದೆ. ಈ ೫, ೬ನೆಯ ಪ್ರಮಾಣಗಳು ನಾಮಸಂಕೀರ್ತನದ ಯಥಾವತ್ತಾದ ಫಲ

ವನ್ನು ಪ್ರದರ್ಶಿಸುತ್ತವೆ. ಈ ನಾಮಸಂಕೀರ್ತನವು ತಾನೇ ಸ್ವತಃ ಸಾಕ್ಷಾತ್ತಾಗಿ ಮೋಕ್ಷದಾಯಕವಲ್ಲವು. ಅಪರ ಮಾಹಾತ್ಮ್ಯೆಯು ಮಹತ್ತಾದುದೇ. ಅದು ಏನನ್ನು ಮಾಡುತ್ತದೆಂದರೆ ವಾಸುದೇವಾಶ್ರಯನನ್ನಾಗಿಯೂ ವಾಸುದೇವಪರಾಯಣನನ್ನಾಗಿಯೂ ಮಾಡಿ ತನ್ಮೂಲಕ ಸರ್ವಪಾಪ ವಿಶುದ್ಧಾತ್ಮನನ್ನಾಗಿ ಮಾಡಿ ಸನಾತನಬ್ರಹ್ಮನ ಸಾಯುಜ್ಯವನ್ನು ಹೊಂದಿಸುತ್ತದೆ ಎಂಬ ಭಾವವು. ಇದಕ್ಕೆ ಅಜಾಮಿಳೋಪಾಖ್ಯಾನವು ದೃಷ್ಟಾಂತವು. ಆತನಿಗೆ ತನ್ನ ಮಗನ ನಾಮವೂ ನಾರಾಯಣನಾಗಿ, ಉತ್ಕ್ರಾಂತಿಕಾಲದಲ್ಲಿ ನಾರಾಯಣನನ್ನು ಕರೆದುದರಿಂದಲೇ ಮೋಕ್ಷ ದೊರೆಯಲಿಲ್ಲವು. ಸಾಧುಸಂಗವು ಉಪಾಸನಾನುಷ್ಠಾನಗಳಿಂದ ಕ್ರಮೇಣ ಮೋಕ್ಷವು. ಹೀಗಿರುವಾಗ ಸಾಕ್ಷಾದುಪಾಯಕ್ಕೆ ಪರಬ್ರಹ್ಮಸಾಯುಜ್ಯವನ್ನು ಹೊಂದಿಸುವ ಶಕ್ತಿಯಿಲ್ಲವೇ ? ಶರಣ್ಯಶರಣ್ಯ ಇತಿ ತತ್ಫಲಗಳನ್ನು ಸಂಪೂರ್ಣವಾಗಿ ಪ್ರಕಾಶಿಸುತ್ತದೆಂಬಂಶವು ಮುಂದೆ ತುಂಬಾ ವಿಸ್ತಾರವಾಗಿ ಹೇಳಲ್ಪಡುವದರಿಂದ ಇಲ್ಲಿ ಸಂಕ್ಷೇಪವಾಗಿಯೂ ತಿಳಿಸುವ ಆವಶ್ಯಕತೆಯಿಲ್ಲವು.

ಹೀಗೆ ದ್ವಯಮಂತ್ರದ ಸಕೃದುಚ್ಚಾರಣೆಯು ಉಪಾಯವೆಂದೂ ಮೋಕ್ಷಪ್ರಾಪಕವೆಂದೂ, ಇಂತಹ ಮಾಹಾತ್ಮ್ಯೆಯುಳ್ಳದೆಂದೂ ಎಲ್ಲಿ ಹೇಳಿದೆ ? ಎಂದರೆ ಶ್ರುತ್ಯಾದಿ ಪ್ರಮಾಣಗಳಿಂದ ವ್ಯಕ್ತವೆಂದು ಹೇಳುತ್ತಾರೆ. ಆ ಪ್ರಮಾಣಗಳು ಯಾವುವು ಎಂದರೆ

ಕಠವಲ್ಲಿಯಲ್ಲಿ "ಸತ್ಯಂ ದ್ವಯಂ ಸಕೃದುಚ್ಚಾರಿತಸ್ಸಂಸಾರ ವಿಮೋಚನಂ ಭವತಿ" ಎಂದು ಇರುತ್ತದೆ. ಶ್ರುತ್ಯಾದಿ ಎಂಬ ಆದಿ ಪದದಿಂದ ಭಗವಚ್ಛಾಸ್ತ್ರ ಪಾದ್ಮಪುರಾಣಾದಿಗಳು ಹೇಳಲ್ಪಟ್ಟವು. ಸಾರಾಸ್ವಾದಿನಿಯವರು ಈ ಪ್ರಮಾಣಗಳನ್ನು ಉದಾಹರಿಸಿರುತ್ತಾರೆ.—(ಪಾದ್ಮೇ) ಅಹೋ ದ್ವಯಸ್ಯ ಮಾಹಾತ್ಮ್ಯಂ ಮಹೋವೀರ್ಯ ಮಹೋಬಲಮ್ । ಕಿಂ ಸು ತಸ್ಯಚ ಮನ್ತ್ರಸ್ಯ ಕರ್ಮಣಃ ಕಮಲಾಸನ ॥ ನಲಭ್ಯತೇಧಿಕಾರೀವಾ ಶ್ರೋತಾ ವಾಮೋಪಿವಾ ಪುನಃ । ಪುರಾ ಮನ್ತ್ರದ್ವಯಂ ಬ್ರಹ್ಮನ್ ವಿಷ್ಣುಲೋಕೇ ಮಹಾಪುರೇ । ತಸ್ಮಿನ್ನಂತಃಪುರೇ ರನ್ಯೇ ಮಯಾದತ್ತಃ ಸ್ಸನಾತನಃ । ಲಕ್ಷ್ಮ್ಯಾ ಲಬ್ಧಂ ತಥಾಬ್ರಹ್ಮನ್ ಮಂತ್ರರತ್ನದ್ವಯಂ ಪ್ರಭೋ'

ಬ್ರಹ್ಮಾ-"ಭಗವನ್ ಕೇನಮನ್ತ್ರೇಣ ಸಂಸಾರೋತ್ತಾರಣಂ ಭವೇತ್ ? ತನ್ಮಾಮಾಚಕ್ಷ್ವ ತತ್ತ್ವೇನ ಸರ್ವಲೋಕಹಿತಾಯವೈ । ಕೋಮನ್ತ್ರಸ್ಸರ್ವಮನ್ತ್ರಾಣಾಂ ಪುನಶ್ಚರಣವರ್ಜಿತಃ । ಸಕೃದುಚ್ಚಾರಣಾನ್ನೄಣಾಂ ದದಾತಿ ಪರಮಂ ಪದಮ್ ?"

ಶ್ರೀ ಭಗವಾನುವಾಚ—"ಸಾಧುಪೃಷ್ಟಂ ಮಹಾಭಾಗ ಸರ್ವಲೋಕಹಿತೈಷಿಣಾ । ತಸ್ಮಾದ್ವಕ್ಷ್ಯೇ ಸುಗೋಪ್ಯಂ ಯೇನ ಮಾಮಾಪ್ನುಯುರ್ನರಾಃ ಸರ್ವೇಷಾಮೇವ ಮನ್ತ್ರಾಣಾಂ ಮನ್ತ್ರರತ್ನಂ ಶುಭಾಹ್ವಯಮ್ । ಸಕೃತ್ಸ್ಮರಣ

ಮಾತ್ರೇಣ ದದಾತಿ ಪರಮಂ ಪದಮ್" "ಮನ್ತ್ರರತ್ನಂ ದ್ವಯಂ ನ್ಯಾಸಃ ಪ್ರಪತ್ತಿ ಶ್ಶರಣಾಗತಿಃ । ಲಕ್ಷ್ಮೀನಾರಾಯಣಂ ಚೇದಂ ಹಿತಂ ಸರ್ವಫಲ ಪ್ರದಮ್ । ನಾಮಾನಿ ಮನ್ತ್ರರತ್ನಸ್ಯ ಪರ್ಯಾಯೇಣ ನಿಬೋಧ ಮೇ। ತಸ್ಯೋಚ್ಚಾರಣಮಾತ್ರೇಣ ಪರಿತುಷ್ಟೋಽಸ್ಮಿ ನಿತ್ಯಶಃ । ಸರ್ವಲೋಕೇಶ್ವರ ಸ್ಸಾಕ್ಷಾದ್ಬ್ರಹ್ಮಾದಿ ಭುವನೇಶ್ವರಃ। ಮಮಾಪಿ ನಾರದಸ್ಯಾಪಿ ಪ್ರೋಕ್ತವಾನ್ಮಂತ್ರ ಮುತ್ತಮಮ್ । ಶೌನಕಾದಿ ಮಹರ್ಷೀಣಾಂ ನೈಮಿಶಾರಣ್ಯವಾಸಿನಾಮ್ । ನಾರದಃ ಪ್ರದದೌ ಮನ್ತ್ರಂ ಪ್ರಪತ್ತಿಂ ಶರಣಾಗತಿಮ್ । ಏತದ್ಗುಹ್ಯತಮಂ ರಾಜನ್ ನ ಜಾನನ್ತಿ ಮಹರ್ಷಯಃ । ಮಯಾ ಚ ಪ್ರಾಪ್ತವಾನ್ ಮನ್ತ್ರಂ ಶಕ್ತಿಪುತ್ರಃ ಪರಾಶರಃ"

ಇದರ ಅರ್ಥವು ವ್ಯಕ್ತವಾಗಿರುವದರಿಂದಲೂ ಗ್ರಂಥವಿಸ್ತರ ಭಯದಿಂದಲೂ ಬರೆಯಲಿಲ್ಲವು. ಭಗವಂತನಾದ, ಲಕ್ಷ್ಮೀ, ಬ್ರಹ್ಮ, ನಾರದರು ಹೀಗೆ ಕ್ರಮವಾಗಿಯೂ ಸಂಪ್ರದಾಯರೀತ್ಯಾ ಬಂದುದಾಗಿ ಸಕೃದುಚ್ಚಾರಣಮಾತ್ರದಿಂದ ದೇಹಾವಸಾನದಲ್ಲಿ ಮೋಕ್ಷನನ್ನೀಯುವಂತಾದ್ದಾಗಿರುವದರಿಂದ ಇದರ ಪ್ರಭಾವವು ಪರಮ ಮಹತ್ತಾದುದು ಎಂಬ ಭಾವವು. ಇಷ್ಟೇ ಅಲ್ಲವು. ವೇದೋಪಬ್ರಹ್ಮಣ ರೂಪವಾದ ಶ್ರೀಮದ್ರಾಮಾಯಣದಲ್ಲಿ ಶರಣಾಗತಿಯು ಕೊಂಡಾಡಲ್ಪಟ್ಟಿರುತ್ತದೆ. ಶ್ರೀ ನಮ್ಮಾಳ್ವಾರ್ ಪ್ರಭೃತಿಗಳಿಂದಲೂ ಯಾಮುನಮುನಿಗಳಿಂದಲೂ ಶರಣಾಗತಿಯು ಕೊಂಡಾಡಲ್ಪಟ್ಟಿರುತ್ತದೆ. ಈ ಶರಣಾಗತಿಶಬ್ದವೂ ದ್ವಯವೂ ನ್ಯಾಸವೂ ಎಲ್ಲವೂ ಪರ್ಯಾಯ ಪದಗಳೆಂದು ಮೇಲಿನ ಪ್ರಮಾಣಗಳಲ್ಲಿ ಹೇಳಲ್ಪಟ್ಟಿವೆ. ಅದೂ ಅಲ್ಲದೆ, ಶ್ರೀ ಯತಿವರ್ಯರು ಶರಣಾಗತಿಯನ್ನು ಅನುಷ್ಠಿಸುವ ಸಂದರ್ಭದಲ್ಲಿ ಅರ್ಚಾವತಾರಿಯಾದ ಶ್ರೀರಂಗನಾಥರು "ಯೇನಕೇನಪ್ರಕಾರೇಣ ದ್ವಯವಕ್ತಾ ತ್ವಂ ಕೇವಲಂ ಮದೀಯಯೈವ ದಯಯಾ" ಎಂದು ಇದರ ಮಾಹಾತ್ಮ್ಯೆಯನ್ನು ಕೊಂಡಾಡಿರುವದರಿಂದಲೂ ನಮಗೆ ಪರಮಗ್ರಾಹ್ಯವು. ಈಗಿನವರೆಗೂ ಇರುವ ಆಚಾರ್ಯರುಗಳ ಅಭಿಪ್ರಾಯವೂ "ತಿರುಮನ್ತ್ರತ್ತಿಲೇ ಪಿರನ್ದು, ದ್ವಯತ್ತಿಲೇ ವಳರ್‌ನ್ದು ದ್ವಯೈಕನಿಷ್ಠ ನಾವಾರ್" ಎಂಬ ರೀತ್ಯಾ ಹಾಗೆಯೇ ಆಗಿರುತ್ತದೆ. ಶ್ರೀ ನಿಗಮಾನ್ತ ದೇಶಿಕರವರು ಮೂಲಮನ್ತ್ರಾಧಿಕಾರದಲ್ಲಿ ಮೂಲಮನ್ತ್ರವೂ ಚರಮ ಶ್ಲೋಕವೂ ದ್ವಯವೂ ಕ್ರಮವಾಗಿ ಧಾರಕಪೋಷಕ ಭೋಗ್ಯಗಳೆಂದು ಉಪಪಾದಿಸಿರುತ್ತಾರೆ.

ಆಗಲಿ ನಾರದೀಯ ಕಲ್ಪವಾಕ್ಯಾನುಸಾರವಾಗಿ ಮೂಲಮನ್ತ್ರವು "ಮನ್ತ್ರಾಣಾಂ ಪರಮೋ ಮನ್ತ್ರೋ ಗುಹ್ಯಾನಾಂ ಗುಹ್ಯಮುತ್ತಮಮ್ । ಪವಿತ್ರಂ ಚ ಪವಿತ್ರಾಣಾಂ ಮೂಲಮನ್ತ್ರಸ್ಸನಾತನಃ" ಎಂದು ಹೇಳಿರುವದು ಈ ದ್ವಯ ಮನ್ತ್ರಕ್ಕೆ ಪ್ರಾಧಾನ್ಯವನ್ನೂ ಮಾಹಾತ್ಮ್ಯೆಯನ್ನು ಪಪಾದಿಸಿರುವದಕ್ಕೆ ವಿರೋಧವಾಗುವದಿಲ್ಲವೇ ? ಎಂದರೆ ಎಂದಿಗೂ ಇಲ್ಲವು. ಏಕೆಂದರೆ ಈ ಮನ್ತ್ರದ ಮೂಲಕ

ಇಪ್ಪ್ರಭಾವ ನಿಬಂಧನತ್ತೈಯುಮ್ **ಇಜ್ಜೈ ಪ್ರಮಾಣ ಸಂಪ್ರದಾ ಯಙ್ಗಳಾಲೇ** ಕಂಡುಕೊಳ್ವದು. ಇಪ್ಪಡಿಪ್ಪಟ್ಟ ರಹಸ್ಯತಮಾರ್ಥಙ್ಗಳಿಲ್ ಹೇತು ನಿರೂಪಣಮ್ ಪಣ್ಣಕ್ಕಡವದನ್ರು.

---

ವಾಗಿ ಉಪಾಯಾನುಷ್ಠಾನಕ್ಕೆ ಉಪಕಾರಕವಾದುದರಿಂದ ಮೂಲಮನ್ತ್ರಕ್ಕೆ ಅಲ್ಲಿ ಮಾಹಾತ್ಮ್ಯಯು ಹೇಳಲ್ಪಟ್ಟಿತು. ಅಲ್ಲಿ ಶ್ರೀ ನಿಗಮಾಂತರವರೇ ವ್ಯಕ್ತಪಡಿಸಿರುತ್ತಾರೆ.— "**ಸರ್ವಪುರುಷಾರ್ಥಙ್ಗಳುಕ್ಕುಮ್ ಸಾಧಕಮಾಯ್ ಸರ್ವೋಪಾಯಙ್ಗಳುಕ್ಕುಮ್ ಉಪಕಾರಕಮಾಯ್**" ಮೂಲಮನ್ತ್ರವಿದೆ ಎಂದು ಅಪ್ಪಣೇ ಕೊಡಿಸಿರುತ್ತಾರೆ. ನೆಯ ಪುಟ ನೋಡಿ. ಈ ದ್ವಯಮನ್ತ್ರವಾದರೋ ಕರಣಮನ್ತ್ರವಾಗಿ ಸಾಕ್ಷಾತ್ ಸಾಧನವು. ಮುಂದೆಯೂ ಈ ದ್ವಯಮನ್ತ್ರದ ಪ್ರಭಾವವು ವರ್ಣಿಸಲ್ಪಡುತ್ತದೆ.

**ಇಪ್ಪ್ರಭಾವ ನಿಬಂಧನತ್ತೈಯುಮ್** - ಈ ದ್ವಯಮನ್ತ್ರದ ಪ್ರಭಾವವಾದ ಶರಣ್ಯತರಣಾಗತಿ ಸ್ವರೂಪ ಪರಿಪೂರ್ಣ ಪ್ರಕಾಶಕವೆಂಬ ಪ್ರಕಾರವನ್ನು, **ಇಜ್ಜೈ** - ಈ ದ್ವಯಮನ್ತ್ರದ ಉಪಪಾದನೆಯ ಸಂದರ್ಭದಲ್ಲೇ, **ಪ್ರಮಾಣ ಸಂಪ್ರದಾಯಙ್ಗಳ** ಮೂಲಕ **ಕಂಡುಕೊಳ್ವದು**-ತಿಳಿದುಕೊಳ್ಳುವದು. ಹಿಂದೆಯೇ ಪ್ರಮಾಣಗಳನ್ನು ಉದಾಹರಿಸಿ, ಹೀಗೆ ಭಗವಂತನಿಂದಲೇ ಉಪದಿಷ್ಟವಾಗಿ ಕ್ರಮಗತ ಪರಂಪರೆಯಿಂದ ಈಗಿನ ಆಚಾರ್ಯರೂ ಅನುಷ್ಠಿಸಿರುವ ಸಂಪ್ರದಾಯಬಲವೂ ಉಂಟೆಂದು ವಿಶದವಾಗಿ ತೋರಿಸಲ್ಪಟ್ಟಿರುತ್ತದೆ.

ಹೀಗೆ ನಿರತಿಶಯ ಪ್ರಭಾವವು ಈ ಮನ್ತ್ರರತ್ನಕ್ಕೆ ಉಂಟೆಂದು ಹೇಳಿದರೆ, ಕೆಲವರು ತರ್ಕವಾದವನ್ನು ತರಬಹುದು ಹೇಗೆಂದರೆ --ಬಹುಜನ್ಮಸಾಧ್ಯವಾಗಿಯೂ ಬಹಳ ಕಷ್ಟಸಾಧ್ಯವಾಗಿಯೂ ಕರ್ಮಯೋಗಾದಿ ಪ್ರಯತ್ನಗಳಿಂದ ಸಹಕೃತವಾದ ಅನನ್ಯಭಕ್ತಿಯಿಂದ ಮಾಡಲ್ಪಟ್ಟ ಉಪಾಸನಕ್ಕಿಂತ, ಈ ಸಕೃದುಚ್ಚಾರಣ ರೂಪವಾದ ಈ ಮನ್ತ್ರಕ್ಕೆ ಕ್ಷಿಪ್ರ ಫಲದಾಯಕತ್ವ, ಪುನರಾವರ್ತಿಯಿಲ್ಲದ ಮೋಕ್ಷ ಪ್ರಾಪಕತ್ವವೇ ಮೊದಲಾದ ಮಾಹಾತ್ಮ್ಯಯನ್ನು ಹೇಳುವದು ನ್ಯಾಯವೋ? "**ಕ್ಲೇಶಾನಾಂಚಕ್ಷಯಕರಂ ಯೋಗಾದನ್ಯನ್ನವಿದ್ಯತೇ**" ಎಂದು ಭಕ್ತಿಯೋಗವು ಪ್ರಕಾಶಿಸಲ್ಪಟ್ಟಿರುವದಿಲ್ಲವೇ ? ಎಂದರೆ ಅಂತಹ ತರ್ಕವಾದವನ್ನು ತರುವದು ಉಚಿತವಲ್ಲವೆಂದು ಮುಂದಿನ ವಾಕ್ಯದಿಂದ ಹೇಳುತ್ತಾರೆ. ಈ ಮನ್ತ್ರದಲ್ಲಿ ರಹಸ್ಯತಮಗಳಾದ ಅರ್ಥಗಳು ಅಡಗಿವೆ ಎಂದು ಪ್ರಮಾಣಗಳು ಬೋಧಿಸುತ್ತವೆ. ಪ್ರಮಾಣಶರಣರಿಗೆ ಇವರಲ್ಲಿ ಸಂಶಯವಿರುವದು ಉಚಿತವಲ್ಲವೆಂದು ಹೇಳುತ್ತಾರೆ. ಯಾವಾಗ ಇಂತಹ ವಾದದಿಂದ ಸಂಶಯ ಉಂಟಾಯಿತೋ, ಶರಣಾಗತಿಗೆ ಬೇಕಾದ ಮಹಾವಿಶ್ವಾಸವೇ ಇಲ್ಲವಾಗಿ, **ಸಂಶಯಾತ್ಮಾವಿನಶ್ಯತಿ** ಎಂಬ ಹೇಳಿಕೆಗೆ ಅನುಸಾರವಾಗಿ ಯಾವ ಫಲವನ್ನೂ ಹೊಂದದೆ ನಷ್ಟನಾಗುವನೆಂಬ ಅಭಿಪ್ರಾಯದಿಂದ

**ಶಾಸ್ತ್ರತ್ತೈಕ್ಕೊಂಡು ವಿಶ್ವಸಿಕ್ಕ ಮಾತ್ರನ್ನೈ ಯೆನ್ರು ಮಿಡವರ್ ಮಹಾಭಾರತತ್ತಿಲೇ (೧) "ದೇವಗುಹ್ಯೇಷು ಚಾನ್ಯೇಷು ಹೇತುಃ ದೇವಿ ನಿರರ್ಥಕಃ । ಬಧಿರಾಂಧವದೇವಾತ್ರ ವರ್ತಿತವ್ಯಂ ಹಿತೈಷಿಣಾ" ಇತ್ಯಾದಿಗಳಾಲೇ ಶೊಲ್ಲಪ್ಪಟ್ಟದು.**

---

ಹೇಳುತ್ತಾರೇನೆಂದರೆ— **ಇಪ್ಪಡಿಪಟ್ಟ** ರಹಸ್ಯತಮಾರ್ಥಙ್ಗಳಿಲ್ – ಈಗ ನಾವು ಸಪ್ರಮಾಣವಾಗಿಯೂ ಸುಸಂಪ್ರದಾಯಯುಕ್ತವಾಗಿಯೂ ಅತ್ಯಂತ ರಹಸ್ಯವಾದ ಅರ್ಥಗಳನ್ನು ಹೇಳಿದುದರಲ್ಲಿ, **ಹೇತುನಿರೂಪಣಮ್**—ಶಾಸ್ತ್ರಪ್ರಮಾಣವನ್ನು ದೂರೀಕರಿಸಿ ಹೇತುವಾದವನ್ನು, **ಪಣ್ಣಕ್ಕಡವದನು** - ಪ್ರಮಾಣಶರಣರಾದ ನಾವು ಮಾಡತಕ್ಕದ್ದಲ್ಲವು. "ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ । ಜ್ಞಾತ್ವಾ..." ಎಂಬ ಗೀತಾವಾಕ್ಯವು ಇಲ್ಲಿ ಅನುಸಂಧೇಯವು. ಈ ಅಭಿಪ್ರಾಯವನ್ನೇ ಮುಂದಿಟ್ಟು ಮುಂದಿನ ವಾಕ್ಯದಿಂದ ಸಪ್ರಮಾಣವಾಗಿ ಉಪಪಾದಿಸುತ್ತಾರೆ. **ಶಾಸ್ತ್ರತ್ತೈಕ್ಕೊಂಡು** ಶಾಸ್ತ್ರಪ್ರಮಾಣಗಳನ್ನು ಅನುಮೋದಿಸಿ, **ವಿಶ್ವಸಿಕ್ಕ ಮಾತ್ರನ್ನೈ** - ನಾವು ಅವುಗಳಲ್ಲಿ ಮಹಾ ವಿಶ್ವಾಸವನ್ನು ಇಡತಕ್ಕದು, ಇಷ್ಟೇ ನಮ್ಮ ಕೆಲಸವು. ಅದಕ್ಕೆ ವಿರುದ್ಧವಾಗಿ ಪೂರ್ವಪಕ್ಷವನ್ನಾಗಲಿ, ಹೇತುವಾದವನ್ನಾಗಲಿ ಸಂಶಯಪ್ರದರ್ಶನವನ್ನಾಗಲಿ ಮಾಡತಕ್ಕದ್ದಲ್ಲವೆಂಬ ಭಾವವು; **ಎನ್ರು ಮಿಡವರ್**—ಎಂಬ ಸಂದರ್ಭವು, ಮಹಾಭಾರತದಲ್ಲಿ (೧) **ದೇವಗುಹ್ಯೇಷು** – ದೇವತೆಗಳಿಗೂ ಕೂಡ, ರಹಸ್ಯಗಳಾದ ಮತ್ತು **ಅನ್ಯೇಷು** - ಇತರಗಳಾದ ಶಾಸ್ತ್ರಪ್ರಮಾಣಗಳಲ್ಲಿ, **ಹೇತುಃ** - ಪೂರ್ವಪಕ್ಷವೂ, ತನ್ಮೂಲಕ ಸಂದೇಹವೂ, **ನಿರರ್ಥಕಃ** - ನಿಷ್ಪ್ರಯೋಜನವು. ಅಂತಹ ಶಾಸ್ತ್ರಪ್ರಮಾಣಗಳ ವಿಷಯದಲ್ಲಿ ನಮ್ಮ ಪ್ರವೃತ್ತಿಯು ಹೇಗಿರಬೇಕೆಂದರೆ ತಿಳಿಸುತ್ತಾರೆ. -**ಹಿತೈಷಿಣಾ** - ಹಿತವು ಸರ್ವಶ್ರೇಯಸ್ಸು, ಅದನ್ನು ಅಪೇಕ್ಷಿಸುವ, ಅಧಿಕಾರಿಯಿಂದ, **ಬಧಿರಾಂಧವತ್** ಕಿವುಡನ ಮತ್ತು ಕುರುಡನ ಹಾಗೆ, **ವರ್ತಿತವ್ಯಂ** - ಪ್ರವೃತ್ತಿಯುಳ್ಳವನಾಗತಕ್ಕದ್ದು: ಕಿವಿಡನು ತಾನೇ ಸ್ವತಃ ಕೇಳಿ ತಿಳಿಯಲಾರನು, ಕುರುಡನು ತಾನೇ ಸ್ವತಃ ನೋಡಿ ತಿಳಿಯಲಾರನು, ಆಪ್ತರು ಹೇಳಿದುದನ್ನು ದೃಢವಾಗಿ ನಂಬಿ ಹೇಗೆ ಪ್ರವರ್ತಿಸುವನೋ, ಹಾಗೆಯೇ ಶಾಸ್ತ್ರವು ಸಹಸ್ರ ತಾಯಿತಂದೆಯರನ್ನು ಹಿತೈಷಿಯು. ಅದರ ವಿಷಯದಲ್ಲಿ ಅಪನಂಬಿಕೆಯನ್ನಿಡದೇ ಅದು ಹೇಗೆ ಉಪದೇಶಿಸುತ್ತದೋ ಹಾಗೆಯೇ ನಡೆಯತಕ್ಕದ್ದೆಂಬುದು ಅತ್ಯುತ್ಕೃಷ್ಟ ಉಪದೇಶವು." **ಇತ್ಯಾದಿಗಳಾಲೇ**—ಇವೇ ಮೊದಲಾದ ವಾಕ್ಯಗಳಲ್ಲಿ, **ಶೊಲ್ಲಪ್ಪಟ್ಟದು** – ಹೇಳಲ್ಪಟ್ಟಿತು. ಶಾಸ್ತ್ರಬೋಧಿತವಾದ ವಿಷಯದಲ್ಲಿ ವಿಚಾರ ಬೇಕಿಲ್ಲದೆ ಅನುಷ್ಠಿಸತಕ್ಕದ್ದೆಂಬುದೇ ತಾತ್ಪರ್ಯವು. ಇದರಿಂದ ಯಾರಾದರೂ ಪೂರ್ವಪಕ್ಷಮಾಡಿದರೆ ಶಾಸ್ತ್ರದಲ್ಲಿ ಸಮಾಧಾನವಿಲ್ಲವೆಂಬ ಅರ್ಥ

---

(೧) ಭಾರ. ಅನು.

**ಇನ್ಮನ್ತ್ರತ್ತಿಲೇ ವಿವಕ್ಷಿತಮಾನ ಆತ್ಮ(ಭರ) ಸಮರ್ಪಣಮ್ (೨) "ಸರ್ವೋಪಾಧಿ ವಿನಿರ್ಮುಕ್ತಂ ಕ್ಷೇತ್ರಜ್ಞಂ ಬ್ರಹ್ಮಣಿ ನ್ಯಸೇತ್। ಏತದ್ಧ್ಯಾ**

---

ವ್ಯಾಯವಲ್ಲವು. ಈ ವಿಷಯದಲ್ಲಿ **"ಆರ್ಷಂ ಧರ್ಮೋಪದೇಶಂಚ ವೇದಶಾಸ್ತ್ರಾವಿರೋಧಿನಾ। ಯಸ್ತರ್ಕೇಣಾನುಸಂಧತ್ತೇ ಸ ಧರ್ಮಂ ವೇದ ನೇತರಃ"** ಎಂಬ ಪ್ರಮಾಣದಲ್ಲಿ ಶಾಸ್ತ್ರಪ್ರಮಾಣದಲ್ಲಿ ಸಂಪೂರ್ಣ ವಿಶ್ವಾಸವನ್ನಿಟ್ಟು ಯಾವನು ಸತ್ತರ್ಕದ ಮೂಲಕ ಸ್ಥಿರಪಡಿಸಿಕೊಳ್ಳುತ್ತಾನೋ ಅವನೀಗ ಮಹಾಪ್ರಾಜ್ಞನಾಗಿ ಧರ್ಮವನ್ನು ತಿಳಿದವನೆಂದು ಹೇಳಲ್ಪಟ್ಟಿರುತ್ತದೆ. ಹಾಗೆ ಮಾಡದೆ ಶಾಸ್ತ್ರವನ್ನು ದೂರೀಕರಿಸಿ ತರ್ಕವನ್ನು ಮಾಡುವದು ಕುತರ್ಕವೆನಿಸುತ್ತದೆ. ಹಿಂದೆಯೇ **ಉಪಾಯ ವಿಭಾಗಾಧಿಕಾರ** ಸಾಙ್ಗಪ್ರಪದನಾಧಿಕಾರಗಳಲ್ಲಿ ಭಕ್ತ್ಯುಪಾಯಕ್ಕಿಂತ ದ್ವಯಮೂಲಕವಾಗಿ ಮಾಡಲ್ಪಟ್ಟ ಭರನ್ಯಾಸದ ಮಾಹಾತ್ಮ್ಯೆಯು ಬಹು ವಿಶೇಷವಾಗಿ **ಉಪಪಾ** ದಿತವಾಗಿದೆ. ಆದರೆ ಈಗ ಎಲ್ಲಾ ಉಪದೇಶಗಳಿಗಿಂತ ಅಧಿಕವಾದ **ಉಪದೇಶ** ವೇನೆಂದರೆ ಯಾವಾಗ ನಿನಗೆ ಸತ್ತರ್ಕಮೂಲಕ ಸ್ಥಿರಪಡಿಸಿಕೊಳ್ಳುವ **ಯೋಗ್ಯತೆ** ಯಿಲ್ಲವೋ ಆಗ ಮಹಾವಿಶ್ವಾಸದಿಂದ ಶಾಸ್ತ್ರಾನುಗುಣವಾಗಿ ನಡೆಸುವದು ನಿನಗೆ ಸರ್ವ ಶ್ರೇಯಸ್ಕರವೆಂಬುದು.

ಹಿಂದೆ **"ಶರಣ ಶರಣಾಗತಿ** ತತ್ಫಲ **ವಿಶೇಷಙ್ಗಳೈ ಸಂಪೂರ್ಣವಾಗ ಪ್ರಕಾಶಿಪ್ಪಿಕ್ಕಿರ ಇನ್ಮನ್ತ್ರಮ್"** ಎಂದು ಈ ಮನ್ತ್ರದ ಪ್ರಭಾವವನ್ನು ವ್ಯಕ್ತಪಡಿಸಿದ್ದರು. ಆದನ್ನೇ, ಇತರ ಕರಣ ಮನ್ತ್ರಗಳಿಗಿಂತ ಈ ವಿಷಯದಲ್ಲಿ ಸರ್ವೋತ್ಕೃಷ್ಟತೆಯುಂಟೆಂಬುದನ್ನು ಸಮರ್ಥನೆಯನ್ನು ಮಾಡಿ ತಿಳಿಸುತ್ತಾರೆ.—**ಇನ್ಮನ್ತ್ರತ್ತಿಲ್** - ಈ ದ್ವಯಮನ್ತ್ರದಲ್ಲಿ ವಿವಕ್ಷಿತ**ಮಾನ** – ಉಪದೇಶಾರ್ಹವಾಗಿರುವ, **ಆತ್ಮ (ಭರ) ಸಮರ್ಪಣಮ್** - ತನ್ನ ಆತ್ಮಾವನ್ನು ರಕ್ಷಿಸಿಕೊಳ್ಳುವ ಯೋಗ್ಯತೆಯು ತನ್ನಲ್ಲಿಲ್ಲದುದರಿಂದ, ಅದನ್ನು ರಕ್ಷಿಸುವ ಭರವನ್ನು ಪರಮಾತ್ಮನಲ್ಲಿ ಸಮರ್ಪಿಸೋಣವು, (೨) **ಸರ್ವೋಪಾಧಿ ವಿನಿರ್ಮುಕ್ತಂ** - ಸಮಸ್ತ ಪ್ರತಿಬಂಧಕಗಳಾದ ಶರೀರ, ಕರ್ಮವಾಸನೆಗಳಿಂದ ಬಿಡಲ್ಪಟ್ಟ, **ಕ್ಷೇತ್ರಜ್ಞಮ್** - ಉಪಾಧಿರೂಪ ಶರೀರದಲ್ಲಿ ವಸಿಸುತ್ತೇನೆಂದು ತಿಳಿದ ಚೇತನನನ್ನು, **ಬ್ರಹ್ಮಣಿ** - ಪರಬ್ರಹ್ಮನಲ್ಲಿ **ನ್ಯಸೇತ್** . ಸಮರ್ಪಿಸತಕ್ಕದ್ದು. ನಿನ್ನ ವಸ್ತುವಾದ ಈ ಆತ್ಮನನ್ನು ರಕ್ಷಿಸುವ ಶಕ್ತಿ ನನಗಿಲ್ಲವಾದುದರಿಂದ ನೀನೇ ರಕ್ಷಿಸಿಕೊಳ್ಳತಕ್ಕದ್ದೆಂದು ಸಮರ್ಪಿಸತಕ್ಕದ್ದು ; **ಏತದ್ಧ್ಯಾನಂಚ** - ಇಂತಹ ಶರಣಾಗತಿಯೇ ಧ್ಯಾನವು, ಪರಮಾತ್ಮನನ್ನು ಪರಭಕ್ತಿಯಿಂದ ಧ್ಯಾನಿಸೋಣವು ಎಂದರೆ ಧ್ಯಾನಕ್ಕೆ ಸಮಾನವು. **ಯೋಗಶ್ಚ** - ಪರಮಾತ್ಮನ ಉಪಾಸನಾರೂಪಭಕ್ತಿಯೋಗವು, ಭಕ್ತಿಯೋಗಕ್ಕೆ ಸಮಾನವು,ಭಕ್ತಿಯೋಗದ ಸ್ಥಾನದಲ್ಲಿ ನಿಂತು ಭಕ್ತಿಯೋಗವು ಕೊಡುವ ಫಲವನ್ನು ಕೊಡುತ್ತದೆಂಬ ಭಾವವು; ಆದರೆ ಧ್ಯಾನವೇ ಬೇರೆ, ಉಪಾಸನವೇ ಬೇರೆ ; ಧ್ಯಾನಶಬ್ದದಿಂದ ಭಕ್ತಿಯೋಗವೇ

**ನಂಚ ಯೋಗಶ್ಚ ಶೇಷೋನ್ಯೋ ಗಂಥವಿಸ್ತರಃ ||" ಇತ್ಯಾದಿಗಳಾಲೇ ಪ್ರಕರಣಾನ್ತರಙ್ಗಳಿಲುಮ್ ಸ್ತುತಿಕ್ಷಪ್ಪಟ್ಟದು "ಏತದ್ಧ್ಯಾನಂಚ ಧ್ಯೇಯಂಚ" ಎನ್ರು ಪಾಠಾಂತರಮ್.**

---

ಹೇಳಲ್ಪಟ್ಟಿತೆಂದು ಭಾವಿಸಿದರೆ **ಯೋಗಶ್ಚ** – ಅದಕ್ಕೆ ಪರಿಕರವಾದ ಕರ್ಮಯೋಗವೆಂದೂ ಅರ್ಥಮಾಡಬಹುದು. ಸಾರಸಙ್ಗ್ರಹ ವ್ಯಾಖ್ಯಾತೃವು ಧ್ಯಾನವೆಂದರೆ ಸಮಾಧಿ ಎಂದೂ, ಯೋಗವೆಂದರೆ ಚಿತ್ತವ್ಯಾಪಾರ ನಿರೋಧವೆಂದೂ ಅರ್ಥಮಾಡಿರುತ್ತಾರೆ. **ಧ್ಯಾನಯೋಗ** ಶಬ್ದಗಳಿಂದ ಒಟ್ಟಿನ ಅರ್ಥವು ಭಕ್ತಿಯೋಗವೂ ಆದಕ್ಕೆ ಬೇಕಾದ ಪರಿಕರವೇ ಮೊದಲಾದವು ಹೇಳಲ್ಪಟ್ಟವೆಂಬುದರಲ್ಲಿ ಸಂದೇಹವಿಲ್ಲವು. **ಶೇಷೋನ್ಯ**ಃ - ಮಿಕ್ಕ ಎಲ್ಲಾ ಪ್ರವೃತ್ತಿಯೂ, **ಗ್ರಂಥವಿಸ್ತರಃ** - ಗ್ರಂಥವನ್ನು ವಿಸ್ತರಿಸಬೇಕೆಂಬ ಅಭಿಪ್ರಾಯವಿದ್ದುದಾದರೆ ಇಟ್ಟುಕೊಳ್ಳಬಹುದು ; ಅವು ಯಾವುದರಿಂದಲೂ ಕೃತಕೃತ್ಯತೆಯುಂಟಾಗುವದಿಲ್ಲವೆಂಬ ಭಾವವು. **"ಅಶ್ವಮೇಧಸಹಸ್ರಾಣಿ ವಾಜಪೇಯ ಶತಾನಿಚ । ನ ತರನ್ತಿ ಜರಾಮೃತ್ಯೂ ನಿರ್ವಾಣಾಧಿಗನಾದ್ವಿನಾ"** ಎಂಬುದು ಇಲ್ಲಿ ಅನುಸಂಧೇಯವು. (ಭಾರ. ಅನು. ೨೪೪-೫೩) ಆದುದರಿಂದ ಇವೆಲ್ಲವೂ ಕೃತಕೃತ್ಯತೆಯನ್ನುಂಟುಮಾಡುವುದಿಲ್ಲವು. **ಇತ್ಯಾದಿಗಳಾಲೇ** – ಇವೇ ಮೊದಲಾದ ಪ್ರಮಾಣಗಳಿಂದ, **ಪ್ರಕರಣಾಂತರಙ್ಗಳಿಲುಮ್** – ಬೇರೆ ಪ್ರಕರಣಗಳಾದ ಯಜ್ಞಯಾಗಾದಿಗಳೇನು ಭಕ್ತಿಯೋಗವೇನು ಇತ್ಯಾದಿ ಪ್ರಕರಣಗಳಿಗಿಂತಲೂ ಉತ್ತಮವೆಂಬದಾಗಿ, **ಸ್ತುತಿಕ್ಕಪ್ಪಟ್ಟದು** – ಹೊಗಳಲ್ಪಟ್ಟಿರುತ್ತದೆ. **ಏತದ್ಧ್ಯಾನಂಚ ಯೋಗಶ್ಚ** ಎಂಬುದಕ್ಕೆ ಬದಲಾಗಿ **ಏತಧ್ಯಾನಂಚ ಧ್ಯೇಯಂಚ** ಎಂಬುದಾಗಿ ಪಾಠಾಂತರವು. ಯಾವುದು ಧ್ಯಾನಿಸಲ್ಪಡುತ್ತದೋ ಅದು ಧ್ಯೇಯವು. ಈ ಸಂದರ್ಭದಲ್ಲಿ ಭರಸಮರ್ಪಣ ಫಲವಾದ ಭಕ್ತಿಯೋಗಕ್ಕಾದರೆ ಧ್ಯಾನವೂ ಧ್ಯೇಯವೂ ಬೇಕು. ಧ್ಯಾನವು ಉಪಾಸನವು. ಧ್ಯೇಯವು ಪರಮಾತ್ಮನ ದಿವ್ಯಮಙ್ಗಳ ವಿಗ್ರಹದ ಸಾಕ್ಷಾತ್ಕಾರವು. ಈ ಭರನ್ಯಾಸಕ್ಕೆ ಇವು ಯಾವುವು ಬೇಕಿಲ್ಲವಾದುದರಿಂದ ಎಲ್ಲಾ ಭರನ್ಯಾಸವೆಂದೇ ಹೇಳಲ್ಪಟ್ಟಿತು. ಇತ್ಯಾದಿಗಳಾಲೇ ಎಂಬಲ್ಲಿನ ಆದಿಶಬ್ದದಿಂದ **"ಸಕೃದೇವ ಹಿ ಶಾಸ್ತ್ರಾರ್ಥಃ ಕೃತೋಽಯಂ ತಾರಯೇನ್ನರಮ್" "ಸತ್ಕರ್ಮನಿರತಾ ಶ್ಶುದ್ಧಾಸ್ಸಾಂಖ್ಯಯೋಗವಿದ ಸ್ತಥಾ । ನಾರ್ಹನ್ತಿ ಶರಣಸ್ಥಸ್ಯ ಕಲಾಂಕೋಟಿತಮಾಮಪಿ"** ಲಕ್ಷ್ಮೀತಂತ್ರ ೧೭-೬೨) **"ಸಮಿತ್ಸಾಧನಕಾದೀನಾಂ ಯಜ್ಞಾನಾಂ ನ್ಯಾಸಮಾತ್ಮನಃ । ನಮಸಾ ಯೋ ಕರೇ ದ್ದೇವೇ ಸ ಸ್ವಧ್ವರಇತೀರಿತಃ"** (ಅಹಿ. ಸಂ.) **"ತಸ್ಮಾನ್ನ್ಯಾಸ ಮೇಷಾಂ ತಪಸಾ ಮತಿರಿಕ್ತಮಾಹುಃ"** (ತೈ. ನಾರಾ) ಇತ್ಯಾದಿ ಪ್ರಮಾಣಗಳು ಸೂಚಿಸಲ್ಪಟ್ಟವು.

**"ವಸುರಣ್ಯೋ ವಿಭೂರಸಿ"** ಎಂಬ ತೈತ್ತರೀಯ ಕರಣಮನ್ತ್ರವೂ, **"ತದ್ವಿ**

ಇಶ್ಶ್ಲೋಕವುಮ್ ಸ್ವರೂಪ ಸಮರ್ಪಣ ಪರಮಾನಾಲುಮ್ ಇಙ್ಙು ಶೊಲ್ಲುಗಿರ ಭರಸಮರ್ಪಣ (ತ್ತಿಲು) ಮ್ ತದನುಪ್ರವಿಷ್ಟಮ್. ಇಪ್ಪಮ

---

ಶ್ಲೋ: ಪರಮ ಂಪದಂ ಎಂಬ ಕರಣ ಮನ್ತ್ರವೂ, "ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ...ಮುಮುಕ್ಷುರ್ವೈ ಶರಣ ಮಹಂ ಪ್ರಪದ್ಯೇ" ಎಂಬ ಮನ್ತ್ರವೂ ಹೀಗೆ ಇತರ ಭರಸಮರ್ಪಣ ಮನ್ತ್ರಗಳಿರುವಾಗ ಈ ದ್ವಯಮನ್ತ್ರಕ್ಕೆ ಮಾಹಾತ್ಮ್ಯೆಯು ಹೇಗೆ? ಎಂದರೆ ವ್ಯಕ್ತವಾಗಿ ಉಪದೇಶಿಸುತ್ತಾರೆ. ಹಿಂದೆ ಸಾಙ್ಗಪ್ರಪದನಾಧಿಕಾರದಲ್ಲಿ ಇತರ ಫಲಕ್ಕಾಗಿ ಮಾಡುವ ಶರಣಾಗತಿಗೂ ಮೋಕ್ಷಾರ್ಥವಾಗಿ ಮಾಡುವದಕ್ಕೂ ಆತ್ಮ ನಿಕ್ಷೇಪದಲ್ಲಿ ವೈಲಕ್ಷಣ್ಯ ಉಂಟೆಂದು ಉಪಪಾದಿಸಿದ ಸಂದರ್ಭದಲ್ಲಿ "ಅತ್ರ ರಕ್ಷಾಭರ ನ್ಯಾಸ ಸ್ಸಮ ಸ್ಸರ್ವಫಲಾರ್ಥಿನಾಮ್ । ಸ್ವರೂಪಫಲನಿಕ್ಷೇಪ ಸ್ತ್ವಧಿಕೋ ಮೋಕ್ಷಕಾಂಕ್ಷಿಣಾಮ್" ಎಂದು ಹೇಳಲ್ಪಟ್ಟಿತ್ತು; ಹೀಗೆ ಈ ಮನ್ತ್ರಗಳೆಲ್ಲಾ ಈ ಮೂರನ್ನೂ ಪ್ರಕಾಶಿಸಲಾರವೆಂದೂ ಈ ದ್ವಯಮನ್ತ್ರವೇ ಈ ಮೂರನ್ನೂ ವ್ಯಕ್ತಪಡಿಸಿ "ಶರಣ್ಯ ಶರಣಾಗತಿ ತತ್ಫಲಗಳನ್ನು ವಿಶದವಾಗಿ ಪ್ರಕಾಶಿಸುತ್ತದೆ" ಎಂದು ಮುಂದೆ ಉಪದೇಶಿಸುತ್ತಾರೆ. -- ಈ ಪಸುರಣ್ಯೋ ವಿಭಾವರಸಿ ಇತ್ಯಾದಿ ಶರಣಾಗತಿ ಮನ್ತ್ರಗಳು ಸ್ವರೂಪಸಮರ್ಪಣ ಪರವಾದವು; ಈ ದ್ವಯಮನ್ತ್ರವೂ ಸ್ವರೂಪಸಮರ್ಪಣವೆಂಬುದೂ ತೋರಿಬರುತ್ತದೆಂದು ತಿಳಿಸಿ, ಈ ಶರಣಾಗತಿಯನ್ನೂ ತತ್ಫಲಗಳನ್ನೂ ಆ ಮನ್ತ್ರಗಳು ಇದರಷ್ಟು ವಿಶದವಾಗಿ ವ್ಯಕ್ತಪಡಿಸಲಾರವೆಂದು ಹೇಳುತ್ತಾರೆ. ಇಶ್ಶ್ಲೋಕವುಮ್ - ಈ "ಸರ್ವೋಪಾಧಿವಿನಿರ್ಮುಕ್ತಂ" ಎನ್ನುವ ಶ್ಲೋಕವು, ಸ್ವರೂಪ ಸಮರ್ಪಣ ಪರಮಾನಾಲುಮ್ - ಜೀವಾತ್ಮಸ್ವರೂಪದ ಸಮರ್ಪಣವನ್ನು ಬೋಧಿಸುವಂತಾದ್ದಾದರೂ, ಇಙ್ಙು - ಈ ದ್ವಯಮನ್ತ್ರದಲ್ಲಿ ಶೊಲ್ಲುಗಿರ ಭರಸಮರ್ಪಣಮ್ - ಹೇಳುವದು ಭರಸಮರ್ಪಣವಾದರೂ, ಕೂಡ ತದನುಪ್ರವಿಷ್ಟಮ್ - ಅ ಸ್ವರೂಪ ಸಮರ್ಪಣವನ್ನೂ ಒಳಗೊಂಡದ್ದೇ ಆಗಿರುತ್ತದೆ. ಎಂದರೆ ಯಾವಾಗ ಆತ್ಮರಕ್ಷಾಭರಸಮರ್ಪಣವಾಯಿತೋ, ಆಗ ಆತ್ಮ ಸ್ವರೂಪ ಸಮರ್ಪಣೆಯಿಲ್ಲದೆ ಹೇಗೆ ರಕ್ಷಾಭರಸಮರ್ಪಣೆಯಾದೀತು ? ಆದುದರಿಂದ ತದನುಪ್ರವಿಷ್ಟಮ್ - ಎಂದು ಹೇಳಲ್ಪಟ್ಟಿತು. ಈ "ಪಸುರಣ್ಯೋ ವಿಭಾವರಸಿ" ಎಂಬ ಮನ್ತ್ರವು ಆತ್ಮಸ್ವರೂಪಸಮರ್ಪಣಪರವೆಂಬುದು ಹವಿರ್ಗೃಹೀತ್ವಾತ್ಮರೂಪಂ ಪಸುರಣ್ಯೇತಿ ಮನ್ತ್ರತಃ । ಜುಹುಯಾತ್ ಪ್ರಣವೇನಾಗ್ನೌ ಪಕ್ಷಿತಾರ್ಕ್ಷ್ಯೇ ಸನಾತನೇ" ಎಂಬ ಪ್ರಮಾಣದಿಂದ ವ್ಯಕ್ತವು. ಹಾಗೆಯೇ ಮಿಕ್ಕ ಕರಣ ಮನ್ತ್ರಗಳೂ ವ್ಯಕ್ತವಾಗಿ ಸ್ವರೂಪಸಮರ್ಪಣಪರವಾಗಿರುವಾಗ ಇವುಗಳನ್ನು ಬಿಟ್ಟು ಈ ದ್ವಯಮನ್ತ್ರಕ್ಕೆ ಮಾಹಾತ್ಮ್ಯೆಯು ಹೇಗೆ ? ಎಂದರೆ, ಈ ದ್ವಯವು ರಕ್ಷಾಭರ ಸಮರ್ಪಣವಾಗಿ ತೋರಿದರೂ ಸ್ವರೂಪಸಮರ್ಪಣವಿಲ್ಲದೆ ಭರಸಮರ್ಪಣೆಯು ಮೋಕ್ಷಾರ್ಥಿಯ ಸಂದರ್ಭದಲ್ಲಿ ಸಾಧ್ಯವಿಲ್ಲದುದರಿಂದ, ಅದೂ ಅಂತರ್ಗತವೇ

**ರ್ಪಣತ್ತುಕ್ಕು ನಿವೇದಯಿತಾತ ಸ್ವಾತ್ಮಾನಂ ವಿಷ್ಣೌ ಅಮಲತೇಜಸಿ। ತದಾತ್ಮಾ ತನ್ಮನಾಶ್ಶಾನ್ತ ಸ್ತದ್ವಿಷ್ಣೋಃ ರಿತಿಮನ್ತ್ರತಃ॥" ಎನ್ರು ವ್ಯಾಸ ಸ್ಮೃತ್ಯಾದಿಗಳಿಲುಮ್, ಶ್ವೇತಾಶ್ವರಾದಿಗಳಿಲುಮ್, ಶೊನ್ನ ಮನ್ತ್ರಾನ್ತರಙ್ಗಳಿಪ್ಪಡಿ ಶರಣ್ಯ ಶರಣಾಗತಿ ತತ್ಫಲಙ್ಗಳೈ ವಿಶದಮಾಗ ಪ್ರಕಾಶಿಪ್ಪಿಯಾದು. ತಿರುಮನ್ತ್ರತ್ತಿಲುಮ್ ಇ(ವೈ) ಮೂನ್ರುಮ್ ಸಂಕ್ಷಿಪ್ತಙ್ಗಳ್.**

---

ಎಂದು ಹೇಳಿದರು. ಮುಂದೆ ಈ ಇತರ ಮನ್ತ್ರಗಳಿಗಿಂತ ಈ ದ್ವಯಮನ್ತ್ರವೇ ಶ್ರೇಷ್ಠವು; ಏಕೆಂದರೆ ಶರಣ್ಯ ಶರಣಾಗತಿ ತತ್ಫಲಂಗಳನ್ನು ಪ್ರದರ್ಶಿಸುವ ರಕ್ಷಾಭರ ಸಮರ್ಪಣೆಯು ಆ ಮನ್ತ್ರಗಳಲ್ಲಿ ವ್ಯಕ್ತವಲ್ಲದೆ, ಇದರಲ್ಲಿ ಸುವ್ಯಕ್ತವಾದುದರಿಂದ, ಇದಕ್ಕೇ ಹೆಚ್ಚು ಮಾಹಾತ್ಮ್ಯವು ಎಂದು ಉಪಪಾದಿಸುತ್ತಾರೆ.—

**ಇಸ್ಸಮರ್ಪಣತ್ತುಕ್ಕು** – ಈ ಭರಸಮರ್ಪಣೆಗೆ, **ತದಾತ್ಮಾ** – ಆ ವಿಷ್ಣುವಿಗೇ ಶರೀರವಾಗಿ ಆತನನ್ನೇ ತನಗೆ ಆತ್ಮನಾಗಿ ಹೊಂದಿರುವ, ಆ ಕಾರಣದಿಂದ **ತನ್ಮನಾಃ** – ಆತನೇ ತನಗೆ ಶೇಷಿಯಾಗಿ ನಿಯಾಮಕನಾದುದರಿಂದ ಆತನನ್ನೇ ಸದಾ ಮನಸ್ಸಿನಲ್ಲಿ ಉಳ್ಳವನಾಗಿ ಎಂದರೆ ಏಕಾನ್ತ್ಯಮನಸ್ಕನಾಗಿ, **ಶಾನ್ತಃ** – ವಿಷಯಗಳಿಂದ ಚಿತ್ತವಿಕಾರವಿಲ್ಲದೆ ಮೋಕ್ಷಾರ್ಥಿಯು, **ಅಮಲತೇಜಸಿ** – ಎಲ್ಲಾ ತೇಜಸ್ಸುಗಳಿಗೂ ಪರಿಶುದ್ಧ ತೇಜೋರೂಪನಾದ, **ವಿಷ್ಣೌ** – ವಿಷ್ಣುವಿನಲ್ಲಿ, **ಸ್ವಾತ್ಮಾನಂ** - ತನ್ನ ಆತ್ಮಸ್ವರೂಪರೂಪವಾದ ಹವಿಸ್ಸನ್ನು, **ತದ್ವಿಷ್ಣೋಃ ರಿತಿಮನ್ತ್ರತಃ** "**ತದ್ವಿಷ್ಣೋಃ ಪರಮಂ ಪದ**" ಎಂಬ ಮನ್ತ್ರಮೂಲಕವಾಗಿ, **ನಿವೇದಯಿತಾತ**- ನಿವೇದನ ಮಾಡತಕ್ಕದ್ದು, ಸಮರ್ಪಿಸತಕ್ಕದ್ದು, **ಎನ್ರು** - ಎಂಬದಾಗಿ, **ವ್ಯಾಸ ಸ್ಮೃತಿ** ಮೊದಲಾದವುಗಳಲ್ಲೂ, ಮತ್ತು ಚತುರ್ಮುಖನು ಮಾಡಿದುದನ್ನು ಹೇಳುವ "**ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ**" ಎಂಬ **ಶ್ವೇತಾಶ್ವತರವೇ** ಮೊದಲಾದವುಗಳಲ್ಲೂ, **ಶೊನ್ನ ಮನ್ತ್ರಾನ್ತರಙ್ಗಳಿಲುಮ್** - ಹೇಳಲ್ಪಟ್ಟ ಇತರ ಮನ್ತ್ರಗಳಲ್ಲೂ, **ಶರಣ್ಯ ಶರಣಾಗತಿ ತತ್ಫಲಙ್ಗಳೈ**. ಸರ್ವರಕ್ಷಕನೂ ಅವನಲ್ಲಿ ಮಾಡುವ ಶರಣಾಗತಿ ಮತ್ತು ಅದರ ಫಲಗಳನ್ನೂ, ವಿಶದವಾಗಿ, **ಪ್ರಕಾಶಿಪ್ಪಿಯಾದ** - ಪ್ರಕಾಶಪಡಿಸುವದಿಲ್ಲವು. ದ್ವಯವಲ್ಲಾದರೋ ಈ ಮೂರೂ ವ್ಯಕ್ತವಾಗಿ ಪ್ರಕಾಶಪಡಿಸಲ್ಪಟ್ಟಿವೆ ಎಂದು ಮುಂದೆ ಹೇಳುತ್ತಾರೆ. ಮೊದಲು ಒಂದು ಪೂರ್ವಪಕ್ಷವು ಉದಿಸಬಹುದು ? ಏನೆಂದರೆ, ಮೂಲಮನ್ತ್ರದಲ್ಲಿ **ನಮಃ** ಎಂಬಲ್ಲಿಯೂ **ನಾರಾಯಣಾಯ** ಎಂಬಲ್ಲಿಯೂ ಇವುಗಳು ತೋರಿಬರುತ್ತವೆಯಲ್ಲವೇ, ಆ ಮನ್ತ್ರವೇ ಏಕೆ ಕೂಡದು? ಎಂದರೂ, ಅಲ್ಲಿಯೂ ಅಷ್ಟು ವಿಶದವಾಗಿ ಇಲ್ಲವು. ಸಂಕ್ಷೇಪವಾಗಿ ತೋರಿಬರುತ್ತವೆ ಎಂದು ತಿಳಿಸುತ್ತಾರೆ. **ತಿರುಮನ್ತ್ರತ್ತಿಲುಮ್** - ಮೂಲಮನ್ತ್ರದಲ್ಲೂ ಕೂಡ, **ಈ ಮೂನ್ರುಮ್**- ಈ ಸ್ವರೂಪಸಮರ್ಪಣ, ರಕ್ಷಾಭರಸಮರ್ಪಣ ಫಲಸಮರ್ಪಣ, ಹೀಗೆ ಮೂರೂ, **ಸಂಕ್ಷಿಪ್ತಙ್ಗಳ್** – ಸಂಕ್ಷೇಪವಾಗಿ, ಸೂಚಿತವು. ದ್ವಯಮನ್ತ್ರ

**ಆಗೈಯಾಲೇ ಪ್ರಾಪ್ಯಪ್ರಾಪಕ ವಿಶೇಷಙ್ಗಳೈ ಸಂಪೂರ್ಣವಾಗ ಪ್ರಕಾಶಿಪ್ಪಿಕ್ಕಿರ ಇದ್ವಯವೇ ಪ್ರಪತ್ತಿಮನ್ತ್ರಾನ್ತರಙ್ಗಳಿಲ್ಲಾತ್ತಿಲುಂ ಪ್ರಧಾನಮ್.**

---

ವಾದರೋ ಈ ಮೂರನ್ನೂ ವಿಶದವಾಗಿ ಪ್ರಕಾಶಪಡಿಸುವದರಿಂದ, ಇತರ ಶರಣ ಮನ್ತ್ರಗಳಿಗಿಂತ ವಿಶೇಷಾರ್ಥಗಳನ್ನು ಪ್ರದರ್ಶಿಸುವದರಿಂದ ಅವುಗಳಿಗಿಂತ ಹೆಚ್ಚು ಮಾಹಾತ್ಮ್ಯಯುಳ್ಳದೆಂದು ಮುಂದಿನವಾಕ್ಯದಿಂದ ತಿಳಿಸುತ್ತಾರೆ.—

**ಆಗೈಯಾಲ್** - ಹೀಗೆ ಈ ದ್ವಯಮನ್ತ್ರವು ಈ ಮೂರನ್ನೂ ಪ್ರಕಾಶಪಡಿಸುವದರಿಂದಲೇ **ಪ್ರಾಪ್ಯ ಪ್ರಾಪಕವಿಶೇಷಙ್ಗಳೈ**-ಎರಡು ಖಂಡದಿಂದಲೂ ಪ್ರಾಪಕ ಪ್ರಾಪ್ಯವಿಶೇಷಗಳನ್ನೂ, ಸಂಪೂರ್ಣವಾಗಿ ಪ್ರಕಾಶಪಡಿಸುವ, ಈ ದ್ವಯಮನ್ತ್ರವೇ **ಪ್ರಪತ್ತಿಮನ್ತ್ರಾನ್ತರಙ್ಗಳಿಲ್ಲಾತ್ತಿಲುಮ್** – ಮೇಲೆ ತಿಳಿಸಿದ "**ವಸುರಣ್ಯೋವಿಭೂರಸಿ**". "**ತದ್ವಿಷ್ಣೋಃ ಪರಮಂ ಪದಂ**" "**ಮುಮುಕ್ಷುರ್ವೈ ಶರಣ ಮಹಂ ಪ್ರಪದ್ಯೇ**" ಈ ಬೇರೆ ಮನ್ತ್ರಗಳಿಗಿಂತ, **ಪ್ರಧಾನಮ್** - ನಿರತಿಶಯ ಮಾಹಾತ್ಮ್ಯಯುಳ್ಳದ್ದು. ಇಲ್ಲಿ **ಪ್ರಾಪ್ಯ** - ಪರಿಪೂರ್ಣಬ್ರಹ್ಮಾನುಭವದೊಂದಿಗೆ ಪರಬ್ರಹ್ಮಪ್ರಾಪ್ತಿಯು, **ಪ್ರಾಪಕವೂ**, ಶರಣಾಗತಿಯನ್ನು ಅನುಷ್ಠಿಸುವಹಾಗೆ ಮಾಡುವ ಸಿದ್ಧೋಪಾಯ, ಸಾಧ್ಯೋಪಾಯ.

**ಶರಣಾಗತಿಗದ್ಯವು ಈ ದ್ವಯಮನ್ತ್ರದ ವ್ಯಾಖ್ಯಾನವೆಂದು ತಿಳಿಸುತ್ತಾರೆ.**

---

ಇಷ್ಟು ನಿರತಿಶಯ ಮಾಹಾತ್ಮ್ಯಯುಳ್ಳದು ಈ ಮನ್ತ್ರವಾದುದರಿಂದಲೇ ಶ್ರೀ ಯತಿವರ್ಯರು ತಮ್ಮ ಆಚಾರ್ಯರ ಮೂಲಕ ಇದರ ಪ್ರಭಾವವನ್ನರಿತವರಾಗಿ ಲೋಕಾನುಗ್ರಹದಲ್ಲಿ ವಿಶೇಷ ಮಮತೆಯುಳ್ಳ ಈ ಗುರುವರ್ಯರು ಇದರ ಅಮೋಘಾರ್ಥಗಳ ವಿವರಣೆಯಾಗಿ ತುಂಬಾ ವಿಸ್ತಾರವಾಗಿ ಅಲ್ಲದೆ ಸಂಗ್ರಹವಾಗಿ ಶರಣಾಗತಿ ಗದ್ಯವೆಂಬ ಅಮೋಘಾರ್ಥಗಳನ್ನು ಒಳಗೊಂಡಿರುವ ಗ್ರಂಥವನ್ನು, ಎಲ್ಲರೂ, ಪ್ರತಿದಿನದಲ್ಲೂ ಅನುಸಂಧಾನಮಾಡಿ ತದನುಗುಣವಾಗಿ ಅನುಷ್ಠಿಸಿ, ಆತ್ಮೋಜ್ಜೀವನವನ್ನು ಹೊಂದಲಿ ಎಂದು, ಅನುಗ್ರಹಿಸಿರುತ್ತಾರೆ. ಆದರಲ್ಲಿ ದ್ವಯಮನ್ತ್ರಾರ್ಥಗಳ ವಿವರಣೆಯನ್ನು ಕಾಣಬಹುದೆಂದು ಉಪಪಾದಿಸುವದರ ಮೂಲಕ, ಬರೀ ಶಾಸ್ತ್ರ ಮೂಲಕ ಮಾಹಾತ್ಮ್ಯ ಮಾತ್ರವೇ ಅಲ್ಲದೆ. ನಮ್ಮ ಮತೋದ್ಧಾರಕರಿಂದಲೂ ಪರಿಗೃಹೀತವಾದುದರಿಂದ ಇದಕ್ಕೆ ಸಂಪ್ರದಾಯ ಮಾಹಾತ್ಮ್ಯಯೂ ಉಂಟೆಂದು ಹೇಳುತ್ತಾರೆ. **ಇದಿನ್ ಅರ್ಥತ್ತೈ** - ಇದರಲ್ಲಿರುವ ಅರ್ಥಜಾತವೆಲ್ಲಾ, ಶ್ರುತಿ ಸ್ಮೃತಿ ಇತಿಹಾಸ ಪುರಾಣ ಭಗವಚ್ಛಾಸ್ತ್ರಗಳಲ್ಲಿ, **ಪ್ರಸಿದ್ಧಮಾನಪಡಿಯೇ** – ಮಾಹಾತ್ಮ್ಯಯನ್ನು ಹೊಂದಿರುವಹಾಗೆಯೇ, **ಸದಾಚಾರ್ಯಸಂಪ್ರದಾಯ ಕ್ರಮತ್ತಾಲೇ** . ಯಾಮುನಾರ್ಯ ಪೆರಿಯನಂಬಿ ಭಾಷ್ಯಕಾರರು ಅವರುಗಳಿಂದ ಅವರ ಶಿಷ್ಯರು ಹೀಗೆ ಸತ್‌ಸಂಪ್ರದಾಯಕ್ರಮದಿಂದ, ಬಂದುದನ್ನು ಗದ್ಯ

## ಶರಣಾಗತಿಗದ್ಯಸ್ಯ ದ್ವಯವ್ಯಾಖ್ಯಾನರೂಪತ್ವಂ ದರ್ಶಯತಿ.

**ಇದಿನ್ ಅರ್ಥತ್ತೈ ಶ್ರುತಿಸ್ಮೃತೀತಿಹಾಸ ಪುರಾಣ ಭಗವಚ್ಛಾಸ್ತ್ರಾದಿಗಳಿಲ್ ಪ್ರಸಿದ್ಧಮಾನ ಪಡಿಯೇ ಸದಾಚಾರ್ಯ ಸಂಪ್ರದಾಯ ಕ್ರಮತ್ತಾಲೇ ಗದ್ಯತ್ತಿಲೇ ವಿವರಿತ್ತರುಳಿನಾರ್.**

---

**ತ್ತಿಲೇ** - ಶ್ರೀ ಶರಣಾಗತಿ ಗದ್ಯದ (ವೃಹದ್ಗದ್ಯ) ವಿವರಿತ್ತರುಳಿನಾರ್ – ವಿವರಿಸಿ ಕೃಪೆ ಮಾಡಿರುತ್ತಾರೆ. ಹೀಗೆ ಈ ದ್ವಯಮಂತ್ರವೇ ಶರಣಾಗತಿಮನ್ತ್ರವಾಗಿ ಉಪಾದೇಯವಾಗಿರುವದಕ್ಕೆ ಶಾಸ್ತ್ರಬಲವೂ ಸಂಪ್ರದಾಯಬಲವೂ ಎರಡೂ ಉಂಟು. ಶಾಸ್ತ್ರಬಲವೂ ಅಗಾಧವಾದುದು ಏಕಂಪರ ಶ್ರುತಿಸ್ಮೃತಿ ಇತಿಹಾಸ ಪುರಾಣ ಭಗವಚ್ಛಾಸ್ತ್ರಗಳಲ್ಲಿ ದ್ವಯ ಬೋಧಿತ ಶರಣಾಗತಿಯು ಉಪಪಾದಿತವು.

ಶ್ರುತಿಗಳಲ್ಲಿ ಉಪಪಾದಿತವು.

೧. **ಕಠಶ್ರುತಿ**—೩೪೩೯ನೆಯ ಪುಟವನ್ನು ನೋಡಿ.

೨. **ತೈತ್ತಿರೀಯ** —ನಾರಾಯಣೀಯವು. "**ತಸ್ಮಾನ್ನ್ಯಾಸಮೇಷಾಂ ತಪಸಾಮತಿರಿಕ್ತಮಾಹುಃ**" ಮತ್ತು "**ಓಮಿತ್ಯಾತ್ಮಾನಂಯುಂಜೀತ**" **ಏತದ್ವೈ ಮಹೋಪನಿಷದಂ ದೇವಾನಾಂ ಗುಹ್ಯಂ ಯ ಏವಂ ವೇದ ಬ್ರಹ್ಮಣೋ ಮಹಿಮಾನಮಾಪ್ನೋತಿ.** ನ್ಯಾಸವೆಂದರೆ "**ಸನ್ನ್ಯಾಸನ್ಯಾಗ ಇತ್ಯುಕ್ತ್ವಾ ಶರಣಾಗತಿರಿತಿ ಹಿ**" ಎಂಬುದು ಅನುಸಂಧೇಯವು.

೩. **ಶ್ವೇತಾಶ್ವತರ**—"**ಸ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ**"

೪. **ಮುಂಡಕ**— "**ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ। ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್.**

ಸ್ಮೃತಿಗಳಲ್ಲಿ—೧. ಭಗವದ್ಗೀತೆಯೇ ಮುಖ್ಯವು. ಅಲ್ಲಿ ಹೇಳಿರುವದು ಎರಡು ಉಪಾಯಗಳು ಭಕ್ತಿಯೋಗದಲ್ಲಿ ಕರ್ಮಯೋಗಾದಿ ಸಹಕೃತ ಉಪಾಸನೆಯೂ, ಮತ್ತು ಶರಣಾಗತಿಯೂ, "ಶಾಧಿಮಾಂ **ತ್ವಾಂ ಪ್ರಪನ್ನಂ**" ಎಂದು ಆರಂಭದಲ್ಲೂ, ಮತ್ತು ಮಧ್ಯದಲ್ಲಿ "**ನಮಾಂ ದುಷ್ಕೃತಿನೋಮೂಢಾಃ**" ಎಂಬಲ್ಲಿ ನಾಲ್ಕು ಜನ ಬುದ್ಧಿ ಇಲ್ಲದವರು "**ನಪ್ರಪದ್ಯನ್ತೇ**" ಎಂದು ಹೇಳಿ, ನಾಲ್ಕು ಜನ ಸುಕೃತಿಗಳೂ "**ಭಜನ್ತೇ ಮಾಂ**" ಎಂದು ಹೇಳಿ, ಅನಂತರ "**ಬಹೂನಾಂ ಜನ್ಮನಾಮನ್ತೇ ಜ್ಞಾನವಾನ್ ಮಾಂ ಪ್ರಪದ್ಯತೇ**" ಬಹು ಜನ್ಮಗಳ ನಂತರ ಪ್ರಾಜ್ಞನಾದವನು ಶರಣಾಗತಿಯನ್ನೂ ಅನುಷ್ಠಿಸುವನೆಂದು ಹೇಳಿರುತ್ತದೆ. ಅನಂತರ ಕೊನೆಯಲ್ಲೂ "**ತಮೇವ ಶರಣಂಗಚ್ಛ**" ಎಂದೂ "**ಮಾಮೇಕಂ ಶರಣಂ ವ್ರಜ**" ಎಂದೂ ಹೇಳಿರುವದರಿಂದ ಭರನ್ಯಾಸಾರ್ಥವು ಪ್ರೋಕ್ತವು.

೨. **ವ್ಯಾಸಸ್ಮೃತಿಯು**—ಹಿಂದೆಯೇ ಉದಾಹೃತವು.

೩. ಶೌನಕಸ್ಮೃತಿಯು—"ವಾಚಃ ಪರಂ ಪ್ರಾರ್ಥಯಿತಾ ಪ್ರಪದ್ಯೇನ್ನಿಯತಂ ಶ್ರಿಯಂ" ಇಲ್ಲಿ ಶರಣಾಗತಿಯು ಲಕ್ಷ್ಮಿಯಲ್ಲೂ ಆಗಬಹುದೆಂದು ಬೋಧಿತವು. ಅಥವಾ ಪುರುಷಕಾರತ್ವೇನ ಶ್ರೀ ಯತಿವರ್ಯರು ಅನುಷ್ಠಿಸಿದಹಾಗೆ ಅನುಷ್ಠಿಸಿ ಅನಂತರ ನಾರಾಯಣನಲ್ಲಿ ಅನುಷ್ಠಿಸತಕ್ಕದ್ದೆಂಬುದು ಬೋಧಿತವು.

೪. ದಕ್ಷಸ್ಮೃತಿ—

ಸರ್ವೋಪಾಧಿ ವಿನಿರ್ಮುಕ್ತಂ ಕ್ಷೇತ್ರಜ್ಞಂ ಬ್ರಹ್ಮಣಿ ನ್ಯಸೇತ್ ।
ಏತದ್ಧ್ಯಾನಂಚ ಯೋಗಂಚ ಶೇಷೋನ್ಯೋ ಗ್ರಂಥವಿಸ್ತರಃ ॥

ಸಂಹಿತೆಗಳಲ್ಲಿ—

೧. ಪ್ರಶ್ನಸಂಹಿತೆ—"ವಾಕ್ಯೋ ದ್ವಿತೀಯಃ ಷಟ್ಪದಾಸಿ" ಎಂದಾರಂಭಿಸಿ ಒಂದೊಂದು ಪದದಲ್ಲೂ ಎಷ್ಟು ಅಕ್ಷರಗಳಿವೆ ಎಂಬುದನ್ನು ತಿಳಿಸಿ, ಪದಗಳ ಕ್ರಮವನ್ನು ಬೋಧಿಸಿ, "ತದ್ದ್ವಯಂ ಸಕೃದುಚ್ಚಾರಸ್ಸಂಸಾರವಿಮೋಚನಂ ಭವತಿ" ಎಂದೂ ದ್ವಯಾತ್ಪರತರೋ ಮನ್ತ್ರೋನಾಸ್ತಿ ಸರ್ವಪ್ರದೋ ನೃಣಾಂ।ಯಸ್ಯೋಚ್ಚಾರಣ ಮಾತ್ರೇಣ ಪರಾಂ ಸಿದ್ಧಿಮವಾಪ್ನುಯಾತ್" ಎಂದು "ಸಕೃದೇವ ಪ್ರಪನ್ನಸ್ಯ ಕೃತ್ಯಂ ನೈವಾನ್ಯದಿಷ್ಯತೇ । ಸಕೃಜ್ಜಪ್ತೇನ ಮನ್ತ್ರೇಣ ಕೃತಕೃತ್ಯಸ್ಸುಖೀ ಭವೇತ್"

೨. ಸನತ್ಕುಮಾರ ಸಂಹಿತೆ—

ಕಾಯೋನಿಷ್ಪಾಪ ಸಂಜಾತೋ ಯಸ್ಸಕೃಚ್ಛರಣಾಗತಃ ।
ತಂ ಮಾತಾಪಿತೃಹಂತಾರ ಮಪಿ ಪಾತಿ ಭವಾರ್ತಿಹಾ ॥

೩. ಅಹಿರ್ಬುಧ್ನ್ಯಸಂಹಿತೆ—

ತ್ವಮೇವೋಪಾಯ ಭೂತೋ ಮೇ ಭವೇತಿ ಪ್ರಾರ್ಥನಾಮತಿಃ ।
ಶರಣಾಗತಿ ರಿತ್ಯುಕ್ತಾ ಸಾ ದೇವೇಸ್ಮಿನ್ ಪ್ರಯುಜ್ಯತಾಮ್ ।
ಅನನ್ಯಸಾಧ್ಯೇ ಸ್ವಾಭಿಷ್ಟೇ ಮಹಾವಿಶ್ವಾಸಪೂರ್ವಕಮ್ ॥
ತದೇಕೋಪಾಯತಾ ಯಾಚ್ಞಾ ಪ್ರಪತ್ತಿ ಶ್ಶರಣಾಗತಿಃ ॥
ಯದ್ಯೇನ ಕಾಮಕಾಮೇನ ನಸಾಧ್ಯಂ ಸಾಧನಾನ್ತರೈಃ ।
ಮುಮುಕ್ಷುಣಾ ಯತ್ಸಾಂಖ್ಯೇನ ಯೋಗೇನ ನಚ ಭಕ್ತಿತಃ ।
ಪ್ರಾಪ್ಯತೇ ಪರಮಂ ಧಾಮ ಯತೋನಾವರ್ತತೇ ಯತಿಃ ।
ತೇನ ತೇನಾಪ್ಯತೇ ತತ್ತನ್ನ್ಯಾಸೇನೈವ ಮಹಾಮುನೇ ॥

ತಂತ್ರಗಳಲ್ಲಿ—೧. ಸಾತ್ತ್ವಿಕತಂತ್ರ—"ನಮಸ್ಕೃತ್ಯ ಗುರುಂ ದೀರ್ಘಪ್ರಣಾಮೈಸ್ತ್ರಿಭಿರಾದಿತಃ । ತತ್ಪಾದೌ ಗೃಹ್ಯ ಮೂರ್ಧ್ನಿ ಸ್ವೇ ವಿಧಾಯ ವಿನಯಾನ್ವಿತಃ । ಗೃಹ್ಣೀಯಾತ್ ಮನ್ತ್ರರಾಜಾನಂ ಮಾಂಗಚ್ಛೇಚ್ಛರಣಂ ನರಃ। ಅನೇನೈವತು ಮನ್ತ್ರೇಣ ಸ್ವಾತ್ಮಾನಂ ಮಯಿ ನಿಕ್ಷಿಪೇತ್ । ಮಯಿ ನಿಕ್ಷಿಪ್ತ ಕರ್ತವ್ಯಃ ಕೃತಕೃತ್ಯೋ ಭವಿಷ್ಯತಿ"

೨. **ಲಕ್ಷ್ಮೀತಂತ್ರ—"ಸತ್ಕರ್ಮನಿರತಾಶ್ಶುದ್ಧಾ ಸಾಂಖ್ಯಯೋಗ ವಿದಸ್ತಥಾ । ನಾರ್ಹನ್ತಿ ಶರಣಂ ತಸ್ಯ ಕಲಾಕೋಟಿತಮಾಮಪಿ"**

**ಇತಿಹಾಸ—ಶ್ರೀಮದ್ರಾಮಾಯಣದಲ್ಲಿ—"ಸಕೃದೇವ ಪ್ರಪನ್ನಾಯ ತವಾಸ್ಮೀತಿ ಯಾಚತೇ।ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ"** ಇತ್ಯಾದ್ಯನೇಕ ಕಡೆಗಳಲ್ಲಿ. ಇದು ಶರಣಾಗತಿ ಗ್ರಂಥವು.

ಭಾರತದಲ್ಲಿ—"**ಸರ್ವೇಷಾಮೇವಭೂತಾನಾಂ ಪಿತಾ ಮಾತಾ ಚ ಮಾಧವಃ। ಗಚ್ಛಧ್ವಮೇನಂ ಶರಣಂ ಶರಣ್ಯಂ ಪುರುಷರ್ಷಭಾಃ**"

೩. **ಭಗವದ್ಗೀತೆಯಲ್ಲಿ**—ಹಿಂದೆಯೇ ಉಪಪಾದಿತವು.

**ಪುರಾಣಗಳಲ್ಲಿ**—೧. ವಿಷ್ಣುಪುರಾಣ—"ತ್ವಮಾತಾಶ್ಶರಣಂ ವಿಷ್ಣೋ ಪ್ರಯಾತಾ ದೈತ್ಯನಿರ್ಜಿತಾಃ।ವಯಂ ಪ್ರಸೀದ ಸರ್ವಾತ್ಮನ್ ತೇಜಸಾ ಪ್ಯಾಯಸ್ವ ನಃ । ತಾವದಾರ್ತಿ ಸ್ತಥಾವಾಂಛಾ ತಾವನ್ಮೋಹಸ್ತಥಾಸುಖಮ್ । ಯಾವನ್ನಯಾತಿ ಶರಣಂ ತ್ವಾ ಮಶೇಷಾಘನಾಶನಮ್"

೨. ಪಾದ್ಮಪುರಾಣ— ಭಗವಂತನು "**ಅಹೋ ದ್ವಯಸ್ಯ ಮಾಹಾತ್ಮ್ಯಂ ಮಹಾವೀರ್ಯಂ ಮಹಾಬಲಮ್**" ಎಂದಾರಂಭಿಸಿ ಚತುರ್ಮುಖನಿಗೆ ದ್ವಯಮಾಹಾತ್ಮ್ಯೆಯನ್ನು ಕೊಂಡಾಡಿ ಹೇಳುತ್ತಾರೆ. **ಭಗವಾನ್ ಕೇನಮನ್ತ್ರೇಣ ಸಂಸಾರೋತ್ತಾರಣಂ ಭವೇತ್** ಎಂದು ಪ್ರಶ್ನಿಸಿದುದಕ್ಕೆ ಮೇಲಿನ ವಾಕ್ಯವು ಉತ್ತರವು. **ಸಾಧು ಪೃಷ್ಟಂ** ಎಂದು ಶ್ಲಾಘಿಸಿ, ಮುಂದೆ ಹೇಳುತ್ತಾರೆ. **ಸರ್ವೇಷಾಮೇವ ಮನ್ತ್ರಾಣಾಂ ಮನ್ತ್ರರತ್ನಂ ಶುಭಾವಹಮ್ । ಸಕೃತ್ಸ್ಮರಣ ಮಾತ್ರೇಣ ದದಾತಿ ಪರಮಂ ಪದಮ್ । ಮನ್ತ್ರರತ್ನಂ ದ್ವಯಂ ನ್ಯಾಸಃ ಪ್ರಪತ್ತಿ ಶ್ಶರಣಾಗತಿಃ । ತಸ್ಯೋಚ್ಚಾರಣಮಾತ್ರೇಣ ಪರಿತುಷ್ಟೋಸ್ಮಿನಿತ್ಯಶಃ**" ಎಂದು ಹೇಳಿ, ಹೀಗೆ ಬ್ರಹ್ಮ, ನಾರದ, ಪರಾಶರಾದಿಗಳ ಮೂಲಕ ಪರಂಪರಯಾ ಬಂದ ಲಘೂಪಾಯವು.

೩. ವರಾಹ **ಪುರಾಣ**—"**ಮತ್ಪದದ್ವಂದ್ವ ಮೇಕಂ ಯೇ ಪ್ರಪದ್ಯನ್ತೇ ಪರಾಯಣಮ್ । ಉದ್ಧರಿಷ್ಯಾಮ್ಯಹಂ ದೇವಿ ಸಂಸಾರಾತ್ಸ್ವಯ ಮೇವತಾನ್**"॥

೪. ಬ್ರಹ್ಮ**ಪುರಾಣ**—"**ಶರಣಂ ತ್ವಾಂ ಪ್ರಪನ್ನಾಯೇ ಧ್ಯಾನಯೋಗ ವಿವರ್ಜಿತಾಃ। ತೇಪಿ ಮೃತ್ಯು ಮತಿಕ್ರಮ್ಯ ಯಾನ್ತಿತದ್ವೈಷ್ಣವಂ ಪದಮ್** ॥

೫. ಭಾಗವತ **ಪುರಾಣ**—ಉದ್ಧವರಿಗೆ ಶ್ರೀ ಕೃಷ್ಣಭಗವಾನರವರು ಮೊದಲು ಭಗವದ್ಗೀತೆಯಲ್ಲಿ ಹೇಳಿರುವ ಹಾಗೆ ಉಪಾಸನರೂಪೋಪಾಯವನ್ನು ಹೇಳಿ, ಹೀಗೆ ಮುಕ್ತಿಯನ್ನು ಹೊಂದುವರು ಅತ್ಯಲ್ಪವಾದುದರಿಂದ ನನ್ನ ಕೃಪಾ ಸಹ ಅತ್ಯಲ್ಪವಾದುದೆಂದು ತಿಳಿಯಬೇಡ. ನನ್ನ ಕೃಪೆಯು ಅಪಾರವಾದುದೆಂದು ಅನೇಕ ನೀಚ ಜಾತಿಯಲ್ಲಿ ಹುಟ್ಟಿದವರು ಸ್ತ್ರೀ, ಮೃಗ ಪಕ್ಷಿ ಮೊದಲಾದವೆಲ್ಲಾ ಬಹು ಸುಲಭವಾಗಿ ನನ್ನ ಕೃಪೆಗೆ ಪಾತ್ರರಾಗಿರುತ್ತಾರಾದುದರಿಂದ ನೀನೂ ಸಹ, "**ತಸ್ಮಾತ್ತ್ವ ಮುದ್ಧವೋತ್ಸೃಜ್ಯ ಚೋದನಾಂ ಪ್ರತಿಚೋದನಾಮ್**।ಎಂದು ಆರಂಭಿಸಿ

ಎಙ್ಗನೇ ಎನ್ನಿಲ್ ? "ಭಗವನ್ನಾರಾಯಣಾಭಿಮತಾನುರೂಪ ಸ್ವರೂಪ ರೂಪ" ಎನ್ರು ತುಡಙ್ಗಿ ಶ್ರೀಮಚ್ಛಬ್ದಾಭಿ ಪ್ರೇತಾರ್ಥತ್ತೈ ಅರುಳಿಚ್ಚೆಯ್ದಾರ್.

---

**ಮಾಮೇಕಮೇವ ಶರಣಮಾತ್ಮಾನಂ ಸರ್ವದೇಹಿನಾಮ್ । ಯಾಹಿ ಸರ್ವಾತ್ಮಭಾವೇನ ಯಾಸ್ಯಸ್ಯ ಕುತೋಭಯಮ್ ॥** ಎಂದು ಉಪದೇಶಿಸಿರುತ್ತಾರೆ.

ಹೀಗೆ ಅನೇಕ ಪ್ರಮಾಣಗಳನ್ನು ಉದಾಹರಿಸಿದುದು ಏಕೆ ? ಒಂದೆರಡು ಸಾಲದೇ ? ಎಂದರೆ, ನಮ್ಮಲ್ಲೇ ಕೆಲವರೂ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತಿಗಳಲ್ಲದವರೂ ಸಹ, ಶರಣಾಗತಿಯು ಉಪಾಯವೇ ಅಲ್ಲವು; ಶರಣಾಗತಿಯನ್ನು ಕೊಂಡಾಡಿರುವದು ಅತಿಶಯೋಕ್ತಿಯು, ಉಪಾಸನವೊಂದೇ ಉಪಾಯವು; ಎಂದು ಹೀಗೆಲ್ಲಾ ಹೇಳುವ ವಾದ ನಿರಸನಕ್ಕಾಗಿ ಎಂದು ಭಾವಿಸತಕ್ಕದ್ದು.

ಇಷ್ಟು ಪ್ರಮಾಣಗಳೆಲ್ಲವನ್ನೂ ಮನಸ್ಸಿನಲ್ಲಿಟ್ಟೇ " **ಶ್ರುತಿಸ್ಮೃತೀತಿಹಾಸ ಪುರಾಣ ಭಗವಚ್ಛಾಸ್ತ್ರಾದಿಗಳಿಲ್ ಪ್ರಸಿದ್ಧಮಾನ** ಎಂಬ ಪ್ರಯೋಗವು. ಹೀಗೆ ಬಹು ಶಾಸ್ತ್ರ ಪ್ರಮಾಣಬಲವಿರುವದರಿಂದಲೇ ಯಾಮುನಮುನಿ ಮೊದಲುಗೊಂಡು ಪೆರಿಯನಂಬಿ, ತಿರುಕ್ಕೋಟ್ಟಿಯೂರ ನಂಬಿ ಮೊದಲಾದವರು ಈ ಉಪಾಯವನ್ನು ಅವಲಂಬಿಸಿದುದರಿಂದ, ನಮ್ಮ ದರ್ಶನಸ್ಥಾಪಕರೂ ಕೊಂಡಾಡಿ, ಅನುಷ್ಠಿಸಿರುವದರಿಂದ, ಹೀಗೆ ಸತ್ಸಂಪ್ರದಾಯದ ಬಲವೂ ಇದಕ್ಕೆ ಉಂಟಾಗಿರುವದರಿಂದಲೂ, ಇದು ಪರಮ ಗ್ರಾಹ್ಯವು.

ಹಾಗೆ ಶ್ರೀ ಯತಿವರ್ಯರೂ ಈ ದ್ವಯಮಂತ್ರಕ್ಕೇ ಪ್ರಾಧಾನ್ಯವನ್ನು ಕೊಟ್ಟಿರುವದು ಎಲ್ಲಿ? ಎಂದರೆ, ಅವರ ಶರಣಾಗತಿ ಗದ್ಯವೇ ಈ ದ್ವಯಮಂತ್ರದ ವಿವರಣೆಯೆಂದು ಉಪಪಾದಿಸುತ್ತಾರೆ.—ಪ್ರಥಮಃ ದ್ವಯಮಂತ್ರದ "ಶ್ರೀಮತ್" ಶಬ್ದದ ಅರ್ಥದ ಉಪಪಾದನೆಯನ್ನು ವ್ಯಕ್ತಪಡಿಸುತ್ತಾರೆ.—**ಭಗವನ್ನಾರಾಯಣಾಭಿಮತಾನುರೂಪ**" ಎಂದು ತುಡಙ್ಗಿ - ಆರಂಭಿಸಿ **ಶ್ರೀಮಚ್ಛಬ್ದಾಭಿಪ್ರೇತಾರ್ಥತ್ತೈ**-ದ್ವಯದ "ಶ್ರೀಮತ್" ಎಂಬ ಶಬ್ದದಿಂದ ತೋರಿಬರುವ ಅಭಿಪ್ರಾಯವನ್ನು, **ಅರುಳಿಚ್ಚೆಯ್ದಾರ್** - ಕೃಪೆ ಮಾಡಿ ಉಪದೇಶಿಸಿದರು. ದ್ವಯದ ಪೂರ್ವಖಂಡಾರ್ಥವು ಸಙ್ಗ್ರಹವಾಗಿ ಏನೆಂದರೆ –"ಲಕ್ಷ್ಮೀಯುಕ್ತನಾದ ನಾರಾಯಣನ ಪಾದಗಳನ್ನು ನಾನು ಉಪಾಯವಾಗಿ ಆಶ್ರಯಿಸಿರುತ್ತೇನೆ" ಎಂಬದಾಗಿ. ಇಲ್ಲಿ **ಲಕ್ಷ್ಮೀಯುಕ್ತನಾದ** ಎಂದು ಹೇಳಿರುವದರಿಂದ ತೋರಿಬರುವ ಅರ್ಥಗಳನ್ನು ವಿವರಿಸುತ್ತಾರೆ.

೧. ಶರಣಾಗತಿಯು ಅಪರಾಧ ಪರಿಹಾರಕ್ಕಾಗಿಯಾದುದರಿಂದ ಮೊದಲು ಅನುಗ್ರಹಮಯಳಾಗಿ ಪತಿವಾಂಛಾತಿಶಯವನ್ನು ಹೊಂದಿರುವಳಲ್ಲಿ ಪುರುಷಕಾರತ್ವೇನ ಶರಣಾಗತಿಯನ್ನು ಅನುಷ್ಠಿಸಿ, ಅನಂತರ ಶಾಸ್ತಾವಾದ ನಾರಾಯಣನಲ್ಲಿ ಮಾಡತಕ್ಕದ್ದು ವಿಹಿತವೆಂದು ತೋರಿಬರುತ್ತದೆ.

"ಅಖಿಲಹೇಯ ಪ್ರತ್ಯನೀಕ" ಇತ್ಯಾದಿಯಾಲೇ ಸ್ವರೂಪರೂಪಗುಣ ವಿಭೂತಿಗಳೈ ಪ್ಪರಕ್ಕವರುಳಿಚ್ಚೆಯ್‌ಗೈಯಾಲೇ ನಾರಾಯಣ ಶಬ್ದಾರ್ಥಮ್

---

೨. ಈಕೆಯು "ಅಖಿಲಜಗನ್ಮಾತಾ" ಆದುದರಿಂದ ನಮಗೂ ಮಾತಾ. ಮಗನು ಅಪರಾಧಿಯಾಗಿ ತಂದೆಯು ಶಿಕ್ಷಿಸಲು ಯತ್ನಿಸಿದರೆ ಅದನ್ನು ತಪ್ಪಿಸುವ ಶಕ್ತಿಯುಳ್ಳವಳು ಎಂದು ಏರ್ಪಡುವದರಿಂದ, ಇಬ್ಬರೂ **ಸಿದ್ಧೋಪಾಯರು.**

೩. ಈಕೆಯೂ ಭಗವಂತನಹಾಗೆ ಆಶ್ರಯಿಸಲು ಅನುರೂಪವಾದ ಸ್ವರೂಪ ರೂಪಗುಣ, ವಿಭವ, ಐಶ್ವರ್ಯಾದಿಗಳನ್ನು ಹೊಂದಿದವಳು. ಇದನ್ನು ಪ್ರಾಜ್ಞನಾದ ಆಂಜನೇಯನು "ತುಲ್ಯಶೀಲವಯೋವೃತ್ತಾಂ ತುಲ್ಯಾಭಿಜನಲಕ್ಷಣಾಮ್ । **ರಾಘವೋರ್ಹತಿ ವೈದೇಹೀಂ ತಂಚೇಯಮಸಿತೇಕ್ಷಣಾ**" (ರಾ. ಸುಂ. ) ಎಂದು ವ್ಯಕ್ತಪಡಿಸಿ. ಈಕೆಯೂ ತನ್ನ ಪತಿಗೆ ಅನುಗುಣವಾದ, ಸ್ವರೂಪ, ದಿವ್ಯ ಮಙ್ಗಳ ವಿಗ್ರಹ, ಕಲ್ಯಾಣಗುಣಗಣ ವಿಭೂತಿ ಎಲ್ಲವನ್ನೂ ಹೊಂದಿರುವವಳು ಎಂದು ಉಪಪಾದಿಸಿರುತ್ತಾರೆ.

೪ ಇಬ್ಬರೂ ಒಟ್ಟಿಗೇ ಇರುವವರು ; ಇಬ್ಬರೂ ಸೇರಿಯೇ ಪರತತ್ವವೆಂದು **"ಶ್ರೀಮಾನ್ನಾರಾಯಣೋ ನಿಃ ಪತಿರಖಿಲತನುಃ ಮುಕ್ತಿದೋ ಮುಕ್ತಭೋಗ್ಯಃ"** ಎಂದು ಹಿಂದೆಯೇ ಸಿದ್ಧಾಂತಿಸಿರುವವರಿಂದಲೂ, ಶ್ರೀಮಚ್ಛಬ್ದಪ್ರಯೋಗವು. ಆದು ದರಿಂದ ಈಕೆಗೂ ಸರ್ವ ವ್ಯಾಪ್ತಿಯೂ, ಸರ್ವಾತ್ಮಕತ್ವವೂ, ಸರ್ವನಿಯನ್ತೃತ್ವವೂ, ಸರ್ವೋಪಾಯತ್ವವೂ, ಸರ್ವರಕ್ಷಕತ್ವವೂ, ಹೀಗೆ ಜಗತ್ತಿನ ಸರ್ವವಿಧ ಪ್ರವೃತ್ತಿಯಲ್ಲೂ **ಸಹಧರ್ಮಚರೀ** ಯಾಗಿರುವ ಭಾವವೂ ದ್ಯೋತಿತವು.

ಮುಂದೆ ಗದ್ಯದಲ್ಲಿ "**ಅಖಿಲ** ಹೇಯ **ಪ್ರತ್ಯನೀಕ**" ವೆಂದಾರಂಭಿಸಿದ ವಾಕ್ಯದಿಂದ ದ್ವಯಮನ್ತ್ರದ ಮುಂದಿನ ಪದವಾದ ನಾರಾಯಣ ಶಬ್ದಾರ್ಥವನ್ನು ವಿವರಿಸುತ್ತಾರೆಂದು ಹೇಳುತ್ತಾರೆ.—**ಅಖಿಲ** ಹೇಯ **ಪ್ರತ್ಯನೀಕ ಇತ್ಯಾದಿಯಾಲೇ** – ಎಂಬಿವೇ ಮೊದಲಾದ ವಾಕ್ಯದಿಂದ, ಸ್ವರೂಪ, ರೂಪವೆಂದರೆ ದಿವ್ಯಮಙ್ಗಳ ವಿಗ್ರಹ, ಕಲ್ಯಾಣಗುಣ, ವಿ**ಭೂತಿಗಳೈ** – ನಿಯಾಮ್ಯವರ್ಗಗಳನ್ನು, ಪರ**ಕ್ಕ** – ಚನ್ನಾಗಿ, ಅರುಳಿ**ಚ್ಚೆ**ಯ್ **ಗೈ**ಯಾಲೇ - ಕೃಪೆಮಾಡಿ, ಹೇಳಿರುವದರಿಂದ, ದ್ವಯ ದಲ್ಲಿ ಶ್ರೀಮಚ್ಛಬ್ದದಿಂದ, ಕೂಡಿದ ನಾರಾಯಣಶ**ಬ್ದಾರ್ಥವು, ವ್ಯಾಖ್ಯಾತಮಾಯಿತ್ತು** - ವ್ಯಾಖ್ಯಾನ ಮಾಡಲ್ಪಟ್ಟಿತು. ಗದ್ಯದಲ್ಲಿ "ಜ್ಞಾನಾನಂ**ದೈಕ ಸ್ವರೂಪ**" ವೆಂಬುವವರಿಗೆ ಸ್ವರೂಪವೂ, "**ಅನನ್ತಗುಣ** ನಿಧಿದಿವ್ಯರೂಪ" ವೆಂಬುವವರೆಗೂ ರೂಪವೂ, "**ಕಲ್ಯಾಣಗುಣಗಣೌಘ** ಮಹಾರ್ಣವ" ವೆಂಬುವವರೆಗೆ ಗುಣವೂ, **ನಿಖಿಲ ಜಗದು**ದಯ ವಿ**ಭಯ** ಲಯಲೀ**ಲ"** ವೆಂಬುದರಿಂದ ವಿಭೂತಿ **ಮೊದ ಲಾದವು** ಹೇಳಲ್ಪಟ್ಟಿತು. ಇವೆಲ್ಲಾ ನಾರಾಯಣ ಶಬ್ದದ **ನಾರ** ಪದವು ನಿತ್ಯವಾದ

**ವ್ಯಾಖ್ಯಾತನಾಯಿತ್ತು. ಮುರ್ಪಡ ಪಿರಾಟ್ಟಿಯೈ ಚ್ಚೊಲ್ಲಚ್ಚೆಯ್‌ದೇ ಪುರುಷ ಕಾರತ್ವ ನಿರ್ವಾಹಾರ್ಥಮಾಗ ವಿಭೂತಿ ಮಧ್ಯತ್ತಿಲ್ ನಿಲ್ಕೈ ತೋತ್ತುಗೈಕ್ಕಾಗ ಮೀಣ್ಡುಮ್ ನಾರಾಯಣ ಶಬ್ದತ್ತಿನ್ ವ್ಯಾಖ್ಯಾನತ್ತಿಲುಮ್ ಅರುಳಿಚ್ಚೆಯ್ ದಾರ್.**

---

ವುಗಳನ್ನು ಬೋಧಿಸುವದರಿಂದ ಇವೆಲ್ಲವೂ ನಾರಾಯಣ ಶಬ್ದಾರ್ಥ ವ್ಯಾಖ್ಯಾನ ವೆಂದು ಉಪದೇಶಿಸಿರುತ್ತಾರೆ.

**ಮುರ್ಪಡ** - ಮೊದಲೇ ಗದ್ಯದಲ್ಲಿ ಶ್ರೀ ಶರಣಾಗತಿಯ ಸಂದರ್ಭದಲ್ಲಿ, **ಪಿರಾಟ್ಟಿಯೈ** - ಲಕ್ಷ್ಮಿಯನ್ನು, **ಚೊಲ್ಲಚ್ಚೆಯ್‌ದೇ** - ಹೇಳಿದ್ದರೂ, **ಪುರುಷಕಾರತ್ವ ನಿರ್ವಾಹಾರ್ಥಮಾಗ** – ತಾನು ಪತಿಗೆ ಶೇಷಭೂತಳಾಗಿರುವದರ ಮೂಲಕ ಪ್ರಾಪ್ತವಾದ ಪುರುಷಕಾರರೂಪ ಅಧಿಕಾರದ ನಿರ್ವಾಹಕ್ಕಾಗಿ, **ವಿಭೂತಿಮಧ್ಯತ್ತಿಲ್** - **ನಿಲ್ಕೈ** – ವಿಭೂತಿಯ ಮಧ್ಯದಲ್ಲಿರುವವಳು ಎಂದರೆ ವಿಭೂತಿಗೆ ಸೇರಿದವಳೆಂದು **ತೋತ್ತುಗೈಕ್ಕಾಗ**. ಪ್ರದರ್ಶಿಸುವದಕ್ಕಾಗಿ, **ಮೀಣ್ಡುಮ್** - ಪುನಃ, **ನಾರಾಯಣ ಶಬ್ದತ್ತಿನ್ ವ್ಯಾಖ್ಯಾನತ್ತಿಲುಮ್ ಅರುಳಿಚ್ಚೆಯ್‌ದಾರ್** - ನಾರಾಯಣ ಶಬ್ದದ ವ್ಯಾಖ್ಯಾನದಲ್ಲೂ ಕೃಪಯಾ ಉಪದೇಶಿಸಿರುತ್ತಾರೆ. ಪರತತ್ವದಲ್ಲೇ ಸೇರಿ ನಿತ್ಯಾನಪಾಯಿನಿಯಾದವಳು ಲಕ್ಷ್ಮಿಯು, ಪರಮಾತ್ಮನ ಹಾಗೆಯೇ ಎಲ್ಲವನ್ನೂ ವ್ಯಾಪಿಸಿರುವವಳು. ಹೀಗಿರುವಾಗ ಪುರುಷಕಾರತ್ವವು ಏಕೆ ? ಎಂದರೆ ಲಕ್ಷ್ಮಿಯು ಪರಮಾತ್ಮನಿಗೆ ಶೇಷಭೂತಳು, **"ಮಚ್ಛೇಷಭೂತಾ ಸರ್ವೇಷಾ ಮೀಶ್ವರೀ ವಲ್ಲಭಾ ಮಮ । ಅಸ್ಯಾ ಮಮ ಚ ಶೇಷಂ ಹಿ ವಿಭೂತಿರುಭಯಾತ್ಮಿಕಾ"** ಎಂಬಲ್ಲಿಯೂ **"ಆಸಂದೇಶಾತ್ತು ರಾಮಸ್ಯ"** ಮತ್ತು **"ಭರ್ತಾರಮನುಗಚ್ಛನ್ತೀ"** **"ಭರ್ತಾ ಹಿ ಮಮ ದೈವತಂ"** ಇತ್ಯಾದಿ ಸೀತಾವಾಕ್ಯದಲ್ಲಿಯೂ, ವ್ಯಕ್ತವು. ಹಾಗೆಯೇ ರುಕ್ಮಿಣಿಯೂ ತನ್ನ ಪತಿಯೊಂದಿಗೆ ನಡೆದ ನರ್ಮೋಕ್ತಿಯಲ್ಲಿ ತನ್ನ ಪತಿ ಪಾರತಂತ್ರ್ಯವನ್ನು ಬಹು ಚನ್ನಾಗಿ ಉಪಪಾದಿಸಿರುತ್ತಾಳೆ. **ಕ್ವಸ್ವೇ ಮಹಿಮ್ನ್ಯಭಿರತೋ ಭಗವಾನ್ ತ್ರ್ಯಧೀಶಃ ಕ್ವಾಹಂ ಗುಣಪ್ರಕೃತಿ ರಜ್ಞಗೃಹೀತ ಪಾದಾ"** (ಭಾಗ. ೧೦-೬೦-೩೪) ಸ್ವತಂತ್ರನಾಗಿರುವದರಿಂದ ತನ್ನ ಮಹಿಮೆಯಿಂದ ತ್ರಿಲೋಕಾಧಿಪತ್ಯವನ್ನು ವಹಿಸಿರುವ ನೀನೆಲ್ಲಿ ? ನಿನಗೆ ಪರತಂತ್ರಳಾದ ನಾನು ಎಲ್ಲಿ ? ಆಗಲಿ ಬ್ರಹ್ಮಾದಿ ದೇವತೆಗಳೆಲ್ಲಾ ನಿನ್ನನ್ನೂ ಸ್ತುತಿಸಿ, ಸ್ವತಂತ್ರವಾಗಿ ನಿನ್ನಲ್ಲೂ ಶರಣಾಗತಿಯನ್ನು ಮಾಡಿದ್ದಾರಲ್ಲಾ ಎಂದರೆ ಅದಕ್ಕೆ ಪ್ರತ್ಯುತ್ತರವನ್ನು ನರ್ಮೋಕ್ತಿರೂಪವಾಗಿಯೇ ಹೇಳುತ್ತಾಳೆ. **ಅಹಂ ಗುಣ ಪ್ರಕೃತಿಃ** ನಾನು ನಿನ್ನ ಗುಣಾನುವರ್ತಿನಿಯಾದುದರಿಂದ ನಿನ್ನ ಇಷ್ಟಾನುಸಾರ ನಡೆಯುವ ಸ್ವಭಾವವುಳ್ಳವಳು, **ಅಜ್ಞ ಗೃಹೀತಪಾದಾ** - ಬ್ರಹ್ಮಾದಿ ದೇವತೆಗಳಲ್ಲಿ ಕೆಲವರು ನನ್ನಲ್ಲಿ ಸ್ವತಂತ್ರಿಸಿ ಶರಣಾಗತಿಯನ್ನು ಮಾಡಿಬಿಟ್ಟರು, ಅವರು ತಿಳಿಯದವರು, ಅಂತವರಿಂದ ಹಿಡಿಯ

ಲ್ಪಟ್ಟ ಪಾದವುಳ್ಳವಳೆಂದು ತನ್ನ ಪರಶೇಷಿತ್ವವನ್ನೂ, ಪತಿಶೇಷತ್ವವನ್ನೂ ಪ್ರಕಟೀಕರಿಸಿರುತ್ತಾಳೆ. ಅಜ್ಞರೆಂದು ಹೇಳಿರುವದು ನರ್ಮೋಕ್ತಿಯಾದುದರಿಂದ ಪ್ರಾಜ್ಞರೇ ಹಾಗೆ ಶ್ರೀ ಶರಣಾಗತಿಯನ್ನು ಮಾಡುವವರು ಎಂಬ ಭಾವವು. ಶ್ರೀ ಶರಣಾಗತಿಗದ್ಯದಲ್ಲಿ ಪುನಃ ಎಲ್ಲಿ ವಿಭೂತಿ ಮಧ್ಯದಲ್ಲಿ ಲಕ್ಷ್ಮಿಯನ್ನೂ ಸೇರಿಸಿ ಹೇಳಿರುತ್ತಾರೆ ? ಎಂದರೆ **"ಸ್ವಾಭಿಮತ ನಿತ್ಯ ನಿರವದ್ಯಾನುರೂಪ ಸ್ವರೂಪರೂಪಗುಣ ವಿಭವೈಶ್ವರ್ಯ ಶೀಲಾದ್ಯನವಧಿಕಾತಿಶಯಾ ಸಂಖ್ಯೇಯ ಕಲ್ಯಾಣಗುಣಗಣ ಶ್ರೀ ವಲ್ಲಭ"** ಎಂಬಲ್ಲಿ ತನ್ನ ಪತಿಗೆ ಅನುರೂಪ ಸ್ವರೂಪರೂಪಗುಣ ವಿಭವೈಶ್ವರ್ಯಾದಿಗಳನ್ನುಳ್ಳ ಲಕ್ಷ್ಮಿಗೆ ವಲ್ಲಭನು ಎಂದು ಪುನಃ ತನ್ನ ವಾಲ್ಲಭ್ಯಾತಿಶಯದಿಂದ ಆಶ್ರಿತನ ವಿಷಯದಲ್ಲಿ ಪರಮಾನುಗ್ರಹಮಾಡುವದಕ್ಕಾಗಿ ಪುರುಷಕಾರರೂಪದಲ್ಲಿರುವವಳೆಂಬುದು ತೋರಿಬರುತ್ತದೆ. ಶ್ರೀ ನಿಗಮಾನ್ತ ದೇಶಿಕರವರು ಈ ಶರಣಾಗತಿ ಗದ್ಯಕ್ಕೆ ಬರೆದಿರುವ **ಶ್ರೀಮದ್ರಹಸ್ಯ** ರಕ್ಷೆ ಎಂಬ ಮಹತ್ತಾದ ವ್ಯಾಖ್ಯಾನದಲ್ಲಿ ಬರೆದಿರುವ ಅಭಿಪ್ರಾಯವೇನೆಂದರೆ ಪ್ರಾಪ್ಯ ಪ್ರಾಪಕ ಎರಡು ದಶೆಯಲ್ಲೂ ಅನ್ವಯವನ್ನು ಹೊಂದಿ ನಿತ್ಯಾನಪಾಯಿನಿಯಾಗಿರುವದರಿಂದ ಮೊದಲು ಆಕೆಯ ಸ್ವರೂಪರೂಪಾದಿಗಳನ್ನೆಲ್ಲಾ ಕೊಂಡಾಡಿ ಶರಣಾಗತಿಯನ್ನು ಮಾಡಿದರು. ಇಂತಹ ನಿತ್ಯಾನಪಾಯಿನಿ ಎಂಬುದನ್ನೇ ದೃಢಪಡಿಸುವದಕ್ಕಾಗಿ, ಆದರಾತಿಶಯದಿಂದ ಲಕ್ಷ್ಮಿಯು ಯಾವ ಮಹಾನುಭಾವನಿಗೆ ವಲ್ಲಭಳೋ, ಅಂತವನು ಎಂಬ ವ್ಯುತ್ಪತ್ತಿಯ ಮೂಲಕ, ಸರ್ವೇಶ್ವರನಿಗೆ ಮಹಾ ದೋಷಿಯಾಗಿದ್ದ ಆಶ್ರಿತನಲ್ಲಿರುವ ಕೋಪವನ್ನು ಆರಿಸಿ, ಆತನನ್ನು ಅನುಗ್ರಹಿಸುವಹಾಗೆ ಮಾಡುವ,ಪುರುಷಕಾರಭೂತಳೆಂದು ಹೇಳುವದಕ್ಕಾಗಿ, ಈ ಎರಡನೆಯ ಸಲ ಲಕ್ಷ್ಮಿಯ ಮಾಹಾತ್ಮ್ಯೆಯನ್ನು ಹೇಳಿ, ಅಂತವಳನ್ನೇ ವಲ್ಲಭಳಾಗಿ ಉಳ್ಳವನೆಂದು ತಿಳಿಸಿರುತ್ತಾರೆ. ಈ ಮಹಾಲಕ್ಷ್ಮಿಯು **"ಕಃಕುಪ್ಯೇದ್ವಾನರೋತ್ತಮ"** (ರಾ. ಯುದ್ಧ ) ಎಂದು ಸೀತೆಯಾಗಿ ಹೇಳಿರುವವಳು; ತನ್ನ ವಾಲ್ಲಭ್ಯಾತಿಶಯದಿಂದ **"ನಮೋ ತನ್ನಿ ದೋರ್ಷಃಕ ಇಹ ಜಗತಿ"**(ಶ್ರೀ ಗುಣ)ಎಂದು ತನ್ನ ಪತಿಗೆ ಹೇಳಲಾರಳೇ? ಎಂಬ ಭಾವವು. ಆದುದರಿಂದ ಪುರುಷಕಾರತ್ವದ ಉಪಪಾದನೆಗಾಗಿ ಎರಡನೆಯ ಸಲ ಲಕ್ಷ್ಮಿಯನ್ನು ಕುರಿತು ಶ್ರೀ ಯತಿವರ್ಯರು ಹೇಳಿರುತ್ತಾರೆಂಬ ಭಾವವು. ಆಗಲಿ, ಈ ಪುರುಷಕಾರತ್ವವು ಶ್ರೀ ಸೂಕ್ತಾದಿಗಳಲ್ಲಿ ವ್ಯಕ್ತವೋ ? ಎಂದರೆ **"ನೀತದೇವೀಂ ಮಾತರಂ ಶ್ರಿಯಂ ವಾಸಯಮೇ ಕುಲೇ" "ವಿತ್ವಪ್ರಿಯೇ ವಿಷ್ಣು ಮನೋನುಕೂಲೇ"** ಎಂಬಲ್ಲಿ ಪುರುಷಕಾರತ್ವಕ್ಕೆ ಉಪಯುಕ್ತವಾದ ಜಗನ್ಮಾತೃತ್ವ ಸರ್ವವಿಷಯ ಪ್ರೀತಿ ವಿಶೇಷತ್ವಾದಿಗಳು ಇಲ್ಲಿ ಹೇಳಲ್ಪಟ್ಟಿರುತ್ತವೆ.

ಹೀಗೆ ಎರಡು ಸಲ ಲಕ್ಷ್ಮಿಯನ್ನು ಕುರಿತು ಹೇಳಿದುದೂ ಅಲ್ಲದೆ ಶರಣಾಗತ್ಯನುಷ್ಠಾನಕ್ಕೆ ಪೂರ್ವಭಾವಿಯಾಗಿ, **"ಮಹಾವಿಭೂತೇ ಶ್ರೀಮನ್ನಾರಾಯಣ"** ಎಂದು ಪ್ರಯೋಗಿಸಿರುತ್ತಾರೆ. ಇದು ನಿರರ್ಥಕವಲ್ಲವೇ ? ಎಂದರೆ ಅಲ್ಲವೆಂದು ತಿಳಿಸುತ್ತಾರೆ. **ಅನನ್ತರಮ್** - ಹೀಗೆ ಲಕ್ಷ್ಮಿಯನ್ನು ಉಪಾಯಕೋಟಿಯಲ್ಲೂ

**ಅನನ್ತರಮ್ "ಶ್ರೀಮನ್ನಾರಾಯಣ" ಎನ್ರು ಫಲೋಪಾಯ ವಾಕ್ಯಙ್ಗಳಿಲ್ ಪ್ರಯುಕ್ತಮಾನ ವ್ಯಾಖ್ಯೇಯ ಶಬ್ದತ್ತೈಯುಮ್ ಉಪಾದಾನಂ ಪಣ್ಣಿಯರುಳಿನಾರ್.**

---

ಮತ್ತು ಪುರುಷಕಾರಸ್ವರೂಪದಲ್ಲೂ ಅನ್ವಯಿಸಿ ಹೇಳಿದ ಅನಂತರವೂ, "**ಶ್ರೀಮನ್ನಾರಾಯಣ** ಎಂದು ಸಂಬೋಧಿಸಿ ಹೇಳುವದು. **ಫಲೋಪಾಯ ವಾಕ್ಯಙ್ಗಳಿಲ್** - ದ್ವಯಮನ್ತ್ರದಲ್ಲಿ ಉಪಾಯತ್ವವನ್ನು ಬೋಧಿಸುವ ಪೂರ್ವಖಂಡದ, ಮತ್ತು ಫಲವಾದ ಉಪೇಯತ್ವವನ್ನು ಬೋಧಿಸುವ ಉತ್ತರಖಂಡದ, ವಾಕ್ಯಗಳಲ್ಲಿ **ಪ್ರಯುಕ್ತಮಾನ** - 'ಶ್ರೀಮನ್ನಾರಾಯಣ ಚರಣೌ' ಎಂದೂ "**ಶ್ರೀಮತೇ ನಾರಾಯಣಾಯ**" ಎಂದೂ ಹೀಗೆ ಮನ್ತ್ರದಲ್ಲೂ ಎರಡು ಸಲ ಪ್ರಯೋಗಿಸಿ ತನ್ಮೂಲಕ ಉಪಾಯಫಲವೆರಡರಲ್ಲೂ ಲಕ್ಷ್ಮಿಗೆ ಅನ್ವಯವುಂಟೆಂದು ಉಪದೇಶಿಸುವದಕ್ಕಾಗಿ ಪ್ರಯೋಗಿಸಲ್ಪಟ್ಟ. **ಶಬ್ದತ್ತೈಯುಮ್** - ಇದು ತುಂಬಾ ಮುಖ್ಯವಾದ ಶಬ್ದವಾದುದರಿಂದ ನಿಗಮನದಲ್ಲಿ ಪ್ರಸಂಗಕ್ಕೆ ಮುಂಚಿತವಾಗಿ **ಶ್ರೀಮನ್ನಾರಾಯಣ** ಎಂಬ ಶಬ್ದವನ್ನು, **ಉಪಾದಾನಂ ಪಣ್ಣಿಯರುಳಿನಾರ್** - ಅಙ್ಗೀಕರಿಸಿ ಪುನಃ ಪ್ರಯೋಗಿಸಿರುತ್ತಾರೆ. ಮೂರನೆಯ ಸಲ ಲಕ್ಷ್ಮಿಯನ್ನೂ ಕುರಿತು ಹೇಳಿ **ಶ್ರೀಮನ್ನಾರಾಯಣ** ಎಂಬ ಸಂಬೋಧನೆಯ ಪ್ರಯೋಗದಿಂದ ನಾವು ಗ್ರಹಿಸತಕ್ಕದ್ದೇನೆಂದರೆ ? (೧) ದ್ವಯದಲ್ಲಿ ಶ್ರೀಮನ್ನಾರಾಯಣ ಶಬ್ದವು ಮುಖ್ಯವಾದುದು ; ಅದನ್ನು ತನ್ಮೂಲಕ ಉಪಾಯದೆಶೆಯಲ್ಲೂ ಫಲದೆಶೆಯಲ್ಲೂ ಇಬ್ಬರೂ ನಮಗೆ ಅನುಗ್ರಹಕಾರರು ಎಂಬುದನ್ನೂ ಪ್ರದರ್ಶಿಸುವದಕ್ಕಾಗಿಯೂ ಹಾಗೆ ಪ್ರಯೋಗವು ಎಂದು ಉಪದೇಶಿಸಿರುತ್ತಾರೆ.

ಇಲ್ಲಿ "**ಫಲೋಪಾಯ ವಾಕ್ಯಙ್ಗಳಿಲ್ ಪ್ರಯುಕ್ತಮಾನ**" ವ್ಯಾಖ್ಯೇಯವಾದ **ಶ್ರೀಮನ್ನಾರಾಯಣ** ಎಂಬ ಶಬ್ದವೆಂದು ಹೇಳಿರುವದರಿಂದ ಕೆಲವರು ಪೂರ್ವಖಂಡದ ಶ್ರೀಮಚ್ಛಬ್ದವು ಉಪಲಕ್ಷಣವೆಂದೂ, ಆದುದರಿಂದ ಲಕ್ಷ್ಮಿಗೆ ಉಪಾಯತ್ವದಲ್ಲಿ ಅನ್ವಯವಿಲ್ಲವೆಂದೂ ಉತ್ತರ ಖಂಡದಲ್ಲಿ ಶ್ರೀಮತೇ ಎಂಬ ಪದವು ವಿಶೇಷಣವಾದುದು ಉಪೇಯತ್ವದಲ್ಲಿ ಮಾತ್ರ ಅನ್ವಯ ಉಂಟೆಂದೂ ಹೇಳುವವಾದವು ನಿರಸ್ತವು. ಶ್ರೀ ನಿಗಮಾನ್ತ ದೇಶಿಕರವರು ಬಹು ನಿಪುಣತರವಾಗಿ ಉಪಪಾದಿಸಿ ಈ ವಾದವು ಸರಿಯಲ್ಲವೆಂದು ವ್ಯಕ್ತಪಡಿಸಿ ಉಪಾಯತ್ವ ಉಪೇಯತ್ವವೆರಡರಲ್ಲೂ ಅನ್ವಯ ಉಂಟೆಂದು ಸ್ಥಾಪಿಸಿರುತ್ತಾರೆ. ಪೂರ್ವಖಂಡದಲ್ಲಿ ಶ್ರೀಮಚ್ಛಬ್ದವು ಸಮಾಸಪದವು ; ಎರಡನೆಯ ಖಂಡದಲ್ಲಿ ಶ್ರೀಮತೇ ಎಂಬುದು ಬೇರೆ ಪದವು. ಇದೇ ವಿಶೇಷಣವಾದರೆ ಸಂಯುಕ್ತ ಪದವು ವಿಶೇಷಣವಲ್ಲವೇ ಎಂದು ಕೇಳಬೇಕಾಗುತ್ತದೆ.

**"ಪ್ರಪದ್ಯೇ" ಎಙ್ಗಿರ ಪದ (ವಿಡ) ತ್ತಿಲುತ್ತಮನಾಲೇ ವಿವಕ್ಷಿತಮಾನ ಅಧಿಕಾರಿ ವಿಶೇಷಮ್, "ಅನನ್ಯ ಶರಣೋಹಮ್" ಎನ್ರು ವಿವೃತಮಾಯಿತ್ತು. "ತ್ವತ್ಪಾದಾರವಿಂದ ಯುಗಳಂ ಶರಣಂ (ಅಹಂ) ಪ್ರಪದ್ಯೇ" ಎನ್ಗೈಯಾಲೇ "ಚರಣೌ" ಎಂಗಿರ ಶಬ್ದಮುಮ್, ಶರಣಶಬ್ದಮುಮ್, ಕ್ರಿಯಾಪದಮುಮ್ ಪ್ರದರ್ಶಿತಮಾಯಿತ್ತು.**

---

ಪೂರ್ವಖಂಡದ ಮೂರನೆಯ ಪದವಾದ **"ಪ್ರಪದ್ಯೇ"** ಎಂಬ ಪದಕ್ಕೆ ಹೇಗೆ ಗದ್ಯದಲ್ಲಿ ವ್ಯಾಖ್ಯಾನಮಾಡಿದ್ದಾರೆಂಬುದನ್ನು ಮುಂದಿನ ವಾಕ್ಯದಿಂದ ಸೂಚಿಸುತ್ತಾರೆ—**"ಪ್ರಪದ್ಯೇ"** ಎಂಬುವ ಪದದಲ್ಲೂ, **ಉತ್ತಮನಾಲೇ** – ಉತ್ತಮ ಪುರುಷ ಪ್ರಯೋಗದಿಂದ, **ವಿವಕ್ಷಿತಮಾನ** - ತೋರಿಬರುವ, **ಅಧಿಕಾರಿವಿಶೇಷಮ್** - ಅಧಿಕಾರಿಯಲ್ಲಿರಬೇಕಾದ ವಿಶೇಷವಾದ ಕಾರ್ಪಣ್ಯವು, **"ಅನನ್ಯ ಶರಣೋಹಮ್"** ಲಕ್ಷ್ಮೀಪತಿಯಲ್ಲದೆ ಇನ್ನು ಯಾರೂ ರಕ್ಷಕರಿಲ್ಲದ ನಾನು, **ಎನ್ರು**– ಎಂಬದಾಗಿ, **ವಿವೃತಮಾಯಿತ್ತು** – ವಿವರಿಸಿ ಹೇಳಲ್ಪಟ್ಟಿತು.

ದ್ವಯದಲ್ಲಿ ಶ್ರೀಮನ್ನಾರಾಯಣ ಶಬ್ದಕ್ಕೆ ಸೇರಿದ **ಚರಣೌ** ಎಂಬ ಶಬ್ದವೂ **ಶರಣಂ** ಎಂಬ ಶಬ್ದವೂ ಇವೆ. ಇವುಗಳ ಅರ್ಥವು ಗದ್ಯದಲ್ಲಿ ಹೇಗೆ ವ್ಯಾಖ್ಯಾತವು? ಎಂದರೆ ಉಪದೇಶಿಸುತ್ತಾರೆ.—ದ್ವಯದಲ್ಲಿರುವ, **ಚರಣೌ ಎಂಗಿರಶಬ್ದಮುಮ್** – **ಚರಣೌ** ಎಂಬ ಶಬ್ದವೂ, **ಶರಣ** ವೆಂಬ ಶಬ್ದವೂ, **ಕ್ರಿಯಾಪದಮುಮ್** - **ಪ್ರಪದ್ಯೇ** ಎಂಬ ಕ್ರಿಯಾಪದವೂ ಹೀಗೆ ಈ ಮೂರು ಪದಗಳೂ **ತ್ವತ್ಪಾದಾರಾವಿಂದಯುಗಳಂ ಶರಣಮಹಂ ಪ್ರಪದ್ಯೇ, ಎನ್ಗೈಯಾಲೇ** - ಎಂದು ಇರುವದರಿಂದ **ಪ್ರದರ್ಶಿತಮಾಯಿತ್ತು** - ಶಾಬ್ದವಾಗಿಯೇ ತೋರಿಸಲ್ಪಟ್ಟವು. **ತ್ವತ್ಪಾದಾರವಿಂದಯುಗಳೌ** – ನಿಮ್ಮ ಪಾದಾರವಿಂದದ್ವಯವನ್ನು, **ಶರಣಂ** – ಉಪಾಯವನ್ನಾಗಿ, **ಅಹಂ** – ನಾನು, **ಪ್ರಪದ್ಯೇ** – ಹೊಂದಿರುತ್ತೇನೆ ಎಂಬುದರ ಮೂಲಕ ದ್ವಯದಲ್ಲಿರುವ ಪದಗಳನ್ನೇ ಪ್ರಯೋಗಿಸಿರುವದರಿಂದ ಗದ್ಯವು ದ್ವಯಮನ್ತ್ರದ ಉಪಪಾದನೆ ಎಂಬುದು ವ್ಯಕ್ತವು. ಹೀಗೆ ದ್ವಯಮನ್ತ್ರದ ವಿವರಣೆಯು ಶರಣಾಗತಿ ಎಂಬುದು ಶ್ರೀ ಯತಿವರ್ಯರ ವಾಕ್ಯದಿಂದಲೇ ವ್ಯಕ್ತವೆಂದು ತಿಳಿಸುತ್ತಾರೆ.—

**ಅನಂತರಮ್ "ದ್ವಯಮ್"** - **"ತ್ವತ್ಪಾದಾರವಿಂದ ಯುಗಳಂ ಶರಣಮಹಂ ಪ್ರಪದ್ಯೇ"** ಎಂದಾದ ಒಡನೆಯೇ **"ಅತ್ರದ್ವಯಮ್"** ಎಂದು ಗದ್ಯದಲ್ಲಿರುವದರಿಂದ, ದ್ವಯಮನ್ತ್ರವನ್ನು ಕರಣಮನ್ತ್ರವಾಗಿ ಪಠಿಸತಕ್ಕದ್ದು, **ಎನ್ರು** - ಎಂಬದಾಗಿ, **ವ್ಯಾಖ್ಯೇಯತ್ತೈ** - ಶರಣಾಗತಿಗದ್ಯರೂಪ ವ್ಯಾಖ್ಯಾನಕ್ಕೆ ಉದ್ದೇಶ್ಯವಾದ ಮನ್ತ್ರವನ್ನು **ಪೂರ್ಣಮಾಗ** - ಸಂಪೂರ್ಣವಾಗಿ, ಏನೊಂದೂ ನ್ಯೂನತೆ ಇಲ್ಲದೆ, **ನಿರ್ದೇಶಿಸಿತ್ತಾರ್** - ತಿಳಿಯಪಡಿಸಿದರು. **ಅತ್ರದ್ವಯಮ್** – ಎಂಬು

**ಅನನ್ತರಮ್ "ದ್ವಯಮ್" ಎನ್ರು ವ್ಯಾಖ್ಯೇಯತ್ತೈ ಪೂರ್ಣಮಾಗ ನಿರ್ದೇಶಿತ್ತಾರ್. ಅಡಿಯಿಲೇಯಾದಲ್. ಮುಡುವಿಲೇಯಾದಲ್ ದ್ವಯ ಮೆನ್ರು ನಿರ್ದೇಶಿಯಾದೇ ಇವ್ವಳವಿಲೇ ಶೊಲ್ಲವೇಣ್ಡುವಾನೇನೆನ್ನಿಲ್? ಉಪಾಯ (ತ್ವ) ಪ್ರಾಪ್ಯ (ತ್ವ) ಙ್ಗಳಿಲ್ ಇಙ್ಗು ಪ್ರಧಾನ ಭೂತನ್ ಶ್ರೀಮಾನಾನ ನಾರಾಯಣನಾಗೈಯಾಲೇ, ಇರಣ್ಡಿಡತ್ತಿಲುಮ್ ಕಿಡಕ್ಕಿರ ಸವಿ**

---

ದರಿಂದ ದ್ವಯಮನ್ತ್ರವೇ ಶರಣಾಗತಿ ಗದ್ಯರೂಪದಲ್ಲಿ ವ್ಯಾಖ್ಯಾನಮಾಡಲ್ಪಟ್ಟಿತೆಂಬ ತಾತ್ಪರ್ಯವು.

ಏಕೆಂದರೆ, ಶ್ರೀ ಯತಿವರ್ಯರೂ ಶ್ರೀಮನ್ನಾರಾಯಣನೇ ಪ್ರಾಪಕನೂ ಪ್ರಾಪ್ಯನೂ ಎಂಬ ಪೂರ್ವ ಮತ್ತು ಉತ್ತರಖಂಡಗಳನ್ನುಳ್ಳ ದ್ವಯೋಚ್ಚಾರಣೆಯೇ ಉಪಾಯವೆಂಬುದನ್ನೂ ವಿಶದವಾಗಿ ಉಪಪಾದಿಸಿರುವದರಿಂದ ದ್ವಯದ ವ್ಯಾಖ್ಯಾನವೇ ಶರಣಾಗತಿ ಗದ್ಯವೆಂಬ ಭಾವವು.

ಆಗಲಿ, ಹೀಗೆ ಶರಣಾಗತಿಯು ದ್ವಯಮನ್ತ್ರಾರ್ಥದ ಉಪಪಾದನೆಯಾದರೆ ಪ್ರತಿಜ್ಞಾವಾಕ್ಯವಾಗಿ ಮೊದಲಲ್ಲಿ ಹೇಳಬೇಡವೇ? ಅಥವಾ ನಿಗಮನ ವಾಕ್ಯದಲ್ಲಾದರೂ ಹೇಳಬೇಡವೇ? ಹಾಗಿಲ್ಲದೆ ಮಧ್ಯದಲ್ಲಿ "ಅತ್ರ ದ್ವಯಮ್" ಎಂದು ಮಾತ್ರ ವಿಧಿಸಿರುವದರ ಅಭಿಪ್ರಾಯವೇನು? ಎಂದರೆ, ಅದಕ್ಕೆ ಉತ್ತರವನ್ನು ಮುಂದಿನ ವಾಕ್ಯವಾದ "**ಅಡಿಯಿಲೇಯಾದಲ್**" ಎಂದಾರಂಭಿಸಿ ತಿಳಿಸುತ್ತಾರೆ.— ದ್ವಯಾರ್ಥದ ಅರ್ಥವನ್ನೆಲ್ಲಾ ವಿಶದವಾಗಿ ತಿಳಿಸಿಯಲ್ಲವೇ, "**ಅತ್ರ ದ್ವಯಮ್**" ಎಂದು ದ್ವಯಮನ್ತ್ರೋಚ್ಚಾರಣೆಯನ್ನು ವಿಧಿಸತಕ್ಕದ್ದು; ಎಂದರೆ ಸಮಾಧಾನವನ್ನು ಹೇಳುತ್ತಾರೆ.— **ಅಡಿಯಿಲೇಯಾದಲ್**-ಪ್ರಾರಂಭದಲ್ಲೇಯಾಗಲಿ, **ಮುಡುವಿಲೇಯಾದಲ್** – ಅಂತ್ಯದಲ್ಲೇಯಾಗಲಿ, **ದ್ವಯಮೆನ್ರು ನಿರ್ದೇಶಿಯಾದೇ** - ಇದು ದ್ವಯಮನ್ತ್ರದ ಉಪಪಾದನೆ ಎಂದು ಹೇಳದೆ, **ಇವ್ವಳವಿಲೇ** - ಈಗ ಹೇಳಿರುವ ಸಂದರ್ಭದಲ್ಲಿ ಎಂದರೆ ಶರಣಾಗತಿಗದ್ಯದ ಮಧ್ಯದಲ್ಲಿ ಮಾತ್ರ, **ಶೊಲ್ಲವೇಣ್ಡುವಾನೇ ನೆನ್ನಿಲ್** - ಹೇಳಬೇಕಾದ ಆವಶ್ಯಕವೇನು? ಎಂದರೆ, ಈ ಆಕ್ಷೇಪಕ್ಕೆ ಸಮಾಧಾನವನ್ನು ಹೇಳುತ್ತಾರೆ.— **ಉಪಾಯತ್ವ ಪ್ರಾಪ್ಯತ್ವಙ್ಗಳಿಲ್ ಇಙ್ಗೇ** - ಈ ದ್ವಯಮನ್ತ್ರದಲ್ಲಿ, **ಪ್ರಧಾನಭೂತನ್** - ಮುಖ್ಯನಾದವನು, **ಶ್ರೀಮನ್ನಾರಾಯಣನಾಗೈಯಾಲೇ** - ಲಕ್ಷ್ಮೀಸಮೇತನಾದ ನಾರಾಯಣನಾದುದರಿಂದ, **ಇರಣ್ಡಿಡತ್ತಿಲುಮ್** ಎರಡು ಸಂದರ್ಭದಲ್ಲೂ ಎಂದರೆ ಉಪಾಯವಾಗಿಯೂ ಪ್ರಾಪ್ಯವಾಗಿಯೂ ಇರುವ ಅವಸ್ಥೆಯಲ್ಲಿ **ಕಿಡಕ್ಕಿರ** - ನಿಂತಿರುವ, **ಸವಿಶೇಷಣ ನಾರಾಯಣಶಬ್ದಮ್**– ವಿಶೇಷಣವಾದ ಲಕ್ಷ್ಮಿಯೊಂದಿಗೆ ಸೇರಿರುವ ನಾರಾಯಣ ಶಬ್ದವು, ಎಂದರೆ ಪೂರ್ವಖಂಡದಲ್ಲಿರುವ **ಶ್ರೀಮನ್ನಾರಾಯಣ** ವೆಂಬ ಸಮಾಸ ಪದವೂ, **ಶ್ರೀಮತೇನಾರಾಯಣಾಯ** ಎಂಬಲ್ಲಿರುವ ಶ್ರೀಮತ್ ನಾರಾಯಣನೆಂಬ

**ಶೇಷಣ ನಾರಾಯಣ ಶಬ್ದಮ್ ವ್ಯಾಖ್ಯಾತಮಾಯ್ ನಿನ್ರವಳದಿಲೇ ಇಮ್ಮ ನ್ತ್ರತ್ತುಕ್ಕು ಪ್ರತಿಪಾದ್ಯಮಾನ ಸಾಧ್ಯೋಪಾಯತ್ತೋಡೇ ಕೂಡ ಪ್ರಧಾನೋಪಾಯಮುಮ್, ಪ್ರಧಾನ ಪ್ರಾಪ್ಯಮುಮ್ ವ್ಯಾಖ್ಯಾತಮೆನ್ರು ತೋತ್ತುಗೈಕ್ಕಾಗ ಇಜ್ಗೇ ದ್ವಯಮೆನ್ರು ಅರುಳಿಚ್ಚೆಯ್ದಾರ್.**

ಅನನ್ತರಮ್ "ಪಿತರಂ ಮಾತರಂ" ಎನ್ರು ತುಡಙ್ಗಿ ಜಿತನ್ತಾ ವಿಶೇಷ

---

ಪದವೂ, **ವ್ಯಾಖ್ಯಾತಮಾಯ್**-ಶ್ರೀ ಯತಿವರ್ಯರ ಶರಣಾಗತ ಗದ್ಯದಲ್ಲಿ ವ್ಯಾಖ್ಯಾನ ಮಾಡಲ್ಪಟ್ಟು, **ನಿನ್ರವಳವಿಲೇ** - ಇರುವ ಸಂದರ್ಭದಲ್ಲಿ, **ಪ್ರತಿಪಾದ್ಯಮಾನ ಸಾಧ್ಯೋಪಾಯಮತ್ತೋಡೇ ಕೂಡ**-ಪ್ರತಿಪಾದಿಸಲ್ಪಟ್ಟ ಸಾಧ್ಯೋಪಾಯವಾದ ಭರನ್ಯಾಸದೊಂದಿಗೆ,**ಪ್ರಧಾನೋಪಾಯಮುಮ್** - ಮುಖ್ಯವಾದ ಪ್ರಪತ್ತಿರೂಪೋಪಾಯವೂ, **ಪ್ರಧಾನಪ್ರಾಪ್ಯಮುಮ್** – ಮುಖ್ಯವಾದ ಪ್ರಾಪ್ಯವೂ ಎಂದರೆ ಪರಿಪೂರ್ಣಬ್ರಹ್ಮಾನುಭವದೊಂದಿಗೆ ಶ್ರಿಯಃಪತಿಗೆ ಮಾಡುವ ನಿತ್ಯಕೈಙ್ಕರ್ಯಪ್ರಾಪ್ತಿಯೂ **ವ್ಯಾಖ್ಯಾತಮೆನ್ರು ತೋತ್ತುಗೈಕ್ಕಾಗ** - ವ್ಯಾಖ್ಯಾತವಾಯಿತು ಎಂದು ಪ್ರದರ್ಶಿಸುವದಕ್ಕಾಗಿ, **ಇಜ್ಗೇ ದ್ವಯಮೆನ್ರು ಅರುಳಿಚ್ಚೆಯ್ದಾರ್** - "**ಅತ್ರದ್ವಯಮ್**" ಎಂಬದಾಗಿ ಕೃಪಯಾ ಉಪದೇಶಿಸಿದರು. ದ್ವಯದ ಪೂರ್ವಖಂಡವು ಉಪಾಯಪರವು ಎಂದರೆ ಸಾಧ್ಯೋಪಾಯವಾದ ಶರಣಾಗತಿಯನ್ನು ಬೋಧಿಸುತ್ತದೆ. ಉತ್ತರ ಖಂಡವು ಉಪೇಯ ಅಥವ ಪ್ರಾಪ್ಯವನ್ನು ಬೋಧಿಸುತ್ತದೆ. ಇವೆರಡರಲ್ಲೂ ಉಪಾಯತ್ವದಲ್ಲೂ ಪ್ರಾಪ್ಯದಲ್ಲೂ ಪ್ರಧಾನವಾಗಿ ಶ್ರೀಮನ್ನಾರಾಯಣನೇ ಎಂದರೆ ಲಕ್ಷ್ಮಿಯಾದ ವಿಶೇಷಣದೊಂದಿಗೆ ಸೇರಿದ ನಾರಾಯಣನೇ ಎಂಬುದು ವ್ಯಕ್ತವಾಗಿ **ಶ್ರೀಮನ್ನಾರಾಯಣ ಚರಣೌ** ಎಂದು ಪೂರ್ವಖಂಡದಲ್ಲೂ, **ಶ್ರೀಮತೇ ನಾರಾಯಣಾಯ** ಎಂದು ಉತ್ತರ ಖಂಡದಲ್ಲೂ ಇರುವ ಪ್ರಯೋಗಗಳಿಂದ ತೋರಿಬರುತ್ತದೆ ಇದನ್ನು ಚನ್ನಾಗಿ ಉಪಪಾದಿಸಿ, **ಅತ್ರದ್ವಯಮ್** . ಎಂದು ಪ್ರಯೋಗಿಸಿರುವದರಿಂದ, ಉಪಪಾದಿಸಿರುವದೆಲ್ಲಾ ದ್ವಯದ ವ್ಯಾಖ್ಯಾನವೇ ಎಂಬುದು ಸುಸ್ಪಷ್ಟವೆಂಬ ತಾತ್ಪರ್ಯವು.

"**ಅತ್ರದ್ವಯಮ್**" ಎಂದು ಹೇಳಿರುವವರ ಉತ್ತರಭಾಗವೂ ಕೂಡ ದ್ವಯ ಮನ್ತ್ರದಲ್ಲಿ ಅರ್ಥವಾಗಿ ತೋರಿಬರುವದರ ಉಪಪಾದನೆ ಎಂದು ತಿಳಿಸುತ್ತಾರೆ. ಪರಮಪುರುಷನೊಂದಿಗೆ ಸಂವಾದರೂಪದಲ್ಲಿ ಅನನ್ಯೋಪಾಯೋಪೇಯನಾಗಿರುವ ಅಧಿಕಾರಿಯಾದ ತನಗೆ ಸಾಧ್ಯೋಪಾಯವಾದ ಶರಣಾಗತ್ಯನುಷ್ಠಾನವು ಶರಣ್ಯನ ಸ್ವಭಾವಾನುಸಂಧಾನಪೂರ್ವಕವಾದ ಅಪರಾಧಗಳನ್ನು ಕ್ಷಮಿಸಬೇಕೆಂಬ ಪ್ರಾರ್ಥನೆಯೂ ಸಹ, ಈ ದ್ವಯಮನ್ತ್ರದಲ್ಲಿ ಒಟ್ಟಿನಲ್ಲಿ ತೋರುವ ಅರ್ಥವೆಂದು ಶ್ರೀ ಯತಿವರ್ಯರು "**ಪಿತರಂ ಮಾತರಂ**" ಎಂದು ಆರಂಭಿಸಿ ತಿಳಿಸುತ್ತಾರೆಂದು ಹೇಳುತ್ತಾರೆ— **ಅನನ್ತರಮ್** - "**ಅತ್ರದ್ವಯಮ್** " ಎಂದು ಹೇಳಿದ ನಂತರ, "**ಪಿತರಂ**

ಭಗವದ್ಗೀತಾದಿ ಸ್ಥಿತವಾನ ಸಂವಾದಕ ವಾಕ್ಯಮುಖತ್ತಾಲೇ ಅನನ್ಯ ಪ್ರಯೋಜನನಾಯ್, ಅನನ್ಯೋಪಾಯನಾಯ್‌ಕ್ಕೊಂಡು ಉಪಾಯ ಪರಿಗ್ರಹವ್ ಪಣ್ಣಿನ ಪಡಿಯೈಯುಮ್, ಶರಣ್ಯಸ್ವಭಾವಾನುಸಂಧಾನ ಪೂರ್ವಕವಾಗ ಅಪರಾಧ ಕ್ಷಾಪಣಮ್ ಪಣ್ಣುಗಿರ ಪಡಿಯೈಯುಮ್, ದ್ವಯತ್ತುಕ್ಕು ಸಮುದಿತಾರ್ಥವಾಗ ವರುಳಿಚ್ಚೆಯ್‌ದಾರ್

---

ಮಾತರಂ" ಎನ್ರು ತುಡಙ್ಗಿ - ಎಂದಾರಂಭಿಸಿ, ಜನ್ತಾವಿಶೇಷ ಭಗವದ್ಗೀತಾದಿ ಸ್ಥಿತವಾನ - ಜನ್ತಾ ವಿಶೇಷದಲ್ಲೂ, ಭಗವದ್ಗೀತೆಯೇ ಮೊದಲಾದವುಗಳಲ್ಲೂ ಇರುವ, ಸಂವಾದ ವಾಕ್ಯಮುಖತ್ತಾಲೇ - ಭಗವಂತನಿಗೂ ತಮಗೂ ಸಹ ಪರಸ್ಪರ ಸಂವಾದ ವಾಕ್ಯಮೂಲಕವಾಗಿ ಶರಣಾಗತಿಗದ್ಯದಲ್ಲಿ ತೋರಿಬರುವ, ಅನನ್ಯಪ್ರಯೋಜನನಾಯ್ - ತನಗೆ ಪರಮಪುರುಷನನ್ನು ಬಿಟ್ಟರೆ ಇನ್ನು ಯಾವ ಪ್ರಯೋಜನವಿಲ್ಲವೆಂದು ಭಾವಿಸಿರುವ, ಅನನ್ಯೋಪಾಯನಾಯ್ ಕ್ಕೊಂಡು-ಬೇರೆ ಇನ್ನು ಯಾವ ಉಪಾಯವಿಲ್ಲವೆಂದು ಭಾವಿಸಿರುವವನಾಗಿಕ್ಕೊಂಡು ಉಪಾಯಪರಿಗ್ರಹವ್ – ಈ ದ್ವಯಮನ್ತ್ರದ ಮೂಲಕ ಶರಣಾಗತ್ಯನುಷ್ಠಾನವನ್ನು, ಪಣ್ಣಿನ ಪಡಿಯೈಯುಮ್ – ಮಾಡಿದ ಪ್ರಕಾರವನ್ನೂ, ಮತ್ತು ಶರಣ್ಯಸ್ವಭಾವಾನುಸಂಧಾನಪೂರ್ವಕವಾಗ – ಪ್ರಪನ್ನರಿಗೆಲ್ಲಾ ರಕ್ಷಕನಾಗಿರುವವನ, ರಕ್ಷಣೋಪಯುಕ್ತ ಕಲ್ಯಾಣಗುಣಗಳಾದ ದಯಾ, ವಾತ್ಸಲ್ಯ, ಸೌಲಭ್ಯ, ಸೌಶೀಲ್ಯ, ಕ್ಷಮಾ ಮೊದಲಾದವುಗಳ ಅನುಸಂಧಾನಪೂರ್ವಕವಾಗಿ, ಅಪರಾಧಕ್ಷಾಪಣಮ್ ಪಣ್ಣುಗಿರ ಪಡೈಯುಯುಮ್- ತನ್ನ ಅಪರಾಧಗಳನ್ನು ಕ್ಷಮಿಸಬೇಕೆಂದು ಪ್ರಾರ್ಥಿಸುವ ಪ್ರಕಾರವನ್ನೂ, ದ್ವಯತ್ತುಕ್ಕು ಸಮುದಿತಾರ್ಥವಾಗ ಅರುಳಿಚ್ಚೆಯ್ ದಾರ್-ದ್ವಯಮನ್ತ್ರದ ಒಟ್ಟಿನಲ್ಲಿ ತೋರುವ ಅರ್ಥಗಳನ್ನಾಗಿ ಕೃಪಯಾ ಶ್ರೀ ಯತಿವರ್ಯರು ತೋರ್ಪಡಿಸಿದರು. ಎರಡು ಮುಖ್ಯವಾದ ಅರ್ಥಗಳು ದ್ವಯದಿಂದ ಏರ್ಪಡುತ್ತವೆ ಎಂದು ಪ್ರದರ್ಶಿಸಿರುತ್ತಾರೆಂಬ ಭಾವವು. (೧) ಅನನ್ಯ ಪ್ರಯೋಜನ ಅನನ್ಯೋಪಾಯನಾಗಿರುವ ತನಗೆ ಶರಣಾಗತಿಯೇ ಪರಮೋಪಾಯವೆಂಬುದು (೨) ಶ್ರಿಯಃಪತಿಯಲ್ಲಿ ರಕ್ಷಣೋಪಯುಕ್ತ ಮಹಾಗುಣಗಳಿಂದ ಕೃಪಾವಾತ್ಸಲ್ಯಾದಿಗಳಿರುವದರಿಂದ, ಈ ಶರಣಾಗತ್ಯನುಷ್ಠಾನವನ್ನೇ ವ್ಯಾಜಮಾಡಿಕೊಂಡು ನಮ್ಮ ಅಪರಾಧಗಳನ್ನು ಕ್ಷಮಿಸು ಎಂಬ ಪ್ರಾರ್ಥನೆಯನ್ನು ಅಂಗೀಕರಿಸುವನು ಎಂಬುದು.

" ಪಿತರಂ ಮಾತರಂ ದಾರಾನ್ ಪುತ್ರಾನ್ ಬಂಧೂನ್ ಸಖೀನ್ ಗುರೂನ್ ॥ ರತ್ನಾನಿ ಧನ ಧಾನ್ಯಾನಿ ಕ್ಷೇತ್ರಾಣಿ ಚ ಗೃಹಾಣಿಚ । " ಸರ್ವ ಧರ್ಮಾಂಶ್ಚ ಸನ್ತ್ಯಜ್ಯ ಸರ್ವ ಕಾಮಾಂಶ್ಚ ಸಾಕ್ಷರಾನ್ । ಲೋಕವಿಕ್ರಾಂತ ಚರಣೌ ಶರಣಂ ತೇ ವ್ರಜಂ ವಿಭೋ ॥ ಹೀಗೆ ಈ ಎರಡು ಶ್ಲೋಕಗಳನ್ನು ಹೇಳಿ, ಅನಂತರ ತ್ವಮೇವ ಮಾತಾ ಚ ಪಿತಾತ್ವಮೇವ ಎಂಬ ಶ್ಲೋಕವನ್ನು ಗೀತೆಯ ೧೧ನೆಯ

ಅಧ್ಯಾಯದ "ಪಿತಾಸಿ ಲೋಕಸ್ಯ" ಎಂಬ ಎರಡು ಶ್ಲೋಕಗಳನ್ನೂ ಹೀಗೆ ಐದು ಶ್ಲೋಕಗಳ ಪಠನಾನುಸಂಧಾನಗಳ ಮೂಲಕ "ಮನೋವಾಕ್ಕಾಯೈಃ" ಎಂದಾರಂಭಿಸಿ, ಸರ್ವಾನಶೇಷತಃ ಕ್ಷಮಸ್ವ ಎಂದು ಮುಗಿಸಿ ಕ್ಷಾಪಣೆಯನ್ನು ಪ್ರಾರ್ಥಿಸಿರುತ್ತಾರೆ. ಈ ಮೇಲಿನ ವಾಕ್ಯದಲ್ಲಿರುವ ಸಂತ್ಯಜ್ಯವೆಂದರೆ ಅಪೇಕ್ಷಿತವಾದ ಫಲ ಮತ್ತು ಉಪಾಯತ್ವೇನ ತ್ಯಾಗವೆಂದು ಭಾವಿಸಬಹುದು. ಸರ್ವಧರ್ಮಾನ್ ಪರಿತ್ಯಜ್ಯ ಎಂಬುದಕ್ಕೆ ಯಾವ ಅರ್ಥಗಳೋ ಆ ಅರ್ಥಗಳನ್ನೆಲ್ಲಾ ಇಲ್ಲಿಯೂ ಎಂದು ಭಾವಿಸತಕ್ಕದ್ದು. ಇಲ್ಲಿ ಗುರೂನ್ ಎಂದರೆ ಉಪಾಯಾನುಷ್ಠಾನ ಸಹಾಯಕರಲ್ಲದ ಇತರ ಗುರು ಜನರು ಹೇಳಲ್ಪಟ್ಟರೆಂದು ಭಾವಿಸತಕ್ಕದ್ದು. ಸರ್ವಕಾಮಾನ್ ಎಂಬುದರಿಂದ ಸ್ವರ್ಗಾದಿ ಐಹಿಕ ಕಾಮಗಳು ಹೇಳಲ್ಪಟ್ಟವು. ಅಕ್ಷರಶಬ್ದದಿಂದ ಕೈವಲ್ಯವು ಸೂಚಿಸಲ್ಪಟ್ಟಿತು. ಚತುರ್ವಿಧಾ ಭಜನ್ತೇ ಮಾಂ ಎಂಬಲ್ಲಿ ಹೇಳಿರುವ ಐಹಿಕ, ಸ್ವರ್ಗಾದಿ ಕೈವಲ್ಯ ಫಲಗಳನ್ನೆಲ್ಲಾ ಸಂತ್ಯಜ್ಯ ಎಂಬರ್ಥವು. ಲೋಕವಿಕ್ರಾಂತ ಚರಣಗಳೊಂದಿಗೆ ಹೋಲಿಸಿದರೆ ಅಜಗಜನ್ಯಾಯ ವೆಂಬ ಭಾವವು. ಅದುದರಿಂದ ಆತನ ಚರಣವೇ ನಮಗೆ ಶರಣವು ಎಂಬ ಭಾವವು. "ಅತ್ರದ್ವಯಂ" ಎಂದು ಹೇಳಿರುವದಕ್ಕೆ ಹಿಂದೆಯೂ "ತ್ವತ್ಪಾದಾರವಿಂದ ಯುಗಳಂ ಶರಣಮಹಂಪ್ರಪದ್ಯೇ" ಎಂದು ಶರಣಾಗತ್ಯನುಷ್ಠಾನವೂ ತೋರಿಬರುತ್ತದೆ. ಅದಕ್ಕೆ ಮುಂದೆಯೂ ಈ ಶ್ಲೋಕಗಳ ಮೂಲಕ "ಲೋಕವಿಕ್ರಾಂತ ಚರಣೌ ಶರಣಂತೇ ವ್ರಜಂ" ಎಂದು ಇದೆ. ಹಾಗಾದರೆ ಪ್ರಪತ್ತ್ಯನುಷ್ಠಾನವು ಸಕೃದೇವ ಅನುಷ್ಠಿಸತಕ್ಕದ್ದೆಂದು ಹೇಳುವ ಪ್ರಮಾಣಗಳಿಗೆ ವಿರುದ್ಧವಾಗುವದಿಲ್ಲವೋ ? ಎಂದರೆ ಆ ಸಂದರ್ಭದಲ್ಲಿ ರಹಸ್ಯರಕ್ಷೆಯಲ್ಲಿ ಹೇಳಿರುವದೇನೆಂದರೆ ಮೊದಲು ಶರಣಾಗತಿಯನ್ನು ಸಕೃತ್ತಾಗಿಯೇ ಅನುಷ್ಠಿಸಿರುವದು ; ಅನನ್ಯಪ್ರಯೋಜನತ್ತ್ವ ಅನನ್ಯಶರಣತ್ವ ಮೊದಲಾದವುಗಳನ್ನು ವಿಶದೀಕರಿಸಿ ಮುಂದೆ ಪ್ರಾರ್ಥಿಸುವ ಸರ್ವಾಪರಾಧ ಕ್ಷಾಪಣವೇ ದ್ವಯದ ಸಮುದಿತಾರ್ಥವೆಂದು ತೋರಿಸುವ ಸಂದರ್ಭದಲ್ಲಿ ಶರಣಾಗತಿಯ ಅನುಸಂಧಾನರೂಪದಲ್ಲಿ ಹೇಳಿದುದೆಂದು ಭಾವಿಸತಕ್ಕದ್ದು. ಅನನ್ಯಪ್ರಯೋಜನತ್ವವನ್ನು ನಿರ್ದೇಶಿಸಿ ಹೇಳುವದಕ್ಕಾಗಿ ಸೋಪಾಧಿಕವಾದುದೆಲ್ಲವನ್ನೂ ಪರಿತ್ಯಾಗ ಮಾಡಿರುತ್ತೇನೆಂದು ತಂದೆಯನ್ನೂ, ತಾಯಿಯನ್ನೂ, ಹೆಂಡತಿಯನ್ನೂ, ಪುತ್ರರನ್ನೂ, ಬಂಧುಗಳನ್ನೂ, ಮಿತ್ರರನ್ನೂ, ಗುರುಗಳನ್ನೂ, ರತ್ನ ಧನ ಧಾನ್ಯ ಕ್ಷೇತ್ರ ಗೃಹ ಮೊದಲಾದುವುಗಳನ್ನೂ ಸಪರಿಕರಗಳಾದ ಸಮಸ್ತ ಧರ್ಮಗಳನ್ನೂ, ಸಮಸ್ತ ಐಹಿಕೈಶ್ವರ್ಯ ಸ್ವರ್ಗಾದ್ಯುಪಭೋಗ ರೂಪ ಪುರುಷಾರ್ಥಗಳನ್ನೂ, ಆತ್ಮಾನುಭವವನ್ನೂ, ಹೀಗೆ ಎಲ್ಲವನ್ನೂ ಪರಿತ್ಯಾಗಮಾಡಿ ಅನನ್ಯ ಪ್ರಯೋಜನನಾಗಿ ನಿನ್ನ ಪಾದವೇ ಶರಣವಾಗಿ ಹೊಂದಿದ್ದೇನೆಂಬ ಭಾವವು. ಹೀಗೆ ಹಿಂದೆ ಸಕೃದನುಷ್ಠೇಯವಾಗಿ ನಡಿಸಿದ ಶರಣಾಗತಿಯ ಅನುವಾದದಿಂದ ಅನನ್ಯ ಪ್ರಯೋಜನತ್ವವನ್ನೂ ಅನನ್ಯ ಶರಣತ್ವವನ್ನೂ ಉಪಪಾದಿಸಿ ಹೇಳಿದರು ಹಾಗೆಯೇ ವಿಭೀಷಣ ಶರಣಾಗತಿಯಲ್ಲೂ " ತ್ಯಕ್ತ್ವಾ ವ

**ದಾರಾಂಶ್ಚ ಪುತ್ರಾಂಶ್ಚ ರಾಘವಂ ಶರಣಂಗತಃ**"ಎಂದೂ,"**ಪರಿತ್ಯಕ್ತಾ ಮಯಾ ಲಂಕಾ ಮಿತ್ರಾಣಿಚಧನಾನಿಚ**" ಎಂದೂ,ಹೇಳಲ್ಪಟ್ಟಿರುತ್ತದೆ. ಇಲ್ಲಿ ತಾಯಿ ತಂದೆ ಗುರು ಮಕ್ಕಳನ್ನೆಲ್ಲಾ ಬಿಟ್ಟು ಶರಣ ಹೊಂದಿದ್ದೇನೆಂದರೆ ಅವರುಗಳ ವಿಷಯದಲ್ಲಿ ಲಿಪ್ತನಾಗಿ ಇರಕೂಡದೆಂಬುದು ಇಷ್ಟುಮಾತ್ರದಲ್ಲೇ ಪರ್ಯವಸಾನವೇ ವಿನಾ, ವೃದ್ಧ ತಾಯಿ ತಂದೆಗಳ ಶುಶ್ರೂಷೆಯು ನಿರೋಧಿಸಲ್ಪಡಲಿಲ್ಲವು. ಹಾಗೆ ಬಿಟ್ಟರೆ, "**ಮಾತೃ ದೇವೋಭವ ಪಿತೃದೇವೋಭವ ಆಚಾರ್ಯದೇವೋಭವ**" ಇತ್ಯಾದಿ ವಿಧಿವಾಕ್ಯಗಳಿಗೆ ವಿರುಧ್ಧಾಚರಣೆಯಾಗಿ ಭಗವನ್ನಿಗ್ರಹಕ್ಕೆ ಕಾರಣವಾಗುತ್ತದೆ. ಹಾಗೆಯೇ ಭಾರ್ಯಾಪುತ್ರಾದಿಗಳ ಪೋಷಣೆಯ ಪರಿತ್ಯಾಗವೂ ದೋಷಾವಹವು. ಇಲ್ಲಿ **ಪಿತರಂ ಮಾತರಂ** ಇತ್ಯಾದಿ ಪರಿತ್ಯಾಗದಿಂದ ನಿರ್ಲಿಪ್ತನಾಗಿರಬೇಕೆಂದು ಹೇಳಲ್ಪಟ್ಟಿತೇ ವಿನಾ ಭಗವದಾಜ್ಞಾನುಪಾಲನಕ್ಕೆ ವಿರೋಧವಾಗಿ ಹೇಳಲ್ಪಡಲಿಲ್ಲವು. ಸರ್ವಧರ್ಮಗಳ ತ್ಯಾಗವೆಂಬುದರಿಂದ, ಸಪರಿಕರ ಭಕ್ತಿಯೋಗದ ಮತ್ತು ಸಪರಿಕರ ಇತರ ಯಜ್ಞಯಾಗಾದಿಗಳ ತ್ಯಾಗವು ಹೇಳಲ್ಪಟ್ಟಿತೇ ವಿನಾ, ನಿತ್ಯನೈಮಿತ್ತಿಕಗಳ ತ್ಯಾಗವು ಹೇಳಲ್ಪಡಲಿಲ್ಲವು. ಏಕೆಂದರೆ ಸ್ವತಂತ್ರವಿಧಿಗಳಾದ "**ಅಹರಹಸ್ಸಂಧ್ಯಾ ಮುಪಾಸೀತ**" ಇತ್ಯಾದಿಗಳ ಮೂಲಕ ಅನುಷ್ಠಿಸಲೇಬೇಕು. ಅಲ್ಲಿಯೂ ಫಲ, ಕರ್ತೃತ್ವಾದಿಗಳ ತ್ಯಾಗಮೂಲಕವೇ ಅನುಷ್ಠಿಸತಕ್ಕದ್ದೆಂದು ಭಾವಿಸತಕ್ಕದ್ದು. **ಸಂತ್ಯಜ್ಯ** - ಚನ್ನಾಗಿ ಬಿಡತಕ್ಕದ್ದು ಎಂದು ಹೇಳಿರುವದರಿಂದ ಇವುಗಳ ಬಿಡೋಣವೇನೋ ಪ್ರಪತ್ತಿಗೆ ಅಂಗವಾಗಿಯಾಗಲಿ ಅಂಗಿಯಾಗಿಯಾಗಲಿ ಭಾವಿಸತಕ್ಕದ್ದಲ್ಲವೆಂಬುದು ತೋರಿಬರುತ್ತದೆ. ಚರಮಶ್ಲೋಕದಲ್ಲಿರುವ ಪರಿತ್ಯಜ್ಯ ಎಂಬುದಕ್ಕೆ ಬದಲಾಗಿ ಇಲ್ಲಿ **ಸಂತ್ಯಜ್ಯ** ಎಂದಿರುತ್ತದೆ. ವಿಭು ಶಬ್ದದಿಂದ ಮೋಕ್ಷಪ್ರಾಪಕ ಶಕ್ತಿಯು ಬೋಧಿಸಲ್ಪಟ್ಟಿತು. **ಅಪ್ರುಜಂ** ಎಂದರೆ **ವ್ರಜಾಮಿ** ಎಂಬರ್ಥವು. ಮುಂದಿನ ಶ್ಲೋಕದಲ್ಲಿ ನಿರುಪಾಧಿಕ ಪಿತಾ, ಮಾತಾ, ಬಂಧು, ಗುರು ಎಲ್ಲವೂ ನೀನೇ ಎಂದು ಹೇಳಿ ಅಪರಾಧ ಕ್ಷಾಪಣೆಯನ್ನು ಪ್ರಾರ್ಥಿಸುತ್ತಾರೆ.

"**ಜಿತಂತಾ ವಿಶೇಷವಾಕ್ಯ**" ವೆಂದು ಹೇಳಿರುವದರಿಂದ ಇದಕ್ಕೆ ಸಮಾನವಾದ ಅಭಿಪ್ರಾಯದ ಉಪಪಾದನೆಯು ಜಿತನ್ತಾ ಸ್ತೋತ್ರದಲ್ಲೂ ಉಂಟೆಂಬುದು ತೋರಿಬರುತ್ತದೆ. ಪ್ರಥಮ ಜಿತನ್ತಾ ೮-೧೦-೧೫ನೆಯ ಶ್ಲೋಕಗಳು "**ಪಾಹಿಮಾಂ ಪುಂಡರೀಕಾಕ್ಷ ನಜಾನೇ ಶರಣಂ ಪರಮ್**" "**ಇತ್ಯೇವ ಮನಯಾಸ್ತುತ್ವಾ ಸ್ತುತ್ವಾದೇವಂ ದಿನೇದಿನೇ। ಕಿಙ್ಕರೋ ಸ್ಮೀತಿಚಾತ್ಮಾನಂ ದೇವಾಯೈವಂ ನಿವೇದಯೇತ್**" ಇತ್ಯಾದಿ ಅನುಸಂಧೇಯವು. ಎರಡನೆಯ ಜಿತನ್ತಾ ೧೧-೩೮ನೆಯ ಶ್ಲೋಕಗಳನ್ನೂ ಮೂರನೆಯ ಜಿತನ್ತಾ ೧೧ ರಿಂದ **೧೩**ನೆಯ ಶ್ಲೋಕಗಳನ್ನೂ, ಪರ್ಯಾಲೋಚಿಸಬಹುದು. **ಭಗವದ್ಗೀತಾದಿಸ್ಥಿತಮಾನ**ವೆಂಬುದರಿಂದ "**ಪಿತಾಸಿ ಲೋಕಸ್ಯ**" ಎಂದಾರಂಭಿಸಿ ಹೇಳಿರುವ ಶ್ಲೋಕಗಳು **ಸಙ್ಗೃಹೀತವು** (ಗೀ. ೧೧-೪೩)

**ಮೇಲ್ ಅರ್ಥಕ್ರಮತ್ತಾಲೇ ಮುರ್ಪಡ ನಮಸ್ಸಾಲೇ ಪ್ರಾರ್ಥಿಕ್ಕಿರ ಅನಿಷ್ಟ ನಿವೃತ್ತಿಯೈ ವ್ಯಾಖ್ಯಾನಮ್ ಪಣ್ಣಿ ಪಿನ್ಬು ಇಜ್ಞ್ಗಳ್ಳ ಪರಭಕ್ತ್ಯಾದಿ ಪುರುಷಾರ್ಥ ಪೂರ್ವಕಮಾಗ ಚತುರ್ಥ್ಯಂತ ಪದಜ್ಗಳಿಲ್ ವಿಭಕ್ತ್ಯಭಿಪ್ರೇತ ಮಾನ ಪರಮಪುರುಷಾರ್ಥ ಲಾಭತ್ತೈ ವೆಳಿಯಿಟ್ಟರುಳಿನಾರ್.**

---

ಶರಣಾಗತಿಗದ್ಯವೆಲ್ಲಾ ದ್ವಯಮಂತ್ರದ ಉಪಪಾದನೆಯು ಎಂಬುದನ್ನು ವ್ಯಕ್ತವಾಗಿ ಪ್ರದರ್ಶಿಸುವದಕ್ಕಾಗಿ, ಮುಂದಿನ ವಾಕ್ಯಗಳನ್ನು ಅನುಗ್ರಹಿಸುತ್ತಾರೆ— ಇಷ್ಟಪ್ರಾಪ್ತಿಯು ಯಾವುದು?ಎಂದರೆ **ಶ್ರೀಮತೇ ನಾರಾಯಣಾಯ** ಎಂಬಲ್ಲಿರುವ ಚತುರ್ಥಿಯಿಂದ ತೋರಿಬರುವ ನಿತ್ಯಕೈಙ್ಕರ್ಯವು. ಇದು ಸಾಧ್ಯವಾಗಬೇಕಾದರೆ ಅನಿಷ್ಟನಿವೃತ್ತಿಯಾಗತಕ್ಕದ್ದೆಂದು, ಮುಂದೆ "**ಮನೋವಾಕ್ಕಾಯೈಃ**" ಸಮಸ್ತವಾದ ಅನಿಷ್ಟಗಳ ನಿವೃತ್ತಿಯನ್ನು ಪ್ರಾರ್ಥಿಸುತ್ತಾರೆಂದು ಮುಂದಿನ ವಾಕದಿಂದ ತಿಳಿಸಿ, ಅನಂತರ ಇಷ್ಟಪ್ರಾಪ್ತಿರೂಪವಾದ ಪರಭಕ್ತಿ ಪರಜ್ಞಾನ ಪರಮಭಕ್ತಿಗಳನ್ನು ಫಲರೂಪದಲ್ಲಿ ಉಂಟುಮಾಡಿ ಪರಮಪುರುಷಾರ್ಥಲಾಭವು ದೊರೆಯುತ್ತದೆಂದು ಹೇಳಿರುವದರಿಂದ ದ್ವಯಾರ್ಥಾನುಸಂಧಾನವೇ ಎಂದು ಉಪದೇಶಿಸುತ್ತಾರೆ. ಇಷ್ಟು ಮಾತ್ರವೇ ಅಲ್ಲದೆ ದ್ವಯದ ವಿವರಣೆಯು **ಶರಣಾಗತಿ** ಗದ್ಯವಾದರೆ **ನಾರಾಯಣಾಯ** - ಎಂಬಲ್ಲಿ ತೋರಿಬರುವ ಕೈಂಕರ್ಯಪ್ರಾರ್ಥನೆಯನ್ನು ಮೊದಲು ಹೇಳಿ, **ನಮ** ಶ್ಶಬ್ದದಿಂದ ತೋರಿಬರುವ ವಿರೋಧಿನಿವೃತ್ತಿಯನ್ನು ಅನಂತರ ಹೇಳಬೇಕಾಗಿತ್ತು. ಹಾಗಲ್ಲದೆ ಮೊದಲು ಅನಿಷ್ಟ ನಿವೃತ್ತಿಯನ್ನು ಹೇಳಿದುದು ಹೇಗೆ ? ಎಂದಾಕ್ಷೇಪ ಬಂದೀತೆಂದು ಭಾವಿಸಿ ಅದಕ್ಕೆ ಸಮಾಧಾನವನ್ನೂ ಹೇಳುತ್ತಾರೆ. ಹೇಗೆಂದರೆ ಶಬ್ದಕ್ರಮಕ್ಕಿಂತ ಅರ್ಥಕ್ರಮವು ಅವಗಾಹನೆಗೆ ಸಹಕಾರಿಯು ಎಂಬ ಭಾವದಿಂದ ತಿಳಿಸುತ್ತಾರೆ.

**ಮೇಲ್** – ಅದಾದ ನಂತರ, **ಅರ್ಥಕ್ರಮತ್ತಾಲೇ** - ಅರ್ಥಕ್ರಮದಿಂದ, **ಮುರ್ಪಡ** - ಮೊದಲು, **ನಮಸ್ಸಾಲೇ** "**ಶ್ರೀಮತೇ ನಾರಾಯಣಾಯ ನಮಃ**" ಎಂಬಲ್ಲಿರುವ ಕೊನೆಯ **ನಮ**ಶ್ಶಬ್ದದಿಂದ, **ಪ್ರಾರ್ಥಿಕ್ಕಿರ** - ಪ್ರಾರ್ಥಿಸುವ, **ಅನಿಷ್ಟ ನಿವೃತ್ತಿಯೈ** - ಅನಿಷ್ಟವಾದ ಪಾಪಗಳ ಪರಿಹಾರವನ್ನು, **ವ್ಯಾಖ್ಯಾನಂಪಣ್ಣಿ** - ವ್ಯಾಖ್ಯಾನಮಾಡಿ, **ಪಿನ್ಬು** - ಅನಂತರ, **ಪರಭಕ್ತ್ಯಾದಿ ಪುರುಷಾರ್ಥಪೂರ್ವಕಮಾಗ** – ಪರಮಾತ್ಮನನ್ನು ತುಂಬಾ ಅವಿಚ್ಛಿನ್ನ ಸ್ಮೃತಿ ಸಂತಾನರೂಪದಲ್ಲಿ ಧ್ಯಾನಿಸುವ ಶ್ರೇಯಸ್ಸಿನ ಮೂಲಕವಾಗಿ, ಇಲ್ಲಿ ಪರಭಕ್ತಿ ಶಬ್ದದಿಂದ ಉಪಾಸನವು ಹೇಳಲ್ಪಡಲಿಲ್ಲವು. ಅತ್ಯಂತ ಪ್ರೀತಿಯಿಂದ ಧ್ಯಾನಿಸೋಣವು ಹೇಳಲ್ಪಟ್ಟಿತು, **ಚತುರ್ಥ್ಯಂತ ಪದಜ್ಞಳಿಲ್** – ಚತುರ್ಥಿ ವಿಭಕ್ತಿ ಇರುವ ಪದಗಳಲ್ಲಿ, **ಶ್ರೀಮತೇ ನಾರಾಯಣಾಯ** ಎಂಬ ಪದಗಳಲ್ಲಿ, **ವಿಭಕ್ತ್ಯಭಿಪ್ರೇತಮಾನ** – ಚತುರ್ಥೀ ವಿಭಕ್ತಿಯಿಂದ ತೋರಿಬರುವ, **ಪರಮಪುರುಷಾರ್ಥಲಾಭತ್ತೈ** - ಚತುರ್ಥಿಯಾದ

ಸಂಪ್ರದಾನ ವಿಭಕ್ತಿಯಿಂದ ಶೇಷತ್ವವನ್ನು ಬೋಧಿಸಿ ತದ್ವಾರಾ ಪರಮಪುರುಷಾರ್ಥ ವಾದ ಭಗವಂತನಿಗೆ ನಿತ್ಯಕೈಙ್ಕರ್ಯದ ಲಾಭವನ್ನು, **ವೆಳಿಯಿಟ್ಟರುಳಿನಾರ್** - ಶ್ರೀ ಯತಿವರ್ಯರು ವ್ಯಕ್ತಪಡಿಸಿ ಕೃಪೆ ಮಾಡಿರುತ್ತಾರೆ. **ಶ್ರೀಮತೇ ನಾರಾಯಣಾಯ ನಮಃ** ಎಂಬ ದ್ವಯದ ಉತ್ತರಾರ್ಧವು ಅರ್ಥವಾಗಿ ಸರ್ವ ಪಾಪಗಳಿಂದ **ಬಿಡುಗಡೆ** ಯಾದ ಅನಿಷ್ಟ ನಿವೃತ್ತಿಯನ್ನು ನಮಶ್ಶಬ್ದದಿಂದಲೂ, ಇಷ್ಟಪ್ರಾಪ್ತಿಯಾದ ಶ್ರೀ ವಾಸುದೇವನಿಗೆ ಮಾಡುವ ನಿತ್ಯ ಕೈಙ್ಕರ್ಯ ಲಾಭವು ಚತುರ್ಥೀವಿಭಕ್ತಿಯಿಂದಲೂ ತೋರಿಬರುತ್ತದೆಯಾದುದರಿಂದ ಇವುಗಳನ್ನೇ ಮುಂದೆ **"ನಮೋವಾಕ್ಯಾಯ್ಯೈಃ"** ಎಂದಾರಂಭಿಸಿ, ಹೇಳಿ, **ಕ್ಷಮಸ್ವ** ಎಂದು ಪ್ರಾರ್ಥಿಸಿ, **"ಪರಭಕ್ತಿ ಪರಜ್ಞಾನ ಪರಮಭಕ್ತ್ಯೈಕ ಸ್ವಭಾವಂ ಕುರುಷ್ವ"** ಎಂದು ಯಾಚಿಸಿ, **"ನಿತ್ಯಕಿಂಕರೋ ಭವಾನಿ"** ಎಂದು ಹೇಳಿಕೊಂಡಿರುತ್ತಾರೆಂಬ ತಾತ್ಪರ್ಯವು. ಭಗವದ್ಗೀತೆಯ ೧೮ನೆಯ ಅಧ್ಯಾಯದ ೬೨ನೆಯ ಶ್ಲೋಕವಾದ **"ತಮೇವ ಶರಣಗಚ್ಛ ಸರ್ವ ಭಾವೇನ ಭಾರತ। ತತ್ಪ್ರಸಾದಾತ್ ಪರಾಂ ಶಾನ್ತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್"** ಎಂಬಲ್ಲಿ ಹೇಳಿರುಹಾಗೆ ನೀನು ಪರಾಂ ಶಾನ್ತಿಯನ್ನೂ ಎಂದರೆ **ಅನಿಷ್ಟ ನಿವೃತ್ತಿಯನ್ನೂ, ಶಾಶ್ವತಂ ಸ್ಥಾನಂ** ಶಾಶ್ವತವಾಗಿ ನಿತ್ಯ ಕೈಙ್ಕರ್ಯವನ್ನು ಮಾಡುವ ಪದವನ್ನೂ **ಪ್ರಾಪ್ಸ್ಯಸಿ**-ಹೊಂದುವಿ ಎಂದು ಅನಿಷ್ಟ ನಿವೃತ್ತಿ ಮತ್ತು ಇಷ್ಟಪ್ರಾಪ್ತಿಗಳು ಹೇಳಲ್ಪಟ್ಟಿವೆ. ಇಷ್ಟಪ್ರಾಪ್ತಿಯು ಇಲ್ಲಿ ಹೇಳಿದುದು ಯಾವುದೆಂದರೆ? ಪ್ರಸನ್ನನಿಗೆ ಬೇಕಾದ ಅನಿಷ್ಟರೂಪವಾದ ಪ್ರಾರಬ್ಧ ನಿವೃತ್ತಿಯೂ, ಮತ್ತು ಸರ್ವ ಪ್ರವೃತ್ತಿಗಳೂ ಅನುಕೂಲವಾಗಿ ಭಗವಂತನಿಗೆ ಸಂತೋಷಕರವಾಗಿ ಯಾವದಾಯುಷಂ ಭಗವದ್ಭಾಗವತ ಕೈಙ್ಕರ್ಯರೂಪವಾಗಿರೋಣವು. ಪ್ರಕೃತಿಯಿಂದುಂಟಾಗುವ ಉಪಭೋಗಗಳಲ್ಲಿ ಮನಸ್ಸು ಪ್ರವರ್ತಿಸದೇ ಇರೋಣವೂ, ಇದರಿಂದ ಕೊನೆಗೆ ಪರಮಪದವನ್ನೂ ಸಹ ಹೊಂದುವಿ ಎಂದೂ ಹೇಳಲ್ಪಟ್ಟಿತು. ಇಲ್ಲಿ ಶ್ರೀ ಯತಿವರ್ಯರು **"ಪರಭಕ್ತಿ ಪರಜ್ಞಾನ ಪರಮಭಕ್ತ್ಯೈಕ ಸ್ವಭಾವಂ ಮಾಂ ಕುರುಷ್ವ"** ಎಂದು ಹೇಳಿರುವ ಸಂದರ್ಭದಲ್ಲಿ, ಇವುಗಳು ಭಕ್ತಿಯೋಗದಲ್ಲಿ ಹೇಳಿರುವ ಅವಸ್ಥೆಗಳಾದುದರಿಂದ, ಅವರು ಭಕ್ತಿಯೋಗವನ್ನು ಉಪಾಯವಾಗಿ ಅವಲಂಬಿಸಿದರೇ ? ಎಂಬ ಸಂದೇಹವು ಉಂಟಾಗಬಹುದು. ಅಂತಹ ಸಂದೇಹಕ್ಕೆ ಕಾರಣವಿಲ್ಲವು. ಫಲರೂಪವಾಗಿ ಅದನ್ನು ಪ್ರಾರ್ಥಿಸಿದುದರಿಂದ ವಿರೋಧವೇನೂ ಇಲ್ಲವು. ಭಕ್ತಿಯೋಗಸ್ಥಾನದಲ್ಲಿ ತಾನೇ ನಿಂತು ಅವರಿಂದುಂಟಾಗುವ ಫಲಗಳಾದ ಪರಭಕ್ತಿ ಮೊದಲಾದವುಗಳನ್ನುಳ್ಳ ಸ್ವಭಾವವುಳ್ಳವನನ್ನಾಗಿ ಮಾಡು ಎಂದು ಪ್ರಾರ್ಥಿಸಿದರು. ಆದುದರಿಂದ ಶ್ರೀ ಯತಿವರ್ಯರು ಅನುಷ್ಠಿಸಿದುದು ದ್ವಯದಮೂಲಕ ಶರಣಾಗತಿಯೆಂದೇ ಭಾವಿಸತಕ್ಕದ್ದು. ಏಕೆಂದರೆ ಹಿಂದೆ **"ಅಪ್ರದ್ವಯಮ್"** ಎಂದು ಹೇಳಿರುವದರಿಂದಲೂ, ಅದನ್ನೇ ಶ್ರೀ ರಂಗನಾಥನೇ ಅನುಮೋದಿಸಿ **"ಯೇನಕೇನಾಪಿ ಪ್ರಕಾರೇಣ ದ್ವಯವಕ್ತಾತ್ವಂ"** ಎಂದೂ

**ಇಪ್ಪಡಿ ಅನುಷ್ಠಿತೋಪಾಯನಾನ ಅಧಿಕಾರಿ ವಿಷಯತ್ತಿಲ್ ಇಙ್ಗು ಮಙ್ಗುಮುಳ್ಳ ಸಿದ್ಧಿಯೈಪ್ಪತ್ತ ಚರಮಶ್ಲೋಕತ್ತಿಲುತ್ತರಾರ್ಧತ್ತಿಲ್ ಪಡಿಯೇ**

---

ಹೇಳಿರುವದರಿಂದ ದ್ವಯೋಚ್ಚಾರಣೆಯ ಮೂಲಕವಾಗಿ ಶರಣಾಗತಿಯನ್ನು ಅನುಷ್ಠಿಸಿದರೆಂಬುದೇ ಸಿದ್ಧವು. ಶ್ರೀ ಯತಿವರ್ಯರು ಉಪಾಸನೆಯನ್ನು ಅನುಷ್ಠಿಸಿದರೆಂಬುದು ಭ್ರಾಂತಿಮೂಲಕವಾದುದು.

ಮುಂದೆ ಆ ಶರಣಾಗತಿಯನ್ನನುಷ್ಠಿಸಿದುದರಿಂದ ದಯಾರ್ದ್ರ ಹೃದಯ ಭಗವಂತನು ಅಂತಹ ಪ್ರಪನ್ನನಿಗೆ, ಚರಮಶ್ಲೋಕದ ಉತ್ತರಾರ್ಧದಲ್ಲಿ ಹೇಳಿರುವ ಹಾಗೆ ಕೊಡುವ ಫಲವನ್ನು, ತಮಗೆ ಅನುಗ್ರಹಿಸಿದ ಉತ್ತರದ ಮೂಲಕವಾಗಿ ಉಪಪಾದಿಸುವರಾಗಿ ಅಂತವನಿಗೆ ಇಲ್ಲಿಯೂ ಮತ್ತು ದೇಹಾವಸಾನಾನಂತರವೂ ನಿರತಿಶಯ ಸುಖವುಂಟೆಂಬುದನ್ನು "**ಅಥಾವಿಧ ಪಾದನುಭವ ಜನಿತಾ ನವಧಿಕಾತಿಶಯ ಪ್ರೀತಿಕಾರಿತಾ ಶೇಷಾವಸ್ಥೋಚಿತಾಶೇಷ ಶೇಷತ್ವೈಕರತಿರೂಪ ನಿತ್ಯಕಿಙ್ಕರೋಭವ**" ಎಂದೂ, "**ಯಾವಚ್ಛರೀರ ಪಾತಂ ಶ್ರೀರಂಗೇ ಸುಖಮಾಸ್ವ**" ಎಂದೂ ಹೇಳಿದುದನ್ನು ಶ್ರೀ ಯತಿವರ್ಯರು ವ್ಯಕ್ತಗೊಳಿಸಿರುತ್ತಾರೆಂದು "**ಇಪ್ಪಡಿ ಅನುಷ್ಠಿತೋಪಾಯನಾನ**"ಎಂದಾರಂಭಿಸಿದವಾಕ್ಯದಿಂದ ತಿಳಿಸುತ್ತಾರೆ. ಈ ಅಭಿಪ್ರಾಯವೇ ಗೀತೆಯ "**ತಮೇವ ಶರಣಂಗಚ್ಛ**"ಎಂಬ ಶ್ಲೋಕದಲ್ಲಿ ಹೇಳಲ್ಪಟ್ಟ **ಶಾಶ್ವತಪದಮ್**ಎಂಬಲ್ಲಿ ಅಂತರ್ಗತವು. ಈ ದ್ವಯಮಂತ್ರದಮಹಿಮೆಯನ್ನು ಅರಿತವರಾದುದರಿಂದ, ತಿರುಕ್ಕೋಟ್ಟಿಯೂರ್ ನಂಬಿಯವರನ್ನು ಆಚಾರ್ಯರನ್ನಾಗಿ ವರಿಸಿ, ೧೭ನೇ ಸಲ ಹೋಗಿ ಪ್ರಾರ್ಥಿಸಿ, ಭಗ್ನಮನೋರಥರಾದರೂ,೧೮ನೆಯ ಸಲ ಪುನಃ ಹೋಗಿ ಪ್ರಾರ್ಥಿಸಿದನಂತರ ಆ ದೇಶಿಕರಿಂದ ಅನುಗ್ರಹಿಸಲ್ಪಟ್ಟ ಎಲ್ಲಾ ಅರ್ಥಗಳನ್ನೂ ಗರ್ಭೀಕರಿಸಿ, ಶರಣಾಗತಿ ಗದ್ಯವನ್ನು ರಚಿಸಿರುವದರಿಂದ ದ್ವಯಾರ್ಥ ವಿವರಣೆ ಎಂಬುದರಲ್ಲಿ ನಿಸ್ಸಂದೇಹವು. **ಇಪ್ಪಡಿ** - ಶ್ರೀ ಯತಿವರ್ಯರು ಉಪಪಾದಿಸಿ ಹೇಳಿರುವ ರೀತಿಯಲ್ಲಿ **ಅನುಷ್ಠಿತೋಪಾಯನಾನ ಅಧಿಕಾರಿ ವಿಷಯತ್ತಿಲ್** - ದ್ವಯಮಂತ್ರೋಚ್ಚಾರಣೆಯ ಮೂಲಕ ಶರಣಾಗತಿಯನ್ನು ಅನುಷ್ಠಿಸಿದ ಅಧಿಕಾರಿಯ ವಿಷಯದಲ್ಲಿ, **ಇಙ್ಗು ಮಙ್ಗುಮುಳ್ಳ ಸಿದ್ಧಿಯುಲ್** - ಇಙ್ಗುಮುಳ್ಳ ಸಿದ್ಧಿಯು ಯಾವುದೆಂದರೆ ಶರೀರಪಾತಸಮಯದವರೆಗೂ ಪರಭಕ್ತಿ ಪರಜ್ಞಾನ ಪರಮಭಕ್ತಿಯಿಂದ ಕೂಡಿ, ಭಗವದನುಭವದಿಂದುಂಟಾದ ನಿರತಿಶಯಪ್ರೀತಿಯಿಂದ ಮಾಡಲ್ಪಟ್ಟ ಅಶೇಷಶೇಷತ್ವೈಕರತಿರೂಪ ನಿತ್ಯಕೈಂಕರ್ಯದೊಂದಿಗೆ ಸುಖವಾಗಿರೋಣವು. **ಅಙ್ಗುಮುಳ್ಳ ಸಿದ್ಧಿಯಾವುದು** ಎಂದರೆ ಇದಕ್ಕೆ ಸಮನಾದ ಪರಿಪೂರ್ಣಬ್ರಹ್ಮಾನುಭವ ಜನಿತ ನಿತ್ಯಕೈಂಕರ್ಯಪ್ರಾಪ್ತಿಯು, ಹೀಗೆ, ಇವೆರಡು **ಸಿದ್ಧಿಯೈಪ್ಪತ್ತ** - ಸಿದ್ಧಿಯನ್ನು ಕುರಿತು, **ಚರಮಶ್ಲೋಕತ್ತಿಲ್ ಉತ್ತರಾರ್ಧತ್ತಿಲ್ ಪಡಿಯೇ** – ಚರಮಶ್ಲೋಕದ **ಉತ್ತರಾರ್ಧ**ದಲ್ಲಿ ಹೇಳಿರುವ ಮೇರೆಗೆ

**ಸ್ವಾಭಾವಿಕ ದಯಾರ್ದ್ರವಾನ ಭಗವದಭಿಪ್ರಾಯ ಮಿರುಕ್ಕುಮ್ಪಡಿಯೈ, ತದ್ವ್ಯಂಜಕ ಭಗವದ್ವಾಕ್ಯ ಪ್ರಕ್ರಿಯೈಯಾಲೇ ಅರುಳಿಚ್ಚೈಯ್‌ದು ಕಾಟ್ಟಿನಾರ್.**

---

**ಸ್ವಾಭಾವಿಕಮಾನ ದಯಾರ್ದ್ರವಾನ** - ಸ್ವಾಭಾವಿಕವಾಗಿ ದಯೆಯಿಂದ ತೋಯಿಸಲ್ಪಟ್ಟ ಎಂದರೆ ಸ್ವಾಭಾವಿಕವಾದ ಪರಿಪೂರ್ಣ ದಯೆಯಿಂದ ಕೂಡಿದ, **ಭಗವದಭಿಪ್ರಾಯಮ್** - ಭಗವಂತನ ಸಙ್ಕಲ್ಪರೂಪಾಭಿಪ್ರಾಯವು, **ಇರುಕ್ಕು ಮ್ಪಡಿಯೈ** – ಇರುವ ಸ್ಥಿತಿಯನ್ನು, **ತದ್ವ್ಯಂಜಕ** - ಅದನ್ನು ಪ್ರಕಟಿಸುವ, **ಭಗವದ್ವಾಕ್ಯಪ್ರಕ್ರಿಯೈಯಾಲೇ** - ಭಗವಂತನ ಪ್ರತ್ಯುಕ್ತಿ ಕ್ರಮದಿಂದ, **ಅರುಳಿಚ್ಚೈಯ್‌ದು ಕಾಟ್ಟಿನಾರ್** - ಕೃಪೆಯಿಂದ ಪ್ರದರ್ಶಿಸುತ್ತಾರೆ. **ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ** - ಎಂಬ ಚರಮಶ್ಲೋಕದ ಉತ್ತರಾರ್ಧವು ಸರ್ವೇಶ್ವರನ ಸಹಜಕಾರುಣ್ಯ ಪ್ರವಾಹವನ್ನು ಪ್ರದರ್ಶಿಸುತ್ತದೆ. ಏಕೆಂದರೆ **ಮೋಕ್ಷಯಿಷ್ಯಾಮಿ ಮಾಶುಚಃ** ಎಂದು ಹೇಳುವದರಿಂದ ಭಗವಂತನು ಕರುಣಾರ್ದ್ರಹೃದಯನೆಂದು ಹೇಳಿದಂತಾಯಿತು. ಇದು "**ಕೇವಲಂ ಮದೀಯೈವ ದಯಯಾ**" ಪ್ರಯೋಗದಿಂದ ತೋರಿಬರುತ್ತದೆ. **ಅನಂತ ತದ್ವಿರೋಧಿ ಪಾಪಾಕ್ರಾಂತೋಽಪಿ** ಎಂಬುದರಿಂದಲೂ ಪ್ರತಿಬಂಧಕವಿದ್ದರೂ ಅದನ್ನು ಪರಿಗಣಿಸದೇ, **ನಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ** ಎಂಬ ಮಹರ್ಷಿ ವಾಕ್ಯಾನುಸಾರ ಪ್ರಪನ್ನನಲ್ಲಿರುವ ಸಹಜಕಾರುಣ್ಯವು ಪ್ರದರ್ಶಿಸಲ್ಪಟ್ಟಿತು. ಇದರಿಂದ, **ಭಗವದಭಿಪ್ರಾಯವು** ಯಾವುದೆಂದರೆ "**ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ**" ಎಂಬುದು, ಇದನ್ನೇ "**ಏವಂ ಭೂತಮತ್ಕೈಂಕರ್ಯಪ್ರಾಪ್ತ್ಯುಪಾಯತಯಾ**" ಎಂದಾರಂಭಿಸಿ, ಹೇಳಿದ ಭಗವದ್ವಾಕ್ಯದಲ್ಲಿ ಭಗವತ್ಕೃಪೆಗೆ ಅನರ್ಹವಾದ ಪ್ರತಿಬಂಧಕಗಳನ್ನೆಲ್ಲಾ ಏಳು "**ಅಪಿ**" ಶಬ್ದಗಳಿಂದ ಹೇಳಿ, ಹೀಗೆ ಪ್ರಪನ್ನನು ತನ್ನ ಹಿಂದಿನ ಅನಾದಿ ಕರ್ಮವಾಸನಾ ಸಂಸ್ಕಾರಗಳಿಂದ ಎಷ್ಟು ಅನರ್ಹನಾಗಿದ್ದರೂ ಯೇನಕೇನಾಪಿ ದ್ವಯಮನ್ತ್ರವನ್ನು ಉಚ್ಚರಿಸಿ ಶರಣಾಗತವಾದರೆ "**ನಿತ್ಯಕಿಙ್ಕರೋ ಭವಿಷ್ಯಸಿ**" ಎಂದು ಹೇಳಿರುವದರಿಂದ "**ತದ್ವ್ಯಂಜಕ ಭಗವದ್ವಾಕ್ಯ ಪ್ರಕ್ರಿಯೈಯಾಲೇ ಅರುಳಿಚ್ಚೈಯ್‌ದು ಕಾಟ್ಟಿನಾರ್**" ಎಂಬ ಪ್ರಯೋಗವು.

ಹೀಗೆ ದ್ವಯಮನ್ತ್ರಾರ್ಥವೆಲ್ಲಾ ಶರಣಾಗತಿಗದ್ಯದಲ್ಲಿ ಉಪಪಾದಿತವಾಗಿರುವದರಿಂದ ದ್ವಯಮನ್ತ್ರದ ವಿವರಣೆಯೇ ಶರಣಾಗತಿಗದ್ಯವೆಂದು ನಿಗಮನಮಾಡಿ ಹೇಳುತ್ತಾರೆ.—**ಆಗೈಯಾಲ್** - ಹೀಗಿರುವದರಿಂದ, **ಗದ್ಯತ್ತಿಲರುಳಿಚ್ಚೈಯ್‌ದದೆಲ್ಲಾಮ್**–ಶ್ರೀ ಶರಣಾಗತಿ ಗದ್ಯದಲ್ಲಿ ಶ್ರೀ ಯತಿವರ್ಯರು ಉಪಪಾದಿಸಿ ಅನುಗ್ರಹಿ

**ಆಗೈಯಾಲೇ, ಗದ್ಯತ್ತಿಲರುಳಿಚ್ಚೈಯ್‍ದದೆಲ್ಲಾಮ್ ದ್ವಯತ್ತಿಲೇ ವಿವಕ್ಷಿತಮ್. ಇದು "ದ್ವಯಮರ್ಥಾನುಸಂಧಾನೇನ ಸಹ ಸದೈವಂ ವಕ್ತಾ" ಎಣ್ಗಿರ ಪಾಶುರತ್ತಾಲುಮ್ ಸೂಚಿತಮ್.**

**ಪರಭಕ್ತ್ಯಾದಿ ಮೂಲತ್ವಂ ಕೈಂಕರ್ಯಸ್ಯ ಯದುಚ್ಯತೇ ।**
**ಗದ್ಯಾದಿಷು ತದಪ್ಯಾಹು ರಪವರ್ಗದಶಾಶ್ರಯಮ್ ॥೯೧॥**

---

ಸಿರುನಬೆಲ್ಲವೂ, **ದ್ವಯತ್ತಿಲೇ** - ದ್ವಯಮನ್ತ್ರದಲ್ಲೂ, **ವಿವಕ್ಷಿತಮ್** – ತೋರಿ ಬರುವ ಅರ್ಥಗಳೇ.

ಆಗಲಿ, ದ್ವಯಮನ್ತ್ರದ ಪದಗಳ ಪ್ರತೀಕವನ್ನು ಹಿಡಿದು, ಈ ಪದಗಳಿಂದ ಈ ಅರ್ಥಗಳು ಉಪಪಾದಿತವೆಂದು ಹೇಳಿದ್ದರೆ ದ್ವಯಮನ್ತ್ರದ ವಿವರಣೆ ಎಂದು ನಿಸ್ಸಂಶಯವಾಗಿ ನಂಬಬಹುದಿತ್ತು. ಹಾಗಿಲ್ಲವಲ್ಲಾ ಎಂದು ಆಕ್ಷೇಪ ತಂದರೆ ಆದಕ್ಕೆ ಸಮಾಧಾನವಾಗಿ ಹೇಳುತ್ತಾರೆ. ದ್ವಯದ ವಿವರಣೆ ಎಂದೇ ನಾವು ನಿಸ್ಸಂಶಯವಾಗಿ ಒಪ್ಪತಕ್ಕದ್ದಾಗಿದೆ ; ಏಕೆಂದರೆ ಈ ಗದ್ಯವು ದ್ವಯಮನ್ತ್ರ ವಿವರಣೆ ಎಂಬುದು "**ದ್ವಯಾರ್ಥಾನುಸಂಧಾನೇನ ಸಹ ಸದೈವಂ ವಕ್ತಾ**" ಎಣ್ಗಿರ ಎನ್ನುವ, ಪಾಶುರತ್ತಾಲುಮ್.ವಾಕ್ಯದಿಂದಲೂ **ಸೂಚಿತಮ್** – ಸೂಚಿಸಲ್ಪಟ್ಟಿತು.

ಹೀಗೆ ಗದ್ಯವು ದ್ವಯಾರ್ಥ ವಿವರಣೆಯೆಂಬುದು ನಿಸ್ಸಂಶಯವೆಂದು ಉಪಪಾದಿಸಿ ಹೇಳಿದರು. ಗದ್ಯವು ದ್ವಯದ ವ್ಯಾಖ್ಯಾನವೆಂದರೆ, ಗದ್ಯದಲ್ಲಿ ಫಲ ಪ್ರಾರ್ಥನೆಯನ್ನು ಮಾಡುವ ಸಂದರ್ಭದಲ್ಲಿ "ಪರಭಕ್ತಿ ಪರಜ್ಞಾನ ಪರಮಭಕ್ತಿ ಕೃತ ಪರಿಪೂರ್ಣಾನವರತ ನಿತ್ಯವಿಶದತಮಾನನ್ಯ ಪ್ರಯೋಜನಾನವಧಿಕಾತಿಶಯ ಪ್ರಿಯ ಭಗವದನುಭವ ಜನಿತಾ ನವಧಿಕಾತಿಶಯ .... ನಿತ್ಯಕಿಙ್ಕರೋ ಭವಾನಿ" ಎಂದು ಶ್ರೀ ಯತಿವರ್ಯರು ಅನುಗ್ರಹಿಸಿರವುದರಿಂದ ಯಾವಜ್ಜೀವವೂ ಮಾಡುವ ಕೈಙ್ಕರ್ಯವೂ ಪರಭಕ್ತ್ಯಾದಿಮೂಲಕವಾಗಿ ಬಂದುದೆಂದಾಗುವದಿಲ್ಲವೇ? ಎಂದರೆ ಆಗ ಪ್ರಪದನಕ್ಕೆ ಅತ್ಯಾವಶ್ಯಕವಾದ ಆಕಿಂಚನ್ಯವೇ ಇಲ್ಲವಾಗುವದರಿಂದ ಅದು ಪ್ರಪದನವೇ ಆಗುವದಿಲ್ಲವು;ಮತ್ತು, ಪರಭಕ್ತ್ಯಾದಿಗಳಿಂದಲೇ ಮೋಕ್ಷ ಸಿದ್ಧಿಸುವದರಿಂದ ಪ್ರಪದನವೂ ನಿರರ್ಥಕವಾದುದಾಗೂ ಆಗುತ್ತದೆ. ಇಂತಹ ಶಙ್ಕೆಗಳಿಗೆ ಕಾರಣವಿಲ್ಲವೆಂದು ಒಂದು ಕಾರಿಕೆಯಿಂದ ಸ್ಥಾಪಿಸುತ್ತಾರೆ. **ಗದ್ಯಾದಿಷು** – ಶ್ರೀ ಶರಣಾಗತಿ ಗದ್ಯ ಮೊದಲಾದವುಗಳಲ್ಲಿ, **ಕೈಙ್ಕರ್ಯಸ್ಯ** - ಭಗವತ್ಕೈಂಕರ್ಯಕ್ಕೆ **ಯತ್** - ಯಾವ, ಪರಭಕ್ತ್ಯಾದಿ ಮೂಲತ್ವಂ - ಪರಭಕ್ತಿ ಆದಿಶಬ್ದದಿಂದ ಪರಜ್ಞಾನ ಪರಮಭಕ್ತಿಗೇ ಕಾರಣವಾಗಿ ಉಳ್ಳೋಣವು. **ಉಚ್ಯತೇ** - ಹೇಳಲ್ಪಡುತ್ತದೋ, **ತದಪಿ** - ಅದೂ ಕೂಡ, **ಅಪವರ್ಗದಶಾಶ್ರಯಮ್** – ಮೋಕ್ಷ ದಶೆಯನ್ನು ಹೊಂದಿದುದಾಗಿ ಎಂದರೆ ಮೋಕ್ಷದಶೆಯಲ್ಲಿ ಪರಮಾತ್ಮಸಾಕ್ಷಾತ್ಕಾರ

ರೂಪವಾದ ಪರಭಕ್ತ್ಯಾದಿಗಳೆಂದು, ಆಹುಃ - ಹೇಳುತ್ತಾರೆ. ಯಾರು ಎಂದರೆ ಪೂರ್ವಾಚಾರ್ಯರುಗಳು, ಶ್ರೀ ಶರಣಾಗತಿಗದ್ಯದ ಸ್ವಾರಸ್ಯವನ್ನು ಗ್ರಹಿಸಿದ ಪ್ರಾಜ್ಞರು ಎಂದು ಇಟ್ಟುಕೊಳ್ಳತಕ್ಕದ್ದು. **"ಪರಭಕ್ತಿ ಪರಜ್ಞಾನ ಪರಮಭಕ್ತ್ಯೈಕಸ್ವಭಾವಂ ಮಾಂ ಕುರುಷ್ವ"** ಎಂದು ಶ್ರೀ ಯತಿವರ್ಯರು ಪ್ರಾರ್ಥಿಸಿರುತ್ತಾರೆ. ಇದರ ಅಭಿಪ್ರಾಯವು, ಶರೀರವನ್ನು ಬಿಡುವ ಸಮಯದಲ್ಲಿ ಭಗವಂತನಲ್ಲಿ ಇಂತಹ ವಿಶೇಷ ಪ್ರೀತಿಯುಂಟಾಗಿ ಅದರಿಂದ ಶ್ರೀ ಪರವಾಸುದೇವ ಕೈಙ್ಕರ್ಯದಲ್ಲಿ ಸದಾ ನಿರತನಾಗಿರುವ ಬುದ್ಧಿ ವಿಶೇಷ ಉಂಟಾಗಲಿ ಎಂಬುದು ಎಂದು ಶ್ರೀ ದೇಶಿಕರವರು ತಮ್ಮ ಗದ್ಯ ಭಾಷ್ಯವಾದ ಶ್ರೀಮದ್ರಹಸ್ಯರಕ್ಷೆಯಲ್ಲಿ ಉಪದೇಶಿಸಿರುತ್ತಾರೆ. ಈ ಎರಡು ಅಭಿಪ್ರಾಯಗಳಲ್ಲಿ ಮೊದಲನೆಯ ಅಭಿಪ್ರಾಯವು ಈ ಕಾರಿಕೆಯಲ್ಲಿ ಉಪಪಾದಿತವು, ಎರಡನೆಯ ಅಭಿಪ್ರಾಯವು **"ಉತ್ತರೋತ್ತರಯೋಃ"** ಎಂಬ ಮುಂದಿನ ಕಾರಿಕೆಯಲ್ಲಿ ಉಪಪಾದಿತವು. ಪರಭಕ್ತಿ ಪರಜ್ಞಾನ ಪರಮ ಭಕ್ತಿಗಳೆಂದರೇನೆಂಬುದಕ್ಕೆ ಉಪಾಯವಿಭಾಗಾಧಿಕಾರದ ೮೮೪-೮೯೪ ಪುಟಗಳನ್ನು ಪರಾಂಬರಿಸಿ. ಸಾಮಾನ್ಯವಾಗಿ ಸರ್ವೇಶ್ವರನಲ್ಲಿ ತೋರುವ ಪ್ರೀತಿವಿಶೇಷವು ಭಕ್ತಿ ಎನಿಸುತ್ತದೆ. ಆ ಪ್ರೀತಿಯು ವಿಶೇಷ ವೃದ್ಧಿಯನ್ನು ಹೊಂದುತ್ತಾ, ಪರಭಕ್ತಿ ಪರಜ್ಞಾನ ಪರಮ ಭಕ್ತಿ ಎಂಬ ಹೆಸರುಗಳನ್ನು ಹೊಂದುತ್ತದೆ. ಹೇಗೆಂದರೆ ಯಾವಾಗ ಪರಮಾತ್ಮನಲ್ಲಿದ್ದ ಸಾಮಾನ್ಯ ಭಕ್ತಿಯು ವೃದ್ಧಿಯನ್ನು ಹೊಂದಿತೋ ಆಗ ಆತನನ್ನು ಸಾಕ್ಷಾತ್ಕರಿಸಬೇಕೆಂಬ ಇಚ್ಛೆಯು ವಿಶೇಷ ಪ್ರೀತಿಯನ್ನುಂಟುಮಾಡುತ್ತದೆ, ಇದಕ್ಕೆ ಪರಭಕ್ತಿ ಎಂದು ಹೆಸರು; ಇಂತಹ ಇಚ್ಛೆಯ ಮೂಲಕವಾಗಿ ಉಂಟಾದಕ ಪರಮಾತ್ಮ ಸಾಕ್ಷಾತ್ಕಾರವೂ ಆಗ ಉಂಟಾದ ಇನ್ನೂ ವಿಶೇಷ ಪ್ರೀತಿಯೂ, ಪರಜ್ಞಾನವೆನಿಸುತ್ತದೆ. ಭಕ್ತಿರೂಪವಾದುದನ್ನು ಪರಜ್ಞಾನವೆಂದು ಹೇಳುವದು ಏತಕ್ಕೆ ? ಎಂದರೆ ಆ ಅವಸ್ಥೆಯಲ್ಲಿ ಪರಮಾತ್ಮಸಾಕ್ಷಾತ್ಕಾರ ಉಂಟಾಗುತ್ತದೆ ಯಾದುದರಿಂದ. ಇದು ಇನ್ನೂ ವೃದ್ಧಿಯನ್ನು ಹೊಂದಿ ಪರಮಾತ್ಮನನ್ನು ಒಂದು ಕ್ಷಣ ಕೂಡ ಬಿಟ್ಟಿರಲಾರೆನೆಂಬ ಉತ್ಕಟೇಚ್ಛೆಯಿಂದುಂಟಾದ ನಿರತಿಶಯ ಪ್ರೀತಿಗೆ ಪರಮಭಕ್ತಿ ಎಂದು ಹೆಸರು. ಇವುಗಳು "ಪರಭಕ್ತಿಃ ಪುರಾದೃಷ್ಟ ಪ್ರತ್ಯಕ್ಷಾಭಿನಿವೇಶನಮ್ । ಪರಜ್ಞಾನಂ ತು ತಸ್ಯೈವ ಸಾಕ್ಷಾತ್ಕಾರ ಪರಿಸ್ಫುಟಃ । ಪುನರ್ವಿಶ್ಲೇಷ ಭೀರುತ್ವಂ ಪರಮಾ ಭಕ್ತಿರುಚ್ಯತೇ" ಎಂಬಲ್ಲಿ ಉಪಪಾದಿತಗಳು; ೮೯೪ನೆಯ ಪುಟ ನೋಡಿ. ಆದುದರಿಂದಲೇ ಸಾರಾಸ್ವಾದಿನಿಯವರು "ಪರಭಕ್ತಿರುತ್ತರೋತ್ತರ ಸಾಕ್ಷಾತ್ಕಾರೇ ಚ್ಛಾತ್ಮಿಕಾ ಧೀಃ" ಪರಭಕ್ತಿಯು ಪರಮಾತ್ಮನನ್ನು ಉತ್ತರೋತ್ತರ ಸಾಕ್ಷಾತ್ಕರಿಸುವದರಲ್ಲಿ ಇಚ್ಛೆಯುಳ್ಳ ಜ್ಞಾನವಿಶೇಷವು ಎಂದು ವ್ಯಾಖ್ಯಾನಮಾಡಿರುತ್ತಾರೆ. **"ಪರಜ್ಞಾನಂ - ಉತ್ತರೋತ್ತರ ಸಾಕ್ಷಾತ್ಕಾರಃ, ಸಾಕ್ಷಾತ್ಕೃತೇ ನಿರಂತರಾನುಭವಭೂಷಾ ಪರಮಭಕ್ತಿಃ"** ಎಂದೂ ಮುಂದಕ್ಕೆ ವ್ಯಾಖ್ಯಾನವು; ಉತ್ತರೋತ್ತರ ಸಾಕ್ಷಾತ್ಕಾರವುಂಟಾಗೋಣವೇ ಪರಜ್ಞಾನವು.

**ಉತ್ತರೋತ್ತರಯೋಃ ಸ್ವಾಮಿ ಸಾಕ್ಷಾತ್ಕರಣ ಭೋಗಯೋಃ ।**
**ಪೂರ್ವಪೂರ್ವಕ್ಷಣೇಷ್ವತ್ರ ತದ್ಗೌಣತ್ವ ಮುದೀರಿತಮ್ ॥೯೨॥**

---

ಹೀಗೆ **ಸಾಕ್ಷಾತ್ಕಾರವುಂಟಾದರೆ**, ಪರಮಾತ್ಮನನ್ನು ಸರ್ವದಾ ಅನುಭವಿಸಬೇಕೆಂಬ ಉತ್ಕಟೇಚ್ಛೆಯು ಪರಮಭಕ್ತಿಯು. ಶ್ರೀ ಪೇತಿಕವರ್ಯರು ಈ ಮೂರು ಪದಗಳ ವ್ಯಾಖ್ಯಾನದಲ್ಲಿ ಒಪ್ಪಣೆ ಕೊಡಿಸಿರುವದೇನೆಂದರೆ— ಪರಭಕ್ತಿಃ – ಉತ್ತರೋತ್ತರ **ಸಾಕ್ಷಾತ್ಕಾರೇಚ್ಛಾತ್ಮಿಕಾಧೀಃ, ಸಾ ಚ "ಯಃಪ್ರೀತಿ" ರಿತ್ಯಾದಿಷ್ವಿವ ವಿಷಯ ಸ್ವಭಾವ ಜಾಸತ್ವಿಷ್ಟ ಸಾಧನತ್ವಬುದ್ಧಿಜಾ**, ಪರಜ್ಞಾನಂ – **ಉತ್ತರೋತ್ತರ** ಸಾಕ್ಷಾತ್ಕಾರಃ; **ಸಾಕ್ಷಾತ್ಕೃತೇ ನಿರಂತರಾನುಬುಭೂಷಾ ಪರಮಭಕ್ತಿಃ, ಅನುಭವಸ್ತ್ವಿಹ ಅನುಕೂಲತಮತ್ವೇನ** ಸಾಕ್ಷಾತ್ಕಾರ ಏವ"ಎಂಬದಾಗಿ. **ಪರಭಕ್ತಿ** – ಉತ್ತರೋತ್ತರ ಭಗವಂತನನ್ನು ಸಾಕ್ಷಾತ್ಕರಿಸಬೇಕೆಂಬ ಬುದ್ಧಿಯು. ಪರಜ್ಞಾನ ವೆಂದರೆ ಉತ್ತರೋತ್ತರ ಉಂಟಾಗುವ ಸಾಕ್ಷಾತ್ಕಾರವೇ; **ಪರಮ ಭಕ್ತಿ** ಎಂದರೆ ಹೀಗೆ ಸಾಕ್ಷಾತ್ಕಾರ ಉಂಟಾಗಲಾಗಿ ಅದು ಎಂದಿಗೂ ತಪ್ಪದೆ ನಿರಂತರವಾಗಿ ಆ ಸಾಕ್ಷಾತ್ಕಾರವನ್ನು ಅನುಭವಿಸಬೇಕೆಂಬ ಇಚ್ಛೆಯೇ ಪರಮಭಕ್ತಿ ಎನಿಸುತ್ತದೆ. **ಈ** ಪರಮಭಕ್ತಿರೂಪವಾದ ನಿಮ್ಮ ಇಚ್ಛೆಗೆ ಕಾರಣಭೂತವಾದ ಪ್ರೀತಿಯಿಂದುಂಟಾ ಗುವ ಆನಂದವು, ಪರಮಾತ್ಮನಿಗೂ ನಿತ್ಯಮುಕ್ತರಿಗೂ ಸಮವೆಂದು ಉಪನಿಷತು ಗಳಲ್ಲಿ "ಪರಮಂ ಸಾಮ್ಯಮುಪೈತಿ" "**ಶ್ರೋತ್ರಿಯಸ್ಯ ಚಾಕಾಮಹತಸ್ಯ**" ಇತ್ಯಾದಿ **ಸ್ಥ**ಳಗಳಲ್ಲೂ, "ಮಮ ಸಾಧರ್ಮ್ಯಮಾಗತಾಃ" ಎಂದು **ಸ್ಮೃ**ತಿಯಲ್ಲೂ "**ಭೋಗಮಾತ್ರ ಸಾಮ್ಯಲಿಙ್ಗಾಚ್ಚ**" ಎಂಬ ಬ್ರಹ್ಮಸೂತ್ರದಲ್ಲೂ ಹೇಳಲ್ಪಟ್ಟಿರು **ತ್ತ**ದೆ. ಆದುದರಿಂದ ಅಪ್ರವೃತ್ತಿಗಳ ಸ್ವರೂಪೈಕ್ಯವಾದವೂ, ದ್ವ್ಯತಿಗಳ ಆನಂದ ತಾರತಮ್ಯವಾದವೂ, ಎರಡೂ ಇದರಿಂದ ನಿರಸ್ತವು.

ಶರೀರವನ್ನು ಬಿಡುವ ಸಂದರ್ಭದಲ್ಲಾದರೂ, ಮೊದಲು ಪರಭಕ್ತಿಯಾದುದು ವೃದ್ಧಿ ಹೊಂದಿ ಪರಜ್ಞಾನ ಪರಮಭಕ್ತಿರೂಪಾವಸ್ಥೆಯನ್ನು ಹೊಂದುತ್ತದೆ ಎಂದಾ ದರೂ ಒಪ್ಪಿಕೊಳ್ಳಬಹುದು ಆದರೆ ಮುಕ್ತಾವಸ್ಥೆಯಲ್ಲಿ ಪರಭಕ್ತಿ ಪರ ಜ್ಞಾನ ಪರಮಭಕ್ತ್ಯೈಕ ಸ್ವಭಾವಂ ಮಾಂ ಕುರುಷ್ವ ಎಂಬ ಪ್ರಾರ್ಥನೆ ಎಂದಾ ಗಲಿ ಆಗಬಹುದು. ಆದರೆ ಹೀಗೆ ಅನ್ವಯಿಸಬಹುದೆಂದು ಹೇಳಿದುದು ಹೇಗೆ ಸಮಂಜಸವು? ನಿತ್ಯಮುಕ್ತರುಗಳೆಲ್ಲಾ ಅನುಭವವೆಲ್ಲಾ ಒಂದೇ ವಿಧವು; ಆನಂದ ದಲ್ಲಿ ಸಮತ್ವವನ್ನು ಹೇಳಿ ಪ್ರೀತಿಯಲ್ಲಿ ಪರಭಕ್ತಿ ಪರಮಭಕ್ತಿ ಇತ್ಯಾದಿ ತಾರತಮ್ಯ ಗಳನ್ನು ಹೇಳುತ್ತೀರಲ್ಲಾ ? ಇದು ಹೇಗೆ? ಎಂದಾಕ್ಷೇಪ ತಂದರೆ "**ಉತ್ತರೋ ತ್ತರಯೋಃ**" ಎಂಬ **ಕಾರಿಕೆಯಿಂದ** ಸಮಾಧಾನವನ್ನು ಹೇಳುತ್ತಾರೆ.—ಉತ್ತ **ರೋತ್ತರಯೋಃ** - ಮುಂದೆ ಮುಂದೆ ಉಂಟಾಗುವ, **ಸ್ವಾಮಿ** ಸಾ**ಕ್ಷಾತ್ಕರಣ ಭೋಗಯೋಃ** - ಶ್ರೀ ಪರವಾಸುದೇವನಾದ **ಸ್ವಾಮಿಯ** ಸಾಕ್ಷಾತ್ಸಂದರ್ಶನ,

ಪರಿಪೂರ್ಣಬ್ರಹ್ಮಾನುಭವರೂಪವಾದ ಆನಂದ, ಇವೆರಡೂ, **ಪೂರ್ವಪೂರ್ವಕ್ಷಣೇಚ್ಛತ್ವಾತ್** - ಅದಕ್ಕೆ ಪೂರ್ವ ಪೂರ್ವ ಭಾವಿಯಾದ ಕ್ಷಣದಲ್ಲುಂಟಾದ ಇಚ್ಛೆಯಿಂದ ಉಂಟಾಗುವದರಿಂದ, **ತನ್ಮೂಲತ್ವಮ್** – ಈ ಪರಭಕ್ತಿ ಪರಜ್ಞಾನ ಪರಮ ಭಕ್ತಿಗಳ ಮೂಲಕವಾಗಿ ಭಗವಂತನಿಗೆ ನಿರಂತರ ಮಾಡುವ ಕೈಂಕರ್ಯವೆಂಬುದು, **ಉದೀರಿತಮ್** – ಹೇಳಲ್ಪಟ್ಟಿತು; ಪ್ರಾಜ್ಞರಾದ ಆಚಾರ್ಯರುಗಳಿಂದ ಹೇಳಲ್ಪಟ್ಟಿತೆಂಬ ಭಾವವು. **ಪೂರ್ವಪೂರ್ವಕ್ಷಣೇಚ್ಛಾ** ಮೂಲಕವಾಗಿ ಪರಭಕ್ತ್ಯಾದಿಗಳೂ ಪ್ರಾಪ್ತವಾಗಿ ಪರಮಭಕ್ತಿಯಲ್ಲಿ ಪರ್ಯವಸಾನವನ್ನು ಹೊಂದಿ ತನ್ಮೂಲಕ ಕೈಂಕರ್ಯದಲ್ಲಿ ನಿರತಿಶಯವಾದ ಆದರವು ಉಂಟಾಗುತ್ತವೆಂಬ ಭಾವವು. ಪರಮಾತ್ಮಸಾಕ್ಷಾತ್ಕರಣರೂಪವಾಗಿ ಅನುಕೂಲತಮವಾದ ಅನುಭವವೇ ಭೋಗವೆನಿಸುತ್ತದೆ. ನಿತ್ಯರೂ ಮುಕ್ತರೂ ಭಗವಂತನೂ ಹೀಗೆ ಈ ಮೂವರಿಗೂ ಇಂತಹ ನಿರತಿಶಯ ಪ್ರೀತಿರೂಪ ಅನುಭವವು ಒಂದೇಯಾಗಿ, ಅದೇ ಆನಂದವೆಂದೂ ಹೇಳಿಸಿಕೊಳ್ಳುವುದರಿಂದ, ಈ ಮೂವರ ಭೋಗದಲ್ಲೂ ಸಾಮ್ಯವೇ ಎಂಬುದು ಸಿದ್ಧವು. ಮುಕ್ತನಿಗೆ ಹೇಗೆ ನಿರತಿಶಯಾನಂದವೆಂದರೆ, ಪರಿಪೂರ್ಣ ಪರಮಾತ್ಮಸಾಕ್ಷಾದ್ದರ್ಶನದಿಂದ. ಎಂತಹ ನಿರತಿಶಯವಾದ ಅನುಕೂಲತಮವಾದ ದಶೆಯು ತನಗೆ ಪರಮಾತ್ಮಕೃಪೆಯಾ ದೊರೆಯಿತೆಂಬ ಅನುಸಂಧಾನದಿಂದುಂಟಾದ ಅನುಭವವು ಇಲ್ಲಿ ಭೋಗಶಬ್ದದಿಂದ ಬೋಧಿತವು. ಏಕೆಂದರೆ ಭೋಗ್ಯವೂ ಕೂಡ ಪ್ರೀತಿರೂಪವಾದುದರಿಂದ. ಹೀಗೆ ಹೇಳಿದುದಾದರೆ, ಎಂದರೆ ಸಾಕ್ಷಾತ್ಕಾರವೂ ಭೋಗವೂ ಎರಡೂ ಒಂದೇ ವಿಧ ಅನುಭವರೂಪವಾದರೆ, ಮೂಲದಲ್ಲಿ ಸಾಕ್ಷಾತ್ಕರಣಭೋಗಯೋಃ" ಎಂದು ದ್ವಿವಚನ ಪ್ರಯೋಗವು ಏತಕ್ಕೆ ? ಪೂರ್ವ ಪೂರ್ವ ಕ್ಷಣಗಳಲ್ಲಿ ಇಷ್ಟವಾದುದಾಗಿ. ಉತ್ತರೋತ್ತರ ಕ್ಷಣಗಳಲ್ಲಿ ಉಂಟಾಗುವದರಿಂದ ಹಾಗೆ ಭೇದವ್ಯಪದೇಶವೆಂದು ಭಾವಿಸತಕ್ಕದ್ದು. ಪರಭಕ್ತಿರೂಪ ಪ್ರೀತಿವಿಶೇಷದಿಂದ ಸಾಕ್ಷಾತ್ಕರಣ ಉಂಟಾಗಿ, ಅನಂತರ ಮುಕ್ತಿ ದಶೆಯಲ್ಲಿ ಪರಿಪೂರ್ಣಬ್ರಹ್ಮಾನುಭವರೂಪಭೋಗ ಉಂಟಾಗುವದರಿಂದ ತನ್ಮೂಲಕವಾಗಿ ಭಗವಂತನ ಕಾಲನ್ನು ಒತ್ತುವದೇನು, ಚಾಮರ ಬೀಸುವದೇನು, ಇವೇ ಮೊದಲಾದ ಕೈಂಕರ್ಯದಲ್ಲಿ ಆಸಕ್ತಿಯೂ ಉಂಟಾಗುವುದರಿಂದ ಸಾಕ್ಷಾತ್ಕರಣಕ್ಕೂ ಭೋಗಕ್ಕೂ ಸ್ವಲ್ಪ ವೈಲಕ್ಷಣ್ಯವುಂಟೆಂಬ ಭಾವದಿಂದ ದ್ವಿವಚನಕ್ಕೇನೂ ಅನುಪಪತ್ತಿಯಿಲ್ಲವು. ಹೀಗೆ ಇವೆರಡಕ್ಕೂ ಕಾರಣವಾಗಿ, ಪೂರ್ವಪೂರ್ವ ಕ್ಷಣದಲ್ಲಿ ಪರಭಕ್ತ್ಯಾದ್ಯವಸ್ಥೆಗಳು ಇಷ್ಟವಾದವುಗಳಾಗಿ, ಈ ಸಾಕ್ಷಾತ್ಕರಣ ಭೋಗಗಳಿಗೆ ಪರಭಕ್ತ್ಯಾದಿಗಳ ಮೂಲತ್ವವನ್ನು ಹೇಳುವುದೂ ಉಪಪನ್ನವೇ. ಮೋಕ್ಷದಶೆಯಲ್ಲಿ ಈ ಸಾಕ್ಷಾತ್ಕರಣ ಭೋಗಗಳಿಗೆ ತುಂಬಾ ವ್ಯತ್ಯಾಸವಿಲ್ಲದೆ ಏಕಭಾವವು ಕೊಡುತ್ತದೆ. ಈ ಅನುಭವ ವೇಳೆಗಳಲ್ಲಿ ಒಬ್ಬ ಮುಕ್ತನು ಪಿತೃಲೋಕಕಾಮನಾದರೆ **"ಸಙ್ಕಲ್ಪಾದೇವಾಸ್ಯ ಪಿತರಸ್ಸಮುತ್ತಿಷ್ಠನ್ತೇ"** (ಛಾಂ. ೮–೨-೧) ಎಂಬಲ್ಲಿ ಹೇಳಿ

**ಶರೀರ ಪಾತಸಮಯೇ ಹಾರ್ದಸ್ಯಾನುಗ್ರಹ ಸ್ತ್ವಯಮ್ ।**
**ಪರಿಪಾಕಂ ಪ್ರಪನ್ನಾನಾಂ ಪ್ರಯಚ್ಛತಿ ತಥಾವಿಧಮ್ ॥೯೩॥**

---

ರುವ ಹಾಗೆ ಸಙ್ಕಲ್ಪಮಾತ್ರದಿಂದಲೇ ಆತನ ಪಿತೃಗಳು ಎದುರಿಗೆ ನಿಲ್ಲುವರೆಂದು ಹೇಳಲ್ಪಟ್ಟಿರುತ್ತದೆ; ಮತ್ತು ಮುಕ್ತನು "**ಜಕ್ಷತ್ಕ್ರೀಡನ್ ರಮಮಾಣಃ**" (ಛಾಂ. ೮.೧೨.೩) ಪರಮಾತ್ಮನೊಂದಿಗೆ ಸರ್ವವಿಧ ಭೋಗವನ್ನು ಹೊಂದುವನು, ತನ್ನಿಷ್ಟಾನುಸಾರವಾಗಿ ನಾನಾವಿಧ ಭೋಗವನ್ನೂ ಅನುಭವಿಸುವನೆಂದು ಹೇಳಿರುವದರಿಂದಲೂ ಇಂತಹ ವೈವಿಧ್ಯದಿಂದಲೂ ವಿರೋಧವೇನೂ ಇಲ್ಲವು.

ಆದುದರಿಂದ ಪೂರ್ವಪೂರ್ವ ಕ್ಷಣದಲ್ಲಿ ಪರಭಕ್ತ್ಯಾದಿ ಅವಸ್ಥಾಭೇದವೂ ಸಾಕ್ಷಾತ್ಕಾರವೂ, ಅನಂತರ ಮುಕ್ತದಶೆಯಲ್ಲಿ ಭೋಗಸಾಮ್ಯವೂ, ಕೈಂಕರ್ಯದಲ್ಲಿ ರುಚಿಯೂ, ಏಕರೂಪವೇಂಬುದೂ ಪರಸ್ಪರ ವಿರುದ್ಧವಾಗುವದಲ್ಲವು. ಇವುಗಳು ಉತ್ತರಕ್ಷಣಗಳಲ್ಲಿ ಉಂಟಾಗುವುಗಳಾಗಿ ಇದಕ್ಕೆ ಕಾರಣವಾಗಿ ಪೂರ್ವಕ್ಷಣಗಳಲ್ಲಿ ಉಂಟಾದ ಪರಭಕ್ತ್ಯಾದ್ಯವಸ್ಥೆಗಳಾದುದರಿಂದ ಅನುಭವ ಕೈಂಕರ್ಯಗಳಿಗೆ ಪರಭಕ್ತ್ಯಾದಿಗಳ ಮೂಲತ್ವವನ್ನು ಹೇಳುವದು, ಸರ್ವ ಸಮಂಜಸವೇ ಎಂಬುದು ಮುಖ್ಯ ತಾತ್ಪರ್ಯವು.

ಹೀಗೆ ಪರಭಕ್ತಿಯಿಂದ ಸಾಕ್ಷಾತ್ಕಾರವು, ಅದು ಪರಜ್ಞಾನ ಪರಮಭಕ್ತಿಯಾಗಿ ವೃದ್ಧಿಹೊಂದಿ, ಪರಿಪೂರ್ಣಾನುಭವರೂಪ ಭೋಗ, ಭಗವತ್ಕೈಙ್ಕರ್ಯಪ್ರಾಪ್ತಿ ಇವುಗಳು, ಭರನ್ಯಾಸನಿಷ್ಠನಿಗೆ ಯಾವಾಗ ಉಂಟಾಗುತ್ತದೆ? ಎಂಬ ಸಂದರ್ಭದಲ್ಲಿ ಉಪಾಸನನಿಷ್ಠನಿಗೆ ಉಂಟಾಗುವಹಾಗೆ ಬಹುಕಾಲ ನಿರೀಕ್ಷಣೆಯಿಂದ ಪ್ರಾಪ್ತವಾಗುವಹಾಗಲ್ಲವು. ಬಹು ಬೇಗನೆಯೇ ದೇಹಾವಸಾನಕಾಲದಲ್ಲೇ ಉಂಟಾಗುತ್ತವೆಂದು ಉಪದೇಶಿಸುತ್ತಾರೆ. **ಶರೀರಪಾತಸಮಯೇ** - ಭರನ್ಯಾಸನಿಷ್ಠನಿಗೆ ಶರೀರವಿಯೋಗ ಉಂಟಾಗುವ ಕಾಲದಲ್ಲೇ, **ಹಾರ್ದಸ್ಯ** - ಪ್ರಪನ್ನನ ವಿಷಯದಲ್ಲಿ ದಯಾಸಾಗರನಾದ ಹೃದಯದಲ್ಲಿರುವ ಭಗವಂತನ, **ಅನುಗ್ರಹಃ** - ಅನುಗ್ರಹವು, **ಪ್ರಪನ್ನಾನಾಂ** - ಭರನ್ಯಾಸನಿಷ್ಠರಾದ ಪ್ರಪನ್ನರಿಗೆ, **ತಥಾವಿಧಂ ಪರಿಪಾಕಮ್** - ಆ ವಿಧವಾದ ಪರಿಪಾಕವನ್ನು, ಎಂದರೆ ಪರಭಕ್ತ್ಯಾದಿ ಮೂಲಕ ಸಾಕ್ಷಾತ್ಕಾರ, ಅನುಭವರೂಪ ಭೋಗ, ಕೈಂಕರ್ಯಪ್ರಾಪ್ತಿ, ಹೀಗೆ ಪರಿಪಾಕವನ್ನು **ಪ್ರಯಚ್ಛತಿ** - ದಯಪಾಲಿಸುತ್ತದೆ. ಇವುಗಳೆಲ್ಲಾ ಬಹು ಬೇಗ ಬೇಗ ಪ್ರಾಪ್ತವಾಗುತ್ತವೆಂಬ ಭಾವವು. ಇಲ್ಲಿ **ಪ್ರಪನ್ನಾನಾಂ** - ಎಂಬುದರಿಂದ ಭಕ್ತಿಯೋಗನಿಷ್ಠನೂ ಭರನ್ಯಾಸನಿಷ್ಠನೂ ಬೋಧಿತವಾದರೂ ಪ್ರಕರಣಾನುಗುಣವಾಗಿ ಪ್ರಪತ್ತಿನಿಷ್ಠನೇ ಪ್ರಪನ್ನನೆಂದು ಇಟ್ಟುಕೊಳ್ಳತಕ್ಕದ್ದು. ಇದರಿಂದ ಇಷ್ಟು ಶೀಘ್ರವಾಗಿ ಅನುಗ್ರಹವು ಭಕ್ತಿಯೋಗನಿಷ್ಠನಿಗಿಲ್ಲವೆಂಬುದು ಏರ್ಪಟ್ಟಿತು. ಅಪ್ರಪನ್ನರಿಗಂತೂ ದರೋ ಇಂತಹ ಅನುಗ್ರಹವಿಲ್ಲವೆಂಬುದೂ ವ್ಯಕ್ತವು. ಈ ಭರನ್ಯಾಸನಿಷ್ಠನು

**ಅಙ್ಕೋಲತೈಲ ಸಿಕ್ತಾನಾಂ ಬೀಜಾನಾ ಮಚಿರಾದ್ಯಥಾ ।**
**ವಿಪಾಕಃ ಫಲಪರ್ಯನ್ತಸ್ತಥಾತ್ರೇತಿ ನಿದರ್ಶಿತಮ್ ॥೯೪॥**

---

ಮಾಡಿರುವ ಶರಣಾಗತಿಮಾಹಾತ್ಮ್ಯೆಯಿಂದ ಇಂತಹ ಪರಿಪಾಕವೆಲ್ಲಾ ಭಗವದನುಗ್ರಹದಿಂದ ಬಹು ಕ್ಷಿಪ್ರವಾಗಿಯೇ ದೊರೆಯುತ್ತದೆಂಬುದು ಶ್ಲೋಕಾರ್ಥವು. ಈ ಶ್ಲೋಕದಲ್ಲಿ "**ಶರೀರ ಪಾತಸಮಯೇ**" ಎಂಬುದಕ್ಕೆ ಬದಲಾಗಿ **ಶರೀರ ಪಾತಕಾಲೇತು** ಎಂಬ ಪಾಠಾಂತರ ಉಂಟು. ಆಗ ತು ಶಬ್ದಾಭಿಪ್ರಾಯ ವೇನೆಂಬುದನ್ನು ಆಲೋಚಿಸತಕ್ಕದ್ದಾಗಿರುತ್ತದೆ. ಶರೀರವಿರುವ ಕಾಲವಲ್ಲಾದರೋ ಉಪಾಸನಾ ನಿಷ್ಠನಲ್ಲದೆ ಭರನ್ಯಾಸನಿಷ್ಠನಾದ ಪ್ರಪನ್ನನಿಗೆ ಪರಭಕ್ತಿ ಉಂಟಾಗುವದೂ ತನ್ಮೂಲಕ ಪರಜ್ಞಾನ ಪರಮಭಕ್ತಿಪ್ರಾಪ್ತಿಯೂ, ಸಾಕ್ಷಾತ್ಕಾರ ಭೋಗಾದಿಗಳು ಉಂಟಾಗುವದೂ, ಕಷ್ಟತರವೆಂಬ ಭಾವವನ್ನು ತು ಶಬ್ದವು ಸೂಚಿಸುತ್ತದೆ. ಹಾಗಾದರೆ ಸಂಸಾರದೆಶೆಯಲ್ಲಿ ಭರನ್ಯಾಸನಿಷ್ಠರಿಗೆ ಯಾರಿಗೂ ಲಭಿಸುವದಿಲ್ಲವೋ ? ಎಂದರೆ ಲಭಿಸುವದು ದುರ್ಲಭವೆಂದೂ ಆಳ್ವಾರಾಚಾರ್ಯರುಗಳಿಗೆ ಲಭಿಸಿವೆ ಎಂದೂ ಮುಂದೆ ಹೇಳುತ್ತಾರೆ. ಆದುದರಿಂದ ಈ ಪಾಠಾಂತರವೇ ವಿಶೇಷಾರ್ಥ ಬೋಧಕವಾಗಿರುತ್ತದೆ. ಈ ಪರಿಪಾಕದಶೆಯೆಲ್ಲಾ ಬಹು ಕ್ಷಿಪ್ರದಲ್ಲೇ ಹೇಗೆ ಪ್ರಾಪ್ತವಾಗುತ್ತದೆಂಬುದನ್ನು ದೃಷ್ಟಾಂತಗಳಿಂದ ಉಪಪಾದಿಸುತ್ತಾರೆ. **ಅಙ್ಕೋಲತೈಲ ಸಿಕ್ತಾನಾಂ** - ಅಙ್ಕೋಲಬೀಜಗಳ ತೈಲದಲ್ಲಿ ನೆನಸಲ್ಪಟ್ಟ, **ಬೀಜಾನಾಂ** - ಇತರ ಬೀಜಗಳಿಗೆ, **ಅಚಿರಾತ್** - ಬಹು ಶೀಘ್ರದಲ್ಲಿ, **ಫಲಪರ್ಯನ್ತಃ**. ಮೊಳಕೆ ಚಿಗರು ಹೂವು ಕಾಯಿ ಫಲ ಪರ್ಯನ್ತವಾದ, **ವಿಪಾಕಃ** - ಪರಿಪಾಕವು, **ಯಥಾ** - ಹೇಗೋ **ತಥಾ**-ಹಾಗೆಯೇ, **ಅತ್ರ** - ಈ ಸಂದರ್ಭದಲ್ಲೂ, ಎಂದರೆ ಹಾರ್ದನ ಅನುಗ್ರಹದಿಂದ ಪ್ರಪತ್ತಿನಿಷ್ಠನಿಗೆ ದೇಹಾವಸಾನಕಾಲದಲ್ಲಿ ಪರಜ್ಞಾನಾದಿಗಳ ಮೂಲಕ ಸಾಕ್ಷಾತ್ಕರಣ ಭೋಗಕೈಂಕರ್ಯಾದಿಗಳ ಪ್ರಾಪ್ತಿಯೂ, **ಇತಿ** - ಎಂಬದಾಗಿ, **ನಿದರ್ಶಿತಮ್** - ನಿದರ್ಶಿಸಲ್ಪಟ್ಟಿತು, ಉದಾಹರಿಸಲ್ಪಟ್ಟಿತು. ಬೀಜವನ್ನು ನೆಟ್ಟರೆ ಮೊಳಕೆ ಒಡೆಯುವದು, ಚಿಗರುವದು, ಹೂವು ಬಿಡುವದು, ಕಾಯಾಗುವದು ಫಲವಾಗುವದು, ಇವೆಲ್ಲಕ್ಕೂ ಬಹುಕಾಲವು ಆವಶ್ಯಕವು. ಅಂತಹ ಆ ಬೀಜವನ್ನೇ ಅಂಕೋಲಬೀಜತೈಲದಲ್ಲಿ ನೆನಸಿ ಹಾಕಿದರೆ, ಈ ಎಲ್ಲಾ ಪರಿಣಾಮಗಳು ಬಹು ಬೇಗನೆ ಎಂದರೆ ೨-೩ ಘಳಿಗೆಗಳಲ್ಲೇ ಹೇಗೆ ಉಂಟಾಗುತ್ತದೋ ಹಾಗೆ ಹಾರ್ದಾನುಗ್ರಹೀತನಾದ ಭರನ್ಯಾಸನಿಷ್ಠನಿಗೆ ದೇಹಾವಸಾನಕಾಲದಲ್ಲಿ (ಈ ಪರಭಕ್ತಿ ಪರಜ್ಞಾನ ಪರಮಭಕ್ತಿಗಳು ಶೀಘ್ರದಲ್ಲೇ ಪ್ರಾಪ್ತವಾಗುತ್ತವೆಂಬ ಭಾವವು ಅಂಕೋಲತೈಲಕ್ಕೆ ಇಂತಹ ಶಕ್ತಿಯುಂಟೆಂಬ ಪ್ರತೀತಿಯು ಇರುತ್ತದೆ.

ಇನ್ನೊಂದು ದೃಷ್ಟಾಂತದಿಂದಲೂ ಅದನ್ನೇ ವ್ಯಕ್ತಪಡಿಸುತ್ತಾರೆ. ಹಿಂದೆ ಒಂದು ಲೌಕಿಕ ದೃಷ್ಟಾಂತದಿಂದ ವ್ಯಕ್ತಪಡಿಸಿದರು. ಈ ಶ್ಲೋಕದಲ್ಲಿ ಒಂದು

**ದುಷ್ಟೇನ್ದ್ರಿಯ ವಶಾಚ್ಚಿತ್ತಂ ನೃಣಾಂ ಯತ್ಕಲ್ಮಷೈ ರ್ವೃತಮ್ ।**
**ತದಂತಕಾಲೇ ಸಂಶುದ್ಧಿಂ ಯಾತಿ ನಾರಾಯಣಾಲಯೇ ॥ ೯೫ ॥**

---

ವೈದಿಕ ದೃಷ್ಟಾನ್ತದಿಂದ ಸಮರ್ಥಿಸಿ ಹೇಳುತ್ತಾರೆ. ಈ ಶ್ಲೋಕವು ಶ್ರೀ ದೇಶಿಕರವರ ಕಾರಿಕೆಗಳ ಮಧ್ಯದಲ್ಲಿದ್ದರೂ, ಅವರು ಉಪಪಾದಿಸಬೇಕಾದ ಪ್ರಕರಣಕ್ಕೆ ಸರಿಹೋಗುವದರಿಂದ ಅದನ್ನೇ ಇಲ್ಲಿ ಉದಾಹರಿಸಿರುತ್ತಾರೆ. ಇದು ಸಾತ್ವತ ಸಂಹಿತೆಯ ಶ್ಲೋಕವು. ಮೋಕ್ಷಾರ್ಥಿಯು ಮಾಡತಕ್ಕ ವ್ರತಕ್ಕೆ ಅಂಗವಾಗಿ ನಾರಾಯಣಾಲಯದಲ್ಲಿ ಎಂದರೆ ದಿವ್ಯದೇಶದಲ್ಲಿ ವಾಸವು ಹೇಳಲ್ಪಟ್ಟಿರುತ್ತದೆ. ಇದರಿಂದ **ದೇಹಾವಸಾನಕಾಲದಲ್ಲಿ** ಬಹುಕಾಲದಿಂದಲೂ ಸಂಚಿತಗಳಾದ ಸರ್ವಾಪರಾಧಗಳೆಲ್ಲವೂ ಪರಮಾತ್ಮಾನುಗ್ರಹದಿಂದ ಕಳೆದುಹೋಗಿ, ಹೇಗೆ ಆತ್ಮನು ಪರಿಶುದ್ಧನಾಗುತ್ತಾನೋ, ಹಾಗೆಯೇ ಈ ಭರನ್ಯಾಸನಿಷ್ಠನಿಗೆ ಬಹು ಶೀಘ್ರವಾಗಿ, ಹಾದಾರ್ಯನುಗ್ರಹದಿಂದ ಪರಭಕ್ತ್ಯಾದಿಗಳ ಪ್ರಾಪ್ತಿ, ಸಾಕ್ಷಾತ್ಕರಣ ಭೋಗಾದಿಗಳ ಲಾಭವೆಲ್ಲವೂ ಉಂಟಾಗುತ್ತದೆಂದು ಹೇಳುತ್ತಾರೆ.—**ನೃಣಾಂ** - ಮನುಷ್ಯರ, ಈ ಸಂದರ್ಭದಲ್ಲಿ ಮೋಕ್ಷಾರ್ಥಿಗಳ ಎಂಬರ್ಥವನ್ನು ಹೇಳಬಹುದು. ಹೇಗೆಂದರೆ, **ನರಮತೀತಿ ನರಃ** ಎಂಬ ವ್ಯುತ್ಪತ್ತಿ ಮೂಲಕ ಐಹಿಕಗಳಲ್ಲಿ ರಮಿಸದೇ ಇರುವ ವೈರಾಗ್ಯವುಳ್ಳವರು, ಅಂತವರ, **ಯತ್ ಚಿತ್ತಂ** - ಯಾವ ಮನಸ್ಸು, **ದುಷ್ಟೇನ್ದ್ರಿಯವಶಾತ್** - ಮಾಡಿಸಿ ಕೊಬ್ಬಿರುವ ದುಷ್ಟಗಳಾದ ದಶೇನ್ದ್ರಿಯಗಳಿಗೆ ವಶವಾಗಿರುವದರಿಂದ, **ಕಲ್ಮಷೈಃ** - ಅನಾದಿಯಾಗಿ ಬಂದ ಪಾಪರಾಶಿಗಳಿಂದ, **ವೃತಂ** – ಆವರಿಸಲ್ಪಟ್ಟಿರುತ್ತದೋ, **ತತ್** - ಅಂತಹ ಮನಸ್ಸು ಕೂಡ, **ನಾರಾಯಣಾಲಯೇ**-ಶ್ರೀಮನ್ನಾರಾಯಣನ ದಿವ್ಯಕ್ಷೇತ್ರದಲ್ಲಿ ಎಂದರೆ ಅಲ್ಲಿ ವಾಸಮಾಡುವುದರಿಂದ, **ಅನ್ತಕಾಲೇ** – ದೇಹಾವಸಾನ ಕಾಲದಲ್ಲಿ, **ಸಂಶುದ್ಧಿಮ್** ಬಹುಜನ್ಮಗಳನ್ನೆತ್ತಿ ಅಂತಹ ಅಪರಾಧಗಳಿಗೆ ವಿಧಿಸಿರುವ ಪ್ರಾಯಶ್ಚಿತ್ತಗಳನ್ನು ಅನುಷ್ಠಿಸಿದರೂ ಪರಿಶುದ್ಧತೆಯುಂಟಾಗದೆ ಇರುವುದು ಈಗ ಬಹು ಬೇಗ ಪರಿಶುದ್ಧತೆಯನ್ನು, **ಯಾತಿ** - ಹೊಂದುತ್ತದೆ. ಅದೇ ಇಂದ್ರಿಯಗಳು ಸತ್ತಾದರೆ, ಮನಸ್ಸೂ ಸನ್ಮನಸ್ಸಾಗಿ ಮೋಕ್ಷಹೇತುವು. ಈ ಶ್ಲೋಕವು ಹಿಂದೆ ಸ್ಥಾನ ವಿಶೇಷಾಧಿಕಾರದಲ್ಲಿ ಉದಾಹೃತವು. ೧೬೩ನೆಯ ಪುಟವನ್ನು ನೋಡಿ. ಇಲ್ಲಿ ಹೇಳಿರುವ ದೃಷ್ಟಾನ್ತವು ಈ ಸಂದರ್ಭಕ್ಕೆ ಹೇಗೆ ಅನ್ವಯಿಸುತ್ತದೆಂಬುದನ್ನ ಮುಂದಿನ ಕಾರಿಕೆಯಾದ **"ಇತಿ ವ್ರತ ವಿಶೇಷೇ"** ಎಂಬಲ್ಲಿ ಉಪಪಾದಿಸುತ್ತಾರೆ.—**ಇತಿ** ಎಂಬದಾಗಿ—ಎಂದರೆ ಮೇಲಿನ ಶ್ಲೋಕದಲ್ಲಿ ಹೇಳಿರುವಹಾಗೆ, **ವ್ರತವಿಶೇಷೇ** – ಮೋಕ್ಷಕ್ಕಾಗಿ ಅನುಷ್ಠಿಸುವ ವ್ರತವಿಶೇಷದಲ್ಲಿ, **ಸಾತ್ವತಾದಿಷು** - ಸಾತ್ವತ ಸಂಹಿತೆ ಮೊದಲಾದವುಗಳಲ್ಲಿ **ಯತ್ ಶಿಷ್ಯತೇ** - ಯಾವುದು ಉಪದೇಶಿಸಲ್ಪಟ್ಟಿರುತ್ತದೋ **ತದ್ವತ್** - ಅದರಹಾಗೆಯೇ, **ಅತ್ರ** - ಈ ಸಂದರ್ಭದಲ್ಲೂ, **ಗದ್ಯೋಕ್ತಾಂತ್ಯದ**

**ಇತಿ ವ್ರತ ವಿಶೇಷೇ ಯತ್ಸಾತ್ತ್ವತಾದಿಷು ಶಿಷ್ಯತೇ ।**
**ತದ್ವದತ್ರೋಪಪದ್ಯೇತ ಗದ್ಯೋಕ್ತಾಂತ್ಯ ದಶಾಗಮಃ ॥ ೯೬ ॥**

---

**ಶಾಗಮಃ-**ಶ್ರೀ ಯತಿವರ್ಯರೂ ಶರಣಾಗತಿಗದ್ಯದಲ್ಲಿ ಹೇಳಿರುವ ಪ್ರಪನ್ನನಿಗೆ ಹಾರ್ದಾನುಗ್ರಹದಿಂದುಂಟಾಗುವ ಅನ್ತಿಮದಶಾಪ್ರಾಪ್ತಿಯು, **ಉಪಪದ್ಯತೇ**-ಸಮಂಜಸವಾಗುದೇ. ಮೋಕ್ಷಾರ್ಥಿಯು ಅನುಷ್ಠಿಸತಕ್ಕ ವ್ರತಕ್ಕೆ ಅಂಗವಾಗಿ ವಿಧಿಸಿರುವ ದಿವ್ಯಕ್ಷೇತ್ರವಾಸದಿಂದ, ಅನೇಕ ಸ್ನಾನಗಳಿಂದ, ಅನೇಕ ಪ್ರಾಯಶ್ಚಿತ್ತಗಳಿಂದಲೂ ಪರಿಶುದ್ಧವಾಗದಷ್ಟು ಪಾಪರಾಶಿಗಳಿಂದ ಕಲುಷಿತವಾಗಿ ದುಷ್ಟೇನ್ದ್ರಿಯಗಳಿಗೆ ವಶನಾದ ಮನಸ್ಸು ಹೇಗೆ ದೇಹಾವಸಾನಕಾಲದಲ್ಲಿ ಕಲ್ಮಷಗಳೆಲ್ಲಾ ತೊಲಗಿ ಪರಿಣಾಮವನ್ನು ಹೊಂದಿ ಅಲ್ಪಕಾಲದಲ್ಲೇ ಪರಿಶುದ್ಧವಾಗುತ್ತದೋ, ಹಾಗೆಯೇ ಈ ಭರನ್ಯಾಸನಿಷ್ಠನಿಗೆ ದೇಹಾವಸಾನಕಾಲದಲ್ಲಿ ಹಾರ್ದನಾದ ಭಗವಂತನ ಅನುಗ್ರಹವೂ ಬಹು ಕ್ಷಿಪ್ರದಲ್ಲೇ, ಪರಭಕ್ತಿ ಪರಜ್ಞಾನ ಪರಮಭಕ್ತಿಗಳು, ಸಾಕ್ಷಾತ್ಕರಣ, ಭಗವದನುಭವ, ಇವುಗಳ ಪ್ರಾಪ್ತಿಯನ್ನೆಲ್ಲಾ ಕ್ರಮವಾಗಿ ಬಹು ಶೀಘ್ರದಲ್ಲೇ ಉಂಟುಮಾಡುತ್ತದೆ ಬ ಭಾವವು.

ಶ್ರೀ ಯತಿವರ್ಯರ ಶರಣಾಗತಿಗದ್ಯದ ದಿವ್ಯಸೂಕ್ತಿಗೆ ಪರಭಕ್ತ್ಯಾದಿಗಳ ಮೂಲಕವಾಗಿ ಸಾಕ್ಷಾತ್ಕರಣವೂ ಅನುಭವವೂ ಕೈಂಕರ್ಯವೂ ಸಹ ದೇಹಾವಸಾನಕಾಲದಲ್ಲೂ ತದನಂತರವೂ ಲಭಿಸುತ್ತವೆ ಎಂದೇನೋ ಸಮಾಧಾನವನ್ನು ಹೇಳಿದಿರಿ ; ಆದರೆ ದೇಹವಿರುವಾಗಲೇ ನಮ್ಮಾಳ್ವಾರ್ರವರೂ ನಾಥಮುನಿಗಳೂ ಸಹ ಧ್ಯಾನದಿಂದ ಪರಮಪುರುಷನನ್ನು ಸಾಕ್ಷಾತ್ಕರಿಸಿದರೆಂಬ ಪ್ರಸಿದ್ಧಿಯುಂಟು. ; ತಿರುಪ್ಪಾಣಾಳ್ವಾರ್ರವರೂ, ತಿರುಮಜ್ಗೈಯಾಳ್ವಾರ್ರವರೂ ಶ್ರೀ ರಜ್ಗನಾಥನನ್ನು ಸಾಕ್ಷಾತರಿಸಿದರೆಂದು ಅವರ ಚರಿತ್ರೆಗಳಿಂದ ಕಂಡು ಬರುತ್ತದೆ. ಹಾಗೆಯೇ ಯಾಮುನ ಮುನಿಗಳು, ಶ್ರೀ ಭಾಷ್ಯಕಾರರೂ ಸಹ ಸಾಕ್ಷಾತ್ಕರಿಸಿದ ಇತಿಹಾಸಗಳುಂಟು. ಸಾರದೀಪಿಕೆಯವರು ಆದಿಶಬ್ದದಿಂದ ಕುರುಕೈಕ್ಕಾವಲಪ್ಪರ್, ತಿರುಕ್ಕಚ್ಚಿನಂಬಿ ಎಂಬೆರ ಮಾನಾರ್‌ರು ಹೇಳಲ್ಪಟ್ಟರೆಂದು ವ್ಯಾಖ್ಯಾನವನ್ನು ಬರೆದಿತ್ತಾರೆ. ಶ್ರೀ, ಭಾಷ್ಯಕಾರರು ಶರಣಾಗತಿ ಗದ್ಯವನ್ನು ರಚಿಸಿದಾಗ ಶ್ರೀ ರಂಗನಥನನ್ನು ಅನುಭವಿಸಿ ಅವರೊಂದಿಗೆ ನಡೆದ ಉಕ್ತಿ ಪ್ರತ್ಯುಕ್ತಿಗಳನ್ನೇ ಅಲ್ಲಿ ತಿಳಿಸಿರತ್ತಾರೆಂಬುದು ಪ್ರಸಿದ್ಧವಾದ ವೃತ್ತಾಂತವು. ಶ್ರೀ ಕಾಂಚಿಪೂರ್ಣರಿಗೆ ಶ್ರೀ ವರದರಾಜರು ಪ್ರತ್ಯಕ್ಷರೆಂದು ಹೇಳುತ್ತಾರೆ. ಹಾಗೆಯೇ ಶ್ರೀ ನಿಗಮಾಂತದೇಶಿಕರಿಗೂ ಶ್ರೀರಂಗನಾಥನು ಪ್ರತ್ಯಕ್ಷನಾಗಿ ವೇದಾಂತಾಚಾರ್ಯರೆಂಬ ಬಿರುದು ಪ್ರಾಪ್ತವಾಯಿತೆಂದೂ, ಹಾಗೆಯೇ ಶ್ರೀ ಹಯಗ್ರೀವರೂ ಸಹ ಅವರಿಗೆ ಪ್ರತ್ಯಕ್ಷರೆಂದೂ ಪ್ರಸಿದ್ಧಿಯುಂಟು. ಸಂಸಾರದೆಶೆಯಲ್ಲೇ ಇಂತಹ ಸುಕೃತಪರಿಪಾಕವು ಹೇಗೆ ಉಂಟಾಯಿತು ? ಎಂದರೆ ಪರಮಪುರುಷನ ಅನುಗ್ರಹವಿಶೇಷವೆಂದು ಸಮಾಧಾನವನ್ನು ಹೇಳುತ್ತಾರೆ.—

**ಅನುಗ್ರಹ ವಿಶೇಷೇಣ ಕೇನಚಿತ್ಪರಮಾತ್ಮನಃ ।**
**ಕುರುಕಾಧೀಶ ನಾಥಾದ್ಯಾಃ ಪ್ರಾಗಪ್ಯನ್ವಭವನ್ ಪ್ರಭುಮ್ ॥ ೯೭ ॥**

**ಶ್ರೀ ಶಠಾರಿ ದಿವ್ಯಸೂಕ್ತಿಷು ಏತದ್ದ್ವಯಾರ್ಥಾನುಸಂಧಾನಮಪಿ**
**ವ್ಯಕ್ತಮಿತಿ ಸಂಪ್ರದಾಯಂ ಪ್ರದರ್ಶಯತಿ**

---

(ಇ) ದ್ವಯುಕ್ತಿ ಲರ್ಥತ್ತ್ರೈ ನಮ್ಮಾಳ್ವಾರುಮ್ (೧) "ತಿರುನಾರಣ

---

ಕೆಲವು ಸುಕೃತಿಗಳು ಉಪಾಸನಾದಿಗಳನ್ನು ಮಾಡದಿದ್ದರೂ ಸುಕೃತ ಪರಿಪಾಕದಿಂದ ಪ್ರಾಪ್ತವಾದ ಭಗವದನುಗ್ರಹವು ಒರೀ ಧ್ಯಾನಮಾತ್ರದಿಂದಲೇ ಅಂತಹ ಪರಿಪಾಕ ದಶೆಯನ್ನು ಉಂಟುಮಾಡಬಹುದೆಂದು ಉಪದೇಶಿಸುತ್ತಾರೆ.

**ಪರಮಾತ್ಮನಃ** - ನಮಗೆಲ್ಲಾ ಅಂತರಾತ್ಮನಾಗಿರುವ ಪರಮಪುರುಷನ, **ಕೇನಚಿತ್** - ಯಾವುದೋ ಒಂದು, **ಅನುಗ್ರಹವಿಶೇಷದಿಂದ**, **ಕುರುಕಾಧೀಶ ನಾಥಾದ್ಯಾಃ**–ನಮ್ಮಾಳ್ವಾರವರು, ನಾಥಮುನಿಗಳು, ಮೊದಲಾದವರು ಯಾರೆಂಬುದು ಮೇಲೆ ಉಪಪಾದಿತವು, **ಪ್ರಾಗಪಿ** - ದೇಹಾವಸಾನಕ್ಕೆ ಮೊದಲೇನೇ, **ಪ್ರಭುಮ್** - ಸರ್ವ ಸಮರ್ಥನಾಥ ಸ್ವಾಮಿಯನ್ನು, **ಅನುಭವನ್** - ಅನುಭವಿಸಿದರು, ಎಂದರೆ ಭಗವಂತನನ್ನು ಸಾಕ್ಷಾತ್ಕರಿಸಿ, ಆದರಿಂದ ಆನಂದವನ್ನು ಹೊಂದಿದರು ಎಂಬ ಭಾವವು

ಆಗಲಿ, ಹೀಗೆ ದ್ವಯಮಂತ್ರಮೂಲಕ ಶರಣಾಗತಿಯನ್ನನುಷ್ಠಿಸಿ ಪ್ರಸನ್ನರಾಗಿ ಅನಂತರ ಅನುಗ್ರಹವಿಶೇಷದಿಂದ ದೇಹಾವಸಾನಕ್ಕೆ ಮುಂಚೆಯೇ ಇಂತಹ ಸುಕೃತಾನುಭವ ಉಂಟಾಯಿತು ಎಂದು ಹೇಳುವದಾದರೆ, ಇವರುಗಳು ಹಾಗೆ ದ್ವಯಮಮೂಲಕ ಶರಣಾಗತಿಯನ್ನು ಅನುಷ್ಠಿಸಿ ಅಂತಹ ಸುಕೃತಾವಸ್ಥೆಯನ್ನು ಹೊಂದಿದರೆಂಬುದಕ್ಕೆ ಏನಾದರೂ ಪ್ರಮಾಣವುಂಟೋ ಎಂದರೆ ದ್ವಯಾರ್ಥಾನುಸಂಧಾನದ ಪಾಶುರಗಳುಂಟೆಂದು ನಮ್ಮಾಳ್ವಾರವರ ಮೂರು ಪಾಶುರಗಳನ್ನು ಉದಾಹರಿಸುತ್ತಾರೆ.

**ಈ ದ್ವಯಾರ್ಥಾನುಸಂಧಾನವು ಸಂಪ್ರದಾಯರೀತ್ಯಾ ಶ್ರೀ ನಮ್ಮಾಳ್ವಾರ್ರವರ**
**ದಿವ್ಯಸೂಕ್ತಿಯಲ್ಲೂ ವ್ಯಕ್ತವು.**

---

ಶ್ರೀ ಭಾಷ್ಯಕಾರರು ವ್ಯಕ್ತಪಡಿಸಿರುವ ದ್ವಯಾರ್ಥಾನುಸಂಧಾನಕ್ಕೆ ಸಂಪ್ರದಾಯ ಬಲವುಂಟೋ ? ಎಂದರೆ ಉಂಟೆಂದು ನಮ್ಮಾಳ್ವಾರವರ ಪಾಶುರಗಳನ್ನು ಉದಾಹರಿಸುತ್ತಾರೆ.—

**ದ್ವಯತ್ತಿಲರ್ಥತ್ತೈ** - ದ್ವಯಮಂತ್ರದಲ್ಲಿ ತೋರುವ ಅರ್ಥಗಳನ್ನು, **ನಮ್ಮಾಳ್ವಾರುಮ್** – ನಮ್ಮಾಳ್ವಾರ್ರವರೂ ಸಹ ಮುಂದೆ ಇರುವ ಇವೇ,

ನ್ನಾಳ್ ಕಾಲವನ್ಪುರಚ್ಚಿನ್ನಿತ್ತುಯ್ ವಿನೋೀ” ಎನ್ರುಮ್, (೨) “ಮುಗಿಲ್ ವಣ್ಣನಡಿಯೈಯಡೈನ್ದರುಳ್ ಕೂಡಿಯುಯನ್ದವರ್” ಎನ್ರುಮ್,

---

ಮುದಲಾನ-ಮುಂತಾದ ಪ್ರದೇಶಙ್ಗಳಿಲುಮ್ - ಸ್ಥಳಗಳಲ್ಲಿ, ಅರುಳಿಚ್ಚೆಯ್ ದಾರ್-ಕೃಪೆಯಾ ಅನುಗ್ರಹಿಸಿದರು ಎಂಬುದರೊಂದಿಗೆ ಅನ್ವಯವು. ಇಲ್ಲಿ ಮುದಲಾನ ಎಂದು ಹೇಳಿರುವದರಿಂದ ಈ ಮೂರು ಪಾಶುರಗಳು ಮಾತ್ರವೇ ಅಲ್ಲದೆ ಇನ್ನೂ ಅನೇಕ ದ್ವಯಾನ್ತಾರ್ಥಬೋಧಕ ಪಾಶುರಗಳುಂಟೆಂಬುದು ಸೂಚಿತವು. ಆ ಮೂರು ಯಾವುವೆಂದರೆ—

(೧) ಒರುನಾಯಕಮಾಯೊಡವುಲಕುಡ ನಾಂಡವರ್ ।
ಕರುನಾಯ್ ಕವರ್ನ್ದ ಕಾಲರ್ । ಶಿದೈಗಿಯ ಪಾನೈಯರ್ ।
ಪರುನಾಡುಕಾಣ ವಿಮ್ಮೈಯಿಲೇ ಪಿಚ್ಚೈತಾಮ್ ಕೊಳ್ವರ್ ।
ತಿರುನಾರಣ್ಣ ತಾಳ್ ಕಾಲಂಪೆರಚ್ಚಿನ್ದಿತ್ತುಯ್ ವಿನೋೀ ॥

ಇದರರ್ಥವು—ಒರುನಾಯಕಮಾಯ್ - ಏಕಚ್ಛತ್ರಾಧಿಪತ್ಯವನ್ನು ಹೊಂದಿ, ಓಡ-ಬಹು ಕಾಲ, ಉಲಕುಡ ನಾಂಡವರ್-ಲೋಕವನ್ನು ಹೊಂದಿ ಅದನ್ನು ಆಳುವವರಾಗಿ, ಅದು ಅಶಾಶ್ವತವಾದುದರಿಂದ ರಾಜ್ಯಭ್ರಷ್ಟರಾಗಿ, ಉದರ ಭರಣಕ್ಕೆ ಅವಕಾಶವಿಲ್ಲದೆ ಭಿಕ್ಷೆಗಾಗಿ ಲಜ್ಜೆಯಿಂದ ರಾತ್ರಿಯಲ್ಲಿ ಯಾವ ಯಾಸವೂ ಇಲ್ಲದೆ ಪಾದಚಾರಿಯಾಗಿ ಏಕಾಂಗಿಯಾಗಿ ಹೊರಟು, ಕರುನಾಯ್-ಕಣ್ಣಿಗೆ ಕಾಣದುದರಿಂದ ಕಪ್ಪು ನಾಯಿಯಿಂದ ಅಥವಾ ಮರೆ ಹಾಕಿದುದರಿಂದ ಮರಿಯನ್ನು ಎಲ್ಲಿ ತುಳಿಯುತ್ತಾರೋ ಎಂದು ಕೋಪದಿಂದಿರುವ ನಾಯಿಯಿಂದ, ಕವರ್ನ್ದ ಕಾಲರ್-ಕಚ್ಚಲ್ಪಟ್ಟ ಕಾಲುಳ್ಳವರಾಗಿ, ಹಿಂದೆ ಕಪ್ಪ ಕೊಡುವ ರಾಜರಿಂದ ನಮಸ್ಕರಿಸಲ್ಪಟ್ಟವರು ಈಗ ನಾಯಿಯಿಂದ ಕಚ್ಚಲ್ಪಟ್ಟ ಕಾಲುಳ್ಳವರೆಂಬ ಭಾವವು. ಶಿದೈಗಿಯ ಪಾನೈಯರ್ - ಹಿಂದೆ ಚಿನ್ನ ಬೆಳ್ಳಿ ಪಾತ್ರೆಗಳಲ್ಲಿ ಊಟ ಮಾಡುತ್ತಿದ್ದವರು ಈಗ ಅನುಪಯೋಗವಾಗಿ ಇತರರು ಬಿಸಾಡಿದ ಮಡಿಕೆಯನ್ನು ಭಿಕ್ಷೆಯ ಪಾತ್ರವಾಗಿ ಉಪಯೋಗಿಸುವರಾಗಿ, ಪೆರುನಾಡು ಕಾಣ—ಹಿಂದೆ ತಮ್ಮಿಂದ ಆಳಲ್ಪಟ್ಟ ಎಲ್ಲಾ ಮಹಾಜನಂಗಳು ತಿಳಿಯುವಹಾಗೆ, ಇಮ್ಮೈಯಿಲೇ-ಈ ಜನ್ಮದಲ್ಲೇ, ಬೇರೇ ಜನ್ಮವಾದರೂ ಆಗಿದ್ದರೆ ಹಿಂದೆ ಇದ್ದ ಮಹತ್ವದವಿಯು ತಪ್ಪಿದ ಲಜ್ಜೆ ಇಲ್ಲದಿರಬಹುದಿತ್ತು; ಹಾಗಲ್ಲದೇ ಈ ಜನ್ಮದಲ್ಲೇ, ಪಿಚ್ಚೈ ತಾಮ್ ಕೊಳ್ವರ್ – ಹಿಂದೆ ಅನೇಕರು ತಮ್ಮನ್ನು ಪ್ರಾರ್ಥಿಸಿದುದನ್ನು ಧಾರಾಳವಾಗಿ ಕೊಟ್ಟವರು, ತಾವೇ ಲಜ್ಜೆಯನ್ನು ತ್ಯಜಿಸಿ ಇತರರನ್ನು ಪ್ರಾರ್ಥಿಸಿ ಭಿಕ್ಷೆಯನ್ನು ತೆಗೆದುಕೊಳ್ಳುವರು, ಹೀಗೆ ಐಹಿಕೈಶ್ವರ್ಯವೆಲ್ಲಾ ನಶ್ವರವಾದುದರಿಂದ ಅವುಗಳಲ್ಲಿ ಮಮತೆಯನ್ನು ತೊರೆದು, ಶಾಶ್ವತವಾದ ಐಶ್ವರ್ಯಪ್ರಾಪ್ತಿಗಾಗಿ, ಅದು ಯಾವು

(೧) ತಿರು. ೪-೧.೧.

ದೆಂದರೆ ನಿತ್ಯವಿಭೂತಿಯಾದ ದಿವ್ಯ ವೈಕುಂಠವನ್ನು ಸೇರಿ ಪರಿಪೂರ್ಣಬ್ರಹ್ಮಾನು ಭವದೊಂದಿಗೆ ಲಕ್ಷ್ಮೀ ಸಹಿತನಾದ ಪರವಾಸುದೇವನಿಗೆ ನಿತ್ಯ ಕೈಂಕರ್ಯವನ್ನು ಮಾಡುವ ಐಶ್ವರ್ಯಕನ್ನಿಗೆ, ತಿರುನಾರಣನ್ ತಾಳ್ – ತಿರುನಾರಾಯಣಪುರಿಯಲ್ಲಿ ನೆಲಿಸಿರುವ ಲಕ್ಷ್ಮೀನಾರಾಯಣನ ಪಾದಗಳನ್ನು, ಕಾಲಂಪೆರ – ಭ್ರಮಾಜ್ಞಾನ ನಿಷಿದ್ಧಾನುಷ್ಠಾನ ಮೊದಲಾದ ಉಪಾಯವಿರೋಧಿಗಳು ಬಂದು ಪ್ರತಿಬಂಧಕ ಗಳಾಗುವದಕ್ಕಿಂತ ಮುಂಚಿತವಾಗಿಯೇ ಶೀಘ್ರವಾಗಿ, ಶಿನ್ದಿತ್ತು ಉಯ್‌ಮಿನ್– ಅನುಸನ್ಧಿತ್ತು ಉಜ್ಜೀವಿಸಿರಿ, ಎಂದರೆ ಶರಣಾಗತಿಯನ್ನು ಅನುಷ್ಠಿಸಿ. ಆತ್ಮೋ ಜ್ಜೀವನವನ್ನು ಮಾಡಿಕೊಳ್ಳಿರಿ. ಇಲ್ಲಿ ತಿರುನಾರಣನ್ ತಾಳ್ ಕಾಲಂ ಪೆರ ಚಿನ್ದಿತ್ತು ಎಂಬುದರಿಂದ ದ್ವಯದ ಪೂರ್ವಾರ್ಧವಾದ ಶ್ರೀಮನ್ನಾರಾಯಣ ಚರಣೌ ಶರಣಂ ಪ್ರಪದ್ಯೇ ಎಂಬುದರ ಅರ್ಥವು ಹೇಳಲ್ಪಟ್ಟಿತು. ಉಯ್‌ಮಿನ್ ಎಂಬುವರಿಂದ ಉತ್ತರಖಂಡಾಭಿಪ್ರಾಯವು ಹೇಳಲ್ಪಟ್ಟಿತು. ಹಿಂದಿನ ಮಿಕ್ಕ ಭಾಗಗಳಿಂದ ಪ್ರಪನ್ನನಿಗೆ ಆವಶ್ಯಕವಾದ ಐಹಿಕೈಶ್ವರ್ಯದ ಅಲ್ಪಸ್ಥಿರತ್ವವು ಉಪಪಾದಿಸಲ್ಪಟ್ಟಿತು.

(೨) "ಮುಗಿಲ್ ವಣ್ಣನಡಿಯೈ ಯಡೈನ್ದರುಳ್ ಶೂಡಿಯುಯ್‌ನ್ದವನ್ ಮೊಯ್‌ಪುನಲ್ ಪೊರುನಲ್ । ತುಗಿಲ್ ವಣ್ಣತ್ತೂ ನೀರ್ ಚೇರ್‌ಪ್ಪನ್ ವಣ್ ಪೊಳಿಲ್ ಶೂಳ್ ಕುರುಗೂರ್ ಚಡಗೋಪನ್ । ಮುಗಿಲ್‌ವಣ್ಣ ನಡಿ ಮೇಲ್ ಶೊನ್ನಶೊಲ್‌ಮಾಲೈಯಾಯಿರತ್ತಿವ್ವೈವವಲ್ಲಾರ್ । ಮುಗಿಲ್ ವಣ್ಣವಾನತ್ತಿಮೈಯವರ್ ಶೂಳವಿರುಪ್ಪರ ಪೆರಿನ್ಬವೆಳ್ಳತ್ತೇ ||"

ಅರ್ಥವು—ಮುಗಿಲ್ ವಣ್ಣನ್ ಮೇಘದ ಹಾಗೆ ದೇಹಕಾಂತಿಯುಳ್ಳ ಶ್ರೀರಂಗನಾಥನ, ಅಡಿಯೈ ಯಡೈನ್ದು - ಚರಣಗಳನ್ನು ಹೊಂದಿ ಎಂದರೆ ಶರ ಣಾಗತಿಯನ್ನನುಷ್ಠಿಸಿ, ಅರುಳ್‌ಶೂಡಿ- ಅವನ ಕೃಪೆಯನ್ನು ಧರಿಸಿ, ಉಯ್ನ್ದವನ್- ಪ್ರಪನ್ನನೆಂಬ ಮಹಿಮೆಯನ್ನು ಧರಿಸಿ, ಮೊಯ್ ಪುನಲ್ ಪೊರುನಲ್–ಸಮೃ ದ್ಧಿಯಾಗಿ ನೀರುಳ್ಳ ತಾಮ್ರಪರ್ಣೀ ನದಿಯ ತುಗಿಲ್ ವಣ್ಣತ್ ತೂ ನೀರ್- ಧೌತವಸ್ತ್ರದ ವರ್ಣದೋಪಾದಿಯಲ್ಲಿ ಪರಿಶುದ್ಧವಾದ ನೀರುಳ್ಳ ಪ್ರದೇಶದಲ್ಲಿ "ರಮ ಣೀಯಂ ಪ್ರಸನ್ನಾಂಬು ಸನ್ಮನುಷ್ಯ ಮನೋಯಥಾ"(ರಾ.ಬಾಲ) ಎಂದು ಹೇಳಿ ರುವಹಾಗೆ ಪರಿಶುದ್ಧವಾದ ನೀರುಳ್ಳ ಸ್ಥಳದಲ್ಲಿ ಎಂಬ ಭಾವವು. ಶೇರ್‌ಪ್ಪನ್ - ಸೇರಿರುವ ಇವೆಲ್ಲಾ ಚಡಗೋಪನ್ ಎಂಬುದಕ್ಕೆ ವಿಶೇಷಣಗಳು, ವಣ್ ಪೊಳಿಲ್ ಶೂಳ್ . ಸುಂದರಗಳಾದ ತೋಟಗಳಿಂದ ಸುತ್ತುವರಿಯಲ್ಪಟ್ಟಿರುವ, ವಣ್ ಕುರುಗೂರ್ – ನಿರತಿಶಯ ಸಂಪತ್ತಿನಿಂದ ಕೂಡಿ ರಮಣೀಯವಾದ ಕುರುಕಾನಗರಿಗೆ ಸ್ವಾಮಿ ಯಾದ, ಚಡಗೋಪನ್- ಶ್ರೀ ನಮ್ಮಾಳ್ವಾರವರಿಂದ ತಾವು, ಮುಗಿಲ್ ವಣ್ಣನ್ ಅಡಿಮೇಲ್‌ಶೊನ್ನ. ನೀಲಮೇಘಶ್ಯಾಮನಾದ ಶ್ರೀರಂಗನಾಥನ ಪಾದಕಮಲವನ್ನು

---

(೨) ತಿರುವಾಯ್ ೭-೨.೧೧

(೩) " **ಅಕಿಲಕಿಲ್ಲೇ** " ಮುದಲಾನ ಪ್ರದೇಶಙ್ಗಳಿಲುವ್ ಅರುಳಿಚ್ಚೆಯ್ದಾರ್.

---

ಕುರಿತು ಹೇಳಿದ, **ಶೊಲ್ಮಾಲೈ**-ದಿವ್ಯಸೂಕ್ತಿಮಾಲೆಯಾದ, **ಆಯಿರತ್ತು** - ಸಾವಿರ **ಪಾಶುರ**ದಲ್ಲಿ, **ಇಪ್ಪತ್ತುಮ್ ವಲ್ಲಾರ್** - ಈ **ಹತ್ತು** ಪಾಶುರಗಳನ್ನು ಅಧಿಕರಿಸಿದವರು, **ಮುಗಿಲ್ ವಣ್ಣಮ್ ವಾನತ್ತು** - ಮೇಘದ ವರ್ಣದಹಾಗೆ ಪ್ರಕಾಶವುಳ್ಳ ದಿವ್ಯ ವೈಕುಂಠದ. **ಇಮ್ಮೈಯವರ್** - ನಿತ್ಯಸೂರಿಗಳು, **ಶೂಳ** - ತುಂಬಿರುವ, **ಪೇರಿನ್ಬವೆಳ್ಳತ್ತಿಡೈ** - ನಿರತಿಶಯವಾದ ಆನಂದ ಸಾಗರದ ಮಧ್ಯದಲ್ಲಿ, **ಇರುಪ್ಪರ್** - ಇರುವರು. ಈ ಪಾಶುರದಲ್ಲಿ, **ಮುಗಿಲ್ ವಣ್ಣ** ಎಂಬುದರಿಂದ ಶ್ರೀಮನ್ನಾರಾಯಣ ಶಬ್ದಾರ್ಥವೂ, **ಅಡಿಯೈ** - ಎಂಬುದರಿಂದ, **ಚರಣ** ಶಬ್ದಾರ್ಥವೂ **ಅಡೈನ್ದು** ಎಂಬುದರಿಂದ **ಶರಣಂ ಪ್ರಪದ್ಯೇ** ಎಂಬರ್ಥವೂ, **ಅರುಳ್‌ಕೊಡಿಯುಮ್‌ನ್ದವರ್** ಎಂಬುದರಿಂದ, ಉತ್ತರಖಂಡದ ಅರ್ಥವೂ, ಉಪಪಾದಿಸಲ್ಪಟ್ಟಿತು.

"**ಅಗಿಲ ಕಿಲ್ಲೇ**"—ಈ ಪೂರಾ ಪಾಶುರಕ್ಕೂ ಸಙ್ಗ್ರಹ ತಾತ್ಪರ್ಯಕ್ಕೂ ೧೧೧ನೆಯ ಪುಟವನ್ನು ನೋಡಿ ಈ ಪಾಶುರವು ಶರಣಾಗತಿಯ ಸಂಪೂರ್ಣವಾದ ಅರ್ಥಗಳನ್ನು ಸಪರಿಕರವಾಗಿ ಪ್ರತಿಪಾದಿಸುವದರಿಂದ ದ್ವಯಮನ್ತ್ರಾರ್ಥದ ಸಂಪೂರ್ಣ ವಿವರಣೆಯಾಗಿ ಅಮೋಘವಾದುದು. ಮೊದಲು ಶಬ್ದಾರ್ಥವನ್ನು ವಿವರಿಸುವೆವು.—**ಇರೈಯುಮ್** - ಒಂದು ಕ್ಷಣವೂ ಕೂಡ, **ಅಗಲಗಿಲ್ಲೇನ್**- "**ನಜೀವೇಯಂ ಕ್ಷಣಮಪಿ**" ಎಂದೂ "**ಅನನ್ಯಾ ರಾಘವೇಣಾಹಮ್**" ಎಂದೂ ಹೇಳಿರುವಹಾಗೆ ಅಗಲಿಂಲಾರೆನು, **ಎನ್ರು** - ಎಂದು, **ಅಲರ್‌ಮೇಲ್‌ಮಙ್ಗೈ**- ಕಮಲಪುಷ್ಪದ ಮೇಲಿನಿಂದ ಉತ್ಪನ್ನಳಾದುದರಿಂದ ಅಲರ್‌ಮಂಗೈತಾಯಾರನ್ನು **ಮಾರ್ಬಾ** - ಅಂತಹ ನಿತ್ಯಾನಪಾಯಿನಿಯನ್ನು ವಕ್ಷಸ್ಥಳದಲ್ಲೇ ಧರಿಸುವ ಶ್ರೀನಿವಾಸನೇ, **ನಿಗರಿಲ್ ಪುಗಳಾಯ್** - ಇಂತಹ ಅನುಗ್ರಹಮಯಳ ಸಂಬಂಧವು ಯಾವಾಗಲೂ ಇರುವದರಿಂದಲೇ, "**ಅಪ್ರಮೇಯಂ ಹಿ ತತ್ತೇಜಃ ಯಸ್ಯಸಾ ಜನಕಾತ್ಮಜಾ**" ನಿರತಿಶಯವಾಗ ದಯಾರ್ದ್ರ ಹೃದಯನೆಂಬ ಮಹಾಖ್ಯಾತಿಯುಳ್ಳವನೇ, **ಮೂನ್ರುಲಗವ್ ಉಡೈಯಾಯ್** - ಮೂರು ಲೋಕಕ್ಕೂ ಸ್ವಾಮಿಯಾಗಿ ಶೇಷಿಯಾದವನೇ, ಆ **ಕಾರಣದಿಂ**ದಲೇ, **ಎನ್ನೈ ಆಳ್ವಾನೇ**- ಮಹಾಪರಾಧಿಯಾದ ನನ್ನನ್ನು ಕೂಡ ರಕ್ಷಿಸುವ ಸೌಶೀಲ್ಯವುಳ್ಳವನೇ **ನಿಕರಿಲ್ ಅಮರರ್ ಮುನಿಕ್ಕಣಙ್ಗಳ್** - ನಿರತಿಶಯರಾದ ನಿತ್ಯಸೂರಿಗಳೂ ಋಷಿಗಳ ಸಮೂಹವೂ, **ವಿರುಮ್ಬುಂ ತಿರುವೇಙ್ಗಡತ್ತಾನೇ** - ಮಹಾ ವಿಶ್ವಾಸದಿಂದ ಆಶ್ರಯಿಸುವ, ಸೇವಿಸಲ್ಪಡುವ ತಿರುಮಲೆಯ ವೇಙ್ಕಟಾಧಿಪತಿಯೇ, **ಪುಗುಲ್ ಒನ್ರು**

---

(೩) ತಿರು ೬-೧೦.೧೦

ಇಲ್ಲಾ - ಬೇರೊಂದು ಉಪಾಯವೂ ಇಲ್ಲವಾದುದರಿಂದ, **ಉನ್ ಅಡಿಕ್ಕೀೞ್** - ನಿನ್ನ ಚರಣಾರವಿಂದದ ಕೆಳಗೆ, **ಅಮರ್ನ್ದು ಪುಗನ್ದೇನೇ**-ಅನನ್ಯಶರಣನಾಗಿರುವ ನಾನು ಅನನ್ಯಪ್ರಯೋಜನನಾಗಿ ಪ್ರವೇಶಿಸಿರುತ್ತೇನೆ. ಇಲ್ಲಿ **ಇಱೈಯುಮ್ ಅಗಲಗಿಲ್ಲೇನ್ ಎನ್ರು ಅಲರ್ಮೇಲ್ಮಂಗೈ** ಉರುಱಾ ಎಂಬುದರಿಂದ ನಿತ್ಯಾನಪಾಯಿನಿಯಾದ ಲಕ್ಷ್ಮೀಸಂಬಂಧವನ್ನು ಬೋಧಿಸುವ, ದ್ವಯದ **ಶ್ರೀಮತ್** ಎಂಬ ಶಬ್ದವು ವಿವರಿಸಲ್ಪಟ್ಟಿತು. ಇದರಿಂದ ಆಕೆಯ ಸಂಬಂಧವು ನಾರಾಯಣನ ಉಪಾಯತ್ವ ಉಪೇಯತ್ವಗಳಿಗೆ ಅತ್ಯಾವಶ್ಯಕವೆಂಬುದು ಸೂಚಿತವು. ಇದರಿಂದ ಉತ್ತರ ಖಂಡದ **ಶ್ರೀಮತೇ** ಎಂಬ ಶಬ್ದಾರ್ಥವೂ ಉಪಪಾದಿಸಲ್ಪಟ್ಟಿತು. ನಿತ್ಯಾನಪಾಯಿನಿಯಾದ ಲಕ್ಷ್ಮಿಯು ಪರಮಕೃಪೌದಾರ್ಯ ಸೌಶೀಲ್ಯಾದಿ ಆಶ್ರಿತರಕ್ಷಣೋಪಯುಕ್ತ ಗುಣವುಳ್ಳವಳಾಗಿ ಉಪಾಯರೂಪದಲ್ಲೂ ಪುರುಷಕಾರರೂಪದಲ್ಲೂ, ಪರಮಾನುಗ್ರಹಕಾರಕಗಳೆಂಬ ಭಾವವೂ ಈ ನಿತ್ಯಾನಪಾಯಿತ್ವದಿಂದ ವ್ಯಕ್ತವು. ಇವಳಿಂದಲೇ ನಾರಾಯಣನಿಗೆ ನಿರತಿಶಯ ಯಶಸ್ಸೆಂಬುದು **ನಿಗರಿಲ್ ಪುಗಳಾಯ್** – ಎಂಬುದರಿಂದ ಸ್ಪಷ್ಟವು. **ಮೂನ್ರುಲಗಮ್ ಉಡೈಯಾಯ್ ಎನ್ನೈಯಾಳ್ವಾನೇ ನಿಗರಿಲ್ ಅಮರರ್ ಮುನಿಕ್ಕಣಙ್ಗಳ್ ವಿರುಮ್ಬುಮ್** ಎಂಬುದರಿಂದ ನಾರಾಯಣ ಶಬ್ದಾರ್ಥವು ವಿವರಿಸಲ್ಪಟ್ಟಿತು. **ಉನ್ ಅಡಿಕ್ಕೀೞ್ ಅಮರ್ನ್ದು ಪುಗುನ್ದೇನೇ** ಎಂಬುದರಿಂದ **ಶರಣಂ ಪ್ರಪದ್ಯೇ** ಎಂಬುದರ ಅರ್ಥವು ಪ್ರದರ್ಶಿಸಲ್ಪಟ್ಟಿತು. ಉತ್ತರ ಖಂಡಾರ್ಥವು, **ನಿಗರಿಲ್ ಅಮರರ್ ಮುನಿಕ್ಕಣಙ್ಗಳ್ ವಿರುಮ್ಬುಮ್** ಎಂಬಲ್ಲಿ ಕೈಙ್ಕರ್ಯನಿಷ್ಠರಾದ ನಿತ್ಯಸೂರಿಗಳೂ, ಅಂತಹ ಅಪೇಕ್ಷೆಯುಳ್ಳವರಾಗಿ ಅದಕ್ಕಾಗಿ ಮನನಶೀಲರಾದ ಮುನಿಗಣಗಳಿಂದಲೂ ಸೇವಿಸಲ್ಪಡುವ ಶ್ರೀನಿವಾಸನೆಂದು ಹೇಳುವುದರಿಂದ ಬೋಧಿತವು. ಇದೂ ಅಲ್ಲದೆ ಶರಣಾಗತಿಗೆ ಬೇಕಾದ ಪಂಚಪರಿಕರಗಳ ಯೋಗವೂ ಈ ಪಾಶುರದಲ್ಲಿ ವ್ಯಕ್ತವಾದುದರಿಂದ **ನಾರಾಯಣ** ಶಬ್ದಕ್ಕಿರುವ ಆಕಾರಗಳನ್ನು ಬೋಧಿಸುವ ಅರ್ಥಗಳೂ ಸೂಚಿತವು.

**ಮುದಲಾನ** - ಇವೇ ಮೊದಲಾದ, **ಪದೇಶಙ್ಗಳಿಲುಮ್** - ಸ್ಥಳಗಳಲ್ಲಿ ಎಂದರೆ ಪಾಶುರಗಳಲ್ಲಿ **ಅರುಳಿಚ್ಚೆಯ್ದಾರ್** – ಕೃಪೆಯಾ ತೋರಿಸಿರುತ್ತಾರೆ. ಇಲ್ಲಿ **ಮುದಲಾನ** ಎಂಬುದರಿಂದ **"ಒಣ್ದೊಡಿಯಾಳ್ ತಿರುಮಗಳುಮ್"** ಮತ್ತು "ಆರೆನಕ್ಕು ನಿನ್ **ಪಾದಮೇ ಶರಣಾಗ** ತಂದೊಳಿನ್ದಾಯ್" (    ) ಎಂಬಿವೇ ಮೊದಲಾದ ಪಾಶುರಗಳು ಸೂಚಿತವು. ಹೀಗೆ ನಮ್ಮಾಳ್ವಾರ್ ಪಾಶುರಗಳಾದ " ಒರುನಾಯಕಮಾಯ್ " " ಅಗಿಲಗಿಲ್ಲೇನ್ " ಎಂಬುವಗಳನ್ನು **ಉದಾಹರಿಸಿರುವುದರಲ್ಲಿ** ಅವರ ಅಭಿಪ್ರಾಯವೇನೆಂದರೆ ಒರುನಾಯಕ ವೆಂಬುದು ನಾಲ್ಕನೆಯ ಪತ್ತಿನ ಆರಂಭವು; ಅಗಿಲಗಿಲ್ಲೇನ್ - ೬ನೆಯ ಪತ್ತಿನ ಕೊನೆಯ ಪದ್ಯವು. ಆದುದರಿಂದ ದ್ವಯಮಂತ್ರದ ೪, ೫, ೬ನೆಯ ಮೂರು ಪತ್ತುಗಳೂ

## ಅಥ ದ್ವಯಸ್ಯ ಪ್ರತಿಪದಂ ವಿಸ್ತರೇಣಾರ್ಥಮಾಹ

**ಇದಿಲ್ ಮುರ್ಪಡ "ಶ್ರೀಮನ್ನಾರಾಯಣ" ಎನ್ರು ಸರ್ವಶರಣ್ಯಮಾನ ಪರತತ್ವತ್ತೈ ಚೊನ್ನಪಡಿ. ಶ್ರಿಯಃಪತಿತ್ವ ಲಿಙ್ಗತ್ತಾಲುಮ್, ನಾರಾಯಣ**

---

ದ್ವಯದ ಪೂರ್ವಖಂಡವಾದ ಉಪಾಯವಾದ ಪರನ್ಯಾಸವನ್ನು ಉಪಪಾದಿಸುತ್ತವೆ. ಎಂಬ ಭಾವದಿಂದ ಉದಾಹರಿಸಿರುತ್ತಾರೆ. ಉತ್ತರ ಖಂಡವು ಮೊದಲು ಮೂರು ಪತ್ತುಗಳಿಂದ ಉಪಪಾದಿತವು. ಹೀಗೆ ದ್ವಯಾರ್ಥವಿವರಣೆಯನ್ನು ನಮ್ಮಾಳ್ವಾರ್‌ರವರು ೬ ಪತ್ತುಗಳಿಂದ ಪ್ರಕಾಶಪಡಿಸಿರುತ್ತಾರೆ. ಹೀಗೆ ವ್ಯುತ್ಕ್ರಮವು, ಉತ್ತರಖಂಡವನ್ನು ಮೊದಲೂ ಪೂರ್ವಖಂಡವನ್ನು ಅನಂತರವೂ ಹೇಳುವದು ನ್ಯಾಯವೋ? ಎಂದರೆ ಫಲದ ಮಾಹಾತ್ಮ್ಯೆಯು ವಿದಿತವಾದರೆ ಉಪಾಯಾನುಷ್ಠಾನದಲ್ಲಿ ಅತ್ಯಂತ ಆದರವು ತಾನೇ ಹುಟ್ಟುತ್ತದೆ ಎಂಬ ಭಾವದಿಂದ ಹಾಗೆ ಉಪಪಾದನೆಯು.

### ಮುಂದೆ ದ್ವಯಮಂತ್ರದ ಪ್ರತಿಪದದ ಅರ್ಥಗಳನ್ನು ವಿಸ್ತಾರವಾಗಿ ಹೇಳುತ್ತಾರೆ.

ಹಿಂದೆ ದ್ವಯಾರ್ಥಾನುಸಂಧಾನ ವಿಷಯದಲ್ಲಿ ಸಾಂಪ್ರದಾಯಿಕತ್ವವನ್ನು ವ್ಯಕ್ತಪಡಿಸಿದರು. ಮುಂದೆ ದ್ವಯಮಂತ್ರದ ಪ್ರತಿಪದಗಳಿಂದಲೂ ತೋರಿಬರುವ ಅರ್ಥಗಳನ್ನೆಲ್ಲಾ ವಿಸ್ತಾರವಾಗಿ ತಿಳಿಯಲುತ್ಸುಕರಾಗಿ ಪ್ರಥಮತಃ ಶ್ರೀಮನ್ನಾರಾಯಣವೆಂಬೆರಡು ಶಬ್ದಗಳಿಂದ ಪರತತ್ವವು ನಿರ್ಣಯಿಸಲ್ಪಟ್ಟಿತೆಂದು ಉಪದೇಶಿಸುತ್ತಾರೆ.

**ಇದಿಲ್**–ಈ ದ್ವಯಮಂತ್ರದಲ್ಲಿ **ಮುರ್ಪಡ**-ಮೊದಲು "ಶ್ರೀಮನ್ನಾರಾಯಣ ಎನ್ರು ಎಂಬದಾಗಿ, **ಸರ್ವಶರಣ್ಯಮಾನ** - ಸರ್ವರಿಗೂ ರಕ್ಷನಾದ ; **ಪರತತ್ವತ್ತೈ** ಪರತತ್ವವನ್ನು, **ಚೊನ್ನಪಡಿ** - ಹೇಳುವದಕ್ಕಾಗಿ ಎಂದು ಭಾವಿಸತಕ್ಕದ್ದು. ಶ್ರೀಮನ್ನಾರಾಯಣನೇ ಪರತತ್ವನೆಂದು ಪರದೇವತಾಪಾರಮಾರ್ಥ್ಯಾಧಿಕಾರದಲ್ಲಿ ಬಹು ಸ್ಫುಟವಾಗಿ ನಿರ್ಣಯಿಸಿ ಹೇಳಿರುತ್ತಾರೆ. ಇದನ್ನೇ ಸಂಗ್ರಹ ಶ್ಲೋಕದಲ್ಲಿ "**ಶ್ರೀಮಾನ್ನಾರಾಯಣೋ ನಃ ಪತಿರಖಿಲತನುರ್ಮುಕ್ತಿದೋ ಮುಕ್ತಭೋಗ್ಯಃ**" ಎಂದು ಹೇಳಿರುತ್ತಾರೆ. ಆದರೆ ಶಿವ, ಶಂಭು, ಹಿರಣ್ಯಗರ್ಭ ಇತ್ಯಾದಿ ಪದಗಳ ಮೂಲಕವಾಗಿಯೂ ಪರತತ್ವವು ಶ್ರುತಿಗಳಲ್ಲಿ ಹೇಳಲ್ಪಟ್ಟಿದೆಯಲ್ಲಾ ಎಂದರೆ, ಆ ಶಬ್ದಗಳಿಗೆಲ್ಲಾ ವ್ಯುತ್ಪತ್ತಿಮೂಲಕ ಅನ್ವಯವು **ನಾರಾಯಣ** ಶಬ್ದದಲ್ಲೇ ಎಂದು ವೇದಪ್ರಾಧಾನ್ಯವನ್ನು ಹೊಂದಿರುವ **ಪುರುಷಸೂಕ್ತ**ದಲ್ಲಿ "**ಸಹಸ್ರಶೀರ್ಷಂ ದೇವಂ**" ಎಂದಾರಂಭಿಸಿ "**ತತ್ವಂ ನಾರಾಯಣಃ ಪರಃ**" ಎಂದು ಹೇಳಿ, "**ಯಚ್ಚಕಿಂಚಿಜ್ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿ ವಾ । ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಸ್ಥಿತಃ**"ಎಂಬದಾಗಿ ನಿಗಮನದಲ್ಲಿ

ಹೇಳಿರುವದರಿಂದ ಪರತತ್ತ್ವವು ನಾರಾಯಣ ಶಬ್ದವಾಚ್ಯನು. **"ತತ್ತ್ವಂನಾರಾಯಣಃ ಪರಃ"** ಎಂದೇ ಶ್ರುತಿಯಲ್ಲೇ ವ್ಯಕ್ತವು. ಬ್ರಹ್ಮಸೂತ್ರವಾದ **"ಲಿಙ್ಗಭೂಯಸ್ತ್ವಾತ್ತದ್ಧಿ ಬಲೀಯಸ್ತದಪಿ"** (೩-೩-೪೩) ಎಂಬಲ್ಲಿ ಸರ್ವಪರವಿದ್ಯೋಪಾಸ್ಯನ ನಿರ್ಣಯಕ್ಕಾಗಿಯೇ **ನಾರಾಯಣಾನುವಾಕವು** ಪ್ರವೃತ್ತವೆಂದು ಹೇಳಲ್ಪಟ್ಟಿರುತ್ತದೆ. ಏಕೆಂದರೆ **ಲಿಙ್ಗಭೂಯಸ್ತ್ವಾತ್** ಇಲ್ಲಿ ಲಿಙ್ಗವು ಯಾವುದೆಂದರೆ ಶಾಸ್ತ್ರಪ್ರಮಾಣವಾಕ್ಯವು; ಅವುಗಳ ಭೂಯಸ್ತ್ವವೆಂದರೆ ಆಧಿಕ್ಯವಿರುವದರಿಂದ. ಶ್ರೀಮನ್ನಾರಾಯಣನೇ ಪರತತ್ತ್ವವಾಗಿ ಸರ್ವಪರವಿದ್ಯೆಯಲ್ಲೂ ಉಪಾಸ್ಯನೆಂದು ಅನೇಕ ಪ್ರಮಾಣಗಳ ಬಲವಿರುವದರಿಂದ. **ಒನ್ರುಂದೇವಂ** ಎಂಬ ಶ್ರೀಮನ್ನಮ್ಮಾಳ್ವಾರ್ರ ಪಾಶುರ ವ್ಯಾಖ್ಯಾನದಲ್ಲಿ ಎಲ್ಲಿಯಾದರೂ ಶ್ರುತಿ ಸ್ಮೃತಿ ಇತಿಹಾಸ ಪುರಾಣ ವಾಕ್ಯಗಳು, ೧೦೦ಕ್ಕಿಂತ ಹೆಚ್ಚಾಗಿ ಉದಾಹರಿಸಲ್ಪಟ್ಟಿವೆ. ಪರಾಂಬರಿಸಬಹುದು. **ವೇದೇಷು ಪೌರುಷಂಸೂಕ್ತಂ** ಎಂದು ಪುರುಷಸೂಕ್ತಕ್ಕೆ ಪ್ರಾಧಾನ್ಯವು. ಆದರಲ್ಲಿ ಉಪಾಸ್ಯನನ್ನು ಬಹು ವಿದ್ಯೆಗಳಲ್ಲಿ ಪರಬ್ರಹ್ಮ, ಪರತತ್ತ್ವ ಪರಂಜ್ಯೋತಿಸ್ಸು, ಪರಮಾತ್ಮಾ, ಅಕ್ಷರ, ಶಿವ, ಶಂಭು ಹೀಗೆಲ್ಲಾ ನಿರ್ದಿಷ್ಟನಾಗಿರುವನೆಂದೂ, ಅವೆಲ್ಲಾ ನಾರಾಯಣನನ್ನೇ ಬೋಧಿಸುತ್ತವೆ ಎಂದೂ, ಆತನೇ ದೇವನು ಪರತತ್ತ್ವವು ಎಂದು ತಿಳಿಸಿ, ಆತನೇ ಬ್ರಹ್ಮ ಶಿವ, ಇಂದ್ರ ಮೊದಲಾದ ಶರೀರಕನಾಗಿಯೂ ಅವರಿಗೆಲ್ಲಾ ಆತ್ಮಾವಾಗಿದ್ದಾನೆಂದು **"ಯಚ್ಚ ಕಿಂಚಿಜ್ಜಗತ್ಸರ್ವಂ ವ್ಯಾಪ್ಯನಾರಾಯಣಸ್ಸ್ಥಿತಃ** ಎಂದು ಹೇಳಿರುವದರಿಂದ, ಸಾಮಾನಾಧಿಕರಣ್ಯವು **"ಸಬ್ರಹ್ಮಾ ಸಶಿವಸ್ಸೇನ್ದ್ರಃ"** ಎಂದು ಉಪದೇಶಿಸಿ, ಈ ನಾರಾಯಣನು ಯಾರು ಎಂದರೆ ಶಚೀಪತಿಯೇ, ಪಾರ್ವತೀಪತಿಯೇ ಎಂದರೆ ಅಲ್ಲವೆಂದು. **"ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ"** ಎಂಬಲ್ಲಿ ನಾರಾಯಣನಿಗೆ ಶ್ರಿಯಃಪತಿತ್ವವೇ ಸ್ವರೂಪನಿರೂಪಕಧರ್ಮವೆಂದು ಶ್ರುತಿಯು ಉಪದೇಶಿಸಿರುತ್ತದೆ. ಆದುದರಿಂದ **ಬಲೀಯಃ** ಎಂದು ಸೂತ್ರದಲ್ಲಿ ಹೇಳಲ್ಪಟ್ಟಿತು. ಪ್ರಕರಣಕ್ಕಿಂತ ಲಿಙ್ಗವು ಬಲಿಷ್ಠವಾದುದರಿಂದ, ಹಾಗೆಯೇ ಮೀಮಾಂಸೆಯಲ್ಲಿ ಹೇಳಲ್ಪಟ್ಟಿದೆ ಎಂಬ ಭಾವವು. ಹೀಗೆ ಇಬ್ಬರೂ ಸೇರಿ ನಮಗೆ ಶೇಷಿ ಎಂದು ಶಾಸ್ತ್ರಗಳಲ್ಲಿ ಉಪದಿಷ್ಟನಾಗಿರುವವರಿಂದ, ದ್ವಯಮನ್ತ್ರದ ಶ್ರೀಮನ್ನಾರಾಯಣ ಶಬ್ದವು ಪರತತ್ತ್ವವನ್ನು ಬೋಧಿಸುತ್ತದೆಂದು ಉಪದೇಶಿಸಿರುತ್ತಾರೆ. ಇನ್ನೊಂದು ಕಡೆಯಲ್ಲೂ ಶ್ರುತಿಯು **"ಸ್ವಧಯಾ ತದೇಕಂ"** ಎಂದೂ, ಸಂಹಿತೆಯು **"ದ್ವಾವೇವ ಸದೈಕ ಶೇಷೀ"** ಎಂದೂ, ಲಕ್ಷ್ಮೀ ತಂತ್ರವು **"ಲಕ್ಷ್ಮ್ಯಾ ಸಹ ಹೃಷೀಕೇಶೋ....ರಕ್ಷಕಃ"** ಎಂದೂ, ಮಹರ್ಷಿಗಳೂ **"ಏಕಾಕೀ ವಿದ್ಯಯಾ ಸಾರ್ಧಂ"** ಎಂದೂ, **"ಅನನ್ಯಾ ರಾಘವೇಣಾಹಂ"** ಎಂದೂ ಹೀಗೆಲ್ಲಾ ಹೇಳಿರುವದರಿಂದ ದ್ವಯದ **ಶ್ರೀಮನ್ನಾರಾಯಣ** ಶಬ್ದವು ಪರತತ್ತ್ವವನ್ನು ಬೋಧಿಸುತ್ತದೆಂದು ಉಪದೇಶಿಸಿದರು. ಆದರೆ ನಾರಾಯಣಾನುವಾಕವು ನಾರಾಯಣನೇ ಪರತತ್ತ್ವವೆಂದು ಸಮರ್ಥಿಸಿದರೂ, ಲಕ್ಷ್ಮೀಪತಿತ್ವವನ್ನು ಬೋಧಿಸಲಿಲ್ಲವಲ್ಲಾ ? ಆದುದರಿಂದ

**ಶಬ್ದತ್ತಾಲುಮ್ - ಪರತತ್ತ್ವವಿಶೇಷ ನಿರ್ಣಯಮ್ ಪಣ್ಣಪ್ಪಟ್ಟದು। ನಾರಾಯಣನ್ ಶರಣ್ಯನಂಪೋದು ಲಕ್ಷ್ಮೀವಿಶಿಷ್ಟನಾಯಿರುಕ್ಕುಕ್ಕಾಗ ಪೂರ್ವಖಂಡತ್ತಿಲ್ ಶ್ರೀಮಚ್ಛಬ್ದವು. "ಆಕಾರಿಣಸ್ತು ವಿಜ್ಞಾನಮಾಕಾರಜ್ಞಾನಪೂರ್ವಕಮ್ । ತೇನಾಕಾರಂ ಶ್ರಿಯಂ ಜ್ಞಾತ್ವಾ ಜ್ಞಾತವ್ಯೋ ಭಗವಾನ್ ಹರಿಃ"॥**

---

ಲಕ್ಷ್ಮಿಯು ನಾರಾಯಣನಿಗೆ ವಿಶೇಷಣವಾಗಿರುವದರ ಫಲವೇನು ? ಎಂಬ ಆಕ್ಷೇಪಣೆಗಳನ್ನು ತಂದರೆ, ಸನ್ನಿಯೋಗ ಶಿಷ್ಟನ್ಯಾಯದ ಪ್ರಕಾರ ವಿಶೇಷ್ಯವನ್ನು ಹೇಳುವಾಗ ವಿಶೇಷಣವನ್ನು ಹೇಳಿಯೇ ತೀರಬೇಕೆಂಬ ನಿಯಮವಿಲ್ಲವು. ಈ ಕಾರಣದಿಂದ **"ನಪೃಥಗಭಿಧತ್ತೇ ಶ್ರುತಿರಪಿ"** ಎಂದು ಮಹನೀಯರು ಹೇಳಿರುತ್ತಾರೆ. ಲಕ್ಷ್ಮಿಯ ಸಂಬಂಧದಿಂದ ಪ್ರಯೋಜನವಿಲ್ಲವೋ ? ಎಂದರೆ ಆಕೆಯು ಸಹಧರ್ಮಚಾರಿಣಿಯಾಗಿ ಸರ್ವೇಶ್ವರನ ಸೃಷ್ಟ್ಯಾದಿ ಸರ್ವ ಪ್ರವೃತ್ತಿಗಳಲ್ಲೂ ಅನ್ವಯವಿರುವದರಿಂದ, ಪ್ರಪನ್ನ ರಕ್ಷಣೆಯಲ್ಲೂ ಲಕ್ಷ್ಮಿಗೇ ತನ್ನ ಪ್ರಿಯವಲ್ಲಭನಸಹಾಗೆ ಅನ್ವಯ ಉಂಟೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.—ನಾರಾಯಣನ್ ನಾರಾಯಣನು, ಶರಣ್ಯನಾನ್ಪೋದು-ಒಬ್ಬ ಅಧಿಕಾರಿಗೆ ಸಿದ್ಧೋಪಾಯನಾಗಿ ರಕ್ಷಕನಾಗುವಾಗ, **ಲಕ್ಷ್ಮೀ ವಿಶಿಷ್ಟನಾಯಿರುಕ್ಕುಕ್ಕಾಗ** – ತನಗೆ ಯಾವಾಗಲೂ ನಿತ್ಯಾನಪಾಯಿಳಾಗಿ ಅಪೃಥಕ್ಸಿದ್ಧ ವಿಶೇಷಣಳಾಗಿರುವ ಲಕ್ಷ್ಮಿಯೊಂದಿಗೆ ಸೇರಿರುವನೆಂದು ತಿಳಿಸುವದಕ್ಕಾಗಿ, **ಪೂರ್ವಖಂಡತ್ತಿಲ್ ಶ್ರೀಮಚ್ಛಬ್ದಮ್** - ದ್ವಯದ ಪೂರ್ವಖಂಡದಲ್ಲಿ **ಶ್ರೀಮನ್ನಾರಾಯಣ ಚರಣೌ** ಎಂಬಲ್ಲಿ ಶ್ರೀಮಚ್ಛಬ್ದವು ; ಇದು ಲಕ್ಷ್ಮೀ ವಿಶಿಷ್ಟನಾದ ನಾರಾಯಣನೇ ಸಿದ್ಧೋಪಾಯನು ಎಂಬ ಭಾವವನ್ನು ಸೂಚಿಸುತ್ತದೆಂಬ ತಾತ್ಪರ್ಯವು. ಇದರಿಂದ ಉಪಾಯತ್ವವು ಲಕ್ಷ್ಮಿಗೂ ಉಂಟೆಂಬುದು ಇಲ್ಲಿ ಸ್ಪಷ್ಟವು.

ಈ ಅಭಿಪ್ರಾಯವನ್ನು ಪೂರ್ವಾಚಾರ್ಯಸೂಕ್ತಿಯಿಂದ ಸಮರ್ಥಿಸಿ ಹೇಳಿ ಸಾಂಪ್ರದಾಯಿಕತ್ವವನ್ನು ಸೂಚಿಸುತ್ತಾರೆ. **ಆಕಾರಿಣಸ್ತು ವಿಜ್ಞಾನಂ**-ವಿಶೇಷ್ಯವಾಗಿರುವುದರ ಯಥಾರ್ಥ ಜ್ಞಾನವು, **ಆಕಾರಜ್ಞಾನಪೂರ್ವಕಮ್** ಅದಕ್ಕೆ ಅಸ್ವಾಧಾರಣವಾಗಿ ಅಪೃಥಗ್ವಿಶೇಷಣವಾಗಿರುವ ಜ್ಞಾನಪೂರ್ವಕವಾದುದು ಎಂದರೆ ಅಂತಹ ವಿಶೇಷಣದ ಜ್ಞಾನವಿಲ್ಲದೆ ವಿಶೇಷ್ಯದ ಸರಿಯಾದ ಜ್ಞಾನವು ದೊರೆಯುವುದಿಲ್ಲವೆಂಬ ಭಾವವು. ವಿಶೇಷ್ಯದ ಸರಿಯಾದ ಜ್ಞಾನಕ್ಕೆ ವಿಶೇಷಣದ ಸರಿಯಾದ ಜ್ಞಾನವು ಆವಶ್ಯಕವು; ಏಕೆಂದರೆ ವಿಶೇಷ್ಯದ ಸ್ವರೂಪವನ್ನು ನಿರ್ಧರಿಸುವುದು ಅದಕ್ಕೆ ಅಸಾಧಾರಣವಾದ ವಿಶೇಷಣವಾದುದರಿಂದ ಎಂಬ ಭಾವವು. ತೇನ - **ಆಕಾರಣದಿಂದ, ಶ್ರಿಯಂ ಜ್ಞಾತ್ವಾ**- ನಾರಾಯಣನಿಗೆ ನಿತ್ಯಾನಪಾಯಿನಿಯಾಗಿರುವ ವಿಶೇಷಣವಾದ ಲಕ್ಷ್ಮಿಯ ಸ್ವರೂಪವನ್ನು ಚೆನ್ನಾಗಿ ತಿಳಿದುಕೊಂಡೇ, **ಭಗವಾನ್ ಹರಿಃ** - ಭಗವಂತನಾದ ನಾರಾಯಣನು, **ಜ್ಞಾತವ್ಯಃ**- ತಿಳಿಯಲ್ಪಡ

**ಎನ್ರರುಳಾಳಪ್ಪೆರುಮಾಳೆಮ್ಪೆರುಮಾನಾರರುಳಿಚ್ಚೆಯ್‌ದಾರ್. ಇದು ಉತ್ತರ ಖಂಡತ್ತಿರ್ಪ್ಪೋಲೆ ಪೂರ್ವಖಂಡತ್ತಿಲುಮ್ ವಿಶೇಷಣಮೆನ್ನುಮಿಡಮುಮ್, ಉಪಾಯ ವಿಶೇಷಣಙ್ಗಳಾಲ್ ಉಪಾಯದ್ವಿತ್ವಮ್ ವಾರಾದೆನ್ನುಮಿಡಮುಮ್, ಸಿದ್ಧೋಪಾಯ ಶೋಧನತ್ತಿಲೇ ಶೊನ್ನೋಮ್.**

---

ತಕ್ಕದ್ದು, ಎನ್ರು-ಎಂಬುದಾಗಿ **ಅರುಳಾಳಪ್ಪೆರುಮಾಳೆಮ್ಪೆರುಮಾನಾರರು, ಅರುಳಿಚ್ಚೆಯ್‌ದಾರ್**- ಕೃಪಯಾ ಅಪ್ಪಣೆಯನ್ನು ಕೊಡಿಸಿರುತ್ತಾರೆ. ಆದುದರಿಂದ ಉತ್ತರಖಂಡದ **ಶ್ರೀಮತೇ** ಎಂಬ ಶಬ್ದವು ಹೇಗೆ **ನಾರಾಯಣಾಯ** ಎಂಬುದಕ್ಕೆ ವಿಶೇಷಣವೆಂದೂ, **ಆಕಾರಣದಿಂದ** ಉಪೇಯತ್ವದಲ್ಲಿ **ನಾರಾಯಣನೊಂದಿಗೆ** ಅನ್ವಯ ಉಂಟೆಂದು ಒಪ್ಪಲ್ಪಟ್ಟಿರುತ್ತದೋ ಹಾಗೆಯೇ **ಪೂರ್ವಖಂಡದಲ್ಲೂ ಶ್ರೀಮನ್ನಾರಾಯಣ ಚರಣೌ** ಎಂಬಲ್ಲಿರುವ ಶ್ರೀಮಚ್ಛಬ್ದವೂ ವಿಶೇಷಣವೆಂದೂ, ಆಕಾರಣದಿಂದ ಲಕ್ಷ್ಮಿಗೆ **ನಾರಾಯಣನೊಂದಿಗೆ** ಉಪಾಯತ್ವದಲ್ಲೂ ಅನ್ವಯ **ಉಂಟೆಂದೂ** ಹೇಳಲೇಬೇಕೆಂದು ಉಪದೇಶಿಸಿದಂತಾಯಿತು. ಈ ಅಭಿಪ್ರಾಯವನ್ನೇ ಮುಂದಿನ ವಾಕ್ಯದಲ್ಲಿತಿಳಿಸಿ ಹಾಗೆಉಪಾಯತ್ವದಲ್ಲಿ ಇಬ್ಬರಿಗೂ ಅನ್ವಯವುಂಟೆಂದರೆ ಉಪಾಯ ದ್ವಿತ್ವವೂ, ತನ್ಮೂಲಕ ಪರಸ್ಪರ ವ್ಯಾಘಾತಾದಿಗಳು **ಉಂಟಾಗುವುದಿಲ್ಲವೇ** ? ಎಂಬ ಆಕ್ಷೇಪಕ್ಕೆ, ಹಿಂದೆಯೇ ಸಿದ್ಧೋಪಾಯಶೋಧನಾಧಿಕಾರದಲ್ಲಿ ವಿಸ್ತಾರವಾಗಿ ಉಪದೇಶಿಸಿರುತ್ತೇವೆಂದು ಹೇಳುತ್ತಾರೆ. **ಇದು** - ಈ "**ಶ್ರೀಮತ್**" ಎಂಬ ಶಬ್ದವು, **ಉತ್ತರಖಂಡತ್ತಿರ್ಪ್ಪೋಲೇ**-ಉತ್ತರಖಂಡದಲ್ಲಿರುವ "**ಶ್ರೀಮತೇ**" ಎಂಬ ಶಬ್ದದ ಹಾಗೆ ಪೂರ್ವ ಖಂಡದಲ್ಲೂ, **ವಿಶೇಷಣಮೆನ್ನುಮಿಡಮುಮ್**- ವಿಶೇಷಣವೇಎನ್ನುವ **ಸಂದರ್ಭವನ್ನು, ಉಪಾಯವಿಶೇಷಣಙ್ಗಳಾಲ್**- ಸಿದ್ಧೋಪಾಯನಾದನಾರಾಯಣನ ವಿಶೇಷಣಗಳಾದ ಶ್ರೀಮತ್ಪಾಲಕ್ಷ್ಮಿಯನ್ನು, ಸರ್ವೇಶ್ವರನಆಶ್ರಿತೋಪಯುಕ್ತ ಕಲ್ಯಾಣ ಗುಣಗಳೇನು ಇವುಗಳಿಂದ **ಉಪಾಯದ್ವಿತ್ವಮ್** - ವಿಶೇಷ್ಯ ಒಂದು, ವಿಶೇಷಣ ಒಂದು, ಹೀಗ್ಯೆ ಎರಡು ಉಪಾಯದಲ್ಲಿ ದ್ವಿತ್ವವು, **ವಾರಾದೆನ್ನುಮಿಡಮುಮ್**- ಉಂಟಾಗುವದಿಲ್ಲವೆಂಬ ಸಂದರ್ಭವನ್ನು ಸಿದ್ಧೋಪಾಯಶೋಧನಾಧಿಕಾರದಲ್ಲಿ, **ಶೊನ್ನೋಮ್** – ಅಂತಹ ಪೂರ್ವಪಕ್ಷಗಳಿಗೆಲ್ಲಾ ಸಮಾಧಾನವನ್ನು ಹೇಳಿರುವೆವು. ಹಿಂದೆ ೨೦೯ ರಿಂದ ೨೧೫ ವರೆಗೂ ಈ ವಿಷಯ ಉಪಪಾದಿಸಲ್ಪಟ್ಟಿರುತ್ತದೆ. ಪರಾಂಬರಿಸಬಹುದು.

ಈ ಅರುಳಾಳಪ್ಪೆರುಮಾಳೆಮ್ಪೆರುಮಾನಾರೆಂಬ ಮಹನೀಯರು ಯಾರು ? ಎಂದರೆ ಇವರ ವಿಷಯವು ಗುರುಪರಂಪರೆಯಲ್ಲಿ ಪ್ರೋಕ್ತನು. ಇವರು ಮೊದಲು ಯಜ್ಞಮೂರ್ತಿ ಎಂಬ ಹೆಸರಿನಿಂದ ಅದ್ವೈತ ಸಿದ್ಧಾಂತದಲ್ಲಿ ತುಂಬಾ ಪ್ರಾಜ್ಞರು. ಇವರು ವಾದಗಳಲ್ಲಿ ಇತರ ಸದ್ಧಾಂತಿಗಳನ್ನೆಲ್ಲಾ ಗೆದ್ದು ಅನೇಕರನ್ನು ಶಿಷ್ಯರನ್ನಾಗಿ ಮಾಡಿಕೊಂಡು ಶ್ರೀರಂಗಕ್ಕೆ ಬಂದು ಶ್ರೀ ಭಾಷ್ಯಕಾರರನ್ನು ಜಯಿಸಿ ತಮ್ಮ

ಶಿಷ್ಯರಾಗಿ ಮಾಡಿಕೊಳ್ಳಬೇಕೆಂಬ ಕುತೂಹಲದಿಂದ, ವಾದವು ೧೮ ದಿನಗಳು ಜರಗ ಬಹುದೆಂದೂ, ಸೋತವರು ಗೆದ್ದವರ ಶಿಷ್ಯರಾಗತಕ್ಕದ್ದೆಂದೂ ಪ್ರತಿಜ್ಞೆಮಾಡಿ ಕೊಂಡು ಶ್ರೀ ಯತಿವರ್ಯರೊಂದಿಗೆ ವಾದಮಾಡತೊಡಗಿದರು. ಹದಿನೇಳು ದಿನ ವಾದವು ಬಹು ಕೋಲಾಹಲದಿಂದ ನಡೆದುದರಲ್ಲಿ ಯಜ್ಞಮೂರ್ತಿಗೇ ಜಯ ವುಂಟಾಗುವಹಾಗೆ ತೋರಿತು. ಆಗ ಶ್ರೀ ಭಾಷ್ಯಕಾರರು ಶ್ರೀರಂಗನಾಥನನ್ನು ಆದಿನ ರಾತ್ರಿ ವಿಶೇಷವಾಗಿ ಆರಾಧಿಸಿ, ತಮ್ಮ ಸಿದ್ಧಾಂತವನ್ನು ತಾವೇ ಕಾಪಾಡಿ ಕೊಳ್ಳಬೇಡವೇ ಎಂದು ಪ್ರಾರ್ಥಿಸಿ, ತಮಗೆ ಜಯವಾಗುವ ತನಕ ಊಟಮಾಡುವ ದಿಲ್ಲವೆಂದು ಆಹಾರವನ್ನು ತೊರೆದು ಮಲಗಿದ್ದರು. ಆಗ ಶ್ರೀರಙ್ಗನಾಥನು ಸ್ವಪ್ನ ದಲ್ಲಿ, ಏತಕ್ಕೆ ಚಿಂತಿಸುವಿರಿ? ನಿಮ್ಮ ಗುರುಗಳಾದ ಆಳವಂದಾರವರ ಸಿದ್ಧಿತ್ರಯ ದಿವ್ಯಸೂಕ್ತಿಗಳನ್ನು ಮರೆತಿರುವಹಾಗೆ ತೋರುತ್ತದೆ. ಅವುಗಳ ಮೂಲಕ ಯಜ್ಞ ಮೂರ್ತಿಯನ್ನು ಸೋಲಿಸುವಿರಿ ಎಂದು ಶ್ರೀರಙ್ಗನಾಥನು ಅನುಗ್ರಹಿಸಿದುದರಿಂದ, ತನ್ಮೂಲಕ ಯಜ್ಞಮೂರ್ತಿಯನ್ನು ೧೮ನೆಯ ದಿನ ಸೋಲಿಸಿ, ಆತನನ್ನು ಶಿಷ್ಯ ನನ್ನಾಗಿ ಮಾಡಿಕೊಂಡು,ಅವರಿಗೆ ಶಿಖೆ,ಯಜ್ಞೋಪವೀತಗಳ ಮೂಲಕ ಸನ್ನ್ಯಾ ಸಾಶ್ರಮವನ್ನೂ, ಪಂಚ ಸಂಸ್ಕಾರಗಳನ್ನೂ ದಯಪಾಲಿಸಿ, ಅವರನ್ನು ಜಯಿಸಿ ದುದು ಶ್ರೀರಙ್ಗನಾಥನ ಕರುಣೆಯಿಂದಾದುದರಿಂದ, ಅವರಿಗೆ ಅರುಳಾಳಪ್ಪೆರುಮಾ ಳೆಂಬೆರುಮಾನಾರ್ ಎಂಬ ನಾಮವನ್ನು ಕೊಟ್ಟು, ನಮ್ಮ ಸಂಪ್ರದಾಯ ವಿಶೇ ಷಾರ್ಥಗಳನ್ನೆಲ್ಲಾ ಶ್ರೀ ಭಾಷ್ಯಕಾರರು ಅವರಿಗೆ ಉಪದೇಶಿಸಿದರೆಂಬ ವೃತ್ತಾಂತ ವುಂಟು.

ಈ ವೃತ್ತಾಂತದಿಂದ ನಾವು ಗ್ರಹಿಸತಕ್ಕ ಒಂದೆರಡು ವಿಷಯಗಳುಂಟು. ಆ ಕಾಲದಲ್ಲಿ ತಮ್ಮ ತಮ್ಮ ಸಿದ್ಧಾನ್ತಗಳಲ್ಲಿ ಮಹಾಪ್ರಾಜ್ಞರಿದ್ದರೆಂಬುದೂ, ಅವರು ಗಳು ವಾದದಲ್ಲಿ ಮಹಾ ಸಮರ್ಥರೆಂದೂ, ವಾದದಲ್ಲಿ ಅಯುಕ್ತವಾದ ಅಭಿಪ್ರಾಯ ವೆಂದು ಯಾವಾಗ ಏರ್ಪಟ್ಟಿತೋ, ಆಗ ಅದನ್ನು ತ್ಯಜಿಸಿ, ಹೊಸ ಅಭಿಪ್ರಾಯ ವನ್ನು ನಿರ್ಭಯವಾಗಿ ಅವಲಂಬಿಸುವ ಮನಸ್ಸಿನ ಸ್ಥೈರ್ಯವನ್ನು ಹೊಂದಿದ್ದರು. ಈಗ ಅಂತಹ ಪ್ರಾಜ್ಞತೆಯೂ ಕಮ್ಮಿ, ಯುಕ್ತವೆಂದು ತೋರಿದರೂ ಹೊಸದನ್ನು ಅವಲಂಬಿಸುವ ಮನಸ್ಸಿನ ಸ್ಥೈರ್ಯವೂ ಇಲ್ಲವು. ಇನ್ನೊಂದು ವಿಷಯವೇನೆಂದರೆ? ಶ್ರೀ ನಿಗಮಾನ್ತ ದೇಶಿಕರೇ ಮೊದಲಾದ ಮಹಾ ಪ್ರಾಜ್ಞರಿಗೆ ಇತರ ಸಿದ್ಧಾನ್ತಿಗಳ ವಿಷಯದಲ್ಲಿ ವೈಷಮ್ಯವಿಲ್ಲವು. ವಾದದಿಂದ ಗೆಲ್ಲಬೇಕೆಂಬ ಉದ್ದೇಶ್ಯಮಾತ್ರವೇ ವಿನಾ ದ್ವೇಷವಿಲ್ಲವು, ಈ ಕಾಲದಲ್ಲಾದರೋ ವಾದ ಮಾಡುವ ಪ್ರಾಜ್ಞತೆಯು ಮೊದಲೇ ಇಲ್ಲವು. ಪರಸ್ಪರ ದ್ವೇಷಾಸೂಯೆಗಳು ಮಾತ್ರ ತುಂಬಿರುತ್ತವೆ. ಈ ಅರುಳಾಳಪ್ಪೆರುಮಾಳ್ ಎಂಬೆರುಮಾನಾರ್ ಹಿಂದೆ ಅದ್ವೈತಿಗಳಾಗಿದ್ದರೆಂಬುದನ್ನು ಈಷದಪಿ ಪರಿಗಣಿಸದೆ,ಅವರ ದಿವ್ಯಸೂಕ್ತಿಯನ್ನುಉದಾಹರಿಸಿ ಅಭಿಯುಕ್ತೋಕ್ತಿ ಎಂದು ಭಾವಿಸಿ ಅರುಳಿಚ್ಚೆಯ್ದಾರ್ ಎಂದು ವಿಶೇಷ ಗೌರವದಿಂದ ಹೇಳಿರು

## "ಶ್ರೀ" ಶಬ್ದಾರ್ಥಾಃ

"ಶ್ರೀ" ಶಬ್ದಂ "ಶ್ರೀಯತೇ, ಶ್ರಯತೇ ಶೃಣೋತಿ, ಶ್ರಾವಯತಿ, ಶೃಣಾತಿ, ಶ್ರೀಣಾತಿ ಎನ್ರು ಆರುಪಡಿಯಾಗ ಭಗವಚ್ಛಾಸ್ತ್ರಙ್ಗಳಿಲೇ ನಿರ್ವಚನಮ್ ಪಣ್ಣಪ್ಪಟ್ಟಿರುಕ್ಕುಮ್. ಅವತ್ತಿಲ್ ಅಪೇಕ್ಷಿತ ಪದಾನ್ತರಙ್ಗಳ್ ಔಚಿತ್ಯತ್ತಾಲುಮ್ ಸರ್ವೋ ಪ್ರಮಾಣ ಬಲತ್ತಾಲುಮ್ ವಿಶೇಷಿತ್ತರಿಯವೇಣುಮ್.

---

ತ್ತಾರೆ. ಇದು ಶ್ರೀ ದೇಶಿಕವರ್ಯರ ಘನತೆಯನ್ನು ಪ್ರಕಟಿಸುತ್ತದೆ. (ಗುರುಪರಂಪರಾ ಪ್ರಭಾವ ೭೦ನೆಯ ಪುಟ, ೧೮೭೭ ನೆಯ ಇಸವಿ ಛಾಪಾ)

ಹಿಂದೆ ಸಿದ್ಧೋಪಾಯ ಶೋಧನಾಧಿಕಾರದಲ್ಲಿ ಲಕ್ಷ್ಮಿಗೆ ತನ್ನ ಪತಿಯೊಂದಿಗೆ ಉಪಾಯತ್ವದಲ್ಲಿ ಅನ್ವಯ ಉಂಟೆಂದು ಸಮರ್ಥಿಸಿದರು. ಇದು ಹಾಗಿರಲಿ, "ಶ್ರೀ" ಶಬ್ದದ ನಿರ್ವಚನದಿಂದಲೇ ಈ ಅಭಿಪ್ರಾಯವೆಲ್ಲಾ ತೋರಿಬರುತ್ತದೆಂದು ಶ್ರೀ ಶಬ್ದಕ್ಕೆ ನಾಲ್ಕು ಧಾತುಗಳ ವ್ಯುತ್ಪತ್ತಿಯಿಂದ ಆರು ಅರ್ಥಗಳು ತೋರಿಬರುತ್ತವೆಂದು ವಿಸ್ತರಿಸಿ ಹೇಳುತ್ತಾರೆ.

### ಶ್ರೀ ಶಬ್ದದ ಆರು ಅರ್ಥಗಳು

"ಶ್ರೀ" ಎಂಬ ಶಬ್ದವು, **ಶ್ರೀಯತೇ** - ಆಶ್ರಯಿಸಲ್ಪಡುವಳು, **ಶ್ರಯತೇ** - ಆಶ್ರಯಿಸುವಳು (**ಭ**ಗವಂತನನ್ನು,) ಶೃಣೋತಿ - ಕೇಳುವಳು, **ಶ್ರಾವಯತಿ** ಹಿತವನ್ನು ಕೇಳುವಹಾಗೆ ಮಾಡುವಳು, **ಶೃಣಾತಿ** – ಹೋಗಲಾಡಿಸುವಳು, **ಶ್ರೀಣಾತಿ** – ಪರಿಪಾಕವನ್ನುಂಟುಮಾಡುವಳು." ಎನ್ರು - ಎಂಬದಾಗಿ, **ಆರು ಪಡಿಯಾಗ** - ಆರು ವಿಧವಾಗಿ. ಭಗವಚ್ಛಾಸ್ತ್ರಗಳಲ್ಲಿ ನಿರ್ವಚನ, **ಪಣ್ಣಪ್ಪಟ್ಟಿರುಕ್ಕುಮ್** - ಮಾಡಲ್ಪಟ್ಟಿರುತ್ತದೆ. ಶ್ರೀಞ್ ಸೇವಾ**ಯಾಂ, ಶ್ರು ಶ್ರವಣೇ, ಶೄ ಹಿಂಸಾಯಾಂ, ಶ್ರೈ** ವಿಸ್ತಾರೆ ಎಂಬೀ ನಾಲ್ಕು ಧಾತುಗಳಿಂದ ಮೇಲೆ ಹೇಳಿದ ಆರು ಕ್ರಿಯಾಪದಗಳು ವ್ಯುತ್ಪನ್ನವಾಗುತ್ತವೆ. ಇದರಿಂದ ಲಕ್ಷ್ಮೀವಿಷಯವಾದ ಗುಣವಿಭವಾದಿಗಳ ಅಭಿಪ್ರಾಯವು ಉಂಟಾಗಬೇಕಾದರೆ ಶ್ರುತಿ ಸ್ಮೃತಿ ಇತಿಹಾಸ ಪುರಾಣಗಳಲ್ಲಿ ಬೋಧಿತ ಪ್ರಮಾಣಗಳನ್ನನುಸರಿಸಿ ಇತರ ಪದಗಳನ್ನು ಸೇರಿಸಿ ಅರ್ಥಮಾಡಬೇಕಾಗುತ್ತದೆ. ಹಾಗೆ ಯಾವ ಪದಗಳನ್ನು ಸೇರಿಸಿ ಅರ್ಥಮಾಡುವದು ಉಚಿತವೆಂದು ತೋರುತ್ತದೋ ಅಂತಹ ಪದಾಂತರಗಳನ್ನು ಸೇರಿಸಿ ಅರ್ಥ ಮಾಡತಕ್ಕದ್ದೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. **ಅವತ್ತಿಲ್** . ಹೀಗೆ ಆರು ವಿಧವಾಗಿ ನಿರ್ವಚನ ಮಾಡುವದರಲ್ಲಿ, **ಅಪೇಕ್ಷಿತಪದಾನ್ತರ**ಙ್ಗಳ್ ಈ ಆರು ಕ್ರಿಯಾಪದಗಳಿಗೂ ಬೇಕಾದ ಇತರ ಕರ್ತೃ ಕರ್ಮಾದಿ ಬೇರೇ ಪದಗಳನ್ನು, **ಔಚಿತ್ಯತ್ತಾಲುಮ್** - ಯಾವುಗಳನ್ನು ಸೇರಿಸಿದರೆ ಉಚಿತವೆಂದು ತೋರುತ್ತದೋ

**ಅನ್ವಿಡತ್ತಿಲ್ ಸ್ವೋಜ್ಜೀವನಾರ್ಥಿಗಳಾಲೇ ಆಶ್ರಯಿಕ್ಕಪ್ಪಡುಮ್.**
**ಇವರ್‌ಗಳೈ ಉಜ್ಜೀವಿಪ್ಪಿಕ್ಕೈಕ್ಕಾಗ ಸರ್ವೇಶ್ವರನೈ ಆಶ್ರಯಿತ್ತಿರುಕ್ಕುಮೆನ್ರು**

---

ಆ ಭಾವನೆಯಿಂದಲೂ ಮತ್ತು **ಅವ್ವೋ ಪ್ರಮಾಣತ್ತಾಲುಮ್** - ಹಾಗೆ ಇತರ ಪದಗಳನ್ನು ಸೇರಿಸಿ ಅರ್ಥಮಾಡಲು ಶ್ರುತಿ ಸ್ಮೃತಿ **ಪುರಾಣಾದಿ** ಪ್ರಮಾಣ ಬಲದಿಂದಲೂ, **ವಿಶೇಷಿತ್ತರಿಯವೇಣುಮ್** - ವಿಶೇಷಿಸಿ ತಿಳಿಯತಕ್ಕದ್ದು. ಹೇಗೆಂದರೆ **ಶ್ರೀಯತೇ** ಎಂದರೆ ಆಶ್ರಯಿಸಲ್ಪಡುವಳು, ಯಾರಿಂದ ಎಂಬ ರ್ಥವು ಅಪೇಕ್ಷಿತವು. **ಸಾಪರಾಧ ಚೇತನೈಃ** ಎಂದು ಸೇರಿಸುವದು ಉಚಿತವು. **ಏತ** ಕ್ಕಾಗಿ ಎಂಬುದನ್ನೂ ಅಪೇಕ್ಷಿಸುತ್ತದೆ. ಇದಕ್ಕೆ **ಶಾಸ್ತ್ರ**ಪ್ರಮಾಣಗಳ ಬಲವುಂಟಾ ದುದರಿಂದ ಹಾಗೆ ಪದಗಳನ್ನು ಸೇರಿಸುವುದು ಉಚಿತವು. ಇದರಿಂದ ಶಾಸ್ತ್ರಗಳಲ್ಲಿ **ಕೊಂಡಾಡಲ್ಪಟ್ಟ** ವಾತ್ಸಲ್ಯಾತಿರೇಕವು ಬೋಧಿತವು. ಹೀಗೆಯೇ ಮುಂದೆ ಕ್ರಿಯಾ ಪದಗಳಿಗೆ ಅಪೇಕ್ಷಿತ ಪದಗಳನ್ನು ಶಾಸ್ತ್ರಪ್ರಮಾಣಾನುಸಾರವಾಗಿ ಸೇರಿಸಿ ಅರ್ಥ ಮಾಡುವದು ಉಚಿತವೆಂದು ಅರ್ಥಮಾಡುವರು. ಈ ಆರು ಕ್ರಿಯಾಪದಗಳಿಂದ **ತೋರುವ** ಅರ್ಥಗಳನ್ನೆಲ್ಲಾ ಸಪ್ರಮಾಣವಾಗಿಯೂ, ಅಭಿಯುಕ್ತರ ಸೂಕ್ತಿಗಳಿ ಗನುಸಾರವಾಗಿಯೂ ಉಪದೇಶಿಸುತ್ತಾರೆ —

೧. ಮೊದಲು **ಶ್ರೀಞ್ ಸೇವಾಯಾಂ** ಎಂಬ ಧಾತುವಿನಿಂದ ಕರ್ಮಣ್ಯರ್ಥ ಮೂಲಕ **"ಸ್ವೋಜ್ಜೀವನಾರ್ಥಿಭಿರಾಶ್ರೀಯತೇ"** ಎಂದು, ತಮ್ಮ ಉಜ್ಜೀವನ ವೆಂದರೆ ರಕ್ಷಣೆಯನ್ನು ಅಪೇಕ್ಷಿಸುವ ಚೇತನರಿಂದ ಆಶ್ರಯಿಸಲ್ಪಡುವಳು ಎಂಬರ್ಥವು ದೊರೆಯುತ್ತದೆಂದೂ, ಮತ್ತು ಅದೇ ಧಾತುವಿನಿಂದಲೇ ಕರ್ತರ್ಯರ್ಥಮೂಲಕ **"ತೇಷಾಂ ಉಜ್ಜೀವನಾಯ ಸ್ವಯಂ ನಾರಾಯಣಂ ಶ್ರಯತೇ ಆಶ್ರಯತೇ"** ಹಾಗೆ ತನ್ನನ್ನು ಆಶ್ರಯಿಸಿದವರ ರಕ್ಷಣೆಗಾಗಿ ತಾನೇ ತನ್ನ ಪತಿಯಾದ ನಾರಾಯಣ ನನ್ನು ಆಶ್ರಯಿಸುತ್ತಾಳೆ ಎಂಬುದಾಗಿ **ಶ್ರೀಯತೇ ಶ್ರಯತೇ** ಎಂಬೆರಡು ಕ್ರಿಯಾ ಪದಗಳ ಅರ್ಥಗಳು ತೋರಿಬರುತ್ತವೆಂದು ಮುಂದಿನ ವಾಕ್ಯವಾದ **"ಅನ್ವಿಡತ್ತಿಲ್"** ಎಂದಾರಂಭಿಸಿದ ವಾಕ್ಯದಿಂದ ಉಪಪಾದಿಸುತ್ತಾರೆ. **ಅನ್ವಿಡತ್ತಿಲ್** - ಹೀಗೆ ಮೇಲಿನ ಆರು ಕ್ರಿಯಾಪದಗಳಿಗೆ ಕರ್ತೃ ಕರ್ಮಾದಿ ಪದಗಳ ಅಧ್ಯಾಹಾರವನ್ನು ಉಪಪಾದಿಸುವ ಸಂದರ್ಭದಲ್ಲಿ, **ಸ್ವೋಜ್ಜೀವನಾರ್ಥಿಗಳಾಲೇ** - ತನ್ನನ್ನು ರಕ್ಷಿಸಿಕೊಳ್ಳಬೇಕೆಂಬ ಮೋಕ್ಷಾರ್ಥಿಗಳಾದ ಚೇತನರಿಂದ **ಆಶ್ರಯಿಕ್ಕಪ್ಪಡುಮ್** ಆಶ್ರಯಿಸಲ್ಪಡುವಳು. ಇದು ಇತರ ಪುರುಷಾರ್ಥ ಕಾಮಿಗಳಿಗೂ ಉಪಲಕ್ಷಣವು. ಇದು ಮೋಕ್ಷಶಾಸ್ತ್ರವಾದುದರಿಂದ ಮೋಕ್ಷಾರ್ಥಿಗಳೇ ಮುಖ್ಯವಾಗಿ ಹೇಳಲ್ಪಟ್ಟರು. ಅದೂ ಅಲ್ಲದೆ ಆಕೆಯೂ ಸಿದ್ಧೋಪಾಯಳಾದುದರಿಂದ ಆಶ್ರಯಿಸಲ್ಪಡುವಳು ಎಂಬ ರ್ಥವು ಮುಖ್ಯವಾಗಿ ಉಪಪಾದಿಸಲ್ಪಡಬೇಕಾದುದರಿಂದಲೂ **ಸ್ವೋಜ್ಜೀವನಾರ್ಥಿ ಗಳ್** ಎಂಬ ಪ್ರಯೋಗವು. ಇದು **"ಶ್ರೀಯತೇ"** ಎಂಬುದರ ಉಪಪಾದನೆಯು.

**ಪ್ರೊರುಳಾನಪೋದು,** (೧) **"ಪಿತೇವ ತ್ವತ್ಪ್ರೇಯಸೀ ಜನನಿ ಪರಿಪೂರ್ಣಾ ಗಸಿ ಜನೇ ಹಿತಸ್ರೋತೋವೃತ್ತ್ಯಾ ಭವತಿ ಕದಾಚಿತ್ಕಲುಷಧೀಃ। ಕಿಮೇತ ನ್ನಿರ್ದೋಷಃ ಕ ಇಹ ಜಗತೀತಿ ತ್ವಮುಚಿತೈ ರುಪಾಯೈ ರ್ವಿಸ್ಮಾರ್ಯ ಸ್ವಜನ ಯಸಿ ಮಾತಾ ತದಸಿ ನಃ"ಎನ್ಗಿರಪಡಿಯೇ ಸಾಪರಾಧರಾನವರ್‌ಗಳ್ ಪಕ್ಕಲ್ ಸ್ವಯಂ ಹಿತೈಷಿಯಾಯ್, ದಂಡಧರನಾನ ಸರ್ವೇಶ್ವರನ ಶೀತತ್ತೈ ಯಾತ್ತಿ,**

---

ಇದರಿಂದ ದಯಾ, ವಾತ್ಸಲ್ಯ, ಶಕ್ತಿ ಮೊದಲಾದ ಗುಣಗಳುಳ್ಳವಳೆಂದು ಹೇಳಲ್ಪಟ್ಟಿತು. **ವಿಮುಕ್ತಿ ಫಲದಾಯಿನೀ"** (ವಿ. ಪು. ೧-೯-೧೨೦) ಮತ್ತು **"ಶ್ರಿಯಂ ವಸಾನಾ ಅಮೃತತ್ವಮಾಯನ್"** ಇತ್ಯಾದಿ ಪ್ರಮಾಣಗಳನ್ನನುಸರಿಸಿ ಹಾಗೆ ನಿರ್ವಚನವು.

(೨) ಮುಂದೆ ಶ್ರೀಯತೇ ಎಂಬ ಕ್ರಿಯಾಪದಾರ್ಥವನ್ನು ಉಪದೇಶಿಸುತ್ತಾರೆ.---ಶ್ರಯತೇ ಭಗವನ್ತಮಿತಿ ಶ್ರೀಃ ಎಂಬುದಾಗಿ ನಿರ್ವಚನವು. ಏತಕ್ಕಾಗಿ **ಆಶ್ರಿತರೋಜ್ಜೀವನಾರ್ಥಮ್** - ಆಶ್ರಿತರನ್ನು ತನ್ನ ಪತಿಗೆ ಹೇಳಿ ರಕ್ಷಿಸುವದಕ್ಕಾಗಿ ಎಂದು ಉಪಪಾದಿಸುತ್ತಾರೆ. **ಇವರ್‌ಗತ್ತೈ ಉಜ್ಜೀವಿಪಿಕ್ಕೈಕ್ಕಾಗ** - ಈ ಆಶ್ರಯಿಸಿದ ಚೇತನರ ರಕ್ಷಣೆಗಾಗಿ, **ಸರ್ವೇಶ್ವರನ್ನೈ ಆಶ್ರಯಿತ್ತಿರುಕ್ಕುಮ್** ತನ್ನ ವಾತ್ಸಲ್ಯಾತಿಶಯದಿಂದ ಸರ್ವೇಶ್ವರನನ್ನು ಆಶ್ರಯಿಸಿರುತ್ತಾಳೆ, **ಎನ್ರು** - ಎಂದು, **ಪ್ರೊರುಳಾನಪೋದು** - ಅರ್ಥವಾದಾಗ ಶ್ರೀಪರಾಶರ ಭಟ್ಟರ ದಿವ್ಯ ಸೂಕ್ತಿಯನ್ನು ಉದಾಹರಿಸಿ, **ಎನ್ಗಿರಪಡಿಯೇ** - ಆ ಶ್ಲೋಕದಲ್ಲಿರುವಹಾಗೆ, **ಸಾಪರಾಧರಾನವರ್‌ಗಳ್ ಪಕ್ಕಲ್** - ಅಪರಾಧಗಳಿಂದ ದೋಷಯುಕ್ತರಾದವರ ವಿಷಯದಲ್ಲಿ, **ಸ್ವಯಂ ಹಿತೈಷಿಯಾಯ್** - ತಾನೇ ಹಿತವನ್ನು ಮಾಡಬೇಕೆಂಬ ಅಪೇಕ್ಷೆಯುಳ್ಳವಳಾಗಿ, **ದಂಡಧರನಾನ ಸರ್ವೇಶ್ವರನುಡೈಯ** - ಚೇತನರಿಗೆ ಹಿತವಾದವನು ಕೆಟ್ಟ ಮಾರ್ಗದಿಂದ ತಪ್ಪಿಸುವದಕ್ಕಾಗಿ ಶಿಕ್ಷೆಯನ್ನು ಕೊಡುವ ಸರ್ವೇಶ್ವರನ, **ಶೀತತ್ತೈ ಯಾತ್ತಿ** - ಚೇತನರ ಮೇಲಿದ್ದ ಕೋಪವನ್ನು ಶಮನ ಮಾಡಿಸಿ, **ಅವನುಡೈಯ ಸಹಜಕಾರುಣ್ಯಂ** - ಅತನ ಸಹಜವಾದ ಕೃಪೆಯು, **ಇವರುಗಳುಕ್ಕು** - ಈ ದೋಷಯುಕ್ತ ಚೇತನರಿಗೇ **ಉಜ್ಜೀವಕ ಮಾಮ್ಪಡಿಪ್ಪಣ್ಣಿಕೊಡುಕ್ಕೈಯಾಲ್**-ರಕ್ಷಕವಾಗುವಹಾಗೆಮಾಡಿಕೊಡುವುದರಿಂದ **ಮಾತೃತ್ವಪ್ರಯುಕ್ತ** – ತಾಯಿಯಾದ ಮೂಲಕ ಬಂದ, **ವಾತ್ಸಲ್ಯಾತಿಶಯ ತ್ತಾಲೆ** - ದೋಷವಿದ್ದರೂ ದೋಷವನ್ನು ಎಣಿಸದ, ವಾತ್ಸಲ್ಯಾತಿಶಯದಿಂದ, **ಪುರುಷಕಾರಭೂತಳಾಗಿ, ನಿರ್ಕ್ಕಿರ ಏತ್ತಮ್** - ನಿಂತಿರುವ ಮಹಿಮೆಯು, **ಶೊಲ್ಲಿತ್ತಾಮ್** - ಹೇಳಿದಂತಾಯಿತು.

---

(೧) ಶ್ರೀಗುಣ ೫೨

**ಯವನುಡೈಯ ಸಹಜಕಾರುಣ್ಯ ಮಿವರ್‌ಗಳುಕ್ಕು ಉಜ್ಜೀವಕಮಾಮ್ಪಡಿ ಪಣ್ಣಿಕ್ಕೊಡಕ್ಕೈಯಾಲ್ ಮಾತೃತ್ವ ಪ್ರಯುಕ್ತ ವಾತ್ಸಲ್ಯಾತಿಶಯಯುತ್ತಾಲಿ, ಪುರುಷಕಾರ ಭೂತೈಯಾಯ್ ನಿರ್ಕ್ಕರ ಎತ್ತಮ್ ತೋಲ್ಲಿತ್ತಾಮ್.**

---

ಈ ಶ್ಲೋಕದ ಅರ್ಥವೇನೆಂದರೆ-ಓ ಲಕ್ಷ್ಮಿಯೇ ನೀನು ಲೋಕಜನನಿ ಎನಿಸಿಕೊಂಡು ನಮಗೆಲ್ಲಾ ತಾಯಿಯ ಸ್ಥಾನದಲ್ಲಿದ್ದಿ ಎಂಬುದು ನ್ಯಾಯವೆಂದು ಈ ಲೋಕದ ತಂದೆ ತಾಯಿಗಳಲ್ಲಿ ನಡೆಯುವ ದೃಷ್ಟಾಂತದಿಂದ ಸಮರ್ಥಿಸಿ ಹೇಳುತ್ತಾರೆ. — ಓ **ಜನನಿ** - ಓ ತಾಯಿಯಾದ ಶ್ರೀರಂಗನಾಯಕಿಯೇ **ತ್ವತ್ಪ್ರೇಯರ್ನ**-ನಿನ್ನ ಭರ್ತ್ರುವಾದ ಶ್ರೀರಙ್ಗನಾಥನು, **ಪಿತೇವ**-ಲೋಕದ ತಂದೆಯ ಹಾಗೆ, **ಪರಿಪೂರ್ಣಾಗಸಿಜನೇ** - ಸಂಪೂರ್ಣವಾಗಿ ತುಂಬಾ ಅಪರಾಧಮಾಡಿದ ಚೇತನರ ವಿಷಯದಲ್ಲಿ, **ಹಿತಸ್ರೋತೋವೃತ್ತ್ಯಾ** - ತಂದೆಗೆ ಮಗನನ್ನು ಕೆಟ್ಟ ಮಾರ್ಗದಿಂದ ತಪ್ಪಿಸಿ ಹಿತ ಮಾಡುವುದು ಯುಕ್ತವಾದುದರಿಂದ, ಅಂತಹ ಹಿತಾಚರಣೆಯನ್ನು ಮಾಡಬೇಕೆಂಬ ಪ್ರವೃತ್ತಿಯಿಂದ, **ಕದಾಚಿತ್** - ಯಾವಾಗಲಾದರೂ, **ಕಲುಷಧೀಃ** - ಕೋಪದಿಂದ ದೂಷಿತ ಬುದ್ಧಿಯುಳ್ಳವನಾದರೆ, ಆಗ ನೀನು ನಿನ್ನ ವಲ್ಲಭನನ್ನು ಕುರಿತು ಏನು ಹೇಳುತ್ತೀಯೆ ಎಂದರೆ, **ಕಿಮೇತತ್ ?** - ಇದೇನು ಈ ಕೋಪ ವೃತ್ತಿಯು ನಿಮಗೆ ಉಚಿತವೇ? **ಇಹಜಗತಿ** ಈ ಜಗತ್ತಿನಲ್ಲಿ, **ನಿರ್ದೋಷಃ** - ಸೀತೆಯೂ "**ನಕಶ್ಚಿನ್ನಾಪರಾಧ್ಯತಿ** ಎಂದೂ "**ಕಃಕುಪ್ಯೇ ದ್ವಾನರೋತ್ತಮ**" ಎಂದೂ ಆಂಜನೇಯನಿಗೆ ಹೇಳಿದ ತೆರದಿ, ನಿರ್ದೋಷಿಗಳು ಯಾರ ಇದ್ದಾರೆ. ? ಎಂದರೆ ಈ ಲೋಕದ ಸರ್ವರೂ ದೋಷಿಗಳೇ ಎಂಬ ಭಾವವು, **ಉಚಿತೈರುಪಾಯೈಃ** - ಇಂತಹ ಯೋಗ್ಯಗಳಾದ ಉಪಾಯಗಳಿಂದ, **ವಿಸ್ಮಾರ್ಯ** - ಆ ದೋಷಗಳನ್ನು ಮರೆಯುವ ಹಾಗೆ ಮಾಡಿ ; ಸರ್ವಶಕ್ತನಿಗೆ ವಿಸ್ಮೃತಿ ಎಲ್ಲಿಯದು ? ಆದುದರಿಂದ ವಿಸ್ಮಾರ್ಯ ಎಂದರೆ ಆ ದೋಷಗಳನ್ನು ಪರಿಗಣಿಸದಹಾಗೆ ಮಾಡಿ, **ಸ್ವಜನಯಸಿ** - ಭಗವಂತನಿಗೆ ಇಷ್ಟವಾದ ಭಕ್ತನನ್ನಾಗಿ ಮಾಡಿಬಿಡುತ್ತೀಯೆ; ಸ್ವಜನರು ಯಾರೆಂದರೆ ಪ್ರಪನ್ನರಾದ ಭಕ್ತರೇ. ಆದುದರಿಂದ **ತ್ವಂ** - ನೀನು, **ಮಾತಾ ಅಸಿನಃ** - ಗಂಡನು ಮಗುವನ್ನು ದಂಡಿಸಲು ಬಂದರೆ ಅದಕ್ಕೆ ಅಡ್ಡಲಾಗಿ ಮಗುವನ್ನು ರಕ್ಷಿಸಿದ ಲೋಕದ ತಾಯಿಯ ಹಾಗೆ, ನಿಜವಾದ ತಾಯಿಯೇ ನಮಗೆ ಆಗಿರುತ್ತೀಯೇ. ಈ ವಾಕ್ಯದಿಂದಲೂ ಉದಾಹರಿಸಿದ ಶ್ಲೋಕದಿಂದಲೂ ನಾವು ಗ್ರಹಿಸತಕ್ಕ ಕೆಲವು ವಿಷಯಗಳುಂಟು.

೧ ಲಕ್ಷ್ಮಿಯು ಗಂಡನನ್ನು ಆಶ್ರಯಿಸುವುದು ತನ್ನನ್ನು ಆಶ್ರಯಿಸಿದ ಚೇತನರೋದ್ಧಾರಕ್ಕಾಗಿ ಎಂದು ಏರ್ಪಟ್ಟಿರುವುದರಿಂದ ಲಕ್ಷ್ಮಿಯಲ್ಲಿ ಅನುಗ್ರಹಮಯತ್ವವೂ, ವಾಲ್ಲಭ್ಯಾತಿಶಯವೂ, ದೋಷಗಳನ್ನು ಪರಿಗಣಿಸದ ವಾತ್ಸಲ್ಯವೂ, ಲಕ್ಷ್ಮಿಯ ಪುರುಷಕಾರತ್ವವೂ ಉಪಪಾದಿತವು.

(೨) "ಅನಿಜ್ಞಾತಾ" ಇತ್ಯಾದಿಗಳಿರ್‌ಪೋಲೇ ಇಜ್ಜ್ಗ "ವಿಸ್ಮಾರ್ಯ" ಎನ್ರದುಕ್ಕುಮ್ (೩) ಅಲ್ಲಿ ಮಲರ್ ಮಗಳ್ ಪೋಗ ಮಯಕ್ಕುಕ್ಕಳ್"

೨. ದಂಡಧರನಾದ ಸರ್ವೇಶ್ವರಃ ಎಂಬ ಪ್ರಯೋಗದಿಂದಲೂ, ಹಿತಸ್ರೋತೋ ವೃತ್ತ್ಯಾ ಕಲುಷಧೀಃ - ಎಂಬ ಪ್ರಯೋಗದಿಂದಲೂ ಲಕ್ಷ್ಮಿಯೂ ನಾರಾಯಣನೂ ಸಹ ಅನುಗ್ರಹಿಸುವ, ಮತ್ತು ಶಿಕ್ಷಿಸುವ ವ್ಯಾಪಾರ ಗಳನ್ನು ವಿಭಾಗ ಮಾಡಿಕೊಂಡಿದ್ದಾರೆಂಬ ಭಾವವು ಸೂಚಿತವು. ಸರ್ವೇಶ್ವರನ ದಂಡಧರತ್ವವು ಭಗವಂತನ ಕೃಪಾ ಪ್ರಭಾವ ವಿನಾ ಕ್ರೌರ್ಯ ಪ್ರದರ್ಶಕವಲ್ಲವು. ಕಾಕಾಸುರನ ದಕ್ಷಿಣಾಕ್ಷಿಯ ಹರಣವೂ, ಬಲಿಯ ಶಿರಸ್ಸಿನಲ್ಲಿ ಪಾದವಿನ್ಯಾಸವೂ, ಸಮುದ್ರದಲ್ಲಿ ಬ್ರಹ್ಮಾಸ್ತ್ರಯೋಜನೆಯೂ, ಭೀಷ್ಮರನ್ನು ಶರತಲ್ಪದಲ್ಲಿ ಶಯಿನಿಸುವ ಹಾಗೆ ಮಾಡೋಣವೂ, ಗಜೇಂದ್ರನು ನಕ್ರಾಕ್ರಾಂತನಾದುದೂ, ಹಾಗೆಯೇ ಇನೂ ಅನೇಕ ದಿವ್ಯ ಚೇಷ್ಟಿತೆಗಳೂ ಕ್ರೂರಪ್ರವೃತ್ತಿಗಳಾಗಿ ಮೇಲಕ್ಕೆ ತೋರಿದರೂ, ಪರ್ಯಾಲೋಚಿಸಿದರೆ ಹಿತಸ್ರೋತೋ ವೃತ್ತಿಗಳೇ ಎಂಬುದು ವ್ಯಕ್ತವು.

೩ ಅವರ್‌ಗಳ್ಕೆ ಉಜ್ಜೀವಿಪ್ಪಿಕ್ಕಿಕ್ಕಾಗ ಎಂಬ ಮತ್ತು ಸ್ವಯಂ ಹಿತೈಷಿ ಯಾಯ್ ಎಂಬ ಮತ್ತು ಶ್ಲೋಕದಲ್ಲಿನ ಉಚಿತೈರುಪಾಯೈಃ ಎಂಬ ಪ್ರಯೋಗ ಗಳಿಂದಲೂ ಪುರುಷಕಾರತ್ವ ರೂಪದಲ್ಲಿ ಸಹಾಯಕಳಾಗುವುದೇ ಉಪಾಯತ್ವ ವೆಂದೂ, ಉಪಾಯತ್ವವಿಲ್ಲದೆ ಪುರುಷ ಕಾರತ್ವವಿಲ್ಲವೆಂಬುದು ಸ್ಪಷ್ಟವು. ಇದನ್ನೇ ಶ್ರೀ ನಿಗಮಾನ್ತ ದೇಶಿಕರವರು ಮುಂದೆ ಪುರುಷಕಾರತ್ವವೆಂದರೇನೆಂಬುದನ್ನು ತಿಳಿಯಪಡಿಸುವಾಗ "ಉಪಾಯಮಾಗ ವರಿಕ್ಕಪ್ಪಟ್ಟ ಚೇತನಾಂತರತ್ತೈ ಪುರುಷಕಾರಮೆನ್ರು ವ್ಯವಹರಿಪ್ಪಾರ್‌ಗಳ್ ಎಂದು ಉಪಪಾದಿಸಿರುತ್ತಾರೆ. ಲಕ್ಷ್ಮಿಯನ್ನು ಉಪಾಯಮಾಗಿ ಆಶ್ರಯಿಸಿದವರಲ್ಲವೇ ಅವಳು ಗಂಡನನ್ನು ಕುರಿತು ಪ್ರಾರ್ಥಿಸುವಳು. ಆ ಪ್ರಾರ್ಥನೆಗಾಗಿ ಪ್ರವೃತ್ತಿಯು ಉಪಾಯತ್ವದಲ್ಲೇ ಸೇರಿದುವು.

ಶ್ರೀ ಪರಾಶರ ಭಟ್ಟರ ಶ್ಲೋಕದಲ್ಲಿ ಉಪಾಯೈಃ ವಿಸ್ಮಾರ್ಯ - ಎಂದಿರುತ್ತದೆ. ಸರ್ವಜ್ಞನಾದ ಸರ್ವೇಶ್ವರನಿಗೆ ವಿಸ್ಮೃತಿ ಎಲ್ಲಿಯದು ? ಎಂದು ಆಕ್ಷೇಪಿಸಿದರೆ, ಅಲ್ಲಿ ವಿಸ್ಮಾರ್ಯ ಎಂಬುದರ ಅಭಿಪ್ರಾಯವು ನಿಗ್ರಹಾಭಿಸಂಧಿಯನ್ನು ನಿವರ್ತಿಸಿ ಎಂಬ ಭಾವವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.—"ಅನಿಜ್ಞಾತಾ" ಇತ್ಯಾದಿಗಳಿರ್‌ಪೋಲೆ - ಸಹಸ್ರನಾಮದಲ್ಲಿ ಪ್ರಪನ್ನರ ದೋಷಗಳನ್ನು ತಿಳಿಯದವನು ಎಂಬರ್ಥವುಳ್ಳ ಅವಿಜ್ಞಾತಾ ಮೊದಲಾಧ ಪದಗಳ ಹಾಗೆ, ಇಜ್ಜ್ಗ - ಈ ಪರಾಶರ ಭಟ್ಟರ ಶ್ಲೋಕದಲ್ಲಿ. "ವಿಸ್ಮಾರ್ಯ" ಎನ್ರದುಕ್ಕುಮ್ - "ವಿಸ್ಮಾರ್ಯ" ವೆಂಬ ಪದಕ್ಕೂ, "ಅಲ್ಲಿಮಲರ್‌ಮಗಳ್" ಇತ್ಯಾದಿಗಳುಕ್ಕುಮ್ - ಎಂಬ ಪಾಶುರವೇ ಮೊದಲಾದವುಗಳಿಗೂ, ಸದಾ ಸರ್ವಜ್ಞನಾನ-ವಿಸ್ಮೃತಿಯಾವಾಗಲೂ ಇಲ್ಲದೆ ಸದಾ

(೨) ಸಹಸ್ರ. ೪೮೩ನೆಯ ನಾಮ. (೩) ತಿರು. ೩–೧೦.೮.

**ಇತ್ಯಾದಿಗಳುಕ್ಕುಮ್ ಸದಾ ಸರ್ವಜ್ಞನಾನ ಈಶ್ವರನುಡೈಯ ನಿಗ್ರಹಾಭಿಸಂಧಿ ನಿವೃತ್ತಿಯಿಲೇ ತಾತ್ಪರ್ಯಮ್.**

---

ಸರ್ವಜ್ಞನಾಗಿರುವ. **ಈಶ್ವರನುಡೈಯ** - ಸರ್ವೇಶ್ವರನ **ನಿಗ್ರಹಾಭಿ ಸಂಧಿ ನಿವೃತ್ತಿಯಿಲೇ** - ಚೇತನಾಪರಾಧಗಳಿಗಾಗಿ ನಿಗ್ರಹಿಸಬೇಕೆಂಬ ಸಙ್ಕಲ್ಪದ ನಿವೃತ್ತಿ ಎಂಬ ಅರ್ಥದಲ್ಲಿ, **ತಾತ್ಪರ್ಯಮ್** - ಅಭಿಪ್ರಾಯವು. ಸರ್ವಜ್ಞನಿಗೆ ಒಂದು ವಿಷಯದಲ್ಲಿ ಅವಿಜ್ಞತೆಯುಂಟು. ಎಂದು ಅಲಂಕಾರವಾಗಿ ಹೇಳಿದಮಾತೇ ವಿನಾ, ವಾಸ್ತವವಾಗಿಯೂ ಸರ್ವಜ್ಞನಿಗೆ ವಿಸ್ಮೃತಿಯು ಎಂದಿಗೂ ಇಲ್ಲವು. ಆದುದರಿಂದ ವಿಸ್ಮಾರ್ಯ ಎಂದರೆ "**ಉಚ್ಯಮಾನೋಽಪಿ ಪರುಷಂ ನೋತ್ತರಂ ಪ್ರತಿಪದ್ಯತೇ**" (ರಾ. ಅಯೋಧ್ಯಾ ೧-೧೦) ಎಂಬಲ್ಲಿ ಕಠಿಣೋಕ್ತಿಯನ್ನು ಪರಿಗಣಿಸದೆ ಆದಕ್ಕೆ ಉತ್ತರವನ್ನು ಕೊಡುವನಲ್ಲವು ಎಂದು ಹೇಳಿರುವ ಹಾಗೆ ಪ್ರಪನ್ನರ ಅಪರಾಧಗಳನ್ನು ಪರಿಗಣಿಸದಿರುವ ಮಾಹಾತ್ಮ್ಯೆಯನ್ನು ಹೊಂದಿರುವನು ಎಂಬುದರಲ್ಲಿ ತಾತ್ಪರ್ಯವೆಂಬ ಭಾವವು. ' **ನಸ್ಮರತ್ಯಪಕಾರಾಣಾಂ ಶತಮಪಿ** " ಎಂದು ಕವಿವಾಕ್ಯವೂ ಉಂಟು.

"**ಅಲ್ಲಿ ಮಲರ್ ಮಗಳ್**" ಎಂಬ ಪೂರಾ ಪಾಶುರವು ಯಾವುದೆಂದರೆ—

**ಅಲ್ಲಲಿಲಿನ್ಬಮಳವಿರನ್ದೆಙ್ಗುಮಳಕಮರ್ ಶೂಳೊಳಿಯ ।**
**ನಲ್ಲಿ ಮಲರ್ ಮಗಳ್ ಪೋಗ ಮಯಕ್ಕುಕ್ಕಳಾಗಿಯುಂ ನಿರ್ಕುಮನ್ಮಾ ।**
**ನಲ್ಲೈಯಿಲ್ ಜ್ಞಾನತ್ತ ಜ್ಞಾನ ಮಕಿಂದೇ ಕೊಣ್ಡೆಲ್ಲಾಕ್ಕರುಮಙ್ಗಳುಂ ಶೆ ।**
**ಯಿಲ್ಲೈ ಯಿನ್ಮಾಯನೈ ಕಣ್ಣನೈ ತಾಳ್ ಪತ್ತಿಯಾನ್ತೋರ್ ದುಕ್ಕಮಿಲನೇ ॥**

ಇದಕ್ಕೆ ಅರ್ಥವು—**ಅಲ್ಲಲಿಲಿನ್ಬಮ್**-ಕ್ಲೇಶಗಂಧವೇ ಇಲ್ಲದ, **ಇನ್ಬಂ**—ಆನಂದಕ್ಕೆ, **ಅಳವು ಇರನ್ದು** – ಅವಧಿ ಇಲ್ಲದಿರುವ, **ಎಙ್ಗುಮ್**-ಎಲ್ಲಾ ಪ್ರದೇಶದಲ್ಲೂ, **ಅಪರ್** – ವ್ಯಾಪಿಸಿದ, **ಅಳಗು** - ಅವಯವ ಸೌಂದರ್ಯದಿಂದ, **ಶೂಳ್** – ಸೇರಿದ, **ಒಳಿಯನ್** – ಲಾವಣ್ಯ ಶೋಭೆಯನ್ನು ಹೊಂದಿದವನಾಗಿರುವ ಮತ್ತು **ಅಲ್ಲಿಮಲರ್ಮಗಳ್ ಪೋಗಮ್** – ಈ ಅವಯವ ಲಾವಣ್ಯ ಶೋಭೆಗಳೊಂದಿಗೆ, ಕಮಲಪುಷ್ಪವೇ ವಾಸಸ್ಥಾನವಾಗಿ ಇರುವ ಲಕ್ಷ್ಮಿಯೊಂದಿಗೆ ಸೇರಿರುವ ನಿರತಿಶಯ ಭೋಗದಿಂದ **ಮಯಕ್ಕುಕ್ಕಳಾಗಿಯುಂ ನಿರ್ಕುಮನ್ಮಾನ್**-ಮೈ ಮರೆತಿರುವ ಹಾಗೆ ಇರುವ ಸರ್ವಾಧಿಕನಾದ ಮತ್ತು, **ಎಲ್ಲೈಯಿಲ್ ಜ್ಞಾನತ್ತುಕ್ಕು** - ಅವಧಿಯಿಲ್ಲದ ಜ್ಞಾನವನ್ನು ಹೊಂದಿ ಸರ್ವಜ್ಞನಾದ, **ಆದು ಜ್ಞಾನಮೇ ಕೊಂಡು** – ಮೇಲೆ ಹೇಳಿದ ನಿರತಿಶಯಾನಂದ, ಲಾವಣ್ಯ ಭೋಗದಹಾಗೆ ಜ್ಞಾನವೈಭವದವಲೋಕ, **ಎಲ್ಲಾ ಕರುಮಙ್ಗಳುಮ್ ಶೆಯ್** - "**ಯಸ್ಯಾ ವೀಕ್ಷ್ಯ ಮುಖಂ ತದಿಙ್ಗಿತಪರಾಧೀನೋ ವಿಧತ್ತೇಽಖಿಲಮ್**" (ಶ್ರೀಸ್ತುತಿ ೧) ಎಂಬಲ್ಲಿ ಹೇಳಿರುವ ಹಾಗೆ, ಎಲ್ಲಾ ಜಗತ್ಸೃಷ್ಟ್ಯಾದಿ ಸಮಸ್ತ ವ್ಯಾಪಾರಗಳನ್ನೂ ಲಕ್ಷ್ಮಿಯ

ಇಷ್ಟಾನುಸಾರ ಮಾಡುವವನಾಗಿ, ಎಲ್ಲೈಯಿಲ್ ಮಾಯನ್ನೈ-ಅವಧಿಯಿಲ್ಲದ ಆಶ್ಚರ್ಯಾದ್ಭುತಚೇಷ್ಟೆಯುಳ್ಳವನಾಗಿರುವ, ಕೃಷ್ಣನ್ನೈ-ವಣ್ಣುವರ್ಯೆ ದಿವ್ಯ ದೇಶದ ಸ್ವಾಮಿಯಾದ ಶ್ರೀಕೃಷ್ಣನನ್ನು, ತಾಳ್‌ಪತ್ತಿ-ಆತನ ತಿರುವಡಿಗಳನ್ನು ಆಶ್ರಯಿಸಿ, ಯಾನ್-ಪ್ರಪನ್ನನಾದ ನಾನು, ಓರ್ ದುಃಖಮುಮ್ ಇಲನೇ-ಒಂದು ದುಃಖವನ್ನೂ ಹೊಂದುವನಲ್ಲವು, ಈ ಪಾಶುರದಲ್ಲಿ ಮುಖ್ಯವಾಗಿ ಗ್ರಹಿಸತಕ್ಕ ವಿಷಯವೇನೆಂದರೆ; ಸರ್ವೇಶ್ವರನಿಗೆ ನಿರತಿಶಯಾನಂದವೂ, ಅನುಪಮ ಕಾಂತಿಯೂ, ಲಾವಣ್ಯ ಶೋಭೆಯೂ, ಸರ್ವೋತ್ತಮಳಾಗಿ ರೂಪ ಲಾವಣ್ಯಾದಿಗಳುಳ್ಳ ಲಕ್ಷ್ಮಿಯೊಂದಿಗೆ ಭೋಗವೂ ಇದ್ದುದರಿಂದಲೇ ಲಕ್ಷ್ಮಿಗೆ ವಶನಾಗಿ ಅವಳ ಇಷ್ಟಾನುಸಾರ ಲೋಕದ ದಿವ್ಯಾದ್ಭುತಾಶ್ಚರ್ಯ ಚೇಷ್ಟೆಗಳಾದ ಲೋಕದ ಸೃಷ್ಟಿ ಸ್ಥಿತಿಲಯಾದಿ ವ್ಯಾಪಾರಗಳನ್ನು ಮತ್ತು ಪ್ರಪನ್ನರ ಅಪರಾಧಗಳನ್ನು ಪರಿಗಣಿಸದೇ ಅವರನ್ನು ಲಕ್ಷ್ಮಿಯ ಇಷ್ಟಾನುಸಾರ ರಕ್ಷಿಸುವ ಇವೇ ಮೊದಲಾದವುಗಳೇನು ಇವೆಲ್ಲವನ್ನೂ ಲಕ್ಷ್ಮಿಯ ಸಂಶ್ಲೇಷ ಮಾಹಾತ್ಮ್ಯೆಯಿಂದಲೇ ನಡೆಸುವನು ಎಂಬುದು ಲೋಕದಲ್ಲಾದರೋ ಇಂತಹ ಆನಂದವೂ, ಭೋಗ್ಯವೂ, ರೂಪಲಾವಣ್ಯ ಸಂಪನ್ನತೆಯೂ ಸ್ತ್ರೀ ಸಂಬಂಧವೂ ಇದ್ದುವಾದರೆ, ಆ ಸ್ತ್ರೀಗೆ ಪರವಶನಾಗಿ ನಾನಾ ವಿಧಗಳಾದ ಅನರ್ಥ ಪರಂಪರಾ ರೂಪವ್ಯಾಪಾರಗಳನ್ನು ಮಾಡುವನು. ಆದರೆ ಸರ್ವೇಶ್ವರನ ವಿಷಯದಲ್ಲಿ ಈ ಲಕ್ಷ್ಮೀ ಸಂಬಂಧದಮಾಹಾತ್ಮ್ಯೆಯುಎಂಥಾದ್ದೆಂದರೆ ಸರ್ವೇಶ್ವರನೂಸಹ ಲಕ್ಷ್ಮಿಯ ಇಷ್ಟಾನುಸಾರ ಸರ್ವವ್ಯಾಪಾರಗಳನ್ನೂ ನಡೆಸಿದರೂ ಸರ್ವೇಶ್ವರನಮಾಹಾತ್ಮ್ಯೆಗೆ ಈ ಲಕ್ಷ್ಮಿ ಸಂಶ್ಲೇಷೆಯು ಕಾರಣಭೂತವಾದುದು; ಆದುದರಿಂದಲೇ ಮಗಳ್ ಭೋಗನುಯ್ಕ್ಕೈಕ್ಕಳಾಗಿಯು ನಿರ್‍ಗ ಮುಮ್ಮಾ ಎಂಬ ಪ್ರಯೋಗವು. ಹೀಗೆ ಲಕ್ಷ್ಮಿಗೆ "ಜಗತ್ಸಮಸ್ತಂ ಯದಪಾಂಗಸಂಶ್ರಯಮ್"ಎಂದುಹೇಳಿರುವಹಾಗೆ ಸರ್ವೇಶ್ವರನು ಲಕ್ಷ್ಮಿಗೆ "ಪರಾಧೀನ" ನಾಗಿರುವುದರಿಂದಲೇ, ಸಾಪರಾಧರಾದ ಪ್ರಪನ್ನರ ಅಪರಾಧಗಳನ್ನು ಪರಿಗಣಿಸದೆ ರಕ್ಷಿಸುವನಾದುದರಿಂದ"ತಾಳ್‌ಪತ್ತಿಯಾನೊರು ದುಃಖಮಿಲನೇ"ತಮಗೆ ಯಾವದೊಂದು ದುಃಖದ ಸಂಘಟನೆ ಇಲ್ಲವೆಂದು ಶ್ರೀಆಳ್ವಾರ್‌ರವರು ಹೇಳಿಕೊಂಡರು. ಆದುದರಿಂದ ಈಲಕ್ಷ್ಮೀಸಂಬಂಧದಿಂದಪ್ರಪನ್ನರ ಅಪರಾಧ ವಿಷಯದಲ್ಲಿ ನಾರಾಯಣನಿಗೆ ವಿಸ್ಮೃತಿಯುಂಟಾಗುತ್ತದೆ ಎಂದರೆ ಅವುಗಳನ್ನು ಪರಿಗಣಿಸದೆ, ನಿಗ್ರಹದಿಂದ ನಿವೃತ್ತಿಯುಂಟಾಗುತ್ತದೆಂಬ ಭಾವವು. ಆಗಲಿ, ಲಕ್ಷ್ಮೀತಂತ್ರ ಮೊದಲಾದವುಗಳಲ್ಲಿ ಪರಮ ಪುರುಷನಿಗೆ ಜ್ಞಾನಬಲಾದಿಗಳು ಹೇಗೋ, ಹಾಗೆಯೇ ಲಕ್ಷ್ಮಿಗೂ ಎಂದು ಉಪಪಾದಿಸಿರುತ್ತವೆ. ಹೀಗಿರುವಾಗ ಅಂತವಳು ಪುರುಷಕಾರ ಭೂತಳೆಂದು ಹೇಳುವದೂ, ಅಂತಹ ಜ್ಞಾನಾದಿಗುಣಗಳುಳ್ಳವನಿಗೆ ಅಂತವಳೇ ಪುರುಷಕಾರ ಭೂತಳೆಂದು ಹೇಳುವುದೂ ಸರಿಯೋ? ಹಾಗಿರಬಹುದು, ಏಕೆ ಕೂಡದು ? ಎಂದರೆ ಆವಳಿಗೆ ಇನ್ನೊಬ್ಬ ಪುರುಷಕಾರ ಭೂತನು, ಆತನಿಗೆ ಇನ್ನೊಬ್ಬನು, ಹೀಗೆ ಅನವಸ್ಥಾದೋಷ ಉಂಟಾಗುವುದಿಲ್ಲವೇ ಎಂಬ

## ಪುರುಷಕಾರ ಶಬ್ದಾರ್ಥಃ

**ಸಾಪೇಕ್ಷನಾನ ಪುರುಷನುಕ್ಕು ಅಪೇಕ್ಷಿತನ್ ತಲೈಕ್ಕಟ್ಟಿ ಕೊಡುಕ್ಕವಲ್ಲ ಚೇತನನ್ ಅ(ಭಿ) ಧಿಗಮ್ಯನಾಗೈಕ್ಕು ಉಪಾಯಮಾಗ ವರಿಕ್ಕಪ್ಪಟ್ಟ ಚೇತನಾಂತರತ್ತೈ ಪುರುಷಕಾರಮೆನ್ರು ವ್ಯವಹರಿಪ್ಪಾರ್‌ಗಳ್. ಇಪ್ಪುರುಷ ಕಾರಮ್ ಫಲತ್ತುಕ್ಕು ಪರಂಪರಯಾ ಕಾರಣಮ್.**

---

**ಆಕ್ಷೇಪತಂ**ದರೆ, ಇದನ್ನು ಶ್ರೀಪರಾಶರ ಭಟ್ಟರವರು ಬಗೆ ಹರಿಸಿರುತ್ತಾರೆ, ಹೇಗೆಂದರೆ? ಇಬ್ಬರೂ ಸರ್ವಜ್ಞತೆ ಮೊದಲಾದ ಗುಣಗಳಲ್ಲಿ ಸಮರಾದರೂ ಸ್ವಾಮಿಯೂ, ಲಕ್ಷ್ಮಿಯೂ ಸಹ ದಂಡಧರತ್ವ ಅನುಗ್ರಹ ಪ್ರದತ್ವ ವ್ಯಾಪಾರಗಳಲ್ಲೂ ವಿಭಾಗಿಸಿ ಕೊಂಡಿದ್ದಾರೆಂದು ಶ್ರೀ ಪರಾಶರಭಟ್ಟರವರು "ಯುವತ್ವಾದೌ ತುಲ್ಯೇ" ಎಂಬ ಶ್ಲೋಕದಲ್ಲಿ ಉಪಪಾದಿಸಿರುವ ಹಾಗೆ ಪತಿಯು ದಂಡಿಸಲು ಎತ್ನಿಸಿದಾಗ ಪತ್ನಿಯ ಪುರುಷಕಾರತ್ವವು ಉಚಿತವಾದುದೇ, ಹಾಗಾದರೆ ಲಕ್ಷ್ಮಿಯೊಬ್ಬಳೇ ಪುರುಷಕಾರ ಭೂತಳಾಗಲು ಯೋಗ್ಯಳೇ ? ಆಚಾರ್ಯರುಗಳಿಗೆ ಪುರುಷಕಾರತ್ವವಿಲ್ಲವೋ? ಎಂದರೆ ಲಕ್ಷ್ಮಿಯ ಹಾಗೆಯೇ ಪರಮ ಭಾಗವತರೂ ಪರಮ ಪುರುಷನಿಗೆ ಮಾನ್ಯರೇ. ಹಾಗೆ ನೋಡಿದರೆ ಲಕ್ಷ್ಮಿಗಿಂತಲೂ ಹೆಚ್ಚಾಗಿ ಮಾನ್ಯರೇ, "**ಅಪ್ಯಹಂ ಜೀವಿತಂಜಹ್ಯಾಂ ತ್ವಾಂವಾ ಸೀತೆ ಸಲಕ್ಷ್ಮಣಾಮ್** (ರಾಮಾ ಅರಣ್ಯ)ಎಂಬುದು ಅನುಸಂಧೇಯವು.

**ಪುರುಷಕಾರ ಶಬ್ದದ ಅರ್ಥವು.**

---

**ಸಾಪೇಕ್ಷನಾನ ಪುರುಷನಕ್ಕು** - ಯಾವುದೋ ಒಂದು ಅಪೇಕ್ಷೆಯಿಂದ ಕೂಡಿದ ಮನುಷ್ಯನಿಗೆ **ಅಪೇಕ್ಷಿತಮ್** - ಆತನು ಅಪೇಕ್ಷಿಸಿದುದನ್ನು, **ತಲೈಕ್ಕಟ್ಟಿ ಕೊಡುಕ್ಕವಲ್ಲ** - ತಲೆಯಲ್ಲಿ ಹೊತ್ತು ನಡೆಸಿ ಕೊಡುವ, ಎಂದರೆ ತಪ್ಪದ ಹಾಗೆ ನಡಸಿ ಕೊಡುವ, **ಚೇತನನ್** - ಶ್ರೇಷ್ಠನಾದ ಚೇತನನು, **ಅಧಿಗಮ್ಯನಾಗೈಕ್ಕು**- ಪ್ರಾಪ್ಯನಾಗುವುದಕ್ಕಾಗಿ, **ವರಿಕ್ಕಪ್ಪಟ್ಟ** - ಪ್ರಾರ್ಥಿಸಲ್ಪಟ್ಟ, **ಚೇತನಾಂತರತ್ತೈ**- ಬೇರೊಬ್ಬ ಚೇತನನನ್ನು, **ಪುರುಷಕಾರಮೆನ್ರು ವ್ಯವಹರಿಪ್ಪಾರ್‌ಗಳ್** - ಪುರುಷ ಕಾರಭೂತನೆಂದು ಹೇಳುವರು, ನಮ್ಮ ಅಪೇಕ್ಷಿತವನ್ನು ತಪ್ಪದೆ ದಯಪಾಲಿಸುವ ಯೋಗ್ಯತೆಯುಳ್ಳವನು ಸರ್ವೇಶ್ವರನು, ಆತನು ನಮಗೆ ಅಧಿಗಮ್ಯನಾಗುವುದಕ್ಕಾಗಿ ನಾವು ಇನ್ನೊಬ್ಬ ಚೇತನಳಾದ ಲಕ್ಷ್ಮಿಯನ್ನು ಆಶ್ರಯಿಸುವೆವು.; ಆಗ ಲಕ್ಷ್ಮಿಯನ್ನು ಪುರುಷಕಾರ ಭೂತಳೆಂದು ಹೇಳುವೆವು. ಹಾಗೆಯೇ ಲೋಕದಲ್ಲೂ ಒಬ್ಬ ರಾಜನಿಂದ ನಮ್ಮ ಅಪೇಕ್ಷಿತವು ಕೈ ಗೂಡಬೇಕಾದುದು ಇರುತ್ತದೆ. ಇದಕ್ಕಾಗಿ ಅವರ ದಿವಾನರನ್ನು ಆಶ್ರಯಿಸುವೆವು. ದಿವಾನರು ಪುರುಷಕಾರ ಸ್ಥಾನೀಯರು. **ಇಪ್ಪುರುಷಕಾರಮ್** - ಹೀಗೆ ಇನ್ನೊಬ್ಬರನ್ನು ಪುರುಷಕಾರ ರೂಪದಲ್ಲಿ ಆಶ್ರಯಿ

**"ಅರ್ಥಸ್ವಭಾವಾನುಷ್ಠಾನ ಲೋಕದೃಷ್ಟಿ ಗುರೂಕ್ತಿಭಿಃ । ಶ್ರುತ್ಯಾ ಸ್ಮೃತ್ಯಾಚ ಸಂಸಿದ್ಧಂ ಘಟಕಾರ್ಥಾವಲಂಬನಮ್" ಎನ್ರು ಇಪ್ಪುರುಷಕಾರ ಭಾವತ್ತುಕ್ಕು ಪ್ರಮಾಣಮ್ ನಿಕ್ಷೇಪ ರಕ್ಷೈಯಿಲೇ ಶೊನ್ನೋಮ್.**

---

ಸೋಣವು, **ಫಲತ್ತುಕ್ಕು** – ಈ ಚೇತನನಿಗೆ ಅಪೇಕ್ಷಿತವಾದ ಫಲಕ್ಕೆ, **ಪರಂಪರಯಾ ಕಾರಣಮ್**-ಸಾಕ್ಷಾತ್ತಾಗಿ ಅಲ್ಲದಿದ್ದರೂ ಇನ್ನೊಬ್ಬರ ಮೂಲಕವಾಗಿ ಕಾರಣವಾಗುತ್ತದೆ. ಇಲ್ಲಿ **ಪರಂಪರಯಾ** ಎಂದು ಹೇಳಿರುವದರ ಭಾವವೇನೆಂದರೆ - ಶ್ರೀ ಶರಣಾಗತಿ ಮೊದಲಾದವುಗಳ ಮೂಲಕ ಲಕ್ಷ್ಮಿಯನ್ನು ಆಶ್ರಯಿಸತಕ್ಕದ್ದಾಗಿ, ಹಾಗೆಯೇ ಶ್ರೀ ಯತಿವರ್ಯರೂ ಅನುಷ್ಠಿಸಿದುದರಿಂದ **ಪರಂಪರಯಾ** ಎಂಬ ಪ್ರಯೋಗವು; ಸಾಕ್ಷಾತ್ತಾಗಿ ಅಲ್ಲವೆಂಬಭಾವವು. **ಪುರುಷಕಾರ** ಶಬ್ದದಲ್ಲಿ **ಪುರುಷ** ಶಬ್ದವು ಶರೀರವನ್ನು ಹೊಂದಿರುವ ಚೇತನನನ್ನು ಬೋಧಿಸುವುದರಿಂದ ಸ್ತ್ರೀಯು ಪುರುಷಕಾರ ಭೂತಳಾಗಬಹುದು. ಶ್ರೀಯಾದ ಲಕ್ಷ್ಮಿಯಾದರೋ ಸರ್ವಶ್ರೇಷ್ಠಳಾದ ಪುರುಷಕಾರ ಭೂತಳು. ಅವಳನ್ನು ಆಶ್ರಯಿಸಿದರೆ ಪ್ರಾಪ್ಯವನ್ನು ಹೊಂದುವದರಲ್ಲಿ ಸಂದೇಹವಿಲ್ಲವು. ಪ್ರಾಪ್ಯದಲ್ಲಿ ಅವಳೂ ಸೇರಿದವಳೇ

ಆದರೆ ಹಾಗೆ ಲಕ್ಷ್ಮಿಯು ಪುರುಷಕಾರ ಭೂತಳೆಂದು ಹೇಳಲು ಕಾರಣವುಂಟೋ ? ಎಂದರೆ ಆರು ಕಾರಣಗಳಿಂದ ಲಕ್ಷ್ಮಿಯ ಪುರುಷಕಾರತ್ವವನ್ನು ತಾವು ಬರೆದಿರುವ ಅಮೋಘಗ್ರಂಥವಾದ ನಿಕ್ಷೇಪರಕ್ಷೆಯಲ್ಲಿ ಹೇಳಿರುವೆವೆಂದುಅದನ್ನೇ ತಿಳಿಸಿ ಇಲ್ಲಿಉದಾಹರಿಸಿ ವಿಸ್ತರಿಸಿಹೇಳುತ್ತಾರೆ. ಇದು ಶ್ರೀದೇಶಿಕಕಾರಿಕೆಯು. **ಅರ್ಥಸ್ವಭಾವ**–ಪುರುಷಕಾರಭೂತವಾಗುವ ಚೇತನ ಸ್ವಭಾವವು, ಇಲ್ಲ ಲಕ್ಷ್ಮಿಯ ವಾಲ್ಲಭ್ಯಾತಿಶಯ ವಾತ್ಸಲ್ಯದಯಾ ಮೊದಲಾದುವುಗಳೂ ಹೇಳಲ್ಪಟ್ಟವು, ಲೋಕ ಪಿತಾವಾದ ಈಶ್ವರನಹಾಗೆ ಹಿತಪ್ರವರ್ತನೆಗಾಗಿ ಬೇಕಾದ ಶಾಸ್ತ್ರವಾಗಿರೋಣವು ಸ್ವಲ್ಪವೂ ಇಲ್ಲದೆ, ಲೋಕಜನನಿಗೆ ಅನುಗುಣವಾಗಿ ಪ್ರಜ್ಞಾತನಿಗ್ರಹತ್ವ ಅನುಗ್ರಹ ಮಯತ್ವಾದಿಗಳನ್ನುಳ್ಳವಳಾಗಿ ಆಶ್ರಿತರನ್ನು ಭಗವಂತನು ಹೇಗೆ ರಕ್ಷಿಸಲು ಉದ್ಯುಕ್ತನಾಗಬೇಕೋ ಹಾಗೆ ಮಾಡುವ ಸ್ವಭಾವವುಳ್ಳೋಣವೆಂಬ ತಾತ್ಪರ್ಯವು. **ಅನುಷ್ಠಾನ**- ಕೆಲವು ಸಂದರ್ಭದಲ್ಲಿನ ಅನುಷ್ಠಾನವು ಲಕ್ಷ್ಮಿಯನ್ನು ಪುರುಷಕಾರ ಭೂತಳಾಗಿ ಆಶ್ರಯಿಸಿದ ಅನುಷ್ಠಾನವೂ ಇದು ಮುಂದೆ ನೃಸಿಂಹಾವತಾರದಲ್ಲಿ ಕೋಪೋದ್ರೇಕ ಶಮನಕ್ಕಾಗಿ ದೇವತೆಗಳಿಂದ ಆಶ್ರಯಿಸಲ್ಪಟ್ಟು ಕೋಪಶಾನ್ತಿ ಮಾಡಿದ ಇತಿಹಾಸವೂ, ಮತ್ತು ಶ್ರೀ ಭಾಷ್ಯಕಾರರ ಅನುಷ್ಠಾನವೂ ಇವಕ್ಕೆ ನಿದರ್ಶನಗಳಾಗಿ ಮುಂದೆ ಹೇಳಲ್ಪಡುತ್ತವೆ. **ಲೋಕದೃಷ್ಟಿ** – ಲೋಕನ್ಯಾಯವೂ, ಪ್ರಿಯಳಾದ ಹೆಂಡತಿಯ ಮಾತನ್ನು ಗಂಡನು ನಡೆಸಿಕೊಡುವನು ; ಅದರಹಾಗೆ ತನ್ನ ಪ್ರಿಯಕಾನ್ತೆಯಾದ ಲಕ್ಷ್ಮಿಯ ಮಾತನ್ನು ಸರ್ವೇಶ್ವರನು ನಿರಾಕರಿಸದೇ ಇರೋಣವೂ, **ಗುರೂಕ್ತಿಭಿಃ**-ಗುರುಗಳಾದ ಮಹನೀಯರುಗಳ **"ಅಗಿಲಗಿಲ್ಲೇ"**

(೧) ಇವತ್ತಿಲ್ ಅರ್ಥ ಸ್ವಭಾವ ಮಾವದು ? ಈಶ್ವರನ್ನೈಪ್ಪೋಲೇ ಪಿತೃತ್ವಾನುರೂಪಮಾನ ಪ್ರತಾಪೋಷ್ಮಳತ್ವಮ್ ಕಲಶಾದೇ ಮಾತೃತ್ವ ಪ್ರಯುಕ್ತಙ್ಗಳಾನ ವಾತ್ಸಲ್ಯಾದಿಗಳತಿಶಯಿತ್ತು (೧) "ನಕಶ್ಚಿನ್ನಾಪರಾಧ್ಯತಿ"

---

ಇತ್ಯಾದಿ ದಿವ್ಯ ಸೂಕ್ತಿಗಳಿಂದಲೂ, ಮತ್ತು ಶ್ರುತ್ಯಾ – "ಶ್ರಿಯಂ ಲೋಕೇ ದೇವಜುಷ್ಟಾಮುದಾರಾಂ" "ತಾಂ ಪದ್ಮನೇಮಿಂ ಶರಣಮಹಂ ಪ್ರಪದ್ಯೇ" ಇತ್ಯಾದಿ ಶ್ರುತಿ ಪ್ರಮಾಣದಿಂದಲೂ, ಸ್ಮೃತ್ಯಾಚ – "ನಾಚಃಪರಂ ಪ್ರಾರ್ಥಯಿತಾ ಪ್ರಪದ್ಯೇನ್ನಿಯತ ಶ್ರಿಯಂ" ಎಂಬ ಶೌನಕಾದಿ ಸ್ಮೃತಿ ಪ್ರಮಾಣಗಳಿಂದಲೂ, ಘಟಿಕಾರ್ಥಾವಲಂಬನಮ್ - ಪುರುಷಕಾರರೂಪದಲ್ಲಿ ಲಕ್ಷ್ಮಿಯನ್ನು ಆಶ್ರಯಿಸೋಣವು, ಸಂಸಿದ್ಧಮ್-ಚನ್ನಾಗಿ ಸ್ಥಾಪಿತವು." ಎನ್ರು-ಎಂಬದಾಗಿ, ಇಪ್ಪುರುಷಕಾರಭಾವತ್ತುಕ್ಕು - ಲಕ್ಷ್ಮಿಯ ಪುರುಷಕಾರಭಾವಕ್ಕೆ, ಪ್ರಮಾಣಂ - ಪ್ರಮಾಣವನ್ನು, ನಿಕ್ಷೇಪರಕ್ಷೈಯಿಲೇ – ನಮ್ಮ ಗ್ರಂಥವಾದ ನಿಕ್ಷೇಪರಕ್ಷೆಯಲ್ಲಿ, ಶೊನ್ನೋಮ್ – ಹೇಳಿದುತ್ತೇವೆ. ಹೀಗೆ ಆರುವಿಧವಾಗಿ ಪ್ರಮಾಣ ಬಲವನ್ನು ಆ ಗ್ರಂಥದಲ್ಲಿ ತೋರಿಸಿರುತ್ತೇವೆ. ಅದನ್ನೇ ಇಲ್ಲೂ ಉಪಪಾದಿಸಿ ಹೇಳುತ್ತೇವೆ ಎಂಬ ಭಾವವು.

ಇವತ್ತಿಲ್ - ಈ ಆರು ಕಾರಣಗಳಲ್ಲಿ ಅರ್ಥಸ್ವಭಾವವು ಯಾವುದು ? ಈಶ್ವರನ್ನೈಪ್ಪೋಲೇ - ಈಶ್ವರನಹಾಗೆ, "ತುಲ್ಯಶೀಲವಯೋವೃತ್ತಾಂ ತುಲ್ಯಾಭಿಜನಲಕ್ಷಣಾಂ । ರಾಘವೋರ್ಹತಿವೈದೇಹೀಂ ತಂಚೇಯ ಮಸಿತೇಕ್ಷಣಾ" (ರಾ. ಸುಂ.          ) ಎಂಬಲ್ಲೂ "ಭಗವನ್ನಾರಾಯಣಾಭಿಮತಾನುರೂಪ ಸ್ವರೂಪರೂಪಗುಣ ವಿಭವೈಶ್ವರ್ಯ ಶೀಲಾದ್ಯನುಗುಣಾಂ" ಎಂಬಲ್ಲೂ ಹೇಳಿರುವ ಹಾಗೆ ಈಶ್ವರನಿಗೆ ಸಮಾನವಾದ, ಪಿತೃತ್ವಾನುರೂಪಮಾನ–ಲೋಕಪಿತಾವಾಗಿರುವ ದಕ್ಕನುಗುಣವಾದ, ಪ್ರತಾಪೋಷ್ಮಳತ್ವಮ್ - ಅಪರಾಧಿಗಳನ್ನು ದಂಡಿಸಬೇಕೆಂಬ ಪ್ರತಾಪದ ಕೋಪೋದ್ರೇಕವನ್ನು ಕಲಶಾದೇ ಉಂಟಾಗದಹಾಗೆ, ಮಾತೃತ್ವ ಪ್ರಯುಕ್ತಙ್ಗಳಾನ-ಲೋಕಮಾತೆಯಾಗಿರುವ ತನಗೆ ಯೋಗ್ಯಗಳಾದ ವಾತ್ಸಲ್ಯಾದಿಗಳತಿಶಯಿತ್ತು - ವಾತ್ಸಲ್ಯ, ಆದಿಪದದಿಂದ, ದಯಾ ಸೌಶೀಲ್ಯಾದಿಗಳು ಹೆಚ್ಚಾಗಿ, ವೃದ್ಧಿ ಹೊಂದಿ ಎಂಬ ಭಾವವು, (೧) "ನಕಶ್ಚಿನ್ನಾಪರಾಧ್ಯತಿ" ಈ ಲೋಕದಲ್ಲಿ ಯಾವನೊಬ್ಬನೂ ಅಪರಾಧ ಮಾಡದೇ ಇಲ್ಲವು. (೨) "ಕಃ ಕುಪ್ಯೇದ್ವಾನರೋತ್ತಮ" ಓ ವಾನರಶ್ರೇಷ್ಠನಾದ ಆಂಜನೇಯನೇ ಪ್ರಾಜ್ಞನಾದವನು ಯಾರು ಇವರುಗಳ ವಿಷಯದಲ್ಲಿ ಕೋಪಿಸುವನು ? (೩) "ದುರ್ಬಲಾ-ಬಲವಿಲ್ಲದ ನಾನು, ಇಹ - ಈ ಸಂದರ್ಭದಲ್ಲಿ, ಮರ್ಷಯಾಮಿ - ಸಹಿಸಿಕೊಂಡಿರುವೆನು" ಎಙ್ಗೈಯಿಲೇ - ಎಂಬ ಉಕ್ತಿಗಳಲ್ಲಿ ತೋರುವ ಗುಣಗಳನ್ನೇ, ಸ್ವಭಾವಮಾಯಿರುಕ್ಕೈಯುಮ್ – ಸ್ವಭಾವವಾಗಿರೋಣವೂ, ವಾಲ್ಲಭ್ಯಾತಿಶಯ 'ದಿಂದ

(೨) "ಕಃ ಕುಪ್ಯೇ ದ್ವಾನರೋತ್ತಮ" (೩) "ಮರ್ಷಯಾಮೀಹ ದುರ್ಬಲಾ" ಎಪ್ಪೆಯೇ ಸ್ವಭಾವಮಾಯಿರುಕ್ಕೈಯುಮ್, ವಾಲ್ಲಭ್ಯಾತಿಶಯತ್ತಾಲೇ ಇವಳೈ ಮುನ್ನಿಟ್ಟಾಲ್ ಇವರ್ ಮರುಕ್ಕ ಮಾಟ್ಟಾದೊಳಿಗೈಯುಮ್.

---

ಇವಳೈ ಮುನ್ನಿಟ್ಟಾಲ್-ಇವಳನ್ನು ಪುರುಷಕಾರರೂಪದಲ್ಲಿ ಮುಂದಿಟ್ಟುಕೊಂಡು ಆಶ್ರಯಿಸಿದರೆ, ಇವರ್–ಈ ಭಗವಂತನು ಮರುಕ್ಕ ಮಾಟ್ಟಾದೊಳಿಗೈಯುಮ್–ಅಂತವನನ್ನು ರಕ್ಷಿಸಲು ಮರೆತು ತಪ್ಪಿಸಿಕೊಳ್ಳದೇ ಇರುವಹಾಗೆ ಮಾಡೋಣವೂ, ಆದುದರಿಂದ ಅರ್ಥಸ್ವಭಾವ ಯಾವುದು ? ಎಂದರೆ ಲಕ್ಷ್ಮಿಯು ಅನುಗ್ರಹ ಮಯತ್ವ ವಾತ್ಸಲ್ಯ, ಕಾರುಣ್ಯಾದಿ ಗುಣಗಳೂ ಮತ್ತು ಸ್ವಾಮಿಯು ಶಾಸ್ತ್ರಾವಾಗಿ ಅಪರಾಧಿಯನ್ನು ದಂಡಿಸಲು ಯತ್ನಿಸಿದರೆ ತನ್ನ ವಾಲ್ಲಭ್ಯಾತಿಶಯದಿಂದ ತಪ್ಪಿಸೋಣವು; ಇಂತಹ ಸ್ವಭಾವವಿರುವದರಿಂದ ಲಕ್ಷ್ಮಿಯು ಪುರುಷಕಾರ ರೂಪದಲ್ಲಿರಲು ಯೋಗ್ಯಳೆಂಬುದು ಸ್ಥಾಪಿತವು. ಮೇಲೆ ಉದಾಹರಿಸಿರುವ ಮೂರು ರಾಮಾಯಣ ಶ್ಲೋಕಗಳು ಯಾವುವೆಂದರೆ – "ಪಾಪಾನಾಂ ವಾ ಶುಭಾನಾಂ ವಾ ವಧಾರ್ಹಾಣಾಂ ಪ್ಲವಙ್ಗಮ । ಕಾರ್ಯಂ ಕರುಣ ಮಾರ್ಯೇಣ ನಕಶ್ಚಿನ್ನಾಪರಾಧ್ಯತಿ" ಇದು ರಾವಣ ವಧಾನಂತರ ಸೀತೆಯನ್ನು ಕಂಡು ಆಕೆಗೆ ತೊಂದರೆ ಮಾಡಿದ ರಾಕ್ಷಸ ಸ್ತ್ರೀಯರನ್ನು ವಧಿಸಲು ಅನುಜ್ಞೆಯನ್ನು ಪ್ರಾರ್ಥಿಸಿದ ಆಂಜನೇಯನಿಗೆ ಹೇಳಿದ ಅಮೋಘವಾದ ಸೀತಾವಾಕ್ಯವು. - ಪಾಪನಾಂವಾ, ಈ ಸ್ತ್ರೀಯರು ನಿನ್ನ ಅಭಿಪ್ರಾಯದ ಪ್ರಕಾರ ಪಾಪಿಗಳೇ ಆಗಲಿ, ಅಥವಾ ಶುಭಾನಾಂ ವಾ-ನನ್ನ ಅಭಿಪ್ರಾಯದ ಪ್ರಕಾರ ರಾಜಾಜ್ಞೆಯನ್ನು ನಡೆಸಿದುದರಿಂದ ಪಾಪಿಗಳಲ್ಲವು ಶುಭರೇ ಎಂದಾಗಲಿ, ನಿನ್ನ ಅಭಿಪ್ರಾಯವೂ ನನ್ನ ಅಭಿಪ್ರಾಯವೂ ಹಾಗಿರಲಿ, ಮೂರನೆಯವರ ಅಭಿಪ್ರಾಯದ ಪ್ರಕಾರ ವಧಾಹರ್ಾಣಾಂ - ವಧಿಸಲು ಅರ್ಹರು ಈ ಸ್ತ್ರೀಯರು ಎಂದೇ ಆಗಲಿ, ಇಂತಹ ವಿಷಯದಲ್ಲೂ ಹೇ ಪ್ಲವಙ್ಗಮ - "ದಂಡ್ಯಾದಂಡನೀಯಾ ನಾದಂಡ್ಯಾಃ" ಎಂಬ ಧರ್ಮ ಸೂಕ್ಷ್ಮವನ್ನು ಗ್ರಹಿಸಿದ ಪ್ರಯುಕ್ತ ಓ ವಾನರನೇ, ಆರ್ಯೇಣ - ಪೂಜ್ಯನಿಂದ, ಕರುಣಂ ಕಾರ್ಯಮ್-ಕೃಪೆಯನ್ನೇ ಮಾಡತಕ್ಕದ್ದು; ಅಥವಾ ಶುಭಾನಾಂ ವಧಾರ್ಹಣಾಂ - ಮೊದಲು ಶುಭರಾಗಿ ಅನಂತರ ವಧಾರ್ಹರ ವಿಷಯದಲ್ಲಿ, ಹೇಗೆ ಪೂಜ್ಯನು ಕರುಣೆಯನ್ನು ತೋರಿಸಬೇಕೋ ಹಾಗೆಯೇ ಪಾಪಾನಾಂ ವಧಾಹರ್ಾಣಾಂ-ಪಾಪಿಗಳಾದ ವಧಾರ್ಹರಲ್ಲೂ ಕರುಣೆಯನ್ನು ಪೂಜ್ಯನು ತೋರಿಸತಕ್ಕದ್ದು ನ್ಯಾಯವು ತನ್ನ ಪತಿಯು "ದೋಷೋಯದ್ಯಪಿ ತಸ್ಯಸ್ಯಾತ್" ಎಂದು ಹೇಳಿದ ನಂತರ ಅವರ ಮಹಿಮೆಗೆ ಅನುಗುಣವಾಗಿ ಪಾಪಾನಾಂ ವಾ ವಧಾಹರ್ಾಣಾಂ ಕಾರ್ಯಂಕರುಣಮಾರ್ಯೇಣ ಎಂದು ತಾನು ಹೇಳುವದು ನ್ಯಾಯವೆಂಬ ಭಾವವೂ ದ್ಯೋತಿತವು. ಏಕೆಂದರೆ ದುಷ್ಟೋಪಿ ಶರಣಾಗತೋ ರಕ್ಷಣೀಯಃ ಎಂಬ ಶಾಸ್ತ್ರಾನುಸಾರವಾಗಿ ಇವರು

ಗಳಿಗಾಗಿ ತ್ರಿಜಟೆಯು ಶರಣಾಗತಿಯನ್ನು ಮಾಡಿದಾಗ "**ಭವೇಯಂ ಶರಣ ಹಿ ವಃ**" ಎಂದು ಹೇಳಿದವಳು ನಾನಾದುದರಿಂದ, ಕಾರ್ಯಂ **ಕರುಣ ಮಾರ್ಯೇಣ ಎಂಬ ಭಾ**ವವು. ಅಪರಾಧ ಮಾಡಿದವರನ್ನು ಅನುಗ್ರಹಿಸತಕ್ಕದ್ದೆಂಬುದು ಅತಿ ಪ್ರಸಙ್ಗ ವಲ್ಲವೋ? ಎಂದರೆ ಹೇಳುತ್ತಾಳೆ. **ನಕಶ್ಚಿನ್ನಾಪರಾಧ್ಯತಿ** – **ಈ ಲೋಕದಲ್ಲಿ** ಯಾವ **ಪು**ರುಷನೇಯಾಗಲಿ ಪಾಪ ಮಾಡಿಲ್ಲವೆಂಬುದು ಎಂದಿಗೂ ಇಲ್ಲವು. ಎಲ್ಲರೂ **ಸಾ**ಪರಾಧಿಗಳು; ಆದುದರಿಂದ ಯಾರೂ ಅನುಗ್ರಹಕ್ಕೆ ಯೋಗ್ಯರೇ ಇಲ್ಲವೆಂದಾ ಗುತ್ತದೆಯಾದುದರಿಂದ ಪ್ರಾಜ್ಞರು ಒಳ್ಳೆಯವನನ್ನು ರಕ್ಷಿಸುವದೇನೂ ದೊಡ್ಡ ದಲ್ಲವು; ದೋಷಯುಕ್ತನೆಂದೂ ತಿಳಿದು ರಕ್ಷಿಸಿದರೆ ಆಗಲೇ ಪ್ರಾಜ್ಞನೆಂಬುದು ವ್ಯಕ್ತವು. ಈ ಸೂಕ್ಷ್ಮವನ್ನು ನೀನು ಗ್ರಹಿಸದೇ ಇದ್ದುದರಿಂದ ನೀನು ಪ್ಲವಂ ಗಮನೇ ಸರಿ ಎಂಬ ಭಾವವೂ ದ್ಯೋತಿತವು.

(೨) "**ರಾಜ ಸಂಶ್ರಯವಶ್ಯಾನಾಂ ಕುರ್ವಂತೀನಾಂ ಪರಾಜ್ಞಯಾ।**
**ವಿಧೇಯಾನಾಂಚ ದಾಸೀನಾಂ ಕಃಕುಪ್ಯೇ ದ್ವಾನರೋತ್ತಮ**"॥

ರಾಜ **ಸಂಶ್ರಯವಶ್ಯಾನಾಂ** - ಪ್ರಬಲನಾದ ಸಮರ್ಥನಾದ ರಾಜನನ್ನು ಹೊಟ್ಟೆ ಪಾಡಿಗಾಗಿ ಆಶ್ರಯಿಸಿ ಆತನಿಗೆ ವಶ್ಯರಾಗಿರುವ, ಆ ಕಾರಣದಿಂದಲೇ, **ಪರಾಜ್ಞಯಾ ಕುರ್ವನ್ತೀನಾಂ** - **ಸ್ವ**ತಂತ್ರವಾಗಿಯುಳ್ಳ ಇತರರ ಆಜ್ಞಾನುಸಾರ ಪ್ರವೃತ್ತಿಯುಳ್ಳ, **ವಿಧೇಯಾನಾಂ** - ಅಂತಹ ರಾಜರಿಗೆ ವಿಧೇಯರಾದ, **ದಾಸೀನಾಂ** ದಾಸ್ಯ ಮಾಡುವ ಹೆಂಗಸರನ್ನು ಕುರಿತು, **ಹೇ ವಾನರೋತ್ತಮ ಓ** ವಾನರ ಶ್ರೇಷ್ಠನೇ, **ಕಃಕುಪ್ಯೇತ್**-ಯಾವ ಪ್ರಾಜ್ಞನಾಗಲಿ ಕೋಪಿಸುವನೇ? ರಾಜಾಜ್ಞೆ ಗಾಗಿ ಈ ಸ್ತ್ರೀಯರೇ ನನ್ನನ್ನು ಬಾಧಿಸಿರುವದರಿಂದ ತಪ್ಪು ರಾಜನದೇ ವಿನಾ ಇವ ರದು ತಪ್ಪು ಹೇಗೆ ಆದೀತು? **ಆ**ತನಿಂದ ಜೀವನವನ್ನು ಹೊಂದಿರುವದರಿಂದ ಆತನ ಆಜ್ಞಾನುಸಾರ ನಡೆಯತಕ್ಕದ್ದು ಅವರಿಗೆ ನ್ಯಾಯವು. ಆದರಿಂದ ಅವರ **ಮೇ**ಲೆ ಕೋಪಿಸಬಹುದೋ? ಲೋಕದಲ್ಲೂ ಈ ನ್ಯಾಯವುಂಟು. ಏನೋ ಒಂದು ಜನ ಸಮೂಹದಲ್ಲಿ ದೊಂಬಿಯು ನಡೆಯುವ ಕಾಲದಲ್ಲಿ ಪೋಲೀಸನವರನ್ನು ಕುರಿತು ಒಬ್ಬ ಮ್ಯಾಜಿಸ್ಟ್ರೇಟರೇ **ಲಾ**ತಿ ಚಾರ್ಜಿಗಾಗಲಿ, ಗುಂಡಿನಿಂದ ಹೊಡೆಯುವದಕ್ಕಾಗಲಿ ಆಜ್ಞೆಯನ್ನಿತ್ತುದುದರಿಂದ ಪೋಲಿಸ್‌ನವರು ಕೆಲವರನ್ನು ಹೊಡೆದು ಅನಾಹುತವು ನಡೆದರೆ, ಪೊಲೀಸ'ನವರನ್ನು ತಪ್ಪಿತಸ್ಥರನ್ನಾಗಿ ಎಂದಿಗೂ ಭಾವಿಸುವದಿಲ್ಲವು. ಮ್ಯಾಜಿಸ್ಟ್ರೇಟನ **ಆಜ್ಞೆ**ಯು **ನ್ಯಾಯವೇ ಅಲ್ಲವೇ**, ಎಂಬುದನ್ನೇ **ವಿಚಾರಿಸುತ್ತಾರೆ. ಹಾಗೆಯೇ** ಇಲ್ಲಿಯೂ ಎಂಬ ಭಾವವು. ದುಷ್ಟನಾದ **ರಾವಣನ** ಆಜ್ಞಾನುಸಾರ **ಈ** ರಾಕ್ಷಸ ಸ್ತ್ರೀಯರು ನಡೆದುದರಿಂದ ಇವರು ಎಂದಿಗೂ ದೋಷಿಗಳಲ್ಲ. **ಅದೂ ಅ**ಲ್ಲದೆ ಇವರಿಗಾಗಿ ತ್ರಿಜಟೆಯು ಶರಣಾಗತಿಯನ್ನು ಮಾಡಿದುದನ್ನು ನೀನೇ **ನೋಡಿ**ರುತ್ತೀಯೇ. ಹೀಗಿರುವಾಗ **ಕಃಕುಪ್ಯೇತ್** - ಅಂತವರ **ಮೇಲೆ ಯಾವ**

ಪ್ರಾಜ್ಞನು ಕೋಪಿಸುವನು ? ಎಂಬರ್ಥವು. ಇವೆರಡು ಶ್ಲೋಕಗಳಿಂದಲೂ ಲಕ್ಷ್ಮಿಯು ವಾತ್ಸಲ್ಯ, ಕಾರುಣ್ಯ, ಅನುಗ್ರಹ ಮಯತ್ವಾದಿಗಳು ವ್ಯಕ್ತವು.

೩. "ಪ್ರಾಪ್ತವ್ಯಂತು ದಶಾಯೋಗಾತ್ ಮಯೈದಿತಿ ನಿಶ್ಚಿತಮ್ ।
ದಾಸೀನಾಂ ರಾವಣಸ್ಯಾಹಂ ಮರ್ಷಯಾಮೀಹ ದುರ್ಬಲಾ ॥"

ಲೋಕರೂಢಿಯಿಂದ ತನಗೆ ರಾಕ್ಷಸಬಾಧೆಯು ಏತರಿಂದ ಎಂಬುದನ್ನು ಸೀತೆಯು ಆಂಜನೇಯನಿಗೆ ತಿಳಿಸುತ್ತಾಳೆ - ಮಯಾ - ಪ್ರಾರಬ್ಧಕರ್ಮಾನುಗುಣವಾಗಿ ಅನುಭವಿಸಬೇಕಾದ ನನ್ನಿಂದ, ದಶಾಯೋಗಾತ್ - ತದನುಗುಣ ಪಾಪಗ್ರಹಗಳ ದಶಾಯೋಗದಿಂದ, ಏತತ್-ಈ ರಾಕ್ಷಸಿಯರಿಂದ ಬಾಧೆಯು, ಪ್ರಾಪ್ತವ್ಯಂತು - ಅನುಭವಿಸತಕ್ಕದ್ದು, ಇತಿನಿಶ್ಚಿತಂ - ಎಂಬುದಾಗಿ ಸಿದ್ಧಾಂತ ಮಾಡಿರುತ್ತೇನೆ. ಆದುದರಿಂದ ಅಂತಹ ಪ್ರಾರಬ್ಧವಶದಿಂದುಂಟಾದ ಅಹಂ –ನಾನು, ಇಹ - ಈಗ ದುರ್ಬಲಾ-ಬಲಹೀನಳಾದುದರಿಂದ, ರಾವಣಸ್ಯ ದಾಸೀನಾಂ-ದುಷ್ಟನಾದ ರಾವಣನ ದಾಸಿಯರನ್ನು, ಮರ್ಷಯಾಮಿ-ಸಹಿಸಿಕೊಂಡಿರುವೆನು. ದುಷ್ಟನಾಗಿ ವಧ್ಯನು ರಾವಣನು; ಇವರು ಅವನ ಆಜ್ಞಾನುಸಾರ ನಡೆಯುವ ದಾಸಿಗಳು, ಆದುದರಿಂದಲೇ ಕೋಪಿಸತಕ್ಕದ್ದು ರಾವಣನ ವಿಷಯದಲ್ಲಿ; ಆತನನ್ನು ಕುರಿತು ಕೋಪಿಸಿದ್ದೂ ಆಯಿತು, ಆತನ ವಧೆಯೂ ಆಯಿತು. ಆದುದರಿಂದ ಈ ದಾಸಿಗಳ ವಿಷಯದಲ್ಲಾದರೋ ನಾನು ಕ್ಷಮಾಗುಣವನ್ನು ಪ್ರದರ್ಶಿಸುವದು ನ್ಯಾಯವು ಎಂದು ಮರ್ಷಯಾಮೀಹ ದುರ್ಬಲಾ ಎಂದು ಹೇಳಿಕೊಂಡಳು. ತನ್ನ ಕ್ಷಮಾಗುಣವು ತನ್ನನ್ನು ಇಹ-ಶರಣಾಗತಿಯ ಮೂಲಕ ಆಶ್ರಯಿಸಿದವರ ಇಂತಹ ಸಂದರ್ಭದಲ್ಲಿ ಅವರ ಅಪರಾಧಗಳನ್ನು ಕ್ಷಮಿಸಿಬಿಡುವಹಾಗೆ ಮಾಡುತ್ತದೆಂಬ ಭಾವವು ದ್ಯೋತಿತವು. ಇಲ್ಲಿ ದುರ್ಬಲಾ ಎಂಬುದಕ್ಕೆ ಅಸಮರ್ಥಳೆಂದು ಇಷ್ಟು ಮಾತ್ರ ಅರ್ಥಮಾಡುವದು ಮಂದವು. ತನ್ನ ಪ್ರೇರಣೆಯಿಂದಲೇ ರಾವಣವಧೆಯು ಆಗಿರುವಾಗ ದುರ್ಬಲಾ ಎಂದು ಹೇಳಿಕೊಂಡಿರುವದು ಹೇಗೆ? "ನತ್ವಾಂ ಕುರ್ಮಿ ದಶಗ್ರೀವ ಭಸ್ಮ ಭಸ್ಮಾರ್ಹ ತೇಜಸಾ" ಎಂದು ಹೇಳಿಕೊಂಡವಳು ಹೇಗೆ ದುರ್ಬಲಳು ? ಅವರುಗಳು ಸಾಕ್ಷಾತ್ ಪಾಪಿಷ್ಠರಲ್ಲದೆ ಶರಣಾಗತರಾದುದರಿಂದ ಅವರುಗಳ ಬಾಧೆಯನ್ನು ಆಕೆಯ ಕ್ಷಮಾಗುಣವು ಸಹಿಸುವಹಾಗೆ ಮಾಡಿ ದುರ್ಬಲಳನ್ನಾಗಿ ಮಾಡಿತು ಎಂಬುದು ಅಭಿಪ್ರಾಯವು.

ಹೀಗೆ ಮೂರು ಶ್ಲೋಕಗಳಿಂದ ಅರ್ಹಸ್ವಭಾವವು ವ್ಯಕ್ತವು. ಅವಳು ಅನುಗ್ರಹಮಯಳು, ಕರುಣಾನಿಧಿಯು, ವಾತ್ಸಲ್ಯ ಪರಿಪೂರ್ಣಳು, ವಾಲ್ಲಭ್ಯಾತಿಶಯ ಯುಕ್ತಳು, ಶರಣಾಗತರ ಅಪರಾಧಗಳನ್ನು ಕ್ಷಮಿಸಿಕೊಳ್ಳುವ ಕ್ಷಮಾಯುಕ್ತಳು. ಇಂತಹ ಸ್ವಭಾವಯುಕ್ತಳಾದುದರಿಂದ ಪುರುಷಕಾರ ಭೂತಳಾಗಲು ಅರ್ಹಳೆಂಬ ತಾತ್ಪರ್ಯವು.

**ಇವ್ವರ್ಥಸ್ವಭಾವತ್ತಾಲೇ ಇವಳೈಪತ್ತುವಾರ್ಕ್ಕು ಪುರುಷಕಾರಾಂತರಾಪೇಕ್ಷೈಯುಂಡಾಯ್ ಅನವಸ್ಥೈವಾರಾದು.**

**(೨) ಅನುಷ್ಠಾನಮಾವದು ? (ಮುಮ್) ಪ್ರಹ್ಲಾದವಿಷಯತ್ತಿಲ್ ಪ್ರೇಮಾತಿಶಯತ್ತಾಲೇ ಪ್ರತಿಕೂಲವಿಷಯತ್ತಿಲ್ಪಿರನ್ದ ಶೀತತ್ತೈ ಕನತ್ತೈ**

---

ಆಗಲಿ ಇವಳು ಪುರುಷಕಾರ ಭೂತಳಾದರೆ, ಇವಳ ಅನುಗ್ರಹವನ್ನು ಸಂಪಾದಿಸಲು ಇನ್ನೊಬ್ಬ ಪುರುಷಕಾರ ಚೇತನನು ಆತನ ಅನುಗ್ರಹ ಸಂಪಾದನೆಗೆ ಇನ್ನೊಬ್ಬ ಪುರುಷಕಾರ ಚೇತನನು, ಹೀಗೆ ನಿಲ್ಲಲು ತಳಹದಿ ಇಲ್ಲದ ವಾದವಾದ ಅನವಸ್ಥೆಯು ಉಂಟಾಗುವದಿಲ್ಲವೋ ? ಎಂದರೆ ಇಲ್ಲವೆಂದು ಉಪದೇಶಿಸುತ್ತಾರೆ— ಇಂತಹ ಅಮೋಘ ಸ್ವಭಾವಯುಕ್ತಳನ್ನು ಆಶ್ರಯಿಸುವದಕ್ಕೆ, ಇನ್ನೂ ಯಾರಾದರೂ ಒಬ್ಬರ ಸಹಾಯದ ಅಪೇಕ್ಷೆಯುಂಟೋ ? ಆ ಸಂದರ್ಭದಲ್ಲಿ ಈ ಅನುಗ್ರಹಮುಯಳೇ ಸರ್ವೋತ್ತಮಳಾದುದರಿಂದ ಅನ್ಯಾಪೇಕ್ಷೆ ಬೇಕಿಲ್ಲವಾದುದರಿಂದ ಅನವಸ್ಥೆಗೆ ಕಾರಣವೇ ಇಲ್ಲವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. **ಇವ್ವರ್ಥಸ್ವಭಾವತ್ತಾಲೇ** - ಈ ಲಕ್ಷ್ಮಿಯು ಅನುಗ್ರಹಮುಯತ್ವ, ವಾತ್ಸಲ್ಯಾತಿರೇಕತ್ವ, ವಾಲ್ಲಭ್ಯಾತಿಶಯತ್ವ ಅಜ್ಞಾತನಿಗ್ರಹತ್ವ, ಕ್ಷಮಾಗುಣವಿಶೇಷತ್ವ, ಇವುಗಳಿಂದ ಕೂಡಿದ ಸ್ವಭಾವದಿಂದ, **ಇಪಳೈಪ್ಪತ್ತುವಾರ್ಕ್ಕು** - ಇವಳನ್ನು ಶರಣಾಗತಿಯ ಮೂಲಕ ಆಶ್ರಯಿಸಿದ ಪ್ರಪನ್ನರಿಗೆ, **ಪುರುಷಕಾರಾಪೇಕ್ಷೈಯುಂಡಾಯ್** - ಬೇರೆ ಪುರುಷಕಾರ ಚೇತನನ ಅಪೇಕ್ಷೆಯುಂಟಾಗಿ, **ಅನವಸ್ಥೆಯು, ವಾರಾದು** - ಉಂಟಾಗುವದಿಲ್ಲವು. ಇವುಗಳಿಗಿಂತ ಉತ್ತಮ ಪುರುಷಕಾರ ಚೇತನನು ಇದ್ದರಾಗಲಿ, ಅಥವಾ ಇವಳು ಹೀಗೆ ಅನುಗ್ರಹಿಸುವದಕ್ಕೆ ಇನ್ನೊಬ್ಬ ಚೇತನನ ಸಹಕಾರಿತ್ವವನ್ನು ಅಪೇಕ್ಷಿಸಿದರಾಗಲಿ, ಇವಳಿಗೊಬ್ಬ ಪುರುಷಕಾರ ಚೇತನನು ಬೇಕಾದೀತು. ಹಾಗೆ ಯಾರೂಇಲ್ಲದಿರುವದರಿಂದ ಅನವಸ್ಥೆಗೆ ಕಾರಣವೇ ಇಲ್ಲವು ಎಂಬ ಭಾವವು. ಲಕ್ಷ್ಮಿಯು ಪರಮಾತ್ಮನಿಗೊಬ್ಬನಿಗೆ ಮಾತ್ರ ಶೇಷಭೂತಳು, ವಿಧೇಯಳು; ಆತನಲ್ಲದೆ ಇನ್ನು ಯಾರಿಗೂ ಅಲ್ಲವಾಗಿ ಇತರ ವಿಷಯದಲ್ಲಿ ಸ್ವತಂತ್ರಳಾಗಿ ಸರ್ವಜ್ಞಳು. ದಯಾ ಕ್ಷಮಾ, ವಾತ್ಸಲ್ಯಾದಿ ಗುಣಗಳಿಂದ ಪರಿಪೂರ್ಣಳು. ಹೀಗಿರುವಾಗ ಆಕೆಗೆ ಇನ್ನೊಬ್ಬ ಚೇತನನ ಪುರುಷಕಾರತ್ವದ ಅಪೇಕ್ಷೆಯುಂಟೇ ? ಎಂದಿಗೂ ಇಲ್ಲನೆಂಬ ಭಾವವು.

( ೨ ) **ಅನುಷ್ಠಾನಮಾವುದು** ? - ಅನುಷ್ಠಾನವೆಂಬುದು ಯಾವುದು ? ಹಾಗೆ ಲಕ್ಷ್ಮಿಯನ್ನು ಪುರುಷಕಾರತ್ವೇನ ಆಶ್ರಯಿಸಿದ ಅನುಷ್ಠಾನದ ದೃಷ್ಟಾಂತ ಉಂಟೋ ? ಎಂಬ ಭಾವವು. ಪುರಾಣಪ್ರಸಿದ್ಧವಾದ ಅನುಷ್ಠಾನದ ನಿದರ್ಶನವನ್ನು ಕೊಡುತ್ತಾರೆ - **ಪ್ರಹ್ಲಾದ ವಿಷಯತ್ತಿಲ್** - ಭಕ್ತನಾದ ಪ್ರಹ್ಲಾದನ ವಿಷಯದಲ್ಲಿ, **ಪ್ರೇಮಾತಿಶಯತ್ತಾಲೇ** - ಭಗವಂತನಿಗಿರುವ ಪ್ರೇಮಾತಿಶಯ

**ಕಂಡಞುಗವಂಜಿನ ಬ್ರಹ್ಮಾದಿಗಳ್ ಇವಳೈ ಶರಣಮಾಗಪ್ಪತ್ತಿ ಇವಳೈ ಮುನ್ನಿಟ್ಟೈಯಾಗ ಶ್ರೀ ನೃಸಿಂಹರೂಪನಾನ ಸರ್ವೇಶ್ವರನೈಕ್ಕಿಟ್ಟಿ ಸ್ತೋತ್ರಮ್ ಪಣ್ಣಿನಾರ್‌ಗಳೆನ್ರು ಪುರಾಣಪ್ರಸಿದ್ಧಮ್. (೧) "ಸೀತಾಮುವಾಚಾತಿಶಯಾ ರಾಘವಂಚ ಮಹಾವ್ರತಮ್"**

---

ವಿಂದ, **ಪ್ರತಿಕೂಲವಿಷಯತ್ತಿಲ್**-ಆತನಿಗೆ ಪ್ರತಿಕೂಲನಾದ ಆತನ ತಂದೆಯಾದ ಹಿರಣ್ಯ ಕಶಿಪುವಿನ ವಿಷಯದಲ್ಲಿ, **ಪಿರನ್ದ** - ಉಂಟಾದ, **ಶೀತತ್ತಿನ್ ಘನತ್ತೈ** - ಕೋಪದ ಭಾರವನ್ನು, ಕೋಪಾಧಿಕ್ಯವನ್ನು, **ಕಂಡು ಅಞುಗ ಅಂಜಿನ**- ನೋಡಿ ಸಮೀಪಕ್ಕೆ ಹೋಗಲು ಭೀತರಾದ, ಬ್ರಹ್ಮಾದಿಗಳು, ಆದಿಶಬ್ದದಿಂದ ರುದ್ರೇಂದ್ರಾದಿಗಳು ಹೇಳಲ್ಪಟ್ಟರು; **ಇವಳೈ ಶರಣಮಾಗಪ್ಪತ್ತಿ - ಈ** ಲಕ್ಷ್ಮಿ ಯನ್ನು ರಕ್ಷಕಳನ್ನಾಗಿ ಪುರುಷಕಾರ ರೂಪದಲ್ಲಿ ಆಶ್ರಯಿಸಿ, **ಇವಳೈ** - ವಾತ್ಸಲ್ಯಾ ತಿಶಯವನ್ನು ಹೊಂದಿದ ಈ ಅನುಗ್ರಹಮಯಳನ್ನು **ಶರಣಮಾಗಪ್ಪತ್ತಿ** - **ರಕ್ಷಕ** ಳನ್ನಾಗಿ ಆಶ್ರಯಿಸಿ, **ಇವಳೈ ಮುನ್ನಿಟ್ಟೈಯಾಗ** - ಇವಳು ಸರ್ವೇಶ್ವರನ ಮುಂದೆ ಇರುವ ಹಾಗೆ ಮಾಡಿಕೊಂಡು, ಅವಳನ್ನು ಹಿಂಬಾಲಿಸಿ ಎಂಬ ಭಾವವು, **ಶ್ರೀ ನೃಸಿಂಹರೂಪನಾನ ಸರ್ವೇಶ್ವರನೈ** - ಶ್ರೀ ನೃಸಿಂಹರೂಪವನ್ನು ಧರಿಸಿ ಅವತರಿಸಿದ ಸರ್ವೇಶ್ವರನನ್ನು, **ಕಿಟ್ಟಿ** - ಪಾದದಲ್ಲಿರಿಗಿ ಸ್ತೋತ್ರವನ್ನು. **ಪಣ್ಣಿನಾರ್‌ಗಳ್** - ಮಾಡಿದರು, **ಎನ್ರು** - ಎಂಬುದಾಗಿ, ಪುರಾಣ **ಪ್ರಸಿದ್ಧಮ್**-ಪುರಾಣಾದಿ ಗಳಲ್ಲಿ ಪ್ರಸಿದ್ಧವು. ಎಲ್ಲಿ ಎಂಬುದಕ್ಕೆ ಸಾರಪ್ರಕಾಶಿಕೆಯವರು "**ಜ್ವಾಜ್ವಲ್ಯಮಾನಂ ತಂದೃಷ್ಟ್ವಾ ನರಸಿಂಹಂ ಸುರೋತ್ತಮಾಃ। ಪುರಸ್ಕೃತ್ಯ ಶ್ರಿಯಂ ಭೇಜುಶ್ಶರಣಂ ಶಾನ್ತಿಕಾಂಕ್ಷಿಣಃ**" ಎಂಬ ಶ್ಲೋಕವನ್ನು ಉದಾಹರಿಸಿರುತ್ತಾರೆ. ದೇವಶ್ರೇಷ್ಠರು ಕೋಪೋದ್ರೇಕದಿಂದ ತಪಿಸುತ್ತಿರುವ ನರಸಿಂಹಾವತಾರಿಯಾದ ಆತನನ್ನು ಕಂಡು, ಲಕ್ಷ್ಮಿಯನ್ನು ಮುಂದಿಟ್ಟುಕೊಂಡು ಶಾನ್ತಿಯನ್ನು ಅಪೇಕ್ಷಿಸು ವವರಾಗಿ ಆತನ ಶರಣವನ್ನು ಹೊಂದಿದರೆಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ ರಾಮಾಯಣದಲ್ಲೂ ಅನುಷ್ಠಾನಕ್ಕೆ ದೃಷ್ಟಾಂತವನ್ನು ಲಕ್ಷ್ಮಣವೃತ್ತಿಯಿಂದ ಉದಾಹರಿಸುತ್ತಾರೆ (೧) ಶ್ರೀ ರಾಮನು ಸೀತೆಯನ್ನು ಕರದುಕೊಂಡು ಹೋಗಲು ಬಹು ಕಷ್ಟದಿಂದ ಒಪ್ಪಿದುದರಿಂದ,ತನ್ನನ್ನು ಕರೆದುಕೊಂಡು ಹೋಗಲು ಸ್ವಲ್ಪದಲ್ಲಿ ಒಪ್ಪುವನೇ ಎಂಬ ಶೋಕಾವಿಷ್ಟನಾಗಿ ಅದಿವ್ಯ ದಂಪತಿಗಳಿಗೆ ವನದಲ್ಲಿ ಮಾಡುವ ಕೈಂಕರ್ಯ ಸಾಮ್ರಾಜ್ಯ ಪ್ರಾಪ್ತಿಗಾಗಿ ಲಕ್ಷ್ಮಿಯನ್ನು ಮುಂದಿಟ್ಟು ಶ್ರೀರಾಮಶರಣಾ ಗತಿಯನ್ನು ಮಾಡುವ ಸಂದರ್ಭವು-**ಸಭ್ರಾತುಶ್ಚರಣೌ ಗಾಢಂ ನಿಪೀಡ್ಯರಘುನಂದನಃ। ಸೀತಾಮುವಾಚಾತಿಶಯಾ ರಾಘವಂಚ** ಮಹಾವ್ರತಮ್" "**ಅತಿ ಯಶಾಃ**" ಭಗವತ್ಕೈಂಕರ್ಯಕ್ಕಿಂತ ಹೆಚ್ಚಾದ ಪುರುಷಾರ್ಥವೇ ಇಲ್ಲವು, "**ನದೇವ**

---

(೧) ರಾ. ಅಯೋಧ್ಯಾ ೩೧-೨

(೨) "ಸೀತಾಸಮಕ್ಷಂ ಕಾಕುತ್ಸ್ಥಮ್" ಇತ್ಯಾದಿಗಳಿಲುಮ್ ಕಂಡು ಕೊಳ್ವದು.

---

ಲೋಕಾಕ್ರಮಣಂ ನಾಮರತ್ವ ಮಹಂವೃಣೇ । ಐಶ್ವರ್ಯಂ ವಾಪಿ ಲೋಕಾನಾಂ ಕಾಮಯೇನ ತ್ವಯಾವಿನಾ" ಎಂದು ಹೇಳಿ ಕೈಙ್ಕರ್ಯಮಾಹಾತ್ಮ್ಯೆಯನ್ನು ಪ್ರಕಟಿಸಿದ ಮಹಾ ಕೀರ್ತಿಯುಳ್ಳ, ಸಃ ರಘುನಂದನಃ - ಆ ಲಕ್ಷ್ಮಣನು, ಭ್ರಾತುಶ್ಚರಣೌ - ಅಣ್ಣನಾದ ಶ್ರೀರಾಮನ ಕಾಲುಗಳನ್ನು, ಗಾಢಂ ನಿಪೀಡ್ಯ ಘಟ್ಟಿಯಾಗಿ ಹಿಡಿದವನಾಗಿ ಎಂದರೆ ವನದಲ್ಲಿ ಕೈಂಕರ್ಯಪ್ರಾಪ್ತಿಗಾಗಿ ಶರಣಾಗತಿಯನ್ನು ಅನುಷ್ಠಿಸಿ, ಆ ಕಾಲದಲ್ಲಿ ಆತನು ಪ್ರಸನ್ನನಾಗುವದಕ್ಕಾಗಿ, ಸೀತಾಂ - ಸೀತೆಯನ್ನೂ, "ಮಹಾವ್ರತಮ್" ಶರಣಾಗತನನ್ನು ಎಂದಿಗೂ ಕೈಬಿಡುವದಿಲ್ಲವು ಎಂಬ ಮಹಾ ವ್ರತವನ್ನು ಧರಿಸಿದ, ರಾಘವಂಚ – ರಾಮನನ್ನೂ ಸಹ, ಉವಾಚ–ಪ್ರಾರ್ಥಿಸಿ ಹೇಳಿದನು. ಚ ಶಬ್ದ ಸ್ವಾರಸ್ಯದಿಂದ ಮೊದಲು ಪುರುಷಕಾರರೂಪದಲ್ಲಿ ಸೀತೆಯನ್ನೂ ಅನಂತರ ರಾಮನನ್ನೂ ಎಂಬರ್ಥವು ದ್ಯೋತಿತವು. ರಾಮನ ಚರಣವನ್ನು ಹಿಡಿದುಕ್ಕೊಂಡು ಮೊದಲು ಸೀತೆಯನ್ನು ಕುರಿತು ಮಾತಾಡಿದನು ಎಂಬುವದರಿಂದ ಸೀತೆಯ ಪಾದವನ್ನು ಹಿಡಿದನೆಂಬ ಭಾವವೂ ಸಹ ತೋರಿಬರುತ್ತದೆ. ಸೀತೆಯು ತನ್ನ ಪತಿಯನ್ನು ವಾಲ್ಲಭ್ಯಾತಿಶಯದಿಂದ ವನಗಮನ ವಿಷಯದಲ್ಲಿ ಒಡಂಬಡಿಸಿದುದರಿಂದ, ಆಕೆಯ ಪುರುಷಕಾರತ್ವದಲ್ಲಿ ಪೂರ್ಣನಂಬಿಕೆಯುಳ್ಳವನಾಗಿ, ಮೊದಲು ಸೀತಾಮುವಾಚಾತಿಯಶಾಃ ಎಂಬ ಪ್ರಯೋಗವಿರುತ್ತದೆ. ಆದರೆ ಶ್ರೀರಾಮನೇ ಮಹಾವ್ರತನು, ಶರಣಾಗತನ ಕೋರಿಕೆಯನ್ನು ಸಲ್ಲಿಸುವೆನೆಂಬ ದೀಕ್ಷಾಬದ್ಧನು, "ನತ್ಯಜೇಯಂ ಕಥಂಚನ" ಎಂಬ ದೃಢಸಙ್ಕಲ್ಪವುಳ್ಳವನು. ಆದರೂ ವನವಾಸದ ಕಷ್ಟಗಳಿಂದಲೂ ಕೌಸಲ್ಯ ಸುಮಿತ್ರಾದಿಗಳ ಯೋಗಕ್ಷೇಮಾರ್ಥವಾಗಿಯೂ ಎಲ್ಲಿ ಶ್ರೀರಾಮನು ಒಪ್ಪುವದಿಲ್ಲವೋ ಎಂಬ ಭಯದಿಂದ ಮೊದಲು ಪುರುಷಕಾರತ್ವೇನ "ಸೀತಾಮುವಾಚಾತಿಯಶಾಃ" ಎಂಬ ಪ್ರಯೋಗವು. ಈ ಶ್ಲೋಕದಲ್ಲಿ ಪೂರ್ಣ ಶರಣಾಗತಿಗೆ ಬೇಕಾದ ಅಂಗಗಳೆಲ್ಲಾ ಇವೆ ಎಂದು ಶ್ರೀ ಗೋವಿಂದರಾಜೀಯರು ತೋರಿಸಿರುತ್ತಾರೆ. ಗಾಢಂ - ಎಂಬುದರಿಂದ ಮಹಾ ವಿಶ್ವಾಸವೂ, ಭ್ರಾತುಃ ಚರಣೌ ಎಂಬುದರಿಂದ ಉಪಾಯಾನ್ತರವಿಲ್ಲದಿರುವ ಕಾರ್ಪಣ್ಯವೂ, ಅತಿಯಶಾಃ - ಎಂಬುದರಿಂದ ಆನುಕೂಲ್ಯಸಙ್ಕಲ್ಪ ಪ್ರಾತಿಕೂಲ್ಯ ವರ್ಜನಗಳೂ, ಉವಾಚ – ಎಂಬುದರಿಂದ ಕೈಙ್ಕರ್ಯಪ್ರಾರ್ಥನಾರೂಪ ಗೋಪ್ತೃತ್ವವರಣವೂ "ಕುರುಷ್ವ ಮಾಮನುಚರಮ್" ಎಂಬ ಪ್ರಾರ್ಥನೆಯೂ, ಹೇಳಲ್ಪಟ್ಟವು. ಸಭ್ರಾತುಶ್ಚರಣೌಗಾಢಂ ನಿಪೀಡ್ಯ ರಘುನಂದನಃ ಸೀತಾಮುವಾಚ ಎಂಬಲ್ಲಿ ಸೀತೆಯ ಚರಣವನ್ನೂ

---

(೨) ರಾ. ಅರ. ೧೫-೬

ಭ್ರಾತುವಾದ ರಾಮನ ಚರಣವನ್ನೂ ಆಶ್ರಯಿಸಿ ಎಂದು ಹೇಳಿರುವದರಿಂದ ದ್ವಯ ಪೂರ್ವಖಂಡಾರ್ಥವೂ, ಸೀತಾಮುವಾಚಾತಿಯಶಾಃ ರಾಘವಂಚ ಮಹಾವ್ರತಮ್ ಎಂಬುದರಿಂದ ಉತ್ತರಖಂಡಾರ್ಥವೂ ಉಪಪಾದಿತನ.

(೨) "ಏವಮುಕ್ತಸ್ತು ರಾಮೇಣ ಲಕ್ಷ್ಮಣ ಸ್ಸಂಯುತಾಂಜಲಿಃ ।
ಸೀತಾ ಸಮಕ್ಷಂ ಕಾಕುತ್ಸ್ಥ ಮಿದಂ ವಚನಮಬ್ರವೀತ್ ।
ಪರವಾನಸ್ಮಿ ಕಾಕುತ್ಸ್ಥ ತ್ವಯಿವರ್ಷ ಶತಂ ಸ್ಥಿತೇ" ॥

ಜಲಾಶಯಕ್ಕೆ ಹತ್ತಿರವಾಗಿ, ಸಮಿತ್ತು ಪುಷ್ಪ ಫಲಾದಿಗಳಿಗೂ ಅನುಕೂಲವಾಗಿ, ನಿನಗೆ ಸೌಕರ್ಯವಿರುವ ರಮಣೀಯ ಸ್ಥಳದಲ್ಲಿ ಒಂದು ಆಶ್ರಮವನ್ನು ನಿರ್ಮಾಣಮಾಡು ಎಂಬ ಸ್ವಾತಂತ್ರ್ಯವನ್ನು ಕೊಟ್ಟು ಶ್ರೀರಾಮನು ಲಕ್ಷ್ಮಣನನ್ನು ಕುರಿತು ಹೇಳಿದುದಕ್ಕೆ, ಇದು ಲಕ್ಷ್ಮಣನ ಪ್ರತ್ಯುತ್ತರವು ತಾನು ಯಾವಾಗಲೂ ಪರತಂತ್ರನಾದುದರಿಂದ ಅಷ್ಟು ಸ್ವಾತಂತ್ರ್ಯಕ್ಕೆ ಅರ್ಹನಲ್ಲವಾದುದರಿಂದ ನೀನೇ ಇದು ನಮಗೆ ಸಮ್ಮತವಾಗಿ ರಮಣೀಯವಾದ ಪ್ರದೇಶವಾದುದರಿಂದ ಇಲ್ಲಿ ಆಶ್ರಮವನ್ನು ನಿರ್ಮಿಸು ಎಂದು ಆಜ್ಞಾಪಿಸು, ಎಂದು ಪ್ರಾರ್ಥಿಸುವ ಸಂದರ್ಭವು. ಇಲ್ಲಿಯೂ ಕೈಂಕರ್ಯಪ್ರಾಪ್ತಿಗಾಗಿ ಸೀತೆಯನ್ನು ಪುರುಷಕಾರತ್ವೇನ ಲಕ್ಷ್ಮಣನು ಆಶ್ರಯಿಸಿರುತ್ತಾನೆ - ಏವಂ - ಈಪರಿಯಾಗಿ ಎಂದರೆ ಸ್ವಾತಂತ್ರ್ಯವನ್ನು ಕೊಟ್ಟು, ರಾಮೇಣ - ಶ್ರೀ ರಾಮನಿಂದ, ಉಕ್ತಃ - ಆಶ್ರಮವನ್ನು ನಿರ್ಮಿಸು ಎಂದು ಹೇಳಲ್ಪಟ್ಟ, ಲಕ್ಷ್ಮಣನು, ಸಂಯುತಾಂ ಜಲಿಃ - ಬದ್ಧಾಂಜಲಿಪುಟನಾಗಿ, ಸೀತಾ ಸಮಕ್ಷಂ - ಸೀತೆಯ ಸಮಕ್ಷಮದಲ್ಲಿ ಎಂದರೆ ಆಕೆಯನ್ನು ಮುಂದಿಟ್ಟುಕೊಂಡು ಹೇಕಾಕುತ್ಸ್ಥ - ಓಕಕುತ್ಸವಂಶೋದ್ಭೂತನಾದ ರಾಮನೇ, ತ್ವಯಿ ವರ್ಷ ಶತಂ ಸ್ಥಿತೇ - ನೀನು ಹೀಗೆಯೇ ನೂರು ವರ್ಷಗಳಿದ್ದರೂ ಆ ಎಲ್ಲಾ ಕಾಲಗಳಲ್ಲಿಯೂ ಎಂದರೆ ಯಾವಾಗಲೂ, ಪರವಾನಸ್ಮಿ - ನಿನಗೆ ಪರತಂತ್ರನಾಗಿಯೇ ಇರುವೆನು. ಆದುದರಿಂದ ಸ್ವಯಂತು ರುಚಿರೇ ದೇಶೇ ಕ್ರಿಯತಾಮಿತಿ ಮಾಂ ವದ-ತಾವೇ ನಮಗೆ ರಮಣೀಯವಾದ ಪ್ರದೇಶವನ್ನು ತೋರಿಸಿ ಅಲ್ಲಿ ಆಶ್ರಮನಿರ್ಮಾಣ ಮಾಡು ಎಂದು ಆಜ್ಞಾಪಿಸಿರಿ. ತಾತ್ಪರ್ಯವೇನೆಂದರೆ, ನಾನು ಪರತಂತ್ರನಾದುದರಿಂದ ನನ್ನ ಅನುಕೂಲವು ಮುಖ್ಯವಲ್ಲವು, ತಮ್ಮ ಅನುಕೂಲವೇ ನನ್ನ ಅನುಕೂಲವಾದುದರಿಂದ, ತಮ್ಮಿಬ್ಬರಿಗೂ ಅನುಕೂಲವಾಗಿ ವಿಹಾರಕ್ಕೆ ರಮಣೀಯ ಪ್ರದೇಶವನ್ನು ತೋರಿಸಿ, ಅಲ್ಲಿ ನಿರ್ಮಿಸು ಎಂದು ಆಜ್ಞಾಪಿಸಿರಿ ಎಂಬ ಭಾವವು. ಇಂತಹ ಕೈಂಕರ್ಯಪ್ರಾಪ್ತಿಗೂ "ಸೀತಾಸಮಕ್ಷಂ" ಪ್ರಾರ್ಥಿಸಿದುದರಿಂದ, ಸೀತೆಯನ್ನು ಪುರುಷಕಾರತ್ವೇನ ವರಿಸಿದ ಅನುಷ್ಠಾನಕ್ಕೆ ನಿದರ್ಶನವೆಂಬ ಭಾವವು. ಹಿಂದೆ ಸಂಪೂರ್ಣ ಪರತಂತ್ರನೆಂಬ ಜ್ಞಾನವಿಲ್ಲದೆ ವನಕ್ಕೆ ಬಾರದೆ ಕೌಸಲ್ಯಾಸುಮಿತ್ರೆಗಳ ಯೋಗಕ್ಷೇಮವನ್ನು ನೋಡಿಕೋ ಎಂದು ಆಜ್ಞಾಪಿಸಿದಾಗ ಅಜ್ಞನಾಗಿ, ಪರತಂತ್ರ ಮಹಿಮೆಯನ್ನು ತಿಳಿಯದವನಾಗಿ, ನಿನ್ನಲ್ಲಿ ಅಪರಾಧವನ್ನು ಮಾಡಿದೆನು. ಅದು ಈಗ

**(೩) ಲೋಕದೃಷ್ಟಿಯಾವುದು ?**—ಅಂತಃಪುರಪರಿಜನತ್ತೈ ಅಪರಾಧ ಭೂಯಸ್ತ್ವೈಯುಂಡಾನಾಲುಮ್ ರಾಜಾಕ್ಕಳ್ ಅಲ್ಪಙ್ಗಳಾನ ಪ್ರಸಾದನಙ್ಗಳಾಲೇ ಕ್ಷಮಿಕ್ಕಕಾಣ್ಗೈ. ಇವ್ವರ್ಥಮ್ (೧) "ಮಾತರ್ಲಕ್ಷ್ಮಿ ಯಥೈವ ಮೈಥಿಲ ಜನಃ" ಎಙ್ಗಿರಶ್ಲೋಕತ್ತಿಲುಮ್ ವಿವಕ್ಷಿತಮ್.

---

ನನಗೆ ಜ್ಞಾಪಕಕ್ಕೆ ಬಂದಿರುತ್ತದೆ; ಆ ಅಪರಾಧದ ಕ್ಷಮಾಪಣೆಗಾಗಿ ಶರಣಾಗತಿಯನ್ನು ಮಾಡುತ್ತಾನೆ. ಇದು "ಸಂಯತಾಂಜಲಿಃ" ಎಂಬ ಪ್ರಯೋಗದಿಂದ ವ್ಯಕ್ತವು. "ಅಂಜಲಿಃ ಪರಮಾ ಮುದ್ರಾ ಕ್ಷಿಪ್ರಂ ದೇವಪ್ರಸಾದಿನೀ" ಎಂದಿರುವದರಿಂದ ಬದ್ಧಾಂಜಲಿಪುಟನಾಗಿರುವದು ಶರಣಾಗತ್ಯನುಷ್ಠಾನವನ್ನು ಸೂಚಿಸುತ್ತದೆ. ಅದನ್ನು ಸೀತಾಸಮಕ್ಷವಾಗಿಯೇ ಲಕ್ಷ್ಮಣನು ಅನುಷ್ಠಿಸಿರುತ್ತಾನೆ. ನಾನು ಹಿಂದೆ ಸ್ವತಂತ್ರನಾಗಿ ನಿನ್ನ ಆಜ್ಞೆಯನ್ನು ಮೀರಿದೆನು. ಈಗ ನಿನ್ನ ಸಹಚರ್ಯದಿಂದ ಜ್ಞಾನೋದಯವಾಗಿರುತ್ತದೆ; ಪರವಾನಸ್ಮಿ ಎಂದು ಹೇಳಿಕೊಳ್ಳುತ್ತಾರೆ. ಇದರಿಂದ ಅಪರಾಧದ ಕ್ಷಮಾಪಣೆಯಲ್ಲಿಯೂ ಸೀತಾಸಮಕ್ಷಂ ಎಂದು ಹೇಳಿರುವದರಿಂದ ದ್ವಯದ ಪೂರ್ವಖಂಡದ ಶ್ರೀಮಚ್ಛಬ್ದಾರ್ಥವು ಉಪಪಾದಿತವು. ರಮಣೀಯ ಪ್ರದೇಶದಲ್ಲಿ ಕೈಂಕರ್ಯ ಪ್ರಾಪ್ತಿಗೂ ಸೀತಾಸಮಕ್ಷಂ ಎಂಬುದು ಅನ್ವಯಿಸುವದರಿಂದ ದ್ವಯೋತ್ತರ ಖಂಡದ ಅರ್ಥವೂ ಉಪಪಾದಿತವು.

೩ **ಲೋಕದೃಷ್ಟಿಯಾವುದು ?** - ಲೋಕದೃಷ್ಟಾಂತದ ನ್ಯಾಯವು ಎಂಬುದು ಯಾವುದು ? ಎಂದರೆ **ಅಂತಃಪುರಪರಿಜನತ್ತೈ** – ರಾಜನ ಪಟ್ಟಮಹಿಷಿಗೆ ಸೇರಿದ ಪರಿಜನವನ್ನು, **ಅಪರಾಧಭೂಯಸ್ತ್ವೈಯುಂಡಾನಾಲುಮ್**- ಹೆಚ್ಚು ಶಿಕ್ಷೆಗೆ ಅರ್ಹವಾದ ಅಪರಾಧದ ಆಧಿಕ್ಯವು ಉಂಟಾದರೂ, **ರಾಜಾಕ್ಕಳ್**- ಈ ಸಾಪರಾಧಿಯು ಪಟ್ಟಮಹಿಷಿಯನ್ನು ಪುರುಷಕಾರತ್ವೇನ ಆಶ್ರಯಿಸಿದುದರಿಂದ, ಕ್ಷಮಾಪಣೆಗಾಗಿ ತಮ್ಮ ಪತ್ನಿಯರಿಂದ ಪ್ರಾರ್ಥಿಸಲ್ಪಟ್ಟ ರಾಜರುಗಳು, **ಅಲ್ಪಙ್ಗಳಾನ ಪ್ರಸಾದನಙ್ಗಳಾಲೇ** - ಅಲ್ಪಗಳಾದ ಪ್ರಣಾಮಾದಿ ವೃತ್ತಿಗಳಿಂದ, **ಕ್ಷಮಿಕ್ಕ ಕಾಣ್ಗೈ** - ಕ್ಷಮಿಸಿರುವ ದೃಷ್ಟಾಂತವನ್ನು ಕಂಡಿರೋಣವು. ಹೆಂಡತಿಯ ಪ್ರಾರ್ಥನೆಯ ಪ್ರಕಾರ ರಾಜರು ಅಪರಾಧಗಳನ್ನು ಮನ್ನಿಸಿರುವದರ ಅನೇಕ ದೃಷ್ಟಾಂತವು ಲೋಕದಲ್ಲಿ ಉಂಟು ಎಂಬ ಭಾವವು. ಹಾಗೆಯೇ ಇಲ್ಲಿಯೂ ಲಕ್ಷ್ಮಿಯು ಪುರುಷಕಾರತ್ವವೂ ಫಲಿಸುತ್ತದೆಂಬ ತಾತ್ಪರ್ಯವು; ಹೀಗೆ ನಡೆದಿರುವದಕ್ಕೆ ಅನೇಕ ನಿದರ್ಶನಗಳುಂಟು. ರುಕ್ಮಿಣಿಯ ಪ್ರಾರ್ಥನೆಯ ಪ್ರಕಾರ ರುಕ್ಮನು ಪ್ರಥಮತಃ ವಧಿಲ್ಪಡಲಿಲ್ಲವು. ಸೀತಾ ಮನೋಗತವನ್ನರಿತು ರಾಮನು ಕಾಕನನ್ನು ರಕ್ಷಿಸಿದನು. **ಇವ್ವರ್ಥಂ** - ಈ ಅಭಿಪ್ರಾಯವು **ಮಾತರ್ಲಕ್ಷ್ಮಿ ಎಙ್ಗಿಂಶ್ಲೋಕತ್ತಿಲುಮ್** - ಎಂಬ ಶ್ಲೋಕದಲ್ಲೂ, **ವಿವಕ್ಷಿತಂ** - ಹೇಳಲ್ಪಟ್ಟಿರುತ್ತದೆ. ಆ ಶ್ಲೋಕವು ಯಾವುದೆಂದರೆ:—

---

(೧) ಶ್ರೀಗುಣ ೫೧

(೪) ಗುರೂಕ್ತಿಯಾವುದು? – ನಮ್ಮಾಳ್ವಾರ್ ಮುದಲಾನ ಆಚಾರ್ಯರುಗಳುಡೈಯ "ಅಗಿಲಕಿಲ್ಲೇನ್" ಮುದಲಾನ ಪಾಶುರಙ್ಗಳ್.

---

ಮಾತರ್ಲಕ್ಷ್ಮಿ ಯಥೈವ ಮೈಥಿಲಜನಸ್ತೇನಾಧ್ವನಾ ತೇ ವಯಮ್ ।
ತ್ವದ್ದಾಸ್ಯೈಕರಸಾಭಿಮಾನ ಸುಭಗೈರ್ಭಾವೈ ರಿಹಾಮುತ್ರಚ ।
ಜಾಮಾತಾ ದಯಿತ ಸ್ತವೇತಿ ಭವತೀ ಸಂಬ ಧದೃಷ್ಟ್ಯಾ ಹರಿಮ್ ।
ಪಶ್ಯೇಮ ಪ್ರತಿಯಾಮ ಯಾಮಚ ಪರೀಚಾರಾನ್ ಪ್ರಹೃಷ್ಯೇಮಚ ॥

**ಅರ್ಥವು**—ಹೇಮಾತಃ **ಲಕ್ಷ್ಮಿ** - ಓತಾಯಿಯಾದ ಲಕ್ಷ್ಮಿಯೇ, **ಮೈಥಿಲ ಜನಃ ಯಥಾ** - ಮಿಥಿಲ ದೇಶದ ಜನವು ನಮ್ಮ ಮೈಥಿಲಿಯ ಗಂಡನೆಂದು ರಾಮನನ್ನು ಹೇಗೆ ಹೇಳುವರೋ ಹಾಗೆ ಎಂಬ ಭಾವವು, **ತೇನಾಧ್ವನಾ** - ಅದೇ ಮಾರ್ಗದಿಂದಲೇ ಎಂದರೆ ಅದೇ ರೀತಿಯಲ್ಲೇ, **ವಯಂ** - ನಾವೂ ಕೂಡ **ತ್ವದ್ದಾಸ್ಯೈಕರಸಾಭಿಮಾನಸುಭಗೈಃ** - ನಿನ್ನ ದಾಸರಾಗಿ ನಿನಗೆ ಕೈಂಕರ್ಯ ಮಾಡುವ ಆನಂದದಲ್ಲಿ ಅಭಿಮಾನದಿಂದ ಮನೋಹರವಾದ, **ಭಾವೈಃ**-ಅಭಿಪ್ರಾಯಗಳಿಂದ, **ಇಹ**-ಈಲೋಕದಲ್ಲೂ, **ಅಮುತ್ರಚ**-ದಿವ್ಯವೈಕುಂಠದಲ್ಲೂ ಸಹ, **ಜಾಮಾತಾ** ಅಳಿಯನು, ನಮ್ಮ ಆಂಡಾಳ್ ತಂದೆ ವಿಷ್ಣು ಚಿತ್ತರ ಅಳಿಯನು, **ದಯಿತಃ** – ಪ್ರಾಣಪ್ರಿಯನು ನಮ್ಮ ಶ್ರೀ ರಙ್ಗನಾಯಕಿಯ ಪ್ರಾಣಪ್ರಿಯನು, **ಇತಿ** - ಎಂಬುದಾಗಿ, **ಭವತೀ ಸಂಬಂಧ ದೃಷ್ಟ್ಯಾ** - ನಿನಗಿರುವ ಸಂಬಂಧ ದೃಷ್ಟಿಯಿಂದ, **ಹರಿಮ್** – ನಾರಾಯಣನನ್ನು, ಶ್ರೀಮನ್ನಾರಯಣನನ್ನೂ **ಪಶ್ಯೇಮ** - ನೋಡೋಣ, **ಪ್ರತಿಯಾಮ** - ಹೊಂದೋಣ, **ಪರೀಚಾರಾನ್**-ಕೈಂಕರ್ಯಗಳನ್ನು, **ಯಾಮ**-ಹೊಂದೋಣ ಎಂದರೆ ಮಾಡೋಣ ಪ್ರಹೃಷ್ಯೇಮ, **ಹಾಗೆ** ಮಾಡಿ ಆನಂದಿಸೋಣ. ಇಲ್ಲಿ "**ಪ್ರತಿಯಾಮಯಾಮ**" ಎಂಬುದಕ್ಕೆ ಬದಲಾಗಿ "**ಪ್ರಣಯಾದಯಮ್**" ಎಂಬ ಪಾಠಾಂತರವನ್ನು ಸಾರಸಙ್ಗ್ರಹ ವ್ಯಾಖ್ಯಾತೃವು ಅವಲಂಬಿಸಿರುತ್ತಾರೆ. ಆಗ **ಪ್ರಣಯಾತ್** - ತುಂಬಾ ವಿಶ್ವಾಸದಿಂದ, **ಪರೀಚಾರಾನ್** - ಕೈಂಕರ್ಯಗಳನ್ನು **ಆಯಾಮ** – ಹೊಂದೋಣವೆಂಬ ಅರ್ಥವಾಗುತ್ತದೆ. ತನ್ನ ಪ್ರಿಯವಲ್ಲಭೆಗೆ ಸಂಬಂಧಪಟ್ಟವನು, ಆಕೆಗೆ ದಾಸಭೂತನು, ಕೈಂಕರ್ಯವನ್ನೆಸಗುವನು ಎಂದು ಹೇಳಿಕೊಳ್ಳುವದರಿಂದ ಪತಿಯಾದ ನಾರಾಯಣನ ಅನುಗ್ರಹಕ್ಕೆ ಪಾತ್ರನಾಗುವನೆಂಬ ಭಾವವು ತೋರಿಬರುವದರಿಂದ ಪುರುಷಕಾರತ್ವ ಭಾವವು ಬೋಧಿತವು. ಲಕ್ಷ್ಮಿಗೆ ದಾಸ ಭೂತರು ಕೈಂಕರ್ಯ ಪರರು ಎಂದು ಲಕ್ಷ್ಮಿಯ ಹೆಸರನ್ನು ಪುರುಷಕಾರ ಭಾವದಿಂದ ಹೇಳಿಕೊಂಡರೆ, ಆಕೆಯ ಪತಿಗೆ ಈತನಲ್ಲಿ ಪೂರ್ಣಾನುಗ್ರಹ ಉಂಟಾಗುತ್ತದೆಂಬ ಭಾವವು ಈ ಶ್ಲೋಕದಲ್ಲಿ ಸೂಚಿತವು.

೪ **ಗುರೂಕ್ತಿ ಯಾವುದು**? – ಪ್ರಾಜ್ಞರ ಹೇಳಿಕೆ ಯಾವುದು? ನಮ್ಮಾಳ್ವಾರ್‌ವರೇ ಮೊದಲಾದ **ಆಚಾರ್ಯರುಗಳುಡೈಯ** - ಆಚಾರ್ಯರುಗಳ, **ಅಗಿಲ**

**(೫) ಇವತ್ತುಕ್ಕು ಮೂಲಮಾನ ಸೂಕ್ತವಿಶೇಷ ರೂಪೈಗಳಾನ ಶ್ರುತಿಗಳೈಯುಮ್ ಕಣ್ಡುಕೊಳ್ವದು.**

---

**ಗಿಲ್ಲೇನ್** ಎಂಬಿವೇ ಮೊದಲಾದ ಪಾಶುರಗಳು. ಈ ಪಾಶುರಾರ್ಥವು ಹಿಂದೆಯೇ ಉಪಪಾದಿತವು. ನೆಯ ಪುಟವನ್ನು ನೋಡಿ. ಇತರ ಆಳ್ವಾರ್ ಆಚಾರ್ಯರುಗಳ ದಿವ್ಯ ಸೂಕ್ತಿಗಳು ಅನೇಕವಿರುವದರಿಂದ "**ಮುದಲಾನ**" ಎಂಬ ಪ್ರಯೋಗವು.

೫, ಇದನ್ನು ಬೋಧಿಸುವ **ಶ್ರುತಿಗಳಾವನ**? ಎಂದು ಹೇಳಬೇಕಾಗಿತ್ತು, ಹಾಗೆ ಹೇಳದೆ ಸಂಗ್ರಹವಾಗಿ ಹೇಳುತ್ತಾರೇನೆಂದರೆ – **ಇವತ್ತುಕ್ಕು** – ಈ ಮೇಲೆ ಉಪಪಾದಿಸಿದ ನಾಲ್ಕಕ್ಕೂ, ಮೂಲವಾದ **ಸೂಕ್ತವಿಶೇಷ ರೂಪೈಗಳಾನ** - ಶ್ರೀಸೂಕ್ತಿಯಲ್ಲಿನ ವಾಕ್ಯಗಳಾದ, **ಶ್ರುತಿಗಳೈಯುಮ್** - ಶ್ರುತಿಗಳನ್ನು, **ಕಂಡುಕೊಳ್ವದು** - ನೋಡಿ ತಿಳಿದುಕೊಳ್ಳುವುದು. ಎಲ್ಲಿ ಎಂದರೆ "**ಚಂದ್ರಾಂ ಪ್ರಭಾಸಾಂ ಯಶಸಾ ಜ್ವಲನ್ತೀಂ**" (ಶ್ರೀಸೂಕ್ತ ೫) **ಚನ್ದ್ರಾಂ** - ನಿರತಿಶಯಾನಂದ ಸ್ವರೂಪಳಾದ, **ಪ್ರಭಾಸಾಂ** - ವಿಶೇಷವಾಗಿ ಮನೋಹರವಾದ ಕಾಂತಿಯುಳ್ಳ, **ಯಶಸಾ** - ಅಜ್ಞಾತ ನಿಗ್ರಹಳು, ಅನುಗ್ರಹವುಳ್ಳಳು. ಎಂಬ ಖ್ಯಾತಿಯಿಂದ, **ಜ್ವಲನ್ತೀಂ** - ಬೆಳಗುತ್ತಿರುವ, **ಶ್ರಿಯಂ** - ಸರ್ವ ಸಮಾಶ್ರಯಳಾಗಿ ಪ್ರಾಪಕಳೂ ಪ್ರಾಪ್ಯಳೂ ಆದ ಲಕ್ಷ್ಮಿಯನ್ನು "**ನಿಚದೇವೀಂಮಾತರಗ್ಂ ಶ್ರಿಯಂ ವಾಸಯ ಮೇಕುಲೇ**" (ಶ್ರೀಸೂಕ್ತ ೧೨) ಇದು ಚಿಕ್ಲೀಥರೆಂಬ ಅಂತಃಪುರ ದ್ವಾರ ಪಾಲಕರೆಂಬ ವರನ್ನು ಕುರಿತು ಪ್ರಾರ್ಥಿಸುವ ಮನ್ತ್ರವು. **ಮೇ** - ಲಕ್ಷ್ಮಿಯಲ್ಲಿ ಶರಣಾಗತಿಯನ್ನನುಷ್ಠಿಸಿ ಆಕೆಯ ಪರಮಭಕ್ತನಾದ ನನ್ನ, **ಕುಲೇ** - ಗೃಹದಲ್ಲಿ ಅಥವಾ ವಂಶಪಾರಂಪರ್ಯದಲ್ಲೂ, **ದೇವೀಂ**_ದೇದೀಪ್ಯಳಾಗಿ ಲೀಲಾ ವಿಭೂತಿಯಲ್ಲಿ ಕ್ರೀಡಿಸುವಳಾದ, ಆದುದರಿಂದ **ಮಾತರಂ ಶ್ರಿಯಂ** - ಮಾತೆಯಾದ ಲಕ್ಷ್ಮಿಯನ್ನು, **ನಿವಾಸಯ** - ಸ್ಥಿರವಾಗಿ ನಿಲ್ಲುವ ಹಾಗೆ ಮಾಡು. ಇದರಿಂದ ಉಪಾಯಕೋಟಿಯಲ್ಲೂ ಪುರುಷಕಾರತ್ವದಲ್ಲೂ ಅನ್ವಯವು ವ್ಯಕ್ತವು. "**ವಿಶ್ವಪ್ರಿಯೇ ವಿಷ್ಣುಮನೋನುಕೂಲೇ**" "**ಶ್ರದ್ಧಾ ಪ್ರತಿಷ್ಠಾಲೋಕಸ್ಯ ದೇವೀ**" (ಶ್ರದ್ಧಾಸೂಕ್ತ) **ಚೇತನಾ** ಚೇತನಾತ್ಮಕನಾದ ಸರ್ವಪ್ರಪಂಚದ ನಾಯಕಳಾದ, **ದೇವೀ**-ಜಗದುತ್ಪತ್ತಿ ಸ್ಥಿತಿ ಲಯಾದಿಗಳಲ್ಲಿ ಅನ್ವಯವುಳ್ಳವಳಾಗಿ ಕ್ರೀಡಿಸುವಳಾದ, **ಶ್ರದ್ಧಾ** - ಲಕ್ಷ್ಮಿಯು, **ಪ್ರತಿಷ್ಠಾ**–ಆಧಾರಭೂತಳು; ಅಥವಾ ಧಾರಣ ಪೋಷಣ ಭೋಗ್ಯಗಳನ್ನು ಕೊಟ್ಟು ಸತ್ತೆಯನ್ನುಂಟುಮಾಡಿ ಸ್ಥಾಪಿಸುವಳು ಎಂಬರ್ಥವು.

ಮುಂದೆ ಶ್ರದ್ಧಾಸೂಕ್ತದಲ್ಲಿ "**ಸಾ ನೋ ಜುಷಾಣೋಽಪಯಜ್ಞಮಾಗಾತ್** - **ಸಾ** ಇಂತಹ ಲಕ್ಷ್ಮಿಯು, **ನಃ** - ಪ್ರಪನ್ನರಾದ ನಮ್ಮ, **ಯಜ್ಞಂ** - ಆರಾಧನವನ್ನು **ಜುಷಾಣಾ** - ಪ್ರೀತಳಾಗಿ ಪರಿಗ್ರಹಿಸುವಳಾಗಿ **ಉಪಾಗಾತ್** - ಸಾನ್ನಿಧ್ಯವನ್ನು ಕೊಡಲಿ.

**(೬) ಇನ್ವೈಯುಡಿಯಾಗವನ್ದಸ್ಮೃತಿಗಳಾವನ ? (೧) "ವಾಚಃ ಪರಂ ಪ್ರಾರ್ಥಯಿತಾ ಪ್ರಪದ್ಯೇನ್ನಿಯತಃ ಶ್ರಿಯಮ್" ಇತ್ಯಾದಿಗಳಾನ ಶೌನ ಕಾದಿ ವಾಕ್ಯಙ್ಗಳ್.**

**ಇಪ್ಪಡಿ ಇವಳುಕ್ಕು ಸರ್ವೇಶ್ವರ್ರ ತಿರುವಡಿಗಳಿಲ್ ಘಟಕತ್ವಂ ಬಹು**

---

ಇವೇ ಮೊದಲಾದ ಶ್ರೀಸೂಕ್ತ ಪ್ರಮಾಣಗಳನ್ನು ವ್ಯಾಖ್ಯಾತೃಗಳು ಉದಾಹರಿಸುತ್ತಾರೆ. ಇದರೊಂದಿಗೆ **"ಶ್ರದ್ಧಯಾ ದೇವೋ ದೇವತ್ವಮಶ್ನುತೇ"** ಎಂಬ ಮೊದಲಿನ ವಾಕ್ಯವನ್ನೂ ಸೇರಿಸಬಹುದು.

೬. **ಇನ್ವೈಯುಡಿಯಾಗವನ್ದ** – ಈ ಶ್ರುತಿಪ್ರಮಾಣ ಮೂಲಕ ಉಂಟಾದ, ಎಂದರೆ ಅವುಗಳನ್ನುಪಪಾದಿಸುವ, **ಸ್ಮೃತಿಗಳಾವನ** – ಸ್ಮೃತಿಪ್ರಮಾಣಗಳು ಯಾವುವು ? **"ವಾಚಃಪರಂ** – ವಾಕ್ಕಿನಿಂದ ಹೇಳುವದಕ್ಕಿಂತ ನಿರತಿಶಯವಾದ ಪುರುಷಾರ್ಥವನ್ನು, **ಪ್ರಾರ್ಥಯಿತಾ** – ಪ್ರಾರ್ಥಿಸುವವನಿಂದ, **ಶ್ರಿಯಮ್** – ಲಕ್ಷ್ಮಿಯನ್ನು, **ನಿಯತಂ** – ಶಾಸ್ತ್ರವಿಧಿಗಳಿಗೆ ಅನುಗುಣವಾಗಿರೋಣ ಹೇಗೋ ಹಾಗೆ ಇದ್ದುಕೊಂಡು, ಅಥವಾ ಇಂದ್ರಿಯ ಮನಸ್ಸುಗಳನ್ನು ನಿಯಮಿಸಿಕೊಂಡಿರುವವನಾಗಿರೋಣ ಹೇಗೋ ಹಾಗೆ ಇದ್ದುಕೊಂಡು **ಪ್ರಪದ್ಯೇತ್** – ಶರಣವನ್ನು ಹೊಂದಲ್ಪಡತಕ್ಕದ್ದು" **ಇತ್ಯಾದಿಗಳಾನ**–ಇವೇ ಮೊದಲಾದ, ಶೌನಕಸ್ಮೃತಿಯೇ ಮೊದಲಾದವಾಕ್ಯಗಳು. ಈ ಶ್ಲೋಕವು ಹಿಂದೆ ಲಕ್ಷ್ಮಿಗೆ ಉಪಾಯತ್ವವನ್ನು ಸ್ಥಾಪಿಸುವ ಸಂದರ್ಭದಲ್ಲಿ ಸಿದ್ಧೋಪಾಯ ಶೋಧನಾಧಿಕಾರದಲ್ಲಿ ಉದಾಹೃತವು. (೨೧೦ನೆಯ ಪುಟ ನೋಡಿ.) ಇಲ್ಲಿ ಆದಿ ಪದದಿಂದ ಹಿರಣ್ಯಗರ್ಭ, ಕಾಶ್ಯಪ, ಮುಂಕಣ ಸಂಹಿತಾದಿಗಳು ಹೇಳಲ್ಪಟ್ಟವು. ಈ ವಾಕ್ಯಗಳಿಗೆ ೨೧೧-೨ ನೆಯ ಪುಟಗಳನ್ನು ಪರಾಂಬರಿಸಿ. ಇಲ್ಲಿ ಈ ಶೌನಕವಾಕ್ಯದಲ್ಲಿನ ಪುರುಷಕಾರತ್ವವನ್ನು ಉಪಪಾದಿಸುವದಕ್ಕಾಗಿ ಉಪಯೋಗಿಸಿರುವದು ಹೇಗೆ ? **ಪ್ರಪದ್ಯೇತ್** ಎಂದು ವಾಕ್ಯದಲ್ಲಿವೆ, ಉಪಾಯತ್ವೇನವೇ ಇಲ್ಲವೇ ಪುರುಷಕಾರತ್ವೇನವೇ ಎಂಬುದು ಹೇಳಲ್ಪಡಲಿಲ್ಲವು. ಆದುದರಿಂದ ಎರಡು ವಿಧವಾಗಿಯೂ ಆಶ್ರಯಿಸಬಹುದೆಂಬ ಭಾವವು. ಪುರುಷಕಾರತ್ವವೂ ಸಹ ಉಪಾಯತ್ವ ಭೇದವೇ ಎಂದು ಉಪಪಾದಿಸಿರುತ್ತೇವೆ. ಉಪಾಯತ್ವವಿಲ್ಲದೆ ಪುರುಷಕಾರತ್ವವಿಲ್ಲವು.

ಹೀಗೆ ಆರುವಿಧವಾಗಿ ಲಕ್ಷ್ಮಿಗೆ ಪುರುಷಕಾರತ್ವವನ್ನು ಉಪಪಾದಿಸಿ ಮುಂದಿನ ವಾಕ್ಯದಿಂದ ನಿಗಮನಮಾಡಿ ಹೇಳಿ, ಅದರ ಮುಂದಿನ ವಾಕ್ಯದಿಂದ **ಶ್ರೀಯತೇ ಶ್ರಯತೇ** ಎಂಬ ಎರಡು ಧಾತುಗಳ ಮೂಲಕ ಉಪಾಯತ್ವ ಪುರುಷಕಾರತ್ವಗಳು ಲಕ್ಷ್ಮಿಗೆ ಉಂಟೆಂಬುದು ಸ್ಥಾಪಿತವೆಂದು ಹೇಳುತ್ತಾರೆ.—**ಇಪ್ಪಡಿ** – ಈಗ ನಾವು ಹಿಂದೆ ಉಪಪಾದಿಸಿದ ಆರುವಿಧವಾಗಿ, **ಇವಳುಕ್ಕು**–ಲಕ್ಷ್ಮಿಗೆ, **ಸರ್ವೇಶ್ವರನ್ ತಿರುವಡಿಗಳಿಲ್** – ಸರ್ವೇಶ್ವರನ ಪಾದಾರವಿಂದವಲ್ಲಿ, **ಘಟಕತ್ವಮ್**–

---

೧. **ಶೌನಕಸ್ಮೃತಿ.**

**ಪ್ರಮಾಣ ಸಿದ್ಧಮಾಗ್ಕೈಯಾಲೇ ಇಙ್ಗಂ ಇವ್ವಿವಕ್ಷೈಕೈಕ್ಕೊಳ್ಳ ಉಚಿತಮ್. ಇಪ್ಪಡಿ ಪುರುಷಕಾರಭೂತ್ಕೈಯುಮಾಯ್, ಸಿದ್ಧೋಪಾಯ ವಿಶೇಷಣಮುಮಾಯ್, ಕ್ಕೊಂಡು ಆಶ್ರಯಿಕ್ಕಪ್ಪಡುಮ್.**

(೧) **"ಸ್ವರೂಪಂ ಸ್ವಾತಂತ್ರ್ಯಮ್"**, (೨) **"ಶ್ರಿತಸ್ಯೇಸ್ತ್ವಂ**

---

ತನ್ನಲ್ಲಿ ಶರಣಾಗತನಾದವನನ್ನು ಸೇರಿಸುವ ಪುರುಷಕಾರತ್ವವು, **ಬಹು ಪ್ರಮಾಣ ಸಿದ್ಧಮಾಗ್ಕೈಯಾಲೆ** – ಈ ಮೇಲಿನ ಪ್ರಮಾಣಗಳಲ್ಲದೆ ಇನ್ನೂ ಅನೇಕ ಸಂಹಿತಾ ಪುರಾಣಪ್ರಮಾಣಗಳಿಂದಲೂ ಸಿದ್ಧವಾದುದರಿಂದ, **ಇಙ್ಗಣ್** – ಈ ದ್ವಯಮಂತ್ರದಲ್ಲೂ, **ಇವಿವಕ್ಷೈಕೊಳ್ಳ ಉಚಿತಮ್** – ಈ ಅಭಿಪ್ರಾಯವು ಹೇಳಲ್ಪಟ್ಟಿತೆಂದು ಭಾವಿಸುವದೂ ಉಚಿತವಾದುದೇ. ಆದುದರಿಂದ ಪೂರ್ವಖಂಡದ ಶ್ರೀಮಚ್ಛಬ್ದವು ಲಕ್ಷ್ಮಿಯ ಉಪಾಯತ್ವವನ್ನೂ ಪುರುಷಕಾರತ್ವವನ್ನೂ ಬೋಧಿಸುತ್ತೆಂಬ ಅಭಿಪ್ರಾಯವೂ ಉಪಾದೇಯವೆಂಬ ಭಾವವು. ಇದನ್ನೇ ಮುಂದಿನ ವಾಕ್ಯದಲ್ಲಿ ಸಿದ್ಧಾನ್ತಿಸಿ ಹೇಳುತ್ತಾರೆ.—

**ಇಪ್ಪಡಿ**– ಹೀಗೆ **"ಶ್ರೀಞ್ ಸೇವಾಯಾಮ್"** ಎಂಬ ಧಾತುವಿನಿಂದ ಉಂಟಾದ ಶ್ರೀಯತೇ ಶ್ರಯತೇ ಎಂಬೆರಡು ಕ್ರಿಯಾಪದಗಳ ಮೂಲಕ, **ಪುರುಷಕಾರ ಭೂತ್ಕೈಯುಮಾಯ್** – **ಶ್ರಯತೇ ಭಗವನ್ತಮಿತಿಶ್ರೀಃ** ಎಂಬ **ವ್ಯುತ್ಪತ್ತಿ**ಯಿಂದ ಲಕ್ಷ್ಮಿಯು ಪುರುಷಕಾರಭೂತೆಯಾಗಿಯೂ, **ಶ್ರೀಯತೇ ಚೇತನೈಃ** ಎಂಬುದರಿಂದ, **ಸಿದ್ಧೋಪಾಯ ವಿಶೇಷಣಮುಮಾಯ್** – ಸಿದ್ಧೋಪಾಯದಲ್ಲಿ ಅನ್ವಯವಿರುವ, ಭಗವಂತನಿಗೆ ವಿಶೇಷಣವಾಗಿಯೂ **ಆಶ್ರಯಿಕ್ಕಪ್ಪಡುಮ್** – ಆಶ್ರಯಿಸಲ್ಪಡುವಳು, ಎಂದು ಸ್ಥಾಪಿಸಿ ಹೇಳಿದರು.

ಮುಂದೆ ಈಗ ತಾವು ಸ್ಥಾಪಿಸಿದ ಅರ್ಥಗಳಿಗೆ ಸಾಂಪ್ರದಾಯೋಕ್ತಿಬಲವೂ ಉಂಟೆಂದು ತೋರಿಸುವದಕ್ಕಾಗಿ ಪೂರ್ವಾಚಾರ್ಯ ದಿವ್ಯಸೂಕ್ತಿಗಳನ್ನು ಉದಾಹರಿಸುತ್ತಾರೆ; **ಶ್ರಯತೇ ಭಗವನ್ತಮಿತಿಶ್ರೀಃ** ಎಂಬ ವ್ಯುತ್ಪತ್ತಿಮೂಲಕ, **ಶ್ರೀಮನ್ನಾರಾಯಣ** ಎಂಬಲ್ಲಿ ವಿಶೇಷಣ ವಿಶೇಷ್ಯಭಾವವು ಉಂಟಾಗಿ, ಅಪೃಥಕ್ಸಿದ್ಧತ್ವವು ಏರ್ಪಡುವದರಿಂದ ಭಗವಂತನಿಗೆ ಅತಿಶಯವನ್ನುಂಟುಮಾಡುವಳೆಂಬುದನ್ನು ಉಪದೇಶಿಸುತ್ತಾರೆ. ಪುರುಷಕಾರತ್ವಕ್ಕಾಗಿ ಮಾತ್ರವೇ ಅಲ್ಲದೆ, ತಾನು ಅಂತಹ ಮಹಾನುಭಾವನಿಗೆ ಶೇಷಭೂತಳೆಂಬ ಅಂತಹ ಶೇಷತ್ವಮೂಲಕವಾಗಿ ಅತಿಶಯದಾಯಕಳೆಂಬ ಭಾವಗಳು ತೋರಿಬರುತ್ತವೆ. ಇವೆಲ್ಲಾ ಪೂರ್ವಾಚಾರ್ಯರಿಂದ ಉಪದಿಷ್ಟವೆಂದು ಉದಾಹರಿಸಿ ಆ ಅಭಿಪ್ರಾಯಗಳಿಗೆ ಸಾಂಪ್ರದಾಯಕತ್ವವನ್ನು ಪ್ರಕಟಿಸುತ್ತಾರೆ.

(೧) **ಸ್ವರೂಪಂ ಸ್ವಾತಂತ್ರ್ಯಮ್**— ಈ ಶ್ರೀ ಪರಾಶರಭಟ್ಟರ ಶ್ಲೋಕವು

---

(೧) ಶ್ರೀಗುಣ, ೨೮. (೨) ಶ್ರೀಗುಣ, ೩೧.

**ವಿಷ್ಣೋಸ್ಸ್ವಮಸಿ", ಎನ್ಗಿರ ಶ್ಲೋಕಙ್ಗಳಿನ್ ಪಡಿಯೇ, ಆದಿತ್ಯಾದಿಗಳುಕ್ಕು ಪ್ರಭಾದಿಗಳ್ ಪೋಲೆ, ಅತಿಶಯ (ಕರಿಯಾಯ್) ಕಾರಿಣಿಯಾಯ್ಕ್ಕೊಣ್ಡು ಸಿದ್ಧೋಪಾಯತ್ತೈ ಆಶ್ರಯಿತ್ತಿರುಕ್ಕುಮ್.**

---

ಹಿಂದೆಯೇ ಸಿದ್ಧೋಪಾಯ ಶೋಧನಾಧಿಕಾರದಲ್ಲಿ ಉದಾಹೃತವಾಗಿರುತ್ತದೆ. ಅಲ್ಲಿ ಬಹು ವಿಸ್ತಾರವಾಗಿ ಲಕ್ಷ್ಮಿಯ ಸಂಬಂಧದಿಂದ ನಾರಾಯಣನಿಗೆ ಸ್ವರೂಪನಿರೂಪಣೆಯೂ ಸ್ವಾತಂತ್ರ್ಯವೂ ಏರ್ಪಟ್ಟವೆಂಬುದು ಚನ್ನಾಗಿ ಉಪಪಾದಿತವಾದುದರಿಂದ ಪುನಃ ಇಲ್ಲಿ ಅದನ್ನು ಚರ್ಚಿಸುವುದು ವ್ಯರ್ಥವಾಗಿ ಗ್ರಂಥವಿಸ್ತರಕ್ಕೆ ಕಾರಣವಾಗುವದರಿಂದ, ದಯವಿಟ್ಟು ೨೮೯೦-೯೨ ನೆಯ ಪುಟಗಳನ್ನು ಪರಾಂಬರಿಸಿ

(೨) **"ಸ್ವತಶ್ಶ್ರೀಸ್ತ್ವಂ ವಿಷ್ಣೋಸ್ಸ್ವಮಸಿ ತತ ಏವೈಷ ಭಗವಾನ್ ।**
**ತ್ವದಾಯತ್ತರ್ದ್ಧಿತ್ವೇಽಪ್ಯಭವದಪರಾಧೀನ ವಿಭವಃ ।**
**ಸ್ವಯಾ ದೀಪ್ತ್ಯಾ ರತ್ನಂ ಭವದಪಿ ಮಹಾರ್ಘಂ ನ ವಿಗುಣಂ ।**
**ನ ಕುಂಠಸ್ವಾತಂತ್ರ್ಯಂ ಭವತಿ ನ ಚಾನ್ಯಾಹಿತಗುಣಮ್ ॥೩೧॥**

ಓ ಶ್ರೀಃ-ಓ ಲಕ್ಷ್ಮಿಯೇ, ತ್ವಂ-ನೀನು, **ಸ್ವತಃ**-ನೀನಾಗಿಯೇ, ಯಾರ ನಿರ್ಬಂಧವೂ ಇಲ್ಲದೆ, **ವಿಷ್ಣೋಃ**-ನಾರಾಯಣನ, **ಸ್ವಮಸಿ**-ವಸ್ತುವಾಗಿದ್ದೀ; **"ಮಚ್ಛೇಷಭೂತಾ ಸರ್ವೇಷಾಂ ಈಶ್ವರೀ ವಲ್ಲಭಾ ಮಮ"** ಎಂದು ವಿಷ್ವಕ್ಸೇನ ಸಂಹಿತೆಯಲ್ಲಿ ಹೇಳಿರುವ ಹಾಗೆ ಶೇಷಭೂತಳೆಂಬ ತಾತ್ಪರ್ಯವು. ತತಏವ-ಹೀಗೆ ನೀನು ಶೇಷಭೂತಳಾಗಿ ಪತಿಯೊಂದಿಗೆ ಸೇರಿರುವದರಿಂದಲೇ, **ಏಷಭಗವಾನ್**-ಈ ಹೇಯ ಪ್ರತ್ಯನೀಕನಾಗಿ ಕಲ್ಯಾಣಗುಣಾಕರನಾದ ನಾರಾಯಣನು, **ತ್ವದಾಯತ್ತರ್ದ್ಧಿತ್ವೇಽಪಿ**-ನಿನಗೆ ಅಧೀನವಾದ ಸಂಪತ್ತಿನ ಸಮೃದ್ಧಿಯನ್ನು **"ಅಪ್ರಮೇಯಂ ಹಿ ತತ್ತೇಜಃ ಯಸ್ಯ ಸಾ ಜನಕಾತ್ಮಜಾ"** ಎಂಬ ಮಾರೀಚವಾಕ್ಯದ ಹಾಗೆ ಹೊಂದಿದ್ದರೂ, **ಅಪರಾಧೀನ ವಿಭವ ಅಭವತ್**-ಸರ್ವಸ್ವತಂತ್ರವಾದ ವಿಭವೈಶ್ವರ್ಯ ಸಂಪತ್ತುಳ್ಳವನೆಂದೇ ಹೇಳಲ್ಪಡುವನು. ಅದು ಹೇಗೆಂದರೆ ದೃಷ್ಟಾಂತ ಮೂಲಕ ಉಪಪಾದಿಸುತ್ತಾರೆ;—**ಸ್ವಯಾದೀಪ್ತ್ಯಾ**-ತನಗೆ ಸಂಬಂಧಿಸಿಕೊಂಡಿರುವ ಕಾಂತಿಯಿಂದ **ರತ್ನಂ**-ಕೆಂಪು, ರತ್ನವು, **ಮಹಾರ್ಘಂ**-ತುಂಬಾ ಅಮೋಘವಾದುದಾಗಿ, **ಭವದಪಿ**-ಬೆಳಗುತ್ತಿರುವದೂ, ಕೂಡ, **ನವಿಗುಣಂ**-ಅದರ ಮಹಿಮೆಗೇನೂ ಕುಂದುಕವಲ್ಲವು, ಅದರ ಕಾಂತಿಯಿಂದಲೇ ಈ ರತ್ನಕ್ಕೆ ಪ್ರಾಶಸ್ತ್ಯವೆಂದು ಯಾರೂ ಹೀನಾಯಿಸುವುದಿಲ್ಲವು, ರತ್ನವು ಎಷ್ಟು ಅಮೋಘವಾದುದು? ಎಷ್ಟು ಕಾಂತಿಯುಳ್ಳದ್ದು ಎಂದು ಹೇಳುವರೇ ವಿನಾ ಹೇಳನಮಾಡುವುದಿಲ್ಲವು. **ನಕುಂಠ ಸ್ವಾತಂತ್ರ್ಯಮ್ ಭವತಿ**-ಆ ರತ್ನವು ದೀಪ್ತಿಗೆ ಅಧೀನವಾದುದೆಂದು ಯಾರೂ ಹೇಳುವದಿಲ್ಲವಾದುದರಿಂದ ಆ ರತ್ನದ ಸ್ವಾತಂತ್ರ್ಯಕ್ಕೇನೂ ಕುಂ

---

(೨) ಶ್ರೀಗುಣ, ೩೧.

**ಎಲ್ಲಾರ್ಕ್ಕುಂ ಸೇವ್ಯೈಯಾಯ್ ಸರ್ವೇಶ್ವರನೈ ಸೇವಿತ್ತಿರುಕ್ಕ್ಕು ಮುನ್ನು ಪೊರುಳಾನಪೋದು, ಎಲ್ಲಾರ್ಕ್ಕುಂ ಸ್ವಾಮಿನಿಯಾಯ್ (೧) ಕಾಂತಸ್ತ್ರೇ**

---

ದಕವಿಲ್ಲವು. **ಅನ್ಯಾಹಿತಗುಣಂ ನ ಭವತಿ**-ಇತರ ವಸ್ತುವಿನ ಮೂಲಕ ಅತಿಶಯ ಉಂಟಾಯಿತೆಂದೂ ಆಗುವದಿಲ್ಲವು. ಹಾಗೆಯೇ ಚನ್ನಾಗಿ ಪರಿಶೀಲಿಸಿ ನೋಡಿದರೆ ಲಕ್ಷ್ಮಿಯ ಸಂಶ್ಲೇಷದಿಂದಲೇ ನಾರಾಯಣನಿಗೆ ಸ್ವರೂಪಗುಣ ವಿಭವೈಶ್ವರ್ಯಾದಿಗಳ ಮಹಾತ್ಮ್ಯೆಯು ಉಂಟಾಗಿದ್ದರೂ, ಆತನ ಮಹಿಮೆಯು ಅದರಿಂದೇನೂ ನ್ಯೂನತೆಯನ್ನು ಹೊಂದುವದಿಲ್ಲವು. ಅದರಿಂದ ಆತನು ಪರಾಧೀನನೆಂದೂ ಆಗುವದಿಲ್ಲವು. ಇದು ದಾಸನು ಬರೆದಿರುವ ಚತುಶ್ಲೋಕಿಯ ವ್ಯಾಖ್ಯಾನದ ೫೮ ನೆಯ ಪುಟದಲ್ಲಿ ಉಪಪಾದಿತವು." **ಎಜ್ಗಿರ ಶ್ಲೋಕಙ್ಗಳಿಲ್ ಪಡಿಯೇ**-ಎಂಬ ಶ್ಲೋಕಗಳಲ್ಲಿ, **ಆದಿತ್ಯಾದಿಗಳಕ್ಕು ಪ್ರಭಾದಿಗಳಪ್ಪೋಲೆ**-ಸೂರ್ಯನೇ ಮೊದಲಾದವುಗಳಿಗೆ ಕಿರಣ ಮೊದಲಾದವುಗಳ ಹಾಗೆ, ಇಲ್ಲಿ ಆದಿಪದಗಳಿಂದ ಪುಷ್ಪಕ್ಕೆ ಸೌರಭದ ಹಾಗೂ, **ಅತಿಶಯಕಾರಿಣಿಯಾಹಕ್ಕೊಂಡು**-ಅತಿಶಯವನ್ನು ಮಾಡುವಳೆಂದು ಭಾವಿಸಿ, **ಸಿದ್ಧೋಪಾಯತ್ತೈ ಆಶ್ರಯಿತ್ತಿರ್ಕ್ಕುಮ್**-ಸಿದ್ಧೋಪಾಯನಾದ ನಾರಾಯಣನನ್ನು ಆಶ್ರಯಿಸಿರುತ್ತಾಳೆ.

ಲಕ್ಷ್ಮಿಯು ಅಪೃಥಕ್ಸಿದ್ಧ ವಿಶೇಷಣವಾಗಿ ನಿತ್ಯಾನಪಾಯಿನಿಯಾಗಿರುವದರಿಂದ ಸರ್ವೇಶ್ವರನ ಎಲ್ಲಾ ವ್ಯಾಪಾರಗಳಲ್ಲೂ "ಸಹಧರ್ಮಚರೀ" ಯಾಗಿ ಭಾಗಿನಿಯಾಗಿರುವದರಿಂದ ಪರಸ್ಪರೋತ್ಕರ್ಷಕ್ಕೆ ಈ ಲಕ್ಷ್ಮಿ ಸಂಬಂಧವೆಂದು ಉಪಪಾದಿಸಲ್ಪಟ್ಟಿತು. ವಿಶೇಷಣದಿಂದ ವಿಶೇಷ್ಯಕ್ಕೂ ವಿಶೇಷ್ಯದಿಂದ ವಿಶೇಷಣಕ್ಕೂ ಉತ್ಕರ್ಷ ಉಂಟೆಂಬುದು ಇದರಿಂದ ಏರ್ಪಟ್ಟಿತು. ಇದನ್ನೇ **ಆದಿತ್ಯಾದಿಗಳಕ್ಕು ಪ್ರಭಾದಿಗಳಪ್ಪೋಲೇ** ಎಂಬುದರಿಂದ ಸಮರ್ಥಿಸಿರುತ್ತಾರೆ. ಈ ಅಭಿಪ್ರಾಯಗಳೇ **"ಅನನ್ಯಾ ರಾಘವೇಣಾಹಂ ಭಾಸ್ಕರೇಣ ಪ್ರಭಾಯಥಾ"** ಎಂಬ ಸೀತಾ ವಾಕ್ಯದಿಂದಲೂ, **"ಅನನ್ಯಾಹಿ ಮಯಾಸೀತಾ ಭಾಸ್ಕರೇಣ ಪ್ರಭಾಯಥಾ"** (ರಾ. ಯುದ್ಧ. ೧೨೧. ೧೯. ೨೦) **"ನವಿಹಾತು ಮಿಯಂ ಶಕ್ಯಾ ಕೀರ್ತಿರಾತ್ಮವತಾ ಯಥಾ"** ಎಂಬ ಶ್ರೀರಾಮ ವಾಕ್ಯದ ಉಪಮೆಗಳಿಂದಲೂ ಮಹರ್ಷಿಯಿಂದ ಸಮರ್ಥಿಸಲ್ಪಟ್ಟಿವೆ.

**ಶ್ರೀಯತೇ ಶ್ರಯತೇ** ಎಂಬ ಧಾತುಗಳ ಮೂಲಕ ಉಪಾಯತ್ವ ಪುರುಷಕಾರತ್ವ ಬೋಧಕ ಅರ್ಥಗಳು ಹಿಂದೆ ಉಪಪಾದಿಸಲ್ಪಟ್ಟವು. ಇದೇ ಧಾತುಗಳು ಹಿಂದೆ ಉಪಪಾದಿಸಿದ ರೀತಿಯಲ್ಲಿ ಸೇವ್ಯತ್ವ ಮತ್ತು ಆಶ್ರಯಣಾರ್ಥಗಳನ್ನು ಹೊಂದಿರುವದರಿಂದ **"ಶ್ರೀಯತೇ ಚಾಖಿಲೈರ್ನಿತ್ಯಂ ಶ್ರಯತೇ ಚ ಪರಂ ಪದಂ"** ಎಂಬಲ್ಲಿ ತೋರುವ ಅರ್ಥಗಳಲ್ಲಿ ತೋರಿಬರುತ್ತವೆಂದು ಉಪದೇಶಿಸು

---

**(೧) ೨೪, ಚತು. ೧,**

**ಪುರುಷೋತ್ತಮಃ"** (೨) **"ಶೇಷಿತ್ವೇ ಪರಮಃ ಪುಮಾನ್"** ಎಙ್ಗಿರಪಡಿಯೇ

ತ್ತಾರೆ. ಇಲ್ಲಿ ಮೊದಲನೆಯ ವಾಕ್ಯದಿಂದ ಸರ್ವಶೇಷಿತ್ವ, ಸರ್ವವ್ಯಾಪಕತ್ವ, ಸರ್ವನಿಯಂತೃತ್ವಾದಿಗಳು ಲಕ್ಷ್ಮಿಗೆ ಏರ್ಪಟ್ಟವು.

ಎರಡನೆಯ ವಾಕ್ಯದಿಂದ ಲಕ್ಷ್ಮಿಯು ಭಗವಂತನನ್ನು ಆಶ್ರಯಿಸಿ ಆತನಿಗೆ ಶೇಷಭೂತಳಾಗಿರೋಣವು ಏರ್ಪಟ್ಟಿತು. ಇವೆರಡು ಅರ್ಥಗಳೂ ಸಹ ಆ ಎರಡು ಕ್ರಿಯಾಪದಗಳಿಂದ ತೋರಿಬರುತ್ತವೆಂದು "ಎಲ್ಲಾರ್ಕ್ಕುಂ" ಎಂದು ಆರಂಭಿಸಿ ಉಪದೇಶಿಸುತ್ತಾರೆ. **ಎಲ್ಲಾರ್ಕ್ಕುಂ ಸೇವ್ಯೈಯಾಯ್**–ಎಲ್ಲರಿಗೂ ಸೇವಿಸಲು ಯೋಗ್ಯಳಾಗಿ, ಸರ್ವೇಶ್ವರನ್ನೈ ಸೇವಿತ್ತಿರುಕ್ಕುಮೆನ್ರು–ತಾನೇ ಸರ್ವೇಶ್ವರನನ್ನು ಸೇವಿಸುತ್ತಿರುವಳೆಂದು, **ಪೊರುಳಾನಪೋದು**–ಅಭಿಪ್ರಾಯವಾದಾಗ, **ಎಲ್ಲಾರ್ಕ್ಕುಮ್ ಸ್ವಾಮಿನಿಯಾಯ್**–ಎಲ್ಲರಿಗೂ ಶೇಷಿಯಾಗಿಯೂ ನಿಯನ್ತ್ರಾವಾಗಿಯೂ, **"ಕಾನ್ತಸ್ತೇ ಪುರುಷೋತ್ತಮಃ"** ಎಂಬಲ್ಲೂ, **"ಶೇಷಿತ್ವೇ ಪರಮಃ ಪುಮಾನ್"** ಎಂದು ಶ್ರೀಗುಣರತ್ನಕೋಶದಲ್ಲೂ, ಎಙ್ಗಿರಪಡಿಯೇ–ಎಂಬಲ್ಲಿ ಹೇಳಿರುವ ಹಾಗೆ, **ಅವನುಕ್ಕು**–ತನ್ನ ಪತಿಯಾದ ಭಗವಂತನಿಗೂ, **ಶೇಷಮಾನನಿಲೈ**–ಲಕ್ಷ್ಮಿಯಾದ ತಾನು ಶೇಷಭೂತಳಾಗಿರುವ ಸ್ಥಿತಿಯು, **ಶೊಲ್ಲಿತ್ತಾಮ್**–ಹೇಳಿದಂತಾಯಿತು; ಅಥವಾ ಹೇಳಲ್ಪಟ್ಟಿತೆಂದು ಭಾವಿಸಬಹುದು. ಯಾರಿಂದ ಎಂದರೆ ಹೇಳಲಿಲ್ಲವು. **ಶ್ರೀ** ಸಾರಾಸ್ವಾದಿನಿಯವರು ಪೆರಿಯಮುದಲಿಯಾರ್‌ರವರು ಎಂದರೆ **ಶ್ರೀ ಯಾಮುನ** ಮುನಿಗಳ ಅಭಿಪ್ರಾಯವೆಂದು ಹೇಳಿರುತ್ತಾರೆ. **"ಕಾಂತಸ್ತೇ"** ಎಂಬ ಪೂರಾ ಶ್ಲೋಕಕ್ಕೂ ಅದರ ಉಪಪಾದನೆಗೂ ದಾಸನು ಬರೆದಿರುವ ಚತುಶ್ಶ್ಲೋಕಿಯ ಪ್ರಥಮ ಶ್ಲೋಕವನ್ನು ಪರಾಂಬರಿಸಬಹುದು (೧) **ಕಾನ್ತಸ್ತೇ ಪುರುಷೋತ್ತಮಃ** ಎಂಬುದರಿಂದ ಪುರುಷೋತ್ತಮನು ನಿನಗೆ ಅತ್ಯನ್ತಪ್ರಿಯನು, ಅತ್ಯನ್ತ ಮನೋಹರನು ಎಂಬುದರಿಂದ ಲಕ್ಷ್ಮಿಯು ತಾನಾಗಿಯೇ ಆತನಲ್ಲಿರುವ ಪ್ರೀತ್ಯತಿಶಯದಿಂದ ಆತನಿಗೆ ಶೇಷಭೂತಳೆಂಬ ಭಾವವು ಸೂಚಿತವೆಂಬುದು ತಾತ್ಪರ್ಯವು. ಮುಂದೆ ಉತ್ತರಾರ್ಧದಲ್ಲಿ **"ಬ್ರಹ್ಮೇಶಾದಿ ಸುರವ್ರಜಸ್ಸದಯಿತಸ್ತ್ವದ್ದಾಸದಾಸೀಗಣಃ"** ಎಂದು ಹೇಳಿರುವದರಿಂದ ಸಮಸ್ತ ದೇವತೆಗಳ ಗಣಕ್ಕೂ ಶೇಷಿಯು, ನಿಯಾಮಕಳು, ಎಂಬುದು ಏರ್ಪಟ್ಟಿತು. ದೇವತೆಗಳಿಗೆ ಶೇಷಿ ಎಂದರೆ ಈ ಲೋಕದ ಸಮಸ್ತರಿಗೂ ಶೇಷಿ ಎಂಬುದು ವ್ಯಕ್ತವು. ಈ **ಅರ್ಥವೇ** ಮುಂದೆ **"ಲೋಕೈಕೇಶ್ವರಿ ಲೋಕನಾಥದಯಿತೇ"** ಎಂಬ ಪ್ರಯೋಗದಲ್ಲಿ ಸ್ಫುಟವು.

(೨) **"ಶೇಷಿತ್ವೇ ಪರಮಃ ಪುಮಾನ್"** ಎಂಬ ಪೂರಾ ಶ್ಲೋಕವು ಯಾವುದೆಂದರೆ:—

**ಹೇಲಾಯಾಮಖಿಲಂ ಚರಾಚರಮಿದಂ ಭೋಗೇ ವಿಭೂತಿಃ ಪರಾ ।**
**ಪುಣ್ಯಾಸ್ತೇ ಪರಿಚಾರಕರ್ಮಣಿ ಸದಾ ಪಶ್ಯನ್ತಿ ಯೇ ಸೂರಯಃ ।**

(೨) ಶ್ರೀಗುಣ ೨೨.

**ಯವನುಕ್ಕು ಶೇಷಮಾನನಿಲ್ಲೈ ಶೊಲ್ಲಿತ್ತಾಮ್.** (೩) **"ಜಗತ್ಸಮಸ್ತಂ ಯದಪಾಙ್ಗ ಸಂಶ್ರಯಮ್" ಇತ್ಯಾದಿಗಳಿಲ್ಪಡಿಯೇ ಎಲ್ಲಾವಸ್ತುಕ್ಕಳಾಲುಮ್ ಆಶ್ರಯಿಕ್ಕಪ್ಪಟ್ಟು, ಎಲ್ಲಾತ್ತೈಯುಂ ತಾನಾಶ್ರಯಿತ್ತಿರುಕ್ಕುಮೆನ್ರು**

**ಶ್ರೀರಙ್ಗೇಶ್ವರದೇವಿ ಕೇವಲ ಕೃಪಾ ನಿರ್ವಾಹ್ಯವರ್ಗೇ ವಯಮ್ ।**
**ಶೇಷಿತ್ವೇ ಪರಮಃ ಪುಮಾನ್ ಪರಿಕರಾಹ್ಯೇತೇ ತವಸ್ಫಾರಣೇ ॥೨೨॥**

**ಇದರ ಅರ್ಥವು. ಹೇ ಶ್ರೀರಂಗೇಶ್ವರದೇವಿ**–ಓ ರಂಗನಾಥನಪತ್ನಿಯೇ, **ಹೇಲಾಯಾಂ**–ಆಟದಲ್ಲಿ, **ಅಖಿಲಂಚರಾಚರಮಿದಮ್**–ಈ ಸಮಸ್ತ ಸ್ಥಾವರ ಜಙ್ಗಮಗಳಿಂದ ಸೇರಿದ ಈ ಏಕಪಾದ್ವಿಭೂತಿ ಎಂದು ಹೇಳಲ್ಪಟ್ಟಿರುವ ಲೀಲಾ ವಿಭೂತಿಯೂ, ಮತ್ತು **ಭೋಗೇ**–ನಿನ್ನ ಭೋಗಕ್ಕಾಗಿಯೇ **ವಿಭೂತಿಃ ಪರಾ**–ಸೃಷ್ಟಿಪ್ರಳಯಕ್ರಮಕ್ಕೆ ಸಿಕ್ಕದೇ ಶಾಶ್ವತವಾಗಿಯೂ ದುಃಖದ ಗಂಧವೇ ಇಲ್ಲದೆಯೂ ಇರುವದರಿಂದ ತ್ರಿಪಾದ್ವಿಭೂತಿ ಎಂಬ ನಿತ್ಯವಿಭೂತಿಯೂ, ಮತ್ತು **ತೇ**–ನಿನಗೆ, **ಪರಿಚಾರಕರ್ಮಣಿ**–ಕೈಂಕರ್ಯವೃತ್ತಿಯಲ್ಲಿ, **ಯೇ ಸೂರಯಃ ಸದಾಃ ಪಶ್ಯನ್ತಿ**–ಯಾವ ನಿತ್ಯಸೂರಿಗಳು ಯಾವಾಗಲೂ ನಿನ್ನನ್ನು ಸಾಕ್ಷಾತ್ಕರಿಸಿ ಸೇವಿಸುತ್ತಾರೋ, **ತೇ**–ಅಂತಹ, **ಪುಣ್ಯಾಃ**–ಸುಕೃತಿಗಳಾದ, **ಸೂರಯಃ**–ನಿತ್ಯರೂ (ಮುಕ್ತರೂ ಸಹ ಇಲ್ಲಿ ಹೇಳಲ್ಪಟ್ಟರೆಂದು ಭಾವಿಸಬಹುದು), **ಕೇವಲ ಕೃಪಾ ನಿರ್ವಾಹ್ಯವರ್ಗೇ**–ಕೇವಲ ನಿನ್ನ ನಿರ್ವ್ಯಾಜಕೃಪೆಯಿಂದಲೇ ನಿರ್ವಹಿಸಲು ಯೋಗ್ಯರಾದ ಸಮೂಹದಲ್ಲೇ ಸೇರಿರುವ, **ವಯಂ**–ನಾವೂ, ಮತ್ತು **ಶೇಷಿತ್ವೇ**–ನಿನಗೆ ಶೇಷಿಯಾಗಿರುವದಕ್ಕಾಗಿಯೇ, **ಪರಮಃಪುಮಾನ್** – ಪರಮಪುರುಷನು ; ಹೀಗೆ **ಏತೇ**–ನಿನ್ನ ಆಟಕ್ಕಾಗಿ ಈ ಲೀಲಾವಿಭೂತಿಯೂ, ಭೋಗಕ್ಕಾಗಿ ನಿತ್ಯವಿಭೂತಿಯೂ ಕೈಂಕರ್ಯಕ್ಕಾಗಿ ಅಲ್ಲಿರುವ ನಿತ್ಯಮುಕ್ತರೂ, ನಿನ್ನ ಕೃಪೆಗೆ ಪಾತ್ರರಾಗಿ ನಾವೂ, ನಿನಗೆ ಈ ವ್ಯಾಪಾರಗಳಲ್ಲೆಲ್ಲಾ ಸಹಾಯಕನಾಗಿ ಶೇಷಿಯಾಗಿ ಪ್ರೀತಿಸುವ ಪರಮಪುರುಷನಾಗಿ ಹೀಗೆ ಇವೆಲ್ಲವೂ **ತವಸ್ಫಾರಣೇ**–ನಿನ್ನ ಮಾಹಾತ್ಮ್ಯೆಯ ಪ್ರಕಾಶಕ್ಕಾಗಿಯಲ್ಲವೇ ಏರ್ಪಟ್ಟ **ಪರಿಕರಾಃ**–ಸಾಧನಗಳು. ಈ ಶ್ಲೋಕದಲ್ಲಿ ಲಕ್ಷ್ಮಿಯು ಪರಮಾತ್ಮನನ್ನು ಶೇಷಭಾವದಿಂದ ಆಶ್ರಯಿಸಿರುತ್ತಾಳೆಂಬುದರಿಂದ **ಶ್ರಯತೇ**–ಎಂಬಲ್ಲಿ ಪರಮಾತ್ಮಶೇಷತ್ವವು ಉಪಪಾದಿತವು. ಮತ್ತು **ಶ್ರೀಯತೇ ಚಾಖಿಲಂ ನಿತ್ಯಮ್** ಎಂಬಲ್ಲಿ **ತೋರುವ** ಸರ್ವಸೇವ್ಯತ್ವಾದಿಗಳು ಶ್ಲೋಕದ ಮಿಕ್ಕ ಉಪಪಾದನೆಗಳಿಂದ **ವ್ಯಕ್ತವು.**

**"ಶ್ರೀಯತೇ ಚಾಖಿಲಂ ನಿತ್ಯಮ್"** ಎಂಬುದನ್ನು ಮುಂದಿನ ವಾಕ್ಯದಿಂದಲೂ ಉಪಪಾದಿಸುತ್ತಾರೆ. (೩) **"ಜಗತ್ಸಮಸ್ತಂ ಯದಪಾಙ್ಗ ಸಂಶ್ರಯಮ್"**–"ಯಾವ ಸಮಸ್ತ ಜಗತ್ತೂ ಯಾವ ಲಕ್ಷ್ಮಿಯ ಕಡೆಗಣ್ಣಿನ ನೋಟವನ್ನೇ ಆಶ್ರಯವಾಗಿ ಉಳ್ಳದೋ" ಇತ್ಯಾದಿಗಳಿಲ್ಪಡಿಯೇ, ಎಂಬಿವೇ ಮೊದಲಾದ

(೩) ಆಳ. ಸ್ತೋ ೩೮.

**ಪೊರುಳಾನಪೋದು ನಾರಾಯಣಾದಿ ಶಬ್ದಙ್ಗಳ್ ಶ್ರಿಯಃಪತಿಕ್ಕು ಶೊಲ್ಲುಮ್ ಕಟ್ಟಳೈ (ಯೈ) ವಿಷ್ಣುಪತ್ನೀಕ್ಕುಂ ಶೊಲ್ಲಿತ್ತಾಮ್.**

ವುಗಳಲ್ಲಿ ಹೇಳಿರುವ ಹಾಗೆ, ಎಲ್ಲಾಪಸ್ತುಕ್ಕಳಾಲುಮ್- ತನಗೂ **ಪರಮಾತ್ಮನ** ಹಾಗೆ ಶರೀರವಾಗಿರುವ ಎಲ್ಲಾ ಚಿದಚಿತ್ತುಗಳಿಂದಲೂ, **ಆಶ್ರಯಿಕ್ಕಪ್ಪಟ್ಟು**- ಆಧಾರವಾಗಿ ಆಶ್ರಯಿಸಲ್ಪಟ್ಟು, **ಎಲ್ಲಾತ್ತೈಯುಮ್**- ಈ ಎಲ್ಲಾ ಚಿದಚಿತ್ತುಗಳನ್ನೂ, **ತಾನು ಆಶ್ರಯಿತ್ತಿರುಕ್ಕುಮ್**- ತಾನು ಪರಮಾತ್ಮನೊಂದಿಗೆ ವ್ಯಾಪಿಸಿ, ಅವುಗಳಿಗೆಲ್ಲಾ ಆತ್ಮಾವಾಗಿರುವದರಿಂದ ಅವುಗಳನ್ನು ತಾನೂ ಆಶ್ರಯವಾಗಿವುಳ್ಳವಳು, ಎನ್ರು **ಪೊರುಳಾನಪೋದು**-ಎಂದು ತಾತ್ಪರ್ಯವಾದಾಗ, **ನಾರಾಯಣಾದಿ ಶಬ್ದಙ್ಗಳ್**- ನಾರಾಯಣ ಆದಿಶಬ್ದದಿಂದ ವಿಷ್ಣು ವಾಸುದೇವ ಶಬ್ದಗಳು, **ಶ್ರಿಯಃ ಪತಿಕ್ಕು**-ಲಕ್ಷ್ಮೀಪತಿಯಾದ ನಾರಾಯಣನಿಗೆ ಹೇಳುವ, **ಕಟ್ಟಳೈ**-ತತ್ಪುರುಷ ಬಹುವ್ರೀಹಿ ಅರ್ಥಗಳಿಂದ ಬೋಧಿತವಾದ ಉಪದೇಶಕ್ರಮವು, ಅದು ಯಾವುದೆಂದರೆ, ತತ್ಪುರುಷದಿಂದ ತೋರುವ ಸಮಸ್ತಕ್ಕೂ ಆಧಾರನು, ಗತಿಯು, ಶೇಷಿಯು ಎಂಬ ಮತ್ತು ಬಹುವ್ರೀಹಿಯಿಂದ ತೋರುವ ಸರ್ವವನ್ನೂ ವ್ಯಾಪಿಸಿ ಎಲ್ಲವೂ ತನಗೆ ಶರೀರವಾಗಿ, ಎಲ್ಲಕ್ಕೂ ಆತ್ಮಾವಾಗಿರುವ ಭಾವಗಳು, **ವಿಷ್ಣುಪತ್ನೀಕ್ಕುಮ್**-ಆತನಿಗೆ ಅಪೃಥಕ್ಸಿದ್ಧವಿಶೇಷಣಳಾದ ವಿಷ್ಣುಪತ್ನಿಯಾದ ಲಕ್ಷ್ಮಿಗೂ, **ಶೊಲ್ಲಿತ್ತಾಮ್**- ಹೇಳಿದಂತಾಯಿತು. ಶ್ರಿಯಃಪತಿಗೆ ಯಾವ ಯಾವ ಸ್ವರೂಪ ನಿರೂಪಕ, ನಿರೂಪಿತ ಸ್ವರೂಪ ವಿಶೇಷಣ ಧರ್ಮಗಳು ನಾರಾಯಣ ಶಬ್ದದಿಂದ ತೋರಿಬರುತ್ತವೋ, ಆತನೊಂದಿಗೆ ಯಾವಾಗಲೂ ಇರುವಳಾಗಿರುವ ವಿಷ್ಣುಪತ್ನಿಗೂ ಉಂಟೆಂಬುದು ಸಿದ್ಧವೆಂಬ ತಾತ್ಪರ್ಯವು.

ಶ್ರೀ ಯಾಮುನಮುನಿಯು '**ಜಗತ್ಸಮಸ್ತಂ**' ಎಂಬ ಪೂರಾ ಶ್ಲೋಕ ಮತ್ತು ಪ್ರತಿಪದಾರ್ಥ ಮೊದಲಾದವುಗಳಿಗೆ ೨೧೧ನೆಯ ಪುಟವನ್ನು ನೋಡಿ. ಆದರೆ ಅಲ್ಲಿ ಮುಖ್ಯವಾಗಿ ಉಪಪಾದಿಸಬೇಕಾದ ಭಾವವು, ಲಕ್ಷ್ಮಿಗೆ ತನ್ನ ಪತಿಯು ಹಾಗೆ ಉಪಾಯತ್ವದಲ್ಲೂ ಅನ್ವಯ ಉಂಟೆಂಬುದು. ಆದರೆ ಇಲ್ಲಿ **ಜಗತ್ಸಮಸ್ತಂ ಯದಪಾಙ್ಗ ಸಂಶ್ರಯಮ್** ಎಂಬುದರಿಂದ ಸಮಸ್ತ ಚಿದಚಿತ್ತುಗಳಿಗೂ ಈತಳೂ ತನ್ನ ಪತಿಯ ಹಾಗೆ ಆಧಾರಭೂತಳೂ ಆದುದರಿಂದ ಆಕೆಯ ಕಟಾಕ್ಷವೀಕ್ಷಣೆಯನ್ನೇ ಈ ಚಿದಚಿದ್ರೂಪ ಜಗತ್ತೂ ಆಶ್ರಯಿಸಿರುತ್ತದೆಂಬ ಭಾವವು ಬೋಧಿತವು.

ಈ ಮೇಲಿನ ಅಭಿಪ್ರಾಯಗಳೆಲ್ಲಾ ವಿಷ್ವಕ್ಸೇನ ಸಂಹಿತೆಯ ವಾಕ್ಯಗಳಲ್ಲಿ ವ್ಯಕ್ತವು. ಆ ವಾಕ್ಯಗಳಿಗಾಗಿ ೨೧೪ನೆಯ ಪುಟವನ್ನು ನೋಡಿ. ಮತ್ತು ದಾಸನು ಬರೆದಿರುವ ಶ್ರೀಸ್ತುತಿ ವ್ಯಾಖ್ಯಾನದ ೧೯-೨೦ ನೆಯ ಪುಟಗಳನ್ನೂ ಪರಾಂಬರಿಸಿ.

ಹೀಗೆ ಶ್ರೀಯತೇ ಶ್ರಯತೇ ಎಂಬ ಎರಡು ಕ್ರಿಯಾಪದಗಳಿಂದುಂಟಾದ ಅರ್ಥಗಳಿಂದ ಸರ್ವಾಧಾರತ್ವ ಸರ್ವಶರೀರಿತ್ವ ಸರ್ವಾಂತರ್ಯಾಮಿತ್ವಾದಿಗಳೆಲ್ಲಾ ವಿಷ್ಣು

**ಶ್ರೀ ಭಾಷ್ಯಕಾರರುಂ, (೧) "ಭಗವನ್ನಾರಾಯಣ" ಎಙ್ಗಿರ ನೇರಿಲೇ. "ಭಗವತೀಂ ಶ್ರಿಯಮ್" ಎನ್ರರುಳಿಚ್ಚೆಯ್‌ದಾರ್.**

---

ಪತ್ನಿಗೆ ಉಂಟೆಂಬುದು ಶ್ರೀ ಯಾಮುನಮುನಿಯ ಮಾತ್ರವೇ ಅಲ್ಲದೆ ಶ್ರೀ ಭಾಷ್ಯಕಾರರ ಅಭಿಪ್ರಾಯವೂ ಹಾಗೆಯೇ ಎಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ಈ ಉಪಪಾದನೆಯಿಂದ, ಆಳವಂದಾರ್, ಶ್ರೀ ಭಾಷ್ಯಕಾರರ್ ಇವರುಗಳ ದಿವ್ಯಸೂಕ್ತಿಗಳಲ್ಲಿ ಐಕಕಂಠ್ಯವಿರುವದರಿಂದ ಈ ಅರ್ಥಗಳಿಗೆ ಸಾಂಪ್ರದಾಯಾನುಮತಿಯುಂಟೆಂದು ಸ್ಥಾಪಿಸುತ್ತಾರೆ; ಆದುದರಿಂದ ಈ ಅಭಿಪ್ರಾಯಗಳನ್ನು ಅನುಮೋದಿಸದಿರುವದು ಸರಿಯಲ್ಲವೆಂದೂ ಆ ಅರ್ಥಗಳನ್ನು ನಿರಾಕರಿಸಿದುದಾದರೆ ಸಾಂಪ್ರದಾಯವನ್ನು ನಿರಾಕರಿಸಿದ ಹಾಗಾಗುವದೆಂಬ ಭಾವವು.

ಶ್ರೀ ಭಾಷ್ಯಕಾರರೂ ಸಹ (೧) "ಭಗವನ್ನಾರಾಯಣ", ಎಙ್ಗಿರ **ನೇರಿಲೇ**-ಎನ್ನುವ ಸ್ಥಳದಲ್ಲಿ, **"ಭಗವತೀಂ ಶ್ರಿಯಮ್"**-ಭಗವಂತನಿಗೆ ಅನುರೂಪವಾದ ಅಥವಾ ಸಮನಾದ ಸ್ವರೂಪರೂಪಗುಣವಿಭವೈಶ್ವರ್ಯಾದಿಗಳ ಸಂಬಂಧವುಳ್ಳ ಲಕ್ಷ್ಮಿಯನ್ನು **ಎನ್ರರುಳಿಚ್ಚೆಯ್‌ದಾರ್**-ಎಂದು ಕೃಪಯಾ ಅಪ್ಪಣೆ ಕೊಡಿಸಿರುತ್ತಾರೆ. ಆ ಪೂರಾವಾಕ್ಯವು ಯಾವುದೆಂದರೆ—**"ಭಗವನ್ನಾರಾಯಣಾಭಿಮತಾನುರೂಪ ಸ್ವರೂಪರೂಪ ಗುಣವಿಭವೈಶ್ವರ್ಯ ಶೀಲಾದ್ಯನವಧಿಕಾತಿಶಯ ಅಸಂಖ್ಯೇಯ ಕಲ್ಯಾಣಗುಣಗಣಾಂ, ಪದ್ಮವನಾಲಯಾಂ ಭಗವತೀಂ ಶ್ರಿಯಂ ದೇವೀಂ ನಿತ್ಯಾನಪಾಯಿನೀಂ ನಿರವದ್ಯಾಂ ದೇವದೇವದಿವ್ಯಮಹಿಷೀಮಖಿಲ ಜಗನ್ಮಾತರಮಸ್ಮನ್ಮಾತರಮ್ ಅಶರಣ್ಯಶರಣ್ಯಾಮನನ್ಯಶರಣಃ ಶರಣಮಹಂ ಪ್ರಪದ್ಯೇ"** ಎಂಬುದು. ಈ ಶರಣಾಗತಿ ಗದ್ಯದಲ್ಲಿ ಅನುಷ್ಠಾನಮಂತ್ರವಾದ ದ್ವಯದ ವಿವರಣೆ ಎಂದು ಹಿಂದೆಯೇ ಉಪಪಾದಿಸಿರುವದಕ್ಕನುಗುಣವಾಗಿ ಮೊದಲು ಮಂತ್ರದ ಶ್ರೀಮಚ್ಛಬ್ದಾರ್ಥದ ವಿವರಣೆಗಾಗಿ ಲಕ್ಷ್ಮಿಯ ಸ್ವರೂಪ ರೂಪ ಗುಣ ವಿಭವೈಶ್ವರ್ಯವೆಲ್ಲಾ ನಾರಾಯಣನಿಗೆ ಸಮಾನವಾಗಿರುವದೆಂದು ಹೇಳಿ, ಆಕೆಯೂ ಪರಮಾತ್ಮನ ಹಾಗೆಯೇ ಸಿದ್ಧೋಪಾಯಳೆಂಬ ಭಾವವನ್ನು ಸೂಚಿಸಿ, ಸಾಧ್ಯೋಪಾಯದಲ್ಲೂ ಲಕ್ಷ್ಮಿಯೂ ಸಹ ಉದ್ದೇಶ್ಯಳೆಂದು ತೋರಿಸುವದಕ್ಕಾಗಿ ಪ್ರಥಮತಃ ಶ್ರೀ ಶರಣಾಗತಿಯನ್ನು ಅನುಷ್ಠಿಸಿರುತ್ತಾರೆ. **ಭಗವನ್ನಾರಾಯಣ**-ಹೇಯ ಪ್ರತ್ಯನೀಕನಾಗಿ ಕಲ್ಯಾಣಗುಣಾಕರನಾಗಿರುವ ಸರ್ವಕ್ಕೂ ಆದಿಕರ್ತಾವಾಗಿ ಸರ್ವಾಧಾರನಾಗಿ ಸತ್ತಾದಾಯಕನಾಗಿ ಸಮಸ್ತವನ್ನೂ ಶರೀರವಾಗಿ ಹೊಂದಿ, ಅವುಗಳಿಗೆಲ್ಲಾ ಆತ್ಮವಾಗಿ, ಸರ್ವಕ್ಕೂ ನಿಯಾಮಕನಾಗಿರುವದರಿಂದ ನಾರಾಯಣಶಬ್ದವಾಚ್ಯನಾದ ತನ್ನ ಪತಿಗೆ, **ಅಭಿಮತಾನುರೂಪ**-ಅಭಿಮತಕ್ಕೆ ಅನುಗುಣವಾದ, **ಸ್ವರೂಪ ರೂಪ**ವೆಂದರೆ ದಿವ್ಯಮಙ್ಗಳವಿಗ್ರಹ, **ಗುಣ**-ಕಲ್ಯಾಣಗುಣಗಣ, **ವಿಭವ**-ನಿಯಾಮ್ಯ

---

(೧) ಶರಣಾಗತಿಗದ್ಯ.

ವರ್ಗ, **ಐಶ್ವರ್ಯ ಶೀಲ ಆದಿ**-ಮೊದಲಾದ ಅವಧಿಯಿಲ್ಲದ ಅತಿಶಯವುಳ್ಳ ಅಸಂಖ್ಯೇಯಗಳಾದ ಕಲ್ಯಾಣಗುಣಾಕರಳನ್ನು, **ಪದ್ಮವನಾಲಯಾಂ**-ಕಮಲಪುಷ್ಪದ ವನವನ್ನೇ ಮನೆಯಾಗಿ ಮಾಡಿಕೊಂಡಿರುವ, **ಭಗವತೀಂ**-ಭಗವಂತನಿಗೆ ಪತ್ನಿಯಾಗಿರಲು ಯೋಗ್ಯಳು, ಹೇಗೆಂದರೆ--ಆತನು ಹೇಗೆ ಹೇಯಪ್ರತ್ಯನಾಗಿ ಕಲ್ಯಾಣ ಗುಣ ಮಹೋದಧಿಯೋ, ಹಾಗೆಯೇ ಇವಳೂ ಎಂಬರ್ಥವು, ಇಂತಹ ಲಕ್ಷ್ಮಿಯನ್ನು, ಇನ್ನು ಇವಳು ಎಂತವಳು ? ಎಂದರೆ, **ದೇವೀಂ**-ಲೀಲಾವಿಭೂತಿಯಲ್ಲಿ ದೇವನಾದ ಸರ್ವೇಶ್ವರನೊಂದಿಗೆ ಕ್ರೀಡಿಸಲು ಯೋಗ್ಯಳು, ಅಥವಾ ಆತನಹಾಗೆಯೇ ವಿಶೇಷ ತೇಜೋಮಯಳು, **ನಿತ್ಯಾನಪಾಯಿನೀಂ**-ಭಗವಂತನಿಗೆ ಅಪೃಥಕ್ಸಿದ್ಧ ವಿಶೇಷಣಳಾಗಿ ಯಾವಾಗಲೂ ಎಲ್ಲಾ ಪ್ರದೇಶದಲ್ಲೂ ಎಲ್ಲಾ ವ್ಯಾಪಾರಯುಕ್ತವಾದ ಅವಸ್ಥೆಗಳಲ್ಲೂ ಆತನೊಂದಿಗೆ ಸಂಶ್ಲೇಷಿಸಿಕೊಂಡಿರುವ, **ನಿರವದ್ಯಾಂ**-ಹೇಯ ಪ್ರತ್ಯನೀಕಳಾಗಿ ನಿರ್ದುಷ್ಟಳಾಗಿರುವ, ದೇವದೇವನಿಗೆ ದಿವ್ಯಪಟ್ಟಮಹಿಷಿಯಾಗಿರುವ, **ಅಖಿಲ ಜಗನ್ಮಾತರಮ್**-ಸಕಲ ಲೋಕಕ್ಕೂ ತಾಯಿಯಾಗಿ ರಕ್ಷಕಳಾಗಿರುವ, **ಅಸ್ಮನ್ಮಾತರಮ್**-ನನಗೂ ರಕ್ಷಕಳಾಗಿ ತಾಯಿಯಾಗಿರುವ, **ಅಶರಣ್ಯಶರಣ್ಯಾಂ**-ಬೇರೆ ರಕ್ಷಕರಿಲ್ಲದೆ ನಿರ್ಗತಿಕರಾಗಿರುವವರಿಗೆಲ್ಲಾ ಶರಣ್ಯಳಾದ ಇಂತಹ ಮಹಾಲಕ್ಷ್ಮಿಯನ್ನು, **ಅಹಂ**-ನಿರ್ಗತಿಕನಾದ ನಾನು, **ಶರಣಂ**-ಉಪಾಯವನ್ನಾಗಿ, **ಪ್ರಪದ್ಯೇ**-ಹೊಂದಿರುತ್ತೇನೆ—ಎಂದರೆ ಆಕೆಯೇ ಭಗವಂತನೊಂದಿಗೆ **ಉಪಾಯೋಪೇಯ**ವೆಂಬದಾಗಿ ಶರಣಾಗತಿಯನ್ನು ಅನುಷ್ಠಿಸಿರುತ್ತೇನೆಂಬ ಭಾವವು. ಈ ವಾಕ್ಯದಲ್ಲಿರುವ ಅಭಿಪ್ರಾಯಗಳನ್ನೆಲ್ಲಾ ಶ್ರೀ ದೇಶಿಕವರ್ಯರು ಅವರು ಬರೆದಿರುವ ಶ್ರೀಮದ್ರಹಸ್ಯರಕ್ಷೆಯೆಂಬ ವ್ಯಾಖ್ಯಾನದಲ್ಲಿ ನಿಪುಣತರವಾಗಿ ಉಪಪಾದಿಸಿರುತ್ತಾರೆ. ಇಬ್ಬರ ಸ್ವರೂಪ ರೂಪ ಗುಣ ವಿಭವಾದಿಗಳೂ ಅನುಗುಣವಾಗಿ ಸಮವೆಂಬ ಭಾವವನ್ನೇ **ಭಗವನ್ನಾರಾಯಣ** ಮತ್ತು **ಭಗವತೀಂ ಶ್ರಿಯಮ್** ಎಂಬ ಪ್ರಯೋಗಗಳೇ ಸೂಚಿಸುತ್ತವೆ ಎಂಬ ತಾತ್ಪರ್ಯವು. ಗ್ರಂಥವಿಸ್ತರ ಭಯದಿಂದ ಇಲ್ಲಿ ಅವುಗಳನ್ನೆಲ್ಲಾ ಬರೆಯಲು ಯತ್ನಿಸಲಿಲ್ಲವು. ಈ ಅಭಿಪ್ರಾಯವೇ ವಿಷ್ಣು ವೈಭವದಲ್ಲಿ,

**'ತ್ವಂ ಯಾದೃಶೋಽಸಿ ಕಮಲಾಮಪಿ ತಾದೃಶೀನ್ತೇ ।**
**ದಾರಾನ್ ವದನ್ತಿ ಯುವಯೋರ್ನತು ಭೇದಗಂಧಃ ॥** – ಎಂದು

ಹೇಳಲ್ಪಟ್ಟಿರುತ್ತದೆ. ಹಾಗೆಯೇ ಮಹರ್ಷಿಯೂ,

ತುಲ್ಯಶೀಲವಯೋವೃತ್ತಾಂ ತುಲ್ಯಾಭಿಜನಲಕ್ಷಣಾಂ ।
**ರಾಘವೋಽರ್ಹತಿ ವೈದೇಹೀಂ ತಂ ಚೇಯಮಸಿತೇಕ್ಷಣಾಮ್**

ಎಂದು ಹೇಳಿರುತ್ತಾರೆ. **'ವಿಷ್ಣುಮನೋಽನುಕೂಲೇ'** ಎಂದು ಶ್ರೀಸೂಕ್ತದಲ್ಲೂ, 'ವಿಷ್ಣೋಃಶ್ರೀರನಪಾಯಿನೀ । ಯಥಾ ಸರ್ವಗತೋ ವಿಷ್ಣುಃ ತಥೈವೇಯಂ ದ್ವಿಜೋತ್ತಮ' 'ಸರ್ವಲೋಕಮಹೇಶ್ವರೀಂ' 'ತ್ವಯೈತ

**ಶೃಣೋತಿ ಶ್ರಾವಯತೀತಿ ವ್ಯುತ್ಪತ್ತ್ಯಾ ವಿವಕ್ಷಿತಾರ್ಥಮಾಹ ||**

---

**'ಶೃಣೋತಿ ಶ್ರಾವಯತಿ' ಎಙ್ಗಿರ ವ್ಯುತ್ಪತ್ತಿಗಳಿಲ್ ಸಾಪರಾಧರಾನ ಅಡಿಯೋಙ್ಗಳೈ ಸರ್ವೇಶ್ವರನ್ ತಿರುವಡಿಗಳಿಲೇಕಾಟ್ಟಿಕ್ಕೊಡುತ್ತರುಳವೇಣು ಮೆನ್ರಿಪ್ಪೊಡ್ಳೈಗಳಿಲೇ ಆಶ್ರಿತರುಡೈಯ ಆರ್ತ್ತಧ್ವನಿಯೈ ಕ್ಕೇಟ್ಟು ಸರ್ವೇಶ್ವರ ನಕ್ಕು ವಿಣ್ಣಪ್ಪಂ ಶೆಯ್ದು ಇವರುಗಳುಡೈಯ್ಯ ಅರ್ತ್ತಿಯೈ ಶಮಿಪ್ಪಿಕ್ಕುಮೆನ್ರ ದಾಮ್.**

---

**ದ್ವಿಷ್ಣುನಾಚಾಂಬ ಜಗದ್ವ್ಯಾಪ್ತಂ ಚರಾಚರಮ್' 'ಅವತಾರಂ ಕರೋತ್ಯೇಷಾ ತದಾಶ್ರೀ ತತ್ಸಹಾಯಿನೀ'** ಎಂದು ವಿಷ್ಣುಪುರಾಣದಲ್ಲೂ ಇವೆ.

**ಶೃಣೋತಿ ಶ್ರಾವಯತಿ** ಎಂಬ ಕ್ರಿಯಾಪದಗಳಲ್ಲಿ ತೋರುವ ಅನೇಕಾರ್ಥ ಗಳನ್ನು ಹೇಳುತ್ತಾರೆ.

---

೧. ಹಿಂದೆ **"ಶ್ರೀಯತೇ"** ಎಂಬ ಕರ್ಮಣ್ಯುತ್ಪತ್ತಿಯಿಂದ ಕರ್ತೃಭೇದ ದಿಂದಲೂ, **ಶ್ರಯತೇ** ಎಂಬಲ್ಲಿ ಕರ್ತರಿವ್ಯುತ್ಪತ್ತಿಯಿಂದ ಕರ್ಮಭೇದದಿಂದಲೂ ಉಂಟಾಗುವ ಅರ್ಥಗಳನ್ನು ಉಪಪಾದಿಸಿದರು. ಅವು ಯಾವುವೆಂದರೆ,— **ಶ್ರೀಯತೇ** ಎಂಬುದರಿಂದ (೧) ತಮ್ಮಗಳ ರಕ್ಷಣೆಗಾಗಿ ಎಲ್ಲಾ ಜೀವಾತ್ಮರಿಂದಲೂ ಆಶ್ರಯಿಸಲ್ಪಡುವಳು ಉಪಾಯಭೂತಳೆಂಬ ಭಾವದಿಂದ (೨) ತನ್ನ ಪತಿಗೆ ಹೇಳಿ ರಕ್ಷಿಸಲಿ ಎಂದು ಪುರುಷಕಾರಭಾವನೆಯಿಂದ ಪ್ರಪನ್ನರಿಂದ ಆಶ್ರಯಿಸಲ್ಪಡುವಳು. **ಶ್ರಯತೇ**-ಎಂಬುದರಿಂದ (೧) ಎಲ್ಲರೂ ಈಕೆಯನ್ನು ಸ್ವರಕ್ಷಣೆಗಾಗಿ ಸೇವಿಸುವರು. (೨) ಭಗವಂತನನ್ನು ತಾನೇ ಆಶ್ರಯಿಸಿ ತನ್ನ ವಾಲ್ಲಭ್ಯಾತಿಶಯದಿಂದ ಪುರುಷಕಾರ ರೂಪದಲ್ಲಿ ರಕ್ಷಿಸುವವಳು ಎಂಬದಾಗಿ. ಈಗಲಾದರೋ ಶೃಣೋತಿ ಶ್ರಾವಯತಿ ಎಂಬ ಧಾತುಗಳ ಮೂಲಕ ತೋರಿ ಬರುವ ಶ್ರೀ ಶಬ್ದಾರ್ಥಗಳನ್ನು ಉಪಪಾದಿಸಿ ಹೇಳುತ್ತಾರೆ. **'ಶೃಣೋತಿ**-ತಾನೇ ಕೇಳುತ್ತಾಳೆ, **ಶ್ರಾವಯತಿ'**-ಕೇಳುವಹಾಗೆ ಮಾಡುತ್ತಾಳೆ, **ಎಙ್ಗಿರ ವ್ಯುತ್ಪತ್ತಿಗಳಿಲ್**-ಎನ್ನುವ, ಶ್ರು ಶ್ರವಣೇ ಎಂಬ ಧಾತುವಿನಿಂದ ವ್ಯುತ್ಪತ್ತಿ ಹೊಂದಿದ ಕ್ರಿಯಾಪದಗಳಲ್ಲಿ, **ಸಾಪರಾಧರಾನ**-ಅಪರಾಧಗಳಿಂದ ಕೂಡಿದ **ಅಡಿಯೋಙ್ಗಳೈ**-ದಾಸಭೂತರಾದ ನಮ್ಮನ್ನು, **ಸರ್ವೇಶ್ವರನ್ ತಿರುವಡಿಗಳಿಲೇ**-ಸರ್ವೇಶ್ವರನ ಪಾದಗಳಲ್ಲಿ, **ಕಾಟ್ಟಿಕೊಡುತ್ತರುಳವೇಣುಮ್**-ತೋರಿಸಿ ಸಮರ್ಪಿಸಿ ಕೃಪೆಮಾಡಬೇಕು, **ಎನ್ರಿಪ್ಪೊಡ್ಳೈಗಳಿಲೇ**-ಎನ್ನುವ ಸಂದರ್ಭವಲ್ಲಿ, ಎನ್ನುವ ಸ್ಥಳದಲ್ಲಿ, **ಆಶ್ರಿತರ, ಆರ್ತಧ್ವನಿಯೈ**-ತನಗಿನ್ಯಾರೂ ಗತಿಯಿಲ್ಲವೆಂಬ ದೀನ ಧ್ವನಿಯನ್ನು, **ಕೇಟ್ಟು**-ಲಕ್ಷ್ಮಿಯಾದ ತಾನು ಕೇಳಿ, **ಸರ್ವೇಶ್ವರನುಕ್ಕು ವಿಣ್ಣಪ್ಪಂಶೆಯ್ದು**-ಗಜೇಂದ್ರನ ವಿಷಯದಲ್ಲಿ ಆತನ ಆರ್ತಧ್ವನಿಯನ್ನು ಸರ್ವೇ

**ಇಪ್ಪಡಿ ಪುರುಷಕಾರಕೃತ್ಯತ್ತೈ ಶೊಲ್ಲುಗಿರವಿಡುಕ್ಕುಂ ಪುರುಷಕಾರ ಭಾವತ್ತಿಲೇನೋಕ್ಕು.**

**ಯೋಜನಾಂತರಮಾಹ**

**(೧) 'ಮತ್ಪದದ್ವಂದ್ವಮೇಕಂ ಯೇ ಪ್ರಪದ್ಯನ್ತೇ ಪರಾಯಣಮ್ । ಉದ್ಧರಿಷ್ಯಾಮ್ಯಹಂದೇವಿ ಸಂಸಾರಾತ್ಸ್ವಯಮೇವತಾನ್ ॥' (೨) 'ಅನ್ಯಶಂ**

ಶ್ವರನ ಸನ್ನಿಧಿಯಲ್ಲಿ ವಿಜ್ಞಾಪಿಸಿ, **ಇವರುಗಳುಡೈಯ ಆರ್ತ್ತಿಯೈ**-ಈ ಅನನ್ಯ ಗತಿಕರ ದೈನ್ಯಾವಸ್ಥೆಯನ್ನು, **ಶಮಿಪ್ಪಿಕ್ಕುಮ್**-ಲಕ್ಷ್ಮಿಯು ಶಮನಮಾಡುವಳು, **ಎನ್ರದಾಮ್**-ಎಂದು ಹೇಳಿದಂತಾಗುವದು. ತನ್ನನ್ನು ಆಶ್ರಯಿಸಿದವರ ದೀನ ಪ್ರಾರ್ಥನೆಯನ್ನು ಕೇಳಿ ಅದನ್ನು ಸರ್ವೇಶ್ವರನಿಗೆ ತಿಳಿಸಿ, ಅವರ ಆರ್ತಿಯನ್ನು ಪರಿಹರಿಸುವಳೆಂಬ ಭಾವವು. **'ಶೃಣೋತಿ ಭಕ್ತಾರ್ತಿರವಂ ಶ್ರಾವಯತ್ಯಮುಮಚ್ಯುತಮ್'** ಎಂಬ ವಚನವನ್ನು ಈ ಸಂದರ್ಭದಲ್ಲಿ ನಾರಾಸ್ವಾದಿಸಿಯವರು ಉದಾಹರಿಸಿರುತ್ತಾರೆ. ಇದರಿಂದಲೂ ಲಕ್ಷ್ಮಿಯ ಪುರುಷಕಾರಭಾವವೇ ಉಪಪಾದಿತವೆಂದು ಮುಂದಿನವಾಕ್ಯದಿಂದ ತಿಳಿಸುತ್ತಾರೆ. **ಇಪ್ಪಡಿ**-ಈ ರೀತಿಯಲ್ಲಿ, **ಪುರುಷಕಾರಕೃತ್ಯತ್ತೈ**-ಭಕ್ತನ ಆರ್ತಧ್ವನಿಯನ್ನು ತಾನು ಕೇಳಿ, ಅದನ್ನು ತನ್ನ ಪತಿಯೂ ಕೇಳುವಹಾಗೆ ಮಾಡಿದ ಪುರುಷಕಾರರೂಪ ಕಾರ್ಯವನ್ನು, **ಶೊಲ್ಲುಗಿರವಿಡುಕ್ಕುಮ್**-ಹೇಳುವ ಇದಕ್ಕೂ ಸಹ, **ಪುರುಷಕಾರಭಾವತ್ತಿಲೆ**-ಆ ಆರ್ತ್ತಧ್ವನಿಯನ್ನು ಕೇಳು ಎಂದು ಇಷ್ಟು ಮಾತ್ರವೇ ಹೇಳಿದರೂ, ರಕ್ಷಿಸು ಎಂಬ ಪ್ರಾರ್ಥನೆ ಇಲ್ಲದಿದ್ದರೂ ಇದೂ ಕೂಡ ಪುರುಷಕಾರಭಾವದಲ್ಲೇ, **ನೋಕ್ಕು** ಮುಖ್ಯತಾತ್ಪರ್ಯವು. ರಕ್ಷಿಸು ಎಂಬ ಪ್ರಾರ್ಥನೆ ಇಲ್ಲದಿದ್ದರೂ, ಅಂತಹ ಪ್ರಾರ್ಥನೆಯನ್ನು ಮನಸ್ಸಿನಲ್ಲಿಟ್ಟುಕೊಂಡೇ, ಆ ಆರ್ತಧ್ವನಿಯನ್ನು ಕೇಳು ಎಂಬ **ಭಾವ**ದಿಂದ, **ನೋಕ್ಕು** ಎಂಬ ಪ್ರಯೋಗವು.

**ಬೇರೆ ಎರಡನೆಯ ಯೋಜನೆಯನ್ನು ಹೇಳುತ್ತಾರೆ**

(೨) ತನ್ನ ಪತಿಯು ಅನೇಕಸಲ ಆಶ್ರಿತರಕ್ಷಣೆಯ ವಿಷಯದಲ್ಲಿ ಮಾಡಿದ ಪ್ರತಿಜ್ಞೆಗಳನ್ನೇ ಆತನ ಜ್ಞಾಪಕಕ್ಕೆ ಕೊಟ್ಟು ಓ ಪತಿಯೇ, ನಿನ್ನ ಸತ್ಯಪ್ರತಿಜ್ಞೆಗೆ ಅನುಗುಣವಾಗಿ ನೀನು ನಡೆಯುವದು ಈ ಸಂದರ್ಭದಲ್ಲಿ ನ್ಯಾಯವೆಂದು **ಶ್ರಾವಯತಿ**-ಜ್ಞಾಪಕಕ್ಕೆ ತರುವಳು ಎಂಬರ್ಥವೂ ಆಗಬಹುದೆಂದು ಉಪದೇಶಿಸುತ್ತಾರೆ. ಆ ಅರ್ಥಗಳು ತೋರಿಬರುವ ಪ್ರಮಾಣಗಳನ್ನು ಮೊದಲು ಉದಾಹರಿಸುತ್ತಾರೆ. (೧) '**ಯೇ**-ಯಾವ ಪ್ರಪನ್ನರು, **ಮತ್ಪದದ್ವಂದ್ವಂ**-ನನ್ನ ಪಾದವೆರಡನ್ನೂ, **ಏಕಂ ಪರಾಯಣಮ್**-ಮುಖ್ಯವಾದ ಸಾಧನ, ಗತಿ, ಪ್ರಾಪ್ತಿ ಎಂದು, **ಪ್ರಪದ್ಯನ್ತೇ**-ಶರಣಾಗತಿಯ ಮೂಲಕ ಆಶ್ರಯಿಸುತ್ತಾರೋ, **ಹೇ**

(೧) ವರಾಹಪುರಾಣಂ. (೨) ರಾ. ಸುಂದರ ೩೮-೩೯.

**ಸ್ಯಂ ಪರೋಧರ್ಮಃ' ಇತ್ಯಾದಿಗಳ್ಳೈಯರ್ವ ಪಕ್ಕಲಿಲೇಕೇಟ್ಟು (೩) 'ಶ್ರುಣು ಚಾವಹಿತಃ ಕಾಂತ ಯತ್ತೇ ವಕ್ಷ್ಯಾಮ್ಯಹಂಹಿತಮ್ । ಪ್ರಾಣೈರಪಿ ತ್ವಯಾ ನಿತ್ಯಂ ಸಂರಕ್ಷ್ಯಶ್ಶರಣಾಗತಃ' ಎನ್ರು ಕಪೋತತ್ತೈ ಕಪೋತಿ ಕೇಳ್ ಪಿತ್ತಾರ್‌ಪೋಲೇ ಅವಸರತ್ತಿಲೇ ಕೇಳ್‌ಪ್ಪಿಕ್ಕುಮ್ ಎನ್ನವುಮಾಮ್.**

**ದೇವಿ**-ಓ ಲಕ್ಷ್ಮಿಪ್ರಿಯೇ, **ಅಹಂ**-ಶರಣಾಗತವತ್ಸಲನಾದ ನಾನು, **ಸಂಸಾರಾತ್**-ಈ ಸಂಸಾರಬಂಧದಿಂದ, **ಸ್ವಯಮೇವ**-ನಾನೇ, **ತಾ**-ಅಂತಹ ಪ್ರಪನ್ನರನ್ನು, **ಉದ್ಧರಿಷ್ಯಾಮಿ**-ಕೈಹಿಡಿದೆತ್ತಿ ರಕ್ಷಿಸುವೆನು', (೨) **'ಆನೃಶಂಸ್ಯಂ ಪರೋ ಧರ್ಮಃ'** ಎಂಬ ಪೂರಾ ಶ್ಲೋಕವು ಯಾವುದೆಂದರೆ—

**ಸ ಕುರುಷ್ವ ಮಹೋತ್ಸಾಹಃ ಕೃಪಾಂ ಮಯಿ ನರರ್ಷಭ ।**
**ತ್ವಯಾನಾಥವತೀ ನಾಥ ಹ್ಯನಾಥಾ ಇವದೃಶ್ಯತೇ ।**
**ಆನೃಶಂಸ್ಯಂ ಪರೋಧರ್ಮಸ್ತ್ವತ್ತಏವ ಮಯಾ ಶ್ರುತಃ ॥**

ಆಂಜನೇಯನನ್ನು ಕುರಿತು ಸೀತಾವಾಕ್ಯವು. ಶ್ರೀರಾಮಚಂದ್ರನನ್ನು ಕುರಿತು ಹೀಗೆ ಹೇಳಿದೆನೆಂದು ತಿಳಿಸು ಎಂದು ಹೇಳುವ ಸಂದರ್ಭವು.—**ಹೇ ನರರ್ಷಭ**-ಓ ಪುರುಷಶ್ರೇಷ್ಠನೇ, **ಸಃ ಮಹೋತ್ಸಾಹಃ**-ಅಂತಹ ದೀನರಲ್ಲಿ ವಾತ್ಸಲ್ಯ ಯುಕ್ತನಾಗಿ ಆಶ್ರಿತರಕ್ಷಣೆಯಲ್ಲಿ ತುಂಬಾ ಉತ್ಸಾಹವುಳ್ಳವನಾಗಿ ರಾಮನಾದ ನೀನು, **ಮಯಿ**-ತುಂಬಾ ದೈನ್ಯವನ್ನು ಹೊಂದಿ ನಿನ್ನ ಪತ್ನಿಯಾಗಿರುವ ನನ್ನಲ್ಲಿ, **ಕೃಪಾಂಕುರುಷ್ವ**-ಈ ರಾಕ್ಷಸಬಾಧೆಯನ್ನು ಬಿಡಿಸಿ ರಕ್ಷಿಸುವ ಕೃಪೆಯನ್ನು ಮಾಡತಕ್ಕದ್ದು; **ತ್ವಯಾ**-ನಿನ್ನಿಂದಲ್ಲವೇ, **ನಾಥವತೀ**-ನಾನು ಸ್ವಾಮಿ ಯುಕ್ತಳು, ಅಂತವಳೀಗ, **ಅನಾಥೈವ**-ಅನಾಥಳಹಾಗೆ, **ದೃಶ್ಯತೇಹಿ**-ತೋರುವೆ ನಲ್ಲವೇ, ನೀನು ಮಹೋತ್ಸಾಹನಾಗಿ ಇರುವಾಗಲೂ ನಾನು ಅನಾಥಳಾಗಿರು ವದು ನ್ಯಾಯವೇ? ಹಾಗಿದ್ದರೆ ನೀನು **ನರರ್ಷಭ**ನಲ್ಲವೋ? ಅದು ನಿನ್ನ ನರರ್ಷಭನೆಂಬ ಯಶಸ್ಸಿಗೆ ಕುಂದಕವಲ್ಲವೋ ?—**ಆನೃಶಂಸ್ಯಂ**-ಭಕ್ತರ ದುಃಖ ವನ್ನು ಸಹಿಸಲಾರದಿರೋಣವು, **ಪರೋಧರ್ಮಃ**-ಸರ್ವೋತ್ಕೃಷ್ಟಧರ್ಮವು, ಅದು ನನ್ನ ಪ್ರತಿಜ್ಞೆ ಎಂದು, **ತ್ವತ್ತಏವ**-ಇತರರ ಮೂಲಕವಾಗಿಯಲ್ಲದೆ ಸಾಕ್ಷಾತ್ತಾಗಿ ನಿನ್ನಿಂದಲೇ, **ಮಯಾ**-ನನ್ನಿಂದ, **ಶ್ರುತಃ**-ಕೇಳಲ್ಪಟ್ಟಿತು. ದೀನನಾದ ಭಕ್ತನು ಕಷ್ಟದಿಂದ ಶೋಕಿಸಿದರೆ ಅದನ್ನು ನೀನು ಎಂದಿಗೂ ಸಹಿಸುವನಲ್ಲವೆಂದು ನೀನೇ ನನಗೆ ಸಾಕ್ಷಾತ್ತಾಗಿ ನಿನ್ನ ಪ್ರತಿಜ್ಞೆಯನ್ನು ತಿಳಿಸಿರುತ್ತೀಯೇ; ನಿನ್ನಿಂದಲ್ಲವೇ ನಾನು ನಾಥವತಿಯು; ಅಂತವಳು ಈಗ ಅನಾಥಳಾಗಿ ದುಃಖಿಸುತ್ತಿರುವದು ನ್ಯಾಯವೇ? ಹೀಗಿರುವಾಗ ನೀನು ತಟಸ್ಥನಾಗಿರುವದು ಪುರುಷೋತ್ತಮನಾದ ನಿನಗೆ ಉಚಿತವೋ? ಎಂದು ಕೇಳಿದೆನೆಂದು ಶ್ರೀರಾಮಚಂದ್ರ ಪ್ರಭುವಿಗೆ ತಿಳಿಸು

(೨) ರಾ. ಸುಂದರ. ೩೮-೩೯. (೩) ಇತಿ. ಸಮು. ೧೨-೫೧.

## ತೃತೀಯ ಯೋಜನ ಮಾಹ

**ಸರ್ವೇಶ್ವರರ್ಕ್ ಪಕ್ಕಲಿಲೇ ಲೋಕಹಿತತ್ತೈ ಕ್ಕೇಟ್ಟು (೪) 'ಮಿತ್ರಮೌಪ ಯಿಕಂ ಕರ್ತುಮ್' ಇತ್ಯಾದಿಗಳಿರ್ಪಡಿಯೇ ವಿಪರೀತರ್ಕ್ಕೈಯುಮ್ ಕೂಡ ಕೇಳಪ್ಪಿಕ್ಕು ಮೆನ್ನವುಮಾಮ್.**

ಎಂದು ಹೇಳಿ ಕಳುಹಿಸುತ್ತಾಳೆ." ಇತ್ಯಾದಿ **ಗಳೈ**-ಇಂತಹ ಸತ್ಯಪ್ರತಿಜ್ಞೆಗಳನ್ನು, **ಅವರ್ಕ್ ಪಕ್ಕಲಿಲೇಕೇಟ್ಟು**-ಪತಿಯಾದ ಆತನ ಸಮ್ಮುಖದಲ್ಲಿ ಕೇಳಿ, (೩) ಇದು ಹೆಣ್ಣುಕಪೋತವು ತನ್ನ ಗಂಡಸಿಗೆ ಹೇಳುವ ವಾಕ್ಯವು. '**ಹೇ ಕಾಂತೆ**-ಓ ಮನೋಹರನಾದ ಪತಿಯೇ, **ತೇ**-ನಿನಗಾಗಿ, **ಅಹಂ**-ನಾನು, **ಯತ್‌ಹಿತಂ**-ಯಾವ ಹಿತವಾದುದನ್ನು, **ವಕ್ಷ್ಯಾಮಿ**-ಹೇಳುವೆನೋ, **ತತ್**-ಅದನ್ನು, **ಅವ ಹಿತಃ**-ಸಾವಧಾನ ಮನಸ್ಕನಾಗಿ, **ಶ್ರುಣು**-ಕೇಳು, **ಶರಣಾಗತಃ**-ರಕ್ಷಿಸು ಎಂದು ಶರಣಾಗತನಾಗಿ ಬಂದವನು, **ತ್ವಯಾ**-ನಿನ್ನಿಂದ, **ನಿತ್ಯಂ**-ಸದಾ, **ಪ್ರಾಣೈರಪಿ**-ಪ್ರಾಣಕ್ಕಿಂತಲೂ, ಅಧಿಕನೆಂದು ಭಾವಿಸಿ, **ಸಂರಕ್ಷ್ಯಃ**-ಚೆನ್ನಾಗಿ ರಕ್ಷಿಸಲ್ಪಡ ತಕ್ಕವನು" **ಎನ್ರು**-ಎಂಬದಾಗಿ, **ಕಪೋತತ್ತೈ**-ತನ್ನ ಭರ್ತಾವಾದ ಕಪೋತ ವನ್ನು ಕುರಿತು, **ಕಪೋತಿ**-ಹೆಣ್ಣು ಕಪೋತವು, **ಕೇಳ್‌ಪಿತ್ತಾರ್‌ಪೋಲೇ**-ಕೇಳುವಹಾಗೆ ಮಾಡಿದ ರೀತಿಯಲ್ಲಿ ಎಂದರೆ ಹೇಳಿದ ರೀತಿಯಲ್ಲಿ; ಧರ್ಮವನ್ನು ಜ್ಞಾಪಿಸಿದ ರೀತಿಯಲ್ಲಿ ಎಂಬರ್ಥವು, **ಅವಸರತ್ತಿಲೇ**-ಒಳ್ಳೇ ಸಮಯದಲ್ಲಿ, **ಕೇಳ್‌ಪ್ಪಿಕ್ಕುಂ**-ಲಕ್ಷ್ಮಿಯೂ ಸಹ ತನ್ನ ಗಂಡನು ತನ್ನ ಪ್ರತಿಜ್ಞೆಯನ್ನೇ ಕೇಳುವಹಾಗೆ ಮಾಡುವಳು ಎಂದರೆ ಜ್ಞಾಪಕಕ್ಕೆ ತರುವಳು, ಇದೂ **ಶ್ರಾವಯತಿ** ಎಂಬುದರಿಂದ ತೋರಿಬರುತ್ತದೆ ಎಂಬ ಭಾವವು.

ಮೂರನೆಯ ಯೋಜನೆಯನ್ನು ತಿಳಿಸುತ್ತಾರೆ

೩. **ಶ್ರುಣೋತಿ**-ಎಂದರೆ ಕೇಳುತ್ತಾಳೆ, **ಶ್ರಾವಯತಿ**-ಎಂದರೆ ಕೇಳುವ ಹಾಗೆ ಮಾಡುತ್ತಾಳೆಂಬ ಅರ್ಥವಾಗುವದರಿಂದ ಲೋಕಹಿತವು ಯಾವುದೆಂಬು ದನ್ನು ತನ್ನ ಪತಿಯಿಂದ **ಕೇಳಿ ತಿಳಿದು,** ಸಾಧುಗಳಲ್ಲದ ದುಷ್ಟರೂ ಕೂಡ ಅದನ್ನು **ಕೇಳುವಹಾಗೆ ಮಾಡುವವಳು** ಎಂಬರ್ಥವೂ ಉಂಟಾಗುತ್ತದೆಂದು ಉಪದೇಶಿಸುತ್ತಾರೆ. ಇದರಿಂದ ಲಕ್ಷ್ಮಿಯ ಅನುಗ್ರಹಮಯತ್ವವು ಉಪಪಾದಿ ತವು, **ಸರ್ವೇಶ್ವರರ್ಕ್ ಪಕ್ಕಲಿಲೇ**-ಸರ್ವೇಶ್ವರನ ಮೂಲಕವಾಗಿ, **ಲೋಕಹಿತತ್ತೈ ಕೇಟ್ಟು**-ಲೋಕಹಿತವನ್ನು ಕೇಳಿ ತಿಳಿದು, '**ಮಿತ್ರಮೌಪಯಿಕಂಕರ್ತುಮ್**' **ಇತ್ಯಾದಿಗಳಿರ್‌ಪಡಿಯೇ**-ಇವೇ ಮೊದಲಾದವುಗಳಲ್ಲಿ ಹೇಳಿರುವ ಹಾಗೆ, **ವಿಪ ರೀತರ್ಕ್ಕೈಯುಮ್‌ಕೂಡ**-ಸಾಧುಗಳಲ್ಲದ ದುಷ್ಟರನ್ನೂ ಸಹ, **ಕೇಳಪ್ಪಿಕ್ಕುಮ್**-ಕೇಳುವಹಾಗೆ ಮಾಡುವಳು, ಉಪದೇಶಿಸುವಳು, **ಎನ್ನವುಮಾಮ್**-ಎಂದು

---

(೩) ಇತಿ. ಸಮು. ೧೦-೫೧. (೪) ರಾಮಾ. ಸುಂದರ ೨೧-೧೯.

ಹೇಳಿದಂತಾಗುತ್ತದೆ.—**ಮಿತ್ರಮೌಪಯಿಕಂ ಕರ್ತುಂ** ಎಂಬ ಶ್ಲೋಕವು ಯಾವುದೆಂದರೆ— **'ಮಿತ್ರಮೌಪಯಿಕಂ ಕರ್ತುಂ ರಾಮಸ್ಸ್ಥಾನಂ ಪರೀಪ್ಸತಾ ।**
**ವಧಂ ಚಾನಿಚ್ಛತಾ ಘೋರಂ ತ್ವಯಾಸೌ ಪುರುಷರ್ಷಭಃ'** ॥

ಇದು ಮರುಳ ರಾವಣನನ್ನು ಕುರಿತು ಸೀತೆಯು ಅಮೋಘವಾದ ಉಪದೇಶವನ್ನು ಮಾಡುವ ಸಂದರ್ಭವು. ಓ ಮಹಾಪರಾಧಿಯಾದ ರಾವಣನೇ, **ಸ್ಥಾನಂ**-ಲಂಕಾ ಸಾಮ್ರಾಜ್ಯ ಪದವಿಯನ್ನು, **ಪರೀಪ್ಸತಾ**-ಬಹುಕಾಲ ಚನ್ನಾಗಿ **ಅನುಭವಿಸಬೇಕೆಂಬ** ಆಶೆಯುಳ್ಳ, **ತ್ವಯಾ**-ನಿನ್ನಿಂದ, ವನಚಾರಿಯಾದ ರಾಮಚಂದ್ರನೊಂದಿಗೆ ಸ್ನೇಹವನ್ನು ಸಾರ್ವಭೌಮನಾದ ನಾನು ಎಂದಿಗಾದರೂ ಪ್ರಾರ್ಥಿಸುವನೇ, ಅದಕ್ಕಿಂತ ಮರಣವಾದರೂ ಲೇಸು ಎನ್ನುವೆಯೋ, ಆಗಲೂ ಕೂಡ ನೆಮ್ಮದಿಯಾಗಿ ಮರಣವನ್ನು ಹೊಂದಲಾರೆ, ಘೋರರೂಪವಾದ ಮರಣವು ನಿನಗೆ ಪ್ರಾಪ್ತವಾದೀತು, ಆದುದರಿಂದ, **ಘೋರಂವಧಂ ಅನಿಚ್ಛತಾ ತ್ವಯಾ**-ಘೋರರೂಪವಾದ ವಧೆಯನ್ನು ಅಪೇಕ್ಷಿಸದೇ ಇರುವ ನಿನ್ನಿಂದ, ನೀನು ಸ್ನೇಹಮಾಡಿಕೊಳ್ಳದೇ ಹೋದರೆ ಘೋರರೂಪವಧೆಯು ನಿನಗೆ ತಪ್ಪಿದ್ದಲ್ಲವೆಂದು ಸೂಚಿತವು, **ಅಸೌ ರಾಮಃ**-ಶತ್ರುಗಳೂ ಕೂಡ ಆಶ್ರಯಿಸಿದರೂ ರಕ್ಷಿಸುವೆನೆಂಬ ವ್ರತವುಳ್ಳ ಈ ರಾಮನು, **ಮಿತ್ರಂ ಕರ್ತುಮ್**-ಪ್ರೀತಿಯುಕ್ತ ಸ್ನೇಹಿತನನ್ನಾಗಿ ಮಾಡಿಕೊಳ್ಳುವದು, **ಔಪಯಿಕಂ**-ನ್ಯಾಯವು, ಉಚಿತವು ; ಏಕೆಂದರೆ, **'ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ'** ಎಂದು ತಾನೇ ಹೇಳಿಕೊಂಡಿರುತ್ತಾನೆ. ರಾವಣನು ಮಹಾರಾಜನಾದ ಪ್ರಯುಕ್ತ ಲೋಕನ್ಯಾಯದ ಪ್ರಕಾರ ಶತ್ರುಭಾವವಿಲ್ಲದೆ ಮಿತ್ರಭಾವದಿಂದಿರೋಣವು ನಿನಗೆ ಹಿತಕರವಾದುದೆಂಬರ್ಥವಾದರೂ ಇಲ್ಲಿಯೂ **ಮಿತ್ರ** ಶಬ್ದದಿಂದ **ಮಿತ್ರಭಾವೇನ ಸಂಪ್ರಾಪ್ತಂ** ಎಂಬಲ್ಲೂ, **'ಮಿತ್ರಸ್ಯ ಚರ್ಷಣೀ ಧೃತಃ'** ಎಂಬ ಪ್ರಾತಃಸ್ಸಂಧ್ಯೋಪಸ್ಥಾನ ಮಂತ್ರದಲ್ಲೂ ಸಹ ಸರ್ವಸ್ಯಶರಣನಾಗಿ ಸುಹೃತ್ತಾದ ಸರ್ವರಕ್ಷಕನಾದ ಪರಮಾತ್ಮನೇ ಹೇಳಲ್ಪಟ್ಟನು ; ಆದುದರಿಂದ **ಮಿತ್ರಂ ಕರ್ತುಂ**-ಸರ್ವರಕ್ಷಕನಾದುದರಿಂದ ನಿನಗೂ ರಕ್ಷಕನೆಂದು ಮಾಡಿಕೊಳ್ಳುವದಕ್ಕೆ, **ಔಪಯಿಕಂ**-ಉಚಿತವು, ಅದನ್ನು ಹೇಗೆ ದೃಢೀಕರಿಸಿ ಹೇಳುತ್ತೀಯೇ ಎಂದು ಕೇಳುತ್ತೀಯೋ, **ಅಸೌ**-ಈ ಆಶ್ರಿತರಕ್ಷಣೆಯಲ್ಲಿ ಬದ್ಧಕಂಕಣನಾದ ರಾಮನು, **ಪುರುಷರ್ಷಭಃ**-ಮಹಾ ಪುರುಷಶ್ರೇಷ್ಠನು ಎಂದು ತಿಳಿ; ಹಾಗಾದರೆ ಮಿತ್ರನಾಗಿ ಮಾಡಿಕೊಳ್ಳುವದಕ್ಕೆ ಮಾರ್ಗ ಯಾವುದು ಎಂದರೆ ಆತನಲ್ಲಿ ಮಾಡುವ ಶರಣಾಗತಿಯೇ ಎಂದು ಮುಂದೆ **'ವಿದಿತಸ್ಸಹಿ ಧರ್ಮಜ್ಞಶ್ಶರಣಾಗತವತ್ಸಲಃ । ತೇನ ಮೈತ್ರೀ ಭವತು ತೇ ಯದಿ ಜೀವಿತುಮಿಚ್ಛಸಿ'** ಎಂದು ಹೇಳುತ್ತಾಳೆ. ಆದುದರಿಂದ ಲಕ್ಷ್ಮಿಯು ತನ್ನ ಪತಿಯಾದ ನಾರಾಯಣನಿಂದ ಅಪರಾಧಿಗಳಿಗೆ ಹಿತವು ಯಾವುದೆಂಬ ಆತನ ಸಙ್ಕಲ್ಪವನ್ನು ಕೇಳಿ ತಿಳಿದು (**ಶೃಣೋತಿ** ಎಂಬುದರ ಅರ್ಥವು) ಅದನ್ನು ತನ್ನನ್ನಾಶ್ರಯಿಸಿ

## ಅಥ ಶೃಣಾತೀತಿ ಶ್ರೀರಿತಿ ವ್ಯುತ್ಪತ್ತ್ಯರ್ಥಮಾಹ

**'ಶೃಣಾತಿ ನಿಖಿಲಾನ್ ದೋಷಾನ್' ಎನ್ರು ವ್ಯುತ್ಪತ್ತಿಯಾನಪ್ಪೋದು, (೨) 'ಲಕ್ಷ್ಮ್ಯಾಸಹ ಹೃಷೀಕೇಶೋ ದೇವ್ಯಾ ಕಾರುಣ್ಯರೂಪಯಾ । ರಕ್ಷಕ ಸ್ಸರ್ವಸಿದ್ಧಾನ್ತೇ ವೇದಾನ್ತೇಪಿ ಚ ಗೀಯತೇ' (೩) 'ಪೇರಿಮಾರಾದ**

---

ದವರಿಗೆ ತಿಳಿಸುವಳು ಎಂಬ ಭಾವವು. (ಇದು **ಶ್ರಾವಯತಿ** ಎಂಬುದರ ಅರ್ಥವು.) ಲೋಕಹಿತವನ್ನು ತನ್ನ ಗಂಡನಿಂದ ಕೇಳಿ ತಿಳಿದು ಅದನ್ನು ಅಪರಾಧಿಗಳಿಗೆ ತಿಳಿಸುವಳು ಎಂಬರ್ಥವು ಬೋಧಿತವು. ಇದರಿಂದ ಲಕ್ಷ್ಮಿಯು ಕೇವಲ ಅನುಗ್ರಹಮಯಳೇ ಎಂಬುದು ಸುವ್ಯಕ್ತವು.

ಹೀಗೆ **ಶೃಣೋತಿ, ಶ್ರಾವಯತಿ** ಎಂಬುದರಿಂದ ತೋರುವ **ಶ್ರೀ** ಶಬ್ದಕ್ಕೆ ಮೂರು ವಿಧವಾಗಿ ಅರ್ಥವನ್ನು ಹೇಳಿದರು. ಮುಂದೆ **ಶೃಣಾತೀತಿ ಶ್ರೀಃ** ಎಂಬ **ವ್ಯುತ್ಪತ್ತಿ** ಮೂಲಕ ಉಂಟಾಗುವ ಅರ್ಥವನ್ನು ಉಪಪಾದಿಸುತ್ತಾರೆ.

## ಮುಂದೆ ಶೃಣಾತೀತಿ ಶ್ರೀಃ ಎಂಬುದರ ಅರ್ಥವು

**ಶೃ ಹಿಂಸಾಯಾಂ** ಎಂಬ ಧಾತುವಿನಿಂದ, **ಶೃಣಾತಿ** ಎಂದರೆ ಹಿನಸ್ತಿ-ಆಶ್ರಿತರ ದೋಷಗಳನ್ನು ನಾಶಮಾಡುವವಳು ಲಕ್ಷ್ಮಿಯು ಎಂಬರ್ಥ ಉಂಟಾಗುತ್ತ ದೆಂದು ಮುಂದಿನ ವಾಕ್ಯದಿಂದ ಸಪ್ರಮಾಣವಾಗಿ ತಿಳಿಸುತ್ತಾರೆ. ಮೊದಲು ಈ ಆರು ವಿಧ ವ್ಯುತ್ಪತ್ತಿಗಳನ್ನೂ ಬೋಧಿಸುವ ಶ್ಲೋಕಗಳಿಂದ "**ಶೃಣಾತಿ ನಿಖಿಲಾನ್ ದೋಷಾನ್**" ಎಂಬುದನ್ನು ಉದಾಹರಿಸುತ್ತಾರೆ. ಆ ಶ್ಲೋಕಗಳು ಯಾವುವೆಂದರೆ—

> **'ಶೃಣಾತಿ ನಿಖಿಲಾನ್ ದೋಷಾನ್ ಶ್ರೀಣಾತಿಚ ಗುಣೈರ್ಜಗತ್ ।**
> **ಶ್ರೀಯತೇ ಚಾಖಿಲೈರ್ನಿತ್ಯಂ ಶ್ರಯತೇ ಚ ಪರಂಪದಮ್ ।**
> **ಶ್ರಯನ್ತೀಂ ಶ್ರಿಯಮಾಣಾಂ ಚ ಶೃಣಾತೀಂ ಶೃಣ್ವತೀಮಪಿ ॥'**

**ಶೃಣಾತಿ ನಿಖಿಲಾನ್ ದೋಷಾನ್**-ಎಲ್ಲಾ ಆಶ್ರಿತರ ಎಲ್ಲಾ ಅಪರಾಧಗಳನ್ನೂ ಹೋಗಲಾಡಿಸುವಳು, **ಎನ್ರು ವ್ಯುತ್ಪತ್ತಿಯಾನಪ್ಪೋದು - ಶೃ ಹಿಂಸಾಯಾಂ** ಎಂಬ ಧಾತುವಿನಿಂದ ಉತ್ಪನ್ನವಾದ ಕ್ರಿಯಾಪದವೆಂದರ್ಥವಾದಾಗ, ನಾಶ ಮಾಡುವಳು ಎಂಬ ಅರ್ಥವಾದಾಗ ಎಂಬ ಭಾವವು, ಹೀಗೆ ಅರ್ಥವಾದಾಗ **'ಲಕ್ಷ್ಮ್ಯಾಸಹ'** ಎಂಬ ಲಕ್ಷ್ಮೀತಂತ್ರ ಶ್ಲೋಕದಲ್ಲೂ, **'ಪೇರಿಮಾರಾದ'** ಎಂಬ ನಮ್ಮಾಳ್ವಾರ್ರವರ ಪಾಶುರದಲ್ಲೂ, **ಎನ್ರುಮ್ ಶೊಲ್ಲಿಗಿರಪಡಿಯೇ-** ಎಂದು ಹೇಳಿರುವಹಾಗೆ **ಉಪಾಯಾಧಿಕಾರಿಗಳುಕ್ಕು**-ಭಕ್ತಿ ಪ್ರಪತ್ತ್ಯಧಿಕಾರಿಗಳಿಗೆ **ವಿರೋಧಿಗಳಾನ** - ಉಪಾಯಾನುಷ್ಠಾನಕ್ಕೆ ವಿರೋಧಿಗಳಾದ, **ಕರ್ಮಾದಿಗಳೈ-**

---

(೨) ಲ. ತಂ. ೨೮-೧೪. (೩) ನಮ್ಮಾಳ್ವಾರ್ರವರ ಪಾಶುರ

ಪ್ಪೂವೋಲಿರುಪ್ಪಾಳ್ ವಿನ್ನೈತೀರ್‌ಕ್ಕುಮ್' ಎನ್ರುಂ ಶೊಲ್ಲುಗಿರಪಡಿಯೇ ಉಪಾಯಾಧಿಕಾರಿಗಳುಕ್ಕು ವಿರೋಧಿಗಳಾನ ಕರ್ಮ್ಮಾದಿಗಳೈಕ್ಕಳಿಕ್ಕುಮೆನ್ರ ದಾಮ್.

**ಅಥ ಶ್ರೀಣಾತಿ ಇತಿ ಶ್ರೀರಿತಿ ವ್ಯುತ್ಪತ್ತ್ಯರ್ಥಮಾಹ**

**'ಶ್ರೀಣಾತಿ ಚ ಗುಣೈರ್ಜಗತ್' ಎನ್ರ ನಿರುಕ್ತಿಯಿಲ್, ಕಾರುಣ್ಯಾದಿ**

ಪುಣ್ಯಪಾಪರೂಪ ಕರ್ಮವೇ ಮೊದಲಾದವುಗಳನ್ನು, ಆದಿ ಶಬ್ದದಿಂದ ಪ್ರಕೃತಿ ಸಂಬಂಧ, ವಾಸನಾ ಮೊದಲಾದವುಗಳು ಹೇಳಲ್ಪಟ್ಟವು, **ಕಳಿಕ್ಕುಮ್**-ಹೋಗ ಲಾಡಿಸುವಳು, **ಎನ್ರದಾಮ್**-ಎಂಬರ್ಥವಾಗಬಹುದು, **ಶ್ರೀಣಾತಿ ಆಶ್ರಿತ ಸಕಲ ದೋಷಾ**-ಆಶ್ರಿತರ ಉಪಾಯಾನುಷ್ಠಾನಕ್ಕೆ ಪ್ರತಿಬಂಧಕ ಪಾಪಗಳನ್ನೆಲ್ಲಾ ನಿರಸನಮಾಡುವಳು ಎಂಬರ್ಥವಾಗುತ್ತದೆಂಬ ಭಾವವು. (೧) ಈ ಲಕ್ಷ್ಮೀ ತಂತ್ರ ಶ್ಲೋಕಾರ್ಥ ಉಪಪಾದನೆಗಳಿಗೆ ಸಿದ್ಧೋಪಾಯ ಶೋಧನಾಧಿಕಾರದ ೨೦೮೫-೩ ನೆಯ ಪುಟಗಳನ್ನು ನೋಡಿ. ವೇರಿಮಾರಾದವೆಂಬ ನಮ್ಮಾಳ್ವಾರರ ಪಾಶುರಾರ್ಥಕ್ಕೆ ೨೧೦೧ ನೆಯ ಪುಟ ನೋಡಿ. ಹಾಗೆಯೇ ದಾಸನು ಬರೆದಿರುವ ಚತುಶ್ಲೋಕಿ ವ್ಯಾಖ್ಯಾನದ ೫೯ ನೆಯ ಪುಟವನ್ನೂ, ಶ್ರೀಸ್ತುತಿಯ ೧೩೦ ನೆಯ ಪುಟವನ್ನೂ ಪರಾಂಬರಿಸಿ.

**ಮುಂದೆ ಶ್ರೀಣಾತಿ ಇತಿ ಶ್ರೀಃ ಎಂಬ ವ್ಯುತ್ಪತ್ತಿಯಿಂಟಾಗುವ ಅರ್ಥವನ್ನು ಹೇಳುತ್ತಾರೆ.**

**ಶ್ರೀಣಾತಿಚ ಗುಣೈರ್ಜಗತ್ ಎನ್ರ ನಿರುಕ್ತಿಯಿಲ್**-ಜಗತ್ತನ್ನು ತನ್ನ ವಶಮಾಡಿಕೊಳ್ಳುವಹಾಗೆ ಆಶ್ರಯೋಪಯುಕ್ತ ಕಲ್ಯಾಣಗುಣ ಸಮೂಹವನ್ನು ತಾನೇ ಹೊಂದಿರುವಳಾದ ಪ್ರಯುಕ್ತ, ಆಶ್ರಿತಚೇತನರಲ್ಲೂ ಕಲ್ಯಾಣಗುಣದ ಆವಿ ರ್ಭಾವ ವೃದ್ಧಿ ಇವುಗಳ ಮೂಲಕ ಅವರನ್ನು, **ಶ್ರೀಣಾತಿ**-ಪರಿಪಕ್ವಮಾಡುವವಳು, **ಎನ್ರು ನಿರುಕ್ತಿಯಿಲ್-ಶ್ರೀಞ್ ಪರಿಪಾಕೇ** ಎಂಬ ಧಾತು ವ್ಯುತ್ಪತ್ತಿಯಿಂದುಂ ಟಾಗುವ ನಿರುಕ್ತಿಯಲ್ಲಿ, ಆಶ್ರಿತರಿಗೆ ನಿತ್ಯಕೈಙ್ಕರ್ಯಪ್ರಾಪ್ತಿಪರ್ಯಂತ ಎಲ್ಲಾ ಶ್ರೇಯಸ್ಸೂ ಉಂಟಾಗುವಹಾಗೆ ಗುಣಪರಿಪಾಕವನ್ನು ಉಂಟುಮಾಡುವಳು ಎಂಬರ್ಥವೆಂದು ತಿಳಿಸುತ್ತಾರೆ. ಅದನ್ನು ನಮ್ಮಾಳ್ವಾರವರ ಪಾಶುರವಾದ **'ಪಣ್ಣೈನಾಳಾಲೇ'** ಎಂಬ ಪಾಶುರದ ಮೂಲಕ ಉಪಪಾದಿಸುತ್ತಾರೆ. ಇದು ಹಿಂದೆಯೂ ಉದಾಹರಿ ಸಲ್ಪಟ್ಟಿರುತ್ತದೆ. (೩೪೬ ನೆಯ ಪುಟ ನೋಡಿ)

**ಪಣ್ಣೈನಾಳಾಲೇನಿನ್ರಿರುವರುಳುಮ್ ಪಙ್ಗಯತ್ತಾಳ್ ತಿರುವರುಳು ಙ್ಗೊಣ್ಣು ನಿನ್ಗೋಯಿಲ್ ಶೀಯ್‌ತ್ತುಪ್ಪಲ್‌ಪಡಿ ಕಾಲ್‌ಕುಡಿ ಕುಡಿವಳಿ ವನ್ದಾಟ್ಚೆಯ್ಯುಮ್ । ತೊಣ್ಡರೋರ್‌ಕ್ಕರುಳಿ ಜ್ಯೋತಿವಾಯ್ ತಿರುನ್ದ ನ್ರಾಮರ್ಕ್ಕಣ್ಣಾಳಾನೋಕ್ಕಾಯ್ । ತಣ್ಡೈಪ್ಪೊರುನತ್ತಣ್ಪಣೈ ಶೂಳ್‌ನ್ದ ತಿರುಪ್ಪುಳಿಙ್ಗುಡಿಕ್ಕಿಡನ್ದಾನೇ ॥**

ಗುಣಙ್ಗಳಾಲೇ' (೧) 'ನಿನ್ರಿರುವರುಳುಮ್ ಪಙ್ಗಯತ್ತಾಳ್ ತಿರುವರುಳುಮ್ ಕೊಣ್ಡು' ಇತ್ಯಾದಿಗಳಿರ್‌ಪಡಿಯೇ ಆಶ್ರಿತರ್ಕ್ಕು ಕೈಙ್ಕರ್ಯಪರ್ಯನ್ತ ಗುಣಪರಿಪಾಕತ್ತೈಯುಣ್ಡಾಕ್ಕುಮೆನ್ರಪಡಾಮ್.

ಅರ್ಥವು–ತೇಞ್ ತಿರೈಪ್ಪೊರುನಲ್-ನಿರ್ಮಲವಾದ ಅಲೆಗಳುಳ್ಳ ತಾಮ್ರಪರ್ಣೀ ನದೀತೀರದಲ್ಲಿರುವ, ತೆಣ್ ಪಣೈಶೋಲ್ ಸ್ಸ–ಶೀತಳವಾದ ಕೊಳಗಳಿಂದ ತುಂಬಿದ, ತಿರುಪ್ಪುಳಿಙ್ಗುಡಿಕಿಡಿನ್ತಾನೈ-ತಿರುಪ್ಪುಳಿಙ್ಗುಡಿ ಎಂಬ ದಿವ್ಯ ಕ್ಷೇತ್ರದಲ್ಲಿ ಹುಣಿಸೇ ಮರದ ಕೆಳಗೆ ನೆಲಸಿರುವನೇ (ಆಳ್ವಾರ್ ತಿರುನಗರಿ) ನಿನ್ ತಿರುವರುಳುಮ್ ಪಙ್ಗಯತ್ತಾಳ್ ತಿರುವರುಳುಮ್-ನಿರುಪಾಧಿಕಬಂಧುವಾದ ನಿನ್ನ ಕೃಪಾಮಾಹಾತ್ಮ್ಯೆಯನ್ನೂ, ಅದಕ್ಕೆ ಕಾರಣಭೂತವಾಗಿರುವ ನಿನ್ನ ನಿತ್ಯಾನಪಾಯಿನಿಯಾದ 'ಕಾರುಣ್ಯರೂಪಯಾ' ಎಂದು ಹೇಳಿರುವ ಹಾಗೆ ಅನುಗ್ರಹಮಯಳಾದ ಲಕ್ಷ್ಮಿಯ ಕೃಪಾಮಾಹಾತ್ಮ್ಯೆಯನ್ನೂ, ಎಂದರೆ 'ಎನ್ನಣಿಯೊರ್ ಅದು ಶೆಯ್ಯಾರ್' ಎಂದು ಹೇಳುವ ಪರಮಪುರುಷನ ಕೃಪೆಯನ್ನೂ, ಅದಕ್ಕೂ ಮೇಲಾಗಿ 'ನ ಕಶ್ಚಿನ್ನಾಪರಾಧ್ಯತಿ' ಎಂದು ಹೇಳುವ ಲಕ್ಷ್ಮಿಯ ಕೃಪೆಯನ್ನೂ, ಪಣ್ಡೈನಾಳಾಲೇ ಕೊಂಡು-ಬಹುಕಾಲದಿಂದ ಬಂದುದಾಗಿ, ನಿನ್ಕೋಯಿಲ್ ಶೀಯ್‌ತ್ತು-ನಕಿಂಚಿದಪಿ ಕುರ್ವಾಣೋ ವಿಷ್ಣೋರಾಯತನೇವಸೇತ್' ಎಂಬಲ್ಲಿ ಹೇಳಿರುವ ಹಾಗೆ, ನೀನು ಬಿಜಮಾಡಿಸಿರುವ ದೇವಾಲಯದಲ್ಲಿ ಕಿಂಚಿತ್ಕಾರರೂಪ ಕೈಙ್ಕರ್ಯವನ್ನು ಮಾಡಿ, ಪಲ್‌ಪಡಿಕಾಲ್-ಬಹುಕಾಲದಿಂದ, ಕುಡಿಕುಡಿವಳಿವನ್ದು ಆಳ್ ಶೆಯ್ಯುಮ್-ಕುಲಕ್ರಮವಾಗಿ ಬಂದ ಶಾಸ್ತ್ರೋಕ್ತಮಾರ್ಗವನ್ನನುಸರಿಸಿ ಕೈಙ್ಕರ್ಯವನ್ನು ಮಾಡುವ, ತೊಣ್ಡರೋರ್‌ಕ್ಕು ಅರುಳಿ-ನಿನ್ನ ಭಕ್ತರಾದ ನಮಗೆ ಕೃಪೆ ಮಾಡಿ, ಶೋದಿವಾಯ್ ತಿರನ್ದು-'ಸೋವತೀರ್ಣೋ ಜಗತ್ಯರ್ಥೇ ಮಾಮವಕ್ರೂರೇತಿವಕ್ಷ್ಯತಿ' (ವಿ. ಪು. ೫-೧೭-೧೨) ಎಂಬಲ್ಲಿ ಜಗದ್ರಕ್ಷಣೆಗಾಗಿ ಅವತರಿಸಿದ ಮಹಾಪುರುಷನು ನನ್ನನ್ನು ಅಕ್ರೂರನೆಂದು ಹೇಳುತ್ತಾನೆ ಎಂಬಲ್ಲಿ ಹೇಳಿರುವ ಹಾಗೆ, ಪ್ರಕಾಶವಾದ ನಿನ್ನ ಬಾಯನ್ನು ತೆರೆದು, ಎಂದರೆ ಒಂದು ಮಾತಿನಿಂದಲಾದರೂ ನಿನ್ನ ಪ್ರೀತಿಯನ್ನು ತೋರಿ, ಉನ್ತಾಮರೈ ಕಣ್ಗಳಾಲ್-ನಿನ್ನ ಪುಂಡರೀಕ ಸದೃಶಗಳಾದ ಕಣ್ಣುಗಳಿಂದ, ನೋಕ್ಕಾಯ್-ಈಕ್ಷಿಸಿ ಕೃಪೆ ಮಾಡಪ್ಪನೇ ಎಂದು 'ಅವಲೋಕನದಾನೇನ ಭೂಯೋ ಮಾಂ ಪಾಲಯಾವ್ಯಯ' (ವಿ. ಪು. ೧-೨೦-೧೬) ಎಂಬಲ್ಲಿ ಹೇಳಿರುವ ಹಾಗೆ ಪ್ರಾರ್ಥಿಸಿರುತ್ತಾರೆ. ಈ ಪಾಶುರದಲ್ಲಿ ಇಬ್ಬರ ಕೃಪೆಯೂ ನಿತ್ಯಕೈಙ್ಕರ್ಯಪ್ರಾಪ್ತಿಗೆ ಆವಶ್ಯಕವೆಂದು ಹೇಳಿ ಲಕ್ಷ್ಮಿಯೂ ಕೂಡ ಅನುಗ್ರಹಿಸಿ ಒಂದು ಪ್ರೀತಿಪೂರ್ವಕ ಮಾತನ್ನಾಡಿ ತನ್ನ ಕೃಪಾಕಟಾಕ್ಷದಿಂದ ಈಕ್ಷಿಸಿ ಅನುಗ್ರಹಿಸುವಳು ಎಂಬ ಭಾವವು ತೋರಿಬರುವದರಿಂದ

(೧) ತಿರು. ೯. ೨. ೧.

**ಇವ್ವ್ಯುತ್ಪತ್ತಿಗಳೆಲ್ಲಾತ್ತಾಲುಮುಳ್ಳ ವೈಭವತ್ತೈಕ್ಕಣಿಶಿತ್ತು** (೨) **'ಶ್ರೀಂ**

ತನ್ನ ಕೃಪಾ ಮೊದಲಾದ ಗುಣಗಳಿಂದ ಚೇತನರಿಗೆ ಪ್ರೇರಕಳಾಗಿ ನಿತ್ಯಕೈಂಕರ್ಯ ಪ್ರಾಪ್ತಿ ಪರ್ಯಂತ ಪರಿಪಾಕವನ್ನುಂಟುಮಾಡುವಳೆಂಬರ್ಥವು ತೋರಿಬರುತ್ತ ದೆಂಬುದು ತಾತ್ಪರ್ಯವು. **ಇತ್ಯಾದಿಗಳಿಲ್ ಪಡಿಯೇ**-ಇವೇ ಮೊದಲಾದ ಪ್ರಮಾ ಣಗಳಲ್ಲಿ ಹೇಳಿರುವ ಹಾಗೆ, **ಆಶ್ರಿತರ್ಕ್ಕು ಕೈಂಕರ್ಯಪರ್ಯನ್ತ ಗುಣಪರಿಪಾಕತ್ತೈ ಯುಂಡಾಕ್ಕುಮೆನ್ರದಾಮ್**-ಆಶ್ರಿತರಿಗೆ ಇಲ್ಲಿಯೂ ಅನನ್ತರ ದಿವ್ಯ ವೈಕುಂಠ ದಲ್ಲೂ ನಿತ್ಯಕೈಙ್ಕರ್ಯವು ಉಂಟಾಗುವಹಾಗೆ ಕಲ್ಯಾಣಗುಣದ ಆವಿರ್ಭಾವ ವೃದ್ಧಿ ಮೊದಲಾದ ಪರಿಪಾಕವನ್ನು ಉಂಟುಮಾಡುವಳು ಎಂಬರ್ಥವಾಗುತ್ತದೆ.

**ಶ್ರೀಣಾತಿ ಚ ಗುಣೈರ್ಜಗತ್** ಎಂಬ ಮತ್ತು ಹಿಂದೆ ಹೇಳಿದ **'ಶೃಣಾತಿ ನಿಖಿಲಾನ್ ದೋಷಾನ್'** ಇತ್ಯಾದಿ ವ್ಯುತ್ಪತ್ತಿಯನ್ನು ಕಾಣುವ ವಾಕ್ಯಗಳನ್ನು,

**'ಶೃಣಾತಿ ನಿಖಿಲಾನ್ ದೋಷಾನ್ ಶ್ರೀಣಾತಿ ಚ ಗುಣೈರ್ಜಗತ್ ।**
**ಶ್ರೀಯತೇ ಚಾಖಿಲೈರ್ನಿತ್ಯಂ ಶ್ರಯತೇ ಚ ಪರಂಪದಮ್ ।**
**ಶ್ರಯಂತೀಂ ಶ್ರಿಯಮಾಣಾಂ ಚ ಶೃಣಾತೀಂ ಶೃಣ್ವತೀಮಪಿ ॥**

ಎಂಬಲ್ಲಿ ಕಾಣಬಹುದು.

ಶ್ರೀ ಪ್ರಪನ್ನಜನಕೂಟಸ್ಥರಾದ ನಮ್ಮಾಳ್ವಾರವರು ಈ ಶ್ರೀ ಶಬ್ದಾರ್ಥಗಳ ನ್ನೆಲ್ಲಾ ತಮ್ಮ ಪಾಶುರಗಳಲ್ಲಿ ನಿಪುಣತರವಾಗಿ ಉಪಪಾದಿಸಿರುತ್ತಾರೆಂಬು ದೇನೋ ಒಪ್ಪೋಣ. ಆದರೆ ಶ್ರೀ ಯಾಮುನೇಯ ಪ್ರಭೃತಿಗಳು ಈ ಅರ್ಥ ಗಳನ್ನು ಅಙ್ಗೀಕರಿಸಿರುವದರ ಮೂಲಕ ಸಾಂಪ್ರದಾಯಿಕತ್ವವು ಅವುಗಳಿಗೆ ಏರ್ಪಟ್ಟಿವೆಯೇ? ಎಂದರೆ ಅವು ಸಾಂಪ್ರದಾಯಸಿದ್ಧವೆಂದು ಅವರ ಮತ್ತು ಶ್ರೀ ಪರಾಶರಭಟ್ಟರ ದಿವ್ಯಸೂಕ್ತಿಗಳನ್ನು ಮುಂದೆ ಉದಾಹರಿಸಿರುತ್ತಾರೆ. ಶ್ರೀ ಭಾಷ್ಯ ಕಾರರ ಅಭಿಪ್ರಾಯವನ್ನು ಹಿಂದೆಯೇ "ಶ್ರೀಮನ್ನಾರಾಯಣಾಭಿಮತಾನುರೂಪ" ವೆಂಬ ದಿವ್ಯಸೂಕ್ತಿಯಿಂದ ವ್ಯಕ್ತಪಡಿಸಿರುವದರಿಂದ ಅವರ ಸೂಕ್ತಿಯನ್ನು ಬಿಟ್ಟು ಶ್ರೀ ಯಾಮುನೇಯರ ಮತ್ತು ಶ್ರೀ ಪರಾಶರಭಟ್ಟರ ದಿವ್ಯಸೂಕ್ತಿಗಳನ್ನು ಮಾತ್ರವೇ ಇಲ್ಲಿ ಉದಹರಿಸಿರುತ್ತಾರೆ. **ಇವ್ವ್ಯುತ್ಪತ್ತಿಗಳೆಲ್ಲಾತ್ತಾಲುಮುಳ್ಳ ವೈಭವತ್ತೈ**-ಧಾತುಗಳ ವ್ಯುತ್ಪತ್ತಿ ಮೂಲಕವಾಗಿ ಉಂಟಾದ ನಿರುಕ್ತ ಬಲದಿಂದ ಉಪಪಾದಿಸಲ್ಪಟ್ಟ ಈ ಮೇಲಿನ ಅಭಿಪ್ರಾಯಗಳಿಂದುಂಟಾಗುವ ಮಾಹಾತ್ಮ್ಯ ಯನ್ನು, **ಕಣಿಶಿತ್ತು**-ಹೃದಯದಲ್ಲಿಟ್ಟೇ, **'ಹೇ ಭಗವತಿ**-ಓ ಹೇಯಪ್ರತ್ಯನೀಕ ನಾಗಿ ಕಲ್ಯಾಣಗುಣಾಕರನಾಗಿರುವ ನಾರಾಯಣನ ಪತ್ನಿಯಾಗಿ, ಹಾಗೆಯೇ ಹೇಯಪ್ರತ್ಯನೀಕಳಾಗಿ ಕಲ್ಯಾಣಗುಣಾಕರಳಾಗಿರುವ ಲಕ್ಷ್ಮಿಯೇ, **ತೇ**-ನಿನ್ನ, **ನಾಮ**-ಹೆಸರೇ, **ಶ್ರೀರಿತ್ಯೇವಚ**-ಶ್ರೀ ಎಂಬದಾಗಿಯೇ ಇರುವಾಗ, **ತ್ವಾಂ**-ಆ

---

(೨) ಚತುಶ್ಲೋಕೀ. ೧.

**ತ್ಯೇವ ಚ ನಾಮ ತೇ ಭಗವತಿ ಬ್ರೂಮಃ ಕಥಂ ತ್ವಾಂ ವಯಮ್' ಎನ್ರು ಆಳವಂದಾರ್ ಅರುಳಿಚ್ಚೆಯ್‌ದಾರ್.**

**ಭಟ್ಟರುಮ್ ನಿರುಪಾಧಿಕಮಙ್ಗಳತ್ವತ್ತೈನಿನ್ಯೈತ್ತು (೩) 'ಶ್ರೀರಸಿಯತಃ' ಎನ್ರಾರ್.**

ಅಮೋಘ ಶಬ್ದದಲ್ಲೇ ಅಂತರ್ಗತವಾದ ಬಹ್ವರ್ಥಗಳಿಂದ ತೋರುವ ಮಹಾತ್ಮ್ಯ ಯುಳ್ಳ ನಿನ್ನನ್ನೂ, **ವಯಮ್**-ಅಲ್ಪಪ್ರಜ್ಞೆಯುಳ್ಳ ನಾವು, **ಕಥಂಬ್ರೂಮಃ**-ಹೇಗೆ ಸ್ತೋತ್ರಮಾಡಲು ಸಾಧ್ಯವು. ಹಿಂದೆ ವಿಶೇಷ ಮಹಾತ್ಮೆಗಳನ್ನೆಲ್ಲಾ 'ಕಾಂತಸ್ತೇ' ಎಂದಾರಂಭಿಸಿದವರಾಗಿ ಕೊನೆಗೆ ಎಲ್ಲಾ ಮಾಹಾತ್ಮ್ಯೆಯನ್ನೂ ಹೇಳುವದು ಸಾಧ್ಯವಿಲ್ಲೆಂದು ತೋರಿ ನಿನ್ನ ಮಾಹಾತ್ಮ್ಯೆಯೆಲ್ಲಾ **ಶ್ರೀಃ** ಎಂಬ ಒಂದು ನಾಮದಲ್ಲೇ ಅಂತರ್ಗತವಾಗಿರುವಾಗ ಇನ್ನು ನಾವು ಉಪಪಾದಿಸಿ ಹೇಳತಕ್ಕದ್ದೇನಿದೆ ಎಂಬುದು ಮುಖ್ಯ ತಾತ್ಪರ್ಯವು. ಈ ಪೂರಾ ಶ್ಲೋಕಕ್ಕೂ ಪ್ರತಿಪದಾರ್ಥ ತಾತ್ಪರ್ಯಗಳಿಗೂ ದಾಸನು ಬರೆದಿರುವ ಚತುಶ್ಲೋಕಿಯ ವ್ಯಾಖ್ಯಾನದ ೧ ರಿಂದ ೨೦ ಪುಟಗಳನ್ನು ಪರಾಂಬರಿಸಿ.

ಮುಂದೆ ಶ್ರೀ ಪರಾಶರಭಟ್ಟರ ದಿವ್ಯಸೂಕ್ತಿಯನ್ನು ಉದಾಹರಿಸುತ್ತಾರೆ.— **ಭಟ್ಟರುಮ್**-ಶ್ರೀ ಪರಾಶರಭಟ್ಟರೂ, **ನಿರುಪಾಧಿಕಮಙ್ಗಳತ್ವತ್ತೈ**-ಸರ್ವೇಶ್ವರನಿಗೆ ಉಂಟಾಗಿರುವ, **ಮಙ್ಗಳತ್ತ್ವತ್ತೈನಿನ್ಯೈತ್ತು-'ಮಙ್ಗಳಾನಾಂಚ ಮಙ್ಗಳಮ್' 'ಮಙ್ಗಳಂ ಭಗವಾನ್ ವಿಷ್ಣುಃ ಮಙ್ಗಳಂ ಮಧುಸೂದನಃ'** ಇತ್ಯಾದಿ ಪ್ರಮಾಣಗಳಲ್ಲಿ ಹೇಳಿರುವ ಹಾಗೆ, ತಾನೇ ಮಙ್ಗಳರೂಪಳಾಗಿ, ಪರಮಾತ್ಮನಿಗೂ ಕೂಡ ಮಂಗಳತ್ವವನ್ನುಂಟುಮಾಡುವಳಾದುದರಿಂದ ಆಶ್ರಿತರಿಗೂ ಕೂಡ ಸರ್ವಮಂಗಳವನ್ನೂ ಉಂಟುಮಾಡುವವಳು ಎಂಬರ್ಥದಲ್ಲಿ 'ಶ್ರೀರಸಿಯತಃ' ಎಂದು ಶ್ರೀಗುಣರತ್ನ ಶ್ಲೋಕದಲ್ಲಿ ಹೇಳಿರುತ್ತಾರೆಂದು ತಿಳಿಸುತ್ತಾರೆ. ಇದರಿಂದಲೂ ಶ್ರೀ ಶಬ್ದಾರ್ಥಗಳಿಗೆ ಸಾಂಪ್ರದಾಯಕತ್ವವು ಏರ್ಪಟ್ಟಿರುವದರಿಂದ ಅವು ಗ್ರಾಹ್ಯವೆಂಬ ಭಾವವು. ಆ ಶ್ಲೋಕವು ಯಾವುದೆಂದರೆ—

**'ತವ ಸ್ಪರ್ಶಾದೀಶಂ ಸ್ಪೃಶತಿ ಕಮಲೇ ಮಙ್ಗಳಪದಮ್ ।**
**ತವೇದಂ ನೋಪಾಧೇ ರುಪನಿಪತಿತಂ ಶ್ರೀರಸಿಯತಃ ।**
**ಪ್ರಸೂನಂ ಪುಷ್ಯನ್ತೀಮಪಿ ಪರಿಮಳರ್ಧಿಂ ಜಗದಿಷುಃ ।**
**ನ ಚೈವಂ ತ್ವಾದೇವಂ ಸ್ವಪತ ಇತಿ ಕಶ್ಚಿತ್ ಕವಯತೇ ॥ ೨೯ ॥**

**ಹೇ ಕಮಲೇ**-ಸ್ವರೂಪತಃ ಶೋಭಾಯಮಾನಳಾದ ಲಕ್ಷ್ಮಿಯೇ, **ತವ ಸ್ಪರ್ಶಾತ್**-ನೀನು ನಿನ್ನ ಪತಿಯನ್ನು ಬಿಟ್ಟು ಅಗಲದೇ ಇದ್ದುಕೊಂಡಿರುವ ಸ್ಪರ್ಶದ ಮಹಾತ್ಮ್ಯೆಯಿಂದ, **ಈಶಂ**-ನಿನ್ನ ಪತಿಯಾಗಿ ಎಲ್ಲಕ್ಕೂ ನಿಯಾಮಕ

(೩) ಶ್ರೀಗುಣ ೨೯.

ನಾಗಿರುವ ನಾರಾಯಣನನ್ನು **ಮಙ್ಗಳಪದಮ್-ಮಙ್ಗಳಾನಾಂಚಮಙ್ಗಳಮ್** ಎಂಬ ಹೇಳಿಕೆಯು, **ಸ್ಪೃಶತಿ**-ತಗಲುತ್ತದೆ, ಎಂದರೆ ಸಲ್ಲುತ್ತದೆ, **ಇದಂ**-ಈ ಮಙ್ಗಳಪದವು, **ತವ**-ನಿನಗಾದರೋ, **ಉಪಾಧೇಃ**-ಯಾವ ವ್ಯಾಜವೆಂದರೆ ಕಾರಣದಿಂದಲಾಗಲಿ, **ಉಪನಿಪತಿತಂ**-ಬಿದ್ದುದು ಎಂದರೆ ಏರ್ಪಟ್ಟಿರುದು, **ನ**-ಅಲ್ಲವು; ಎಂದರೆ ನಿನ್ನ ಗಂಡನಿಗಾದರೋ ನಿನ್ನ ಸಂಬಂಧದಿಂದ ಮಙ್ಗಳತ್ವವು, ನಿನಗಾದರೋ ಹಾಗಲ್ಲವು, ಸ್ವತಸ್ಸಿದ್ಧವಾದುದು ಎಂಬ ಭಾವವು. ಅದೇನು ಹಾಗೆ? ಎಂದರೆ—**ಶ್ರೀರಸಿಯತಃ, ಯತಃ**-ಯಾವ ಕಾರಣದಿಂದ ನೀನು, **ಶ್ರೀರಸಿ**-ಶ್ರೀಶಬ್ದವಾಚ್ಯಳೋ, ಅದರಿಂದ ಎಂಬ ಭಾವವು, **ಶೃಣಾತಿ ನಿಖಿಲಾನ್ ದೋಷಾನ್ ಶ್ರೀಣಾತಿ ಚ ಗುಣೈರ್ಜಗತ್** ಎಂಬ ವ್ಯುತ್ಪತ್ತಿಗಳಿಂದ ಚೇತನರ ದೋಷಗಳನ್ನು ಹೋಗಲಾಡಿಸಿ ಅವರ ಸದ್ಗುಣಗಳನ್ನು ವೃದ್ಧಿಹೊಂದಿಸುವಳಾದುದರಿಂದ ಮಙ್ಗಳತ್ವವು ಸ್ವತಃ ಏರ್ಪಟ್ಟಿತು. ಇಂದ್ರನಿಗೆ ಉಂಟಾಗಿದ್ದ ಅಮಙ್ಗಳತ್ವವನ್ನು ಹೋಗಲಾಡಿಸಿ ಮಂಗಳತ್ವವನ್ನುಂಟುಮಾಡಿದ ಇತಿಹಾಸದಿಂದಲೂ ಲಕ್ಷ್ಮಿಗೆ ಮಂಗಳತ್ವವು ಸ್ವತಸ್ಸಿದ್ಧವಾದುದು. ಆದುದರಿಂದಲೇ ಶ್ರೀ ಪರಾಶರರು **'ಶರೀರಾರೋಗ್ಯಮೈಶ್ವರ್ಯಂ ಅರಿಪಕ್ಷಕ್ಷಯಂ ಸುಖಂ। ದೇವಿ ತ್ವದ್ದೃಷ್ಟಿ ದೃಷ್ಟಾನಾಂ ಪುರುಷಾಣಾಂ ನ ದುರ್ಲಭಮ್'** ಎಂದೂ, **'ವಿಮುಕ್ತಿ ಫಲದಾಯಿನೀ'** ಎಂದೂ ಹೀಗೆ ಸರ್ವಮಂಗಳವನ್ನೂ ಕೊಡುವವಳೆಂದೂ ಹೇಳಿರುತ್ತಾರೆ. **ಈ** ಲಕ್ಷ್ಮಿಯಿಂದ ಪತಿಗೆ ಮಙ್ಗಳವೆಂಬ ಭಾವವನ್ನು ಮಹರ್ಷಿವಾಕ್ಯದಿಂದಲೂ ಗ್ರಹಿಸಬಹುದು. ಜನಕಮಹರ್ಷಿಯು **'ಪ್ರತೀಚ್ಛಚೈನಾಂ ಭದ್ರಂತೇ'** ಈ ಸೀತೆಯನ್ನು ಪರಿಗ್ರಹಿಸು, ನಿನಗೆ ಸರ್ವಮಂಗಳವೂ ಉಂಟಾಗಲಿ ಎಂದು ಶ್ರೀರಾಮಚಂದ್ರ ಪ್ರಭುವನ್ನು ಕುರಿತು ವಿವಾಹಕಾಲದಲ್ಲಿ ಹೇಳಿರುತ್ತಾರೆ. ಆಂಜನೇಯನು "ಕಾ ತ್ವಂಭವಸಿ ಕಲ್ಯಾಣಿ" ಎಂದು ಸೀತೆಯನ್ನು ಸಂಬೋಧಿಸಿರುತ್ತಾನೆ- ಇವಳಿಂದ ಪತಿಗೆ ಕಲ್ಯಾಣತ್ವವೂ, ಅವಳಿಗಾದರೋ ಸ್ವತಸಿದ್ಧವಾದುದು ಹೇಗೆ ಎಂಬುದನ್ನು ಸದೃಷ್ಟಾಂತವಾಗಿ ಉಪಪಾದಿಸುತ್ತಾರೆ. **ಪ್ರಸೂನಂ**-ಹೂವನ್ನು, **ಪುಷ್ಯನ್ತೀಂ**-ಪೋಷಿಸುವ ಎಂದರೆ ಅದಕ್ಕೆ ಮಾಹಾತ್ಮ್ಯೆಯನ್ನುಂಟುಮಾಡುವ, **ಪರಿಮಳರ್ಧಿಮ್**-ಹೂವಿನೊಂದಿಗೆ ಸೇರಿರುವ ಪರಾಗದ ಪರಿಮಳದ ಸಮೃದ್ಧಿಯನ್ನು, **ಜಗದಿಷುಃ**-ಸ್ತೋತ್ರಮಾಡುವ, **ಕಶ್ಚಿತ್**-ಯಾವನೊಬ್ಬನು, **ಏವಂತ್ವಾತ್**-ಹೀಗಿರುವದರಿಂದ, **ಏವಂ**-ಹೀಗೆ, **ಸ್ವಪತೇ**-ಮನೋಹರವಾಗಿದೆ, **ಇತಿ**-ಎಂಬದಾಗಿ, **ನ ಕವಯತೇಚ**-ವರ್ಣಿಸದೇ ಇರುವನು? ಪರಿಮಳದಿಂದಲೇ ಹೂವಿಗೆ ಮನೋಹರತ್ವವೆಂಬುದನ್ನು, ಹೀಗೆ ಇವರಿಂದ ಇವಕ್ಕೆ ಮಹಾತ್ಮ್ಯೆಯು ಎಂಬುದನ್ನು ಯಾರುತಾನೇ ಹೇಳಿ ವರ್ಣಿಸಲಾರರು. ಸ್ವತಸ್ಸಿದ್ಧವಾದ ಪರಿಮಳ ಸಮೃದ್ಧಿಯಿಂದ ಪುಷ್ಪಕ್ಕೆ ಹೇಗೆ ಮನೋಹರತ್ವವೋ ಹಾಗೆಯೇ ಸ್ವತಸ್ಸಿದ್ಧವಾದ ಲಕ್ಷ್ಮಿಯ ಮಂಗಳತ್ವದಿಂದ ನಾರಾಯಣನಿಗೂ

**ಇವ್ವರ್ಥಂಗಳಿಲೀಶ್ವರನುಷ್ಠೈಯ ಉಪಾಯಭಾವತ್ತುಕ್ಕು ಉಪಯುಕ್ತಂಗಳಾನವೈ ಪೂರ್ವಖಂಡತ್ತಿಲುಮ್, ಪ್ರಾಪ್ಯತೈಕ್ಕು ಉಪಯುಕ್ತಮಾನವೈ ಉತ್ತರಖಂಡತ್ತಿಲುಮ್ ಅನುಸಂಧೇಯಂಗಳ್.**

---

ಮಂಗಳತ್ವವು ಎಂಬ ಭಾವವು.

ಹೀಗೆ **ಶ್ರೀ** ಶಬ್ದಕ್ಕೆ ಆರು ಅರ್ಥಗಳು ಹೇಳಲ್ಪಟ್ಟವು:—ಸಂಗ್ರಹವಾಗಿ ಅವುಗಳು ಯಾವುವೆಂಬುದಕ್ಕೆ ದಾಸನು ಬರೆದಿರುವ **ಶ್ರೀಸ್ತುತಿಯ ೨೩ ನೆಯ** ಪುಟವನ್ನು ಪರಾಂಬರಿಸಿ.

ಮುಂದೆ ಈ ಆರುವಿಧ ವ್ಯುತ್ಪತ್ತಿಗಳಿಂದುಂಟಾದ ಅರ್ಥಗಳಲ್ಲಿ, ದ್ವಯದಲ್ಲಿರುವ ಉಪಾಯವನ್ನು ಬೋಧಿಸುವ ಪೂರ್ವಖಂಡದ ಶ್ರೀಮಚ್ಛಬ್ದಕ್ಕೂ, ಉತ್ತರಖಂಡದಲ್ಲಿ ಉಪೇಯತ್ವವನ್ನು ಬೋಧಿಸುವ ಶ್ರೀಮಚ್ಛಬ್ದಕ್ಕೂ ಅನ್ವಯಿಸಬಹುದು ಎಂಬ ಚರ್ಚೆಯಲ್ಲಿ ಹೇಳುತ್ತಾರೇನೆಂದರೆ—

**ಇವ್ವರ್ಥಂಗಳಿಲ್**-ಈ ಆರು ಅರ್ಥಗಳಲ್ಲಿ, **ಈಶ್ವರನುಷ್ಠೈಯ**-ಶ್ರಿಯಃಪತಿಯಾಗಿ ಪರತತ್ವವಾಗಿ ಲೋಕಸ್ವಾಮಿಯಾಗಿ **'ಪತಿಂವಿಶ್ವಸ್ಯ'** ಎಂದು ಹೇಳಿಸಿಕೊಳ್ಳುವನ, **ಉಪಾಯಭಾವಕ್ಕೆ, ಉಪಯುಕ್ತಂಗಳಾನವೈ**-ಸರಿಹೋಗುವ ಅರ್ಥಗಳನ್ನು, **ಪೂರ್ವಖಂಡತ್ತಿಲುಮ್**-ದ್ವಯದ ಪೂರ್ವಖಂಡದಲ್ಲೂ, **ಪ್ರಾಪ್ಯತೈಕ್ಕು**-ಉಪೇಯವಾಗಿರುವ, ಸಂದರ್ಭಕ್ಕೆ, **ಉಪಯುಕ್ತಮಾನವೈ**-ಅನುಕೂಲಿಸುವ ಅಥವಾ ಸರಿಹೋಗುವ ಅರ್ಥಗಳನ್ನು, **ಉತ್ತರಖಂಡತ್ತಿಲ್**-ದ್ವಯದ ಉತ್ತರಖಂಡದಲ್ಲೂ, **ಅನುಸಂಧೇಯಂಗಳ್**-ಅನುಸಂಧಾನ ಮಾಡತಕ್ಕದ್ದು. ಹೀಗೆ ಅರ್ಥಗಳನ್ನು ವಿಚಾರಮಾಡಿದರೆ ಯಾವ ಅರ್ಥಗಳು ಪತಿಯೊಡನೆ ಯಾವಾಗಲೂ ಸೇರಿರುವ ಲಕ್ಷ್ಮಿಗೆ ಉಪಾಯದಲ್ಲೂ ಅನ್ವಯ ಉಂಟೆಂದು ಬೋಧಿಸುವದರಿಂದ ಸರಿಹೋಗುತ್ತವೋ ಅವುಗಳನ್ನು ಪೂರ್ವಖಂಡದ **ಶ್ರೀಮತ್** ಶಬ್ದಾರ್ಥವಾಗಿ ಭಾವಿಸತಕ್ಕದ್ದು. ಯಾವ ಅರ್ಥಗಳು ಉಪೇಯತ್ವದಲ್ಲಿರುವದಕ್ಕೆ ಸರಿಹೋಗುತ್ತವೋ ಅವುಗಳನ್ನು ಉತ್ತರಖಂಡದ ಶ್ರೀಮಚ್ಛಬ್ದಕ್ಕೆ ಅನ್ವಯಿಸತಕ್ಕವೆಂಬ ಭಾವವು.

೧. ಶ್ರೀಞ್ ಸೇವಾಯಾಂ ಎಂಬ ಧಾತುವಿನಿಂದ **ಶ್ರೀಯತೇ ಚೇತನೈಃ** ಎಂಬ ವ್ಯುತ್ಪತ್ತಿಯ ಮೂಲಕ, ಚೇತನರಿಂದ ಆಶ್ರಯಿಸಲ್ಪಡುವಳು ಎಂಬುದರಿಂದ ದಯಾ, ವಾತ್ಸಲ್ಯ, ಶಕ್ತಿಯುಳ್ಳವಳೆಂದಾಗುವದರಿಂದ, ಉಪಾಯತ್ವವು ಏರ್ಪಟ್ಟು ಪೂರ್ವಖಂಡದ ಶ್ರೀಮಚ್ಛಬ್ದಾರ್ಥವಾಗುತ್ತದೆ.

೨. ಅದೇ ಧಾತುವಿನಿಂದಲೇ **ಶ್ರಯತೇ ಭಗವನ್ತಂ ಇತಿ ಶ್ರೀಃ**-ಚೇತನರನ್ನುದ್ಧಾರಮಾಡುವದಕ್ಕಾಗಿ ತನ್ನ ಪತಿಯನ್ನು ಆಶ್ರಯಿಸುವದರಿಂದ ವಾಲ್ಲಭ್ಯಾತಿಶಯವೂ ಪುರುಷಕಾರತ್ವವೂ ಉಪಾಯತ್ವರೂಪವೇ ಆದುದರಿಂದ **ಪೂರ್ವ**

## ಶ್ರೀ ವಿಶಿಷ್ಟಸ್ಯೈವೋಪಾಯತ್ವಮುಪೇಯತ್ವಂ ಚಾಹ

**ಸ್ವಾಮ್ಯುಪಾಯ ಉಪೇಯಶ್ಚ ಸ್ವರೂಪಾದಿ ಸಮರ್ಪಣೇ ।**

**ಖಂಡದ** ಶ್ರೀಮಚ್ಛಬ್ದಾರ್ಥವೇ ಆಯಿತು.

೩. ಶೃಶ್ರವಣೇ ಎಂಬ ಧಾತುವಿನ ಮೂಲಕ **ಶೃಣೋತೀತಿ ಶ್ರೀಃ** ಎಂಬ **ವ್ಯುತ್ಪತ್ತಿ**ಯ ಮೂಲಕ ಆಶ್ರಿತರ ಪ್ರಾರ್ಥನೆಯನ್ನು ಕೇಳುವವಳೆಂದಾಗುತ್ತದೆ. ಇದೂ ಉಪಾಯತ್ವದಲ್ಲೇ ಸೇರಿದುದರಿಂದ ಪೂರ್ವಖಂಡದ ಶ್ರೀಮಚ್ಛಬ್ದಕ್ಕೇ **ಈ ಅರ್ಥ**ವೂ ಸೇರಿದುದು.

೪. ಅದೇ ಧಾತುವಿನಿಂದಲೇ **ಶ್ರಾವಯತಿ ವಿಮುಖಾನ್ ಹಿತಮ್**-ವಿಮುಖರಾದವರಿಗೂ ಹಿತವನ್ನು ಬೋಧಿಸಿ ಸರಿಯಾದ ಮಾರ್ಗಕ್ಕೆ ತರುವವಳೂ ಎಂದಾಗಲಿ ಅರ್ಥವಾಗಬಹುದು. ಅಥವಾ ಆಶ್ರಿತರ ಆರ್ತಧ್ವನಿಯನ್ನು ತಾನು **ಶೃಣೋತಿ** ಕೇಳಿದವಳಾಗಿ, ಅದನ್ನು ಕುರಿತು, **ಭಗವಂತಂ ಶ್ರಾವಯತಿ ಭಗವಂತನಿಗೆ** ತಿಳಿಸುವವಳು ಎಂದಾಗಲಿ ಅರ್ಥವಾಗಬಹುದು. ಈ ಎರಡು **ಅರ್ಥ**ಗಳೂ ಉಪಾಯತ್ವಕ್ಕೆ ಸಂಬಂಧಿಸಿದವಾದುದರಿಂದ ಪೂರ್ವಖಂಡದ ಶ್ರೀಮ**ಚ್ಛಬ್ದಕ್ಕೆ ಸೇರಿದವು. ಹೀಗೆ ಈ ಮೇಲಿನ ಅರ್ಥಗಳೆಲ್ಲಾ ಪೂರ್ವಖಂಡದ ಶ್ರೀಚ್ಛಬ್ದಾರ್ಥಗಳು.**

೫. ಶೃಹಿಂಸಾಯಾಂ ಎಂಬ ಧಾತುವಿನಿಂದ **ಶೃಣಾತಿ ನಿಖಿಲಾನ್ ದೋಷಾನ್** ಎಂಬ ಅರ್ಥವು ತೋರಿಬರುವದರಿಂದ ಉತ್ತರಖಂಡದ **ಶ್ರೀಮತೇ** ಶಬ್ದಾರ್ಥವಾಗಿ ಭಾವಿಸತಕ್ಕದ್ದು.

೬. ಶೃವಿಸ್ತಾರೇ ಎಂಬ ಧಾತುವಿನಿಂದ **ಶ್ರೀಣಾತಿ ಚ ಗುಣೈರ್ಜಗತ್**-**ಆಶ್ರಿತರಿಗೆ ನಿತ್ಯಕೈಂಕರ್ಯಪ್ರಾಪ್ತಿ** ಪರ್ಯನ್ತ ಪರಿಪಾಕವನ್ನುಂಟುಮಾಡುವವಳೆಂಬ **ಅರ್ಥ**ವಾಗುವದರಿಂದ ಇದನ್ನೂ ಉತ್ತರಖಂಡದ ಶ್ರೀಮತೇ ಎಂಬ ಶಬ್ದಾರ್ಥ**ವಾಗಿಯೇ** ಭಾವಿಸಬಹುದು.

## ಲಕ್ಷ್ಮೀಯುಕ್ತನಾಗಿಯೇ ನಾರಾಯಣನಿಗೆ ಉಪಾಯತ್ವವೂ ಉಪೇಯತ್ವವೂ ಎಂದು ಕಾರಿಕೆಯನ್ನು ಅನುಗ್ರಹಿಸುತ್ತಾರೆ

ಶ್ರೀ ಶಬ್ದಾರ್ಥಗಳು ಹೀಗೆ ಧಾತು ವ್ಯುತ್ಪತ್ತಿಯಿಂದ ತೋರಿಬರುವದರಿಂದ **ಲಕ್ಷ್ಮೀ**ವಿಶಿಷ್ಟನಾಗಿಯೇ ಉಪಾಯಭಾವದಲ್ಲೂ ಉಪೇಯಭಾವದಲ್ಲೂ ಸರ್ವೇ**ಶ್ವರ**ನು ಇರುವದರಿಂದ ಲಕ್ಷ್ಮೀಗೂ ಸಹ ಉಪಾಯತ್ವ ಉಪೇಯತ್ವದಲ್ಲೂ **ಅನ್ವಯ** ಉಂಟೆಂದು ಹೇಳುತ್ತಾರೆ. ಅರ್ಥವು—**ನಿಗಮಚಕ್ಷುಷಾಂ**-ವೇದಗಳೇ ಕಣ್ಣಾಗಿವುಳ್ಳ ಮಹಾಪ್ರಾಜ್ಞರಿಗೆ ಎಂದರೆ—ವೇದಪ್ರಮಾಣದಲ್ಲೇ ದೃಷ್ಟಿ**ಯುಳ್ಳ**ವರಿಗೆ **ಸ್ವಾಮೀ**-ಎಲ್ಲವೂ ತನ್ನಸ್ವತ್ತಾಗಿ "ಪತಿಂ ವಿಶ್ವಸ್ಯ" ಎಂದು ಹೇಳಿಸಿ

**ಪ್ರಥಿತಃ ಪ್ರತಿಸಂಬಂಧೀ ಶ್ರೀಮಾನ್ನಿಗಮಚಕ್ಷುಷಾಮ್ ॥ ೯೯ ॥**

ಕೊಳ್ಳುವ, **ಶ್ರೀಮಾನ್**-ನಿತ್ಯಾನಪಾಯಿನಿಯಾದ ಲಕ್ಷ್ಮಿಯನ್ನು ಯಾವಾಗಲೂ ಅಪೃಥಕ್ಸಿದ್ಧವಿಶೇಷಣವಾಗಿ ಹೊಂದಿ, 'ಪ್ರೇಕ್ಷತೇ ಲಕ್ಷ್ಮೀಶ್ಚ ಪತ್ನ್ಯೌ' ಎಂದು ಹೇಳಿಸಿಕೊಂಡು ಶ್ರಿಯಃಪತಿತ್ವವೇ ಸ್ವರೂಪವಾಗಿರುವ ಸರ್ವೇಶ್ವರನು, **ಸ್ವರೂಪಾದಿ ಸಮರ್ಪಣೇ**-ಸ್ವರೂಪ, ಆದಿಶಬ್ದದಿಂದ, ರಕ್ಷಾಭರ ಫಲಸಮರ್ಪಣೆಯಲ್ಲಿ ಎಂದರೆ ಭರನ್ಯಾಸಾನುಷ್ಠಾನದಲ್ಲಿ, **ಪ್ರತಿಸಂಬಂಧಿ**-ಉದ್ದೇಶ್ಯಭೂತನು, ಅಂತಹ ಶ್ರೀವಿಶಿಷ್ಟನೇ, **ಉಪಾಯಃ ಉಪೇಯಶ್ಚ**-ಉಪಾಯವೂ ಮತ್ತು ಉಪೇಯವೂ ಸಹ ಎಂಬುದು, **ಪ್ರಥಿತಃ**-ಪ್ರಸಿದ್ಧವಾದುದು, **ನಿಗಮಚಕ್ಷುಷಾಂ** ಎಂದು ಹೇಳಿರುವದರಿಂದ, **ನಿಗಮದಲ್ಲೇ** ಪ್ರಸಿದ್ಧವಾದುದು ಎಂಬ ಭಾವವು. ಯಾವಾಗ ನಿಗಮದಲ್ಲಿ ಪ್ರಸಿದ್ಧವೆಂದಾಯಿತೋ, ಆಗ ಸ್ಮೃತಿ ಪುರಾಣೇತಿಹಾಸಗಳಲ್ಲೂ ಪ್ರಸಿದ್ಧವೆಂಬುದು ಕೈಮುತಿಕನ್ಯಾಯಸಿದ್ಧವು. ಶ್ರುತಿಸಿದ್ಧವೆಂದು ಕಠವಲ್ಲಿ ತೈತ್ತಿರೀಯ ವಾಕ್ಯಗಳು ಹಿಂದೆಯೇ ಉದಾಹೃತಗಳು. "ಓಂ ಇತ್ಯಾತ್ಮಾನಂ ಯುಂಜೀತ" (ತೈ. ನಾರಾ. ) ಆತ್ಮಹವಿಸ್ಸಿನ ಸಮರ್ಪಣೆಗೆ ಲಕ್ಷ್ಮೀನಾರಾಯಣರಿಬ್ಬರೂ ಉದ್ದೇಶ್ಯರೆಂದು ಹಿಂದೆಯೇ ಉಪಪಾದಿತವು. ಅಹಿರ್ಬುಧ್ನ ಸಂಹಿತೆಯು **'ಅನನ್ಯಸಾಧಾರಣಂ ಈಶಿತೃತ್ವಂಶ್ರೀ ಶ್ರೀಶಯೋಃ, ದ್ವಾಚಸದ್ವೈಕಶೇಷೀ'** ಹೀಗಿರುವದರಿಂದಲೇ, ಹವಿಸ್ಸಿನ ರೂಪದಲ್ಲಿ ಇಬ್ಬರ ಪಾದದಲ್ಲೂ ಸಮರ್ಪಿಸುವ ಜೀವಾತ್ಮನೂ ಇವರಿಬ್ಬರ ನಿಯಮನಕ್ಕೆ ಸೇರಿ, ಅವರುಗಳ **ಸ್ವಂ** ಆಗುದರಿಂದಲೇ, ಕಾರಿಕೆಯಲ್ಲಿ ಸ್ವಾಮಿನಾ ಎಂಬ ಪ್ರಯೋಗವು. **ಓಂ ಇತ್ಯಾತ್ಮಾನಂ ಯುಂಜೀತ** ಎಂಬಲ್ಲಿರುವ ಪ್ರಣವವೇ **ಅಕಾರಾರ್ಥದಿಂದಲೂ ಉಕಾರಾರ್ಥದಿಂದಲೂ** ಲಕ್ಷ್ಮೀವಿಶಿಷ್ಟತೆಯನ್ನು ಬೋಧಿಸುತ್ತದೆ. **'ಲಕ್ಷ್ಮ್ಯಾ ಸಹ'** ಎಂಬ ಲಕ್ಷ್ಮೀತಂತ್ರಶ್ಲೋಕವು ಇವುಗಳ ಉಪಪಾದನೆಯು.

ಇಲ್ಲಿ **ನಿಗಮಚಕ್ಷುಷಾಮ್** ಎಂಬ ಪ್ರಯೋಗದಿಂದ. ಶಾಸ್ತ್ರಚಕ್ಷುಸ್ಸನ್ನು ಹೊಂದದಿರುವವರಿಗೆ ಉಪಾಯತ್ವ ಉಪೇಯತ್ವವೆರಡರಲ್ಲೂ ಅನ್ವಯವಿಲ್ಲವು, ಉಪೇಯತ್ವದಲ್ಲಿ ಮಾತ್ರ ಉಂಟೆಂದು ಹೇಳಬಹುದೆಂಬುದೂ ತೋರಿಬರುತ್ತದೆ. ಶ್ರುತಿಯೇ ವ್ಯಕ್ತವಾಗಿ ಹೇಳಿರುವಾಗ, ಉಪಾಯತ್ವದಲ್ಲೂ ಉಪೇಯತ್ವದಲ್ಲೂ ಅನ್ವಯ ಉಂಟೆಂಬುದು ಸ್ಥಾಪಿತವೆಂದು ತಿಳಿಸುವದಕ್ಕಾಗಿಯೂ **ನಿಗಮಚಕ್ಷುಷಾಮ್** ಎಂಬ ಪ್ರಯೋಗವು. ಶ್ರುತಿಯೇ ಹಾಗೆ ಹೇಳಿರುವಾಗ ಕಣ್ಣುಬಿಟ್ಟು ಆ ಅಭಿಪ್ರಾಯಗಳನ್ನು ಗ್ರಹಿಸದೇ ಇರುವದು ನ್ಯಾಯವೇ ಎಂಬರ್ಥಕ್ಕಾಗಿಯೂ ಹಾಗೆ ಪ್ರಯೋಗವು. ಸ್ವರೂಪರಕ್ಷಾಭರ ಫಲಸಮರ್ಪಣೆಗಳಲ್ಲಿ ಲಕ್ಷ್ಮೀನಾರಾಯಣರಿಬ್ಬರೂ ಉದ್ದೇಶ್ಯರೆಂದು ಹಿಂದೆಯೇ ಪ್ರಭಾವವ್ಯವಸ್ಥಾಧಿಕಾರದಲ್ಲೂ ಸಾಂಗಪ್ರಪದನಾಧಿಕಾರದಲ್ಲೂ ಹೇಳಿದರು; ಅದನ್ನೇ ಇಲ್ಲಿ ಜ್ಞಾಪಿಸಿ

ರುತ್ತಾರೆ.—**ಸ್ವರೂಪಸಮರ್ಪಣೆ** ಎಂದರೆ ಸ್ವಶೇಷತ್ವಾನುಸಂಧಾನವು; **'ಅಸ್ಯಾ ಮಮಚ ಶೇಷಂಹಿವಿಭೂತಿರುಭಯಾತ್ಮಿಕಾ'** ಎಂಬಲ್ಲಿ ಇದು ವ್ಯಕ್ತವಾದುದ ರಿಂದ ಲಕ್ಷ್ಮಿಯಿಲ್ಲದೆ ಸ್ವರೂಪಸಮರ್ಪಣೆಯೂ ಕೂಡುವದಿಲ್ಲವು. **'ಲಕ್ಷ್ಮ್ಯಾ ಸಹ ಹೃಷೀಕೇಶಃ ರಕ್ಷಕಃ'** ಎಂದಿರುವದರಿಂದ ಭರಸಮರ್ಪಣೆಗೂ ಇಬ್ಬರೂ ಉದ್ದೇಶ್ಯರು, **ಪರಿಪೂರ್ಣ ಬ್ರಹ್ಮಾನುಭವಕ್ಕೂ ಕೈಂಕರ್ಯಕ್ಕೂ** ಸಹ ಎಂದರೆ ಫಲಸಮರ್ಪಣೆಗೆ ಎಂದರೆ ಉಪೇಯತ್ವಭಾವದಲ್ಲಿ ಫಲಪ್ರಾಪ್ತಿಗೂ ಇಬ್ಬರೂ ಉದ್ದೇ ಶ್ಯರೇ. ಆದುದರಿಂದ **ಸ್ವರೂಪಾದಿ ಸಮರ್ಪಣೆ** ಎಂಬ ಪ್ರಯೋಗವು. ಸ್ವರೂಪ ಸಮರ್ಪಣೆ, ರಕ್ಷಾಭರ ಸಮರ್ಪಣೆ, ಫಲಸಮರ್ಪಣೆ ಈ ಮೂರರಲ್ಲೂ ಅನು ಸಂಧಾನವು ಹೇಗಿರತಕ್ಕದ್ದೆಂದರೆ—**ಶ್ರೀಮತೇ ನಾರಾಯಣಸ್ಯಾಹಂ ಶೇಷೋಸ್ಮಿ** ಎಂಬದಾಗಿ ಸ್ವರೂಪ ಸಮರ್ಪಣೆಯಲ್ಲಿ ಅನುಸಂಧಾನವು; **ಶ್ರೀಮತಿ ಭಗವತಿ ಮಮಕೈಂಕರ್ಯಸಿದ್ಧ್ಯರ್ಥಂ ತಾದೃಶೇ ಭಗವತಿ ಚ ರಕ್ಷಾಭರಂನ್ಯಸ್ಯಾಮಿ** ಎಂಬ ಅನುಸಂಧಾನವೇ ರಕ್ಷಾಭರ ಸಮರ್ಪಣವು; ಫಲಸಮರ್ಪಣವೆಂದರೆ **ಮಮ ರಕ್ಷಣಫಲಮಪಿ ಶ್ರೀಮತೋ ಭಗವತ ಏವ** ಎಂಬದಾಗಿ ಅನುಸಂಧಾನವು. ಬರೀನಾರಾಯಣನೇ ಉಪಾಯವಾಗಿ ರಕ್ಷಕನೆಂಬುದು ಶ್ರೀಮದ್ರಾಮಾಯಣದಲ್ಲಿ ಉಪಪಾದಿತವಲ್ಲವಾಗಿ **'ನಕಶ್ಚಿನ್ನಾಪರಾಧ್ಯತಿ'** ಎಂದು ಹೇಳಿದವಳೂ ರಕ್ಷಕ ಳೆಂದೇ ಪ್ರತಿಕಕ್ಷಿಗಳೂ ಒಪ್ಪುವದರಿಂದ ಲಕ್ಷ್ಮಿಗೆ ಉಪಾಯತ್ವದಲ್ಲಿ ಅನ್ವಯ ವಿಲ್ಲವೆಂಬ ವಾದವು ಸರ್ವಾತ್ಮನಾ ಕೂಡುವದಿಲ್ಲವು. ಏಕೆಂದರೆ ಅವರಿಗೆ ತುಂಬಾ ಪ್ರಿಯವಾದ ಈಡಿನಲ್ಲಿ 6-9-3 ನೆಯ ತಿರುವಾಯ್ಮೊಳಿ ಪಾಶುರವಾದ **'ಞಾಲ ತ್ತೋಡೇನಡನ್ದುನಿನ್ರು** ಎಂಬ ಪಾಶುರವ್ಯಾಖ್ಯಾನದಲ್ಲಿ **'ಅಕಾರಾರ್ಥತ್ತೈ ಸಕ್ರಮವಾಗ ವ್ಯಾಖ್ಯಾನಂ ಪಣ್ಣಿಗಿರಾರ್.......ಇಪ್ಪಡಿ ರಕ್ಷಿಕ್ಕುಮಿಡತ್ತಿಲ್ 'ನಕಶ್ಚಿನ್ನಾಪರಾಧ್ಯತಿ' ಎನ್ನುಮವಳುಂ 'ಎನ್ನಡಿಯಾರ್ ಅದುಶೈಯ್ಯಾರ್' ಎನ್ನುಮವನುಮ್ ಕೂಡವಾಯಿತ್ತು; ಆಗೈಯಾಲ್ ಅಕಾರಂ ಮಿಥುನ ತ್ತುಕ್ಕು ವಾಚಕಮಾಯಿತ್ತು'** ಅವರ ಗುರುಗಳೇ ರಕ್ಷಕತ್ವದಲ್ಲಿ ಇಬ್ಬರಿಗೂ ಅನ್ವಯ ಉಂಟೆಂಬುದನ್ನು ಒಪ್ಪಿಕೊಂಡಿರುತ್ತಾರೆ. ಹಾಗೆಯೇ ಶ್ರೀ ಪರಾಶರ ಭಟ್ಟರೂ ಒಪ್ಪಿರುತ್ತಾರೆ. **ಶ್ರಿಯಃಪತಿಯಾಯ್** ಎಂಬ ಶಬ್ದದ ವ್ಯಾಖ್ಯಾನದಲ್ಲಿ ಶ್ರೀ ಜೀಯರವರು **ಶ್ರಿಯಃಪತಿಯಾಯ್ ಇತ್ಯಾದಿಯಾಲೇ ಪ್ರಾಪ್ಯ ಪ್ರಾಪಕ ವಿಭೂತಿಸ್ವರೂಪಂ ಶೊಲ್ಲಿತ್ತು'** ಎಂದು ಅಪ್ಪಣೆ ಕೊಡಿಸಿರುತ್ತಾರೆ. ಆದುದ ರಿಂದ ಉಪಾಯತ್ವದಲ್ಲಿ ಅನ್ವಯವಿಲ್ಲವೆಂದು ಈಗ ವಾದಿಸುವವರ ಹಿರಿಯರೇ ಉಪಾಯತ್ವದಲ್ಲಿ ಲಕ್ಷ್ಮಿಗೆ ಅನ್ವಯ ಉಂಟೆಂಬುವನ್ನು ಒಪ್ಪಿರುತ್ತಾರೆ. ಆದು ದರಿಂದ ಅವರ ವಾದಕ್ಕೆ ಸಾಂಪ್ರದಾಯಕತ್ವಬಲವೂ ಇಲ್ಲವು. ದ್ವಯದ ಪೂರ್ವ ಖಂಡ ಉತ್ತರಖಂಡ ಇವೆರಡರಲ್ಲೂ **ಶ್ರೀಮತ್ ಶ್ರೀಮತೇ** ಲಕ್ಷ್ಮಿಯುಕ್ತ ಸಂಬಂಧವನ್ನು ಸೂಚಿಸುವದಕ್ಕಾಗಿ 'ಮತುಪ್' ಪ್ರತ್ಯಯ ಒಂದೇವಿಧ

**'ಶ್ರೀಮಾ'ನೆನ್ರು ಎನ್ರು ಪೊದುವಿಲೇ ಶೊನ್ನಾಲುಮ್ ಪ್ರಮಾಣಾನು ಸಾರತ್ತಾಲೇ ಇಜ್ಜ್ ಶ್ರಿಯಃಪತಿಯೆನ್ನಪಡಿ ಸಾಮಾನ್ಯಮಾಗತ್ತೋತ್ತಿನ ಸಂಬಂಧಮ್ ಶ್ರುತಿಬಲತ್ತಾಲೇ ವಿಶೇಷಿತಮ್.**

ವಾಗಿರುತ್ತದೆ. ಹೀಗಿರುವಾಗ ಎರಡು ಕಡೆಯಲ್ಲೂ ಒಂದೇವಿಧವಾದ ಅರ್ಥವನ್ನು ಹೇಳದೆ ಭಿನ್ನವಾಗಿ ಅರ್ಥಮಾಡುವದು ಸರಿಯಲ್ಲವೆಂದು ತಿಳಿಸುವದಕ್ಕಾಗಿ ಮುಂದೆ ಮತುಪರ್ಥವನ್ನು ಉಪಪಾದಿಸುತ್ತಾರೆ.

**ಶ್ರೀಮಾನ್ ಎನ್ರುಪೊದುವಿಲೇ ಶೊನ್ನಾಲುಮ್**-ಶ್ರೀಮಾನ್ ಎಂಬದಾಗಿ ಸಾಮಾನ್ಯವಾಗಿ ಪೂರ್ವೋತ್ತರ ಎರಡು ಖಂಡಗಳಲ್ಲೂ ಹೇಳಿದ್ದರೂ, **ಪ್ರಮಾಣಾನುಸಾರತ್ತಾಲೇ**-ತೈತ್ತರೀಯ ನಾರಾಯಣಾನುವಾಕ ಮೊದಲಾದ "ಹ್ರೀಶ್ಚ ತೇ ಲಕ್ಷ್ಮೀಶ್ಚಪತ್ನ್ಯೌ" "ಅಸ್ಯೇಶಾನಾ ಜಗತೋ ವಿಷ್ಣುಪತ್ನೀ" ಎಂಬ ಪ್ರಮಾಣ ವಾಕ್ಯಗಳನ್ನನುಸರಿಸಿ, **ಇಜ್ಜ್**-ಈ ದ್ವಯಮಂತ್ರದ ಪೂರ್ವೋತ್ತರಖಂಡ ಗಳಲ್ಲಿ, **ಶ್ರಿಯಃಪತಿಯೆನ್ನಪಡಿ**-ಶ್ರಿಯಃಪತಿಯನ್ನು ಬೋಧಿಸಿತೆಂದು ಭಾವಿಸ ತಕ್ಕದ್ದಾಗಿರುತ್ತದೆ. ನಾರಾಯಣಾನುವಾಕದಲ್ಲಿ **'ಸಹಸ್ರಶೀರ್ಷನು, ವಿಶ್ವಾತ್ಮನು, ನಾರಾಯಣನು, ಅಚ್ಯುತನು, ಪರಮಾತ್ಮಾ, ಪರಂಜ್ಯೋತಿಸ್** ಇತ್ಯಾದಿ ಶಬ್ದಗಳಿಂದ ಹೇಳಲ್ಪಟ್ಟವನು ಯಾರೆಂಬ ವಿಚಾರದಲ್ಲಿ, **'ಹ್ರೀಶ್ಚತೇ ಲಕ್ಷ್ಮೀಶ್ಚಪತ್ನ್ಯೌ'** ಲಕ್ಷ್ಮೀಪತಿಯೇ ಈ ಶಬ್ದಗಳಿಂದ ಹೇಳಲ್ಪಟ್ಟನೆಂಬುದು ಸ್ಥಾಪಿತನಾಗುವದರಿಂದಲೂ, ಇತರರಲ್ಲವೆಂಬ ವ್ಯಾವರ್ತಿಯೂ ತೋರುವದರಿಂದಲೂ ಶ್ರಿಯಃಪತಿತ್ವವು ಸ್ವರೂಪನಿರೂಪಕ ಧರ್ಮನಾಯಿತು. ಆದುದರಿಂದ ಸ್ವರೂಪರಕ್ಷಾಭರ ಫಲಸಮರ್ಪಣೆಗೆ ಯಾರು ಉದ್ದೇಶ್ಯವೆಂದರೆ ಲಕ್ಷ್ಮೀಯುಕ್ತನಾಗಿ **ಶ್ರಿಯಃಪತಿ** ಎಂದು ಹೇಳಿಸಿಕೊಳ್ಳುವನೇ ಉದ್ದೇಶ್ಯನೆಂದು ತಿಳಿಸುವದಕ್ಕಾಗಿ ಪೂರ್ವಖಂಡದಲ್ಲಿಯೂ ಉತ್ತರಖಂಡದಲ್ಲಿಯೂ ಇರುವ **ಶ್ರೀಮಾನ್** ಎಂಬ ಪದಕ್ಕೆ ಶ್ರಿಯಃಪತಿ ಎಂಬರ್ಥವೆಂದು ಉಪದೇಶಿಸಿರುತ್ತಾರೆ. ಶ್ರೀಮಾನ್ ಎಂದು ಹೇಳಿದರೂ, ಶ್ರಿಯಃಪತಿ ಎಂದು ಹೇಳಿದರೂ ಅಪೃಥಕ್ಸಿದ್ಧವಿಶೇಷಣವಾಗಿ ನಿತ್ಯಾನಪಾಯಿನಿಯಾದ ಲಕ್ಷ್ಮಿಯೊಂದಿಗಿರುವ ನಾರಾಯಣನು ಎಂಬುದರಿಂದ ಲಕ್ಷ್ಮೀನಾರಾಯಣರಿಬ್ಬರೂ ಹೇಳಲ್ಪಟ್ಟರೆಂದೇ ಭಾವಿಸತಕ್ಕದ್ದೆಂದು, ಈ ಅಭಿಪ್ರಾಯವನ್ನೇ ಮನಸ್ಸಿನಲ್ಲಿಟ್ಟು ಶ್ರೀ ಭಗವದ್ಗೀತೆಯಲ್ಲಿ **ಶ್ರೀ ಭಗವಾನುವಾಚ** ಎಂಬುದಕ್ಕೆ ದಾಸನು **' ಲಕ್ಷ್ಮೀವಿಶಿಷ್ಟನಾದ ಭಗವಂತನು ಹೇಳುತ್ತಾನೆ '** ಎಂದೇ ವ್ಯಾಖ್ಯಾನವನ್ನು ಬರೆದಿರುತ್ತೇನೆ. **ಸಾಮಾನ್ಯಮಾಗ**-ಸಾಮಾನ್ಯವಾಗಿ, **ತೋತ್ತಿನ**-ತೋರಿಬರುವ, **ಸಂಬಂಧವು ಶ್ರುತಿಬಲತ್ತಾಲೇ**-ತೈತ್ತರೀಯ ನಾರಾಯಣಾನುವಾಕದ ಬಲದಿಂದ **ವಿಶೇಷಿತಂ**-ವಿಶೇಷಾರ್ಥವುಳ್ಳದ್ದಾಯಿತು, ಎಂದರೆ ವಿಶೇಷಿಸಿ ನಿರ್ಧರಿಸಲ್ಪಟ್ಟಿತೆಂಬ ಭಾವವು. ಲಕ್ಷ್ಮಿಯು ಆತನಿಗೆ ಪತ್ನಿಯು ಎಂದು ಶ್ರುತಿಯು ವಿಶೇಷಿಸಿ ಹೇಳದೆ ಇದ್ದಪಕ್ಷದಲ್ಲಿ ನಾರಾಯಣನ ಸ್ವರೂಪ

**ಸರ್ವರುಕ್ಕುಮ್ ಆಶ್ರಯಣೀಯ್ಯೈಯೂಯ್ ಜಗನ್ಮಾತಾವಾನ ಇವ ಳುಕ್ಕು ಪತಿಎನ್ರುಪರತ್ವಮುಮ್, ಸೌಲಭ್ಯಮುಮ್** ತೋತ್ತುಮ್.

---

ನಿರ್ಧಾರಣೆಯೇ ಇಲ್ಲವಾದುದಾಗುತ್ತದೆಂಬ ಭಾವವು. ಇಲ್ಲಿ **ಶ್ರುತಿಬಲತ್ತಾಲೇ**-ಸುಮ್ಮನೆ ಶ್ರುತಿಪ್ರಮಾಣದಿಂದ ಎಂದು ಹೇಳದೆ, ಶ್ರುತಿಬಲವೆಂದು ಹೇಳಿರುವದ ರಿಂದ, ಈ ಶ್ರುತಿಬಲದಿಂದ ಅಪೃಥಕ್ಸಿದ್ಧವಿಶೇಷಣತ್ವ, ನಿತ್ಯಾನಪಾಯಿತ್ವವೇ ಮೊದಲಾದವು ವ್ಯಕ್ತವಾದುದರಿಂದ ಉಪಾಯತ್ವದಲ್ಲೂ ಲಕ್ಷ್ಮಿಗೆ ಅನ್ವಯ ಉಂಟೆಂಬುದು ಆ ಪ್ರಮಾಣ ಬಲದಿಂದ ಸಮರ್ಥಿಸಬಹುದೆಂಬ ತಾತ್ಪರ್ಯವು ಸೂಚಿಸಲ್ಪಟ್ಟಿತು. ಇಂತಹ ಶ್ರುತಿಬಲವಿಲ್ಲದಿದ್ದರೆ ಪ್ರತಿಕಕ್ಷಿಯವರ ವಾದಕ್ಕೆ ಸಮಾಧಾನವನ್ನು ಹೇಳುವದು ಕಷ್ಟತರವಾಗುತ್ತಿತ್ತೆಂಬ ಭಾವವೂ ತೋರಿಬರು ತ್ತದೆ. ಇಲ್ಲಿ **ಶ್ರೀಮತ್** ಎಂದು ಪ್ರತ್ಯೇಕಿಸಿ ಮತುಪ್ಪ್ರತ್ಯಯದೊಂದಿಗೆ ಹೇಳಿರು ವದೂ **'ಹ್ರೀಶ್ಚತೇ ಲಕ್ಷ್ಮೀಶ್ಚಪತ್ನ್ಯೌ'** ಎಂಬ ಶ್ರುತಿವಾಕ್ಯಕ್ಕೂ ಐಕಕಂಠ್ಯ ವನ್ನು ಏರ್ಪಡಿಸಿದರೆ, ಆಗ ನಾರಾಯಣ ಎಂಬ ವಿಶೇಷ್ಯವು ಮುಂದಿರುವದರಿಂದ ನಾರ ಶಬ್ದದಲ್ಲೇ ಲಕ್ಷ್ಮಿಯನ್ನೂ ಸೇರಿಸದೆ ವ್ಯಾವರ್ತಿಸಿ ಹೇಳಬೇಕಾಗಿರುವದ ರಿಂದ, ಲಕ್ಷ್ಮಿಯ ಪರತ್ವವು ಏರ್ಪಟ್ಟಿತು. ಈ ಶ್ರುತಿವಾಕ್ಯ ಬಲದಿಂದ ಲಕ್ಷ್ಮಿಯ ಇನ್ನೂ ಯಾವ ಸ್ವಭಾವಗಳು ತೋರಿಬರುತ್ತವೆಂಬುದನ್ನು ಉಪಪಾದಿಸುತ್ತಾರೆ, **ಸರ್ವರುಕ್ಕುಮ್**-ಎಲ್ಲರಿಗೂ, **ಆಶ್ರಯಣೀಯ್ಯೈಯೂಯ್**-ಶ್ರೀ ಶಬ್ದದಲ್ಲೇ ತೋರಿ ಬರುವ ಹಾಗೆ ಆಶ್ರಯಿಸಲು ಯೋಗ್ಯಳಾಗಿ, ಹಾಗಿರಲು ಕಾರಣವೇನೆಂದರೆ, **ಜಗನ್ಮಾತಾವಾನ**-ಲೋಕಮಾತೆಯಾದ, **ಇವಳುಕ್ಕು**-ಈ ಲಕ್ಷ್ಮಿಗೆ, **ಪತಿ ಎನ್ರು**-ಗಂಡನು ಎಂಬುವದರಿಂದ, **ಪರತ್ವವೂ, ಸೌಲಭ್ಯವೂತೋತ್ತುಂ** ತೋರಿಬರುತ್ತದೆ. **ಸರ್ವಚೇತನರಿಗೂ ತಾಯಿಯಾಗಿ** ಅನುಗ್ರಹಮಯಳಾದುದರಿಂದ, ಸರ್ವರೂ ಲಕ್ಷ್ಮಿ **ಯನ್ನೇ ಆಶ್ರಯಿಸುತ್ತಾರೆ**; ಹಾಗೆ ಸರ್ವರೂ ಆಶ್ರಯಿಸುವಳಿಗೂ ಭರ್ತಾ ಎಂದಾದ **ನಂತರ** ನಾರಾಯಣನಿಗೆ ಸರ್ವೋತ್ಕೃಷ್ಟತೆಯು ಎಂದರೆ ಪರತ್ವವು ಲಭಿಸಿತು, **ಮತ್ತು ಎಲ್ಲಾ** ಆಶ್ರಿತರು ತಮ್ಮ ತಾಯಿಯನ್ನು ಮುಂದಿಟ್ಟುಕೊಂಡು ಹೋಗು **ವದರಿಂದ** ಭಗವಂತನು ಶಾಸ್ತಾವಾಗಿದ್ದರೂ ವಾತ್ಸಲ್ಯಾತಿಶಯಕ್ಕೆ ಕಟ್ಟುಬಿದ್ದು **ಅಂತಹ** ಆಶ್ರಿತರ ವಿಷಯದಲ್ಲಿ ಸೌಲಭ್ಯತೆಯನ್ನೇ ಪ್ರದರ್ಶಿಸಬೇಕಾಗಿರುತ್ತದೆ; **ಆದುದರಿಂದಲೇ ಸೌಲಭ್ಯಮುಂ ತೋತ್ತುಮ್** ಎಂದು ಪ್ರಯೋಗಿಸಿರುತ್ತಾರೆ; ಹೀಗೆ ಲಕ್ಷ್ಮೀ ಪತ್ನಿಯಾಗಿರುವ ಸಂಬಂಧದಿಂದ ಪರತ್ವವೂ ಸೌಲಭ್ಯವೂ ಭಗ ವಂತನಿಗೆ ಏರ್ಪಡುತ್ತವೆ ಎಂಬ ಭಾವವು. ಈ ಅಭಿಪ್ರಾಯಗಳನ್ನೇ ಮನಸ್ಸಿ ನಲ್ಲಿಟ್ಟು **'ಅಪ್ರಮೇಯಂಹಿತತ್ತೇಜಃ ಯಸ್ಯಸಾಜನಕಾತ್ಮಜಾ'** (ರಾ. ಅರಣ್ಯ ೩೭-೧೭) ಎಂದು ಮಾರೀಚನಿಂದ ರಾವಣನಿಗೆ ಬೋಧಿಸುವ ಹಾಗೆ ಮಹರ್ಷಿಯ ಉಕ್ತಿಯೂ ಇದೆ. ಶ್ರೀ ಪರಾಶರಭಟ್ಟರೂ **'ಸ್ವರೂಪಂ ಸ್ವಾತಂತ್ರ್ಯಂ ಭಗ**

ಇಜ್ಞು ಪಿರಾಟ್ಟಿಯ್ಯೆ ಏಶೇಷಿತ್ತೆಡುಕ್ಕೈಯಾಲೇ ನಾರಶಬ್ದಾರ್ಥಜ ವತ **ಇದಂ ಚಂಪ್ರವದನೇ ತ್ವದಾಶ್ಲೇಷೋತ್ಕರ್ಷಾಪ್ಯವತಿ ಖಲು ನಿಷ್ಕರ್ಷ ಸಮಯೇ'** (ಶ್ರೀಗುಣ 28) ಎಂಬಲ್ಲಿಯೂ, **'ತ್ವದಾಯತ್ತರ್ಧಿತ್ವೇಪ್ಯಭವದ ಪರಾಧೀನವಿಭವಃ'** (ಶ್ರೀಗುಣ 31) ಎಂಬಲ್ಲಿಯೂ, ಇದನ್ನೇ ಉಪಪಾದಿಸಿರುತ್ತಾರೆ. ಲಕ್ಷ್ಮಿಯ ಮಾತೃತ್ವವು **'ಕರ್ದಮೇನಪ್ರಜಾಭೂತಾ ಮಯಿಸಂಭವ ಕರ್ದಮ । ಶ್ರಿಯಂವಾಸಯಮೇಕುಲೇ ಮಾತರಂ ಪದ್ಮಮಾಲಿನೀಂ'** ಎಂಬ ಶ್ರೀಸೂಕ್ತ ಶ್ಲೋಕದಲ್ಲಿ ವ್ಯಕ್ತವು. ಇದರರ್ಥವೇನೆಂದರೆ—**ಕರ್ದಮೇನ**-ಕರ್ದಮ ಪ್ರಜಾಪತಿಯಿಂದ, **ಪ್ರಜಾಭೂತಾ**-ಪುತ್ರಿಯಾಗಿ ಸ್ವೀಕರಿಸಲ್ಪಟ್ಟವಳು, ಆದುದರಿಂದ ಆ ಕರ್ದಮ ಪ್ರಜಾಪತಿಯನ್ನು ಕುರಿತು ಪ್ರಾರ್ಥನೆಯು, **ಹೇ ಕರ್ದಮ**-ಓ ಕರ್ದಮ ಪ್ರಜಾಪತಿಯೇ, ತಮ್ಮ ಮಗಳನ್ನು, **ಮಯಿಸಂಭವ**-ಲಕ್ಷ್ಮಿಯನ್ನು ಆರಾಧಿಸುತ್ತಿರುವ ನನ್ನಲ್ಲಿ ಅನುಗ್ರಹವಿಡುವ ಹಾಗೆ ಮಾಡಿರಿ, **ಮೇಕುಲೇ**-ಲಕ್ಷ್ಮಿಯ ಪಾದಾರವಿಂದಭಜನದಲ್ಲಿರುವ ನನ್ನ ಪುತ್ರ ಪುತ್ರಿ ಪೌತ್ರಾದಿ ಕುಲದಲ್ಲಿ ಅಥವಾ ಗೃಹದಲ್ಲಿ, **ವಾಸಯ**-ನಿತ್ಯವಾಸವನ್ನು ಮಾಡುವ ಹಾಗೆ ಮಾಡಿರಿ, ನಿಮಗೆ ಮಗಳಾಗಿ ಹುಟ್ಟಿದುದರಿಂದ ನೀವು ತುಂಬಾ ಮಹನೀಯರು, ಭಾಗವತೋತ್ತಮರು, ಆದುದರಿಂದ ನಿಮ್ಮನ್ನೇ ಪ್ರಾರ್ಥಿಸುತ್ತೇನೆ; ನಿಮ್ಮ ಮಗಳನ್ನು ಅನುಗ್ರಹಿಸುವಹಾಗೆ ಮಾಡುವ ಭಾರವು ತಮ್ಮದು ಎಂಬ ಭಾವವು; ಆಕೆಯು ಎಂತವಳೆಂದರೆ **ಮಾತರಂ**-ಲೋಕಕ್ಕೆಲ್ಲಾ ತಾಯಿಯು, ಆದುದರಿಂದ ನನಗೂ ತಾಯಿಯು; ಮತ್ತು **ಪದ್ಮಮಾಲಿನೀಂ**-ಕಮಲಪುಷ್ಪಗಳ ಹಾರವನ್ನು ಧರಿಸಿರುವವಳು; ಇದರಿಂದ ಸೌಂದರ್ಯ ಲಾವಣ್ಯಾದಿಯುಕ್ತಳೆಂದೂ, ಕೃಪಾವಾತ್ಸಲ್ಯಾದಿ ಗುಣಯುಕ್ತಳೆಂದೂ, ಹೇಳಿದಂತಾಯಿತು; ಇಂತಹ ಲಕ್ಷ್ಮಿಯನ್ನು ನಿತ್ಯವಾಸಮಾಡುವಹಾಗೆ ಮಾಡಿರಿ ಎಂಬ ಭಾವವು. ಶ್ರೀ ಪರಾಶರರೂ **'ನಿತ್ಯೈವೈಷಾ ಜಗನ್ಮಾತಾ'** (ವಿ. ಪು. ) ಎಂದು ಪ್ರಯೋಗಿಸಿರುತ್ತಾರೆ. ಲಕ್ಷ್ಮೀತಂತ್ರದಲ್ಲಿ **'ಮಾತರಂ ಜಗತಾಮೇತಾಂ ಅನಾರಾಧ್ಯ ಮಹತ್ಕೃತಃ'** (೧. ಅಧ್ಯಾಯ) ಎಂದಿರುತ್ತದೆ.

ಆಗಲಿ, ನಾರಾಯಣ ಶಬ್ದಾರ್ಥವು **ನಾರಗಳಿಗೆಲ್ಲಾ** ಅಯನವೆಂಬದಾಗಿ, ಈ ನಾರಶಬ್ದವು ನಿತ್ಯವಸ್ತುಗಳನ್ನೆಲ್ಲಾ ಬೋಧಿಸುವದರಿಂದ, ತನ್ನ ಪತಿಗೆ ಶೇಷಭೂತಳಾದ ಲಕ್ಷ್ಮಿಯೂ ನಾರ ಶಬ್ದದಲ್ಲೇ ಸೇರಿರುವಾಗ ಮತ್ತೂ ಶ್ರೀಮನ್ನಾರಾಯಣನೆಂದು ಏಕೆ ಹೇಳಿತು? ಎಂದರೆ ಅರ್ಥಸ್ವಾರಸ್ಯವನ್ನು ಬೋಧಿಸುತ್ತಾರೆ. ಲಕ್ಷ್ಮಿಯು ನಿತ್ಯಾನಪಾಯಿನಿಯಾಗಿ ಸದಾ ಸಂಶ್ಲೇಷೆಯನ್ನು ಹೊಂದಿರುವದರಿಂದ ಆತನಿಗೆ ಅಪೃಥಕ್ಸಿದ್ಧವಿಶೇಷಣವೆಂದೂ ಪರತತ್ತ್ವಭಾವವು ಈ ವಿಶೇಷಣವಿಲ್ಲದೆ, ಉಂಟಾಗಲಾರದೆಂದೂ, ಇಲ್ಲಿ ಮುಖ್ಯವಾಗಿ ಪತಿಪಾರಾರ್ಥ್ಯವನ್ನು ಸೂಚಿಸುತ್ತ

**ಳಾನ ವಸ್ತ್ವಂತರಙ್ಗಳಿಲ್ ಕಾಟ್ಟಿಲ್, ವ್ಯಾವೃತ್ತಿಯುಮ್, ವಿಶೇಷಣಮಾಗನಿರ್ದೇಶಿಕ್ಕೈಯಾಲೇ ಯಥಾಪ್ರಮಾಣಮ್ ಪತಿಪಾರಾರ್ಥ್ಯಮುಮ್ ಸೂಚಿತಮ್.**

ದೆಂದೂ ಮುಂದಿನ ವಾಕ್ಯದಿಂದ ಹೇಳುತ್ತಾರೆ. **ಇಙ್ಗು**-ಈ ಮಂತ್ರದಲ್ಲಿ, **ಪಿರಾಟ್ಟಿಯೈ** ಲಕ್ಷ್ಮಿಯನ್ನು, **ವಿಶೇಷಿತ್ತೈಡುಕ್ಕೈಯಾಲೇ**-ಮುಖ್ಯವಾಗಿ **ಶ್ರೀಮತ್** ಎಂಬ ವಿಶೇಷಣವಾಗಿ ಪ್ರಯೋಗಿಸಿರುವದರಿಂದ, **ನಾರಶಬ್ದಾರ್ಥಙ್ಗಳಾನ**-ನಾಶವಿಲ್ಲದೆ ನಿತ್ಯವಸ್ತುಗಳ ಸಮೂಹವೆಂಬ ಅರ್ಥವುಳ್ಳ ನಾರಶಬ್ದದಿಂದ ಬೋಧಿತಗಳಾದ, **ವಸ್ತ್ವನ್ತರಙ್ಗಳಿಲ್‌ಕಾಟ್ಟಿಲ್**-ಲಕ್ಷ್ಮಿಯೂ ಈ ನಿತ್ಯವಸ್ತು ಸಮೂಹದಲ್ಲಿ ಸೇರಿದ್ದರೂ ಬೇರೇ ವಿಶೇಷಣವಾಗಿ ಮನ್ತ್ರದಲ್ಲಿ ಹೇಳಲ್ಪಟ್ಟಿರುವದರಿಂದ, ನಾರಶಬ್ದದಿಂದ ಬೋಧಿತಗಳಾದ ಇತರ ನಿತ್ಯವಸ್ತುಗಳಿಗಿಂತಲೂ, **ವ್ಯಾವೃತ್ತಿಯುಮ್**-ಅವುಗಳಿಗಿಂತ ಸರ್ವಾಧಿಕಳೆಂಬ ವೈಲಕ್ಷಣ್ಯವನ್ನು, ಮತ್ತು **ವಿಶೇಷಣಮಾಗ ನಿರ್ದೇಶಿಕ್ಕೈಯಾಲೇ** - ಅಪೃಥಕ್ಸಿದ್ಧವಿಶೇಷಣಗಳೆಂದು ಹೇಳುವದರ ಮೂಲಕ **ಯಥಾಪ್ರಮಾಣಮ್**-ಪ್ರಮಾಣಗಳಲ್ಲಿ ಹೇಳಿರುವಹಾಗೆ, **ಪತಿಪಾರಾರ್ಥ್ಯಮುಮ್**-ಪತಿಗೇ ತಾನು ಶೇಷಭೂತಳೆಂಬುದೂ, **ಸೂಚಿತಮ್**-ಈ ವಿಶೇಷಣದಿಂದ ಸೂಚಿತವು. ನಾರಶಬ್ದದಲ್ಲಿ ಲಕ್ಷ್ಮಿಯೂ ಸೇರಿ ಅವಳಿಗೂ ಅಯನಂ ಈ ನಾರಾಯಣನು ಎಂದು ಅರ್ಥಮಾಡುವದೂ ಶಾಸ್ತ್ರಸಮ್ಮತವಾಗಿರುವಾಗ, ಈ ಮನ್ತ್ರವು ಶ್ರೀಮನ್ನಾರಾಯಣಚರಣೌ ಎಂದು ಹೇಳಿರುವದರಿಂದ ತೋರುವ ಸ್ವಾರಸ್ಯಗಳೇನೆಂದರೆ—

೧. ಅವಳು ಇತರ ನಾರಗಳಿಗಿಂತಲೂ ಸರ್ವೋತ್ಕೃಷ್ಟಳೆಂಬುದು ತೋರಿಬರುತ್ತದೆ. ಕೆಲವರು ನಾರ ಶಬ್ದದಲ್ಲಿ ಎಲ್ಲಾ ಜೀವಕೋಟಿಯೂ ಸೇರಿರುವದರಿಂದ ಲಕ್ಷ್ಮಿಯೂ ಜೀವಕೋಟಿಗೆ ಸೇರಿದವಳೆಂದು ಅಭಿಪ್ರಾಯಪಡಬಹುದು. ಹಾಗಲ್ಲವು. ಇವಳು ಈಶ್ವರಕೋಟಿಗೆ ಸೇರಿದವಳು, ಲಕ್ಷ್ಮಿಯೊಂದಿಗೇನೇ ಸೇರಿದ್ದು ಪರತತ್ವವು; ಆದುದರಿಂದ ಆ ಎಲ್ಲಾ ಜೀವಕೋಟಿಯಿಂದಲೂ ವ್ಯಾವೃತ್ತಿಯನ್ನು ಹೇಳಿ, ಅವುಗಳಿಗಿಂತ ಸರ್ವೋತ್ಕೃಷ್ಟಳು. ನಾರಾಯಣನ ಹಾಗೆಯೇ ಇವಳೂ ಸರ್ವರಿಂದಲೂ ಆಶ್ರಿತಳೆಂಬ ಭಾವವನ್ನು ಈ ವಿಶೇಷಣವು ಸೂಚಿಸುತ್ತದೆ. ಆದುದರಿಂದ ಲಕ್ಷ್ಮಿಯು ಈಶ್ವರಕೋಟಿಗೆ ಸೇರಿದವಳೆಂಬುದು ಸ್ಥಾಪಿತವು

೨. ಈಕೆಯು ಅಪೃಥಕ್ಸಿದ್ಧವಿಶೇಷಣಳು, ಎಲ್ಲಾ ಅವಸ್ಥೆಯಲ್ಲೂ ಉಪಾಯಭಾವದಲ್ಲೂ ಉಪೇಯಭಾವದಲ್ಲೂ ಪತಿಯೊಡನೆಯೇ ಸೇರಿ ಚೇತನ ಸಂರಕ್ಷಕಳು ಎಂಬ ಭಾವವನ್ನು ಈ ವಿಶೇಷಣವು ಸೂಚಿಸುತ್ತದೆ. ಈ ವಿಶೇಷಣದಿಂದಲೇ ಸರ್ವೇಶ್ವರನಿಗೆ ಪರತ್ವಸೌಲಭ್ಯಾದಿಗಳು ಸಲ್ಲುತ್ತವೆಂದೂ ಹಿಂದೆಯೇ ಹೇಳಲ್ಪಟ್ಟಿತು.

೩. ಹಾಗಾದರೆ ಲೋಕಕ್ಕೆ ಇಬ್ಬರೂ ನಿಯಾಮಕರಾದರೆ, ಈಶ್ವರದ್ವಿತ್ವ ಉಂಟಾಗಿ, ವಿಘಾತ ಉಂಟಾದೀತು. ಮತ್ತೂ ನಿಸ್ಸಮಾಭ್ಯಶ್ರುತಿಗೆ ವಿರೋಧವೂ ಉಂಟಾಗುತ್ತದೆ. ಹೀಗೆ ಪೂರ್ವಪಕ್ಷ ಬಂದೀತೆಂದು ಭಾವಿಸಿ ಈ ವಾದಗಳಿಗೆ ಅನುಕೂಲವಿಲ್ಲವೆಂದು ಲಕ್ಷ್ಮಿಯು ಪತಿಪಾರಾರ್ಥ್ಯವನ್ನು ಪತಿಗೆ ಶೇಷಭೂತಳಾಗಿ ರುವವನ್ನೂ ಈ ವಿಶೇಷಣವು ಪ್ರಕಟಿಸುತ್ತದೆ. ಇದಕ್ಕೆ ಅನೇಕ ಶಾಸ್ತ್ರಪ್ರಮಾಣ ಗಳುಂಟೆಂದು ತಿಳಿಸುವದಕ್ಕಾಗಿ **ಯಥಾಪ್ರಮಾಣವು** ಎಂಬ ಪ್ರಯೋಗವು. ಯಾವಾಗ ಪತಿಗೆ ಶೇಷಭೂತಳೆಂದಾಯಿತೋ ಆವಾಗ ಈಶ್ವರದ್ವಿತ್ವವಾದಕ್ಕಾಗಲಿ ಅದರಿಂದುಂಟಾಗಬಹುದಾದ ವ್ಯಾಘಾತಕ್ಕಾಗಲಿ ಅವಕಾಶವಿಲ್ಲವು. ವ್ಯಾಘಾತ ವೆಲ್ಲಾ ಈ ಪ್ರಾಕೃತ ದಂಪತಿಗಳಲ್ಲಿ ಮಾತ್ರವೇ. ಪರಸ್ಪರ ಸಙ್ಕಲ್ಪಗಳನ್ನರಿತಿರುವ ಲೋಕದಂಪತಿಗಳಿಗೆ ವ್ಯಾಘಾತವೆಲ್ಲಿಯದು? **ನ ತೇ ದುಃಖಂ ಕರಿಷ್ಯಾಮಿ** ಎಂದಲ್ಲವೇ ವನವಾಸದಲ್ಲಿ ನಿನಗೆ ಏನೊಂದೂ ಕ್ಲೇಶಗಳನ್ನು ಕೊಡುವಳಲ್ಲವೆಂ ದಲ್ಲವೇ ಸೀತೆಯು ಹೇಳಿಕೊಂಡಿರುತ್ತಾಳೆ. ಯಾವಾಗ ಪತಿಗೆ ಶೇಷಭೂತ ಳೆಂದಾಯಿತೋ ಆಗ ನಿಸ್ಸಮಾಭ್ಯಧಿಕಶ್ರುತಿಗೆ ವಿರೋಧವೆಲ್ಲಿಯದು. ಈ ಎರಡು ವಾದಗಳನ್ನೂ, ಈ ಪತಿಪಾರಾರ್ಥ್ಯವು ಈ ಶ್ರೀಮತ್ ಎಂಬ ವಿಶೇಷಣದಿಂದ ತೋರಿ ಬಂದು, ದೂರೀಕರಿಸುತ್ತವೆ ಎಂಬ ಭಾವನೆಯಿಂದ ಉಪದೇಶಿಸಿರುತ್ತಾರೆ.

ಶ್ರೀಶಬ್ದ ವ್ಯುತ್ಪತ್ತಿಯಾದ "ಶ್ರೀಯತೇ ಭಗವನ್ತಮ್" ಮತ್ತು **ಶೃಣೋತಿ ಶ್ರಾವಯತಿ** ಎಂಬ ವ್ಯುತ್ಪತ್ತಿಗಳಿಂದಲೂ ಪತಿಪಾರಾರ್ಥ್ಯವು ವ್ಯಕ್ತವೆಂಬ ಭಾವವು. ಆದರೂ ಶಾಸ್ತ್ರಪ್ರಮಾಣಗಳುಂಟೆಂಬ ಭಾವನೆಯಿಂದ **ಯಥಾಪ್ರಮಾಣಮ್** ಎಂದು ಪ್ರಯೋಗಿಸಿರುತ್ತಾರೆ. ಆ ಪ್ರಮಾಣಗಳಲ್ಲಿ ಕೆಲವನ್ನು ಉದಾ ಹರಿಸುವೆವು.

೧. **ಯಥಾಮಯಾ ಜಗದ್ವ್ಯಾಪ್ತಂ ಸ್ವರೂಪೇಣ ಸ್ವಭಾವತಃ ।**
**ತಥಾವ್ಯಾಪ್ತಂ ತಯಾಸರ್ವಂ ನಿಯನ್ತ್ರೀಚ ತಥೇಶ್ವರೀ ।**
**ಮಚ್ಛೇಷಭೂತಾ ಸರ್ವೇಷಾ ಮೀಶ್ವರೀ ವಲ್ಲಭಾಮಮ ।**
**ಅಸ್ಯಾ ಮಮ ಚ ಶೇಷಂಹಿ ವಿಭೂತಿರುಭಯಾತ್ಮಿಕಾ** ॥ ವಿಷ್ವ

ಕ್ಸೇನ ಸಂಹಿತೆಯಲ್ಲಿ ಭಗವದ್ವಾಕ್ಯವು. **ಮಚ್ಛೇಷಭೂತಾ** ಎಂದು ಹೇಳಿರುವದ ರಿಂದ ಪತಿಪಾರಾರ್ಥ್ಯವು ಹೇಳಲ್ಪಟ್ಟಿತು. ಮಿಕ್ಕ ಮೂರು ಪಾದಗಳಿಂದಲೂ ಇತರ ಸಾರವಸ್ತುಗಳಿಗಿಂತಲೂ ವ್ಯಾವೃತ್ತಿಯು ಬೋಧಿತವು. '**ಯಥಾಮಯಾಹಿ ಸಾವ್ಯಾಪ್ತಾ ತಥಾವ್ಯಾಪ್ತೋಹಮೀಶ್ವರಃ**' ಎಂಬುದರಿಂದ ಈಶ್ವರಕೋಟಿಗೇ ಸೇರಿದವಳೆಂಬುದು, ಆತನಿಗೆ ಅಪೃಥಕ್ಸಿದ್ಧ ವಿಶೇಷಣವೆಂಬುದೂ ಬೋಧಿತವು.

೨. '**ಅನನ್ಯಾಹಿಮಯಾಸೀತಾ**' ಎಂಬ ಶ್ರೀರಾಮೋಕ್ತಿಯೂ, '**ಅನನ್ಯಾರಾಘವೇಣಾಹಂ ಭಾಸ್ಕರೇಣ ಪ್ರಭಾಯಥಾ**' ಎಂಬ ಸೀತೋಕ್ತಿಯೂ ಅಪೃಥಕ್ಸಿದ್ಧವಿಶೇಷಣಭಾವವನ್ನು ಬೋಧಿಸುತ್ತದೆ.

## ಇಹ ಮತುಪ್ ಪ್ರತ್ಯಯಾರ್ಥಃ

**'ಭೂಮನಿಂದಾಪ್ರಶಂಸಾಸು ನಿತ್ಯಯೋಗೇತಿಶಾಯಿನೇ । ಸಂಸರ್ಗೇಸ್ತಿ ವಿವಕ್ಷಾಯಾಂ ಭವನ್ತಿಮತುಪಾದಯಃ' ಎನ್ರು ಅನೇಕಾರ್ಥಮಾಯಿರುನ್ತ**

೩. **'ಯಥಾಸರ್ವಗತೋವಿಷ್ಣುಃ ತಥೈವೇಯಂ ದ್ವಿಜೋತ್ತಮ'** (ವಿ. ಪು. **'ತ್ವಯೈವವಿಷ್ಣುನಾಚಾಂಬ ಜಗದ್ವ್ಯಾಪ್ತಂ ಚರಾಚರಮ್'** ಎಂಬೀ ಪ್ರಮಾಣಗಳು.)

೪. **'ಈಶ್ವರೀಂಗ್ ಸರ್ವಭೂತಾನಾಂ'** ಎಂಬ ಶ್ರೀಸೂಕ್ತವಾಕ್ಯವೂ ಸಹ ಲಕ್ಷ್ಮಿಗೂ ಇತರ ಸಾರವಸ್ತುಗಳಿಗೂ ಇರುವ ವ್ಯಾವೃತ್ತಿಯನ್ನು ಸೂಚಿಸುತ್ತವೆ.

೫. **'ಸ್ವಧಯಾತದೇಕಮ್'** ಎಂಬ ತೈತ್ತರೀಯ ವಾಕ್ಯವೂ ಅಪೃಥಕ್ಸಿದ್ಧವಿಶೇಷಣತ್ವವನ್ನು ಬೋಧಿಸುತ್ತದೆ. ಹೀಗೆ ಇನ್ನೂ ಅನೇಕ ಪ್ರಮಾಣಗಳನ್ನು ಮಹರ್ಷಿವಾಕ್ಯಗಳಿಂದಲೂ ಉದಾಹರಿಸಬಹುದು.

೬. **'ಶ್ರೀವತ್ಸವಕ್ಷಾ ನಿತ್ಯಶ್ರೀ ವಿಷ್ಣೋರನಪಾಯಿನೀ'**

೭. **'ನಿತ್ಯೈವೈಷಾಜಗನ್ಮಾತಾ ವಿಷ್ಣೋಶ್ಶ್ರೀರನಪಾಯಿನೀ'** ಇವೆಲ್ಲಾ ಅಪೃಥಕ್ಸಿದ್ಧವಿಶೇಷಣತ್ವದಿಂದುಂಟಾಗುವ ನಿತ್ಯಯೋಗವನ್ನು ಬೋಧಿಸುತ್ತವೆ.

## ಇಲ್ಲಿ ಮತುಪ್ ಪ್ರತ್ಯಯದ ಅರ್ಥನಿರ್ಣಯವು

ಹಿಂದೆ ಮತುಪ್ ಪ್ರತ್ಯಯವಿರುವದರಿಂದಲೇ ಈ ಅಪೃಥಕ್ಸಿದ್ಧವಿಶೇಷಣವಾದ ನಿತ್ಯಯೋಗವು ಬೋಧಿತವೆಂದು ಹೇಳಲ್ಪಟ್ಟಿತು. ಯಾವಾಗ ನಿತ್ಯಯೋಗವು ಸಿದ್ಧವೋ, ಆಗ ಸನ್ನಿಯೋಗಶಿಷ್ಟನ್ಯಾಯದ ಪ್ರಕಾರ ಲಕ್ಷ್ಮಿಯ ಪ್ರವೃತ್ತಿ ನಿವೃತ್ತಿಗಳೆಲ್ಲಾ ಯಾವಾಗಲೂ ಆತನ ಪ್ರವೃತ್ತಿ ನಿವೃತ್ತಿಗಳೊಂದಿಗೇ ಆದುದರಿಂದ ಪರಮಾತ್ಮನು ಚೇತನನ ವಿಷಯದಲ್ಲಿ ಉಪಾಯಭೂತನಾಗುವಾಗಲೂ ಲಕ್ಷ್ಮಿಯೂ ಉಪಾಯಭೂತಳೆಂಬ ತಾತ್ಪರ್ಯವು ಉಂಟಾಗುತ್ತದೆ. ಆದರೆ ಪೂರ್ವಪಕ್ಷಿಯು ಹೇಳಬಹುದು. ಏನೆಂದರೆ, ಮತುಪ್ ಪ್ರತ್ಯಯಕ್ಕೆ ಅನೇಕಾರ್ಥಗಳಿರುವಾಗ, ನಿತ್ಯಯೋಗವನ್ನೇ ಹೇಗೆ ಹೇಳುತ್ತೀರಿ? ಎಂದರೆ, ಮತುಪ್ ಪ್ರತ್ಯಯಕ್ಕೆ ನಿತ್ಯಯೋಗವು ಒಂದರ್ಥವಾದುದರಿಂದ, ಈ ಅರ್ಥಕ್ಕೆ ಅನೇಕ ಪ್ರಮಾಣಬಲವಿರುವದರಿಂದ ನಿತ್ಯಯೋಗವನ್ನೇ ಹೇಳಬೇಕೇ ವಿನಾ ಇತರ ಅರ್ಥಗಳನ್ನು ಹೇಳತಕ್ಕದ್ದು ಉಚಿತವಲ್ಲವೆಂದು ತಿಳಿಸುತ್ತಾರೆ. ಮತುಪ್ ಪ್ರತ್ಯಯವು ಯಾವ ಅರ್ಥಗಳನ್ನು ಬೋಧಿಸುತ್ತದೆಂಬುದನ್ನು ಮೊದಲು ಉಪಪಾದಿಸುತ್ತಾರೆ.

**'ಮತುಪಾದಯಃ**—ಮತುಪ್ ಪ್ರತ್ಯಯ ಮೊದಲಾದವುಗಳು, ಇಲ್ಲಿ ಮೊದಲಾದವು ಎಂಬುದರಿಂದ ಈ ಅರ್ಥವು ಇತರ ಪ್ರತ್ಯಯಗಳೂ ಹೇಳುತ್ತವೆಂಬ

**ದೇಯಾಗಿಲುಮ್ ಇಜ್ಜು ಮತುಪ್ ಉಪಯೋಗವಿಶೇಷತ್ತಾಲೇ ಪ್ರಮಾಣ ಸಿದ್ಧಮಾನನಿತ್ಯಯೋಗತ್ತೈ ಚ್ಚೊಲ್ಲುಗಿರದು.**

ವಿಗ್ರಹತ್ತಿಲ್ ಬ್ರಹ್ಮಚರ್ಯಾ (ಭಿಸಯಾ) **ವಸ್ಥೈಯಿಲುಮ್ಮುಳ್ಳಪಡ**

ಭಾವವು. **ವಿವಕ್ಷಾಯಾಂ ಭವನ್ತಿ**-ಮುಂದೆ ಹೇಳುವ ಅರ್ಥಗಳನ್ನು ಬೋಧಿಸುವವರಲ್ಲಿ ಉಪಯುಕ್ತವಾದವು. ಆ ಅರ್ಥಗಳು ಯಾವುವೆಂದರೆ:—

೧. **ಭೂಮ**—ಬಹುತ್ವವನ್ನು ಹೇಳುವದರಲ್ಲಿ; **ಧನವಾನ್, ಪಶುಮಾನ್** ಉದಾಹರಣೆಗಳು.

೨. **ನಿಂದಾ**—ನಿಂದಿಸುವದರಲ್ಲಿ; ತುಂಬಾ **ಪ್ರಜ್ಞಾವಾನ್** ಆಗಿ, ಇಂತಹ ಕೆಲಸವೇ ಉದಾ.

೩. **ಪ್ರಶಂಸಾಸು**—ಪ್ರಶಂಸೆಯಲ್ಲಿ; **ಬುದ್ಧಿಮಾನ್** ಉದಾ.

೪. **ನಿತ್ಯಯೋಗೇ**—ನಿತ್ಯಯೋಗದಲ್ಲಿ; **ಆದಿತ್ಯೋರಶ್ಮಿವಾನ್,** ಆತ್ಮಾ ಜ್ಞಾನವಾನ್, ಉದಾ.

೫. **ಅತಿಶಾಯಿನೇ**— ಇತರರಿಗಿಂತ ಮೇಲಾದವನೆಂಬ ಅರ್ಥದಲ್ಲಿ, ಶಕ್ತಿಮಾನ್, ವೀರ್ಯವಾನ್.

೬. **ಸಂಸರ್ಗೇ**— ಸುಮ್ಮನೆ ಸಂಬಂಧವೆಂಬದರಲ್ಲೂ, ಸ್ಫಟಿಕವು ದಾಸವಾಳದ ಸಂಸರ್ಗದಿಂದ **ರಕ್ತಿಮವಾನ್.**

೭. ಅಸ್ತಿ—ಇದೆ ಎಂಬರ್ಥದಲ್ಲೂ ಉಪಯುಕ್ತವು. **ಪರ್ವತೋ ಧೂಮವಾನ್** ಎಸ್ರು-ಹೀಗೆ, **ಅನೇಕಾರ್ಥವಾಯಿರುನ್ತದೇಯಾಗಿಲುಮ್**-ಮತುಪ್ ಪ್ರತ್ಯಯವು ಏಳರ್ಥಗಳಲ್ಲಿ ಕ್ಲೃಪ್ತಾಗಿದ್ದರೂ, **ಇಜ್ಜು ಮತುಪ್ ಉಪಯೋಗವಿಷತ್ತಾಲೇ**-ಈ ದ್ವಯಮನ್ತ್ರದಲ್ಲಿ ಮುಖ್ಯವಾಗಿ ಪ್ರಯೋಗಿಸಿರುವದರಿಂದ, **ಪ್ರಮಾಣ ಸಿದ್ಧಮಾನ**-ಅನೇಕ ಪ್ರಮಾಣಗಳಿಂದ ಸ್ಥಾಪಿತವಾದ, **ನಿತ್ಯಯೋಗತ್ತೈ ಚೊಲ್ಲುಗಿರದು**-ಒಬ್ಬರನ್ನೊಬ್ಬರು ಎಂದಿಗೂ ಬಿಟ್ಟು ಇಲ್ಲದಿರುವ ಭಾವವನ್ನು ಬೋಧಿಸುತ್ತದೆ. ಅನೇಕ ಪ್ರಮಾಣಗಳು ಹಿಂದೆಯೇ ಉದಾಹರಿಸಲ್ಪಟ್ಟಿವೆ. **ದೇವಜುಷ್ಟಾಮ್** -ಲೀಲಾವಿಭೂತಿಯನ್ನು ಹೊಂದಿರುವ **'ದೇವಏಕೋ ನಾರಾಯಣಃ'** ಎಂಬಲ್ಲಿ ಹೇಳಿರುವ ನಾರಾಯಣನೊಂದಿಗೆ ಲೀಲಾರಸವನ್ನು ಅನುಭವಿಸುವದಕ್ಕಾಗಿ ಸೇರಿರುವಳು ಎಂಬ ಶ್ರೀಸೂಕ್ತ ಪ್ರಮಾಣವೂ ಇದೆ. **ಶ್ರದ್ಧಯಾದೇವೋದೇವತ್ವಮಶ್ನುತೇ** ಎಂಬ ಪ್ರಮಾಣವೂ ಸಮಾನಾರ್ಥವುಳ್ಳದ್ದು. ಹಾಗೆಯೇ **'ಲಕ್ಷ್ಮೀಪುನಪಗಾಮಿನೀಮ್'** (ಶ್ರೀಸೂಕ್ತ) "ವಿಷ್ಣೋಃ ಶ್ರೀರನಪಾಯಿನೀ" (ವಿ. ಪು.) ಎಂಬ ಪ್ರಮಾಣಗಳೂ ಉಂಟು.

ಹೀಗೆ ಯಾವಾಗಲೂ ನಾರಾಯಣನಿಗೆ ಲಕ್ಷ್ಮಿಯ ನಿತ್ಯಯೋಗ ಉಂಟೆಂದು ಸ್ಥಾಪಿಸಿದರು, ವಾಮನಾವತಾರದಲ್ಲಿ ಬ್ರಹ್ಮಚರ್ಯಾವಸ್ಥೆಯಲ್ಲಿಯೂ,

**(೧) ‘ ಕೃಷ್ಣಾಜಿನೇನ ಸಂವೃಣ್ವೀ ವಧೂಂ ವಕ್ಷಸ್ಥಲಾಲಯಾಮ್ ’ ಎನ್ನುಂ ಪಡಿಯಿರೇ ನಿತ್ಯಯೋಗಮಿರುಪ್ಪದು.**

ರಾಮಾವತಾರದಲ್ಲಿ ಅಶೋಕವನದಲ್ಲಿರುವಾಗಲೂ, ಇನ್ನೂ ಮಿಕ್ಕ ಸಂದರ್ಭ ಗಳಲ್ಲೂ ಪರಸ್ಪರ ವಿಶ್ಲೇಷೆಯು ತೋರಿಬರುತ್ತದಲ್ಲಾ ಎಂದರೆ ಅದಕ್ಕೆ ಮುಂದೆ ಸಮಾಧಾನವನ್ನು ಹೇಳುತ್ತಾರೆ. **ವಿಗ್ರಹತ್ತಿಲ್**-ಅವತಾರ ಕಾಲದಲ್ಲಿ ಎತ್ತಿದ ದಿವ್ಯಮಙ್ಗಳ ವಿಗ್ರಹದಲ್ಲಿ, **ಬ್ರಹ್ಮಚರ್ಯಾವಸ್ಥೆಯಿಲುಮ್** ಅಥವ **ಬ್ರಹ್ಮಚರ್ಯಾಭಿನಯಾವಸ್ಥೈಯಿಲುಮ್** - ವಾಮನರೂಪನಾಗಿ ಬ್ರಹ್ಮಚರ್ಯಾವಸ್ಥೆಯನ್ನು ತೋರುವ ಅವಸ್ಥೆಯಲ್ಲೂ, **‘ವಕ್ಷಸ್ಥಲಾಲಯಾಂ**-ತನ್ನ ವಕ್ಷಸ್ಥಲವನ್ನೇ ಗೃಹ ವಾಗಿ ಎಂದರೆ ವಾಸಸ್ಥಾನವಾಗಿ ಮಾಡಿಕೊಂಡಿರುವ, **ವಧೂಂ**-ತನ್ನ ಪತ್ನಿಯಾದ ಲಕ್ಷ್ಮಿಯನ್ನು, **ಕೃಷ್ಣಾಜಿನೇನಸಂವೃಣ್ವೀ**-ವಾಮನಾವತಾರ ವೇಷದ ಕೃಷ್ಣಾ ಜಿನದಿಂದ, **ಸಂವೃಣ್ವೀ**-ಯಾರಿಗೂ ಕಾಣದಹಾಗೆ ಮುಚ್ಚಿಕೊಂಡು” **ಎನ್ನುಂ ಪಡಿಯಿರೇ**-ಎಂದು ಹೇಳಿರುವಹಾಗೆಯಲ್ಲವೇ, **ನಿತ್ಯಯೋಗಮ್**-ಲೋಕದಂ ಪತಿಗಳು ಯಾವಾಗಲೂ ಸೇರಿರುವಿಕೆಯು. ವಾಮನಾವತಾರಿಯಾಗಿ ಬ್ರಹ್ಮಚರ್ಯಾ ಶ್ರಮ ವೇಷವನ್ನು ಕೈಕೊಂಡರೂ, ಆಗಲೂ ಲಕ್ಷ್ಮಿಯು ವಿಷ್ಣುವಿನೊಂದಿಗೆ ಆತನ ವಕ್ಷಸ್ಥಳದಲ್ಲೇ ಇದ್ದಳು. ಕಾಣದಹಾಗೆ ಕೃಷ್ಣಾಜಿನದಿಂದ ಮುಚ್ಚಿಕೊಂಡಿದ್ದ ರೆಂದು ಪುರಾಣದಲ್ಲಿ ಹೇಳಲ್ಪಟ್ಟಿರುತ್ತದೆ. ಆದುದರಿಂದ ಆಗಲೂ ನಿತ್ಯಯೋಗ ವಿಲ್ಲದಿರಲಿಲ್ಲವೆಂಬ ಭಾವವು.

ವಾಮನಾವತಾರದಲ್ಲೇನೋ ಕೃಷ್ಣಾಜಿನದಿಂದ ಮರೆಮಾಡಿಕೊಂಡಿದ್ದರೆಂ ದೇನೋ ಪ್ರಮಾಣವನ್ನು ಉದಾಹರಿಸಿದಿರಿ. ರಾಮಾವತಾರದಲ್ಲಿ ಅನೇಕಸಲ ವಿಶ್ಲೇಷೆಯು ತೋರಿಬರುತ್ತದಲ್ಲಾ ಎಂದರೆ ಆಗಲೂ ನಿತ್ಯಯೋಗವೇ ಎಂದು ಶ್ರೀ ಪರಾಶರರು “ರಾಘವತ್ವೇ ಭವೇತ್ಸೀತಾ ರುಕ್ಮಿಣೀ ಕೃಷ್ಣಜನ್ಮನಿ” ಎಂದು ಉಪಪಾದಿಸಿರುತ್ತಾರೆ. ಕೆಲವು ಕಾಲ ವಿಶ್ಲೇಷವಿರುವಹಾಗೆ ತೋರೋಣವು ಲೋಕವಿಡಂಬನವು ಎಂದು ಭಾವಿಸತಕ್ಕದ್ದು. ಪರಸ್ಪರ ಇಂಗಿತಜ್ಞರಾಗಿಯೇ ನಡೆದಿರುತ್ತಾರೆ. ಇದನ್ನೇ ಪ್ರಾಜ್ಞನಾದ ಆಂಜನೇಯನು **‘ ಅಸ್ಯಾದೇವ್ಯಾ ಮನಸ್ತಸ್ಮಿನ್ ತಸ್ಯಚಾಸ್ಯಾಂ ಪ್ರತಿಷ್ಠಿತಮ್ ’** (ರಾ. ಸುಂ.) ಎಂಬುದರಿಂದ ವ್ಯಕ್ತಪಡಿಸಿರುತ್ತಾರೆ. **‘ಅಸಂದೇಶಾತ್ತುರಾಮಸ್ಯ’** ಎಂಬಲ್ಲಿ ದೂರದಲ್ಲಿರುವದ ರಿಂದ ಪತಿಯ ಆಜ್ಞೆಯು ಇಲ್ಲದಿರುವದರಿಂದ ಎಂದು ಅರ್ಥಮಾಡುವದಕ್ಕಿಂ ತಲೂ, “ಪತಿಯ ಹೃದಯವು ನನಗೆ ತಿಳಿಯುವದು; ನಿನ್ನೊಬ್ಬನನ್ನು ಭಸ್ಮ ಮಾಡಿಬಿಟ್ಟರೆ ಸಾಕೆಂಬುದು ಪತಿಯ ಅಭಿಪ್ರಾಯವಲ್ಲವು, ಆದುದರಿಂದ ಭಸ್ಮ ಮಾಡಲು ಶಕ್ತಿಯಿದ್ದರೂ ಭಸ್ಮಮಾಡುವದಿಲ್ಲವು. ಧೀರೋದಾತ್ತನಾದ ಪತಿಯು

---

(೧) ವಾಮನಪುರಾಣ.

**ಅಪೃಥಕ್ಸಿದ್ಧವಸ್ತುವುಕ್ಕು 'ಶ್ರೀಮಾ' ನೆನ್ರುಮತ್ವರ್ಥೀಯ ಪ್ರತ್ಯಯ ಸಾಪೇಕ್ಷಮಾಗಸಾಮಾನಾಧಿಕರಣ್ಯಮ್ ಕೊಡುಮೋವೆನ್ರುಮ್ ಪೃಥಕ್ಸಿದ್ಧ**

ಬಂದು ನಿನ್ನನ್ನು ಕೊಂದು ಋಷಿಗಳಿಗೆ ತೊಂದರೆಮಾಡುತ್ತಿರುವ ರಾಕ್ಷಸರನ್ನೆಲ್ಲಾ ನಿರ್ಮೂಲವಮಾಡಿ ಲೋಕವನ್ನು ಅರಾಕ್ಷಸವಾಗಿ ಮಾಡಬೇಕೆಂದು ತನ್ನ ಪತಿಯು ಇದ್ದಾನೆಂಬುದು ಸ್ವಾರಸ್ಯಾರ್ಥವು.

ಹೀಗೆ ಲಕ್ಷ್ಮಿಯು ಸ್ವಾಮಿಗೆ ಅಪೃಥಕ್ಸಿದ್ಧವಿಶೇಷಣವೆಂದು ಸ್ಥಾಪಿಸಿದರು. ಈ ವಿಷಯದಲ್ಲಿ ಕೆಲವರು ಎರಡು ಪೂರ್ವಪಕ್ಷಗಳನ್ನು ಹೇಳುವರು; ಅವುಗಳನ್ನು ಉಪಪಾದಿಸಿ ಖಂಡಿಸುತ್ತಾರೆ. ಪೂರ್ವಪಕ್ಷಗಳು ಯಾವುವೆಂದರೆ—

೧. **ಅಯಂಗೌಃ** ಎಂಬಲ್ಲಿ ಗೋವ್ಯಕ್ತಿಗೆ ಗೋತ್ವವು ಅಪೃಥಕ್ಸಿದ್ಧವಿಶೇಷಣವು. ಹಾಗೆಯೇ **ನೀಲೋಘಟಃ** ಎಂಬಲ್ಲಿ ನೀಲತ್ವವು ಘಟಕ್ಕೆ ಅಪೃಥಕ್ಸಿದ್ಧ ವಿಶೇಷಣವು ಹೀಗೆ ಸಾಮಾನಾಧಿಕರಣ್ಯವಿರುತ್ತದೆ. ಹಾಗೆಯೇ **ಜಗಚ್ಛಸಃ, ಭುವನಾನಿ ವಿಷ್ಣುಃ** ಎಂಬಲ್ಲೂ ಭುವನಗಳು ಅಪೃಥಕ್ಸಿದ್ಧ ವಿಶೇಷಣಗಳಾಗಿ ಸಾಮಾನಾಧಿಕರಣ್ಯವು ಹೇಳಲ್ಪಟ್ಟಿರುತ್ತದೆ. ಮತುಪ್ ಪ್ರತ್ಯಯವಿಲ್ಲವಲ್ಲಾ ಎಂಬುದೊಂದು ಆಕ್ಷೇಪಣೆಯು.

೨. **ದಂಡೀ** ಎಂದರೆ ದಂಡವುಳ್ಳವನು. ದಂಡವು ಪೃಥಕ್ಸಿದ್ಧವಿಶೇಷಣವು. ಇಲ್ಲಿ **ಸಃದಂಡೀ** ಎಂದು ಸಾಮಾನಾಧಿಕರಣ್ಯವನ್ನು ಹೇಳಬೇಕಾದರೆ ಮತುಬಾದಿ ಪ್ರತ್ಯಯವಿಲ್ಲದೆ ಹೇಗೆ ಹೇಳಲು ಸಾಧ್ಯವು? ಎಂಬುದು ಎರಡನೆಯ ಆಕ್ಷೇಪಣೆಯು. ಆದುದರಿಂದ **ಶ್ರೀಮಾನ್** ಎಂಬ ಮತುಪ್ ಪ್ರತ್ಯಯದಿಂದ ಅಪೃಥಕ್ಸಿದ್ಧ ವಿಶೇಷಣವು ಲಕ್ಷ್ಮಿಯು ಎಂದು ಹೇಗೆ ಸಾಧಿಸಲು ಸಾಧ್ಯವು? ಈ ಪೂರ್ವಪಕ್ಷಗಳನ್ನೇ ಮೊದಲು ಉಪಪಾದಿಸುತ್ತಾರೆ. **ಅಪೃಥಕ್ಸಿದ್ಧವಸ್ತುವುಕ್ಕು**-ಒಂದರೊಂದಿಗೆ ಯಾವಾಗಲೂ ಅಗಲದಿರುವ ವಸ್ತುವಿಗೆ, **ಶ್ರೀಮಾನ್ ಎನ್ರು**-ಲಕ್ಷ್ಮೀ ಸಹಿತನಾಗಿ ಎಂದು, **ಮತ್ವರ್ಥೀಯ ಪ್ರತ್ಯಯ ಸಾಪೇಕ್ಷಮಾಗ,** ಮತುಪ್ ಪ್ರತ್ಯಯವಾಗಲಿ ಅದರರ್ಥವುಳ್ಳ ಪ್ರತ್ಯಯದ ಸಾಪೇಕ್ಷವಾಗಿ, **ಸಾಮಾನಾಧಿಕರಣ್ಯಂ ಕೊಡುಮೋ**-ಸಾಮಾನಾಧಿಕರಣ್ಯವನ್ನು ಹೇಳುವದು ಸಮಂಜಸವೋ? **ಎನ್ರುಮ್**-ಎಂಬದಾಗಿಯೂ ಇದು ಒಂದು ಪೂರ್ವಪಕ್ಷವು; ಇದರ ತಾತ್ಪರ್ಯವೇನೆಂದರೆ—ಎರಡನೆಯ ಪೂರ್ವಪಕ್ಷದಲ್ಲಿ ಮತುಪ್ ಪ್ರತ್ಯಯವಾಗಲೀ ಅಥವಾ ಆ ಅರ್ಥವುಳ್ಳ ಪ್ರತ್ಯಯವಾಗಲೀ ಇದ್ದರೆ ಆಗ ಪೃಥಕ್ಸಿದ್ಧವಿಶೇಷಣವೆಂದು ಊಹಿಸಬೇಕು. ಹಾಗೆ ಶ್ರೀಮಾನ್ ಎಂದು ಮತುಪ್ ಪ್ರತ್ಯಯದಿಂದ ಲಕ್ಷ್ಮಿಯು ಪೃಥಕ್ಸಿದ್ಧವಿಶೇಷಣವು ಎಂದಾಯಿತು.. ಪೃಥಕ್ಸಿದ್ಧವಿಶೇಷಣದ ಸಂದರ್ಭದಲ್ಲಿ ಮತುಪಾದಿಗಳಿಲ್ಲದೆ ಸಾಮಾನಾಧಿಕರಣ್ಯ ಹೇಳಿಕೆಯು ಸಾಧ್ಯವೇಯಿಲ್ಲವೆಂಬುದು **ಅವರವಾದವು. ಇದನ್ನೇ ಮುಂದೆ ಉಪಪಾದಿಸುತ್ತಾರೆ.—ಪೃಥಕ್ಸಿದ್ಧಮಾಗಿಲ್.**

**ಮಾಗಿಲ್ (೧) 'ಕೀರ್ತಿಶ್ಶ್ರೀರ್ವಾಕ್ಚನಾರೀಣಾಮ್' ಎನ್ರುಮ್ (೨) 'ಪೂವಿಲ್ ವಾಳ್‌ಮಗಳಾಯ್' ಎನ್ರುಮ್, ಮತ್ವರ್ಥೀಯ ಪ್ರತ್ಯಯ ನಿರಪೇಕ್ಷಮಾಗ, ಸಾಮಾನಾಧಿಕರಣ್ಯಮ್ ಕೂಡಮೋ? ಎನ್ರುಮ್ ಶಿಲರ್ ಶೊಲ್ಲುಂ ಚೋದ್ಯಙ್ಗಳ್ ಇರಣ್ಡುಮ್ ಮುಂಡಙ್ಗಳ್.**

---

ದಂಡೀ ಎಂಬಲ್ಲಿ ತೋರುವ ಹಾಗೆ ಪೃಥಕ್ಸಿದ್ಧವಿಶೇಷಣವಾದರೆ, **'ಕೀರ್ತಿಶ್ಶ್ರೀರ್ವಾಕ್ಚನಾರೀಣಾಮ್' ಎನ್ರುಮ್**-ಹೆಂಗಸರುಗಳಲ್ಲಿ **ಕೀರ್ತಿರಹಮ್, ಶ್ರೀಶ್ಚಾಹಮ್, ವಾಕ್ಚಾಹಮ್** ಎಂಬ ಶ್ರೀ ಯತಿವರ್ಯರ ವ್ಯಾಖ್ಯಾನುಸಾರವಾಗಿ ಕೀರ್ತಿ ಎಂಬ, ಲಕ್ಷ್ಮಿ ಎಂಬ, ವಾಕ್ಕೆಂಬ ಹೆಸರುಗಳುಳ್ಳ ಸ್ತ್ರೀಯರೂ ನಾನೇ ಎಂದು ಸಾಮಾನಾಧಿಕರಣ್ಯವು. ಮತ್ತು **'ಪೂವಿಲ್‌ವಾಳ್‌ಮಗಳಾಯ್'** ಸರ್ವೇಶ್ವರನು ತಾನೇ ಕಮಲವಾಸಿನಿಯಾದ ಲಕ್ಷ್ಮಿಯಾಗಿ, ಇಲ್ಲಿಯೂ ಸಾಮಾನಾಧಿಕರಣ್ಯವು, ಹೀಗೆ **ಮತ್ವರ್ಥೀಯ ಪ್ರತ್ಯಯ ನಿರಪೇಕ್ಷಮಾಗ**-ಮತ್ವರ್ಥೀಯ ಪ್ರತ್ಯಯವಿಲ್ಲದೆ, **ಸಾಮಾನಾಧಿಕರಣ್ಯಂ ಕೂಡಮೋ**-ಸಾಮಾನಾಧಿಕರಣ್ಯವನ್ನು ಹೇಳುವದು ಸರಿಹೋಗುತ್ತದೋ, **ಎನ್ರುಮ್**-ಎಂಬದಾಗಿ, **ಶಿಲರ್ ಶೊಲ್ಲುಮ್**-ಕೆಲವು ಪೂರ್ವಪಕ್ಷಿಗಳು ಹೇಳುವ, **ಚೋದ್ಯಙ್ಗಳ್ ಇರಣ್ಡುಮ್**-ಈ ಎರಡು ಆಕ್ಷೇಪಣೆಗಳು **ಮುಂದಙ್ಗಳ್**-ಸರಿಯಾದ ಜ್ಞಾನವಿಲ್ಲದ ಹೇಳಿಕೆಗಳು.

ಈ ಎರಡು ಶ್ಲೋಕಗಳನ್ನು ಪೂರ್ವಪಕ್ಷಿಯು ಉದಾಹರಿಸಿರುವದು ನೋಡಿದರೆ, ಲಕ್ಷ್ಮಿಯು ಅವರ ಅಭಿಪ್ರಾಯದಂತೆ ಪೃಥಕ್ಸಿದ್ಧವಿಶೇಷಣವಾದರೂ ಮತುಪ್ ಪ್ರತ್ಯಯವಿಲ್ಲದೆ ಗೀತೆಯಲ್ಲೂ ನಮ್ಮಾಳ್ವಾರ್ರವರ ಪಾಶುರದಲ್ಲೂ ಸಾಮಾನಾಧಿಕರಣ್ಯವನ್ನು ಹೇಳಿರುವದು ಸರಿಯಲ್ಲವೆಂಬಭಿಪ್ರಾಯದಿಂದೆಂದು ಊಹಿಸತಕ್ಕದ್ದು. ಶ್ರೀ ದೇಶಿಕರವರು ಇವೆರಡನ್ನೂ ಪೂರ್ವಪಕ್ಷದಲ್ಲಿ ಉದಾಹರಿಸಿರುವದರಿಂದ, ಪಾರ್ಥಸಾರಥಿಯ ದಿವ್ಯಸೂಕ್ತಿಗೂ ನಮ್ಮಾಳ್ವಾರ್ರವರ ದಿವ್ಯಸೂಕ್ತಿಗೂ ವಿರುದ್ಧವಾದುದು ಪೂರ್ವಪಕ್ಷಿಯವಾದವೆಂದು ವ್ಯಕ್ತಪಡಲಿ ಎಂಬ ಅಭಿಸಂಧಿಯಿಂದಲೇ ಉದಾಹೃತವೆಂದು ಭಾವಿಸತಕ್ಕದ್ದು. ಈ ಶ್ಲೋಕಗಳು ಯಾವುವೆಂದರೆ—

**'ಮೃತ್ಯುಸ್ಸರ್ವಹರಶ್ಚಾಹ ಮುದ್ಭವಶ್ಚ ಭವಿಷ್ಯತಾಮ್ ।**
**ಕೀರ್ತಿಶ್ಶ್ರೀರ್ವಾಕ್ಚನಾರೀಣಾಮ್ ಸ್ಮೃತಿರ್ಮೇಧಾ ಧೃತಿಃ ಕ್ಷಮಾ ॥**

ಸಮಸ್ತವನ್ನೂ ಎಂದರೆ ಪ್ರಾಣವನ್ನೂ ಸಹ ಅಪಹರಿಸುವ ಮೃತ್ಯುದೇವತೆಯೂ ನಾನೇ, ಎಂದರೆ ಆತನಿಗೂ ಅಂತರಾತ್ಮಾ ನಾನೇ, ಮುಂದೆ ಉಂಟಾಗುವ ಉತ್ಪತ್ತಿರೂಪ ಕರ್ಮವೇ ನಾನು. ಸ್ತ್ರೀಗಳಲ್ಲಿ ಸರ್ವೋತ್ಕೃಷ್ಟಳಾಗಿ ಖ್ಯಾತಿಯಲ್ಲಿ ಭೃಗುವಿಂದ ಹುಟ್ಟಿದ ಲಕ್ಷ್ಮಿಯೂ ನಾನೇ. ಏಕೆಂದರೆ—ನಾವಿಬ್ಬರೂ ಪರಸ್ಪರ ವ್ಯಾಪಿಸಿರುವದರಿಂದ ಆಕೆಯೂ ನನ್ನ ವಿಭೂತಿಗೆ ಸೇರಿದವಳಾದುದರಿಂದ, ಹಾಗೆಯೇ **ಪ್ರಥಮಃ ಸ್ತ್ರೀರತ್ನಗಳಾದ ಕೀರ್ತಿಯೂ, ವಾಕ್ಕೂ, ಸ್ಮೃತಿಯೂ, ಮೇಧಾ, ಧೃತಿ,**

**ಎಜ್ಗನೇ ಎನ್ನಿಲ್** (೧) '**ತದ್ಗುಣಸಾರತ್ವಾತ್ತದ್ವ್ಯಪದೇಶಃ ಪ್ರಾಜ್ಞ**ವತ್' ಎಂಬಂತೆ ಸಾಮಾನಾಧಿಕರಣ್ಯ ನಿರ್ದೇಶಕ್ಕೆ
ಕ್ಷಮೆಯೂ ಇಂತಹ ಪ್ರಧಾನ ಸ್ತ್ರೀಗಳೆಲ್ಲಾ ನಾನೇ. ಕೀರ್ತಿ, ಶ್ರೀವಾಕ್, ಸ್ಮೃತಿ, ಮೇಧಾ ಇವೆಲ್ಲಾ ನಾರಿಗಳ ಗುಣಗಳೂ ನಾನೇ ಎಂಬರ್ಥವಲ್ಲವು. ನಾರಿಗಳ ಈ ಗುಣಗಳೂ ನಾನೇ ಎಂದರೆ ಪುರುಷರಲ್ಲಿರುವ ಈ ವಿಶೇಷಣಗಳು ಶ್ರೀಕೃಷ್ಣನಲ್ಲ ವೆಂಬ ಅಪಾರ್ಥವಾಗುತ್ತದೆ. ದಕ್ಷನ ಕನ್ನಿಕೆಗಳಾಗಿಯೂ ಮಹರ್ಷಿ ಕನ್ನಿಕೆಗಳಾ ಗಿಯೂ ಜನಿಸಿದ ಈ ಹಸರಿನ ಸ್ತ್ರೀಗಳು ಪರಮ ಸಾಧ್ವಿಗಳಾಗಿ ಆಯಾ ಉತ್ಕೃಷ್ಟ ಗುಣಗಳುಳ್ಳವರು. ಆದುದರಿಂದ ಅಂತಹ ಉತ್ಕೃಷ್ಟ ನಾರಿಗಳೂ ನಾನೇ ಎಂದರೆ ಅವರಿಗೆಲ್ಲಾ ಆತ್ಮಾವಾಗಿರುವವನೂ ನಾನೇ ಎಂಬ ಭಾವವು. **ನಾರೀ ಣಾಮ್** ಎಂಬುದು ನಿರ್ಧಾರಣಷಷ್ಠಿಯು, ಅದು ಪಾದಮಧ್ಯದಲ್ಲಿರುವದರಿಂದ ಎರಡು ಕಡೆಗೂ ಕಾಕಾಕ್ಷಿನ್ಯಾಯದ ಪ್ರಕಾರ ಅನ್ವಯಿಸುತ್ತದೆ. ದಾಸನ ಭಗವ ದ್ಗೀತಾ ವ್ಯಾಖ್ಯಾನವನ್ನು ಪರಾಂಬರಿಸಿ.

**ಪೂವಿಲ್‌ವಾಳ್ ಮಗಳಾಯ್** ಎಂಬ ಪಾಶುರವು ಯಾವುದೆಂದರೆ—

'**ಮೂವುಲಗಜ್ಗಳುಮಾ ಯಲ್ಲವಾ ಯುಕಪ್ಪಾಯ್ ಮುನಿವಾಯ್ ।**
**ಪೂವಿಲ್‌ವಾಳ್‌ಮಗಳಾಯ್ ತೌವ್ವೈಯಾಯ್ ಪುಗಳಾಯ್‌ಪ್ಪಳಿಯಾಯ್ ।**
**ತ್ತೇವರ್‌ಮೇವಿತ್ತೊಳುನ್ಬಿರು ವಿಣ್ಣಗರ್‌ಚ್ಚೇರ್‌ನ್ದಪಿರಾ ।**
**ಪಾವಿಯೇ ನ್ಮನತ್ತೈಯುರ್ಕೈಗಿನ್ರ ಪರ ಞ್ಜುಡರೇ ॥ ೬ ॥**

**ಮೂವುಲಗಜ್ಗಳುಮಾಯ್**- ಸೃಜ್ಯತ್ವ ಕರ್ಮವಶ್ಯತ್ವ ಗುಣತ್ರಯಾತ್ಮಕತ್ವ ಗಳಿಂದ ದೋಷಗಳಾದ ಮೂರು ಲೋಕಗಳಾಗಿಯೂ, **ಅಲ್ಲವಾಯ್**-ಇಂತಹ ದೋಷಗಳಿಗೆ ವಶವಾಗದ ವಿಲಕ್ಷಣವಾಗಿರುವ ನಿತ್ಯವಿಭೂತಿಯಾಗಿಯೂ, **ಉಕ ಪ್ಪಾಯ್ ಮುನಿವಾಯ್**-ಅನುಗ್ರಹ ನಿಗ್ರಹಗಳುಳ್ಳ ವಿಭೂತಿಯಾಗಿಯೂ, **ಪೂವಿಲ್‌ವಾಯ್ ಮಗಳಾಯ್**-ಕಮಲವಾಸಿನಿಯಾದ ಅನುಗ್ರಹಮಯಳಾದ ಲಕ್ಷ್ಮಿಯನ್ನೇ ವಿಭೂತಿಯಾಗಿಯೂ, ಮತ್ತು **ತೌವ್ವೈಯಾಯ್**-ಆ ಶ್ರೀಗೆ ಹೇತು ವಾದ ಜ್ಯೇಷ್ಠಾದೇವಿಯನ್ನು ವಿಭೂತಿಯಾಗಿಯೂ, **ಪುಕೆಳಾಯ್‌ಪಳಿಯಾಯ್**- ಅವರುಗಳ ಕಾರ್ಯಭೂತವಾದ ಕೀರ್ತಿಯನ್ನೂ, ಅಪಕೀರ್ತಿಯನ್ನೂ ವಿಭೂತಿ ಯಾಗಿ ಹೊಂದಿರುವ, **ದೇವರ್‌ಮೇವಿತೊಳನ್ಬಿರು**-ನಿತ್ಯಸೂರಿಗಳು ಈ ವಿಭೂ ತಿಯ ಆನಂದವನ್ನು ಅನುಭವಿಸುವದಕ್ಕಾಗಿ ಬಂದು ಆರಾಧಿಸುತ್ತಿರುವ, **ತಿರು ವಣ್ಣಗರ್‌ಚ್ಚೇರ್‌ನ್ದಪಿರಾ**-ತಿರುವಣ್ಣನಗರಿಯಲ್ಲಿ ವಾಸಮಾಡುತ್ತಿರುವ ಸರ್ವೇ ಶ್ವರನು, **ಪಾವಿಯೇ‌ನ್ಮನತ್ತೈ**-ಮಹಾಪರಾಧಿಯಾದ ನನ್ನ ಹೇಯ ಮನ ಸ್ಸನ್ನು, **ಉರ್ಕೈಗಿನ್ರಪರಂಜುಡರ್**-ವ್ಯಾಪಿಸಿ ದೋಷರಹಿತವನ್ನಾಗಿ ಮಾಡುವ ಪರಂಜ್ಯೋತಿಸ್ಸಲ್ಲವೇ ಎಂಬರ್ಥವು.

ಮೇಲಿನ ಎರಡು ಚೋದ್ಯಗಳಿಗೂ ಸಮಾಧಾನವನ್ನು ಹೇಳುತ್ತಾರೆ. ಆ ಎರಡು ಚೋದ್ಯಗಳೂ ಸಮಂಜಸವಾದುವಲ್ಲವು. **ಎಜ್ಗನೇ ಎನ್ನಿಲ್** - ಅದು

(೧) ಶಾ. ಸೂ. ೨೩. ೨೯.

**ವತ್' ಎಙ್ಗಿರ ನ್ಯಾಯತ್ತಾಲೇ ಜ್ಞಾನಗುಣತ್ತೈ ಇಟ್ಟು ಆತ್ಮಾವೈ ಜ್ಞಾನ ಮೆನ್ರು ಶೊಲ್ಲಲಾಯಿರುಕ್ಕಚೆಯ್‌ದೇ ಜ್ಞಾನವಾ' ಎನ್ರು ಮತ್ವರ್ಥೀಯ ಪ್ರತ್ಯಯಾನ್ವಿತಮಾಗವುಮ್ ಸಾಮಾನಾಧಿಕರಣ್ಯ ಮುಣ್ಡಾಗಿರಾರ್‍ಪ್ಪೋಲೇ**

ಹೇಗೆ ಎಂದರೆ? ಜೀವಾತ್ಮನು ಜ್ಞಾನಸ್ವರೂಪನು ಮತ್ತು ಜ್ಞಾನಗುಣವುಳ್ಳವನು. ಹೀಗೆ ಜ್ಞಾನವುಳ್ಳ ಆತ್ಮನನ್ನು ಶ್ರುತಿಯಲ್ಲೀ **'ವಿಜ್ಞಾನಂ ಯಜ್ಞಂತನುತೇ'** (ತೈ. ಆನಂ. ೫) ಜ್ಞಾನವೆಂದೇ ಹೇಳಲ್ಪಟ್ಟಿರುವದು ಹೇಗೆ ? ಪರಮಾತ್ಮನೂ ಕೂಡ ಜ್ಞಾನಸ್ವರೂಪನು ಜ್ಞಾನಗುಣಕನು; ಆತನನ್ನೂ ಸಹ "ಸತ್ಯಂ ಜ್ಞಾನ ಮನಂತಂ ಬ್ರಹ್ಮ" ಎಂದು ಜ್ಞಾನಶಬ್ದದಿಂದಲೇ ಶ್ರುತಿಯು ಬೋಧಿಸಿರುತ್ತದೆ. ಇದು ಹೇಗೆ ಎಂಬ ಸಂದೇಹದಲ್ಲಿ ಸೂತ್ರವು (2-3-29) ಹೇಳುತ್ತದೆ ಏನೆಂದರೆ– **'ತದ್ಗುಣಸಾರತ್ವಾತ್ತದ್ವ್ಯಪದೇಶಃಪ್ರಾಜ್ಞವತ್'** ಇಲ್ಲಿ ತು ಶಬ್ದವು ಮೇಲೆ ಉಪ ಪಾದಿಸಿದ ಶಙ್ಕೆಯನ್ನು ವ್ಯಾವರ್ತಿಸಿ ಹೇಳುತ್ತದೆ. **ತದ್ಗುಣಸಾರತ್ವಾತ್**-ಆ ಜ್ಞಾನ ಗುಣವೇ ಆತ್ಮನಿಗೆ ಸ್ವರೂಪ ನಿರೂಪಕವಾಗಿ ಪ್ರಧಾನವಾಗಿರುವದರಿಂದ, **ತದ್ವ್ಯ ಪದೇಶಃ**-ಹಾಗೆ "ಜ್ಞಾನ" "ವಿಜ್ಞಾನ" ಶಬ್ದಗಳಿಂದಲೇ ಹೇಳಲ್ಪಡುತ್ತದೆ; **ಹೇಗೆಂದರೆ—ಪ್ರಾಜ್ಞವತ್**- "ಬ್ರಹ್ಮಣಾವಿಪಶ್ಚಿತಾ" (ತೈ. ಆನಂ. ೧) ಎಂದು **ಪ್ರಾಜ್ಞನೆಂದು ಹೇಳಲ್ಪಟ್ಟ ಪರಮಪುರುಷನು, 'ಸತ್ಯಂಜ್ಞಾನಮನನ್ತಂ ಬ್ರಹ್ಮ' ಎಂಬಲ್ಲಿ ಜ್ಞಾನ ಶಬ್ದದಿಂದ ಹೇಳಲ್ಪಟ್ಟಿರುತ್ತಾನೆ. ಧರ್ಮಭೂತಜ್ಞಾನವು ಪರ ಮಾತ್ಮನಿಗೆ ಅಪೃಥಕ್ಸಿದ್ಧವಿಶೇಷಣವು.** ಹೀಗಿದ್ದರೂ ಜ್ಞಾನವೆಂದೂ ಮತ್ತು **ಜ್ಞಾನವಾನ್ ಪ್ರಾಜ್ಞನು** ಇತ್ಯಾದಿ ಪ್ರಯೋಗಗಳೂ ಹೇಗೆ ಉಂಟೋ ಹಾಗೆಯೇ ಜೀವಾತ್ಮನೂ "ವಿಜ್ಞಾನ" ಶಬ್ದದಿಂದ ಹೇಳಲ್ಪಟ್ಟಿರುವದು ಆತ್ಮಾ "ಜ್ಞಾನವಾನ್" ಆಗಿ ಆತ್ಮನಿಗೆ ಜ್ಞಾನವು ಸಾರಭೂತಗುಣವಾದುದರಿಂದ ಎಂಬುದು ಸೂತ್ರಾ ರ್ಥವು." **ಎಙ್ಗಿರ ನ್ಯಾಯತ್ತಾಲೇ**-ಎಂದು ಹೇಳಿರುವ ನ್ಯಾಯದ ಪ್ರಕಾರ, **ಜ್ಞಾನಗುಣತ್ತೈ ಇಟ್ಟು**-ಆತ್ಮಾವಿನಸಾರಭೂತವಾದ ಜ್ಞಾನಗುಣದ ಮೂಲಕ ವಾಗಿ, **'ಜ್ಞಾನ' ಮೆನ್ರುಶೊಲ್ಲಲಾಯಿರುಕ್ಕಚ್ಚೆಯ್‌ದೆ**-ಜ್ಞಾನವೆಂದೇ ಹೇಳಲು ಸಾಧ್ಯವಾಗಿದ್ದರೂ, **ಜ್ಞಾನವಾನ್ ಎನ್ರು ಮತ್ವರ್ಥೀಯ ಪ್ರತ್ಯಯಾನ್ವಿತಮಾ ಯ್**-"ಜ್ಞಾನವಾನ್" ಎಂದು ಮತುಪ್ಪ್ರತ್ಯಯದ ಅರ್ಥವುಳ್ಳ ಪ್ರತ್ಯಯದಿಂದ ಕೂಡಿದುದಾಗಿ, **ಸಾಮಾನಾಧಿಕರಣ್ಯಮುಣ್ಡಾಗಿರಾರ್‍ಪ್ಪೋಲೇ**-ಸಾಮಾನಾಧಿಕ ರಣ್ಯವು ಉಂಟಾಗಿರುವ ಹಾಗೆ ಈ ಸಂದರ್ಭದಲ್ಲೂ ಸಾಮಾನಾಧಿಕರಣ್ಯದಿಂದ, **ಶ್ರೀರಹಮ್** ಎಂದು ಹೇಳಲು, **ಕುರೈಯಿಲ್ಲೈ**-ಏನೊಂದೂ ನ್ಯೂನತೆಯಿಲ್ಲವು. ಅಪೃಥಕ್ಸಿದ್ಧ ವಿಶೇಷಣವಾದ ಧರ್ಮಭೂತಜ್ಞಾನವನ್ನು ಹೊಂದಿವ ಪರಮಾತ್ಮ ನನ್ನು **'ಸತ್ಯಂಜ್ಞಾನಮನಂತಂ ಬ್ರಹ್ಮ'** ಜ್ಞಾನವೆಂದೇ ಹೇಳಿ, **ಜ್ಞಾನಂಬ್ರಹ್ಮ** ಎಂದು ಹೇಗೆ ಸಾಮಾನಾಧಿಕರಣ್ಯೋಕ್ತಿಯು ಇದೆಯೋ ಮತ್ತು ಜೀವಾತ್ಮನನ್ನೂ

**ಇಜ್ಜಿಗ್ಗುಮ್ ಕುರೈ ಇಲ್ಲೈ. ಆಗೈಯಾಲ್ ಮತ್ವರ್ಥೀಯಪ್ರತ್ಯಯಮಾತ್ರತ್ತೈಕ್ಕೊಂಡು ಪೃಥಕ್ಸಿದ್ಧಮೆನ್ನು ನಿಶ್ಚಯಿಕ್ಕಪ್ಪೋಗಾದು. 'ನರಪತಿರೇವ ಸರ್ವೇಲೋಕಾಃ' ಇತ್ಯಾದಿಗಳಿಲ್ ಪೋಲೇ ವಿವಕ್ಷಾಂತರಮ್ ಸಂಭಾವಿತಮಾನವಿಡತ್ತಿಲ್ ಇಪ್ಪ್ರತ್ಯಯಮಿಲ್ಲಾದ ಸಾಮಾನಾಧಿಕರಣ್ಯಮಾತ್ರತ್ತೈಕ್ಕೊಣ್ಡು ಪೃಥಕ್ಸಿದ್ಧಮೆನ್ರೆನ್ರುವುಮೊಣ್ಣಾದು.**

---

**'ವಿಜ್ಞಾನಂ ಆತ್ಮಾ'** ಎಂದು ಸಾಮಾನಾಧಿಕರಣ್ಯೋಕ್ತಿಯು ಹೇಗೆ ಇದೆಯೋ ಹಾಗೆಯೇ, ಶ್ರೀಮನ್ನಾರಾಯಣನಿಗೆ, ಶ್ರೀಮತ್ ಎಂಬ ಪ್ರಯೋಗದಿಂದ ಸಾರಭೂತ ವಿಶೇಷಣವಾದುದರಿಂದ, **ಶ್ರೀಶ್ಚಾಹಂ** ಎಂದು ಸಾಮಾನಾಧಿಕರಣ್ಯೋಕ್ತಿಯು ಧಾರಾಳವಾಗಿ ಕೂಡುತ್ತದೆಂಬ ಭಾವವು. ಇದರಲ್ಲಿ ಅಸಾಮಂಜಸ್ಯವೇನೂ ಇಲ್ಲವೆಂಬ ತಾತ್ಪರ್ಯವು. ಆದುದರಿಂದ **ಶ್ರೀಮತ್** ಎಂದು ಮತುಪ್ಪ್ರತ್ಯಯವಿರುವದರಿಂದ, ಲಕ್ಷ್ಮಿಯು ಪೃಥಕ್ಸಿದ್ಧ ವಿಶೇಷಣವೇ ವಿನಾ ಅಪೃಥಕ್ಸಿದ್ಧ ವಿಶೇಷಣವೆಂದು ಹೇಳಿ ಸಾಧಿಸಲು ಸಾಧ್ಯವಿಲ್ಲವೆಂದು ಮುಂದಿನ ವಾಕ್ಯದಿಂದ ನಿಗಮನ ಮಾಡಿ ಹೇಳುತ್ತಾರೆ. **ಆಗೈಯಾಲ್**-ಆದುದರಿಂದ, **ಮತ್ವರ್ಥೀಯ ಪ್ರತ್ಯಯ ಮಾತ್ರತ್ತೈಕೊಂಡು**-ಮತುಪ್ ಮತ್ತು ಆ ಅರ್ಥವುಳ್ಳ ಪ್ರತ್ಯಯವಿದ್ದ ಮಾತ್ರದಿಂದಲೇ, **ಪೃಥಕ್ಸಿದ್ಧಮೆನ್ನು**-ಆ ಪ್ರತ್ಯಯವುಳ್ಳ ವಸ್ತುಗಳನ್ನೆಲ್ಲಾ, **ಪೃಥಕ್ಸಿದ್ಧಮೆನ್ನು**-ಪೃಥಕ್ಸಿದ್ಧ ವಿಶೇಷಣವೆಂದು, **ವಿಶೇಷ್ಯಕ್ಕಿಂತ ಬೇರೆಯಾಗಿ ಸ್ವತಂತ್ರ**ವಿರುವ ವಸ್ತುವೆಂದು **ನಿಶ್ಚಯಿಕ್ಕಪ್ಪೋಗಾದು**-ನಿಶ್ಚಯಿಸುವದು ಸರಿಯಲ್ಲವು.

ಮುಂದೆ ಪೃಥಕ್ಸಿದ್ಧವಾದುದು **ಮತ್ವರ್ಥೀಯ ಪ್ರತ್ಯಯಯುಕ್ತ**ವಾಗಿರಬೇಕೆಂದು ಪೂರ್ವಪಕ್ಷಿಯು ಹೇಳಿದ್ದರು. ಹಾಗಿಲ್ಲದೆ ಪೃಥಕ್ಸಿದ್ಧ **ವಿಶೇಷಣಕ್ಕೂ** ವಿಶೇಷ್ಯಕ್ಕೂ ಸಾಮಾನಾಧಿಕರಣ್ಯ ಉಂಟೆಂದು ಪ್ರಯೋಗವನ್ನು **ಉದಾಹರ**ಸುತ್ತಾರೆ. "ನರಪತಿರೇವ ಸರ್ವೇಲೋಕಾಃ" ರಾಜನೇ ಸಮಸ್ತ**ಲೋಕವೂ** ಎಂದರೆ ಸಮಸ್ತಲೋಕವೂ ರಾಜನಿಗೆ ಅಧೀನವುಎಂಬ ಭಾವವು, **ಇತ್ಯಾದಿಗಳಿಲ್ ಪೋಲೇ** - ಇತ್ಯಾದಿ ಪ್ರಯೋಗದಲ್ಲಿ **ತೋ**ರಿಬರುವಹಾಗೆ, **ವಿವಕ್ಷಾಂತರಮ್**-ಎಲ್ಲವೂ ಆ ರಾಜನಿಗೆ ಅಧೀನವೆಂಬ ಬೇರೆ **ತಾ**ತ್ಪರ್ಯವು, **ಸಂಭಾವಿತಮಾನವಿಡತ್ತಿ**ಲ್ - ಹೇಳಲು ಯೋಗ್ಯವಾದ ಸಂದರ್ಭದಲ್ಲಿ **ಇಪ್ಪ್ರತ್ಯಯಮಿಲ್ಲಾದ** - ಈ ಮತ್ವರ್ಥೀಯ ಪ್ರತ್ಯಯವಿಲ್ಲದೆ, **ಸಾಮಾನಾಧಿಕರಣ್ಯಮಾತ್ರತ್ತೈಕ್ಕೊಂಡು** - ಸಾಮಾನಾಧಿಕರಣ್ಯ ರೂಪದಲ್ಲಿ ಹೇಳಿರುವದನ್ನು ಮಾತ್ರ ಮೂಲ ಮಾಡಿಕೊಂಡು, **ಪೃಥಕ್ಸಿದ್ಧಮನ್ರೆನ್ರುವುಮೊಣ್ಣಾದು**-ಪೃಥಕ್ಸಿದ್ಧವಲ್ಲವೆಂದು ಹೇಳಲೂ ಸಾಧ್ಯವಲ್ಲವು. **'ನರಪತಿರೇವ ಸರ್ವೇಲೋಕಾಃ'** ಎಂಬಲ್ಲಿ ಮತುಪ್ ಪ್ರತ್ಯಯವಿಲ್ಲವು; ಸಾಮಾನಾಧಿಕರಣ್ಯೋಕ್ತಿಯು ಇರುತ್ತದೆ. ಇದರಿಂದ ಸಮಸ್ತಲೋಕವು ನರಪತಿಗೆ ಅಪೃಥಕ್ಸಿದ್ಧ ವಿಶೇಷಣವೆಂದು ಹೇಳಲು

**ಅತಃ ಪೃಥಕ್ಸಿದ್ಧತ್ವಾಪೃಥಕ್ಸಿದ್ಧತ್ವನಿರ್ಧಾರಣೇ ಮತ್ವರ್ಥೀಯ ಪ್ರತ್ಯಯಸದ್ಭಾವಾಭಾವೌ ನಪ್ರಮಾಣಾನಿ. ತರ್ಹಿ ನಿರ್ಧಾರಣಂ ಕಥಮ್?**

**ಆನಪಿನ್ನು ವಿಶದಮಾಗ ಪ್ರತಿಪಾದಿಕ್ಕುಮ್ ಪ್ರಮಾಣಾನ್ತರಗಳೈಕೊಂಡು, ಇವ್ವಸ್ತುಸ್ಥಿತಿ ಇರುಕ್ಕುಮ್ಪಡಿ ತೆಳಿಯಪ್ರಾಪ್ತಮ್.**

ಅಸಾಧ್ಯವು. ಪೃಥಕ್ಸಿದ್ಧವಿಶೇಷಣವಾಗಿದ್ದರೂ ಲೋಕವೆಲ್ಲಾ ನರಪತಿಗೆ ಅಧೀನವೆಂಬ ಬೇರೆ ತಾತ್ಪರ್ಯದಿಂದ ಸಾಮಾನಾಧಿಕರಣ್ಯೋಕ್ತಿ ಇರುತ್ತದೆ. ಹೀಗೆ ಅವರುಗಳ ಎರಡು ಪೂರ್ವಪಕ್ಷವಾದಗಳೂ ವಿರುದ್ಧವೆಂದು ಸಪ್ರಮಾಣವಾಗಿ ಸಮರ್ಥಿಸಿ ಹೇಳಿದರು. ಮತುಪ್ ಪ್ರತ್ಯಯವು **ಜ್ಞಾನವಾನ್ ದಂಡೀ** ಎಂಬ ಉದಾಹರಣೆಗಳಲ್ಲಿ, ಅಪೃಥಕ್ಸಿದ್ಧ ವಿಶೇಷಣ ಪೃಥಕ್ಸಿದ್ಧ ವಿಶೇಷಣ ಹೀಗೆ ಎರಡು ಪ್ರಯೋಗಗಳಲ್ಲೂ ಕಾಣಬಹುದು. ಹಾಗೆಯೇ ಮತುಪ್ ಪ್ರತ್ಯಯವಿಲ್ಲದೆ ಸಾಮಾನಾಧಿಕರಣ್ಯ ಪ್ರಯೋಗವನ್ನೂ ಈ ಎರಡು ವಿಧ ವಿಶೇಷಗಳಲ್ಲೂ ಕಾಣಬಹುದು; ಹೇಗೆಂದರೆ, "ಸತ್ಯಂಜ್ಞಾನಮನಂತಂ ಬ್ರಹ್ಮ" "ರಾಜಾ ಮಾತಾ ಪಿತಾ ಚೈವ" ಇತ್ಯಾದಿ.

ಹೀಗೆ ಮತ್ವರ್ಥೀಯ ಪ್ರತ್ಯಯವಾಗಲಿ ಅಥವಾ ತನ್ನಿರಪೇಕ್ಷ ಸಾಮಾನಾಧಿಕರಣ್ಯೋಕ್ತಿಯಾಗಲಿ ಅಪೃಥಕ್ಸಿದ್ಧ ಪೃಥಕ್ಸಿದ್ಧ ವಿಶೇಷಣ ನಿರ್ಧಾರಣೆಯಲ್ಲಿ ಸಹಕಾರಿಯಾಗಲಾರದೆಂದು ಉಪಪಾದಿಸಿದರು. ಹಾಗಾದರೆ ಆ ನಿರ್ಧಾರಣೆಯಲ್ಲಿ ಯಾವುದು ಉಪಕಾರವು? ಎಂದು ಕೇಳಿದರೆ ಅವಕ್ಕೆ ಪ್ರಮಾಣಾನ್ತರಗಳಿಂದ ನಿಶ್ಚಯಿಸಬೇಕೇ ವಿನಾ, ಮತ್ವರ್ಥೀಯ ಪ್ರತ್ಯಯದ ಸದ್ಭಾವಾಭಾವಗಳಿಂದ ಅಲ್ಲವೆಂದು ಮುಂದಿನ ವಾಕ್ಯಗಳಿಂದ ಉಪದೇಶಿಸುತ್ತಾರೆ.

**ಆದುದರಿಂದ ಪೃಥಕ್ಸಿದ್ಧತ್ವಾ ಪೃಥಕ್ಸಿದ್ಧತ್ವದ ನಿರ್ಧಾರಣೆಯಲ್ಲಿ ಮತ್ವರ್ಥೀಯ ಪ್ರತ್ಯಯವಿರೋಣ ವಿಲ್ಲದಿರೋಣಗಳು ಉಪಯುಕ್ತವಲ್ಲವು. ಹಾಗಾದರೆ ನಿರ್ಧಾರಣೆಯು ಹೇಗೆ?**

**ಆನಪಿನ್ನು**- ಹೀಗಾದನಂತರ, ಎಂದರೆ ಮತ್ವರ್ಥೀಯ ಪ್ರತ್ಯಯದ ಇರೋಣ ಇಲ್ಲದಿರೋಣ ಮಾತ್ರದಿಂದಲೇ ಪೃಥಕ್ಸಿದ್ಧ ವಿಶೇಷಣ ಅಥವಾ ಅಪೃಥಕ್ಸಿದ್ಧ ವಿಶೇಷಣವೆಂದು ನಿರ್ಧರಿಸುವದು ಸಾಧ್ಯವಿಲ್ಲವೆಂದಾದನಂತರ, **ವಿಶದಮಾಹ**-ವಿಶದವಾದ, **ಪ್ರತಿಪಾದಿಸುವ, ಪ್ರಮಾಣಾನ್ತರಗಳೈಕೊಂಡು**-ಬೇರೆ ಪ್ರಮಾಣಗಳ ಮೂಲಕವಾಗಿ, **ಇವ್ವಸ್ತುಸ್ಥಿತಿ ಇರುಕ್ಕುಮ್ಪಡಿ**-ಈ ವಿಶೇಷಣವಾದ ವಸ್ತುವು ಅಪೃಥಕ್ಸಿದ್ಧ ವಿಶೇಷಣ ಅಥವಾ ಪೃಥಕ್ಸಿದ್ಧ ವಿಶೇಷಣವೆಂದು ಯಥಾರ್ಥವಾಗಿ ಇರುವ ಸಂದರ್ಭವನ್ನು, **ತೆಳಿಯಪ್ರಾಪ್ತಮ್**-ನಿರ್ಧರಿಸುವದು ಯುಕ್ತವು, ಶ್ರುತಿ ಸ್ಮೃತಿ ಇತಿಹಾಸ ಪ್ರಮಾಣಗಳ ಬಲದಿಂದ ತಿಳಿಯಬೇಕೇ ವಿನಾ, ಮತುಪ್ ಪ್ರತ್ಯಯಾದಿಗಳ ಸದ್ಭಾವ ಅಭಾವಗಳಿಂದ ನಿರ್ಧರಿಸಲು ಸಾಧ್ಯವಿಲ್ಲವೆಂದು ಸ್ಥಾಪಿಸಿದರು.

## ಶ್ರಿಯಃ ನಿತ್ಯಯೋಗೇ ಪ್ರಮಾಣಾನಿ

---

**ಇಙ್ಗು ಉಪಾಯದಶೈಯಿಲುಮ್, ಫಲದಶೈಯಿಲುಮ್ ಪ್ರಮಾಣ ಙ್ಗಳ್ ನಿತ್ಯಯೋಗತ್ತೈಚ್ಚೊಲ್ಲುಗೈಯಾಲುಮ್, ಇಮ್ಮನ್ತ್ರತ್ತಿಲ್ ಇವ್ವರ್ಥಂ ಪ್ರಕಾಶಿಪ್ಪಿಕ್ಕೈ ಅಪೇಕ್ಷಿತಮಾಗೈಯಾಲುಮ್ ಪೂರ್ವೋತ್ತರಖಂಡಙ್ಗಳಿಲ್**

ಮುಂದೆ ಲಕ್ಷ್ಮಿಯು ಅಪೃಥಕ್ಸಿದ್ಧ ವಿಶೇಷಣಳಾಗಿ ನಾರಾಯಣನೊಂದಿಗೆ ನಿತ್ಯಯೋಗವನ್ನು ಹೊಂದಿರುವಳು ಎಂಬುದಕ್ಕೆ ಪ್ರಮಾಣಗಳನ್ನು ಉದಾಹರಿಸುತ್ತಾರೆ.

## ಲಕ್ಷ್ಮಿಯ ನಿತ್ಯಯೋಗ ಸಂದರ್ಭದಲ್ಲಿ ಪ್ರಮಾಣಗಳು

---

ಇಙ್ಗು-ಈ ಸಂದರ್ಭದಲ್ಲಿ, ಲಕ್ಷ್ಮಿಯು ನಿತ್ಯಾನಪಾಯಿನಿ ಎಂಬ ಸಂದರ್ಭದಲ್ಲಿ, **ಉಪಾಯದಶೈಯಿಲುಮ್**-ಪರಮಪುರುಷನು ಉಪಾಯವಾಗಿ ನಿಲ್ಲುವ ದಶೆಯಲ್ಲೂ, **ಫಲದಶೈಯಿಲ್ಲುಮ್** - ಪ್ರಾಪ್ಯವಾಗಿ ನಿಲ್ಲುವ ದಶೆಯಲ್ಲೂ, **ಪ್ರಮಾಣಙ್ಗಳ್** - ಪ್ರಮಾಣಗಳು, **ನಿತ್ಯಯೋಗತ್ತೈಚೊಲ್ಲುಗೈಯಾಲುಮ್**- ಪರಮಾತ್ಮನೊಂದಿಗೇನೇ ಸದಾ ಸೇರಿರುವಿಕೆಯನ್ನು **ಬೋಧಿಸುವದರಿಂದ, ಇಮ್ಮನ್ತ್ರತ್ತಿಲ್** - ಈ ದ್ವಯಮನ್ತ್ರದಲ್ಲಿ, **ಇವ್ವರ್ಥಮ್** - ಲಕ್ಷ್ಮಿಯು ಸದಾ ಪರಮಾತ್ಮನೊಂದಿಗೇನೆ ಸೇರಿರುವವಳು ಎಂಬ ಅಭಿಪ್ರಾಯವನ್ನು, **ಪ್ರಕಾಶಿಪ್ಪಿಕ್ಕೈ** - ಪ್ರಕಟಿಸುವದು, **ಅಪೇಕ್ಷಿತಮಾಗೈಯಾಲುಮ್** - ಅಪೇಕ್ಷಿತವಾದುದರಿಂದ, ಬೇಕಾದುದರಿಂದಲೂ. **ಪೂರ್ವೋತ್ತರಖಂಡಙ್ಗಳಿಲ್ ಮತುಪ್ಪಾಲೇ**-ಮನ್ತ್ರದ ಪೂರ್ವಖಂಡದ, **ಶ್ರೀಮತ್** ಎಂಬಲ್ಲಿರುವ, ಮತ್ತು ಉತ್ತರಖಂಡದಲ್ಲಿರುವ **ಶ್ರೀಮತೇ** ಎಂಬಲ್ಲಿರುವ, **ಮತುಪ್ಪಾಲೇ**-ಮತುಪ್ಪ್ರತ್ಯಯದಿಂದ, **'ಸಭ್ರಾತುಶ್ಚರಣೌಗಾಢಮ್'** ಎಂಬಲ್ಲಿ, **ಎಙ್ಗರಪಡಿಯೇ**-ಪೂರ್ವಖಂಡದ ಅಭಿಪ್ರಾಯವು ಹೇಳಲ್ಪಟ್ಟ ಹಾಗೆ, **'ಭವಾಂಸ್ತು ಸಹ ವೈದೇಹ್ಯಾ'** ಎಂಬಲ್ಲಿ, **ಎಙ್ಗರಪಡಿಯೇ**-ಉತ್ತರಖಂಡದ ಅಭಿಪ್ರಾಯವೂ ಹೇಳಲ್ಪಟ್ಟಹಾಗೆ, **ಪಿರಿವತ್ತಪಡಿ**-ಅವಿನಾಭಾವದ ರೀತಿಯನ್ನು ಒಬ್ಬರನ್ನೊಬ್ಬರು ಬಿಟ್ಟು ಅಗಲದೆ ಯಾವಾಗಲೂ ಸೇರಿರುವ ಭಾವದ ಪ್ರಕಾರವನ್ನು, **ಶೊಲ್ಲಿತ್ತಾಯಿತ್ತು**-ಹೇಳಿದಂತಾಯಿತು. ಶ್ರೀ ವಾಲ್ಮೀಕಿ ಮಹರ್ಷಿಯೂ ಉಪಾಯದಶೆಯಲ್ಲಿನ ಅವಿನಾಭಾವವನ್ನು **'ಸಭ್ರಾತುಶ್ಚರಣೌ ಗಾಢಮ್'** ಎಂಬ ಶ್ಲೋಕದಲ್ಲೂ, ಉಪಾಯದಶೆಯಲ್ಲಿನ ಅವಿನಾಭಾವವನ್ನು **'ಭವಾಂಸ್ತು ಸಹ ವೈದೇಹ್ಯಾ'** ಎಂಬ ಶ್ಲೋಕದಲ್ಲೂ ಉಪಪಾದಿಸಿರುತ್ತಾರೆಂಬ ತಾತ್ಪರ್ಯವು.

ನಿತ್ಯಯೋಗವನ್ನು ಸ್ಥಾಪಿಸುವ ಪ್ರಮಾಣಗಳು ಯಾವುವೆಂದರೆ—

ಮತುಪ್ಪಾಲೇ (೧) 'ಸಭ್ರಾತುಶ್ಚರಣೌಗಾಢಮ್ (೨) 'ಭವಾಂಸ್ತುಸಹ ವೈದೇಹ್ಯಾ' ಎನ್ಗಿರಪಡಿಯೇ ಪಿರಿವತ್ತಪಡಿಶೊಲ್ಲಿತ್ತಾಯಿತ್ತು.

೧. ಸ್ವಧಯಾ ತದೇಕಂ (ತ್ಯೆ. ಆರ.)
೨. ಶ್ರದ್ಧಯಾ ದೇವೋ ದೇವತ್ವಮಶ್ನುತೇ (ಶ್ರದ್ಧಾಸೂಕ್ತ)
೩. 'ಅವತಾರಂ ಕರೋತ್ಯೇಷಾ ತದಾ ಶ್ರೀಸ್ತತ್ಸಹಾಯಿನೀ । ಅನ್ಯೇಷು ಚಾವತಾರೇಷು ವಿಷ್ಣೋರೇಷಾನಪಾಯಿನೀ' (ವಿ. ಪು. ೧-೯-೧೪೪)
೪. 'ನಿತ್ಯೈವೈಷಾ ಜಗನ್ಮಾತಾ ವಿಷ್ಣೋಶ್ಶ್ರೀರನಪಾಯಿನೀ' (ವಿ. ಪು.)
೫. 'ಅನನ್ಯಾರಾಘವೇಣಾಹಂ ಭಾಸ್ಕರೇಣ ಪ್ರಭಾಯಥಾ' (ರಾ. ಸುಂ.)
೬. ಅನನ್ಯಾಹಿ ಮಯಾಸೀತಾ ಭಾಸ್ಕರೇಣ ಪ್ರಭಾಯಥಾ' (ರಾ. ಸುಂ.)
೭. 'ಲಕ್ಷ್ಮ್ಯಾಸಹ ಹೃಷೀಕೇಶೋ ದೇವ್ಯಾ ಕಾರುಣ್ಯರೂಪಯಾ । ರಕ್ಷಕಸ್ಸರ್ವಸಿದ್ಧಾನ್ತೇ ವೇದಾನ್ತೇಷು ಚ ಗೀಯತೇ' ॥ (ಲಕ್ಷ್ಮೀತಂತ್ರ)
೮. 'ವೈಕುಂಠೇತುಪರೇಲೋಕೇ ಶ್ರಿಯಾಸಾರ್ಧಂ ಜಗತ್ಪತಿಃ । ಆಸ್ತೇ ವಿಷ್ಣುರಚಿನ್ತ್ಯಾತ್ಮಾ ಭಕ್ತೈರ್ಭಾಗವತೈಸ್ಸಹ' ॥
೯. 'ತಯಾಸಹಾಸೀನ ಮನಂತ ಭೋಗಿನಿ' (ಆಳ. ಸ್ತೋ. ರತ್ನ.)
೧೦. 'ನಿತ್ಯಾನಪಾಯಿನೀಂ ನಿರವದ್ಯಾಂ ದೇವದೇವದಿವ್ಯಮಹಿಷೀಮ್' (ಶರಣಾಗತಿಪದ್ಯ)
೧೧. 'ಈಶಾನಾಂ ಜಗತಾಮಧೀಶದಯಿತಾಂನಿತ್ಯಾನಪಾಯಾಂಶ್ರಿಯಮ್' (ಅಷ್ಟಶ್ಲೋಕೀ)
೧೨. 'ಉಭಯಾಧಿಷ್ಠಾನಂ ಚೈಕಶೇಷಿತ್ವಮ್' (ಶ್ರೀ ಸೋಮೋಶಿಯಾಂ.)
೧೩. 'ಈಶ್ವರನುಡೈಯ ರಕ್ಷಣಮೆಲ್ಲಾಮ್ ಪೆರಿಯಪಿರಾಟ್ಟಿಯಾರೋಡೆ ಕೂಡಿ ಆಚರಿಕ್ಕಪಡುಗಿರದಾಗೈಯಾಲುಮ್, ಅವಳು ಮಿನ್ದರಕ್ಷಣತ್ತಕ್ಕಾಗವೇ 'ಅಗಲಗಿಲ್ಲೇನಿರೈಯುಮ್' ಎನ್ರು ಸರ್ವದಾ ಅನಪಾಯಿನಿಯಾಯಿರುಕ್ಕೈಯಾಲುಮ್ ಅವತ್ತೈಪತ್ತಿ ಮಾಧವರ್ ಎನ್ರರುಳಿಚ್ಚೆಯಿಗರಾರ್' (ಪಿಳ್ಳೈಲೋಕಾರ್ಯಜೀಯರ್)
೧೪. 'ಏಕಾಕೀವಿದ್ಯಯಾಸಾರ್ಧಂ ವಿಹರಿಷ್ಯೇ ದ್ವಿಜೋತ್ತಮ । ತತೋಭೂಯೋ ಜಗತ್ಸೃಷ್ಟಿಂ ಕರಿಷ್ಯಾಮಿಹ ವಿದ್ಯಯಾ' ॥ (ಭಾರತ ಮೋಕ್ಷಧರ್ಮ)
೧೫. 'ಏಕೋವಿದ್ಯಾಸಹಾಯಸ್ತ್ವಮ್' ಇತ್ಯಾದ್ಯನೇಕ ಪ್ರಮಾಣಗಳು ಪರಮಾತ್ಮನೊಂದಿಗೆ ಲಕ್ಷ್ಮಿಯ ನಿತ್ಯಯೋಗವನ್ನು ಸ್ಥಾಪಿಸುತ್ತವೆ.

---

(೧) ರಾಮಾ. ಅಯೋಧ್ಯಾ. ೩೧, ೨. (೨) ರಾಮಾ. ಅಯೋಧ್ಯಾ. ೩೧. ೨೫.

ಶ್ರೀ ದೇಶಿಕವರ್ಯರು ಉದಾಹರಿಸಿರುವ ಶ್ಲೋಕಗಳು ಹಿಂದೆ ಅರ್ಥಪಂಚಕಾಧಿಕಾರದಲ್ಲೂ ಉದಾಹೃತಗಳು. (೩೩೮-೪೦ನೆಯ) ಪುಟಗಳನ್ನು ನೋಡಿ. ಅಲ್ಲಿ ಪ್ರಕರಣವಿಲ್ಲದುದರಿಂದ ಈಗ ಸ್ವಲ್ಪ ವಿಸ್ತರಿಸಿ ಅರ್ಥಗಳನ್ನು ಹೇಳುವೆವು.

**(೧) ಸಭ್ರಾತುಶ್ಚರಣೌಗಾಢಂ ನಿಪೀಡ್ಯರಘುನಂದನಃ '**
**ಸೀತಾಮುವಾಚಾತಿಯಶಾ ರಾಘವಂ ಚ ಮಹಾವ್ರತಮ್ ||**

ಸೀತಾರಾಮರಿಬ್ಬರಿಗೂ ಮಾಡುವ ನಿತ್ಯಕೈಂಕರ್ಯಪ್ರಾಪ್ತಿಗಾಗಿ ವನಕ್ಕೆ ಕರೆದುಕೊಂಡು ಹೋಗು ಎಂದು ಲಕ್ಷ್ಮಣನು ಸೀತಾರಾಮರ ಸನ್ನಿಧಿಯಲ್ಲಿ ಶರಣಾಗತಿಯನ್ನು ಅನುಷ್ಠಿಸುವ ಪ್ರಕರಣವು. **ಸಃ**-ಸೀತಾರಾಮರ ಕೈಂಕರ್ಯವೇ ಪರಮಪುರುಷಾರ್ಥವು, ತತ್ಪ್ರಾಪ್ತಿಗೆ ಬೇರೆ ಉಪಾಯವು ಯಾವುದೂ ಇಲ್ಲವೆಂದು ನಿಶ್ಚಯಿಸಿದ ಪ್ರಾಜ್ಞನಾದ ಆ, **ರಘುನಂದನಃ**-ಸತ್ಕುಲಪ್ರಸೂತನಾಗಿ ಸತ್ಸಂಪ್ರದಾಯವನ್ನರಿತ ಲಕ್ಷ್ಮಣನು, **ಭ್ರಾತುಃ-'ಭ್ರಾತಾನಿವಾಸಃ'** ಎಂದು ಶ್ರುತಿಯಲ್ಲಿ ಹೇಳಿರುವ ಹಾಗೆ ತಂದೆಯ ಸ್ಥಾನದಲ್ಲಿರುವ ಜ್ಯೇಷ್ಠಭ್ರಾತಾವಾಗಿ ಭರ್ತಾವಾಗಿರುವದರಿಂದ ಪರಮಪುರುಷನಿಗೂ ತನಗೂ ಇರುವ ಸಂಬಂಧವನ್ನು ಅರಿತವನಾಗಿ ಶ್ರೀರಾಮಚಂದ್ರನ **ಚರಣೌ**-ಪಾದಗಳನ್ನು **ಗಾಢಮ್**-ತನ್ನ ಇಷ್ಟಾರ್ಥವು ನೆರವೇರುವವರಲ್ಲಿ ಸಂದೇಹವಿಲ್ಲವೆಂದರಿತವನಾದುದರಿಂದ ಘಟ್ಟಿಯಾಗಿ, **ನಿಪೀಡ್ಯ**-ಹಿಡಿದುಕೊಂಡು ಶರಣಾಗತಿಯನ್ನನುಷ್ಠಿಸಿದವನಾಗಿ, **ಅತಿಯಶಾಃ** - ಆ ಕಾಲದಲ್ಲಿ ಆನುಕೂಲ್ಯಸಙ್ಕಲ್ಪ ಪ್ರಾತಿಕೂಲ್ಯವರ್ಜನೆಯುಳ್ಳವನಾದುದರಿಂದ ಹೆಚ್ಚಾದ ಖ್ಯಾತಿಯುಳ್ಳವನಾಗಿ, **ಸೀತಾಮುವಾಚ**-ಮೊದಲು ಸೀತೆಯನ್ನುದ್ದೇಶಿಸಿ, ಅನುಗ್ರಹಮುಖ್ಯವಾದುದರಿಂದಲೂ ಉಪಾಯತ್ವದಲ್ಲೂ ಆಕೆಗೂ ಅನ್ವಯವಿರುವದರಿಂದಲೂ ಪುರುಷಕಾರ ರೂಪದಲ್ಲಿ ಸಹಾಯಮಾಡತಕ್ಕವಳೆಂದು ನಂಬಿ ಪ್ರಾರ್ಥಿಸುತ್ತಾನೆ. ಅನಂತರ **ಮಹಾವ್ರತಮ್** - ಶರಣಾಗತನನ್ನು **' ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ '** ಎಂಬ ಶರಣಾಗತರಕ್ಷಣರೂಪ ಮಹಾವ್ರತವನ್ನು ಧರಿಸಿರುವ, **ರಾಘವಂಚ**-ರಾಮನನ್ನೂ ಕುರಿತು, **ಉವಾಚ**-ಪ್ರಾರ್ಥಿಸುತ್ತಾನೆ. ಇಲ್ಲಿ ಈ ಶ್ಲೋಕದ ಪೂರ್ವಾರ್ಧದಿಂದ ದ್ವಯಪೂರ್ವಖಂಡದ ಅರ್ಥವು ಬೋಧಿತವು; ಮನ್ತ್ರದಲ್ಲಿರುವ **'ಶ್ರೀಮತ್'** ಎಂಬ ಶಬ್ದದ ಅರ್ಥವು **ಸೀತಾಂ ಉವಾಚ**-ಎಂಬುದರಿಂದ ವ್ಯಕ್ತಪಡಿಸಲ್ಪಟ್ಟಿತು. ಉತ್ತರಾರ್ಧದಿಂದೆಲ್ಲಾ ಮನ್ತ್ರದ ಉತ್ತರಖಂಡದಲ್ಲಿ ಹೇಳಲ್ಪಟ್ಟ ಕೈಂಕರ್ಯಫಲಪ್ರಾಪ್ತಿಯು ಪ್ರಾರ್ಥಿಸಲ್ಪಟ್ಟಿತು. ಕೆಲವರು ಪುರುಷಕಾರತ್ವರೂಪದಲ್ಲಿ ಮಾತ್ರವೇ ಅನ್ವಯವೆಂದು ಈ ಶ್ಲೋಕವು ಸೂಚಿಸುವದಿಲ್ಲವೇ? ಉಪಾಯತ್ವವು ಹೇಗೆ? ಎಂದು ಆಕ್ಷೇಪಿಸುವರು. ಇದಕ್ಕೆ ಎರಡು ವಿಧವಾಗಿ ಸಮಾಧಾನವನ್ನು ಹೇಳುವೆವು. ಹಿಂದೆಯೇ

---

**(೧)** ರಾಮಾ. ಅಯೋಧ್ಯಾ. ೩೧-೨.

ಪುರುಷಕಾರತ್ವವೂ ಸಹ ಶೇಷಳಾದವಳ ವಿಷಯದಲ್ಲಿ ವಿಶೇಷಿತ ಉಪಾಯತ್ವವೇ ಎಂದು ತಿಳಿಸಿದೆವು. ಎರಡನೆಯ ಸಮಾಧಾನವೇನೆಂದರೆ ಚಕಾರಸ್ವಾರಸ್ಯದಿಂದ ಇಬ್ಬರೂ ಸೇರಿ ಉಪಾಯಭೂತರಾದುದರಿಂದಲೇ **'ಸೀತಾಮುವಾಚಾತಿಯಶಾಃ ರಾಘವಂ ಚ ಮಹಾವ್ರತಮ್'** ಎಂದು ಇಬ್ಬರನ್ನೂ ಕುರಿತು ಪ್ರಾರ್ಥಿಸಿರುತ್ತಾನೆ. ಸೀತೆಯು ಪುರುಷಕಾರಭೂತಳು ಮಾತ್ರವೇ ಎಂಬುದು ಮಹರ್ಷಿಯ ಅಭಿಪ್ರಾಯವಾಗಿದ್ದುದಾದರೆ ಸೀತೆಯು ರಾಮನನ್ನು ಕುರಿತು ಲಕ್ಷ್ಮಣನ ವಿಷಯವಾಗಿ ಪ್ರಾರ್ಥಿಸುತ್ತಿದ್ದಳು. ಅಂತಹ ಪ್ರಾರ್ಥನೆ ಇಲ್ಲದುದರಿಂದಲೇ ಇಬ್ಬರೂ ಸೇರಿಯೇ ಉಪಾಯಭೂತರೆಂಬುದು ಮಹರ್ಷಿಗೆ ಸಮ್ಮತವಾದ ಅಭಿಪ್ರಾಯವು ಎಂದು ಗ್ರಹಿಸತಕ್ಕದ್ದು.

ಈ ಕೈಂಕರ್ಯವೇ ಪರಮಪುರುಷಾರ್ಥವೆಂದೂ ಈ ಕೈಂಕರ್ಯಕ್ಕೆ ಲಕ್ಷ್ಮೀನಾರಾಯಣರಿಬ್ಬರೂ ಉದ್ದೇಶ್ಯರೆಂದೂ, ಮನ್ತ್ರದ ಉತ್ತರಖಂಡದಲ್ಲಿನ **ಶ್ರೀಮತೇ ನಾರಾಯಣಾಯ** ಎಂಬ ಪ್ರಯೋಗದ ಅರ್ಥವನ್ನು ಮುಂದಿನ ಶ್ಲೋಕದಿಂದ ಉದಾಹರಿಸುತ್ತಾರೆ.

**(೨) 'ಭವಾಂಸ್ತು ಸಹ ವೈದೇಹ್ಯಾ ಗಿರಿಸಾನುಷುರಂಸ್ಯತೇ ।**
**ಅಹಂಸರ್ವಂಕರಿಷ್ಯಾಮಿ ಜಾಗ್ರತಸ್ಸ್ವಪತಶ್ಚತೇ ॥**

**ಭವಾಂಸ್ತು**-ಸರ್ವಶೇಷಿಯಾದ ತಾವಾದರೋ, **ವೈದೇಹ್ಯಾಸಹ**-ದಾಸನು ಪ್ರಾರ್ಥಿಸುವ ನಿಮ್ಮ ಕೈಂಕರ್ಯಕ್ಕೆ ಸೀತೆಯೂ ಉದ್ದೇಶ್ಯಳಾದುದರಿಂದ, ಸೀತೆಯೊಂದಿಗೆ, **ಗಿರಿಸಾನುಷುರಂಸ್ಯತೇ**-ಗಿರಿತೊಪ್ಪಲಲ್ಲಿ ವಿಹರಿಸಿ, **ಜಾಗ್ರತಸ್ಸ್ವಪತಶ್ಚತೇ**-ಎದ್ದಿರುವ ಅಥವಾ ಮಲಗಿರುವ ಎಂದರೆ ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತಗಳಾದ ಕೈಂಕರ್ಯವನ್ನೆಲ್ಲಾ ನಿಮಗೆ, **ಅಹಂ ಸರ್ವಂ ಕರಿಷ್ಯಾಮಿ**-ನಾನು ಎಲ್ಲಾ ವಿಧ ಕೈಂಕರ್ಯಗಳನ್ನೂ ಮಾಡುವೆನು, ಎಂದರೆ ಮಾಡಲು ಪ್ರಾರ್ಥಿಸುವೆನು ಎಂಬ ಭಾವವು. ಇಲ್ಲಿಯೂ ನಿತ್ಯಕೈಂಕರ್ಯಕ್ಕೇ ಲಕ್ಷ್ಮೀವಿಶಿಷ್ಟ ನಾರಾಯಣನೇ ಉದ್ದೇಶ್ಯನೆಂದು ಉತ್ತರಖಂಡದ **ಶ್ರೀಮತೇ** ಶಬ್ದಾರ್ಥವು ಬೋಧಿತವು. ಆದುದರಿಂದ ಉಪಾಯದಶೆಯಲ್ಲೂ ಉಪೇಯದಶೆಯಲ್ಲೂ **ಶ್ರೀಮತ್ ಶ್ರೀಮತೇ** ಶಬ್ದಗಳು ಲಕ್ಷ್ಮಿಯ ನಿತ್ಯಯೋಗವನ್ನು ಬೋಧಿಸುತ್ತವೆಂದು ಗ್ರಹಿಸತಕ್ಕದ್ದು.

ಮುಂದೆ, ಉಪಾಯದಶೆಯಲ್ಲೂ ಉಪೇಯದಶೆಯಲ್ಲೂ ಇಂತಹ ನಿತ್ಯಯೋಗವನ್ನೇ ಆಳ್ವಾರುಗಳಲ್ಲಿ ಪ್ರಮುಖರಾದ ನಮ್ಮಾಳ್ವಾರ್ರವರೂ ತಮ್ಮ ಪಾಶುರಗಳಲ್ಲಿ ಉಪಪಾದಿಸಿರುತ್ತಾರೆಂದು ಮೂರು ಪಾಶುರಗಳನ್ನು ಉದಾಹರಿಸುತ್ತಾರೆ. ಮೊದಲು ಪಾಶುರದಲ್ಲಿ ಉಪಾಯದಶೆಯಲ್ಲೂ, ಎರಡನೆಯ ಪಾಶುರ

---

(೨) ರಾಮಾ. ಅಯೋಧ್ಯಾ. ೩೧-೨೫.

**ನಮ್ಮಾಳ್ವಾರುಮ್** (೩) ' **ಅಗಲಗಿಲ್ಲೇ ನಿರೈಯುಮೆನ್ರಲರ್ ಮೇಲ್ ಮಙ್ಗೈಯುರೈಮಾರ್ಪಾ ' ಎನ್ರುಮ್,** (೪) **ಒಣ್ದೊಡಿಯಾಳ್ ತಿರುಮಗುಳುಮ್ ನೀಯುಮೇ ನಿಲಾನಿರ್ಪ ' ಎನ್ರುಮ್,**

ದಲ್ಲಿ ಉಪೇಯದೆಶೆಯಲ್ಲೂ, ಮೂರನೆಯ ಪಾಶುರದಲ್ಲಿ ಎರಡುದೆಶೆಯಲ್ಲೂ ನಿತ್ಯಯೋಗವು ಉಪಪಾದಿತವು.

(೩) **ಅಗಲಗಿಲ್ಲೇ**–ಈ ಪಾಶುರವು ಹಿಂದೆ ಅನೇಕಸಲ ಉದಾಹರಿಸಲ್ಪಟ್ಟಿರುತ್ತದೆ. ನೆಯ ಪುಟವನ್ನು ನೋಡಿ. ಒಂದು ಕ್ಷಣವೂ ಅಗಲಿರಲಾರವೆಂದು ತನ್ನ ಪತ್ನಿಯನ್ನು ವಕ್ಷಸ್ಥಳದಲ್ಲೇ ಧರಿಸಿರುವವನೆಂದು ಹೇಳಿರುವದರಿಂದ ಇಲ್ಲಿ ನಿತ್ಯಯೋಗವನ್ನು ಶ್ರೀ ನಮ್ಮಾಳ್ವಾರವರು ಉಪಪಾದಿಸಿರುತ್ತಾರೆ. (ತಿರು. ೬-೧೦-೧೦)

(೪) ಪೂರಾ ಪಾಶುರವು ಪರದೇವತಾ ಪಾರಮಾರ್ಥ್ಯಾಧಿಕಾರದಲ್ಲಿ ಉದಾಹೃತವು (ತಿರು. ೪-೯-೧೦) ೭೪೪ನೆಯ ಪುಟ ನೋಡಿ. **ಒಣ್‌ತೊಡಿಯಾಳ್**. ವಿಲಕ್ಷಣವಾದ ಹಸ್ತಾಭರಣವನ್ನುಳ್ಳ, **ತಿರುಮಗಳುಮ್** - '**ನಾರೀಣಾಮುತ್ತಮಾವಧೂಃ**' (ಬಾಲ. ೧-೨೭) ಎಂದು ಹೇಳಿರುವಹಾಗೆ ಸರ್ವೋತ್ಕೃಷ್ಟ ಸ್ತ್ರೀಯಾದ ಲಕ್ಷ್ಮಿಯೂ, **ನೀಯುಮೇ**-ಪುರುಷೋತ್ತಮನಾದ ನೀನೂ ಸಹ, ನೀವಿಬ್ಬರೂ ಹೀಗೆ ಸೇರಿ, **ನಿಲಾನಿರ್ಪ**-ಪ್ರಕಾಶಿಸಿಕೊಂಡಿರುವ, ಈ ದಿವ್ಯ ಸೇವೆಯನ್ನು ಸಾಕ್ಷಾತ್ಕರಿಸಿದವನಾದುದರಿಂದ, ಇತರ ಅನುಭವಗಳನ್ನೂ ಕೈವಲ್ಯವನ್ನೂ ತೃಣವಾಗಿ ಭಾವಿಸಿ, **ಉನ್ ತಿರುವಡಿ ಅಡೈನ್ದೇನೆ** ಎಂದು ಮುಂದಿರುತ್ತದೆ;–ನಿನ್ನ ಪಾದಾರವಿಂದವನ್ನು ಹೊಂದಿದೆನು ಎಂದರೆ ಶರಣಾಗತಿಯನ್ನು ಅನುಷ್ಠಿಸಿದೆನು. ಇಬ್ಬರೂ ನಿತ್ಯಯೋಗವನ್ನು ಹೊಂದಿ ಒಟ್ಟಿಗಿರುವ ಮಹತ್ತಾದ ಸನ್ನಿವೇಶವನ್ನು ಸಾಕ್ಷಾತ್ಕರಿಸಿರುವೆನಾದುದರಿಂದ ನಿಮ್ಮಿಬ್ಬರನ್ನೂ **ಉಪಾಯವಾಗಿ** ವರಿಸಿರುತ್ತೇನೆಂಬುದರಿಂದ ಪೂರ್ವಖಂಡದ ಶ್ರೀಮಚ್ಛಬ್ದಾಭಿಪ್ರಾಯವು ಬೋಧಿತವು. ಸಾಕ್ಷಾತ್ಕರಿಸಿರುವದರಿಂದ ತತ್ಕ್ರತುನ್ಯಾಯಪ್ರಕಾರ ಪ್ರಾಪ್ಯದಲ್ಲೂ ನಿತ್ಯಯೋಗವು ವ್ಯಕ್ತವಾಗಿ ಸೂಚಿಸಲ್ಪಟ್ಟಿತು' **ಎನ್ರುಮ್**-ಎಂಬದಾಗಿಯೂ,

(೫) **'ಇಙ್ಗುಮಙ್ಗುಮ್ ತಿರುಮಾಲನ್ರಿಯಿನ್ಮೈಕಣ್ಡು ।**
**ಅಙ್ಗನೇವಣ್ ಕುರುಗೂರ್ ಚ್ಚಡಗೋಪನ್ ।**
**ಇಙ್ಗನೇಶೊನ್ನ ಓರಾಯಿರತ್ತಿಪ್ಪತ್ತುಮ್ ।**
**ಎಙ್ಗನೇಶೊಲ್ಲಿಲುಮಿನ್ಬಮ್ಬಯಕ್ಕುಮೇ ॥** (ತಿರು. ೭-೯-೧೧)

**ಇಙ್ಗುಮ್**-ಈ ವಿಭೂತಿಯಲ್ಲಿ ಉಪಾಯದೆಶೆಯಲ್ಲೂ **ಅಙ್ಗುಮ್**-ನಿತ್ಯವಿಭೂತಿಯಲ್ಲಿ ಪ್ರಾಪ್ಯ ಅಥವಾ ಫಲದಶೆಯಲ್ಲೂ, **ತಿರುಮಾಲ್** - ದ್ವಯದ

(೩) ತಿರು.

**(೫) ‘ ಇಜ್ಗಮುಜ್ಗಮ್ ತಿರುಮಾಲನ್ರಿ ಇನ್ಮೈಕಣ್ಡು ’ ಎನ್ರುಮ್, ಉಪಾಯದಶೈಯಿಲುಮ್ ಫಲದಶೈಯಿಲುಮ್, ಶ್ರೀಮಚ್ಛಬ್ದತ್ತಿರ್ ಚ್ಚೊನ್ನನಿತ್ಯಯೋಗತ್ತೈ ಅನುಸಂಧಿತ್ತಾರ್.**

ಪೂರ್ವೋತ್ತರಗಳಾದ ಎರಡು ಖಂಡಗಳಲ್ಲೂ ವ್ಯಕ್ತವಾಗಿ ತೋರುವ, ಮತ್ತು ಲಕ್ಷ್ಮಿಯಲ್ಲಿ ವ್ಯಾಮೋಹವುಳ್ಳವರಾದುದರಿಂದ, ಅವಳೊಂದಿಗೆ ನಿತ್ಯಯೋಗದಿಂದಿರುವ ಶ್ರಿಯಃಪತಿಯು, **ಅನ್ರಿ**-ಅಲ್ಲದೆ, **ಇನ್ಮೈಯೈಕಂಡು**-ಸಾಧನವಾಗಿ ಇನ್ನು ಯಾವುದು ಇಲ್ಲವೆಂಬುದನ್ನು ಅನುಸಂಧಾನಮಾಡಿ, ಹೀಗೆ ಆಶ್ರಯಣ ಸಮಯದಲ್ಲೂ, ಕೈಙ್ಕರ್ಯದಶೆಯಲ್ಲೂ, **ಅಜ್ಗನೇ**-ಆ ಪ್ರಕಾರವಾಗಿ ಇಬ್ಬರೂ ಒಟ್ಟಿಗೆ ಅನ್ವಯವುಳ್ಳವರೆಂದು ತಿಳಿದ, **ಕುರುಗೂರ್ಚ್ಚಡಗೋಪನ್**-ಉದಾರರಾದ ಕುರುಕಾಪುರಿಯ ನಮ್ಮಾಳ್ವಾರವರು, **ಇಜ್ಗನೇಶೊನ್ನ**-ಈ ದಿವ್ಯಕ್ಷೇತ್ರದಲ್ಲಿ ಹೇಳಿದ, **ಓರ್ಆಯಿರತ್ತಿಪ್ಪತ್ತುಮ್**-ಅನನ್ಯಪರವಾದ ನಾವಿರ ಪಾಸುರದಲ್ಲಿ ಈ ಹತ್ತು ಪಾಶುರಗಳನ್ನು, **ಎಜ್ಗನೇಶೊಲ್ಲಿಲ್**-ಅರ್ಥವನ್ನು ಗ್ರಹಿಸದೇನೇ ಹೇಗೆ ಹೇಳಿದರೂ, ಅಥವಾ ಭಕ್ತಿ ವಿಶ್ವಾಸಗಳ ನ್ಯೂನತೆ ಇದ್ದು ಸುಮ್ಮನೆ ಪಠಿಸಿದರೂ, **ಇನ್ಬಮ್ಪಯಕ್ಕುಮೇ**-ಈ ತಿರುವಾಯ್ಮೊಳಿಯ ಮಹಾತ್ಮ್ಯೆಯಿಂದ ನಿರತಿಶಯಾನಂದವು ಉಂಟುಮಾಡುವದು, ಸಂದೇಹವಿಲ್ಲವು. ಇದರಿಂದ ಉಪಾಯದೆಶೆಯಲ್ಲೂ ಲಕ್ಷ್ಮೀ ಮುಂದಾಗಿ ಆಶ್ರಯಿಸತಕ್ಕದ್ದು ; ಕೈಂಕರ್ಯದಶೆಯಲ್ಲೂ ಲಕ್ಷ್ಮಿ ಮುಂದಾಗಿಯೇ ಅದನ್ನು ಸಮರ್ಪಿಸತಕ್ಕದ್ದು ಎಂದು ತೋರಿಬರುವದರಿಂದ ದ್ವಯಮನ್ತ್ರದ ಎರಡು ಖಂಡದಲ್ಲೂ ಇರುವ ಶ್ರೀಮಚ್ಛಬ್ದಾರ್ಥವು ಈ ಪಾಶುರದಲ್ಲಿ ಉಪಪಾದಿತವು.’ **ಎನ್ರುಮ್**-ಎಂಬದಾಗಿಯೂ, **ಉಪಾಯದಶೆಯಲ್ಲೂ ಫಲದಶೆಯಿಲುಮ್**-ನಿತ್ಯಕೈಂಕರ್ಯಪ್ರಾಪ್ತಿರೂಪ ಫಲದಶೆಯಲ್ಲೂ, **ಶ್ರೀಮಚ್ಛಬ್ದತ್ತಿರ್ಚ್ಚೊನ್ನ**-ದ್ವಯಮನ್ತ್ರದ ಎರಡು ಖಂಡದಲ್ಲೂ ಇರುವ ಶ್ರೀಮಚ್ಛಬ್ದದಿಂದ ಹೇಳಲ್ಪಟ್ಟ, **ನಿತ್ಯಯೋಗವನ್ನು ಅನುಸಂಧಿತ್ತಾರ್**-ಅನುಸಂಧಾನಮಾಡಿದರು ಸ್ಮರಿಸುವರಾದರು.

**ಈ ನಿತ್ಯ**ಯೋಗದ ಅನುಸಂಧಾನದಿಂದುಂಟಾಗುವ ಇನ್ನೊಂದು ಪ್ರಯೋಜನವನ್ನು ಹೇಳುತ್ತಾರೆ.

**ಇವ್ವನುಸಂಧಾನಮ್** - ಆಶ್ರಯಣ ಸಮಯದಲ್ಲೂ ಪ್ರಾಪ್ಯದಶೆಯಲ್ಲಿನ ಹಾಗೆ ಲಕ್ಷ್ಮಿಯು ಯಾವಾಗಲೂ ಪತಿಯೊಂದಿಗೆ ನೇರಿರುವಳೆಂಬ ಅನುಸಂಧಾನವು, **ಸಾಪರಾಧರ್ಕ್ಕು**.ಅಪರಾಧಗಳಿಂದ ಕೂಡಿದ ಸಂಸಾರಿಗಳಿಗೆ, **ಅಣಿಯಿಡಾತೇ**-ಏನೊಂದು ಸಂದೇಹವಿಲ್ಲದೆ ಎಂದರೆ ಲಕ್ಷ್ಮಿಯ ಪುರುಷಕಾರತ್ವರೂಪವಾದ ಅನುಗ್ರಹವಿರುವಾಗ ನಾರಾಯಣನು ರಕ್ಷಿಸಿಯೇ ರಕ್ಷಿಸುವನೆಂಬ ನಂಬಿಕೆ

---

(೫) **ತಿರುವಾಯ್ಮೊಳಿ.** ೭-೯-೧೧.

**ನಿತ್ಯಯೋಗಾನುಸಂಧಾನಸ್ಯ ಪ್ರಯೋಜನಾಂತರಮಾಹ**

**ಇವ್ವನುಸಂಧಾನಮ್ ಸಾಪರಾಧರ್ಕ್ಕು ಅಣಿಯಿಡಾತೇ ನಿನ್ನೈತ್ತುಪ್ಪೋದೇ ಆಶ್ರಯಿಕ್ಕೈಕ್ಕುರುಪ್ಪಾಮ್.**

**ದ್ವಯಸ್ಯ ನಾರಾಯಣಶಬ್ದೇ ಅನುಸಂಧೇಯ ಕಲ್ಯಾಣಗುಣಾಃ**

---

ಯಿಂದ ಸಂದೇಹವಿಲ್ಲದೆ, **ನಿನ್ನೈತ್ತುಪ್ಪೋದೇ**-ಶ್ರೀಮನ್ನಾರಾಯಣನನ್ನು ಯಾವಾಗ ಆಶ್ರಯಿಸಬೇಕೆಂಬ ಸಂಕಲ್ಪವುಂಟಾಯಿತೋ ಆಗ ಒಡನೆಯೇ, **ಆಶ್ರಯಿಕ್ಕ**-ನಿರ್ಭಯವಾಗಿ ಆಶ್ರಯಿಸುವದಕ್ಕೆ, **ಉರುಪ್ಪಾಮ್**-ಸಾಧಕವಾಗುತ್ತದೆ. ಈ ಅನುಗ್ರಹಮಯಳಾಗಿ ವಾತ್ಸಲ್ಯಾತಿಶಯವನ್ನು ಹೊಂದಿದ ಲಕ್ಷ್ಮಿಯ ಸಾನ್ನಿಧ್ಯವು ಯಾವಾಗಲೂ ಇರುವದರಿಂದ ಸ್ವಾಮಿಯು ತಪ್ಪದೆ ರಕ್ಷಿಸುವನು ಎಂಬ ಪೂರ್ಣ ನಂಬಿಕೆಯಿಂದ ನಿರ್ಭಯರಾಗಿ ಆಶ್ರಯಿಸಬಹುದು ಎಂಬುದೀಗ ಈ ನಿತ್ಯಯೋಗಾನುಸಂಧಾನದ ಮಹತ್ತಾದ ಪ್ರಯೋಜನವೆಂದು ಉಪದೇಶಿಸಿರುತ್ತಾರೆ.

ದ್ವಯದ ನಾರಾಯಣಶಬ್ದದಲ್ಲಿ ಅನುಸಂಧೇಯ ಕಲ್ಯಾಣಗುಣಗಳು

---

ಅನುಗ್ರಹಮಯಳಾದ ಲಕ್ಷ್ಮಿಯ ಪುರುಷಕಾರತ್ವದೊಂದಿಗೆ ಪರಮಪುರುಷನ ಆಶ್ರಿತರಕ್ಷಣೋಪಯುಕ್ತ ಮಹಾ ಕಲ್ಯಾಣಗುಣಗಳೂ ಸೇರಿದ್ದರೆ, ಇನ್ನು ಆಶ್ರಿತನಿಗೆ ಏನು ಕೊರತೆಯು? ರಕ್ಷಣವೆಂಬುದರಲ್ಲಿ ಈಷದಪಿ ಸಂದೇಹವಿಲ್ಲವೆಂಬ ಭಾವದಿಂದ ಹೇಳಲು ಹೊರಟು, ದ್ವಯದ ನಾರಾಯಣ ಶಬ್ದವೇ ಈ ಕಲ್ಯಾಣಗುಣಗಳ ಸಂಬಂಧವನ್ನು ಬೋಧಿಸುತ್ತದೆ ಎಂದು ಹಿಂದೆ ಹೇಳಿದುದಕ್ಕೂ ಮುಂದೆ ಹೇಳುವುದಕ್ಕೂ ಸಂಗತಿಯನ್ನು ತೋರುತ್ತಾರೆ. **ಇಪ್ಪಡಿ**-ಈ ಪ್ರಕಾರದಲ್ಲಿ ಸಾಪರಾಧಿಯಾಗಿದ್ದರೂ ಫಲದಲ್ಲಿ ನಿಸ್ಸಂಶಯ ಉಂಟಾಗುವದಕ್ಕೆ, **ಅಪೇಕ್ಷಿತಮಾನ ಪುರುಷಕಾರಮ್ ತಾನುಮ್**-ಅಪೇಕ್ಷಿತವಾದ ಪುರುಷಕಾರವೂ ಕೂಡ, **ತನ್ನೇತ್ತಮಾಮ್ಪಡಿ**-ಆ ಲಕ್ಷ್ಮಿಯ ಪುರುಷಕಾರತ್ವಕ್ಕೆ ಉತ್ಕರ್ಷವನ್ನುಂಟುಮಾಡುವ, **ನಾರಾಯಣ ಶಬ್ದದಲ್ಲಿ, ತೋತ್ತುಗಿರ**-ತೋರಿಬರುವ, **ಸಂಬಂಧಮುಮ್**-ಅಪೃಥಕ್ಸಿದ್ಧ ವಿಶೇಷಣವಾಗಿರುವ, ಪತಿಯೊಂದಿಗೆ ನಿತ್ಯಯೋಗ ಸಂಬಂಧವೂ, ಎಂದೂ ಅರ್ಥಮಾಡಬಹುದು, ಅಥವಾ ಸ್ವಸ್ವಾಮಿಭಾವ ಸಂಬಂಧ, ಶೇಷಶೇಷಿಭಾವ ಸಂಬಂಧವೆಂದಾಗಲಿ ಅರ್ಥವಾಗಬಹುದು; ಯಾರ ಯಾರಿಗೆ ಸ್ವಸ್ವಾಮಿಭಾವ ಸಂಬಂಧ, ಅಥವಾ ಶೇಷಶೇಷಿ ಸಂಬಂಧವೆಂದರೆ ಲಕ್ಷ್ಮಿಗೂ ಪರಮಾತ್ಮನಿಗೂ ಮತ್ತು ಜೀವಾತ್ಮ ಪರಮಾತ್ಮರಿಗೂ, **ಗುಣಙ್ಗಳುಮ್**-ಕಲ್ಯಾಣ ಗುಣಗಳೂ ಸಹ, **ಇರುಕ್ಕಿರನ**-ಇರುತ್ತವೆ. ಗುಣಗಳು ಯಾವುವು ಎಂದರೆ ವಾತ್ಸಲ್ಯ, ಸ್ವಾಮಿತ್ವ, **ಸೌಲಭ್ಯ, ಸೌಶೀಲ್ಯ, ಜ್ಞಾನ, ಶಕ್ತಿ**

**ಇಪ್ಪಡಿ ಅಪೇಕ್ಷಿತಮಾನ ಪುರುಷಕಾರಮ್ ತಾನುಮ್ ತನ್ನೇತ್ತಮಾ ಮ್ಪಡಿ ಇರುಕ್ಕಿರನ, ನಾರಾಯಣ ಶಬ್ದತ್ತಿಲ್ ತೋತ್ತುಗಿರ ಸಂಬಂಧಮುಮ್ ಗುಣಙ್ಗಳುಮ್.**

---

ಮೊದಲಾದವುಗಳು ಈ ಲಕ್ಷ್ಮಿಯ ಪುರುಷಕಾರಕ್ಕನುಗುಣವಾಗಿ ಪರಮಪುರುಷನಿಗೂ ಕಲ್ಯಾಣಗುಣಗಳೂ ಇವೆ ಎಂಬ ಭಾವವು. ಇವು ದ್ವಯದ ನಾರಾಯಣ ಶಬ್ದದಿಂದ ತೋರಿಬರುತ್ತವೆ ಎಂದು ಉಪದೇಶಿಸಿರುತ್ತಾರೆ. ರಾಜಾವಾದವನು ಅಪರಾಧಗಳಿಗನುಗುಣವಾಗಿ ಶಿಕ್ಷೆಗಳನ್ನೇರ್ಪಡಿಸಿರುವದರಿಂದ ಆತನು ಶರಣಾಗತನಿಗೆ ಕ್ಷಮಿಸು ಎಂದು ಪ್ರಾರ್ಥಿಸಿದರೂ ಶಿಕ್ಷಿಸುವನು. ಶ್ರಿಯಃಪತಿಯು ಹಾಗಲ್ಲವು. ಕಲ್ಯಾಣಗುಣಮಹೋದಧಿಯಾದುದರಿಂದ ಎಷ್ಟೇ ಅಪರಾಧಮಾಡಿದ್ದರೂ, ಯಾವಾಗ ಶರಣಾಗತನಾದನೋ **'ನಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ'** ಎಂದು ಹೇಳಿರುವ ಹಾಗೆ ಈತನ ವಾತ್ಸಲ್ಯಾದಿಗುಣಗಳು ಶ್ರಿಯಃಪತಿಯ ಅನುಗ್ರಹವು ನಿಸ್ಸಂಶಯವು ಎಂಬುದನ್ನು ಪ್ರಕಟಿಸುವುವು, ಇದು ಗೀತೆಯಲ್ಲೂ **'ಏತಾಂವಿಭೂತಿಂ ಯೋಗಂಚ ಮಮಯೋವೇತ್ತಿ ತತ್ವತಃ'** ಎಂಬಲ್ಲಿ ಯೋಗ ಶಬ್ದದಿಂದ ಕಲ್ಯಾಣಗುಣಯೋಗವೆಂದು ಶ್ರೀ ಯತಿವರ್ಯರ ಭಾಷ್ಯವಾದರೂ ಉಪಲಕ್ಷಣವಾಗಿ ಲಕ್ಷ್ಮಿ ನಿತ್ಯಯೋಗವೂ ಸಹ ಅಲ್ಲಿ ಹೇಳಲ್ಪಟ್ಟಿತು. ಲಕ್ಷ್ಮಿಯೂ ಪರಮಾತ್ಮನ ನಿತ್ಯವಿಭೂತಿಗೆ ಸೇರಿದವಳು. ಲಕ್ಷ್ಮಿಯ ನಿತ್ಯಯೋಗತ್ವವೂ ಅನುಗ್ರಹರೂಪ ಪುರುಷಕಾರತ್ವವೂ ಇರಬಹುದು; ಆದರೆ ದಯಾ ವಾತ್ಸಲ್ಯಾದಿ ದಿವ್ಯಗುಣಗಳಿಲ್ಲದವನಾದರೆ ಲಕ್ಷ್ಮಿಯ ಅನುಗ್ರಹವು ಕಾರ್ಯಕಾರಿಯಾಗಲಾರದು. ಆದುದರಿಂದ ಶ್ರೀಮನ್ನಾರಾಯಣನೂ ತನ್ನ ಪತ್ನಿಯ ಪುರುಷಕಾರತ್ವಕ್ಕನುಗುಣವಾಗಿಯೇ ಕಲ್ಯಾಣಗುಣಮಹೋದಧಿಯಾದುದರಿಂದಲೇ ರಕ್ಷಣವು ನಿಸ್ಸಂಶಯವೆಂಬ ತಾತ್ಪರ್ಯವು.

**ನಾರ** ಶಬ್ದದಲ್ಲಿ ನಿತ್ಯರಾದ ಲಕ್ಷ್ಮಿಯೂ, ಜೀವಾತ್ಮರೂ ಸೇರಿರುವದರಿಂದ ಇಲ್ಲಿರುವ **ಸಂಬಂಧ** ಶಬ್ದದಿಂದ ಲಕ್ಷ್ಮಿಗೂ ಪರಮಾತ್ಮನಿಗೂ ಮತ್ತು ಜೀವಾತ್ಮರಿಗೂ ಪರಮಾತ್ಮನಿಗೂ ಇರುವ ಶೇಷಶೇಷಿ ಸಂಬಂಧವೂ ಹೇಳಲ್ಪಟ್ಟಿತೆಂದು ಭಾವಿಸಬಹುದು; **ಸಂಬಂಧವೂ ಗುಣಙ್ಗಳೂ** ಇವೆರಡರ **ಯೋಗವೇ** ಮೇಲಿನ ಗೀತಾಶ್ಲೋಕದ **ಯೋಗ** ಶಬ್ದದಿಂದ ಹೇಳಲ್ಪಟ್ಟದುದು ಎಂದು ಭಾವಿಸತಕ್ಕದ್ದು.

ಲಕ್ಷ್ಮಿಯ ಪುರುಷಕಾರತ್ವಕ್ಕಿಂತ **ಏತ್ತಮ್** ಎಂದರೆ ಅಧಿಕಾತಿಶಯವುಳ್ಳದ್ದು ಪರಮಾತ್ಮನ ಕಲ್ಯಾಣಗುಣಗಳೆಂಬುದಕ್ಕೆ ಆಳ್ವಾರ್ ಪಾಶುರವನ್ನು ಉದಾಹರಿಸುತ್ತಾರೆ. **ಇದು**-ಲಕ್ಷ್ಮಿಯ ಪುರುಷಕಾರತ್ವವೇ ಅತಿಶಯವಾದುದು, **ಅದಕ್ಕೂ ಅತಿಶಯವಾದುದು ನಾರಾಯಣನ ಗುಣಗಳು ಎಂಬುದರ ಉಪಪಾದನೆ**

**ಇದು 'ತನ್ನಡಿಯಾರ್' ಎಙ್ಗಿರ ಪಾಟ್ಟಿಲೇ ಕಾಣಲಾಮ್.**

ಯನ್ನು 'ತನ್ನಡಿಯಾರ್ ಅದು ಶೆಯ್ಯಾರ್' ಎಙ್ಗ**ರ ಪಾಟ್ಟಿಲ್**-ಎಂಬೀ ಪಾಶುರದಲ್ಲಿ, **ಕಾಣಲಾಮ್**-ಕಾಣಬಹುದು.

ಈ ಪಾಶುರಾರ್ಥವು (ಪೆರಿ. ತಿರು ೪-೯-೨) ಹಿಂದೆಯೇ ಉಪಪಾದಿತವು. ೨೭೩೪ನೆಯ ಪುಟವನ್ನು ನೋಡಿ. 'ಲಕ್ಷ್ಮಿಯು ಪ್ರಪನ್ನನ ಅಪರಾಧಗಳನ್ನು ಕುರಿತು ನಿಂದಿಸಿದರೂ' ಎಂದು ಇತರರು ಮಾಡಿರುವ ಅರ್ಥವು ಈ ಪ್ರಕರಣಕ್ಕೆ ಸರ್ವಾತ್ಮನಾ ಸರಿಹೋಗುವದಿಲ್ಲವು. ಆದುದರಿಂದ ನಾವು ಹೇಳಿರುವ ಇನ್ನೊಂದು ಅರ್ಥವೇ ಯುಕ್ತವಾಗಿ ತೋರುತ್ತದೆ. ಅನುಗ್ರಹಮಯಳಾದ ಲಕ್ಷ್ಮಿಯು ತನ್ನ ಪತಿಯೊಂದಿಗೆ ಪ್ರಪನ್ನರ ಅಪರಾಧಗಳನ್ನು ಅರಿಕೆಮಾಡಿ, ಏನೋ ಮಾಡಿಬಿಟ್ಟರು ಮನ್ನಿಸು ಎಂದು ಪ್ರಾರ್ಥಿಸಿದರೆ, ಅದಕ್ಕೂ ಅತಿಶಯವಾದ ದಯಾವಾತ್ಸಲ್ಯಾದಿಗಳಿಂದ ನಾರಾಯಣನು ಕಲ್ಯಾಣಮಹೋದಧಿಯಾದುದರಿಂದ ಅವುಗಳಿಂದ ಪ್ರೇರಿತನಾಗಿ ಆತನು ಹೇಳುವನೇನೆಂದರೆ—ಆ ಅಪರಾಧಗಳನ್ನು ಪ್ರಾಮಾದಿಕವಾಗಿ ಮಾಡಿರಬೇಕೇ ವಿನಾ ಬುದ್ಧಿಪೂರ್ವಕವಾಗಿ **'ಎನ್ನಡಿಯಾರ್ ಅದು ಶೈಯ್ಯಾರ್'**-ನನ್ನನ್ನು ಆಶ್ರಯಿಸಿದ ಪ್ರಪನ್ನರು ಎಂದಿಗೂ ಮಾಡಲಾರರು ಎಂಬದಾಗಿ. ಅಲ್ಲಿ **ಶಿದೈಕ್ಕುರಿಕ್ಕುಮೇಲ್, ಶಿದೈಕ್ಕು** ಎಂದರೆ ದೋಷವನ್ನು, **ಉರೈಕ್ಕುಮೇಲ್**-ಹೇಳಿದರೂ, ಹೀಗೆ ದೋಷವನ್ನು ಹೇಳುವದು ಈ ಅನುಗ್ರಹಮಯಳು ಹೇಳುವದು ಕೆಟ್ಟದ್ದನ್ನು ಮಾಡಬೇಕೆಂಬ ಅಭಿಪ್ರಾಯದಿಂದಲ್ಲವು; ಪುರುಷಕಾರಭೂತಳಾದುದರಿಂದ ಅಪರಾಧಗಳನ್ನು ಗಂಡನಿಗೆ ತಿಳಿಸಿ ಆದರೂ ಅಧಿಕಾರಿಯು ಪ್ರಪನ್ನನಾದುದರಿಂದ ರಕ್ಷಿಸಲು ಯೋಗ್ಯನು ಎಂದು ಅರ್ಥಮಾಡುವದೇ ಸ್ವಾರಸ್ಯವು. **ಶೆಯ್‌ದಾರೇಲ್‌ನನ್ರು ಶೆಯ್‌ದಾರ್** ಎನ್ನುವದರ ಅಭಿಪ್ರಾಯವೇನೆಂದರೆ—ಬುದ್ಧಿಪೂರ್ವಕವಾಗಿ ಕೆಲವು ಮೃದುಪ್ರಜ್ಞರು ಅಪರಾಧಮಾಡಿದರೂ ಅವರಿಗೇನೂ ಕೊನೆಗೂ ಕೆಟ್ಟದು ಆಗುವದಿಲ್ಲವು; ಅವರಿಗೂ ಒಳ್ಳೇದೇ ಆಗುತ್ತದೆ; ಏಕೆಂದರೆ ಆ ದೋಷಗಳಿಗೆ ಪ್ರಾಯಶ್ಚಿತ್ತ ರೂಪದಲ್ಲಿ ಪುನಶ್ಶರಣಾಗತಿಯನ್ನನುಷ್ಠಿಸುವರು; ಅದರಿಂದ ಅವರು ರಕ್ಷಿಸಲ್ಪಡುವರು. ಹೀಗೆ ಪ್ರಾಯಶ್ಚಿತ್ತ ಶರಣಾಗತಿಯನ್ನೂ ಅನುಷ್ಠಿಸುವಷ್ಟು ವಿವೇಕವಿಲ್ಲದವರಾದರೂ ಅಲ್ಪ ದಂಡನೆಗಳನ್ನಿತ್ತು ರಕ್ಷಿಸುವನು; ಆದುದರಿಂದ ಕೊನೆಗೂ ಒಳ್ಳೆಯದೇ ಆಗುತ್ತದೆ ಎಂಬ ಭಾವವು. **'ಜಾತೇಪಿ ತನ್ನಿಷ್ಕೃತೇಃ ಕೌಟಿಲ್ಯೇ ಸತಿಶಿಕ್ಷಯಾಪ್ಯಸಘಯನ್ ಕ್ರೋಡೀಕರೋತಿಪ್ರಭುಃ'** ಎಂಬಲ್ಲಿ ಹೇಳಿರುವ ಅಭಿಪ್ರಾಯಗಳು ಇಲ್ಲಿ ಅನುಸಂಧೇಯಗಳು, **ನನ್ರುಶೆಯ್‌ದಾರ್** ಎಂದಿರುವದರಿಂದ ಪ್ರಪನ್ನರ ಬುದ್ಧಿಪೂರ್ವೋತ್ತರಾಘವು, ಕೆಲವರು ಅರ್ಥಮಾಡಿರುವಹಾಗೆ, ದೋಷವೇ ಅಲ್ಲವೆಂಬರ್ಥವಲ್ಲವು; ಏಕೆಂದರೆ **ಎನ್ಪರ್‌ಪೋಲುಮ್** ಎಂಬ ಪ್ರಯೋಗದಿಂದಲೇ ವ್ಯಕ್ತವು

## ಮನ್ತ್ರೇ ಶ್ರೀಮಚ್ಛಬ್ದೇನ ನಾರಾಯಣ ಏವ ಬೋಧ್ಯ ಇತಿ ನಾರಾಯಣ ಶಬ್ದವೈಯರ್ಥ್ಯಶಙ್ಕಾಂ ಪರಿಹರತಿ

———

**(೧)"ಶ್ರೀಧರ ಶ್ರೀಕರ ಶ್ರೇಯ ಶ್ರೀಮಾನ್ ಲೋಕತ್ರಯಾಶ್ರಯಃ" ಇತ್ಯಾದಿಗಳಿಲೇ ಭಗವನ್ನಾಮಮಾಗ ಪ್ರಸಿದ್ಧಮಾನ ಶ್ರೀಮಚ್ಛಬ್ದಮ್**

ಮನ್ತ್ರದಲ್ಲೇ ಶ್ರೀಮಚ್ಛಬ್ದವೇ ನಾರಾಯಣನನ್ನು ಬೋಧಿಸುವಾಗ ಮುಂದಿರುವ ನಾರಾಯಣಶಬ್ದವು ವ್ಯರ್ಥವಲ್ಲವೋ ಎಂದರೆ ಸಮಾಧಾನವು ಹೇಳಲ್ಪಡುತ್ತದೆ.

———

**ಶ್ರೀಮನ್ನಾರಾಯಣ** ಮತ್ತು **ಶ್ರೀಮತೇ ನಾರಾಯಣಾಯ** ಎಂಬ ಪೂರ್ವೋತ್ತರಖಂಡಗಳಲ್ಲೂ ಶ್ರೀಮಾನ್ ಎಂದರೆ ನಾರಾಯಣನೇ ಹೇಳಲ್ಪಡುವಾಗ ಪುನಃ ನಾರಾಯಣಶಬ್ದವು ನಿರರ್ಥಕವಲ್ಲವೋ ? ಎಂದರೆ, ಶ್ರೀಮಾನ್ ಎಂಬುದು ನಾರಾಯಣ **ಶಬ್ದಕ್ಕೆ ವಿಶೇಷಣವಾಗಿ** ಎರಡು ಖಂಡದಲ್ಲೂ ಸಾರ್ಥವತ್ತಾದುದು ಎಂದು ಉಪದೇಶಿಸುತ್ತಾರೆ. ಎರಡೂ ವಿಶೇಷ್ಯವಲ್ಲವು, ಮೊದಲಿನ ಪದವು ವಿಶೇಷಣವು ನಾರಾಯಣ ಶಬ್ದವು ವಿಶೇಷ್ಯವು ; ಹೀಗೆ ಭಾವಿಸಿದುದಾದರೆ ಪೂರ್ವ ಖಂಡದಲ್ಲೂ ಉತ್ತರಖಂಡದಲ್ಲೂ ಆ ವಿಶೇಷಣದಿಂದ ತೋರುವ ಪ್ರಯೋಜನ ಭಾವಗಳನ್ನು ತಿಳಿಸುತ್ತಾರೆ. ಲಕ್ಷ್ಮಿಯ ಸಂಬಂಧದಿಂದ ಪ್ರಾಪ್ತವಾದ ಅನೇಕ ನಾಮಗಳು ಸಹಸ್ರನಾಮದಲ್ಲಿ ಹೇಳಲ್ಪಟ್ಟಿವೆ. **"ಶ್ರೀವತ್ಸವಕ್ಷಾ ಶ್ರೀವಾಸ ಶ್ರೀಪತಿಶ್ರೀಮತಾಂವರಃ"** ಎಂದಾರಂಭಿಸಿ, **"ಸ್ವಕ್ಷಸ್ಸ್ವಂಗಶ್ಶತಾನಂದೋ ನಂದಿಃ"** ಎಂಬುವವರೆಗೂ ಅಂತಹ ನಾಮಗಳು ೬೧೯ ರಿಂದ ೬೨೪ ನೇಯ ನಾಮಗಳು. ಇವುಗಳ ಅರ್ಥಕ್ಕೆ ದಾಸನು ಬರೆದಿರುವ ವಿಷ್ಣುಸಹಸ್ರನಾಮ ಭಾಷ್ಯವನ್ನು ಪರಾಂಬರಿಸಬಹುದು. ಅವುಗಳಲ್ಲಿ ನಾಲ್ಕು ನಾಮಗಳನ್ನು ಮಾತ್ರ ಪ್ರಕರಣಾನುಗುಣವಾಗಿ ಮಹಾಗುರುವರ್ಯರು ಉದಾಹರಿಸಿರುತ್ತಾರೆ. ಇವುಗಳ ಅರ್ಥವೇನೆಂದರೆ—**ಶ್ರೀಧರಃ**-ರತ್ನವು ಕಾಂತಿಯನ್ನೂ, ಪುಷ್ಪವು ಪರಿಮಳವನ್ನೂ ಹೇಗೆ ಸದಾ ಸಂಬಂಧಿಸಿಕೊಂಡು ನಿತ್ಯಯೋಗವನ್ನು ಹೊಂದಿರುತ್ತವೆಯೋ, ಹಾಗೆಯೇ ಪರಮಪುರುಷನು ಲಕ್ಷ್ಮಿಯೊಂದಿಗೆನಿತ್ಯಯೋಗವನ್ನು ಹೊಂದಿರುವವನು '**ನ ಹಿ ಹಾತು ಮಯಂ ಶಕ್ಯಾ ಕೀರ್ತಿರಾತ್ಮವತೋ ಯಥಾ**' ಎಂಬುದು ಅನುಸಂಧೇಯವು. (ರಾ. ಅ. ೩೯-೨೯) **ಶ್ರೀಕರಃ**-ಪರರೂಪದಲ್ಲಿ ಹೇಗೆ ಲಕ್ಷ್ಮಿಯು ದಿವ್ಯಮಂಗಳವಿಗ್ರಹದೊಂದಿಗೆ ಸೇರಿರುವನೋ ಹಾಗೆಯೇ ವಿಭವಾವತಾರಗಳಲ್ಲೂ **"ದೇವತ್ವೇ ದೇವದೇಹೇಯಂ ಮನುಷ್ಯತ್ವೇ ಚ ಮಾನುಷೀ"** ಎಂದು ಹೇಳಿರುವ ಹಾಗೆ ತಾನು ದೇವತೆಯಾಗಿ ಅವತರಿಸಿದರೆ ಲಕ್ಷ್ಮಿಯನ್ನೂ ದೇವ

---

**(೧) ಸಹಸ್ರನಾಮ.**

**ಅನ್ರೆಯೊಡೋಽವೆನ್ನಿಲ್? ಪೂರ್ವಖಂಡತ್ತಿಲುಮ್ ಉಪಾಯಭಾವತ್ತುಕ್ಕು ರುಪ್ಪಾನ ಗುಣವಿಶೇಷಾನುಸಂಧಾನಾರ್ಥಮಾಗವುಮ್, ಉತ್ತರಖಂಡತ್ತಿಲ್ ಸರ್ವವಿಶಿಷ್ಟನಾನ ಶೇಷೀಪ್ರಾಪ್ಯನಾಯ್ ತೋತ್ತುಗೈಕ್ಕಾಗವುಮ್ ನಾರಾಯಣಶಬ್ದಮಪೇಕ್ಷಿತಮಾಗ್ಯೆಯಾಲ್ ಇಜ್ಙ್ಗ ಶ್ರೀಮಚ್ಛಬ್ದಮ್ ವಿಶೇಷಣ (ಪರ) ಮ್.**

---

ಸ್ತ್ರೀಯಾಗಿಯೂ, **ರಾಘವತ್ವೇ ಭವೇತ್ಸೀತಾ** ಎಂಬಲ್ಲಿ ಹೇಳಿರುವ ಹಾಗೆ ತಾನು ಮನುಷ್ಯಾವತಾರಿಯಾದರೆ ಲಕ್ಷ್ಮಿಯನ್ನು ಮನುಷ್ಯಸ್ತ್ರೀಯಾಗಿಯೂ, ಹೀಗೆ ಅನುರೂಪವಾದ ದಿವ್ಯಮಂಗಳವಿಗ್ರಹಯುಕ್ತಳನ್ನಾಗಿ ಲಕ್ಷ್ಮಿಯನ್ನು ಮಾಡುವವನು. **ಶ್ರೇಯಃಶ್ರೀರ್ಮಾ**-ಸಕಲವಿಧ ಪುರುಷಾರ್ಥರೂಪವಾದ, ಶ್ರೇಯಸ್ಸನ್ನು ಉಂಟುಮಾಡುವದಕ್ಕಾಗಿಯೇ ಲಕ್ಷ್ಮೀವಿಶಿಷ್ಟನಾಗಿರುವವನು. **"ಶರೀರಾರೋಗ್ಯಮೈಶ್ವರ್ಯಮರಿಪಕ್ಷಕ್ಷಯಃ ಸುಖಮ್"** (ವಿ. ಪು. ೧-೯-೧೨೪) ಇವೆಲ್ಲವೂ ಲಕ್ಷ್ಮಿಯ ಅನುಗ್ರಹದಿಂದ ಉಂಟಾಗುತ್ತವೆ. **ಲೋಕತ್ರಯಾಶ್ರಯಃ— "ತ್ವಂ ಮಾತಾ ಸರ್ವಲೋಕಾನಾಂ ದೇವದೇವೋ ಹರಿಃ ಪಿತಾ"** (ವಿ. ಪು. ೧-೯-೧೨೫) ಎಂದು ಹೇಳಿರುವ ಹಾಗೆ, ಲಕ್ಷ್ಮಿಯೊಂದಿಗೆ ಮೂರು ಲೋಕಕ್ಕೂ ಆಶ್ರಯನು". **ಇತ್ಯಾದಿಗಳಿಲೇ**-ಇವೇ ಮೊದಲಾದ ನಾಮಗಳಲ್ಲಿ, **ಭಗವನ್ನಾಮಮಾಗ**-ಇವು ಭಗವಂತನ ನಾಮಗಳೆಂದು, **ಪ್ರಸಿದ್ಧವಾದ, ಶ್ರೀಮಚ್ಛಬ್ದಮ್**-ಶ್ರೀಮಚ್ಛಬ್ದವು, **ಅನ್ರೆಯೊಡೋ ಎನ್ನಿಲ್**-ಸಾಲದೋ ಎಂದು ಪೂರ್ವಪಕ್ಷವನ್ನು ತಂದರೆ, ಶ್ರೀಮಚ್ಛಬ್ದವೇ ನಾರಾಯಣನನ್ನು ಬೋಧಿಸುವಾಗ, ಬೇರೆ ನಾರಾಯಣಶಬ್ದದ ಆವಶ್ಯಕತೆ ಏನೆಂದು ಆಕ್ಷೇಪಿಸಿದರೆ, ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ.—ದ್ವಯದ ಪೂರ್ವೋತ್ತರಖಂಡಗಳಲ್ಲೂ ನಾರಾಯಣಶಬ್ದವಾದ ವಿಶೇಷ್ಯಕ್ಕೆ ವಿಶೇಷಣವಾಗಿ ಪ್ರಯೋಜನವುಳ್ಳದ್ದಾಗಿದೆ ಎಂದು ಹೇಳುತ್ತಾರೆ.— **ಪೂರ್ವಖಂಡತ್ತಿಲ್** - ಪೂರ್ವಖಂಡದಲ್ಲಿ, **ಉಪಾಯಭಾವತ್ತುಕ್ಕು**-ಉಪಾಯಭಾವಕ್ಕೆ, **ಉರುಪ್ಪಾನ**-ಸಂಬಂಧಿಸಿದ, **ಗುಣವಿಶೇಷಾನುಸಂಧಾನಾರ್ಥಮಾಗವುಮ್**-ಮುಂದೆ ಗ್ರಂಥಕರ್ತರೇ ಉದಾಹರಿಸುವ ೧೨ ಕಲ್ಯಾಣಗುಣವಿಶೇಷಗಳ ಅನುಸಂಧಾನಕ್ಕಾಗಿಯೂ, **ಉತ್ತರಖಂಡತ್ತಿಲ್**-ಉತ್ತರಖಂಡದಲ್ಲಿ, **ಸರ್ವವಿಶಿಷ್ಟನಾನ**-ಸರ್ವವಿಭೂತಿಯೋಗ, ಸರ್ವಕಲ್ಯಾಣಗುಣಯೋಗ ಹೀಗೆ ಪರಿಪೂರ್ಣತೆಯನ್ನು ಹೊಂದಿದ, **ಸರ್ವಶೇಷಿಯೇ, ಪ್ರಾಪ್ಯನಾಯ್ ತೋತ್ತುಗೈಯಾಲುಮ್**-ಮಹಾಮಹಿಮೆ ಸರ್ವಾತಿಶಯವುಳ್ಳವನು ಪ್ರಾಪ್ಯನೆಂದು ಸ್ಫುಟವಾಗಿ ತೋರುವುದಕ್ಕಾಗಿಯೂ, **ನಾರಾಯಣಶಬ್ದವು, ಅಪೇಕ್ಷಿತಮಾಗ್ಯೆಯಾಲೇ**-ಆವಶ್ಯಕವಾದುದರಿಂದ, **ಇಜ್ಙ್ಗ**- ಈ ದ್ವಯಮಂತ್ರದಲ್ಲಿ, **ಶ್ರೀಮಚ್ಛಬ್ದಮ್ ವಿಶೇಷಣಪರಮ್**-ಎರಡು ಕಡೆಯಲ್ಲೂ ವಿಶೇಷಣ

ವನ್ನು ಬೋಧಿಸುವಂತಾದ್ದು, ಲಕ್ಷ್ಮೀವಿಶಿಷ್ಟನಾಗಿಯೇ ಉಪಾಯನೂ ಮತ್ತು ಪ್ರಾಪ್ಯನೂ ಎಂದು ಉಪದೇಶಿಸುತ್ತದೆಂಬ ಭಾವವು. ವಿಶೇಷಣವೆಂದು ಏತಕ್ಕೆ ಇಲ್ಲಿ ಹೇಳಲ್ಪಟ್ಟಿತು ಎಂದರೆ ಕೆಲವರು ಪೂರ್ವಖಂಡದ ಶ್ರೀಮಚ್ಛಬ್ದವು ಉಪಲಕ್ಷಣವೆಂದೂ, ಉತ್ತರಖಂಡದಲ್ಲಿ ಮಾತ್ರ ವಿಶೇಷಣವೆಂದೂ ಹೇಳುತ್ತಾರೆ. ಎರಡು ಕಡೆಯಲ್ಲೂ ಶ್ರೀಮಚ್ಛಬ್ದವಿದ್ದರೆ, ಒಂದುಕಡೆ ಉಪಲಕ್ಷಣವೆಂದೂ, ಇನ್ನೊಂದು ಕಡೆ ವಿಶೇಷಣವೆಂದೂ ಹೇಳುವುದು ಯಾವ ನ್ಯಾಯವು? ಎಂಬುದು ಗುರುಗಳ ಅಭಿಪ್ರಾಯವು. ಹಾಗೆ ನೋಡಿದರೆ ಪೂರ್ವಖಂಡದಲ್ಲೇ ಶ್ರೀಮನ್ನಾರಾಯಣವೆಂದು ಸಮಾಸಪದವಿರುವದರಿಂದ, **ಶ್ರೀಮತೇ ನಾರಾಯಣಾಯ** ಎಂದು ಭಿನ್ನಪದಗಳಿರುವಾಗಲೇ ವಿಶೇಷಣವಾದರೆ, ಸಮಾಸಪದದ ಶ್ರೀಮಚ್ಛಬ್ದವು ವಿಶೇಷಣವಲ್ಲವೇ? ಲಕ್ಷ್ಮೀತಂತ್ರವಾಕ್ಯದಲ್ಲಿ **"ಲಕ್ಷ್ಮ್ಯಾ ಸಹ ಹೃಷೀಕೇಶೋ ದೇವ್ಯಾ ಕಾರುಣ್ಯರೂಪಯಾ । ರಕ್ಷಕಃ"** ಎಂಬಲ್ಲಿ ಹೃಷೀಕೇಶನಿಗೆ ಏನೊಂದು ವಿಶೇಷಣಗಳನ್ನೂ ಕೊಡದೆ, ಲಕ್ಷ್ಮಿಗೆ ರಕ್ಷಕತ್ವವಾದ ಉಪಾಯದಲ್ಲೂ ಅನ್ವಯ ಉಂಟೆಂಬುದುದನ್ನು ವಿಶದೀಕರಿಸುವುದಕ್ಕಾಗಿ **ದೇವ್ಯಾ ಕಾರುಣ್ಯರೂಪಯಾ** ಎಂಬೆರಡು ಅರ್ಥವತ್ತಾದ ವಿಶೇಷಣಗಳನ್ನು ಲಕ್ಷ್ಮಿಗೆ ಕೊಟ್ಟಿರುತ್ತಾರೆ. ಇದನ್ನನುಸರಿಸಿ ಶ್ರೀ ಪರಾಶರಭಟ್ಟರವರೂ ಅಷ್ಟಶ್ಲೋಕಿಯಲ್ಲಿ **"ಈಶಾನಾಂ ಜಗತಾಮಧೀಶದಯಿತಾಂ ನಿತ್ಯಾನಪಾಯಾಂ ಶ್ರಿಯಂ ಸಂಶ್ರಿತ್ಯ"** ಎಂಬಲ್ಲಿ **ಶ್ರಿಯಂ ಸಂಶ್ರಿತ್ಯ** ಎಂದಿಷ್ಟು ಮಾತ್ರ ಹೇಳಿರುವದರಿಂದ ಪುರುಷಕಾರತ್ವೇನವೆಂದಾಗಲಿ, ಉಪಾಯತ್ವದಿಂದಾಗಲಿ ಹೇಳಲಿಲ್ಲವಾದುದರಿಂದಲೂ, ಪುರುಷಕಾರತ್ವವೂ ಉಪಾಯಗೋಷ್ಠಿಯಲ್ಲೇ ಸೇರಿದುದೆಂದು ಹಿಂದೆ ಉಪಪಾದಿಸಿರುವದರಿಂದಲೂ, ಲಕ್ಷ್ಮೀಸಂಶ್ರಯಣವು ಉಪಾಯರೂಪದಲ್ಲೇ ಎಂದೇ ಧಾರಾಳವಾಗಿ ಹೇಳಬಹುದು. ಹಾಗೆ ಆಶ್ರಯಣಕ್ಕೆ ಯೋಗ್ಯಳೆಂದು ವೇದ್ಯವಾಗಲೆಂದೇ, **ಈಶಾನಾಂ** ಎಂದಾರಂಭಿಸಿ ಮೂರು ವಿಶೇಷಣಗಳನ್ನು ಲಕ್ಷ್ಮಿಗೆ ಕೊಟ್ಟಿರುತ್ತಾರೆ. ನಿತ್ಯಾನಪಾಯಳಾಗಿ, ನಮಗೆ ಪರತತ್ವಭಾವದಲ್ಲಿ ಲಕ್ಷ್ಮಿಯೂ ಸೇರಿದವಳಾದುದರಿಂದ ಉಪಾಯವಾಗಿ ರಕ್ಷಿಸುವದೇ ಮೊದಲಾದ ಸರ್ವ ಪ್ರವೃತ್ತಿಯಲ್ಲೂ **"ಸಹಧರ್ಮಚರೀ"**ಯಾದುದರಿಂದ ಉಪಾಯತ್ವದಲ್ಲಿ ಅನ್ವಯವು ಸಿದ್ಧವು. ಆದುದರಿಂದ ಪೂರ್ವಖಂಡದ ಶ್ರೀಮಚ್ಛಬ್ದವೂ ವಿಶೇಷಣವೇ ವಿನಾ ಉಪಲಕ್ಷಣಮಾತ್ರವಲ್ಲವು. ಉಪಲಕ್ಷಣವೆಂಬುದರಲ್ಲಿ ಅವರ ತಾತ್ಪರ್ಯವೇನೆಂದರೆ — ಉಪಾಯವು ನಾರಾಯಣನು ಮಾತ್ರವೇ, ಆ ನಾರಾಯಣನು ಯಾರು ಎಂಬ ವಿವಕ್ಷೆಯಲ್ಲಿ ಲಕ್ಷ್ಮಿಗೆ ಗಂಡನಾದವನು ಎಂದು ಇಷ್ಟುಮಾತ್ರವೇ ಈ ಶ್ರೀಮಚ್ಛಬ್ದವು ಬೋಧಿಸುತ್ತದೆ ಎಂಬುದು ಅವರುಗಳ ಅಭಿಪ್ರಾಯವು. ಲಕ್ಷ್ಮಿಗೆ ಉಪೇಯತ್ವವನ್ನು ಬೋಧಿಸುವ ಶ್ರೀಮತೇ ಎಂಬ ಶಬ್ದವಿವರಣೆಗೆ ಶ್ರೀ ಪರಾಶರರು ಏನೊಂದೂ ವಿಶೇಷಣಗಳನ್ನು ಕೊಡಲಿಲ್ಲವು; ಪೂರ್ವಾರ್ಧ ಶ್ರೀಮಚ್ಛಬ್ದಕ್ಕೇ ಮೂರು ವಿಶೇಷಣಗಳನ್ನು

**ಇಙ್ಙತ್ತೈ ನಾರಾಯಣಶಬ್ದತ್ತುಕ್ಕು ಮೂಲಮನ್ತ್ರಾಧಿಕಾರತ್ತಿಲ್ (ಅನೇಕ) ವ್ಯುತ್ಪತ್ತಿಗಳಾಲೇ ಶೊನ್ನವರ್ಥಂಗಳೆಲ್ಲಾಮ್ ವಿವಕ್ಷಿತಂಗಳಾಗಿಲುಮ್, ಪೂರ್ವಖಂಡತ್ತಿಲ್ ನಾರಾಯಣಶಬ್ದತ್ತುಕ್ಕು ಶರಣ್ಯತ್ವೈಯಿಲೇ ನೋಕ್ಕಾನಪಡಿಯಾಲೇ (೧) "ನಿಗರಿಲ್ ಪುಗಳಾಯ್" ಇತ್ಯಾದಿಗಳಿಲೇ ಸಂಗ್ರಹೀತಂಗಳಾನ ವಾತ್ಸಲ್ಯ ಸ್ವಾಮಿತ್ವ, ಸೌಶೀಲ್ಯ, ಸೌಲಭ್ಯ, ಸರ್ವಜ್ಞತ್ವ, ಸರ್ವಶಕ್ತಿತ್ವ, ಸತ್ಯಸಂಕಲ್ಪತ್ವ, ಪರಮಕಾರುಣಿಕತ್ವ, ಕೃತಜ್ಞತ್ವ, ಸ್ಥಿರತ್ವ, ಪರಿಪೂರ್ಣತ್ವ, ಪರಮೋದಾರತ್ವಾದಿಗಳಿಙ್ಙನುಸಂಧೇಯಙ್ಗಳಿಲ್, ಪ್ರಧಾನ**

ಕೊಟ್ಟಿರುವದು. ಇದು ಏಕೆ ಎಂದು ಉಪಲಕ್ಷಣವಾದಿಗಳನ್ನು ಕೇಳಿದರೆ ಪ್ರಶ್ನೆಯು ನಿರುತ್ತರವಾಗುತ್ತದೆ. ಶ್ರೀಗುಣರತ್ನಕೋಶದಲ್ಲೂ ಅವರೇ ಅನೇಕ ಕಡೆಗಳಲ್ಲಿ ಲಕ್ಷ್ಮಿಗೆ ಉಪಾಯತ್ವವನ್ನು ಸಮರ್ಥಿಸಿರುತ್ತಾರೆ. **"ಆಕಾರತ್ರಯಸಂಪನ್ನಾ ಮರವಿಂದನಿವಾಸಿನೀಮ್ । ಅಶೇಷಜಗದೀಶಿತ್ರೀಂ ವಂದೇವರದವಲ್ಲಭಾಮ್"** ಎಂಬ ಪೂರ್ವಾಚಾರ್ಯ ದಿವ್ಯಸೂಕ್ತಿಯಲ್ಲಿ, **ಉಪಾಯತ್ವ ಪುರುಷಕಾರತ್ವ ಉಪೇಯತ್ವಗಳಾದ** ಮೂರು ಆಕಾರಗಳೂ ಬೋಧಿಸಲ್ಪಟ್ಟವು.

ಆಗಲಿ ನಾರಾಯಣಶಬ್ದವೂ ಆವಶ್ಯಕವೆಂದೇನೋ ಒಪ್ಪೋಣ. ಮೂಲಮನ್ತ್ರದ ನಾರಾಯಣ ಶಬ್ದದಲ್ಲಿ ಅನೇಕಾರ್ಥಗಳು ಅಡಗಿವೆ ಎಂದು ಬಹು ವಿಸ್ತರಿಸಿ ಉಪಪಾದಿಸಿದ್ದಾಯಿತಲ್ಲಾ, ಅವೆಲ್ಲವೂ ಈಗ ಪೂರ್ವಖಂಡದ ಉಪಾಯತ್ವಾನುಸಂಧಾನವಲ್ಲಿ ಬೇಕೇ? ಅಥವಾ ಆಶ್ರಯಣೋಪಯುಕ್ತಗಳಾದ ಕಲ್ಯಾಣಗುಣಗಳು ಮಾತ್ರವೇ ಅನುಸಂಧೇಯವೇ? ಎಂಬ ವಿವೇಚನೆಯಲ್ಲಿ ಆಶ್ರಯೋಪಯುಕ್ತಗಳಾದ ಕಲ್ಯಾಣಗುಣಗಳೇ ಮುಖ್ಯವಾಗಿ ಅನುಸಂಧೇಯಗಳೆಂದು ಮುಂದೆ ತಿಳಿಸಿ, ಆ ಕಲ್ಯಾಣಗುಣಗಳು ಯಾವುವು ಎಂಬುದನ್ನು ಉಪದೇಶಿಸುತ್ತಾರೆ.— **ಇಙ್ಙತ್ತೈ ನಾರಾಯಣಶಬ್ದತ್ತುಕ್ಕು**- ಎಂದರೆ ಇಲ್ಲಿರುವ ನಾರಾಯಣಶಬ್ದಕ್ಕೆ, **ಮೂಲಮನ್ತ್ರಾಧಿಕಾರದಲ್ಲಿ, ಅನೇಕ ವ್ಯುತ್ಪತ್ತಿಗಳಾಲೇ**- ಪ್ರಕೃತಿ ಪ್ರತ್ಯಯ ಭೇದವೇನು, ಸಮಾಸಭೇದವೇನು, ಅಕ್ಷರಗಳಿಂದ ತೋರುವ ಅರ್ಥವೇನು, ಹೀಗೆ ಅನೇಕವಿಧ ನಿಷ್ಪತ್ತಿ ನಿರ್ವಚನಗಳಿಂದ, **ಶೊನ್ನವರ್ಥಙ್ಗಳೆಲ್ಲಾಮ್**-ಹೇಳಿದ ಅರ್ಥಗಳೆಲ್ಲವೂ, **ವಿವಕ್ಷಿತಙ್ಗಳಾಲುಮ್**-ಹೇಳಬೇಕಾದುದು ಆವಶ್ಯಕವಾದರೂ, **ಪೂರ್ವಖಂಡದಲ್ಲಿ ನಾರಾಯಣಶಬ್ದಕ್ಕೆ, ಶರಣ್ಯತ್ವೈಯಿಲೇ**- ರಕ್ಷಣೋಪಾಯದಲ್ಲಿ, **ನೋಕ್ಕಾನಪಡಿಯಾಲೇ**-ಪ್ರಾಧಾನ್ಯವಾದುದರಿಂದ, **"ನಿಗರಿಲ್ ಪುಗಳಾಯ್"** ಎಂಬ ಪಾಶುರವೇ, **ಇತ್ಯಾದಿಗಳಿಲೇ**-ಮೊದಲಾದವುಗಳಿಗೆ, **ಸಂಗ್ರಹೀತಙ್ಗಳಾನ**-ಸಂಗ್ರಹಿಸಿ ಹೇಳಲ್ಪಟ್ಟ, ವಾತ್ಸಲ್ಯ ಸ್ವಾಮಿತ್ವ, ಸೌಶೀಲ್ಯಾದಿ ಹನ್ನೆರಡು ಗುಣಗಳು, **ಇಙ್ಙನುಸಂಧೇಯಙ್ಗಳಿಲ್**-ಈ ಸಂದರ್ಭ

---

(೧) ತಿರು. ೬-೧೦-೧೦.

**ತಮುಙ್ಗಳ್. ಇವತ್ತಿಲ್ ವಾತ್ಸಲ್ಯಮಾವದು ? (೨) "ದೋಷೋಯದ್ಯಪಿ**

ದಲ್ಲಿ ಅನುಸಂದೇಯವಾದ ಗುಣಗಳಲ್ಲಿ, **ಪ್ರಧಾನತಮುಙ್ಗಳ್**-ಅತ್ಯಂತ ಮುಖ್ಯವಾದವುಗಳು. ಈ ದ್ವಯಮನ್ತ್ರದ ಪೂರ್ವಖಂಡದ ನಾರಾಯಣ ಶಬ್ದದಿಂದ ಮೂಲಮನ್ತ್ರಾಧಿಕಾರದಲ್ಲಿ ಉಪಪಾದಿಸಲ್ಪಟ್ಟ ಸಮಸ್ತ ಅರ್ಥಗಳು ಇಲ್ಲಿಯೂ ಅನುಸಂಧೇಯಗಳಾದರೂ, ಮುಖ್ಯವಾಗಿ, ಆಶ್ರಯಣಕ್ಕೂ ರಕ್ಷಣೆಗೂ ಉಪಯುಕ್ತಗಳಾದ ೧೨ ಗುಣಗಳು ಅನುಸಂಧೇಯಗಳೆಂದು ಹೇಳಿದರು. ಈ ಅನೇಕ ಗುಣಗಳು, **ನಿಗರಿಲ್ ಪುಗಳಾಯ್** ಎಂದು ಬರುವ **ಅಗಲಗಿಲ್ಲೇ‌ೕ** ಎಂಬಲ್ಲಿ ಉಪಪಾದಿತವೆಂದು ತಿಳಿಸಿದರು. ಈ ಪಾಶುರ ಮತ್ತು ಅದರ ಅರ್ಥಗಳಿಗೆ ನೆಯ ಪುಟ ನೋಡಿ. **ನಿಗರಿಲ್ ಪುಗಳಾಯ್** ಎಂದರೆ ನಿನಗೆ ಸಮರಾಗಲಿ ಅಧಿಕರಾಗಲಿ ಇಲ್ಲದ ಕಲ್ಯಾಣಗುಣ ಮಹೋದಧಿಯಾಗಿ ಎಂದರ್ಥವಾಗುತ್ತದೆ. ಆ ಕಲ್ಯಾಣಗುಣಗಳಲ್ಲಿ ಸಾಪರಾಧಿಯಾದ ಪ್ರಪನ್ನನಿಗೆ ಅನುಗ್ರಹರೂಪವಾದುದು ವಾತ್ಸಲ್ಯವು. ಆದುದರಿಂದ ನಾರದೀಪಿಕಾ ವ್ಯಾಖ್ಯಾತೃವು **"ನಿಗರಿಲ್ ಪುಗಳಾಯ್ ಯೆನ್ರು ವಾತ್ಸಲ್ಯಮ್ ಸಙ್ಗ್ರಹೀತಮ್; "ಉಲಗಮೂನ್ರುಡೈಯಾ" ಯೆನ್ರು ಸ್ವಾಮಿತ್ವಂ; ಎನ್ನೈಯಾಳ್ವಾನೇ" ಎನ್ರು ಸೌಶೀಲ್ಯಂ; "ನಿಗರಿಲ್ ಅಮರರ್" ಇತ್ಯಾದಿಯಾಲ್ ಸೌಲಭ್ಯಂ ಸಂಗ್ರಹೀತಂ; ಸರ್ವಜ್ಞತ್ವಾದಿಗಳಿಪ್ಪಾಟ್ಟಿಲ್ ಅರ್ಥಾತ್ಸಿದ್ಧಂಗಳ್; ಆದಿ ಶಬ್ದಂ ಮಾರ್ದವಾರ್ಜವಾದಿ ಸಂಗ್ರಾಹಕಂ"** ಎಂದು ಅಪ್ಪಣೆ ಕೊಡಿಸಿರುತ್ತಾರೆ. ಈ **"ಅಗಲಗಿಲ್ಲೇ‌ೕ"** ಎಂಬ ಪಾಶುರಕ್ಕೆ ಶ್ರೀವಡಕ್ಕತಿರುವೀಧಿಪಿಳ್ಳೆಯವರೂ ಸಹ ಹೀಗೆಯೇ **ಈಡಿ**ನಲ್ಲಿ ವ್ಯಾಖ್ಯಾನಮಾಡಿರುತ್ತಾರೆ. ಪರಾಂಬರಿಸಬಹುದು. ಅಪರೆ ಶ್ರೀ ದೇಶಿಕ ಸಿದ್ಧಾನ್ತಕ್ಕೆ ವಿರುದ್ಧವಾದ ಇತರ ಉಪಪಾದನೆಗಳುಂಟು. ಅವುಗಳು ಗ್ರಾಹ್ಯವಲ್ಲವು.

**ಈ** ಗುಣಗಳು ಯಾವುವೆಂಬುದನ್ನು ಶ್ರೀ ದೇಶಿಕರವರೇ ಮುಂದೆ ವಿಶದೀಕರಿಸುವದರಿಂದ ಇಲ್ಲಿ ಅವುಗಳ ಅರ್ಥಗಳನ್ನು ಬರೆಯಲಿಲ್ಲವು. **ಇವತ್ತಿಲ್**-ನಾರಾಯಣ ಶಬ್ದದಲ್ಲಿ ಉಪಪಾದಿತವಾದ ಕಲ್ಯಾಣಗುಣಗಳಲ್ಲಿ **"ವಾತ್ಸಲ್ಯಮಾವುದು ?**-ವಾತ್ಸಲ್ಯ ಯಾವುದು ? **(೨) "ದೋಷೋಯದ್ಯಪಿತಸ್ಯಸ್ಯಾತ್"**-"ಒಂದುವೇಳೆ ಶರಣಾಗತನಲ್ಲಿ ದೋಷವಿದ್ದರೇನು" ಇದರ ಪೂರ್ವಾರ್ಧವು **"ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ"** ಎಂಬುದು. ಇಲ್ಲಿ **ಮಿತ್ರ** ಶಬ್ದಕ್ಕೆ ಮಿತಾತ್ತ್ರಾಯತ ಇತಿ ಮಿತ್ರಂ ಎಂಬ ವ್ಯುತ್ಪತ್ತಿಯಿಂದ ಮಿತವಾದುದರಿಂದ ರಕ್ಷಿಸುವವನು ಎಂದರೆ ಅಮಿತವಾದ ನಿರತಿಶಯವಾದುದನ್ನು ಕೊಟ್ಟು ರಕ್ಷಿಸುವವನು ಎಂಬ ಭಾವವನ್ನು ಬಹುಶಃ ತೋರ್ಪಡಿಸಿರುತ್ತಾರೆ.

---

(೨) ರಾಮಾ. ಯುದ್ಧ. ೧೮-೩.

**ತಸ್ಯಸ್ಯಾತ್ " ಎಙ್ಗಿರಪಡಿಯೇ ಆಶ್ರಿತನುಡೈಯ ದೋಷಂ (ಅಪರಾಧಂ) ಪಾರಾದೇ ಅಙ್ಗೀಕರಿತ್ತೈಕ್ಕೀಡಾನ ಇರಕ್ಕಮ್, ಇದು ತ್ತದೋಷಂಗಳೈ ಪಾರ್ತ್ತಗಲಾಮ್ಮೈಕ್ಕುರಿಪ್ಪಾಮ್ (೨) ಸ್ವಾಮಿತ್ವಮಾವದು ?-ಪ್ರಣವಾದಿಗಳಿಲ್**

ಇನ್ನೊಂದು ವ್ಯುತ್ಪತ್ತಿ ಹೇಗೆಂದರೆ **ಸರ್ವಭೂತೇಷು ಮೇದ್ಯತಿಸ್ನಿಹ್ಯತಿ**-ಸರ್ವ ಭೂತಗಳಲ್ಲೂ ಪ್ರೀತಿಯನ್ನಿಟ್ಟಿರುವವನು, ಸರ್ವರಕ್ಷಕನು ಎಂಬ ಭಾವನೆಯಿಂದ ಬಂದಿರುವವನು, ಅಂತಹ ಆಶ್ರಿತನನ್ನು ಎಂದಿಗೂ ಬಿಡಲಾರೆ ಎಂಬರ್ಥವಾಗುತ್ತದೆ. ಆದುದರಿಂದ ಮಿತ್ರತ್ವ ಹೇಗೆ ಎಂದರೆ ಶರಣಾಗತ್ಯನುಷ್ಠಾನದಿಂದಲೇ ಎಂಬ ಭಾವವು. **ಎಙ್ಗಿರಪಡಿಯೇ**-ಎಂದು ಶ್ರೀರಾಮನು ಸುಗ್ರೀವನಿಗೆ, ತನ್ನ ಶರಣಾಗತನನ್ನು ಅವನು ದೋಷಿಯೇ ಆಗಿರಲಿ ಅಂತವನನ್ನೂ ಕೂಡ ಎಂದಿಗೂ ಕೈಬಿಡೆನು ಎಂದು ಹೇಳಿರುವಹಾಗೆ, **ಆಶ್ರಿತನ ದೋಷಂಪಾರಾದೆ**-ಶರಣಾಗತನ ದೋಷವನ್ನು ಪರಿಗಣಿಸದೆ, **ಅಙ್ಗೀಕರಿಕ್ಕೈಕ್ಕೀಡಾನ** - ಆತನು ರಕ್ಷಿಸಲು ಯೋಗ್ಯನೆಂದು ಅಂಗೀಕರಿಸುವದಕ್ಕನುಗುಣವಾದ, **ಇರಕ್ಕಮ್**-ಪ್ರೀತಿವಿಶೇಷವು ಸ್ನೇಹವು. ಶರಣಾಗತನು ಹಿಂದೆ ಎಷ್ಟು ಪಾಪಿಯಾಗಿದ್ದರೂ, ಯಾವಾಗ ಶರಣಾಗತನಾದನೋ, ಆತನು ಸಹಸ್ರಾಪರಾಧಿಯಾಗಿದ್ದರೂ, ಅವು ಒಂದನ್ನೂ ಪರಿಗಣಿಸದೆ ರಕ್ಷಿಸುವ ಗುಣವು. ಇದು ಅಸದೃಶವಾದ ಗುಣವು. ಈ ಲೋಕದ ಪ್ರಭುಗಳಾದರೋ, ಅಪರಾಧಕ್ಕೆ ಅನುಗುಣವಾಗಿ ಶಿಕ್ಷಿಸುವರು. ಸರ್ವಲೋಕಪ್ರಭುವಿನ ಸತ್ಯಸಂಕಲ್ಪವಾದರೋ ಶರಣಾಗತನು ಎಂತಹ ದೋಷಿಯಾಗಿದ್ದರೂ, ಮಾನ್ಯನೇ ರಕ್ಷಣೀಯನೇ ಎಂಬುದು. ಆಗತಾನೇ ಪ್ರಸವಿಸಿದ ಆಕಳು ತನ್ನ ವತ್ಸ ಕರುವಿನ ಶರೀರವೆಲ್ಲಾ ದೂಷಿತವಾಗಿದ್ದರೂ, ಅದನ್ನೆಲ್ಲಾ ನೆಕ್ಕಿ, ತನ್ನ ಕರುವಿಗೆ ಹಾಲನ್ನು ಸುರಿಸುತ್ತಾ ಅದನ್ನು ಸಂರಕ್ಷಿಸುವ ಗುಣಕ್ಕೆ **ವಾತ್ಸಲ್ಯ** ವೆಂದು ಹೆಸರು. ಇಂತಹ ಗುಣವು ಪರಮಾತ್ಮನಲ್ಲುಂಟು. ಈ ಅಭಿಪ್ರಾಯವು **"ಯಥಾ ಚ ಧೇನುಸ್ಸ್ರವತಿ ಸ್ನೇಹಾದ್ವತ್ಸಸ್ಯ ವತ್ಸಲಾ"** ಎಂಬ ಮಹರ್ಷಿ ವಾಕ್ಯದಲ್ಲಿ ತೋರಿಬರುತ್ತದೆ. **ವತ್ಸಲೆಯ** ಭಾವವು **ವಾತ್ಸಲ್ಯವು.** **ಇದು** ಈ ವಾತ್ಸಲ್ಯ ಗುಣವು, **ತ್ತದೋಷಙ್ಗಳೈಪಾರ್ತ್ತು**-ಮೋಕ್ಷಾರ್ಥಿಯಾದ ತನ್ನ ದೋಷಗಳನ್ನು ನೋಡಿ, **ಅಗಲಾಮ್ಮೈಕ್ಕು**-ಇಂತಹ ಮಹಾಪಾಪಿಯನ್ನು ಸ್ವಾಮಿಯು ಎಲ್ಲಾದರೂ ರಕ್ಷಿಸುವನೋ ಎಂಬ ಅಧೈರ್ಯದಿಂದ, ಸ್ವಾಮಿಯನ್ನು ಆಶ್ರಯಿಸುವದನ್ನು ಬಿಟ್ಟು ಹೋಗದಿರುವದಕ್ಕೆ, **ಉರಿಪ್ಪಾಮ್**-ಜ್ಞಾಪಕವನ್ನು ಕೊಡುತ್ತದೆ. ಈ ವಾತ್ಸಲ್ಯಗುಣದ ಅನುಸಂಧಾನದಿಂದ ಅಧೈರ್ಯಪಟ್ಟು ಇಂತಹ ಮಹಾಪಾಪಿಯಾದ ನನ್ನನ್ನು ಹೇಗೆ ರಕ್ಷಿಸ್ಯಾನು ಎಂದು ಹೇಳಿ ಆತನನ್ನು ಆಶ್ರಯಿಸೋಣವನ್ನು ಬಿಟ್ಟು ಹೋಗದ ಹಾಗೆ ಮಾಡಲು ಸಹಕಾರಿಯಾಗುತ್ತದೆಂಬ ಭಾವವು.

**(೨) ಸ್ವಾಮಿತ್ವಮಾವ್ರದು ?** - ಸ್ವಾಮಿತ್ವವೆಂದರೇನು? **ಪ್ರಣವಾದಿಗಳಿಲ್**-ಪ್ರಣವವೇ ಮೊದಲಾದವುಗಳಲ್ಲಿ, **ಇಲ್ಲಿ ಆದಿ** ಶಬ್ದದಿಂದ **ಇತರ ಪ್ರಮಾಣ**

**ಶಿಕ್ಷಿತಮಾನ ಸಂಬಂಧವಿಶೇಷಮ್; ಇದು ತಱಪೇರಾಗ ರಕ್ಷಿಕ್ಕುಮೆಂಗಿರ ತೇತ್ತತ್ತುಕ್ಕುರುಪ್ಪಾಮ್.**

**(೩) ಸೌಶೀಲ್ಯಮಾವದು? ತಾಱ ಸರ್ವಾಧಿಕನಾಯ್ ವೈತ್ತುತ್ತಣ್ಣಿ**

ಗಳಾದ **"ಪತಿಂ ವಿಶ್ವಸ್ಯ"** (ಪುರುಷಸೂಕ್ತ) **"ದಾಸಭೂತಾಸ್ಸ್ವತಸ್ಸರ್ವೇಹ್ಯಾತ್ಮಾನಃ ಪರಮಾತ್ಮನಃ" "ಈಶನೀಶೌ" "ಚೇತನಶ್ಚೇತನಾನಾಂ .... ವಿದಧಾತಿ ಕಾಮಾ಼" "ಭ್ರಾಮಯರ್ಸ ಸರ್ವಭೂತಾನಿ" "ಅಂತರೋಯಮಯತಿ" "ಕ್ಷರಾತ್ಮಾನೌ ಈಶತೇ ದೇವ ಏಕಃ" "ಪ್ರಧಾನಕ್ಷೇತ್ರಜ್ಞಪತಿಃ"** (ಶ್ವೇತ ) ಇತ್ಯಾದ್ಯನೇಕ ಪ್ರಮಾಣಗಳು ಹೇಳಲ್ಪಟ್ಟವು. **ಶಿಕ್ಷಿತಮಾನ**-ಉಪದೇಶಿಸಲ್ಪಟ್ಟ, **ಸಂಬಂಧವಿಶೇಷಮ್**-ಸರ್ವಶೇಷಿತ್ವವು. ಪ್ರಣವದಲ್ಲಿ ಮಕಾರ ವಾಚ್ಯನಾದ ಜೀವನು, **ಆಯೈವ**-ಅಕಾರವಾಚ್ಯನಾಗಿ ಜಗತ್ಕಾರಣನಾದ ವಿಷ್ಣುವಿಗೇನೇ ಶೇಷಭೂತನು ದಾಸಭೂತನು ಎಂಬರ್ಥದಿಂದ ಸರ್ವಶೇಷಿತ್ವರೂಪ ಅರ್ಥವು **ತೋರಿ**ಬರುತ್ತದೆ. **ಇದು**-ಈ ಸ್ವಾಮಿತ್ವವು, ಆತನು ಸ್ವಾಮಿಯು, ನಾವು ದಾಸರು ಎಂಬ ಸಂಬಂಧವು, **ತಱಪೇರಾಗ**-ತನ್ನ ಪುರುಷಾರ್ಥಸಿದ್ಧಿಗಾಗಿ, **ರಕ್ಷಿಕ್ಕುಮ್ ಎಙ್ಗಿರ**-ಶರಣಾಗತನನ್ನು ರಕ್ಷಿಸುವುದು ಸ್ವಾಮಿಯಾದ ತನಗೇನೇ ಮಹಿಮೆಯನ್ನುಂಟುಮಾಡುವದರಿಂದ, ರಕ್ಷಿಸಿಯೇ ರಕ್ಷಿಸುವನು ಎಂಬ, **ತೇತ್ತತ್ತುಕ್ಕು**-ನಿರ್ಭಯನಾಗಿ ಮಹಾವಿಶ್ವಾಸದಿಂದಿರುವದಕ್ಕೆ, **ಉರುಪ್ಪಾಮ್**-ಜ್ಞಾಪಕಾರ್ಹವಾಗುತ್ತೆ. ಸ್ವಾಮಿಯಾದವನು ಶರಣಾಗತನಾದ ತನ್ನ ರಕ್ಷಿಸುವದು ಸ್ವಾಮಿಯಾದವನಿಗೇ ಉತ್ಕರ್ಷವನ್ನುಂಟುಮಾಡುವ ಪ್ರಯೋಜನವುಳ್ಳದಾದುದರಿಂದ ದಾಸನಾದ ತನ್ನನ್ನು ಎಂದಿಗೂ ರಕ್ಷಿಸದೇ ಇರನು ಎಂಬ ಅನುಸಂಧಾನಕ್ಕೆ ಈ ಸ್ವಾಮಿತ್ವಗುಣವು ಹೇತುವೆಂಬ ಭಾವವು. **ಶರೈಸ್ತು ಸಂಕುಲಾಂ ಕೃತ್ವಾ ಲಂಕಾಂ ಪರಬಲಾರ್ದನಃ । ಮಾಂ ನಯೇದ್ಯದಿ ಕಾಕುತ್ಸ್ಥಃ ತತ್ತಸ್ಯ ಸದೃಶಂ ಭವೇತ್** (ರಾಮಾ. ಸುಂದರ 39-30) ಎಂಬಲ್ಲಿ ಉಪಪಾದಿಸಲ್ಪಟ್ಟ ಸ್ವಾಮಿತ್ವಕ್ಕೆ ದಾಸನ ರಕ್ಷಣೆಯೇ ಪುರುಷಾರ್ಥರೂಪವಾದುದು. ದಾಸನಿಗೆ ಪುರುಷಾರ್ಥವು ಹಾಗಿರಲಿ. ಸರ್ವೇಶ್ವರನಿಗೆ ಪ್ರಪನ್ನನಾದ ದಾಸನ ಸಂರಕ್ಷಣೆಯನ್ನೇ ತನಗೆ ಪುರುಷಾರ್ಥವನ್ನಾಗಿ ಭಾವಿಸುವನೆಂಬ ಭಾವವು.

**(೩) ಸೌಶೀಲ್ಯಮಾವದು?**- ಮೂರನೆಯ ಗುಣವಾದ ಸೌಶೀಲ್ಯವೆಂದರೇನು? **ತಾಱ**-ಸರ್ವೇಶ್ವರನಾದ ತಾನು, **ಸರ್ವಾಧಿಕನಾಯ್ ವೈತ್ತು**- **"ನತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ"** (ಶ್ವೇ. ೬-೮) ಎಂದು ಶ್ರುತಿಯಲ್ಲಿ ಆತನಿಗೆ ಸಮರೂ ಇಲ್ಲವು ಅಧಿಕರೂ ಇಲ್ಲವು ಎಂದು ಹೇಳಿರುವಹಾಗೆ ಎಲ್ಲರಿಗಿಂತಲೂ ಅಧಿಕನಾಗಿ ಇದ್ದುಕೊಂಡು, **ತಣ್ಣಿಯರಾನ**-ನಿಕೃಷ್ಟಜನ್ಮವೆತ್ತಿರುವ, **ನಿಷಾದ**-ಬೇಡರವನಾದ

**ಯರಾನ ನಿಷಾದ ವಾನರ ಗೋಪಾಲಾದಿಗಳೋಡೇ ನೀರಂಧ್ರಸಂಶ್ಲೇಷಂ ಪಣ್ಣುಗೈ, ಇದು (೧) "ಅಮ್ಮಾನಾಳಿಪ್ಪಿರಾನವನೆವ್ವಿಡತ್ತಾರ್ ಯಾನಾನ್"** ಗುಹನು, **ವಾನರ**-ಸುಗ್ರೀವಾಂಜನೇಯಾದಿಗಳು, **ಗೋಪಾಲಾದಿಗಳೋಡೇ**-ಗೋವುಗಳನ್ನು ಮೇಯಿಸುವ ಕುಲದಲ್ಲಿ ಹುಟ್ಟಿದ ನಂದಗೋಪ ವಸುದೇವಾದಿಗಳು, ಆದಿಪದದಿಂದ ವಿದುರ, ಮಾಲಾಕಾರಳು, ಕುಬ್ಜೆ, ಶಬರಿ ಮೊದಲಾದವರುಗಳೊಂದಿಗೆ, **ನೀರಂಧ್ರ ಸಂಶ್ಲೇಷಮ್ ಪಣ್ಣುಗೈ**-ಸ್ವಲ್ಪವೂ ಅವಕಾಶವಿಲ್ಲದೆ ಒಟ್ಟಿಗೆ ಅಂತವರೊಂದಿಗೆ ಸೇರಿರುವಿಕೆಯು, ಗುಹನನ್ನು ಪರಮಮಿತ್ರನನ್ನಾಗಿ ಭಾವಿಸಿ ಆಲಂಗಿಸಿದುದೂ, ಸುಗ್ರೀವನನ್ನು **"ಲೋಕನಾಥಃ ಪುರೋ ಭೂತ್ವಾ ಸುಗ್ರೀವಂ ನಾಥ ಮಿಚ್ಛತಿ"** ತಾನೇ ಲೋಕೇಶ್ವರನಾಗಿದ್ದರೂ, ಸೀತಾನ್ವೇಷಣ ಪ್ರಾಪ್ತಿ ಮೊದಲಾದವುಗಳಿಗೆ ಆತನನ್ನು ಸ್ವಾಮಿಯಾಗಿ ಭಾವಿಸಿ, ಆತನೊಡನೆ ಸಖ್ಯವನ್ನು ಬಯಸಿ, ಆತನನ್ನು ಆಲಂಗಿಸಿದುದೂ, ಆಂಜನೇಯನು ಸೀತಾನ್ವೇಷಣಮಾಡಿಕೊಂಡು ಬಂದುದಕ್ಕೆ **"ಏಷಸರ್ವಸ್ವಭೂತಸ್ತು ಪರಿಷ್ವಂಗೋ ಹನೂಮತಃ"** (ರಾ. ಯು. ೧-೧೩) ಎಂದು ಆಲಂಗಿಸಿದುದೂ, ವಿಭೀಷಣನನ್ನು ತನ್ನ ಪರಿವಾರವೆಲ್ಲಾ ನಿರಾಕರಿಸಿದರೂ ಆತನನ್ನು ಪರಿಗ್ರಹಿಸಿ, ಲಂಕಾ ರಾಜ್ಯವನ್ನು ಕಟ್ಟಿ, ತನ್ನ ಸಹೋದರರಲ್ಲೊಬ್ಬನಾಗಿ ಭಾವಿಸಿ ಆಲಂಗಿಸಿದುದೂ, **ಗೋಪಾಲ**ರೊಂದಿಗೆ ಭೋಜನ ವಿಹಾರಾದಿಗಳಲ್ಲಿ ಸಕ್ತನಾಗಿದ್ದುದೂ, ವಿದುರಾನ್ನವನ್ನೂ, ಶಬರೀದತ್ತ ಫಲವನ್ನೂ, ಅವಲಕ್ಕಿ ಕೊಟ್ಟ ಬಡಬ್ರಾಹ್ಮಣನಿಗೆ ಸರ್ವವಿಧ ಉಪಚಾರಗಳನ್ನೆಲ್ಲಾ ತನ್ನ ಪತ್ನಿಯೊಂದಿಗೆ ಮಾಡಿದುದೂ, **ಪಿಶಾಚಜನ್ಮ**ವನ್ನು ಹೊಂದಿದ ಘಂಟಾಕರ್ಣನು ಸಮರ್ಪಿಸಿದ ನಿಕೃಷ್ಟವಾದ ಮಾಂಸ ಮದ್ಯಗಳನ್ನು ಸ್ವೀಕರಿಸಿದುದೂ, ಇವೆಲ್ಲವೂ ಸರ್ವೇಶ್ವರನ ಸೌಶೀಲ್ಯದ ನಿದರ್ಶನಗಳಲ್ಲಿ ಏಕದೇಶವೆಂದು ಭಾವಿಸತಕ್ಕದ್ದಾಗಿರುತ್ತದೆ. ಹಿಂದೆ ಉದಾಹರಿಸಿರುವ **ಶ್ರೀ ದೇಶಿಕ**ರವರ **"ನಿಷಾದಾನಾಂ ನೇತಾ ಕಪಿಕುಲಪತಿಃ ಕ್ವಾಪಿಶಬರೀ"** ಎಂಬ ದಯಾಶತಕಶ್ಲೋಕವು ಇಲ್ಲಿ ಅನುಸಂಧೇಯವು. ಈ ಸೌಶೀಲ್ಯದ ಮಾಹಾತ್ಮ್ಯೆಯನ್ನು ತಿಳಿಸುತ್ತಾರೆ. **ಇದು**-ಈ ಗುಣವು, ನಮ್ಮಾಳ್ವಾರ್ರವರ "ಅಮ್ಮಾ ನಾಳಿಪ್ಪಿರಾರ್" ಎಂಬ ಪಾಶುರದಲ್ಲಿ ಉಪಪಾದಿತವೆಂದು ಅದನ್ನು ಉದಾಹರಿಸುತ್ತಾರೆ. **ಪೂರಾ ಪಾಶುರವು ಯಾವುದೆಂದರೆ—**

"ಅಮ್ಮಾ ನಾಳಿಪ್ಪಿರಾರ್ ಅವನೆವ್ವಿಡತ್ತಾನ್‌ಯಾನಾ |
ರೆಮ್ಮಾ ಪಾಪಿಯರ್ಕ್ಕುಮ್ ವಿಧಿವಾಯ್‌ಕ್ಕಿನ್ರುವಾಯ್‌ಕ್ಕುಜ್ಗಣ್ಡೀರ್ |
ಕೈಮ್ಮಾತುಣ್ಬೊಳಿನ್ದಾಯೆನ್ರು ಕೈತಲೆಪೂಶಲಿಟ್ಟೇ |
ಮೆಯ್‌ಮ್ಮಾಲಾಯೊಳಿನ್ದೇನೆಮ್ಬಿರಾನು ಮೇನ್ಮೇಲಾನೇ ||"

ಇದರ ಅರ್ಥವು—(೧) **ಅಮ್ಮಾ**-ಸರ್ವಾಧಿಕನಾಗಿ ಸರ್ವೇಶ್ವರನಾಗಿ ಎಲ್ಲರಿಗೂ

(೧) ತಿರು. ೫-೧-೬.

ಸ್ವಾಮಿಯಾಗಿರುವ, **ಆಳಿಪ್ಪಿರಾ**-ಶಂಖಚಕ್ರಾದಿಗಳನ್ನು ಧರಿಸಿ, ಚೇತನರಿಗೆ ಮಹೋಪಕಾರಕನಾಗಿರುವ, **ಯೆಪ್ಪಿಡತ್ತಾ್**-ನಿತ್ಯವಿಭೂತಿ, ಲೀಲಾವಿಭೂತಿ, ಕಲ್ಯಾಣಗುಣಗಣ ಮೊದಲಾದ ಪಾರಮ್ಯೈಶ್ವರದಿಂದ ಕೂಡಿದವನು ಎಲ್ಲಿ? **ಯ್ಯಾ ಆರ್**-**"ಧಿಗಶುಚಿಮವಿನೀತಂ"** ಎಂಬಲ್ಲಿ ಹೇಳಲ್ಪಟ್ಟ ಮಹಾಪಾಪಿಷ್ಠನಾಗಿ ನಿಕೃಷ್ಟಜನ್ಮವನ್ನೆತ್ತಿರುವ ನಾನು ಎಲ್ಲಿ? ಹೀಗೆ ಅಜಗಜ ನ್ಯಾಯವಿದ್ದರೂ ಕೂಡ **ಎಮ್ಮಾಪಾವಿಯರ್ಕ್ಕುಮ್**-ಹೀಗೆ ಎಂತಹ ಮಹತ್ತಾದ ಪಾಪಿಯಾಗಿರುವವರಿಗೂ **ವಿದಿವಾಯ್‌ಕ್ಕಿನ್‌ರುವಾಯ್‌ಕ್ಕುಜ್ಞಣ್ಣೀರ್**-ಪರಮಾತ್ಮನ ಕೃಪಾಪ್ರಭಾವದಿಂದ ಪರಿಪಾಕದೆಶೆಯುಂಟಾಗಿ ಫಲೋನ್ಮುಖವಾಗುವಾಗ, ಫಲಿಸಿಯೇ ಫಲಿಸುತ್ತದೆ, ಸಂದೇಹವಿಲ್ಲವು; ಅದು ಹೇಗೆ ಎಂದರೆ ಸಮರ್ಥನೆಮಾಡಿ ಹೇಳುತ್ತಾರೆ. ನಿನ್ನ ಸೌಶೀಲ್ಯಗುಣವನ್ನು ಕಂಡಿರುವೆನೆಂದು ಹೇಳಿಕೊಳ್ಳುತ್ತಾರೆ. **ಕೈವಾತುನ್ಪ ಒಳಿತ್ತಾಯ್** - ಜನ್ಮವೃತ್ತಜ್ಞಾನಗಳ ಉತ್ಕೃಷ್ಟತೆಯೊಂದೂ ಇಲ್ಲದೆ ನಿಕೃಷ್ಟವಾಗಿರುವ ಒಂದು ತಿರ್ಯಕ್ಕಾದ ಆನೆಯ ಕೂಗನ್ನು ಕೇಳಿ, ಅದರ ದುಃಖವನ್ನು ಹೋಗಲಾಡಿಸುವದಕ್ಕಾಗಿ ಅದರ ಹತ್ತಿರಕ್ಕೆ ಲಕ್ಷ್ಮೀಸಮೇತನಾಗಿ ಹೋಗಿ ರಕ್ಷಿಸಿ ನಿನ್ನ ವಾತ್ಸಲ್ಯಾತಿಶಯವನ್ನು ತೋರಿದವನಲ್ಲವೇ? **ಎನ್‌ರು**-ಎಂದು, **ಕೈತಲೆ ಪೂಶಲಿಟ್ಟೇ**-**"ಶಿರಸ್ಯಂಜಲಿಮಾಧಾಯ"** ಎಂದು ಹೇಳಿರುವ ಹಾಗೆ, ಅಂಜಲಿಬದ್ಧನಾಗಿ, **ಮೆಯಮ್ಮಾಲ್ ಆಯೊಳಿನ್ದೇ**-ಯಥಾರ್ಥವಾದ ಪ್ರೇಮವನ್ನು ಹೊಂದಿದವನಾದೆನು; **ಎಮ್ ಪಿರಾ**-ಹೀಗೆ ನನ್ನ ನಿಕೃಷ್ಟತೆಯನ್ನು ನೋಡದೆ, ವಾತ್ಸಲ್ಯಾತಿಶಯದಿಂದ ನನಗೆ ಮಹೋಪಕಾರಕನಾದ ಭಗವಂತನು, **ಎ ಮಾಲಾ**-ನನ್ನಲ್ಲಿ ನಿರತಿಶಯ ಪ್ರೀತಿಯುಕ್ತನಾದನು. ಆದುದರಿಂದ ಚೇತನನು ಎಷ್ಟು ಪಾಪಿಯಾಗಿದ್ದರೂ, ಆತನನ್ನು ಆಶ್ರಯಿಸಿಬಿಟ್ಟರೆ ಆತನ ಸೌಶೀಲ್ಯಾತಿಶಯವು, ಈತನು ಎಷ್ಟು ನಿಕೃಷ್ಟನಾಗಿದ್ದರೂ ಆ ಪರಿಪಾಕದೆಶೆಯುಂಟಾಗುವಾಗ ಆತನು ತನ್ನನ್ನು ಪ್ರೀತಿಸುವಹಾಗೆ ಮಾಡಿಕೊಂಡು, ಮಹೋಪಕಾರಿಯಾಗಿ ಆತನನ್ನು ವಿಶೇಷ ಪ್ರೀತಿಯಿಂದ ನೋಡಿ ರಕ್ಷಿಸುವನೆಂಬುದು ಪಾಶುರಾರ್ಥವು. ಇದಕ್ಕೆ ನಿದರ್ಶನವೇನು? ಎಂದರೆ ಗಜೇಂದ್ರನಲ್ಲಿ ನೀನು ತೋರಿದ ಕಾರುಣ್ಯ ವಾತ್ಸಲ್ಯ ಸೌಶೀಲ್ಯಾದಿಗಳಿಂದ ವ್ಯಕ್ತವೆಂಬ ಭಾವವು." **ಎನ್‌ರುಗಲಾದೆ**-ಮೇಲೆ ಉಪಪಾದಿಸಿದ ಪ್ರಕಾರ ನನ್ನನ್ನು ಬಿಡದೇನೇ, **ಸಾರಥ್ಯದೂತ್ಯಾದಿಪರ್ಯನ್ತಮಾಗ**-ಅರ್ಜುನನಿಗೆ ಯುದ್ಧದಲ್ಲಿ ಸಾರಥ್ಯವನ್ನು ಮಾಡೋಣವೇನು, ಪಾಂಡವರಿಗೆ ದೂತನಾಗಿ ದುರ್ಯೋಧನನಲ್ಲಿಗೆ ಹೋಗಿ ಅವರ ರಾಜ್ಯವನ್ನು ಕೊಟ್ಟುಬಿಡೆಂದು ಪ್ರಾರ್ಥಿಸುವದೇನು, ಆದಿ ಶಬ್ದದಿಂದ ಬಾಲನಾಗಿ ಯಶೋದೆಯಿಂದ ಹಗ್ಗದಿಂದ ಕಟ್ಟಲ್ಪಡುವದು, ಪಾಂಡವರ ರಾಜಸೂಯಯಾಗದಲ್ಲಿ ಬ್ರಾಹ್ಮಣೋಚ್ಛಿಷ್ಟವನ್ನು ತೆಗೆದು ಶುದ್ಧಿಮಾಡುವದು, ಕುಚೇಲರ ಪಾದವನ್ನು ತೊಳೆದು ತಾನೂ ತನ್ನ ಪತ್ನಿಯೂ ಸಹ ತಲೆಗೆ ಪ್ರೋಕ್ಷಿಸಿಕೊಳ್ಳುವದು, ಸಾಂದೀಪಿನಿಯುವ

**ಎನ್ರುಗಲುಟೆ, ಸಾರಥ್ಯದೂತ್ಯಾದಿ ಪರ್ಯನ್ತಮಾಗ ಅಪೇಕ್ಷಿಕ್ಕುಮ್ಪಡಿ ವಿಶ್ವಸ ನೀಯತ್ತೈಕ್ಕುರುಪ್ಪಾಮ್.**

**ಸೌಲಭ್ಯಮಾವದು ? ಸನಕ ಸನಂದನಾದಿ ಮಹಾಯೋಗಿಗಳುಕ್ಕುಂ ಕೂಡ ಕಿಟ್ಟನಿಲಮಲ್ಲಾದ ತನ್ನೈ "ಸಕಲಮನುಜನಯನ ವಿಷಯತಾಂ**

ರಿಗೆ ಕಾಡಿನಿಂದ ಕಟ್ಟಿಗೆಯನ್ನು ಹೊತ್ತು ತಂದುಕೊಡುವದು, ಸುಗ್ರೀವನನ್ನು ಸೀತಾನ್ವೇಷಣ ವಿಷಯದಲ್ಲಿ ಸಹಾಯಮಾಡು ಎಂದು ಪ್ರಾರ್ಥಿಸೋಣವೂ, ಸಾಗರನನ್ನು ವಾನರಸೇನೆಯ ಸಮುದ್ರತರಣದಲ್ಲಿ ಸಹಾಯಮಾಡೆಂದು ಶರಣಾಗತನಾಗುವದೂ, ಇತ್ಯಾದಿಗಳೆಲ್ಲಾ ಸೂಚಿಸಲ್ಪಟ್ಟವು ; ಇವುಗಳ **ಪರ್ಯಂತಮಾಗ**-ಪರ್ಯಂತವಾಗಿ, **ಅಪೇಕ್ಷಿಕ್ಕುಮ್ಪಡಿ**-ತನಗೆ ತುಂಬಾ ಇಷ್ಟವಾದಹಾಗೆ, **ವಿಶ್ವಸ ನೀಯತ್ತೈಕ್ಕು**-ವಿಶ್ವಾಸವನ್ನು ಮಾಡುವಂತವನಾಗಿರುವದಕ್ಕೆ. **ಉರುಪ್ಪಾಮ್**-ಹೇತುವಾಗುತ್ತದೆ.

೪. **ಸೌಲಭ್ಯಮಾವದು ?**—ಸೌಲಭ್ಯವೆಂದರೇನು ? **ಸನಕಸನಂದನಾದಿ ಮಹಾಯೋಗಿಗಳುಕ್ಕುಮ್ ಕೂಡ**-ಬ್ರಹ್ಮಮಾನಸಪುತ್ರರಾದ ಸನಕ ಸನಂದನರೇ ಮೊದಲಾದ ಪರಮಾತ್ಮೋಪಾಸಕರಿಗೂ ಕೂಡ, **ಕಿಟ್ಟನಿಲಮಿಲ್ಲಾದ**-**"ಧ್ಯಾತುಮತ್ಯಂತದೂರಂ"** ಎಂದು ಆಳವಂದಾರ್ರವರು ಪ್ರಯೋಗಿಸಿರುವ ಹಾಗೆ, ಧ್ಯಾನಿಸಲು ಅನುಕೂಲವಿಲ್ಲದ, **ತನ್ನೈ**-ತನ್ನನ್ನು **"ಸಕಲಮನುಜ ನಯನ ವಿಷಯತಾಂ ಗತಃ"**-ಸಮಸ್ತಮನುಷ್ಯರ ಕಣ್ಣಿಗೂ ವಿಷಯನಾದನು, **ಎನ್ನುಮ್ಪಡಿ ಪಣ್ಣುಗೈ**-ಎನ್ನುವಹಾಗೆ ಅವತಾರಕಾಲಗಳಲ್ಲಿ ಮಾಡಿಕೊಳ್ಳೋಣವು. **"ಸಕಲಮನುಜನಯನ"** ವೆಂಬುದು ಶ್ರೀ ಭಾಷ್ಯಕಾರರು ಶ್ರೀಮದ್ಭಗವದ್ಗೀತೆಯ ಅವತಾರಿಕೆಯಲ್ಲಿ ಮಾಡಿರುವ ಪ್ರಯೋಗವು. ತುಂಬಾ ದೊಡ್ಡ ಅಂತಸ್ತಿನಲ್ಲಿರುವ ಕೋಟೀಶ್ವರರಲ್ಲೂ ರಾಜರುಗಳಲ್ಲೂ ಎಲ್ಲರೂ ಹತ್ತಿರ ಹೋಗಿ ತಮ್ಮ ಪ್ರಾರ್ಥನೆಯನ್ನು ಹೇಳಿಕೊಳ್ಳಲು ಅವಕಾಶವಿರುವದಿಲ್ಲವು. ವಿಭವಾವತಾರ ಕಾಲಗಳಲ್ಲಿ ಸರ್ವೇಶ್ವರನು ಅತಿ ಸುಲಭನು. ಎಲ್ಲರೂ ಹತ್ತಿರ ಹೋಗಿ, ಆತನನ್ನಾಶ್ರಯಿಸಿ ತಮ್ಮ ಸ್ವಾಭೀಷ್ಟಗಳನ್ನು ಹೊಂದಬಹುದು. ಅರ್ಚಾವತಾರದಲ್ಲೂ ಆತನ ಸೌಲಭ್ಯವು ವ್ಯಕ್ತವು. ಮೇಲೆ ವಿಭವಾವತಾರದಲ್ಲಿ ಸೌಲಭ್ಯವನ್ನು ಉಪಪಾದಿಸಿ ಹೇಳಿದುದು ಅರ್ಚಾವತಾರದಲ್ಲಿನ ಸೌಲಭ್ಯಕ್ಕೂ ಉಪಲಕ್ಷಣವಾಗಿ ಭಾವಿಸತಕ್ಕದ್ದು. ಇದಕ್ಕೆ (ತತ್ವತ್ರಯಾಧಿಕಾರದ ೫೮೧-೪) ಅರ್ಚಾವತಾರ ಮೂರ್ತಿಗೂ ಮೋಕ್ಷಪ್ರದತ್ವಶಕ್ತಿಯುಂಟೆಂಬುದು ಪ್ರತಿಪಾದಿತವು. ಆ **"ಸಕಲ ಮನುಜ ವಿಷಯತಾಂ ಗತ"** ನಾದರೂ ಆ ಸೌಲಭ್ಯವು ಯಾವಾಗ ಫಲಕಾರಿ ಎಂಬುದು ಗೀತೆಯಲ್ಲಿ **"ಅನನ್ಯಚೇತಾಸ್ಸತತಂ ಯೋಮಾಂ ಸ್ಮರತಿ ನಿತ್ಯಶಃ । ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ"** ಎಂಬ ಶ್ಲೋಕ

**ಗತಃ " ಎನ್ನುಮ್ಪಡಿಪಣ್ಣುಗೈ- ಇದು ಕಿಟ್ಟವರಿಯನೆಜ್ಗಿರ ನಿಸ್ಪೃಹತ್ತೈ ವಾರಾಮ್ಮೈಕ್ಕುರುಪ್ಪಾಮ್.**

**ಸರ್ವಜ್ಞತ್ವಮಾವದು ? (೧) "ಅಜ್ಞಾತಂ ನಾಸ್ತಿತೇ ಕಿಂಚಿತ್ "**

ದಲ್ಲಿ ಉಪಪಾದಿತವು. ದಾಸನು ಬರೆದಿರುವ ಭಗವದ್ಗೀತೆಯ ೯೫೦-೩ ನೆಯ ಪುಟಗಳನ್ನು ನೋಡಿ. ಹೀಗೆ ಸಮಸ್ತ ಮನುಷ್ಯರ ಕಣ್ಣಿಗೂ ವಿಷಯನಾಗಿರುವದು ಏತಕ್ಕೆಂದರೆ? ಎಲ್ಲರೂ ತನ್ನನ್ನು ಆಶ್ರಯಿಸಲಿ ಎಂಬ ಉದಾರಭಾವದಿಂದ ಎಂದು ತಿಳಿಸುವದಕ್ಕಾಗಿ ಈ ವಾಕ್ಯದ ಹಿಂದೆ ಉದ್ದೇಶ್ಯವನ್ನು ತಿಳಿಸುವದಕ್ಕಾಗಿ **" ಸಮಾಶ್ರಯಣೀಯತ್ವಾಯಾವತೀರ್ಣೋರ್ವ್ಯಾಂ "** ಎಂದಿರುತ್ತದೆ. ಎಲ್ಲರೂ ಸುಕೃತಪರಿಪಾಕದಿಂದ ತನ್ನನ್ನಾಶ್ರಯಿಸಿ ನಿರತಿಶಯ ಸುಖವನ್ನು ಹೊಂದಲಿ ಎಂಬ ಪರಮಕೃಪೆಯಿಂದ ಎಲ್ಲರಿಗೂ ದೃಗ್ಗೋಚರನಾಗಿ ತನ್ನ ಕಣ್ಣಿನ ಸೊಬಗು ದಿವ್ಯಮಂಗಳವಿಗ್ರಹದ ಲಾವಣ್ಯ, ಸರಸಸಲ್ಲಾಪಾದಿಗಳಿಂದ ಅವರ ಮನಸ್ಸನ್ನು ಆಕರ್ಷಿಸುವನಾದುದರಿಂದ ಅತಿ ಸುಲಭನು. ಇದನ್ನೇ ಶ್ರೀ ದೇಶಿಕವರ್ಯರು ಮುಂದಿನ ವಾಕ್ಯದಿಂದ ವ್ಯಕ್ತಪಡಿಸುತ್ತಾರೆ. ಈ ಸೌಲಭ್ಯವೆನ್ನುವ ಕಲ್ಯಾಣ ಗುಣದಿಂದುಂಟಾಗುವ ಪ್ರಯೋಜನವೇನೆಂದರೆ ತಿಳಿಸುತ್ತಾರೆ.—**ಇದು**-ಪರಮ ಪುರುಷನ ಈ ಸೌಲಭ್ಯಗುಣವು, **ಕಿಟ್ಟವರಿಯ**-ಸಮೀಪಕ್ಕೆ ಹೋಗಲು ಅಶಕ್ತನು ತಾನು, **ಎಜ್ಗಿರ**-ಎಂಬುವ, **ನಿಸ್ಪೃಹತ್ತೈ**-ಆಶೆಯಿಲ್ಲದಿರುವ ಬುದ್ಧಿಯು, **ವಾರಾಮ್ಮೈಕ್ಕು**-ಬಾರದಿರುವದಕ್ಕೆ, **ಉರುಪ್ಪಾಮ್**-ಹೇತುವಾಗುತ್ತದೆ. ಹೀಗೆ ಎಲ್ಲರಿಗೂ ವಿಭವಾವತಾರ ಕಾಲದಲ್ಲೂ ಅರ್ಚಾವತಾರದಲ್ಲೂ ದೃಗ್ಗೋಚರನಾಗಿರುವ ಗುಣದ ಪ್ರಯೋಜನವೇನೆಂದರೆ? ಅಲ್ಪನಾದ ತಾನು ಅಂತಹ ಉನ್ನತಸ್ಥಿತಿಯಲ್ಲಿರುವವನನ್ನು ಆಶ್ರಯಿಸಲು ಸಾಧ್ಯವೇ? ಎಂದು ನಿರಾಶೆಯಿಂದ ಬಿಟ್ಟು ಬಿಡದಹಾಗೆ, ಆತನ ದಿವ್ಯಮಂಗಳವಿಗ್ರಹದ ಸೊಬಗು, ಆತನ ಕಲ್ಯಾಣಗುಣಗಳೂ ಎಲ್ಲವೂ ಆತನನ್ನು ಆಶ್ರಯಿಸುವಹಾಗೆ ಮಾಡುತ್ತದೆ. ಇದರಿಂದ ಆತನನ್ನೇ ಯಾವಾಗಲೂ ನೋಡಬೇಕೆಂದೂ, ಆತನೊಂದಿಗೆ ಸಲ್ಲಾಪವು ದೊರೆಯಬೇಕೆಂದೂ, ಆತನ ದಿವ್ಯಚೇಷ್ಟಿತಗಳನ್ನೇ ಕೇಳಬೇಕೆಂದೂ, ಹೀಗೆ ಆತನನ್ನೇ ಧ್ಯಾನಿಸಬೇಕೆಂದೂ ಆಶೆಯು ಹುಟ್ಟುತ್ತದೆಂಬ ಭಾವವು.

**೫. ಸರ್ವಜ್ಞತ್ವಮಾವದು ?** - ಸರ್ವಜ್ಞತೆ ಎಂಬುದು ಯಾವುದು? **(೧) "ಅಜ್ಞಾತಂ ನಾಸ್ತಿತೇ ಕಿಂಚಿತ್ತ್ರಿಷು ಲೋಕೇಷು ರಾಘವ । ಆತ್ಮಾನಂ ಸೂಚಯ ಜಾನ ಪೃಚ್ಛಸ್ಯಸ್ಮಾಂತ್ಸುಹೃತ್ತಯಾ "** ಎಂಬುದು ಪೂರಾ ಶ್ಲೋಕವು. ವಿಭೀಷಣನು ಶರಣಾಗತನಾಗಿ ಬಂದಾಗ ತಮ್ಮೊಂದಿಗೆ ಸೇರಿಸಿಕೊಳ್ಳಬಹುದೇ? ಎಂದು ವಾನರಮುಖ್ಯರನ್ನು ಶ್ರೀರಾಮಚಂದ್ರನು ಪ್ರಶ್ನಿಸಿದಾಗ

---

**(೧) ರಾಮಾ. ಯುದ್ಧ. 17-33.**

**(೨) "ಯೋವೇತ್ತಿಯುಗಪತ್ಸರ್ವಂ ಪ್ರತ್ಯಕ್ಷೇಣ ಸದಾಸ್ವತಃ" ಎಬ್ಬಿರಪಡಿ**

ಶ್ರೀರಾಮನಿಗೆ ಹಿತವನ್ನು ಕೋರುವವರಾಗಿ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿ ಕೊನೆಗೆ ಅವರೆಲ್ಲರೂ ಹೇಳುವ ವಾಕ್ಯವು. **ಓ ರಾಘವನೇ, ತ್ರಿಷು ಲೋಕೇಷು**-ಕೃತಕ, ಅಕೃತಕ, ಕೃತಕಾಕೃತಕವೆಂದು ವಿಭಾಗಿಸಲ್ಪಟ್ಟಿರುವ ಮೂರು ಲೋಕದಲ್ಲೂ ಎಂದರೆ ಸರ್ವಲೋಕದಲ್ಲೂ, **ಅಜ್ಞಾತಂ ನಾಸ್ತಿತೇ ಕಿಂಚಿತ್**-ನಿನಗೆ ತಿಳಿಯದೇ ಇರುವದು ಯಾವದೊಂದೂ ಇಲ್ಲವು, **ಆತ್ಮಾನಂ ಸುಹೃತ್ತಯಾ ಸೂಚಯರ್ಸಿ**-ತಾನು ವಾನರರಿಗೆ ಪರಮ ಸುಹೃತ್ತೆಂಬ ಕೀರ್ತಿ ಯುಂಟಾಗಲೆಂದು, **ಜಾನನ್ನಪಿ**-ಹೀಗೆ ತಿಳಿದಿದ್ದರೂ ಕೂಡ, **ಅಸ್ಮಾನ್**-ನಮ್ಮನ್ನು **ಪೃಚ್ಛಸಿ**-ಮನ್ತ್ರಾಲೋಚನೆಯನ್ನು ಮಾಡುತ್ತಾ ಕೇಳುತ್ತೀಯೇ; ಇದು ಆಶ್ಚರ್ಯ ವೆಂಬ ಭಾವವು. **"ಆತ್ಮಾನಂ ಸೂಚಯರ್ಸಿ"** ಎಂಬುದಕ್ಕೆ ಬದಲಾಗಿ **"ಆತ್ಮಾನಂ ಪೂಜಯರ್ಸಿ"** ಎಂಬ ಪಾಠಾಂತರ ಉಂಟು; ಆಗ ನಮ್ಮನ್ನು ಒಬ್ಬೊಬ್ಬ ನಾಗಿ ಸನ್ಮಾನಿಸುವದಕ್ಕಾಗಿ, ನಿನಗೇ ಎಲ್ಲಾ ಗೊತ್ತಿದ್ದರೂ ನಮ್ಮನ್ನು ಕೇಳು ತ್ತೀಯೇ ಎಂಬರ್ಥವಾಗುತ್ತದೆ ಅಥವಾ **ಆತ್ಮಾನಂ ಜಾನನ್**-ಸ್ವಕೀಯವಾದ ರಾಜನೀತಿಯೆಲ್ಲಾ ಚನ್ನಾಗಿ ತಿಳಿದವನಾದರೂ ನಮ್ಮನ್ನು ಕೇಳುತ್ತೀಯೇ ಎಂ ಬರ್ಥವಾಗಲಿ ಆಗಬಹುದು. ಅಥವಾ **ಸುಹೃತ್ತಯಾ**-ಶತ್ರುವಿನ ಸಂಗಡದ ವಿಷಯದಲ್ಲೂ ಕೂಡ ಶೋಭನವಾದ ಹೃದಯವುಳ್ಳವನಾದುದರಿಂದ, **ಆತ್ಮಾನಂ**-ತನ್ನನ್ನು, **ಪೂಜಯರ್ಸಿ**-ನಮ್ಮೆಲ್ಲರಿಗಿಂತ ನೀನೇ ಅಂತಹ ಹೃದಯವುಳ್ಳವ ನೆಂದು ತನ್ನ ಪ್ರಭಾವವನ್ನು ವ್ಯಕ್ತಪಡಿಸುವದಕ್ಕಾಗಿ, ನಮ್ಮ ಅಭಿಪ್ರಾಯಗಳ ನ್ನೆಲ್ಲಾ ಪೂರ್ವಪಕ್ಷವಾಗಿ ಭಾವಿಸಿ ತನ್ನ ಸಿದ್ಧಾನ್ತವಾದ ಶರಣಾಗತರಕ್ಷಣವನ್ನು ಪ್ರಕಟೀಕರಿಸುವದಕ್ಕಾಗಿ ಎಂಬ ಭಾವವು, **ಅಸ್ಮಾನ್ ಪೃಚ್ಛಸಿ**-ನಮ್ಮನ್ನು ಎಂದರೆ ನಮ್ಮ ಅಭಿಪ್ರಾಯಗಳನ್ನು, **ಪೃಚ್ಛಸಿ**-ಕೇಳುತ್ತೀಯೆ. ಇದು ಶ್ರೀರಾಮನ ಸರ್ವಜ್ಞತ್ವವನ್ನು ಪ್ರಕಟಿಸುವ ಶ್ಲೋಕವು."

**(೨) "ಯೋವೇತ್ತಿಯುಗಪತ್ಸರ್ವಂ"** ಎಂಬುದು ಶ್ರೀನಾಥಮುನಿಗಳು ರಚಿಸಿದ ನ್ಯಾಯತತ್ವದ ಮಂಗಳಶ್ಲೋಕವು. ಇದು ತತ್ವತ್ರಯಾಧಿಕಾರದಲ್ಲಿ ಉದಾಹೃತವು. ಇದರ ಅರ್ಥಕ್ಕೆ 500 ನೆಯ ಪುಟವನ್ನು ನೋಡಿ. ಈ ಶ್ಲೋಕ ದಲ್ಲಿ ಸರ್ವಜ್ಞತ್ವವೆಂದರೇನು ಎಂಬುದು ಉಪಪಾದಿತವು; ಏಕಕಾಲದಲ್ಲೇ ಯಾವಾಗಲೂ ತಾನಾಗಿಯೇ ಇನ್ನೊಂದರ ಸಹಾಯವಿಲ್ಲದೆ ಸ್ವಾಭಾವಿಕವಾಗಿ ಎಲ್ಲವನ್ನೂ ಪ್ರತ್ಯಕ್ಷವಾಗಿ ತಿಳಿಯೋಣವು. ಪರಮಾತ್ಮನೂ ವಿಭುವು, ಆತನ ಧರ್ಮಭೂತಜ್ಞಾನವೂ ವಿಭುವೂ ಆದುದರಿಂದ ಸರ್ವಜ್ಞತ್ವ ಉಂಟು. ಮುಕ್ತ ದೆಶೆಯಲ್ಲಿ ಜೀವಾತ್ಮನು ವಿಭುವಲ್ಲದೆ ಅಣುವಾದರೂ ಆತನ ಧರ್ಮಭೂತಜ್ಞಾನವು ವಿಭುವಾದುದರಿಂದ ಸರ್ವಜ್ಞತ್ವ ಉಂಟು.

---

**(೨) ನಾಥಮುನಿ ನ್ಯಾಯತತ್ವ ಮಙ್ಗಳಶ್ಲೋಕವು.**

**ಯೇ ಸರ್ವತ್ತೈಯುಮ್ ಸಾಕ್ಷಾತ್ಕರಿಕ್ಕೈ. ಇದು ಆಶ್ರಿತರ್ಕ್ಕು ಕೊಡುಕ್ಕ ವೇಣ್ಡುಮ್ ನನ್ಮೈಗಳಿಲುಮ್, ಕಳಿಕ್ಕವೇಣ್ಡುಮ್ ವಿರೋಧಿಗಳಿಲುಮ್ ಇವನರಿಯಾದದಿಲ್ಲೈಯೆನ್ರುಮ್ ಅನುಸಂಧಾನತ್ತುಕ್ಕುರುಪ್ಪಾಮ್.**

**ಸರ್ವಶಕ್ತಿತ್ವಮಾವದು ? ಅಘಟಿತಘಟನಾ ಸಾಮರ್ಥ್ಯಮ್. ಇದು**

ಎಜ್ಞಿ**ರಪಡಿಯೇ**-ಎಂದು ಹೇಳಿರುವಹಾಗೆ, **ಸರ್ವತ್ತೈಯುಮ್**-ಸಮಸ್ತ ಜಗತ್ತಿನಲ್ಲಿರುವದನ್ನೆಲ್ಲವನ್ನು **ಸಾಕ್ಷಾತ್ಕರಿಕ್ಕೈ**-ಸಾಕ್ಷಾತ್ಕರಿಸೋಣವು. ಈ ಸರ್ವ ಜ್ಞತೆಯು ಆಶ್ರಿತನಿಗೆ ಹೇಗೆ ಪ್ರಯೋಜನವು ಎಂದರೆ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.—**ಇದು**-ಈ ಸರ್ವಜ್ಞತೆಯು, **ಆಶ್ರಿತರ್ಕ್ಕು**-ತನ್ನನ್ನು ಆಶ್ರಯಿಸಿದ ಪ್ರಪನ್ನರಿಗೆ, **ಕೊಡುಕ್ಕವೇಣ್ಡುಮ್ ನನ್ಮೈಗಳಿಲುಮ್**-ಕೊಡಬೇಕಾದ ಒಳ್ಳೆ ಯದಾದ ಪುರುಷಾರ್ಥಗಳಲ್ಲೂ, **ಕಳಿಕ್ಕವೇಣ್ಡುಮ್ ವಿರೋಧಿಗಳಿಲುಮ್**-ಹೋಗಲಾಡಿಸಬೇಕಾದ ವಿರೋಧಿಗಳಾದ ಪಾಪಗಳಲ್ಲೂ, ಎಂದರೆ ಇಷ್ಟಪ್ರಾಪ್ತಿ ಅನಿಷ್ಟನಿವೃತ್ತಿಗಳಲ್ಲಿ, **ಇವನರಿಯಾದದಿಲ್ಲೈ**-ಈ ಸರ್ವೇಶ್ವರನಿಗೆ ತಿಳಿಯದೇ ಇರುವದು ಯಾವುದೂ ಇಲ್ಲವು, **ಎನ್ರುಮ್ ಅನುಸಂಧಾನತ್ತುಕ್ಕುರುಪ್ಪಾಮ್**-ಎಂಬ ಅನುಸಂಧಾನಕ್ಕೆ ಸಾಧನವಾಗುತ್ತದೆ. ಪರಮಾತ್ಮನಿಗೆ ಸರ್ವಜ್ಞತೆ ಇದ್ದ ರಲ್ಲವೇ, ನಮ್ಮ ಪಾಪವಿರೋಧಿವರ್ಗವು ಯಾವುದೆಂದು ತಿಳಿದು ಅದನ್ನು ಹೋಗ ಲಾಡಿಸುವನೆಂಬ, ಮತ್ತು ನಮ್ಮ ಪ್ರಾರ್ಥನೆ ಏನು ಎಂದು ತಿಳಿದು ಅದನ್ನು ಅನುಗ್ರಹಿಸಬಲ್ಲನೆಂಬ, ನಂಬಿಕೆಯು ಉಂಟಾಗುತ್ತದೆ ಎಂಬುದು ತಾತ್ಪರ್ಯವು. ಶ್ರುತಿಯೂ ಈ ಸರ್ವಜ್ಞತೆಯನ್ನು **"ಯಸ್ಸರ್ವಜ್ಞಸ್ಸರ್ವವಿತ್"** ಎಂದು ಬೋಧಿ ಸುತ್ತದೆ. (ಮುಂ ೧-೧-೯)

**೬. ಸರ್ವಶಕ್ತಿತ್ವಮಾವದು**-ಸರ್ವಶಕ್ತಿಯನ್ನು ಹೊಂದಿರೋಣವೆಂದ ರೇನು ? **ಅಘಟಿತಘಟನಾಸಾಮರ್ಥ್ಯಮ್**-ಇತರರಿಂದ ಮಾಡಲ್ಪಡಲು ಅಸಾ ಧ್ಯವಾದುದನ್ನು ತಾನು ಸಾಧಿಸಿಕೊಡುವ ಸಾಮರ್ಥ್ಯವು. ಗಜೇಂದ್ರನೂ ದ್ರೌಪ ದಿಯೂ ಸಹ ದೀನದಶೆಯನ್ನು ಹೊಂದಿ ರಕ್ಷಣೆಯನ್ನು ಇನ್ನು ಯಾರೂ ಮಾಡಲು ಸಾಧ್ಯವಿಲ್ಲದಿರುವಾಗ ತಾನು ರಕ್ಷಿಸೋಣವು. ಹಾಗೆಯೇ ಉತ್ತರೆಯ ಗರ್ಭ ವನ್ನು ಕಾಪಾಡೋಣವು. ಇವೆಲ್ಲಾ ಸರ್ವಶಕ್ತಿತ್ವಕ್ಕೆ ನಿದರ್ಶನಗಳು. ಇದರ ಪ್ರಯೋಜನವೇನೆಂಬುದನ್ನು ಉತ್ತರವಾಕ್ಯದಿಂದ ಬೋಧಿಸುತ್ತಾರೆ. **ಇದು**-ಈ ಸರ್ವಶಕ್ತಿತ್ವವು, **ಸಂಸಾರಿಗಳಾನ**-ಬದ್ಧರಾದ, **ನಮ್ಮೈ**-ಪ್ರಪನ್ನರಾದ ನಮ್ಮನ್ನು, **ನಿನೈತ್ತಪೋದು**-ಆರ್ತನಾಗಿ ಈ ಭೂಲೋಕದಲ್ಲಿರುವದು ಪರಮ ದುಸ್ಸಹವೆಂದು ಭಾವಿಸಿ ಪ್ರಾರ್ಥಿಸಿದ ಒಡನೆಯೇ, **ನಿತ್ಯಸೂರಿಪರಿಷತ್ತಿಲೇ**-ನಿತ್ಯಸೂರಿಗಳ ಸದಸ್ಸಿನಲ್ಲಿ ಎಂದರೆ ದಿವ್ಯ ವೈಕುಂಠದಲ್ಲಿ, **ನಿವೇಶಿಪ್ಪಿಕ್ಕವಲ್ಲನ್.**

**ಸಂಸಾರಿಗಳಾನ ನಮ್ಮೈ ನಿನ್ರೈತ್ತ್ಪೋದು ನಿತ್ಯಸೂರಿಪರಿಷತ್ತಿಲೇ ನಿವೇಶಿಪ್ಪಿಕ್ಕವಲ್ಲನೆನ್ಗಿರ ನಿಶ್ಚಯತ್ತುಕ್ಕುರುಪ್ಪಾಮ್.**

**ಸತ್ಯಸಙ್ಕಲ್ಪತ್ವಮಾವದು ? ತನ್ ಸಙ್ಕಲ್ಪತ್ತುಕ್ಕುತ್ತನ್ನಾಲುಮ್ (ಪರರಾಲುಮ್) ಪ್ರತಿಹತಿಯನ್ರಿಕ್ಕೈಯೊಳಿಗೈ. ಇದು "ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎಙ್ಗಿರ ಪಾಶುರಮ್ ಪೞುತಾಕಾದೆಙ್ಗಿರ ವಿಸ್ರಂಭತ್ತುಕ್ಕುರುಪ್ಪಾಮ್.**

ನೆಲಿಸುವಹಾಗೆ ಮಾಡುವ ಶಕ್ತಿಯುಳ್ಳವನು, ಎನ್ಗಿರನಿಶ್ಚಯತ್ತುಕ್ಕುರುಪ್ಪಾಂ- ಎನ್ನುವ ನಂಬಿಕೆಯನ್ನುಂಟುಮಾಡಲು ಸಾಧನವಾಗುತ್ತದೆ. ಅಘಟಿತಘಟನಾ ಶಕ್ತಿಯು ಪರಮಾತ್ಮನಿಗುಂಟೆಂಬ ಅನುಸಂಧಾನದ ಪ್ರಯೋಜನವೇನು ಎಂದರೆ ಆತನಲ್ಲಿ ಶರಣಾಗತಿಯನ್ನನುಷ್ಠಿಸಿದವನು ಎಷ್ಟು ಪಾಪಿಷ್ಠನಾದರೂ ಪ್ರತಿಬಂಧಕಗಳನ್ನೆಲ್ಲಾ ನಿರ್ಮೂಲಮಾಡಿ ಮೋಕ್ಷವನ್ನು ಹೊಂದಿಸುವ ಶಕ್ತಿಯುಳ್ಳವನೆಂಬ ಪೂರ್ಣ ನಂಬಿಕೆಯುಂಟಾಗಿ, **ನಿರ್ಭಯೋ ನಿರ್ಭರೋಸ್ಮಿ** ಎಂದು ಹೇಳಿರುವ ಹಾಗೆ ಸರ್ವಭರವನ್ನು ಅವನಲ್ಲಿಟ್ಟು ನಿಶ್ಚಿಂತನಾಗಿ ನಿರ್ಭಯನಾಗಿರಬಹುದೆಂಬ ನಂಬಿಕೆಯುಂಟಾಗುತ್ತದೆಂಬ ಭಾವವು. ಅಂತಹ ಸರ್ವಶಕ್ತಿತ್ವ ನಂಬಿಕೆ ಇದ್ದುದರಿಂದಲೇ ಅರ್ಜುನನೂ, ವಿಭೀಷಣನೂ, ಕುಚೇಲ, ಉದ್ಧವಾದಿಗಳೂ ವಿಭವಾವತಾರಿಯನ್ನು ಆಶ್ರಯಿಸಿದರು.

೭. **ಸತ್ಯಸಙ್ಕಲ್ಪತ್ವಮಾವದು ?**-ಸತ್ಯಸಙ್ಕಲ್ಪತ್ವವೆಂಬುದು ಯಾವುದು ? **ತನ್ಸಙ್ಕಲ್ಪತ್ತುಕ್ಕು**-ತಾನು ಸಙ್ಕಲ್ಪಿಸಿದುದಕ್ಕೆ, **ತನ್ನಾಲುಮ್**-ತನ್ನಿಂದಲೂ ಕೂಡ, **ಪ್ರತಿಹತಿಯನ್ರಿಕ್ಕೈಯೊಳಿಗೈ**-ತಡೆ ಪ್ರತಿಬಂಧಕವಿಲ್ಲದಿರುವಹಾಗೆ ಮಾಡೋಣವು, **ಇದು**-ಈ ಸತ್ಯಸಂಕಲ್ಪತ್ವವು, **"ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ**-ಸರ್ವಜ್ಞನಾಗಿ ಸತ್ಯಸಂಕಲ್ಪನಾಗಿ, ಕರುಣೆ ಮೊದಲಾಗಿ ಆಶ್ರಿತನಿಗೆ ಉಪಕಾರಕವಾದ ಸಮಸ್ತ ಕಲ್ಯಾಣಗುಣಗಳುಳ್ಳ ನಾನು, ಈ ದುಃಖ ಪರಿಪೂರ್ಣವಾದ ಸಂಸಾರದಲ್ಲಿ ದೀನಭಾವವನ್ನು ಹೊಂದಿದ ನಿನ್ನನ್ನು, ಸರ್ವ ಪ್ರತಿಬಂಧಕರೂಪಗಳಾದ ಪಾಪಗಳಿಂದಲೂ ಬಿಡಿಸುವೆನು" ಮುಂದೆ ನೀನು ಶೋಕಿಸಬೇಡವೆಂದಿರುತ್ತದೆ; **ಎಙ್ಗಿರಪಾಶುರಮ್**-ಎಂಬ ಅಮೋಘೋಕ್ತಿಯು **ಪೞುದಾಗಾದು**-ಅಸತ್ಯವೆಂದಿಗೂ ಆಗಲಾರದು, ಎಙ್ಗಿರ-ಎನ್ನುವ, **ವಿಸ್ರಂಭತ್ತುಕ್ಕುರುಪ್ಪಾಮ್**-**"ವೇದೋತ್ತಂಸ** ವಿಹಾರಸಾರಥಿಗಿರಾಂ **ಗುಂಭೇನ ವಿಸ್ರಂಭಿತಃ"** ಎಂದು ಸ್ವಾಮಿಯವರೇ ಸಾರನಿಷ್ಕರ್ಷಾಧಿಕಾರದಲ್ಲಿ ಹೇಳಿರುವ ಹಾಗೆ, ಮಹಾವಿಶ್ವಾಸವನ್ನುಂಟುಮಾಡಲು ಸಾಧನವಾಗುತ್ತದೆ. **ವಿಸ್ರಂಭ**ವೆಂದರೆ ಮಹಾ ವಿಶ್ವಾಸವು. **"ಸಮೌ ವಿಸ್ರಂಭ ವಿಶ್ವಾಸೌ"** ಎಂದು ಅಮರನಿಘಂಟು ಇರುತ್ತದೆ. **ಸ್ರಂಭು ವಿಶ್ವಾಸೇ** ಎಂಬುದು ಧಾತ್ವರ್ಥವು. ಸತ್ಯಸಂಕಲ್ಪತ್ವಕ್ಕೆ ಒಳ್ಳೇ

ನಿದರ್ಶನವು, ವಿಭೀಷಣನು ಶರಣಾಗತನಾದನೇ ಎಂಬ ಪರಮ ವಾತ್ಸಲ್ಯದಿಂದ ಲಂಕಾರಾಜ್ಯವನ್ನು ಆತನು ಅಪೇಕ್ಷಿಸದಿದ್ದರೂ, ತಮ್ಮ ಅನುಗ್ರಹವನ್ನು **ತೋರಿಸಬೇಕೆಂದು** ಸಙ್ಕಲ್ಪಿಸಿ, ಇನ್ನೂ ಸಮುದ್ರತರಣ, ಲಂಕಾಪ್ರವೇಶ, ರಾವಣ ವಧೆಗಳಿಗೆ ಮುಂಚೆಯೇ ಲಕ್ಷ್ಮಣನಮೂಲಕ ಲಂಕಾಪಟ್ಟವನ್ನು ಕಟ್ಟಿಸಿಬಿಟ್ಟರು; ಅನಂತರ ಇವನ್ನೆಲ್ಲಾ ಸಾಧಿಸಿ ರಾವಣವಧಾ ನಂತರ ಪುನಃ ಲಂಕಾ ರಾಜ್ಯದಲ್ಲಿ ವಿಭೀಷಣನನ್ನು ಪಟ್ಟಾಭಿಷಿಕ್ತನನ್ನಾಗಿ ಮಾಡಿದರು. ಇದನ್ನು ಶ್ರೀಕೂರೇಶರು ಅವರ ಅತಿಮಾನುಷ ಸ್ತೋತ್ರದಲ್ಲಿ ಬಹು ಸ್ವಾರಸ್ಯವಾಗಿ ಉಪಪಾದಿಸಿರುತ್ತಾರೆ – **"ಅಬ್ಧಿಂ ನತೇರಿಥ ನಜಿಹ್ಯಥ ರಾಕ್ಷಸೇಂದ್ರಂ । ನೈವಾಸ್ಯ ಜಿಜ್ಞಥಯದಾಚ ಬಲಾಬಲಂ ತ್ವಂ । ನಿಸ್ಸಂಶಯಸ್ಸಪದಿತಸ್ಯಪದೇ ಭ್ಯಷಿಂಚ । ಸ್ತಸ್ಯಾನುಜಂ ಕಥಮಿದಂಹಿ ವಿಭೀಷಣಂ ಚ ॥೨೪॥** ಇದರ ಅರ್ಥವೇನೆಂದರೆ— ಓ ಶ್ರೀರಾಮ ಚಂದ್ರಪ್ರಭುವೇ, ನೀನು ಇನ್ನೂ ಸಮುದ್ರವನ್ನು ದಾಟಲಿಲ್ಲವು, ರಾಕ್ಷಸೇಂದ್ರ ನಾದ ರಾವಣನನ್ನು ಕೊಲ್ಲಲಿಲ್ಲವು; ನಿನ್ನ ಮತ್ತು ರಾವಣನ ಬಲಾಬಲಗಳನ್ನು ವಿಚಾರಿಸಲಿಲ್ಲವು ಎಂದರೆ ಯಾರಿಗೆ ಜಯವುಂಟಾದೀತೆಂದು ವಿಚಾರಮಾಡ ಲಿಲ್ಲವು; ಹೀಗಿದ್ದರೂ ವಿಭೀಷಣನು, ಸಮುದ್ರದ ಈಚೆಯದಡದಲ್ಲಿರುವಾಗಲೇ ಯಾವಾಗ ಬಂದು ಶರಣಾಗತನಾದನೋ, ತಕ್ಷಣವೇ ಆ ರಾವಣನ ಸ್ಥಾನದಲ್ಲಿ ಆತನ ತಮ್ಮನಾದ ವಿಭೀಷಣನಿಗೆ ನಿಸ್ಸಂಶಯವಾಗಿ ಪಟ್ಟವನ್ನು ಕಟ್ಟಿಬಿಟ್ಟೆ; ಹೇಗೆ ಧೈರ್ಯದಿಂದ ನೆರವೇರಿಸಿದೆ ಹೇಳು ಎಂದು ಕೇಳುತ್ತಾರೆ. ಮಹರ್ಷಿಯು ಈ ಭಾವವನ್ನು ಬಹು ಸ್ವಾರಸ್ಯವಾಗಿ ಶ್ರೀಮದ್ರಾಮಾಯಣದ ಪ್ರಥಮಸರ್ಗದಲ್ಲಿ ವರ್ಣಿಸುತ್ತಾರೆ.—

**"ಅಭಿಷಿಚ್ಯಚಲಂಕಾಯಾಂ ರಾಕ್ಷಸೇಂದ್ರಂ ವಿಭೀಷಣಮ್ ।**
**ಕೃತಕೃತ್ಯಸ್ತದಾರಾಮೋ ವಿಜ್ವರಃಪ್ರಮುಮೋದಹ ॥"**

ಹೀಗೆ ತನ್ನ ಸಙ್ಕಲ್ಪತೆಯನ್ನು ಸಾಧಿಸಿಕೊಂಡು ಲೋಕವಿಡಂಬನ ರೀತಿ ಯಲ್ಲಿ ರಾವಣವಧಾ ನಂತರ ಕೃತಕೃತ್ಯನು ತಾನು ಎಂದು ಭಾವಿಸಿ, **ಪ್ರಮು ಮೋದಹ**-ರಾಮನು ಸುಮ್ಮನೆ ಸಂತೋಷಪಟ್ಟನೆಂದು ಹೇಳದೆ ವಿಶೇಷವಾಗಿ ಸಂತೋಷಪಟ್ಟರೆಂದು ಹೇಳಲ್ಪಟ್ಟಿರುತ್ತದೆ. **"ಅಹಂಹತ್ವಾ ದಶಗ್ರೀವಂ ಸಪ್ರ ಹಸ್ತಂ ಸಬಾಂಧವಂ । ರಾಜಾನಂ ತ್ವಾಂ ಕರಿಷ್ಯಾಮಿ ಲಂಕಾಯಾಂ ರಾಕ್ಷ ಸೇಶ್ವರ"** ಎಂಬ ತನ್ನ ಸಂಕಲ್ಪವು ನಡೆಯಬೇಕೇ ಎಂದು ಪರಿತಾಪದಿಂದ ಇದ್ದು ರಾವಣವಧಾ ನಂತರ ತನ್ನ ಸಂಕಲ್ಪವು ಸಿದ್ಧಿಸಿತೆಂದು ಆನಂದಭರಿತನಾದ ಹಾಗೂ ಉತ್ಪ್ರೇಕ್ಷೆಯು. ಆದರೆ **"ತನ್ ಸಙ್ಕಲ್ಪತ್ತುಕ್ಕು ತನ್ನಾಲುಮ್ ಪೆರರಾಲುಂ ಪ್ರತಿಹತಿಯನ್ರಿಕ್ಕೇ** ಎಂದು ಹೇಳಿದುದು ಹೇಗೆ? ಕೃಷ್ಣಾವತಾರದಲ್ಲಿ ಅರ್ಜುನ ಸಾರಥಿಯಾಗಿ ಶಸ್ತ್ರವನ್ನು ಹಿಡಿಯುವದಿಲ್ಲವೆಂದು ಹೇಳಿದವನು ಭೀಷ್ಮಾರ್ಜುನರಿಗೆ **ಯುದ್ಧವಾಗುತ್ತಿದ್ದಾಗ ಶಸ್ತ್ರವನ್ನು ಹಿಡಿದಿದ್ದು ಹೇಗೆ? ಎಂದಾಕ್ಷೇಪಿಸಿದರೆ, ತನ್ನ**

ಭಕ್ತನ ಸಂಕಲ್ಪದ ರಕ್ಷಣೆಯು ತನ್ನ ಸಂಕಲ್ಪದ ರಕ್ಷಣೆಗಿಂತ ಮೇಲಾದುದೆಂದು ಭಕ್ತನಲ್ಲಿ ವಾತ್ಸಲ್ಯವನ್ನೇ ಪ್ರಕಟಿಸುವ ಪ್ರಕರಣವಾದುದರಿಂದ ಸತ್ಯಸಂಕಲ್ಪತ್ವಕ್ಕೆ ಹಾನಿ ಇಲ್ಲವು. ಇದನ್ನೇ ಶ್ರೀ ಭೀಷ್ಮರೇ ತಮ್ಮ ಸ್ತುತಿಯಲ್ಲಿ ವ್ಯಕ್ತಪಡಿಸಿರುತ್ತಾರೆ.— **“ಸ್ವನಿಗಮಮಪಹಾಯ ಮತ್ಪ್ರತಿಜ್ಞಾ ಮೃತಮಧಿಕರ್ತುಮವಪ್ಲುತೋರಥಸ್ಥಃ । ಧೃತರಥಚರಣೋಽಭ್ಯಯಾಚ್ಚಲದ್ಗುರ್ಹರಿರಿವಹನ್ತುಮಿಭಂಗತೋತ್ತರೀಯಃ”** (ಭಾಗ ೧-೯-೩೭) ಯಾವಾಗ ಭೀಷ್ಮಬಾಣದಿಂದ ಕವಚವು ಶಿಥಿಲವಾದುದಾಗಿ ಮೈಯೆಲ್ಲಾ ರಕ್ತದಿಂದ ತೊಯಿಸಲ್ಪಟ್ಟದ್ದಾಯಿತೋ, ಆಗ ತಾನು ಆಯುಧವನ್ನು ಹಿಡಿಯುವದಿಲ್ಲವೆಂಬ ತನ್ನ ಪ್ರತಿಜ್ಞೆಯನ್ನೂ ತ್ಯಜಿಸಿ, ಶ್ರೀಕೃಷ್ಣನು ಆಯುಧವನ್ನು ಹಿಡಿಯುವಹಾಗೆ ಮಾಡುವೆನೆಂಬ ಭಕ್ತನಾದ ನನ್ನ ಪ್ರತಿಜ್ಞೆಯನ್ನು ಸತ್ಯವಾದುದನ್ನು ಮಾಡುವದಕ್ಕಾಗಿ ಚಕ್ರಾಯುಧವನ್ನು ಧರಿಸಿ, ಮೇಲಿನ ಉತ್ತರೀಯವಿಲ್ಲದವನಾಗಿ ಗಜವನ್ನು ಕೊಲ್ಲುವದಕ್ಕಾಗಿ ಬಂದ ಸಿಂಹದೋಪಾದಿಯಲ್ಲಿ ಭೂಮಿಯನ್ನೆಲ್ಲಾ ನಡಿಗಿಸುವವನಾಗಿ ರಥದಿಂದ ದುಮುಕಿದನೋ, ಅಂತಹ ಶ್ರೀಹರಿಯು **ಸಭವತು ಭಗವಾ೯ ಗತಿರ್ಮುಕುಂದಃ** ಎಂದು ಮುಂದಿನ ಶ್ಲೋಕದಲ್ಲಿರುತ್ತದೆ, ಅಂತಹ ಭಗವಂತನು, ತನ್ನ ಪ್ರಾಪ್ತಿಗೆ ಸಿದ್ಧೋಪಾಯನಾಗಿಯೂ, ಮುಕ್ತಿಯನ್ನು ಕೊಡುವವನಾಗಿಯೂ ಆಗಲಿ ಎಂಬುದು ಶ್ಲೋಕಾರ್ಥವು. ಇಲ್ಲಿ ಭಕ್ತನಲ್ಲಿರುವ ಪರಮವಾತ್ಸಲ್ಯವನ್ನು ಪ್ರಕಟಿಸುವ ಪ್ರಕರಣದಲ್ಲಿ, ಭಕ್ತನ ಸಂಕಲ್ಪವು ತನ್ನ ಸಂಕಲ್ಪಕ್ಕೆ ವಿರುದ್ಧವಾದರೆ ಆತನ ಸಂಕಲ್ಪಕ್ಕೆ ಗೌರವವನ್ನು ಕೊಡುವದು ನ್ಯಾಯವೆಂದು ತನ್ನ ಸತ್ಯಪ್ರತಿಜ್ಞೆಯನ್ನು ತ್ಯಜಿಸಿದನು. ಇದರಿಂದ ಆತನ ಸಂಕಲ್ಪಕ್ಕೆ ಉಪಹತಿಯುಂಟು ಎಂದಾಗಲಿಲ್ಲವು. ಇತರರಿಂದ ಆ ಉಪಹತಿಯುಂಟಾಗದೆ ತಾನೇ ಸ್ವತಃ ಪ್ರೀತಿಯಾಗಿ ಸಂಕಲ್ಪಿಸಿದುದರಿಂದ ವಿರೋಧವೇನೂ ಇಲ್ಲವು. ಶ್ರೀರಾಮನ ಯೌವರಾಜ್ಯಾಭಿಷೇಕ ಪ್ರಕರಣದಲ್ಲಿ ತನ್ನ ಸತ್ಯಸಂಕಲ್ಪಕ್ಕೆ ವಿಘಾತವಲ್ಲವೋ ? ಎಂದರೆ ಇಲ್ಲವು. ತಾನೇ ವನಕ್ಕೆ ಮುನಿಗಳ ರಕ್ಷಣಾರ್ಥವಾಗಿಯೂ ದುಷ್ಟರಾಕ್ಷಸರ ವಧೆಗಾಗಿಯೂ ಹೋಗಬೇಕೆಂದು ಸಂಕಲ್ಪಿಸಿ, ಮಂದರೆಯ ಮೂಲಕವಾಗಿ ವಿಘ್ನವು ಬರುವ ಹಾಗೆ ಮಾಡಿಕೊಂಡು **“ವನವಾಸವೇ ಮಹೋದಯ”** ವೆಂದು ಹೇಳಿ, ರಾಜ್ಯವನ್ನು ತ್ಯಜಿಸಿ, ವನಕ್ಕೆ ಪತ್ನಿಯೊಂದಿಗೆ ಹೊರಟವನಾದನು. ಆದುದರಿಂದ ಶ್ರೀರಾಮಚಂದ್ರಪ್ರಭುವಿಗೆ ಯೌವರಾಜ್ಯಾಭಿಷಿಕ್ತನಾಗಬೇಕೆಂಬ ಸಂಕಲ್ಪವೇ ಇಲ್ಲವು. ಶ್ರೀರಾಮನು ತುಂಬಾ ಮನೋಖಿನ್ನತೆಯಿಂದ ಹೋಗಲಿಲ್ಲವು; ಇದೆಲ್ಲಾ ತನಗೆ ಲೀಲೆಯೇ ಎಂದು ಪ್ರಕಟಿಸುವದಕ್ಕಾಗಿ ವನಕ್ಕೆ ತೆರಳುವ ಸಮಯದಲ್ಲಿ ಹಾಸ್ಯರಸದಿಂದ ಕೂಡಿದ ತ್ರಿಜಟನೆಂಬ ಬ್ರಾಹ್ಮಣನ ವೃತ್ತಾಂತವು ಸ್ವಾಮಿಗೆ ಎಲ್ಲವೂ ಲೀಲೆ ಎಂಬುದನ್ನು ಸಮರ್ಥಿಸುತ್ತದೆ. ಸಹಸ್ರ ಗೋವುಗಳನ್ನು ನಿಲ್ಲಿಸಿ, ಎಷ್ಟುದೂರ ಈ ದಂಡವನ್ನು ಎಸೆಯಲು ಶಕ್ತಿಯುಂಟೋ

೮. **ಪರಮಕಾರುಣಿಕತ್ವಮಾವದು ? ಸ್ವಾರ್ಥನಿರಪೇಕ್ಷೈಯಾನ ಪರ ದುಃಖನಿರಾಕರಣೇಚ್ಛೈ, ಇದು ಅನಂತಾಪರಾಧಙ್ಗಳುಡೈಯವರ್ಗಳುಕ್ಕುಮ್(೧)'ಮಿತ್ರಭಾವೇನಸಂಪ್ರಾಪ್ತಂ'(೨) 'ಯದಿವಾ ರಾವಣಸ್ಸ್ವಯಂ'**

ಅಷ್ಟು ದೂರವಿರುವ ಗೋವುಗಳು ನಿನ್ನದು ಎಂದು ಶ್ರೀರಾಮನು ಪರಿಹಾಸದಿಂದ ತ್ರಿಜಟನಿಗೆ ಹೇಳಲು; ಆತನು **"ಸಶಾಟೀಂ ತ್ವರಿತಃ ಕಟ್ಯಾಂ ಸಂಭ್ರಾಂತಃ ಪರಿವೇಷ್ಟ್ಯತಾಮ್ । ಆವಿಧ್ಯದಂಡಂ ಚಿಕ್ಷೇಪ ಸರ್ವಪ್ರಾಣೇನವೇಗತಃ"** ಬಹುಜಾಗ್ರತೆಯಾಗಿ ಸೊಂಟಕ್ಕೆ ತನ್ನ ಹರಕು ಧೋತ್ರವನ್ನು ಸುತ್ತಿದವನಾಗಿ, ಬಹುದೂರ ದಂಡವು ಬಿದ್ದು ತುಂಬಾ ಗೋವುಗಳು ತನಗೆ ಲಭಿಸುವದಕ್ಕಾಗಿ, ಒಂದುಸಲ ಸುತ್ತಿ ದಂಡವನ್ನು ವೇಗದಿಂದ ತಿರುಗಿಸಿ ತನ್ನಲ್ಲಿದ್ದ ಶಕ್ತಿಯಿಂದೆಲ್ಲಾ ಎಸೆದನು. ಇದನ್ನು ನೋಡಿ ಲೀಲಾಪ್ರಭುವು ಆನಂದಿಸಿ, ಆ ಬ್ರಾಹ್ಮಣೋತ್ತಮನನ್ನಾಲಂಗಿಸಿ, ಆ ಗೋವುಗಳನ್ನೆಲ್ಲಾ ಕಳುಹಿಸಿಕೊಟ್ಟರೆಂಬ ಇತಿಹಾಸವಿರುತ್ತದೆ.

ಹಾಗೆಯೇ ಪಾಂಡವರಿಗೆ ದೂತನಾಗಿ ಹೋಗಿ ದುರ್ಯೋಧನನ ಸಭೆಯಲ್ಲಿ ಸಂಧಿಗೆ ವಿಘ್ನ ಉಂಟಾದುದೂ ಆತನ ಸತ್ಯಸಙ್ಕಲ್ಪತೆಗೆ ಪ್ರತಿಬಂಧಕವಾಯಿತೆಂದೂ ಭಾವಿಸತಕ್ಕದ್ದಲ್ಲವು. ಪರಮಸಾಧ್ವಿಯಾದ ದ್ರೌಪದಿಯ ಮಾನಭಂಗ ಮಾಡಿದುದಕ್ಕಾಗಿ, ದುರ್ಯೋಧನ ದುಶ್ಶಾಸನಾದಿಗಳು ಹತರಾಗಬೇಕೆಂಬುದೇ ಸತ್ಯಸಂಕಲ್ಪವೇ ವಿನಾ ಸಂಧಿಯಾಗಬೇಕೆಂದಲ್ಲವು. ಹಾಗಾದರೆ ಅಂತಹ ದೌತ್ಯವನ್ನು ಅವಲಂಬಿಸಿದುದು ಹೇಗೆ? ಎಂದರೆ, ಸಂಧಿಯಾಗದೇ ಇರುವದಕ್ಕಾಗಿಯೇ ತಾವೇ ಮುಂದಾಳಾಗಿಹೋದುದು ಎಂದು ಭಾವಿಸತಕ್ಕದ್ದು. ಅರ್ಜುನನು ಯುದ್ಧಮಾಡುವದಿಲ್ಲವೆಂದರೂ ಬಲಾತ್ಕರಿಸಿ ಉಪದೇಶಿಸಿ ಯುದ್ಧಮಾಡಿಸಿರುವದೇ ಇದಕ್ಕೆ ನಿದರ್ಶನವು.

೮. **ಪರಮಕಾರುಣಿಕತ್ವಮಾವದು ?** ಪರಮಕಾರುಣಿಕತ್ವವೆಂಬುದು ಯಾವುದು? **ಸ್ವಾರ್ಥನಿರಪೇಕ್ಷೆಯಾನ** - ತನಗೇನೊಂದೂ ಪ್ರಯೋಜನವಿಲ್ಲದೆ, **ಪರದುಃಖನಿರಾಕರಣೇಚ್ಛೈ**-ಇತರರಾದ ಜೀವಾತ್ಮರ ದುಃಖವನ್ನು ಹೋಗಲಾಡಿಸಬೇಕೆಂಬ ಇಚ್ಛೆಯು. ಇದು ಬರೀ ನಿರಾಕರಿಸಬೇಕಂಬ ಇಚ್ಛೆಯಲ್ಲೇ ನಿಲ್ಲುವದಿಲ್ಲವು. ಸತ್ಯಸಂಕಲ್ಪನಾದುದರಿಂದ ಒಂದು ವ್ಯಾಜರೂಪವಾದ ಉಪಾಯಾನುಷ್ಠಾನವನ್ನುದ್ದೇಶಿಸಿ ಆ ದುಃಖ ನಿವಾರಣೆಯಲ್ಲಿ ಪರ್ಯವಸಾನವನ್ನು ಹೊಂದುತ್ತದೆಂಬ ಭಾವದಿಂದ ಅಂತಹ ಉಪಾಯಾನುಷ್ಠಾನಕ್ಕೆ ಈ ಗುಣವು ಹೇತುವಾಗುತ್ತದೆಂದು ಉಪದೇಶಿಸುತ್ತಾರೆ.— **ಇದು**-ಈ ಸರ್ವೇಶ್ವರನ ಪರಮಕಾರುಣಿಕತ್ವವು, **ಅನಂತಾಪರಾಧಂಗಳುಡೈಯವರ್ಗಳುಕ್ಕುಮ್**-ಲೆಕ್ಕವಿಲ್ಲದಷ್ಟು ಅಪರಾಧಗಳನ್ನು ಮಾಡಿ ಮಹಾಪಾಪಿಗಳೆಂದು ಹೇಳಿಸಿಕೊಳ್ಳುವವರಿಗೂ ಸಹ, **"ಮಿತ್ರಭಾವೇನ ಸಂಪ್ರಾಪ್ತಂ"** ಮತ್ತು **"ಯದಿವಾ ರಾವಣಸ್ಸ್ವಯಂ"**

---

(೧) ರಾ. ಯುದ್ಧ. 18-3. (೨) ರಾ. ಯು. 18-34.

**ಎಙ್ಗ ರಪಡಿಯೇ, ಒರುವ್ಯಾಜಮಾತ್ರತ್ತಾಲೇ ಕ್ಷಮಿಕ್ಕುಮೆಙ್ಗ ರ ತೆಳಿವುಕ್ಕು ರುಪ್ಪಾಮ್.**

**ಎಙ್ಗ ರಪಡಿಯೇ**-ಎಂಬ ಶ್ಲೋಕಗಳಲ್ಲಿ ಉಪಪಾದಿತವಾದ ಹಾಗೆ, **ಒರುವ್ಯಾಜ ಮಾತ್ರತ್ತಾಲೇ**-ಒಂದು ನೆಪಮಾತ್ರವಾದ ಶರಣಾಗತಿ ಮೊದಲಾದುದರಿಂದ, **ಕ್ಷಮಿಕ್ಕುಂ**-ಖಂಡಿತವಾಗಿಯೂ ಕ್ಷಮಿಸುವನು, **ಎಙ್ಗ ರ ತೆಳಿವುಕ್ಕು**-ಎಂಬ ನಂಬಿಕೆಯನ್ನುಂಟುಮಾಡುವ ಜ್ಞಾನಕ್ಕೆ, **ಉರುಪ್ಪಾಮ್**-ಸಾಧನವಾಗುತ್ತವೆ. ಶ್ರೀಕೃಷ್ಣನು ಪರಮಕಾರುಣಿಕನೆಂದು ಅರ್ಜುನನು ಚೆನ್ನಾಗಿ ತಿಳಿದವನಾದುದ ರಿಂದ ಪಾದದ ಕಡೆ ಕೂತು ಆತನಲ್ಲಿ ಶರಣಾಗತಿಯನ್ನನುಷ್ಠಿಸಿ ಯುದ್ಧಕ್ಕೆ ಬರ ಮಾಡಿಕೊಂಡನು. ಅರ್ಜುನ ರಕ್ಷಣೆಯಿಂದ ಶ್ರೀಕೃಷ್ಣನಿಗೆ ಆಗತಕ್ಕದ್ದೇನೂ ಇಲ್ಲವು. ಅನೇಕ ಕಷ್ಟಗಳಿಗೆ ಗುರಿಯಾಗಿದ್ದಾರೆಂಬುದನ್ನು ತಿಳಿದು ಒಂದು ವ್ಯಾಜವನ್ನು ನಿರೀಕ್ಷಿಸಿ ಕ್ಲೇಶಗಳನ್ನು ಹೋಗಲಾಡಿಸಿರುತ್ತಾರೆ. ಹಾಗೆಯೇ ಮೋಕ್ಷಾರ್ಥಿಯಾಗಿ ಶರಣಾಗತಿಯ ಮೂಲಕ ಆಶ್ರಯಿಸಿದರೆ, ಆತನು ಎಷ್ಟು ಶತಾಪರಾಧಿಯಾಗಿದ್ದರೂ ಈ ಗುಣದ ಮೂಲಕ ರಕ್ಷಿಸಿಬಿಡುವನೆಂಬ ಭಾವವು. ಶ್ರೀ ನಿಗಮಾನ್ತದೇಶಿಕರವರು ಈ ಗುಣವನ್ನು ಸರ್ವೇಶ್ವರನ ಇತರ ಕಲ್ಯಾಣಗುಣ ಗಳಿಗಿಂತ ಪ್ರಧಾನವಾದುದೆಂದು **"ವೃಷಗಿರಿಗೃಹಮೇಧಿ ಗುಣಾಬೋಧ ಬಲೈಶ್ವರ್ಯ ವೀರ್ಯಶಕ್ತಿಮುಖಾಃ । ದೋಷಾ ಭವೇಯುರೇತೇ ಯದಿ ನಾಮ ದಯೇ ತ್ವಯಾ ವಿನಾಭೂತಾಃ"** (ದಯಾ. ೧೫) ಎಂಬಲ್ಲಿ ಉಪಪಾದಿಸಿರುತ್ತಾರೆ.

ಪರಮಕಾರುಣಿಕತ್ವವನ್ನು ಪ್ರದರ್ಶಿಸುವ ಎರಡು ಪ್ರಮಾಣಗಳು ಯಾವು ವೆಂದರೆ—(೧) **"ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ"**— ಈ ಶ್ಲೋಕವು ಹಿಂದೆಯೇ ಉಪಪಾದಿತವು. (ಸಾಧ್ಯೋಪಾಯ, ೨೩೭೦-೨ ನೆಯ ಪುಟಗಳನ್ನು ನೋಡಿ. ಇಲ್ಲಿ **ನತ್ಯಜೇಯಂ**-ನನ್ನ ಆಶ್ರಿತನನ್ನು ಬಿಡಲಾರೆ ನೆಂಬ ತಮ್ಮ ಪ್ರತಿಜ್ಞೆಯನ್ನು ತಿಳಿಸಿದುದು ಕೃಪಾಮಹಾತ್ಮ್ಯೆಯು.

(೨) **ಯದಿವಾ ರಾವಣಸ್ಸ್ವಯಮ್**-ಇದೂ ಹಿಂದೆಯೇ ವ್ಯಾಖ್ಯಾತವು. ೨೩೭೨-೩ ನೆಯ ಪುಟಗಳನ್ನು ಪರಾಂಬರಿಸಿ. ರಾವಣನು ಮಹಾಪರಾಧಿಯು. ಅಂತವನೂ ಕೂಡ ಶರಣಾಗತನಾದರೆ ರಕ್ಷಿಸಿಬಿಡುವೆನು ಎಂದು ಹೇಳಿದುದು ದಯೆಯ ಪರಾಕಾಷ್ಠೆಯ ದೆಶೆಯು. ಹಾಗೆಯೇ ದುರ್ಯೋಧನ ದುಶ್ಯಾಸನರೂ ಮಹಾಪರಾಧಿಗಳು. ಅವರೂ ಶರಣಾಗತರಾಗಿದ್ದರೆ ರಕ್ಷಿಸಲ್ಪಡುತ್ತಿದ್ದರು.

ಈ ವಾಕ್ಯದಲ್ಲಿ **ಒರು ವ್ಯಾಜಮಾತ್ರತ್ತಾಲೇ** ಎಂಬುದರಿಂದ ಭರನ್ಯಾಸವು ಹೇಳಲ್ಪಟ್ಟಿತು. ಶರಣಾಗತಿಯು ಫಲಿಸಬೇಕಾದರೆ ಶರಣ್ಯನಲ್ಲಿ ಕೃಪೆಯು ಆವ ಶ್ಯಕವು. ಹಾಗೆಯೇ ಪ್ರಾರ್ಥನೆಯನ್ನು ನೆರವೇರಿಸುವ ಸರ್ವಶಕ್ತಿತ್ವವೂ ಆವಶ್ಯ ಕವು. ಆದರೆ ಸಾಮರ್ಥ್ಯಮಾತ್ರವಿದ್ದು ದಯಾಶೂನ್ಯನಾದ ಪಕ್ಷದಲ್ಲಿ ಶರಣಾ ಗತಿಯು ನಿಷ್ಫಲವಾಗುತ್ತದೆ. ಆದುದರಿಂದ ಇದು ಮುಖ್ಯವಾದ ಗುಣವು.

## ೯. ಕೃತಜ್ಞತ್ವಮಾವದು ? (೧) ನಸ್ಮರತ್ಯಪಕಾರಾಣಾಂ ಶತಮಪ್ಯಾ

೯. **ಕೃತಜ್ಞತ್ವಮಾವದು** ? ಮಾಡಿದುದನ್ನು ತಿಳಿಯೋಣವು ಎಂಬ ಗುಣ ವಾವುದು ? **"ನಸ್ಮರತ್ಯಪಕಾರಾಣಾಂ"** ಎಂಬ ಮತ್ತು **"ಋಣಂ ಪ್ರವೃದ್ಧಮಿವಮೇ"** ಎಂಬ ಎಜ್ಞ್ಗ**ರಪಡಿಯೇ**-ಪ್ರಮಾಣಗಳಲ್ಲಿ ಹೇಳಿರುವ ಹಾಗೆ, **ಅತ್ಯಲ್ಪಾನುಕೂಲ ವ್ಯಾಪಾರತ್ತೈಯುಮ್** - ಭಗವದಾಜ್ಞೆಗನುಸಾರವಾಗಿ ಆತನ ಸಂಪ್ರೀಣನಕ್ಕಾಗಿ ಸ್ವಲ್ಪಮಟ್ಟಿಗಾದರೂ ಶಾಸ್ತ್ರಕ್ಕೆ ಅನುಕೂಲವಾದ ಅನುಷ್ಠಾನವನ್ನು ಕೂಡ, **ಪರಮೋಪಕಾರಂ ಪಣ್ಣಿನಾರ್ಪ್ಪೋಲೇ**-ನನ್ನ ಆಜ್ಞಾನುಪಾಲನವನ್ನು ಮಾಡಿದ ಮಹಾತ್ಮನು, ಉದಾರಿ ಎಂದು ಹೇಳಿ, ತನಗೆ ಪರಮೋಪಕಾರವನ್ನು ಮಾಡಿದಹಾಗೆ ಭಾವಿಸಿ, **ಮರವಾದೊಳಿಗೈ**-ಹಾಗೆ ಆಶ್ರಿತನು ಮಾಡಿದ ಅಲ್ಪಕೈಂಕರ್ಯವನ್ನು ಮರೆಯದೇ ಇರೋಣವು. **"ನಸ್ಮರತ್ಯಪಕಾರಾಣಾಂ"** ಎಂಬ ಶ್ಲೋಕವು ಶ್ರೀಮದ್ರಾಮಾಯಣದಲ್ಲಿ, "ನಸ್ಮರತಿ" ಎಂಬುದು ಉತ್ತರಾರ್ಧವಾಗಿಯೂ, "ಕಥಂಚಿತ್" ಎಂಬುದು ಪೂರ್ವಾರ್ಧವಾಗಿಯೂ ಇರುತ್ತದೆ. ಇದು ಸ್ವಾಮಿಯ ಕೃತಜ್ಞತ್ವ ಗುಣವನ್ನು ಪ್ರಕಟಿಸುವ ಶ್ಲೋಕವು. **ಕಥಂಚಿತ್ ಕೃತೇನ**-ಸರಿಯಾದ ರೀತಿಯಲ್ಲಿ ಇಲ್ಲದೆ ಏನೋ ನಡೆಸಬೇಕೆಂದು ಹೇಗೋ ಮಾಡಲ್ಪಟ್ಟ ಅಥವಾ ಮಾಡಬೇಕೆಂದು ಶ್ರದ್ಧಾ ಉತ್ಸಾಹ ಸಙ್ಕಲ್ಪಾದಿಗಳು ಏನೂ ಇಲ್ಲದೆ ಪ್ರಾಸಙ್ಗಿಕವಾಗಿ ಮಾಡಲ್ಪಟ್ಟ, ಅಥವಾ ಏನೋ ಒಂದು ಪ್ರಯೋಜನಾಂತರವನ್ನುದ್ದೇಶಿಸಿ ಮಾಡಲ್ಪಟ್ಟ,ಅಥವಾ ಅತ್ಯಲ್ಪವಾಗಿ "ಪತ್ರಂ ಪುಷ್ಪಂ" ಎಂದು ಹೇಳಿರುವ ಹಾಗೆ ಮಾಡಲ್ಪಟ್ಟ, ಅಥವಾ ಪರಿಹಾಸಾದಿ ರೂಪದಲ್ಲಿ ಮಾಡಲ್ಪಟ್ಟ, **ಕೃತೇನ** ಎಂದಿರುವದರಿಂದ ಹಾಗೆ ಮಾಡಬೇಕೆಂಬ ದೃಢ ಸಂಕಲ್ಪವಾಗಲಿ ಬೋಧಿಸಲ್ಪಟ್ಟಿತು, **ಏಕೇನ ಉಪಕಾರೇಣ**-ಸರಿಯಾಗಿ ನೋಡಿದರೆ ಪೂರ್ಣಕಾಮನಿಗೆ ಉಪಕಾರವು ಯಾವುದು ಇಲ್ಲವು, ಆದರೂ ಸಕೃತ್ ಮಾಡಲ್ಪಟ್ಟಿದುದನ್ನು ಶ್ರೀರಾಮನು ಉಪಕಾರವಾಗಿ ಭಾವಿಸುವನೆಂಬ ಭಾವದಿಂದ ಹೇಳಲ್ಪಟ್ಟಿತು. ಅಥವಾ ವ್ಯಾಜರೂಪದಲ್ಲಿ ಹೇಗೋ ಮಾಡಲ್ಪಟ್ಟ ಸಕೃತ್ ಮಾಡಲ್ಪಟ್ಟ ಶರಣಾಗತಿರೂಪ ಆಶ್ರಯಣದಿಂದ, ಅಂತಹ ಪ್ರವೃತ್ತಿಯಿಂದ, **ತುಷ್ಯತಿ**-ಸಂತೋಷಪಡುವನು. ಆಗಲಿ ಅನಂತರ ಈತನು ಹಿಂದೆ ಮಾಡಿದ ಅಸಂಖ್ಯೇಯಗಳಾದ ಅಪರಾಧಗಳಿಂದೇನಾದರೂ ಕೋಪಿಸುವನೋ ? ಎಂದರೆ ಅಂತಹ ಅಪರಾಧಗಳು ಆತನ ಸ್ಮೃತಿಪಥಕ್ಕೇ ಬರುವದಿಲ್ಲವೆಂದು ಹೇಳುತ್ತಾರೆ. **ಅಪಕಾರಾಣಾಂ**-ಸರಿಯಾಗಿ ಅಪರಾಧಗಳೇ ಆಗಿರುವ ಪ್ರವೃತ್ತಿಗಳು, **ಶತಮಪಿ**-ಇಲ್ಲಿ ಶತ ಶಬ್ದವು ಆನಂತ್ಯವನ್ನು ಬೋಧಿಸುತ್ತದೆ, ಆನನ್ತ್ಯವನ್ನೂ ಕೂಡ, **ನಸ್ಮರತಿ**-ಶ್ರೀರಾಮನು ಸ್ಮರಿಸುವನಲ್ಲವು; ಏಕೆಂದರೆ, **ಆತ್ಮವತ್ತಯಾ-**

---

(೧) ರಾಮಾ. ಅಯೋಧ್ಯಾ. ೧-೧೧.

**ತ್ಮವತ್ತಯಾ। ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ" (೨)"ಋಣಂ ಪ್ರವೃದ್ಧ ಮಿವ ಮೇ ಹೃದಯಾ ನ್ನಾಪಸರ್ಪತಿ" ಎಙ್ಗಿರಪಡಿಯೇ ಅತ್ಯಲ್ಪಾ ನುಕೂಲ ವ್ಯಾಪಾರತ್ತೈಯುಂ ಪರಮೋಪಕಾರಂ ಪಣ್ಣಿನಾರ್ಪೋಲೇ ಮರ**

ವಶೀಕೃತವಾದ ಮನಸ್ಸುಳ್ಳವನಾದುದರಿಂದ, ಅಥವಾ ಮಾಡಿದುದರ ಜ್ಞಾನವುಳ್ಳವನಾದುದರಿಂದ, ಅಥವಾ ಯಾವಾಗ ಹಾಗೂ ಹೀಗೂ ಸಕೃದಾಶ್ರಯಮಾಡಿದನೋ, ಆಗ ಪ್ರಪನ್ನನು ತನ್ನವನಾದುದರಿಂದ ಅಪರಾಧಗಳನ್ನು ಸ್ಮರಿಸುವದಿಲ್ಲವೆಂಬ ತಾತ್ಪರ್ಯವು. ಆಗ ಪ್ರಪನ್ನರಾಗಿ ಆಶ್ರಯಿಸಿದವರನ್ನೂ **"ಉದಾರಾಸ್ಸರ್ವಏವೈತೇ"** ಎಂದೂ, **"ನಕಶ್ಚಿನ್ನಾಪರಾಧ್ಯತಿ"** ಎಂದು ಹೇಳುತ್ತಾ ಅವುಗಳನ್ನು ಸ್ಮರಿಸದೇ ಇರುವನೆಂಬ ಭಾವವು.

(೨) **"ಋಣಪ್ರವೃದ್ಧಮಿವ"** ಎಂಬ ಪ್ರಮಾಣಕ್ಕೆ ಪೂರ್ವಾರ್ಧವು ಯಾವುವೆಂದರೆ—**"ಗೋವಿನ್ದೇತಿ ಯದಾಕ್ರನ್ದತ್ಕೃಷ್ಣಾ ಮಾಂ ದೂರವಾಸಿನಮ್"** ಎಂಬುದು. ಆದರೆ ಕುಂಭಕೋಣದ ಪ್ರತಿಯಲ್ಲಿ ವ್ಯತ್ಯಸ್ತವಾಗಿ **ಗೋವಿನ್ದೇತಿ** ಎಂಬುದನ್ನೇ ಉತ್ತರಾರ್ಧವಾಗಿ ಅಚ್ಚುಹಾಕಲ್ಪಟ್ಟಿರುತ್ತದೆ. ಹೀಗೆ ಹಿಂದಿನ ಪ್ರತಿಗಳಿಗೂ ಈಗಿನ ಪ್ರತಿಗಳಿಗೂ ಅನೇಕ ವ್ಯತ್ಯಾಸಗಳಿವೆ. **ಯದಾ**-ಯಾವಾಗ, **ಗೋವಿನ್ದೇತಿ**-ಓ ಗೋವಿಂದನೇ ಎಂದು, **ದೂರವಾಸಿನಮ್**-ಬಹುದೂರದಲ್ಲಿದ್ದ, **ಮಾಂ**-ನನ್ನನ್ನು, **ಕೃಷ್ಣಾ**-ದ್ರೌಪದಿಯು, **ಆಕ್ರಂದತ**-ದುಶ್ಶಾಸನಾದಿಗಳು ದುರ್ಯೋಧನನ ಸಭೆಯಲ್ಲಿ, ತಾನು ಬಹಿಷ್ಠೆಯಾಗಿದ್ದರೂ ಎಳಕೊಂಡುಬಂದು ಮಾನಭಂಗವನ್ನು ಮಾಡಬೇಕೆಂದು ಯತ್ನಿಸಿದಾಗ ಘಟ್ಟಿಯಾಗಿ ಅಳುತ್ತಾ ಕೂಗಿದಳೋ, ಆ ಕೂಗು, **ಋಣಂ ಪ್ರವೃದ್ಧಮಿವ**-ತೀರಿಸಲು ಸಾಧ್ಯವಲ್ಲದಷ್ಟು ಮಾಡಿದ ಸಾಲವು ಹೇಗೋ ಹಾಗೆ, **ಹೃದಯಾತ್**-ನನ್ನ ಹೃದಯವನ್ನು ಬಿಟ್ಟು, **ನಾಪಸರ್ಪತಿ**-ಬರಲೇ ಇಲ್ಲವು. ಒಬ್ಬನಿಗೆ ಹೆಚ್ಚಾಗಿ ಮಾಡಿದ ಋಣವು ಯಾವಾಗಲೂ ಹೃದಯಕ್ಕೆ ಶಲ್ಯರೂಪವಾಗಿಯೇ ಹೇಗೆ ಇರುತ್ತದೋ ಹಾಗೆ, ಆ ಸಾಧ್ವಿಯ ಆರ್ತಸ್ವರವು ನನ್ನ ಮರ್ಮವನ್ನು ಬೇಧಿಸುತ್ತಲೇ ಇದೆ; ಹೃದಯಕ್ಕೆ ಶಲ್ಯರೂಪವಾಗಿದೆ ಎಂದು ಭಾವವು. ಆ ಮಹಾ ಪಾಪಿಗಳು ಇನ್ನೂ ಜೀವಂತರಾಗಿರುವದು ನನ್ನ ಹೃದಯವನ್ನು ಬೇಧಿಸುತ್ತದೆಂಬ ತಾತ್ಪರ್ಯವು. **ದೂರವಾಸಿನಂ** ಎಂಬುದರಿಂದ ತಾನು ಆಗ ಹತ್ತಿರದಲ್ಲೇ ಇದ್ದುದಾದರೆ, ಆಗಲೇ ಅವರನ್ನು ನಿರ್ಮೂಲಮಾಡುತ್ತಿದ್ದೆನೆಂಬ ಭಾವವು. ಶರಣಾಗತನ ಆರ್ತಿಯನ್ನು ತೀರಿಸದಿರುವುದು ತನಗೆ ಮಹತ್ತಾದ ಋಣಬಾಧೆ ಎಂದು ಹೇಳಿಕೊಂಡರು. ಮುಂದೆ ಈ ಕೃತಜ್ಞತ್ವವು ಮೋಕ್ಷಾರ್ಥಿಗೆ ಹೇಗೆ ಉಪಕಾರವೆಂಬುದನ್ನು ಉಪಪಾದಿಸುತ್ತಾರೆ.—**ಇದು**-ಈ ಕೃತಜ್ಞತ್ವವು, **ತನ್ ಪಕ್ಕಲಿಲೇ** - ಚೇತನನಾದ

(೨) ಭಾರತ. ಉದ್ಯೋಗ. ೪೭-೨೨.

**ವಾದೊಳಿಗ್ಗೈ. ಇದು ರ್ತ ಪಕ್ಕಲಿಲೇತೇನು ಮೊರುವಲ್ಲ್ ಕುರಿಕಂಡಾಲ್ ಇನಿನಮ್ಮೈ ಯೊರುಕಾಲತ್ತಿಲುಮ್ ಕೈವಿಡಾನೆನ್ರಿರುಕ್ಕೈಕ್ಕುರುಪ್ಪಾಮ್.**

**೧೦. ಸ್ಥಿರತ್ವಮಾವದು ? ಆಶ್ರಿತರಕ್ಷಣತ್ತಿಲ್ ನಿಲೈಯುಡಮ್ಮೈ. ಇದು ಅತ್ಯಂತಾನ್ತರಂಗ(ಭೂತ)ರ್ ವಿಲಕ್ಕಿಲುಮ್ "ನತ್ಯಜೇಯಂ ಕಥಂಚನ" ಎಙ್ಗಿರಪಡಿಯೇ ನಮ್ಮೈವಿಡಾನೆನ್ರು ನಮ್ಬುಗೈಕ್ಕುರುಪ್ಪಾಮ್.**

**೧೧. ಪರಿಪೂರ್ಣತ್ವಮಾವದು ? ಅವಾಪ್ತ ಸಮಸ್ತ ಕಾಮತ್ವಮ್.**

ತನ್ನಲ್ಲಿ, **ಏದೇನುಮೊರು**-ಯಾವುದಾದರೂ ಒಂದು, **ವಲ್ಲಕುರಿಕಂಡಾಲ್**-ವ್ಯಾಜರೂಪವಾಗಿ ಒಂದು ಅನುಕೂಲಾಚರಣೆಯನ್ನು ಕಂಡರೆ ಎಂದರೆ ಶರಣಾಗತಿಯ ಮೂಲಕ ಆಶ್ರಯಿಸಿದನೆಂದು ತಿಳಿದರೆ, **ಕೈವಿಡಾನ್**-ಕೈಬಿಡುವದಿಲ್ಲವು, ರಕ್ಷಿಸದೇ ಇರುವದಿಲ್ಲವು, **ಎನ್ರಿರುಕ್ಕೈಕ್ಕು**-ಎಂಬ ನಂಬಿಕೆಯುಂಟಾಗುವದಕ್ಕೆ, **ಉರುಪ್ಪಾಮ್**-ಸಾಧನವಾಗುತ್ತದೆ. ಇದು **ಶರಣಂವ್ರಜ**ವೆಂದೂ, **ಮೋಕ್ಷಯಿಷ್ಯಾಮಿ** ಎಂದೂ ಹೇಳಿದುದರ ವ್ಯಾಖ್ಯಾನವಾಗುತ್ತದೆ. ಶರಣವನ್ನು ಹೊಂದಿದನ್ನು ತಿಳಿಯುವ ಕೃತಜ್ಞತ್ವವಿರುವದರಿಂದಲೇ **ಮೋಕ್ಷಯಿಷ್ಯಾಮಿ** ಎಂದು ಹೇಳಿರುವದು. ಹಾಗೆಯೇ "**ತವಾಸ್ಮೀತಿ ಚ ಯಾಚತೇ**" ಎಂಬಲ್ಲಿರುವ **ವಲ್ ಕುರಿಕಂಡಾಲ್, ಅಭಯಂ ದದಾಮಿ** ಎಂದು ಹೇಳಿ ಕೈಬಿಡುವನಲ್ಲವೆಂಬ **ಭಾವವು.**

**೧೦. ಸ್ಥಿರತ್ವಮಾವದು ?**—ಸ್ಥಿರಸಂಕಲ್ಪವನ್ನು ಹೊಂದಿರುವಿಕೆ ಎಂದರೇನು ? **ಆಶ್ರಿತರಕ್ಷಣತ್ತಿಲ್**-ಅಙ್ಗ ಅಥವಾ ಅಙ್ಗಿ ಶರಣಾಗತಿಯ ಮೂಲಕ ಆಶ್ರಯಿಸಿದವನ ರಕ್ಷಣದಲ್ಲಿ **ನಿಲೈಯುಡಮ್ಮೈ**-ಸ್ಥಿರಸಂಕಲ್ಪನಾಗಿರೋಣವು, ಇದನ್ನೇ ಉಪಪಾದಿಸಿ ತಿಳಿಸುತ್ತಾರೆ. **ಇದು**-ಈ ಸ್ಥಿರತ್ವವು. **ಅತ್ಯಂತಾನ್ತರಂಗರ್**-ಸುಗ್ರೀವ ಜಾಂಬವಾಂಗದಾದಿಗಳ ಹಾಗೆ ಸರ್ವೇಶ್ವರನಿಗೆ ತುಂಬಾ ಪ್ರಿಯರಾದವರು, **ವಿಲಕ್ಕಿಲುಮ್**-ನಿರಾಕರಿಸಿದರೂ, "**ನತ್ಯಜೇಯಂ ಕಥಂಚನ**" ಶರಣಾಗತನನ್ನು ಎಂದಿಗೂ ಯಾವ ರೀತಿಯಲ್ಲೂ ಬಿಡೆನು" **ಎಙ್ಗಿರಪಡಿಯೇ**-ಎಂದು ಶ್ರೀರಾಮನು ಸುಗ್ರೀವಾದಿಗಳಲ್ಲಿ ಪ್ರತಿಜ್ಞೆಯನ್ನು ಮಾಡಿದಹಾಗೆ, **ನಮ್ಮೈವಿಡಾನೆನ್ರು**-ಪ್ರಪನ್ನರಾದ ನಮ್ಮನ್ನು ಎಂದಿಗೂ ಪರಿತ್ಯಾಗಮಾಡುವದಿಲ್ಲವೆಂದು **ನಮ್ಬುಗೈಕ್ಕೆ**-ಮಹಾವಿಶ್ವಾಸವನ್ನುಂಟುಮಾಡುವದಕ್ಕೆ, **ಉರುಪ್ಪಾಮ್**-ಸಾಧನವಾಗುತ್ತದೆ. ಹಾಗೆಯೇ ಪ್ರಹ್ಲಾದ, ಗಜೇಂದ್ರ, ಧ್ರುವ, ದ್ರೌಪದ್ಯಾದಿಗಳು ಸಂಪೂರ್ಣ ನಂಬಿಕೆಯನ್ನು ಸ್ವಾಮಿಯಲ್ಲಿ ತೋರಿಸಿದರು.

**೧೧. ಪರಿಪೂರ್ಣತ್ವಮಾವದು ?** -ಪರಿಪೂರ್ಣತ್ವವೆಂಬುದು ಯಾವದು? **ಅವಾಪ್ತ ಸಮಸ್ತ ಕಾಮತ್ವಮ್** -ಅಭಿಲಷಿತವಾದುವು ಎಷ್ಟುಂಟೋ ಅವೆಲ್ಲವನ್ನೂ ಏನೊಂದೂ ನ್ಯೂನತೆಯಿಲ್ಲದೆ ಹೊಂದಿರೋಣವು, ಅದನ್ನೇ ಉಪಪಾದಿಸಿ

**ಇದು (೧) "ಅಣ್ವಪ್ಯುಪಾಹೃತಂ ಭಕ್ತೈಃ (ಮಮ ಭೋಗಾಯ ಜಾಯತೇ) ಪ್ರೇಮ್ಣಾ ಭೂರ್ಯೇವಮೇಭವೇತ್ ।" (೨) "ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ" ಇತ್ಯಾದಿಗಳಿರ್ ಪಡಿಯೇ ಭಾವಬಂಧಮ್ ಪಾರ್‍ಕ್ಕುಮೆತ್ತನೈಯೊಳಿಯ ಮತ್ತುನಾಮಿಡುಂ ಪಚ್ಚೈಯಿಲ್ ವರಿಶೈ ಪಾರಾ**

ಹೇಳುತ್ತಾರೆ.—(೧) ಇದು ಶ್ರೀಕೃಷ್ಣ ಭಗವಾನರವರು ಪರಮಭಾಗವತರಾದ ಕುಚೇಲರನ್ನು ಕುರಿತು ಸರ್ವಜ್ಞನಾದುದರಿಂದ ಅವಲಕ್ಕಿಯನ್ನು ತನಗಾಗಿ ತಂದಿದ್ದಾರೆಂದು ತಿಳಿದು, ಏನಾದರೂ ಉಪಾಯನವನ್ನು ತಂದಿದ್ದೀರಾ ಎಂದು ಪ್ರಶ್ನಿಸುವ ಸಂದರ್ಭವು. **ಭಕ್ತೈಃ**-ನನ್ನ ಭಕ್ತರುಗಳಿಂದ **ಯತ್ ಉಪಹೃತಂ**-ಯಾವದು ತರಲ್ಪಟ್ಟು ಸಮರ್ಪಿಸಲ್ಪಟ್ಟಿತೋ, **ತತ್**-ಅದು, **ಅಣ್ವಪಿ**-ಅತ್ಯಲ್ಪವಾದರೂ, **ಪ್ರೇಮ್ಣಾ**-ಆ ಪ್ರೇಮಾತಿಶಯದಿಂದ ಸಮರ್ಪಿಸಿದುದಾದುದರಿಂದ, **ಭೂರಿ**-ಮಹತ್ತಾದುದಾಗಿ, **ಉಪಜಾಯತೇ**-ಪರಿಣಮಿಸುತ್ತದೆ. ಭಕ್ತಿಯಿಂದ ಸಮರ್ಪಿಸುವದರಿಂದ ಅತ್ಯಲ್ಪವಾದುದು ಅನಂತವಾದುದಾಗುತ್ತದೆ. ಈಗಿನ ಕೋಶಗಳಲ್ಲಿ "ಅಣ್ವಪ್ಯುಪಹೃತಂ ಭಕ್ತೈಃ ಪ್ರೇಮ್ಣಾ ಭೂರ್ಯೇವಮೇಭವೇತ್" ಎಂದಿರುತ್ತದೆ. ಇದರ ಉತ್ತರಾರ್ಧವು—**"ಭೂರ್ಯಪ್ಯಭಕ್ತೋಪಹೃತಂ ನಮೇ ತೋಷಾಯ ಕಲ್ಪತೇ"** ಎಂದಿರುತ್ತದೆ. ಅಭಕ್ತನು ಸಮರ್ಪಿಸಿದುದು ಮಹತ್ತಾದುದಾದರೂ ನನಗೆ ಅದು ತೃಪ್ತಿಯನ್ನುಂಟುಮಾಡುವದಿಲ್ಲವು" ಎಂದೂ, (೨) ಇದು ಅರ್ಜುನನಿಗೆ ಶ್ರೀಕೃಷ್ಣನು ಭಕ್ತಮಹಾತ್ಮ್ಯೆಯನ್ನು ತಿಳಿಸುವ ಪ್ರಕರಣವು; ಆತನು ಸಂಪೂರ್ಣ ಭಕ್ತಿಯಿಂದ ಯಾವ ಅತ್ಯಲ್ಪವಾದುದನ್ನು ಸಮರ್ಪಿಸಿದರೂ ಅದು ನನಗೆ ಪರಮಭೋಗ್ಯವಾದುದೆಂದು ತಿಳಿಸುವ ಪ್ರಕರಣವು. ಈ ಶ್ಲೋಕಕ್ಕೆ ವಿಶೇಷಾರ್ಥಗಳು ಬೇಕಾದರೆ ದಾಸನು ಬರೆದಿರುವ ವ್ಯಾಖ್ಯಾನದಲ್ಲಿ ಕಾಣಬಹುದು. ಶಾಸ್ತ್ರರೀತ್ಯಾ ಸಂಗ್ರಹಿಸಿದ ತುಳಸೀದಳ, ಕಮಲಪತ್ರ ಮುಂತಾದ್ದನ್ನಾಗಲೀ, ತಾನು ಹಾಕಿ ಬೆಳಸಿದ ಪುಷ್ಪದಿಂದಲಾಗಲಿ, ಯೋಗ್ಯವಾದ ಫಲವನ್ನಾಗಲಿ ಅಥವಾ ಅರ್ಘ್ಯಪಾದ್ಯಾಚಮನ ರೂಪದಲ್ಲಿ ಶುದ್ಧೋದಕವನ್ನಾಗಲಿ, ಇವುಗಳಲ್ಲಿ ಯಾವುದಾದರೂ ಒಂದನ್ನಾಗಲಿ ಯಾವ ಭಕ್ತನು ತುಂಬಾ ಪ್ರೀತಿಯಿಂದ ಸಮರ್ಪಿಸುತ್ತಾನೋ, ಅದನ್ನು ತುಂಬಾ ಭಕ್ತಿಯಿಂದ ಸಮರ್ಪಿಸಲ್ಪಟ್ಟಿದುದರಿಂದ ತುಂಬಾ ಪವಿತ್ರವಾದ ಮನಸ್ಸಿನಿಂದ ಎಂದರೆ ತುಂಬಾ ಪ್ರೀತಿಪೂರ್ವಕವಾಗಿಯೇ ಪರಿಗ್ರಹಿಸುವೆನು ಎಂಬುದು ಸಂಗ್ರಹಾರ್ಥವು." **ಇತ್ಯಾದಿಗಳಿರ್ಪಡಿಯೇ**-ಇವೇ ಮೊದಲಾದ ದಿವ್ಯಸೂಕ್ತಿಗಳಲ್ಲಿ ಹೇಳಿರುವಹಾಗೆ, **ಭಾವಬಂಧಂ ಪಾರ್‍ಕ್ಕುಂ**-ಈ ಅವಾಪ್ತ ಸಮಸ್ತ ಕಾಮುತ್ವವು ಪ್ರಪನ್ನನ ಮನಸ್ಸಿನಲ್ಲಿ ಪ್ರೀತಿರೂಪ ಭಾವದಿಂದ ಹೇಗೆ ಕಟ್ಟುಬಿದ್ದಿದೆ ಎಂಬುದನ್ನು ಎದುರುನೋಡುತ್ತದೆ,

---

(೧) ಭಾಗ ೧೦-೮೧-೩. (೨) ಗೀ. ೯-೨೬ ಮತ್ತು ಭಾಗ ೧೦-೮೧-೪,

**ನೆನ್ರುವಲ್ಲ ಕಿಂಚಿತ್ಕಾರತ್ತಿಲೇ ಮುಯಲುಕ್ಕೈಕ್ಕುರುಪ್ಪಾಮ್.**

**೧೨. ಪರಮೋದಾರತ್ವಮಾವದು ? ಉಪಾಯ ಲಾಘವಮುಮ್ ಉಪೇಯ ಗೌರವಮುಂ, ಪಾತ್ರಾಪಕರ್ಷಮುಂ ಪಾರಾದೇ ಸರ್ವಸ್ವದಾನಂ ಪಣ್ಣಿಯುಮ್, ನಾಮ್ ಶೆಯ್ದದು ಪೋರಾದೆನ್ರಿರುಕ್ಕುಮ್ ವದಾನ್ಯತ್ವೈ.**

**ಅತ್ತನೈಯೊಳಿಯ**-ಇಷ್ಟುಮಾತ್ರವಲ್ಲದೆ, **ಮತ್ತುನಾಮಿಡುಂ ಪಚ್ಚೈಯಿಲ್**-ಬೇರೆ ಅಧಿಕವಾಗಿ ನಾವು ಸಮರ್ಪಿಸುವ ವಸ್ತುವಿನಲ್ಲಿ, **ವರಿಶೈಪಾರಾನೆನ್ರು**-ತಾರತಮ್ಯವನ್ನು ಸರ್ವೇಶ್ವರನು ಈ ಗುಣದಿಂದ ನೋಡುವದಿಲ್ಲವೆಂದು- **ವಲ್ಲ ಕಿಂಚಿತ್ಕಾರತ್ತಿಲೇ**-ತನಗೆ ಶಕ್ಯವಾದ ಅಲ್ಪ ಕೈಂಕರ್ಯದಲ್ಲಿ, **ಮುಯಲುಗೈಕ್ಕುಂ**-ಪ್ರವೇಶ ಉಂಟಾಗುವದಕ್ಕೆ, ಎಂದರೆ ಕೈಂಕರ್ಯಮಾಡಲು ಯತ್ನಿಸುವದಕ್ಕೆ, **ಉರುಪ್ಪಾಮ್**-ಸಾಧನವಾಗುತ್ತದೆ. ಕುಚೇಲರು ಸಮರ್ಪಿಸಿದ ಪೃಥಕತಂಡುಲ, ಗಜೇಂದ್ರನೂ ಸುಧಾಮನೆಂಬ ಮಾಲಾಕಾರನೂ ಸಮರ್ಪಿಸಿದ ಪುಷ್ಪಗಳೂ, ಶಬರಿಯು ಸಮರ್ಪಿಸಿದ ಫಲವೂ, ಲಕ್ಷ್ಮಣನು ವನವಾಸದ ಪ್ರಥಮ ದಿನದಲ್ಲಿ ಸಮರ್ಪಿಸಿದ ಉದಕವೂ, ಕುಬ್ಜೆಯು ಸಮರ್ಪಿಸಿದ ಗಂಧ ಇವುಗಳನ್ನು ಕುರಿತ ವೃತ್ತಾಂತಗಳು ಇದಕ್ಕೆ ನಿದರ್ಶನಗಳು.

**೧೨. ಪರಮೋದಾರತ್ವಮಾವುದು ?** - ನಿರತಿಶಯ ಉದಾರಭಾವವೆಂಬುದು ಯಾವುದು ? **ಉಪಾಯಲಾಘವಮುಮ್**-ಬಹು ಲಘುವಾದ ಎಂದರೆ ಬಹು ಸುಲಭವಾದ ಉಪಾಯಾನುಷ್ಠಾನದ ಮೂಲಕ, **ಉಪೇಯ ಗೌರವಮುಮ್**-ಮಹತ್ತಾದ ಪ್ರಾಪ್ಯವನ್ನುಂಟುಮಾಡೋಣವು; ಅದನ್ನೇ ಉಪಪಾದಿಸುತ್ತಾರೆ.—**ಪಾತ್ರಾಪಕರ್ಷಮುಂ ಪಾರಾದೆ** - ಅಧಿಕಾರಿಯ ನಿಕೃಷ್ಟತೆಯನ್ನು ನೋಡದೆ, ಗಮನಿಸದೆ, **ಸರ್ವಸ್ಯ ದಾನಮುಂ ಪಣ್ಣಿ**-ತನಗೆ ಎಷ್ಟು ಸುಖವೋ ಅಷ್ಟು ಉಂಟಾಗುವಹಾಗೆ ಮೋಕ್ಷಸುಖವನ್ನೂ ಉಂಟುಮಾಡಿ, **ನಾಮ್ ಶೆಯ್ದದು ಪೋರಾದು ಎನ್ರಿರುಕ್ಕುಮ್ ವದಾನ್ಯತೆ**-ನಾವು ಮಾಡಿದುದು ಸಾಲದು ಎಂದಿರುವಹಾಗೆ ಇರುವ ದಾನಶೀಲತೆಯು ; ಅಧಿಕಾರಿಯು ಮೋಕ್ಷಾರ್ಥಿಯಾಗಿ ಉಪಾಯಾನುಷ್ಠಾನವನ್ನು ಮಾಡಿದನು ; ಅವನು ಕೇಳಿದುದನ್ನು ಕೊಟ್ಟದ್ದಾಯಿತು. ಆತನು ಮಹಾ ಭಕ್ತನಾಗಿ ನನ್ನವನಾದ ನಂತರ ಉಚಿತವಾಗಿ ಏನನ್ನೂ ಕೊಡಲಿಲ್ಲವೇ, ನಾವು ಮಾಡಿದುದು ಭಕ್ತಾಗ್ರೇಸರನ ವಿಷಯದಲ್ಲಿ ಸಾಲದೇ ಎಂಬ ವದಾನ್ಯತೆ ಎಂಬ ಭಾವವು. ಲಕ್ಷ್ಮಿಯ ವಿಷಯದಲ್ಲಿ ಶ್ರೀ ಪರಾಶರಭಟ್ಟರವರು "**ಐಶ್ವರ್ಯಮಕ್ಷರಂ ಗತಿಂ.**" ಎಂಬ ಶ್ಲೋಕದಲ್ಲಿ "**ಅಸ್ಮೈ ನ ಕಿಂಚಿದುಚಿತಂ ಕೃತಮಿತ್ಯಥಾಂಬ । ತ್ವಂ ಲಜ್ಜಸೇ ಕಥಯ ಕೋಯಮುದಾರಭಾವಃ**" "**ದೇವಜುಷ್ಟಾಮುದಾರಾಂ**" ಎಂದು ಶ್ರೀ ಸೂಕ್ತದಲ್ಲಿ **ಹೇಳಿರುವ ಲಕ್ಷ್ಮಿಯ ಉದಾರಭಾವವನ್ನು ಹೀಗೆಯೇ ಉಪಪಾದಿಸಿ ಕೊಂ**

**ಇದು ದಧಿಬಾಂಡಾದಿಗಳ್ಳೈಪ್ಪೋಲೇ ಹಠಾತ್ಕಾರಂ ಪಣ್ಣಿಯುಮ್ ಅನುಬಂಧಿ ಪರ್ಯಂತಮಾಗ ಪರಮಪುರುಷಾರ್ಥತ್ತೈಯಪೇಕ್ಷಿಕ್ಕೈಕ್ಕುರುಪ್ಪಾಮ್.**

ಡಾಡಿರುತ್ತಾರೆ. (ಶ್ರೀಗುಣ ೫೮) ಸರ್ವಸ್ವದಾನವೆಂತಾದ್ದೆಂದರೆ—ಸರ್ವೇಶ್ವರನು ನಮಗೆ ಶ್ರುತಿಯಲ್ಲಿ "ಸರ್ವಸ್ಯಶರಣಂಸುಹೃತ್" ಎಂದು ಹೇಳಿರುವಹಾಗೆ ಪರಮ ಸುಹೃತ್ತು. ಪರಮಸುಹೃತ್ತಿನ ಉದಾರಭಾವ ಎಂತಾದ್ದೆಂದರೆ ಮಿತ್ರನಿಗೆ ತನ್ನ ಸರ್ವ ಸ್ವವನ್ನೂ ಕೊಡುವದೇ. ಇದನ್ನು ಭರ್ತೃಹರಿಯು (೬೭) ಬಹು ಸ್ವಾರಸ್ಯವಾಗಿ ಕ್ಷೀರೋದಕ ದೃಷ್ಟಾಂತದಿಂದ ಉಪಪಾದಿಸಿರುತ್ತಾರೆ. ನೀರು ಕ್ಷೀರವನ್ನು ಬಂದು ಸೇರಿದರೆ ಹೇಗೆ ತನ್ನಲ್ಲಿದ್ದ ಸರ್ವಸ್ವವನ್ನೂ ಕ್ಷೀರವು ಉದಕಕ್ಕೆ ಕೊಡುತ್ತದೋ ಹಾಗೆಯೇ ಜೀವಾತ್ಮನು ಪರಮಾತ್ಮನನ್ನು ನಿತ್ಯವಿಭೂತಿಯಲ್ಲಿ ಹೋಗಿ ಸೇರಿದರೆ, ಆತನಿಗೆ **"ಪರಮಂ ಸಾಮ್ಯಮುಪೈತಿ"** ಎಂಬ ಶ್ರುತಿಯು ಉಪಪಾದಿಸುವ ಹಾಗೆ ಸರ್ವಸ್ವವನ್ನೂ ಕೊಡುವನು ಎಂದರೆ ತನ್ನ ಆನಂದಕ್ಕೆ ಸರಿಯಾದ ಆನಂದವನ್ನುಂಟುಮಾಡುವನು. ಅದೂ ಅಲ್ಲದೆ ತನ್ನನ್ನೂ ಸಹ ಪ್ರಪನ್ನನಿಗೆ ಕೊಡುವನು ಎಂಬ ಭಾವವು. ಈ ಭಾವವು ಈ ಮುಂದಿನ ಭಾಗವತ ಶ್ಲೋಕದಲ್ಲಿ ಅಕ್ರೂರವಾಕ್ಯದಿಂದ ವ್ಯಕ್ತವು. **"ಸರ್ವಾನ್ ದದಾತಿಹಿ ಭವಾನ್ ಭಜತೋಭಿಕಾಮಾನ್ ಆತ್ಮಾನಮಪ್ಯುಪಚಯಾಪಚಯೌ ನಯಸ್ಯ"**(ಭಾಗ ೧೦-೪೮-೨೭) ನಿತ್ಯನೈಮಿತ್ತಿಕಾದಿ ಆಜ್ಞಾ ಕೈಂಕರ್ಯಗಳನ್ನೆಸಗುತ್ತಾ ನಿನ್ನನ್ನು ಆಶ್ರಯಿಸಿದ ಪ್ರಪನ್ನರಿಗೆ ಸರ್ವಾಭೀಷ್ಟಗಳನ್ನೂ ನೀನು ಕೊಡುತ್ತೀಯೆ, ಯಾವ ನಿನಗೆ ವೃದ್ಧಿ ಹ್ರಾಸ ಮೊದಲಾದ ಪರಿಣಾಮಗಳಿಲ್ಲದೆ ನಿರ್ವಿಕಾರನಾಗಿದ್ದೀಯೋ ಅಂತಹ ಚಿದ ಚಿದ್ವಿಲಕ್ಷಣನಾದ ನಿನ್ನನ್ನೂ ಸಹ ಅವರಿಗೆ ಕೊಡುತ್ತೀಯೆ ಎಂದರೆ ನಿನ್ನ ಸಾಯುಜ್ಯವನ್ನೂ ದಯಪಾಲಿಸುತ್ತೀಯೋ, ಪರಿಪೂರ್ಣ ಬ್ರಹ್ಮಾನುಭವವನ್ನು ಈಯುತ್ತೀಯೋ ಎಂಬ ತಾತ್ಪರ್ಯವು. ಇಂತಹ ಉದಾರಭಾವವು ನಿನ್ನದು ಎಂಬುದು ಫಲಿತವು. ಇದೇ ಸರ್ವಸ್ವದಾನವು ಎಂದು ಇಲ್ಲಿ ಹೇಳಲ್ಪಟ್ಟಿತು.

ಮುಂದೆ ಉದಾರತ್ವದ ಪ್ರಯೋಜನವನ್ನು ಉಪಪಾದಿಸುತ್ತಾರೆ.—**ಇದು**-ಈ ಪರಮೋದಾರತ್ವವು, **ದಧಿಭಾಂಡಾದಿಗಳ್ಳೈಪ್ಪೋಲೆ ಹಠಾತ್ಕಾರಂ ಪಣ್ಣಿಯುಂ**-ದಧಿಭಾಂಡರೆಂಬ ಗೋಪರೇ ಮೊದಲಾದವರುಗಳ ಹಾಗೆ ಬಲಾತ್ಕಾರವನ್ನು ಮಾಡಿ, **ಅನುಬಂಧಿಪರ್ಯಂತಮಾಹ**-ತಮಗೆ ಸೇರಿದವರ ಪರ್ಯಂತವಾಗಿ, **ಪರಮಪುರುಷಾರ್ಥತ್ತೈ**-ಮೋಕ್ಷವನ್ನು, **ಅಪೇಕ್ಷಿಕ್ಕೈಕ್ಕುರುಪ್ಪಾಮ್**-ಅಪೇಕ್ಷಿಸುವದಕ್ಕೆ ಸಾಧನವಾಗುತ್ತದೆ. ಇಲ್ಲಿನ ವೃತ್ತಾಂತವೇನೆಂದರೆ—ಒಬ್ಬ ಗೋಪಾಲನಮನೆಗೆ ಶ್ರೀಕೃಷ್ಣ ಭಗವಾನ್‌ರವರು ಬಂದರು ; ಆ ಕಾಲದಲ್ಲಿ ಆತನು ತಮಗೆ ದೇಹಾನುಬಂಧಿಯಾದ ದಧಿಭಾಂಡವರಿಗೂ ಮೋಕ್ಷಪ್ರಾಪ್ತಿಯುಂಟಾಗ ಬೇಕೆಂದು ನಿರ್ಬಂಧಿಸಿ ಪಡೆದರೆಂಬ ಇತಿಹಾಸ ಉಂಟು. ಇದು ಸ್ವಾಮಿಯ **ಉದಾರಭಾವದ ನಿದರ್ಶನವು. ಈ ವಾಕ್ಯದ ಆದಿಪದದಿಂದ ಧ್ರುವನು ತನ್ನ**

**ಇಪ್ಪಡಿ ಮತ್ತುಮ್ ಶರಣ್ಯತ್ವೈಕ್ಕು ಉಪಯುಕ್ತಮಾನ ಗುಣಙ್ಗಳೈಯುಮ್, ಅವತ್ತಿನುಡೈಯ ಉಪಯೋಗ ವಿಶೇಷಙ್ಗಳೈಯುಮ್ ಇಙ್ಗೇ ಅನುಸಂಧಿತ್ತುಕೊಳ್ವದು.**

---

ತಾಯಿಗೆ ಮೋಕ್ಷ ಬೇಕೆಂದು ಪ್ರಾರ್ಥಿಸಿದುದೂ, ಪ್ರಹ್ಲಾದನು ತನ್ನ ತಂದೆಗೆ ಪ್ರಾಪ್ತವಾದ ಸ್ವಾಮಿಯನ್ನು ನಿಂದಿಸಿದ ಮಹಾಪರಾಧಗಳಿಂದ ಪವಿತ್ರತೆಯನ್ನು **"ತಸ್ಮಾತ್ಪಿತಾಮೇ ಪೂಯೇತ ದುರನ್ತಾದ್ದುಸ್ತರಾದಘಾತ್"** ಎಂದು (ಭಾಗ ೭-೧೦-೧೬) ಯಾಚಿಸಿದುದೂ, ಘಂಟಾಕರ್ಣನು ತನ್ನ ತಮ್ಮನಿಗೆ ಮೋಕ್ಷವನ್ನು ಬೇಡಿದುದೂ, ಸಂಗ್ರಹಿಸಲ್ಪಟ್ಟವು. ಹಾಗೆಯೇ ಈ ಉದಾರಭಾವದಿಂದ **ಮಾಂಮದೀಯಂಚ**, ಎಂಬಲ್ಲಿ ಹೇಳಿರುವಹಾಗೆ ಪ್ರಪನ್ನನ ಸಂಬಂಧಿಗಳೂ ಸಹ ಸ್ವಾಮ್ಯನುಗ್ರಹಕ್ಕೆ ಪಾತ್ರರಾಗುವರು ; ಆದುದರಿಂದ ಅಂತಹ ಆತನ ಪತ್ನೀಸುತರೇ ಮೊದಲಾದವರಿಗೂ ಮೋಕ್ಷಪ್ರಾಪ್ತಿಯನ್ನು ಬೇಡಲು ಈ ಉದಾರತ್ವವು ಸಹಕಾರಿಯಾಗುತ್ತದೆಂಬ ಭಾವವು.

ಮುಂದಿನ ಮೂರು ವಾಕ್ಯಗಳಿಂದ **ನಾರಾಯಣ** ಶಬ್ದದಿಂದ ಅನುಸಂಧಾನ ಮಾಡತಕ್ಕದ್ದನ್ನು ನಿಗಮನಮಾಡಿ ಹೇಳುತ್ತಾರೆ.—ಈಗ ನಾರಾಯಣ ಶಬ್ದದಲ್ಲಿ ತೋರುವ ೧೨ ಮುಖ್ಯವಾದ ಗುಣಗಳನ್ನು ಅನುಸಂಧಾನ ಮಾಡತಕ್ಕದ್ದೆಂದು ಉಪದೇಶಿಸಿ, ಅವುಗಳಿಂದ ಪ್ರಪನ್ನನಿಗೆ ಆಗುವ ಪ್ರಯೋಜನಗಳನ್ನು ಉಪಪಾದಿಸಿ ಹೇಳಿದರು. ಆದರೆ ನಾರಾಯಣ ಶಬ್ದದಿಂದ ಸಮಸ್ತ ಕಲ್ಯಾಣಗುಣಗಳೂ ತೋರಿಬರುವಾಗ ಈ ೧೨ ಗುಣಗಳನ್ನು ಮಾತ್ರ ಹೇಳಿದುದು ಹೇಗೆ? ಎಂದರೆ ಅವು ಮುಖ್ಯವಾಗಿ ಅನುಸಂಧೇಯಗಳಾಗಿ ಹೇಳಲ್ಪಟ್ಟವು. ಇನ್ನೂ ಹೆಚ್ಚು ವಿಷಯವನ್ನು ಗ್ರಹಿಸಲು ಇಚ್ಛೆಯುಳ್ಳವರು ಮಿಕ್ಕ ಗುಣಗಳನ್ನೂ ಅವುಗಳ ಉಪಯೋಗಗಳನ್ನೂ ತಾವೇ ಅನುಸಂಧಾನಮಾಡಬಹುದೆಂದು ಹೇಳುತ್ತಾರೆ.—**ಇಪ್ಪಡಿ**-ಹೀಗೆ ನಾವೀಗ ಉಪದೇಶಿಸಿದ ೧೨ ಗುಣಗಳನ್ನೂ, **ಮತ್ತುಂ**-ಇವಲ್ಲದೆ ಇತರಗಳಿಂದ, **ಶರಣ್ಯತ್ವೈಕ್ಕು**-ಶ್ರೀಮನ್ನಾರಾಯಣನು ಶರಣ್ಯನಾಗಿರುವದಕ್ಕೆ, **ಉಪಯುಕ್ತಗಳಾದ ಗುಣಗಳನ್ನೂ,** ಮಾರ್ದವಾರ್ಜವಾದಿ ಗುಣಗಳನ್ನೂ, **ಅವತ್ತಿನುಡೈಯ**-ಆ ಗುಣಗಳ, **ಉಪಯೋಗವಿಶೇಷಂಗಳೈಯುಂ**-ಪ್ರಯೋಜನಗಳನ್ನೂ, **ಇಙ್ಗೇ**-ಈ ನಾರಾಯಣ ಶಬ್ದದಲ್ಲಿ, ಅನುಸಂಧಾನ ಮಾಡಿಕೊಳ್ಳತಕ್ಕದ್ದು.

ಈ ದ್ವಯಮನ್ತ್ರದಲ್ಲಿ ನಾರಾಯಣ ಶಬ್ದವು ಪೂರ್ವಖಂಡ ಮತ್ತು ಉತ್ತರಖಂಡವೆರಡರಲ್ಲೂ ಉಂಟು. ಈ ಮೋಕ್ಷಾರ್ಥಿಯ ಧರ್ಮಭೂತಜ್ಞಾನವು ಸಂಕುಚಿತವಾದುದರಿಂದ ಪರಮಪುರುಷನಾದ ಪ್ರಾಪ್ಯನ, ಸಮಸ್ತ ಕಲ್ಯಾಣಗುಣ

## ಉತ್ತರಖಂಡಸ್ಥ ನಾರಾಯಣಶಬ್ದೇ ಅನುಸಂಧೇಯ ಗುಣಾಃ

**ಉಪಾಯಾನುಷ್ಠಾನದಶೈಯಿಲವ್ವೋವಿದ್ಯೈಗಳುಕ್ಕಡೈತ್ತ ಕತಿಪಯ ಗುಣವಿಶಿಷ್ಟನ್ ಅನುಸಂಧೇಯನಾಯ್, ಪ್ರಾಪ್ತಿದಶೈಯಿಲ್ ಸಮಸ್ತಗುಣ**

ಗಳನ್ನೂ ಅನುಸಂಧಾನಮಾಡುವದು ಸಾಧ್ಯವಲ್ಲವೆಂಪರಿತು ಮುಖ್ಯವಾಗಿ ೧೨ ಗುಣಗಳನ್ನು ಉಪಾಯದಶೆಯಲ್ಲಿ ಅನುಸಂಧಾನ ಮಾಡಬೇಕೆಂದೂ ಆ ಗುಣಗಳು ಹೇಗೆ ಉಪಯುಕ್ತವಾದವು ಎಂದೂ ಉಪದೇಶಿಸಿದರು. ಉಪೇಯದಶೆಯಲ್ಲಾದರೋ ಜ್ಞಾನಸಂಕೋಚವಿಲ್ಲದಿರುವದರಿಂದ ಸಮಸ್ತ ಕಲ್ಯಾಣಗುಣಗಳಿಂದ ಯುಕ್ತನಾಗಿರುವ ಭಾವವು ವೇದ್ಯವಾಗಬಹುದು ಈಗ ಉತ್ತರಖಂಡವು ಪ್ರಾಪ್ಯದಶೆಯನ್ನು ಬೋಧಿಸುವದರಿಂದ ಆ ಸಂದರ್ಭದಲ್ಲಿ ಯಾವ ಗುಣಗಳು ಅನುಸಂಧಾನಕ್ಕೆ ಪ್ರಧಾನತಮಗಳೆಂಬುದನ್ನು ಮುಂದೆ ಉಪದೇಶಿಸುತ್ತಾರೆ. ಇದರಿಂದ ಅವು ಉಪಾಯದಶೆಯಲ್ಲಿ ಪ್ರಯೋಜನವಾದವಲ್ಲವೆಂದು ಭಾವಿಸತಕ್ಕದ್ದಲ್ಲವು. ಇಂತಹ ಅನುಸಂಧಾನವು ಪ್ರಪತ್ತಿಗೆ ಅಂಗರೂಪದಲ್ಲಿ ಹೇಳಲ್ಪಡಲಿಲ್ಲವು ಪ್ರಪತ್ತಿಗೆ ಅಂಗಗಳು ಐದೆಂದು ಹಿಂದೆ ಪರಿಕರ ವಿಭಾಗಾಧಿಕಾರದಲ್ಲಿ ಹೇಳಲ್ಪಟ್ಟಿವೆ. ಇವುಗಳಲ್ಲದೆ ಇನ್ನು ಯಾವುವೂ ಅಂಗವಲ್ಲವೆಂದು **"ಪ್ರಪತ್ತೇಃ ಕ್ವಚಿದಪ್ಯೇವಂ ಪರಾಪೇಕ್ಷಾನ ವಿದ್ಯತೇ"** ಎಂಬಲ್ಲಿ ಹೇಳಲ್ಪಟ್ಟಿರುತ್ತದೆ. ಆದರೆ ಭಕ್ತ್ಯುಪಾಯದಲ್ಲಿ ದಹರವೈಶ್ವಾನರಾದಿ ವಿದ್ಯೆಗಳಲ್ಲಿ ಪರಮಪುರುಷನನ್ನು ಕೆಲವು ನಿಯತಗುಣ ವಿಶಿಷ್ಟನಾಗಿ ಉಪಾಸಿಸಬೇಕೆಂಬ ವಿಧಿ ಇರುವದರಿಂದ ಅವುಗಳ ಅನುಸಂಧಾನವು ಅಂಗವು. ಪ್ರಪತ್ತಿಯ ವಿಷಯದಲ್ಲಾದರೋ ಹಾಗಲ್ಲವು. ಆದರೆ ಈ ಗುಣಗಳ ಅನುಸಂಧಾನವು ತಾನು ಮಾಡುವ ಉಪಾಯಾನುಷ್ಠಾನದ ಮಾಹಾತ್ಮ್ಯೆಯ ಜ್ಞಾನಕ್ಕಾಗಿ ಎಂಬ ಭಾವವು. ಪ್ರಪದನಾನುಷ್ಠಾನವಾದ ನಂತರವೂ ಅವುಗಳ ಅನುಸಂಧಾನವು ತಾನು ಅನುಷ್ಠಿಸಿ ಕೃತಕೃತ್ಯನೆಂಬ ದಾರ್ಢ್ಯವನ್ನುಂಟುಮಾಡುವದಕ್ಕೂ ಸಹಕಾರಿಯು ಎಂದು ತಿಳಿಯತಕ್ಕದ್ದು.

ಉತ್ತರಖಂಡದ ನಾರಾಯಣ ಶಬ್ದದಲ್ಲಿ ಅನುಸಂಧೇಯ ಗುಣಗಳು.

**ಉಪಾಯಾನುಷ್ಠಾನದಶೈಯಿಲ್**-ದ್ವಯದ ಪೂರ್ವಖಂಡದಲ್ಲಿ ಬೋಧಿತವಾದ ಉಪಾಯವನ್ನು ಅನುಷ್ಠಿಸುವ ದೆಶೆಯಲ್ಲಿ, **ಅವ್ವೋವಿದ್ಯೈಗಳುಕ್ಕಡೈತ್ತ**-ಭಕ್ತ್ಯುಪಾಯವಲ್ಲಿ ದಹರ ವೈಶ್ವಾನರ ಶಾಂಡಿಲ್ಯ ಭೂಮ ವಿದ್ಯಾದಿ ಬ್ರಹ್ಮವಿದ್ಯೆಗಳಿಗೆ ವಿಧಿಸಲ್ಪಟ್ಟ, **ಕತಿಪಯಗುಣವಿಶಿಷ್ಟನ್**-ಆ ವಿದ್ಯೆಗಳಿಗೆ ಅಂಗರೂಪದಲ್ಲಿ ಆವಶ್ಯಕವಾದ ಕೆಲವು ಕಲ್ಯಾಣಗುಣಗಳಿಂದ ಕೂಡಿದವನನ್ನಾಗಿ, **ಅನುಸಂಧೇಯನಾಯ್** - ಅನುಸಂಧಾನಮಾಡಲ್ಪಟ್ಟವನಾಗಿ, **ಪ್ರಾಪ್ತಿದಶೈಯಿಲ್**-ಉತ್ತರ

**ವಿಭೂತಿವಿಶಿಷ್ಟ್ಯ ಅನುಭಾವ್ಯನಾನಾಲುಮ್, ಇಙ್ಙು ಉತ್ತರಖಂಡತ್ತಿಲ್ ನಾರಾಯಣಶಬ್ದತ್ತುಕ್ಕು ಸ್ವರೂಪಕೃತಮಾಯುಮ್, ಗುಣಕೃತಮಾಯುಮ್, ವರುಮ್ ಕೈಂಕರ್ಯಪ್ರತಿಸಂಬಂಧಿತ್ವತ್ತಿಲೇ ನೋಕ್ಕಾನಪಡಿಯಾಲೇ, ಅದುಕ್ಕು ಉಪಯುಕ್ತಙ್ಗಳಾನ ಶೇಷಿತ್ವ ನಿರತಿಶಯ ಭೋಗ್ಯತ್ವಾದಿಗಳ ಪ್ರಧಾನತಮಙ್ಗಳ್.**

ಖಂಡದಿಂದ ಬೋಧಿತವಾದ ಪ್ರಾಪ್ತಿದೆಶೆಯಲ್ಲಿ, **ಸಮಸ್ತಗುಣವಿಭೂತಿವಿಶಿಷ್ಟ್ಯ**-ಸಮಸ್ತ ಕಲ್ಯಾಣಗುಣಗಳಿಂದಲೂ ಮತ್ತು ವಿಭೂತಿಯಿಂದಲೂ ಕೂಡಿರುವವನನ್ನಾಗಿ, **ಅನುಭಾವ್ಯನಾನಾಲುಮ್**-ಭಾವಿಸಲ್ಪಡುವನೆಂಬುದು ಉಚಿತವಾದರೂ ಉಪಾಯದೆಶೆಯಲ್ಲಿ ಕತಿಪಯಗುಣವಿಶಿಷ್ಟನಾಗಿಯೂ, ಉಪೇಯ ದೆಶೆಯಲ್ಲಿ ಸಮಸ್ತಗುಣವಿಭೂತಿವಿಶಿಷ್ಟನಾಗಿಯೂ ಹೀಗೆ ಅನುಭಾವ್ಯತ್ವದಲ್ಲಿ ವ್ಯತ್ಯಾಸವೇಕೆಂದರೆ—ಉಪಾಯದೆಶೆಯಲ್ಲಿ ಜ್ಞಾನಸಂಕೋಚವೂ, ಪ್ರಾಪ್ಯದೆಶೆಯಲ್ಲಿ ಜ್ಞಾನವಿಕಾಸವೂ ಇರುವದರಿಂದ ಎಂದು ತಿಳಿಯತಕ್ಕದ್ದು ; **ಅವ್ವೋವಿದ್ಯೈಙ್ಗಳಕ್ಕಡೈತ್ತ** ಎಂಬುದರಿಂದ ಆ ಕತಿಪಯ ಗುಣವಿಶಿಷ್ಟನಾಗಿರುವ ಅನುಸಂಧಾನವು ಉಪಾಸನಕ್ಕೆ ಅಂಗವಾಗಿ ಆವಶ್ಯಕವು ; ಪ್ರಪತ್ತಿಗಾದರೋ ಅಂಗವಲ್ಲವು, ಆದರೆ ಆಶ್ರಿತೋಪಯುಕ್ತಗುಣಗಳ ಅನುಸಂಧಾನದಲ್ಲಿ ಪ್ರಯೋಜನವಿರುವದರಿಂದ ಅವುಗಳ ಅನುಸಂಧಾನವು ಸತ್ತ್ವಾದಾಯಕವು ಎಂದು ತಿಳಿಯತಕ್ಕದ್ದು; ಮುಂದೆ ಉತ್ತರಖಂಡದ ನಾರಾಯಣ ಶಬ್ದದಲ್ಲಿ ಮುಖ್ಯವಾಗಿ ಅನುಸಂಧಾನ ಮಾಡತಕ್ಕ ಗುಣಗಳು ಯಾವುವೆಂಬುದನ್ನು ತಿಳಿಸುತ್ತಾರೆ.—**ಇಙ್ಙು**-ಈ ದ್ವಯಮಂತ್ರದ ಮೂಲದ ಉಪಾಯಾನುಷ್ಠಾನ ಮಾಡುವ ವೇಳೆಯಲ್ಲಿ, **ಉತ್ತರಖಂಡದಲ್ಲಿ, ನಾರಾಯಣಶಬ್ದತ್ತುಕ್ಕು**- ನಾರಾಯಣಶಬ್ದಕ್ಕೆ, **ಸ್ವರೂಪಕೃತಮಾಯುಮ್**-"ಪತಿಂ ವಿಶ್ವಸ್ಯ" ಎಂದು ಶ್ರುತಿಯಲ್ಲಿ ತೋರಿಬರುವ ಸರ್ವಕ್ಕೂ ಸ್ವಾಮಿಯಾಗಿ ಇರುವ ಸ್ವರೂಪಮೂಲಕವಾಗಿಯೂ, **ಗುಣಕೃತಮಾಯುಮ್**-ಲೀಲಾವಿಭೂತಿಯಲ್ಲಿ ರಸಿಕನಾಗಿರುವ ಸ್ವಭಾವಮೂಲಕವಾಗಿಯೂ, **ವರುಮ್**-ಉಂಟಾಗುವ, **ಕೈಂಕರ್ಯ ಪ್ರತಿಸಂಬಂಧತ್ತಿಲೇ ನೋಕ್ಕಾನಪಡಿಯಾಲೇ**-ಉಪಾಯಾನುಷ್ಠಾನ ಮಾಡುವವನ ಕೈಂಕರ್ಯಕ್ಕೆ ಸಂಬಂಧಿಸಿದವೆಂದು ಹೇಳುವದೇ ಮುಖ್ಯಾಭಿಪ್ರಾಯವಾದುದರಿಂದ, **ನೋಕ್ಕು** ಎಂದರೆ ಮುಖ್ಯತಾತ್ಪರ್ಯ, **ಅದುಕ್ಕು ಉಪಯುಕ್ತಙ್ಗಳಾನ**-ಆ ಅಭಿಪ್ರಾಯಕ್ಕೆ ಪ್ರಯೋಜನರೂಪವಾದ, **ಶೇಷಿತ್ವನಿರತಿಶಯ ಭೋಗ್ಯತ್ವಾದಿಗಳ್**-ಕ್ರಮವಾಗಿ ಸ್ವರೂಪಮೂಲಕ ಉಂಟಾಗುವ ಭಾವನೆಯು ಶೇಷಿತ್ವವು, ಸ್ವಭಾವತಃ ಉಂಟಾಗುವದು ನಿರತಿಶಯವಾದ ಭೋಗ್ಯತ್ವವು, **ಪ್ರಧಾನತಮಙ್ಗಳ್**-ಅತ್ಯಂತ ಮುಖ್ಯವಾದುವು. ಆದಿ ಶಬ್ದದಿಂದ ದಿವ್ಯಮಂಗಳವಿಗ್ರಹಾದಿಗಳು ಹೇಳಲ್ಪಟ್ಟವೆಂದು ಸಾರದೀಪಿಕೆ ಸಾರಾಸ್ವಾದಿನಿಯವರೂ, ಮಾಧುರ್ಯ ಗಾಂಭೀರ್ಯಾದಿಗಳು ಹೇಳಲ್ಪಟ್ಟವೆಂದು ಸಾರಪ್ರಕಾಶವಿವರಣೆಯವರೂ ಬರೆದಿರುತ್ತಾರೆ. **ಈ ವಾಕ್ಯ**

**ಇಜ್ಜು ಸಂಬಂಧವಿಶೇಷಾದಿ ಮುಖತ್ತಾಲೇ ಅನುಕೂಲ್ಯ ಸಂಕಲ್ಪ** ತಾತ್ಪರ್ಯವು ಇಷ್ಟೇ—ಉಪಾಯಾನುಷ್ಠಾನವನ್ನು ಮಾಡುವವನಿಗೆ **ಉತ್ತರಖಂ**ಡವ ನಾರಾಯಣಶಬ್ದದಲ್ಲಿ ಅನುಸಂಧೇಯಗುಣಗಳು ಯಾವುವು ಎಂದರೆ ಮುಖ್ಯವಾಗಿ ಶೇಷಿತ್ವವೂ, ನಿರತಿಶಯ ಭೋಗ್ಯತ್ವವೂ ಎಂದು ಉಪದೇಶಿಸಿದರು. ಉತ್ತರಖಂಡದಲ್ಲಿ ನಾರಾಯಣ ಶಬ್ದವು ಚತುರ್ಥಿಯಿಂದ ಕೂಡಿ **ನಾರಾಯಣಾಯ** ಎಂದಿರುತ್ತದೆ. ಚತುರ್ಥಿಯು ಶೇಷಿಗೆ ಮಾಡುವ ಕೈಂಕರ್ಯವನ್ನು ಬೋಧಿಸುವದರಿಂದ ಕೈಙ್ಕರ್ಯಪ್ರತಿಸಂಬಂಧತ್ವತ್ತಿಲೇ ನೋಕ್ಕಾನಪಡಿಯಾಲೇ ಎಂಬ ಪ್ರಯೋಗವು ಈ ಮೋಕ್ಷಾರ್ಥಿಯು ದಾಸಭೂತನಾಗಿ ಶೇಷನಾಗಿ, ಸರ್ವೇಶ್ವರನು ಶೇಷಿಯಾಗಿರುವದರಿಂದ ಸ್ವರೂಪತಃ ಪ್ರಾಪ್ತವಾದುದು ಶೇಷಿತ್ವವು. ಶೇಷನು ಮಾಡುವ ಕೈಂಕರ್ಯವೆಲ್ಲಾ ಶೇಷಿಗೆ ಭೋಗ್ಯವಾಗಿರುವದಕ್ಕಾಗಿಯೇ ಆದುದರಿಂದ ನಿರತಿಶಯ ಭೋಗ್ಯತ್ವವು ವ್ಯಕ್ತವು; ಆದುದರಿಂದ ಇವೆರಡೂ **ಪ್ರಧಾನತಮಂಗಳ್** ಎಂದು ಹೇಳಲ್ಪಟ್ಟವು. ಉತ್ತರಖಂಡದ **ನಾರಾಯಣಾಯ** ಎಂಬ ಪದದಲ್ಲಿ ಪರಮಾತ್ಮನ ಶೇಷಿತ್ವ, ನಿರತಿಶಯ ಭೋಗ್ಯತ್ವಗಳು ಅನುಸಂಧೇಯಗಳೆಂದು ಹೇಳಲ್ಪಟ್ಟವು. ಇಂತಹ ಪರಮಪುರುಷನೇ ತಾನು ಮಾಡುವ ಕೈಂಕರ್ಯಕ್ಕೆ ಅರ್ಹನು ಎಂಬುದನ್ನು ಈ ಅನುಸಂಧಾನವು ಸ್ಥಾಪಿಸುತ್ತದೆ.

ಮೇಲಿನ ವಾಕ್ಯದಲ್ಲಿರುವ ಸ್ವರೂಪಕೃತಮಾಯುಮ್ ಎಂಬುದರಲ್ಲಿ ಯಾರ ಸ್ವರೂಪಗುಣವೆಂಬುದು ವ್ಯಕ್ತವಲ್ಲವು; ಹಿಂದೆ **"ನಾರಾಯಣ ಶಬ್ದತ್ತುಕ್ಕು"** ಎಂದಿರುವದರಿಂದ ಕೆಲವರು ನಾರಾಯಣನ ಸ್ವರೂಪಗುಣಗಳೆಂದು ಅರ್ಥಮಾಡಿದರು. ಆದರೆ ಸಾರಸಂಗ್ರಹ ವ್ಯಾಖ್ಯಾತೃವು ಬೇರೇ ವಿಧವಾಗಿ ಆಶ್ರಯಿಸುವ ಕಿಂಕರನ ಸ್ವರೂಪ ಸ್ವಭಾವಗಳೆಂದು ಅರ್ಥಮಾಡಿರುತ್ತಾರೆ. ಎರಡು ವಿಧ ವ್ಯಾಖ್ಯಾನಗಳಲ್ಲೂ ತಾತ್ಪರ್ಯವೇನೋ ಒಂದೆಯೇ.

ಹೀಗೆ ಈ ಶೇಷಿತ್ವ ನಿರತಿಶಯ ಭೋಗ್ಯತ್ವಾದಿಗಳ ಅನುಸಂಧಾನದಿಂದುಂಟಾಗುವ ಪ್ರಯೋಜನವೇನೆಂದರೆ—ದಾಸನಾದ ತಾನು ಮಾಡುವ ಕೈಂಕರ್ಯಕ್ಕೆ ಪ್ರತಿಸಂಬಂಧತ್ವವು ಎಲ್ಲಿ ಎಂದರೆ ಶ್ರಿಯಃಪತಿಯಲ್ಲೇ, ಇನ್ನು ಯಾರಲ್ಲೂ ಇಲ್ಲವೆಂಬ ಜ್ಞಾನವು ಲಭಿಸುತ್ತದೆ.

ಮುಂದೆ ಈ **ನಾರಾಯಣ** ಪದದಿಂದ ಪ್ರಾಸಂಗಿಕವಾಗಿ ಆನುಕೂಲ್ಯ ಸಂಕಲ್ಪಾದಿ ಪರಿಕರಗಳೂ ಬೋಧಿತವೆಂದು ಹಿಂದೆ ಹೇಳಿದುದನ್ನು ಜ್ಞಾಪಿಸುತ್ತಾರೆ. ಉತ್ತರಖಂಡದ ನಾರಾಯಣ ಶಬ್ದದಿಂದ ಶೇಷ ಶೇಷಿತ್ವ ಸಂಬಂಧದ ಜ್ಞಾನವು ಬೋಧಿತವೆಂದು ಹೇಳಿದುದರಿಂದ, ಈ ಸಂಬಂಧ ಜ್ಞಾನದಿಂದ ಪ್ರಪತ್ತಿಪರಿಕರಗಳೂ ಹಿಂದೆಯೇ ಸೂಚಿತವು ಎಂದು ತಿಳಿಸುತ್ತಾರೆ.—**ಇಜ್ಜು**-ಈ ನಾರಾಯಣ ಶಬ್ದದಲ್ಲಿ, **ಸಂಬಂಧವಿಶೇಷಾದಿ ಮುಖತ್ತಾಲೇ**-ಸ್ವಸ್ವಾಮಿಭಾವ, ಶೇಷಶೇಷಿ

**ಮುಮ್ ಪ್ರಾತಿಕೂಲ್ಯವರ್ಜನಮುಮ್ ಸೂಚಿತಮಾನಪಡಿ ಅಧಿಕಾರಾಂತ ರತ್ತಿಲೇ ಶೊನ್ನೋಮ್.**

**ಚರಣ ಶಬ್ದಾರ್ಥಃ**

**ಇವ್ವಿಡತ್ತಿಲ್, "ಶ್ರೀಮನ್ನಾರಾಯಣ ಚರಣೌ" ಎನ್ರು ಸಮಸ್ತವಾಗ**

ಭಾವ ಸಂಬಂಧ ವಿಶೇಷದ ಮೂಲಕವಾಗಿ, **ಅನುಕೂಲ್ಯಸಂಕಲ್ಪವೂ, ಪ್ರಾತಿಕೂಲ್ಯವರ್ಜನವೂ, ಸೂಚಿತಮಾನಪಡಿ**-ಸೂಚಿಸಲ್ಪಟ್ಟವೆಂದು, **ಅಧಿಕಾರಾಂತರತ್ತಿಲೇ** - ಹಿಂದೆ ಬೇರೆ ಅಧಿಕಾರದಲ್ಲಿ ಎಂದರೆ ಪರಿಕರವಿಭಾಗಾಧಿಕಾರದಲ್ಲಿ (೧೦೧೦-೧೧ ನೆಯ ಪುಟಗಳನ್ನು ನೋಡಿ) **ಶೊನ್ನೋಮ್**-ಹೇಳಿರುವೆವು. ಅಲ್ಲಿ ಹೇಳಿರುವ ವಾಕ್ಯವು ಯಾವುದೆಂದರೆ—**"ಶೇಷಿಯನುಡೈಯ ಆಕಾರಂಗಳೈ ಪ್ಪೊದಿನ್ದುಕ್ಕೊಂಡಿರುಕ್ಕಿರ ಶ್ರೀಮಚ್ಛಬ್ದತ್ತಿಲುಮ್ ನಾರಾಯಣ ಶಬ್ದತ್ತಿಲುಮ್ ಅರ್ಥಮಾಹ ಅನುಕೂಲ್ಯ ಸಂಕಲ್ಪಮುಮ್, ಪ್ರಾತಿಕೂಲ್ಯ ವರ್ಜನಮುಮ್ ಅನುಸಂಧೇಯಮಾಹಕ್ಕಡವದು"** ಎಂಬುದು. ಮುಂದೆ ಅದೇ ಅಧಿಕಾರದಲ್ಲೇ ದ್ವಯಮನ್ತ್ರದಲ್ಲಿ ಇತರ ಪರಿಕರಗಳು ತೋರಿಬರುವ ಸ್ಥಲಗಳನ್ನು ಪ್ರದರ್ಶಿಸಿರುತ್ತಾರೆ. (ಪುಟ ೧೦೩೨)

ಹೀಗೆ ದ್ವಯಮನ್ತ್ರದ **ಶ್ರೀಮತ್** ಮತ್ತು **ನಾರಾಯಣ** ಎಂಬೆರಡು ಪದಗಳಅರ್ಥವಿವರಣವು ಬೋಧ್ಯವು. ಮುಂದೆ **ಚರಣ** ಶಬ್ದಾರ್ಥವನ್ನು ಉಪಪಾದಿಸುವರಾಗಿ, ತತ್ಪೂರ್ವಭಾವಿಯಾಗಿ, **ಶ್ರೀಮನ್ನಾರಾಯಣ ಚರಣೌ** ಎಂಬುದೇನು ಸಮಾಸಪದವೇ ಅಥವಾ ಹೇ ಶ್ರೀಮನ್ನಾರಾಯಣ ಚರಣೌ ಎಂದರೆ (ತವ) ಚರಣೌ ಎಂಬದಾಗಿ ಎರಡು ವ್ಯಸ್ತಪದಗಳೇ? ಅಥವಾ ಹೇ ಶ್ರೀಮನ್, ಹೇ ನಾರಾಯಣ (ತವ) ಚರಣೌ ಎಂದು ಮೂರುಪದವೇ? ಎಂಬ ವಿಷಯವನ್ನು ಚರ್ಚಿಸುತ್ತಾರೆ.—ಹಾಗೆ ಚರ್ಚಿಸುವ ಸಂದರ್ಭದಲ್ಲಿ ವ್ಯಸ್ತಪದಗಳಾಗಿ, ಒಂದು ಶ್ರೀಮನ್ ಎಂಬ ಸಂಬೋಧನವಾಗಿ ವಿಶೇಷಣದಿಂದ ಸೇರಿದ ಚರಣೌ ಎಂಬುದನ್ನು ಕರ್ಮಪದವಾಗಿ ಭಾವಿಸುವದಕ್ಕೂ ಅನೇಕ ಪ್ರಮಾಣಗಳುಂಟು ಎಂದು ಅವುಗಳನ್ನು ಉದಾಹರಿಸಿ, ಎರಡುವಿಧ ಯೋಜನೆಗೂ ಶಬ್ದಮೂಲಕ ವ್ಯತ್ಯಾಸವೇ ವಿನಾ ಅರ್ಥವಾಗಿ ಎರಡೂ ಸಮಾನಾಭಿಪ್ರಾಯವುಳ್ಳವೆಂದು ಉಪಪಾದಿಸಿ, ಚರಣ ಶಬ್ದಾರ್ಥದ ಉಪನ್ಯಾಸವನ್ನು ಮಾಡುತ್ತಾರೆ.—**ಇವ್ವಿಡತ್ತಿಲ್**-ಈ ಸಂದರ್ಭದಲ್ಲಿ, **"ಶ್ರೀಮನ್ನಾರಾಯಣ ಚರಣೌ" ಎನ್ರು**-ಎಂಬದಾಗಿ **ಸಮಸ್ತವಾಗವುಂ**-ಒಂದೇಸಮಾಸಪದವನ್ನಾಗಿ, **ಯೋಜಿಪ್ಪರ್‌ಗಳ್**-ಅನ್ವಯಿಸುವರು. ಈ ಸಂದರ್ಭದಲ್ಲಿ, ಶ್ರೀಮತ್ ಮತ್ತು ನಾರಾಯಣ ಶಬ್ದಗಳಿಗೆ ಕರ್ಮಧಾರಯ ಸಮಾಸವಾಗಿಯೂ, ಶ್ರೀಮನ್ನಾರಾಯಣ ಮತ್ತು ಚರಣೌ ಶಬ್ದಗಳಿಗೆ ಷಷ್ಠಿ ತತ್ಪುರುಷ ಸಮಾಸವಾಗಿಯೂ ಭಾವನೆಯು. ಇದಕ್ಕೆ ಪ್ರಮಾಣವಾಗಿ, "ನವಾಕ್ಷರಂ ಪ್ರಥಮಂ

**ವುಮ್ ಯೋಜಿಪ್ಪರ್‌ಗಳ್ (೧) "ಕಮಲನಯನ ವಾಸುದೇವ ಭವಶರಣಮ್" ಎಞ್ಗಿರ ಪ್ರಯೋಗತ್ತೈಯುಮ್, (೨) "ತ್ವಮೇವೋಪಾಯ ಭೂತೋ ಮೇ ಭವ" ಎಞ್ಗಿರ ವಾಕ್ಯತ್ತೈಯುಮ್, (೩) "ಅಗಲಗಿಲ್ಲೇನ್" ಎಞ್ಗಿರ ಪಾಟ್ಟೈಯುಮ್, (೪) "ಅಕಿಂಚನೋಽನನ್ಯಗತಿಶ್ಶರಣ್ಯ" ಎಞ್ಗಿರ ಸ್ತೋತ್ರವಾಕ್ಯತ್ತೈಯುಮ್, (೫) "ಶ್ರೀಮನ್ನಾರಾಯಣ ಸ್ವಾಮಿನ್" ಇತ್ಯಾದಿ ಮನ್ತ್ರಾಂಶರಂಗಳೈಯುಮ್, ದ್ವಯವಿವರಣಮಾನ ಗದ್ಯತ್ತೈ**

ಪದಮ್" ಎಂದಿರುವದರಿಂದ ಒಂದೇ ಸಮಾಸಪದವೆಂಬುದು ಸಿದ್ಧವು. ಅದೂ ಅಲ್ಲದೆ ಅಂಗನ್ಯಾಸ ಕರನ್ಯಾಸದಲ್ಲಿ, **"ಶ್ರೀಮನ್ನಾರಾಯಣ ಚರಣೌ ಅಂಗುಷ್ಠಾಭ್ಯಾಂ ನಮಃ"** ಎಂದೂ, **ಶ್ರೀಮನ್ನಾರಾಯಣ ಚರಣೌ ಹೃದಯಾಯ ನಮಃ** ಎಂದೂ ಸಂಪ್ರದಾಯೋಕ್ತಿಯೂ ಇರುತ್ತದೆ. ದ್ವಯವು ಆರುಪದಗಳುಳ್ಳದ್ದೆಂದೂ, ಮೂರು ಪದಗಳು ಪೂರ್ವಖಂಡದಲ್ಲೂ ಮೂರು ಉತ್ತರಖಂಡದಲ್ಲೂ ಉಂಟೆಂದು ಹೇಳಲ್ಪಟ್ಟಿರುತ್ತದೆ. ಈ ಕಾರಣಗಳಿಂದ ಸಮಸ್ತಪದವಾಗಿ ಭಾವಿಸಬಹುದು.

ಮುಂದೆ ದ್ವಯಮನ್ತ್ರದ ವ್ಯಾಖ್ಯಾನವಾಗಿ ಮಹರ್ಷಿಯ ಉಕ್ತಿಯೂ, ಸಂಹಿತಾವಾಕ್ಯವೂ, ಆಳ್ವಾರಾಚಾರ್ಯರುಗಳ ದಿವ್ಯಸೂಕ್ತಿಗಳನ್ನು ಉದಾಹರಿಸಿ **ವ್ಯಸ್ತ** ಪದಗಳಾಗಿಯೂ ಭಾವಿಸಬಹುದೆಂದು ಹೇಳುತ್ತಾರೆ. **(೧) "ಕಮಲನಯನ ವಾಸುದೇವ, ಭವಶರಣಮ್" ಎಞ್ಗಿರ ಪ್ರಯೋಗತ್ತೈಯುಮ್**-ಎನ್ನುವ ಪ್ರಯೋಗವನ್ನೂ, ಇಲ್ಲಿ ಸಂಬೋಧನೆಯೊಂದಿಗೆ ಶರಣ್ಯನಾಗು ಎಂಬ ಪ್ರಾರ್ಥನೆ ಇರುತ್ತದೆ. ಇತರ ಉದಾಹರಣೆಗಳಲ್ಲೂ ಹಾಗೆಯೇ ಇರುತ್ತದೆ. **(೨) "ತ್ವಮೇವೋಪಾಯಭೂತೋಮೇ ಭವ"** "ನೀನೇ ನನಗೆ ಉಪಾಯಭೂತನಾಗಿ" ಇಲ್ಲಿಯೂ ಸಂಬೋಧನೆಯು ವ್ಯಕ್ತವು ; **ಎಞ್ಗಿರ ವಾಕ್ಯತ್ತೈಯುಮ್**-ಎಂಬುವ ವಾಕ್ಯವನ್ನೂ, **(೩) "ಅಗಲಕಿಲ್ಲೇನ್" ಎಞ್ಗಿರ ಪಾಟ್ಟೈಯುಮ್**-ಎನ್ನುವ ಪಾಶುರವನ್ನೂ, **(೪) "ಅಕಿಂಚನೋಽನನ್ಯಗತಿಶ್ಶರಣ್ಯ"**-ಓ ಶರಣ್ಯನೇ ನಾನು ಬೇರೆ ಗತಿಯಿಲ್ಲದವನಾದುದರಿಂದ ನಿನ್ನನ್ನು ಶರಣ ಹೊಂದಿರುತ್ತೇನೆ ಎಂದಿರುತ್ತದೆ, **ಎಞ್ಗಿರ ಸ್ತೋತ್ರವಾಕ್ಯತ್ತೈಯುಮ್**-ಎನ್ನುವ ಸ್ತೋತ್ರವಾಕ್ಯವನ್ನೂ, **(೫) "ಶ್ರೀಮನ್ನಾರಾಯಣ ಸ್ವಾಮಿನ್"** ಲಕ್ಷ್ಮೀಯುಕ್ತನಾದ ನಾರಾಯಣಸ್ವಾಮಿಯೇ **ಇತ್ಯಾದಿ ಮನ್ತ್ರಾನ್ತರಂಗಳೈಯುಮ್**-ಎಂಬಿವೇ ಮೊದಲಾದ ಬೇರೆ ಮನ್ತ್ರಗಳನ್ನೂ **ದ್ವಯವಿವರಣಮಾನಗದ್ಯತ್ತೈಯುಮ್**-ದ್ವಯಮನ್ತ್ರದ ವಿವರಣವಾದ ಶ್ರೀ ಯತಿವರ್ಯರು ಅನುಗ್ರಹಿಸಿದ ಶರಣಾಗತಿ ಗದ್ಯವನ್ನೂ, **ಪಾರ್**

(೧) ವಿ. ಪು. ೩-೭-೩೩. (೨) ಅಹಿ. ಸಂ. ೩೭-೩೧. (೩) ತಿರು. ೬-೧೦-೧೦. (೪) ಆಳ. ಸ್ತೋ. ೨೨. (೫)

**ಯಿುವಮ್, ಪಾರ್ತ್ತು, "ಶ್ರೀಮನ್, ನಾರಾಯಣ" ಎನ್ರಿರಣ್ಡು ಸಂಬುದ್ಧಿ ಗಳಾಕ್ಕಿ "ತವ" ಎನ್ರೊರುಪದತ್ತೈ ಅಧ್ಯಾಹರಿತ್ತುಮ್ ಯೋಜಿಪ್ಪರ್ ಗಳ್.**

**ತ್ತು**-ವಿಮರ್ಶಿಸಿನೋಡಿ, **"ಶ್ರೀಮನ್ ನಾರಾಯಣ" ಎನ್ರಿರಣ್ಡು ಸಂಬುದ್ಧಿ ಗಳಾಕ್ಕಿ**-ದ್ವಯದ ಆದಿಯಲ್ಲಿರುವ **ಶ್ರೀಮನ್** ಎಂಬ ಪದ ಮತ್ತು **ನಾರಾಯಣ** ಎಂಬ ಎರಡು ಪದಗಳನ್ನೂ ಎರಡು ಸಂಬೋಧನೆಗಳೆಂದು ಭಾವಿಸಿ, **"ತವ" ಎನ್ರೊರುಪದತ್ತೈ ಅಧ್ಯಾಹರಿತ್ತು**-ತವ ಎಂಬ ಒಂದು ಪದವನ್ನು ಅಧ್ಯಾಹಾರ ವೆಂದು ಭಾವಿಸಿ, **ಯೋಜಿಪ್ಪರ್ಗಳ್**- ಇನ್ನು ಕೆಲವರು ಅನ್ವಯಿಸುವರು. ಹೇಗೆಂದರೆ, **ಹೇ ಶ್ರೀಮನ್, ಹೇ ನಾರಾಯಣ, (ತವ) ಚರಣೌ ಶರಣಂ ಪ್ರಪದ್ಯೇ** ಎಂಬದಾಗಿ ಅನ್ವಯವು. ಮೇಲೆ ಉದಾಹರಿಸಿದ ಎಲ್ಲಾ ಪ್ರಮಾಣ ಗಳಲ್ಲೂ ಶರಣಾಗತಿಯನ್ನು ಅನುಷ್ಠಿಸುವಾಗ ಸಂಬೋಧನೆಯಿಂದ ಕೂಡಿದ ಅನು ಷ್ಠಾನವಿರುವದರಿಂದ ಈ ದ್ವಯಮನ್ತ್ರದಲ್ಲೂ, **ಶ್ರೀಮನ್ನಾರಾಯಣ** ಎಂದು ಎರಡು ಪದಗಳಿಂದಲೂ ಸಂಬೋಧಿಸಿ, **ಚರಣೌ ಶರಣಮಹಂ ಪ್ರಪದ್ಯೇ** ಎಂದು ಅನ್ವಯಿಸುತ್ತಾರೆಂಬ ಭಾವವು.

(೧) "ಕಮಲನಯನ" ಈ ವಿಷ್ಣುಪುರಾಣ ಶ್ಲೋಕವು ಹಿಂದೆ ೧೫೦೮ ನೆ ಪುಟದಲ್ಲಿ ವ್ಯಾಖ್ಯಾನಮಾಡಲ್ಪಟ್ಟಿರುತ್ತದೆ; ಪರಾಂಬರಿಸಬಹುದು. (೨) ಹಾಗೆ ಯೇ "ತ್ವಮೇವೋಪಾಯಭೂತೋ" ಎಂಬುದೂ ಹಿಂದೆಯೇ ೨೨೨೮ ನೆಯ ಪುಟ ದಲ್ಲೂ ೧೦೩೫ ನೆಯ ಪುಟದಲ್ಲೂ ಉಪಪಾದಿತವು. (೩) **"ಅಗಲಗಿಲ್ಲೇನ್"- ಈ** ದ್ವಯಾಧಿಕಾರದಲ್ಲೇ ಹಿಂದೆಯೇ ವ್ಯಾಖ್ಯಾನಮಾಡಲ್ಪಟ್ಟಿರುತ್ತದೆ. ೧೨೬೬ ನೆ ಪುಟವನ್ನೂ ನೋಡಿ; **ತಿರುವೇಂಗಡತ್ತಾನೇ** ಎಂದು ಸಂಬೋಧಿಸಿ **ಉನ್ನಡಿ ಕ್ಕೀಳಮರ್ನ್ದು ಪುಗನ್ದೇನೇ** ಎಂದು ಶರಣಾಗತ್ಯನುಷ್ಠಾನವಿರುತ್ತದೆ. (೪) "ಅಕಿಂಚನೋನನ್ಯಗತಿ" ಎಂಬ ಶ್ಲೋಕಾರ್ಥಕ್ಕೆ ೧೨೭೪-೫ ಪುಟಗಳಲ್ಲಿ **ನ ಧರ್ಮ ನಿಷ್ಠೋಸ್ಮಿ** ಎಂದಾರಂಭಿಸಿದ ಶ್ಲೋಕದ ಅರ್ಥವನ್ನು ನೋಡಿ. ಇಲ್ಲಿ ಶರಣ್ಯ ಎಂದು ಸಂಬೋಧಿಸಿ, **ಶರಣಂ ಪ್ರಪದ್ಯೇ** ಎಂದಿರುತ್ತದೆ. ದ್ವಯವಿವರಣ ಗದ್ಯ ವಾಕ್ಯದಲ್ಲಿ **"ಅಖಿಲಹೇಯಪ್ರತ್ಯನೀಕ ಕಲ್ಯಾಣೈಕತಾನ"** ಎಂದಾರಂಭಿಸಿ ಸುಮಾರು 40 ಸಂಬೋಧನೆಗಳನ್ನು ಪ್ರಯೋಗಿಸಿರುತ್ತಾರೆ. ಕೊನೆಯಲ್ಲಿ ಪ್ರಯೋ ಗವು **"ಶ್ರೀಮನ್ ನಾರಾಯಣ ಅಶರಣ್ಯಶರಣ್ಯ, ಅನನ್ಯಶರಣಃ ಶರಣಮಹಂ ಪ್ರಪದ್ಯೇ"** ಎಂದಿರುತ್ತದೆ. ಹೀಗೆ ಆಳ್ವಾರಾಚಾರ್ಯರುಗಳ ದಿವ್ಯಸೂಕ್ತಿಗಳಲ್ಲಿ ಸಂ ಬೋಧನೆಯೊಂದಿಗೆ ಶರಣಾಗತ್ಯನುಷ್ಠಾನವು ಇರುತ್ತದೆ. ಇದನ್ನನುಸರಿಸಿ ದ್ವಯ ಮನ್ತ್ರದಲ್ಲೂ ಹಾಗೆಯೇ ಭಾವಿಸಬಹುದೆಂಬ ತಾತ್ಪರ್ಯವು.

**ಇಪ್ಪಡಿ ವ್ಯಸ್ತಮಾನಾಲುಮ್, ಸಮಸ್ತಮಾನಾಲುಮ್ ವಿಶೇಷಣ ವಿಶೇಷ್ಯಂಗಳ್ ನಿರ್‍ಕ್ಕುಂ ನಿಲೈಕ್ಕು ವೈಷಮ್ಯಮಿಲ್ಲೈ. ಇನ್ನಿಲೈ ಪೂರ್ವೋತ್ತರ ಖಂಡಂಗಳಿಲು ಮೊಕ್ಕುಮ್.**

**"ಚರಣೌ" ಎಙ್ಗಿರ ಶಬ್ದಮ್ ನಿತ್ಯಮಾನ ದಿವ್ಯಮಂಗಳ ವಿಗ್ರಹತ್ತುಕ್ಕು ಉಪಲಕ್ಷಣಮ್.**

**ಇಪ್ಪಡಿ**-ಈ ಮೇಲೆ ಉಪಪಾದಿಸಿದ ರೀತಿಯಲ್ಲಿ, **ವ್ಯಸ್ತಮಾನಾಲುಮ್ ಸಮಸ್ತಮಾನಾಲುಮ್**-ಸಮಾಸಪದವಲ್ಲದೆ ಬೇರೆಬೇರೆ ಮೂರು ಪದಗಳಾಗಿ ಭಾವಿಸಿದರೂ ಅಥವಾ ಸಮಸ್ತಪದವಾಗಿ ಭಾವಿಸಿದರೂ ವ್ಯಸ್ತಪದವಾಗಿ ಭಾವಿಸಿದರೂ ಎಂದರೆ ಶ್ರೀಮತ್ ನಾರಾಯಣ ಎಂದು ಕರ್ಮಧಾರಯವಾಗಲಿ ಅಥವಾ ಶ್ರೀಮನ್ ನಾರಯಣ ಎಂದು ಬೇರೆಬೇರೆ ಎರಡು ಸಂಬೋಧನೆಗಳಾದರೂ ಈ ಎರಡು ಪದಗಳಿಗೂ **ವಿಶೇಷಣ ವಿಶೇಷ್ಯಙ್ಗಳ್ ನಿರ್‍ಕ್ಕುಂ ನಿಲೈಕ್ಕು**-ಲಕ್ಷ್ಮಿಯು ನಿತ್ಯಯೋಗದಿಂದ ವಿಶೇಷಣವಾಗಿಯೂ ನಾರಾಯಣನು ವಿಶೇಷ್ಯನಾಗಿಯೂ ಇರುವ ಸ್ಥಿತಿಗೆ ಎಂದರೆ ಸ್ಥಿತಿಯಲ್ಲಿ, **ವೈಷಮ್ಯ ಮಿಲ್ಲೈ**-ವ್ಯತ್ಯಾಸವಿಲ್ಲವು, **ಶ್ರೀಮತ್** ಎಂಬ ಕರ್ಮಧಾರಯ ಅರ್ಥದಲ್ಲೂ, **ಶ್ರೀಮನ್**-ಲಕ್ಷ್ಮೀಯುಕ್ತನೇ ಎಂಬ ಸಂಬೋಧನೆಯಲ್ಲೂ **ಲಕ್ಷ್ಮೀ ನಾರಾಯಣರಿಗೆ** ವಿಶೇಷಣ ವಿಶೇಷ್ಯಭಾವದಲ್ಲಿ ಏನೊಂದೂ ವ್ಯತ್ಯಾಸವಿಲ್ಲವೆಂಬ ಭಾವವು. **ಇನ್ನಿಲೈ**-ಈ ವಿಶೇಷಣ ವಿಶೇಷ್ಯಭಾವದಲ್ಲಿರೋಣವು, **ಪೂರ್ವೋತ್ತರಖಂಡಂಗಳಿಲುಮ್**-ಪೂರ್ವೋತ್ತರ ಎರಡು ಖಂಡಗಳಲ್ಲೂ, **ಒಕ್ಕುಮ್**-ಸಮಾನವಾದುದು. ಇದನ್ನು ಏತಕ್ಕಾಗಿ ಹೇಳಿದರೆಂದರೆ, ಕೆಲವರು ಪೂರ್ವಖಂಡದಲ್ಲಿ ಶ್ರೀಮಚ್ಛಬ್ದವು ವಿಶೇಷಣವಲ್ಲವೆಂದೂ ಉಪಲಕ್ಷಣವೆಂದೂ, ಉತ್ತರಖಂಡವಲ್ಲಿ ಮಾತ್ರ ವಿಶೇಷಣವೆಂದು ವ್ಯತ್ಯಸ್ತವಾಗಿ ಹೇಳುವರು; ಈ ಅಭಿಪ್ರಾಯವನ್ನು ಹಿಂದೆಯೇ ಖಂಡಿಸಿರುತ್ತಾರೆ. ೨೦೮೮-೯೪ನೆ ಪುಟಗಳನ್ನು ನೋಡಿ. ಅದನ್ನು ಜ್ಞಾಪಿಸುವದಕ್ಕಾಗಿ ಅನುವಾದ ರೂಪದಲ್ಲಿ, ಈ ವಿಶೇಷಣ ವಿಶೇಷ್ಯಭಾವವು ಪೂರ್ವೋತ್ತರ ಖಂಡಗಳಲ್ಲೂ ಸಮವೆಂದು ಹೇಳಿದರು. ಎರಡು ಕಡೆಯಲ್ಲೂ ಶ್ರೀ ಶಬ್ದವು ಮತುಪ್ ಪ್ರತ್ಯಯ ಕೂಡಿರುವದರಿಂದ ಪದಪ್ರಯೋಗವು ಒಂದೇ ರೀತಿಯಾಗಿರುವಾಗ ಎರಡು ಕಡೆಯಲ್ಲೂ ಅರ್ಥವು ಒಂದೇವಿಧವಾಗಿ ವಿಶೇಷಣವು ಎಂಬ ತಾತ್ಪರ್ಯವು.

**ಶ್ರೀಮನ್ನಾರಾಯಣ ಚರಣೌ** ಎಂಬುದು ಒಂದು ಪದವೇ ಮೂರು ಪದಗಳೇ ಎಂಬುದನ್ನು ಎರಡುವಿಧ ಭಾವನೆಯಲ್ಲೂ ಏನೊಂದೂ ಅರ್ಥವ್ಯತ್ಯಾಸವಿಲ್ಲವೆಂದು ಉಪಪಾದಿಸಿ ಹೇಳಿ, **ಶ್ರೀಮತ್** ಎಂಬುದು ನಾರಾಯಣ ಶಬ್ದಕ್ಕೆ ವಿಶೇಷಣವೆಂಬುದು ಎರಡು ಖಂಡದಲ್ಲೂ ಸಮವಾದುದೇ ಎಂದು ತಿಳಿಸಿ, ಈಗ **"ಚರಣೌ"** ಎಂಬುದರ ಅರ್ಥವನ್ನು ವಿವರಿಸುತ್ತಾರೆ. **ಚರಣೌ ಎಙ್ಗಿರ ಶಬ್ದಂ**-ಚರಣೌ ಎಂಬ ಶಬ್ದವು, **ನಿತ್ಯವಾದ ದಿವ್ಯಮಂಗಳವಿಗ್ರಹತ್ತುಕ್ಕು, ಉಪ**

**ಶ್ರಿಯಃಪತಿಯಿನುಡೈಯ ಸರ್ವಸ್ಮಾತ್ಪರತ್ವಮುಮ್, ನಿತ್ಯವಿಗ್ರಹ ಯೋಗಮುಮ್, ಜ್ಞಾತವ್ಯಙ್ಗಳಿಲ್ ಪ್ರಧಾನತಮಮುನ್ನುಮಿಡಮ್ (೧) "ನಿತ್ಯಸಿದ್ಧೇತದಾಕಾರೇ ತತ್ಪರತ್ವೇಚಪೌಷ್ಕರ । ಯಸ್ಯಾಸ್ತಿಸತ್ತಾ ಹೃದಯೇ ತಸ್ಯಾಸೌಸನ್ನಿಧಿಂ ವ್ರಜೇತ್" ಇತ್ಯಾದಿಗಳಿಲೇ ಪ್ರಸಿದ್ಧಮ್. ಆಗೈಯಾಲ್**

**ಲಕ್ಷಣಂ**-ಉಪಲಕ್ಷಣವು ಎಂದರೆ ದಿವ್ಯಮಂಗಳವಿಗ್ರಹವೂ ಹೇಳಿದಂತಾಯಿತು. **ದಿವ್ಯಮಂಗಳವಿಗ್ರಹವು** ಅಪ್ರಾಕೃತ ಶರೀರವಾದ ಪ್ರಯುಕ್ತ ಹಾಗೆ ಹೇಳಲ್ಪಟ್ಟಿತು. ಅದು ಅಪ್ರಾಕೃತವೆಂಬುದನ್ನು ಹಿಂದೆಯೇ ಅನೇಕ ಪ್ರಮಾಣಗಳ ಮೂಲಕ ಉಪಪಾದಿಸಿರುತ್ತಾರೆ. ೩೬೦-೩೬೬ ನೆಯ ಪುಟಗಳನ್ನು ನೋಡಿ. ಅದೇಕೆ ದಿವ್ಯಮಂಗಳವಿಗ್ರಹಕ್ಕೂ ಉಪಲಕ್ಷಣವೆಂದು ಭಾವಿಸತಕ್ಕದ್ದು ಎಂದರೆ ಹೇಳುತ್ತಾರೆ.

**ಶ್ರಿಯಃಪತಿಯಿನುಡೈಯ**-ಮೇಲೆ ಹೇಳಿದ ಪ್ರಕಾರ ಲಕ್ಷ್ಮಿಯು ವಿಶೇಷಣವಾಗಿ ಪತಿಯೊಂದಿಗೆ ನಿತ್ಯಯೋಗವನ್ನು ಹೊಂದಿದವಳಾದ ಕಾರಣ, **ಶ್ರಿಯಃಪತಿ** ಎಂಬಪ್ರಯೋಗವು, ಈ ಲಕ್ಷ್ಮೀವಲ್ಲಭನ, **ಸರ್ವಸ್ಮಾತ್ಪರತ್ವಮುಮ್**-ಎಲ್ಲಾ ಚಿದಚಿದ್ವಸ್ತುಗಳಿಗಿಂತ ವಿಲಕ್ಷಣನಾಗಿರುವದರಿಂದ ಸರ್ವಶ್ರೇಷ್ಠತೆಯನ್ನೂ, **ನಿತ್ಯವಿಗ್ರಹಯೋಗಮುಮ್**-ನಿತ್ಯವಾದ ದಿವ್ಯಮಂಗಳವಿಗ್ರಹದ ಯೋಗವೂ ಸಹ, **ಜ್ಞಾತವ್ಯಂಗಳಿಲ್** - ಅವಶ್ಯವಾಗಿ ತಿಳಿಯಬೇಕಾದವುಗಳಲ್ಲಿ, ಜ್ಞೇಯಂಗಳಲ್ಲಿ **ಪ್ರಧಾನತಮಮೆನ್ನುಮಿಡಮ್**-ಅತ್ಯಂತ ಶ್ರೇಷ್ಠವಾದುವು ಎನ್ನುವ ಸಂದರ್ಭದಲ್ಲಿ, (೧) **"ನಿತ್ಯಸಿದ್ಧೇ"** ಎಂಬುವ ಪೌಷ್ಕರಸಂಹಿತೆಯ ವಾಕ್ಯವನ್ನು ಉದಾಹರಿಸಿ ಅದರಲ್ಲಿ ಪ್ರಸಿದ್ಧವೆಂದು ಹೇಳುತ್ತಾರೆ. **"ನಿತ್ಯಸಿದ್ಧೇ"** ಎಂಬ ಶ್ಲೋಕಾರ್ಥಕ್ಕೆ ಅರ್ಥ ಪಂಚಕಾಧಿಕಾರದಲ್ಲಿ ೩೬೧ ನೆಯ ಪುಟವನ್ನು ನೋಡಿ ಓಪುಷ್ಕರದಲ್ಲಿ ಹುಟ್ಟಿದ ಬ್ರಹ್ಮನೇ, ನಿತ್ಯವಾಗಿ ಸಿದ್ಧವಾಗಿರುವ ಭಗವಂತನ ದಿವ್ಯಮಂಗಳವಿಗ್ರಹದಲ್ಲೂ, ಸೌಲಭ್ಯಾನ್ವಿತಪರತ್ವದಲ್ಲೂ ಯಾವನಿಗೆ ಒಳ್ಳೇ ಆಸ್ತಿಕ್ಯಭಾವವುಂಟೋ, ಅಂತವನಿಗೆ ಭಗವಂತನು ತನ್ನ ಸಾಕ್ಷಾತ್ಕಾರವನ್ನುಂಟುಮಾಡುವನು ಎಂಬುದು ತಾತ್ಪರ್ಯವು ಈ ಶ್ಲೋಕದಲ್ಲಿ ಪರಮಪುರುಷನ ದಿವ್ಯಮಂಗಳವಿಗ್ರಹದಲ್ಲೂ ಪರತ್ವದಲ್ಲೂ ಶ್ರೇಷ್ಠವಾದ ಜ್ಞಾನವು ಆವಶ್ಯಕವೆಂದು ಪ್ರಧಾನವಾಗಿ ಹೇಳಲ್ಪಟ್ಟಿರುತ್ತದೆ. **ಇತ್ಯಾದಿಗಳಿಲೇ**-ಇವೇ ಮೊದಲಾದ ಪ್ರಮಾಣಗಳಲ್ಲಿ, **ಪ್ರಸಿದ್ಧಂ**-ಪ್ರಸಿದ್ಧವು.

**ಚರಣೌ** ಎಂಬ ಶಬ್ದದಿಂದ ಸ್ವಾಮಿಯ ಚರಣಾರವಿಂದಯುಗಳವು ಬೋಧಿತವಾದರೂ ಲಕ್ಷ್ಮಿಯಿಂದ ಕೂಡಿದವನಾಗಿ ಸರ್ವಸ್ಮಾತ್ ಪರನಾಗಿ ದಿವ್ಯಮಂಗಳವಿಗ್ರಹಯುಕ್ತನಾದ ನಾರಾಯಣನ ಚರಣಗಳು ಎಂಬ ಅನುಸಂಧಾನವಿರಬೇ

(೧) ಪೌಷ್ಕರ ಸಂಹಿತೆ.

**"ಶ್ರೀಮನ್ನಾರಾಯಣ" ಎಙ್ಗಿರವಿಡತ್ತಿಲೇ ಸೌಲಭ್ಯಾನ್ವಿತಮಾನ ಪರತ್ವ ಮುಮ್, "ಚರಣೌ" ಎಙ್ಗಿರವಿಡತ್ತಿಲೇ ನಿತ್ಯವಿಗ್ರಹ ಯೋಗಮುಮ್ ಅನುಸಂಧೇಯಮ್.**

ಕೆಂದು ಮುಂದೆ ಉಪದೇಶಿಸುತ್ತಾರೆ.— ಪರತ್ವಾನುಸಂಧಾನವೆಲ್ಲಿ ? **ದಿವ್ಯಮಂಗಳ** ವಿಗ್ರಹತ್ವಾನುಸಂಧಾನವೆಲ್ಲಿ ? ಎಂಬಾಶಯದಲ್ಲಿ, **ಶ್ರೀಮನ್ನಾರಾಯಣ ಎಂಬಲ್ಲಿ** ಪರತ್ವವನ್ನೂ, **ಚರಣೌ** ಎಂಬಲ್ಲಿ ದಿವ್ಯಮಂಗಳ ವಿಗ್ರಹತ್ವವನ್ನೂ ಅನುಸಂಧಾನ ಮಾಡತಕ್ಕದೆಂದು ಮುಂದಿನ ವಾಕ್ಯದಿಂದ ಉಪದೇಶಿಸುತ್ತಾರೆ.— **ಆಗೈಯಾಲ್**- ಆದುದರಿಂದ ಎಂದರೆ ಜ್ಞಾತವ್ಯಗಳಲ್ಲಿ ಶ್ರಿಯಃಪತಿಯ ಪರತ್ವವೂ ದಿವ್ಯಮಂಗಳ ವಿಗ್ರಹತ್ವವೂ **"ನಿತ್ಯಸಿದ್ಧೇ"** ಎಂಬ ಪೌಷ್ಕರ ಸಂಹಿತಾ ವಾಕ್ಯದಲ್ಲಿ ಪ್ರಧಾನ ವಾದವೆಂದು ಹೇಳಿರುವದರಿಂದ, **ಶ್ರೀಮನ್ನಾರಾಯಣ ಎಙ್ಗಿರ ವಿಡತ್ತಿಲೇ**- ಎಂಬ ಸ್ಥಳದಲ್ಲಿ, **ಸೌಲಭ್ಯಾನ್ವಿತ ಪರತ್ವಮುಮ್**-ಸೌಲಭ್ಯದಿಂದ **ಕೂಡಿದ** ಪರತ್ವವೂ, ಸೌಲಭ್ಯವು ಹೇಗೆ ಎಂದರೆ ಅಂತವನ ಸಾಕ್ಷಾತ್ಕಾರಕ್ಕೆ ವಶ್ಯನಾಗು ವದರ ಮೂಲಕ, ಮತ್ತು **ಚರಣೌ ಎಙ್ಗಿರ ವಿಡತ್ತಿಲೇ**-ಚರಣೌ ಎಂಬ ಸ್ಥಳ ದಲ್ಲಿ, **ನಿತ್ಯವಿಗ್ರಹಯೋಗಮುಮ್**-ನಿತ್ಯವಾದ ದಿವ್ಯಮಂಗಳ ವಿಗ್ರಹವನ್ನು ಹೊಂದಿರೋಣವೂ, **ಅನುಸಂಧೇಯಮ್**-ಅನುಸಂಧಾನವನ್ನು ಮಾಡತಕ್ಕದ್ದಾ ಗಿರುತ್ತದೆ.

ದಿವ್ಯಮಂಗಳ ವಿಗ್ರಹಕ್ಕೇನೋ ಪ್ರಾಧಾನ್ಯವನ್ನು ಒಪ್ಪಿಕೊಳ್ಳಬಹುದು. ಆದರೆ ಚರಣಗಳು ದೇಹದ ಏಕದೇಶವು. ಹೀಗಿರುವಾಗ ಅವುಗಳನ್ನು ಪ್ರಾಧಾ ನ್ಯೇನ ಹೇಳಲು ಕಾರಣವೇನು ? ಎಂದರೆ ದಾಸನಾದವನು ಸ್ವಾಮಿಯ ಪಾದವನ್ನು ಹಿಡಿದುಕೊಳ್ಳುವದೇ ಆತನ ಅನುಗ್ರಹ ಮತ್ತು ನಿಗ್ರಹ ನಿವೃತ್ತಿ ಸಂಪಾದಕವಾ ದುದರಿಂದ ಚರಣೌ ಎಂಬ ಪ್ರಯೋಗವು. ಸ್ವಾಮಿಯ ಪಾದಾರವಿಂದದ ಮಾತು ಹಾಗಿರಲಿ. ಭರತಾಳ್ವಾರ್‌ರವರು ಸ್ವಾಮಿ ಪಾದಾರವಿಂದಗಳ ಪಾದುಕೆಯೂ ಪರಮ ಮಾಹಾತ್ಮ್ಯೆಯನ್ನು ಹೊಂದಿದುದೆಂದು ತಿಳಿದವರಾದುದರಿಂದಲೇ ಶ್ರೀ ರಾಮಚಂದ್ರ ಪ್ರಭುವನ್ನೇ ಹಿಂತಿರುಗಿ ಕರೆದುಕೊಂಡು ಬರುವೆನೆಂದು ಶಪಥ ಮಾಡಿ ವನಕ್ಕೆ ಬಂದಿದ್ದರೂ, ಯಾವಾಗ ಪಾದುಕೆಗಳನ್ನು ಅನುಗ್ರಹಿಸಿ ಪ್ರಭುವು ಕೊಟ್ಟರೋ, ಆಗ ಸಮಾಧಾನಚಿತ್ತರಾಗಿ ಶಿರಸ್ಸಿನಲ್ಲಿ ಧರಿಸಿಕೊಂಡು, ಅಯೋಧ್ಯೆಗೆ ಹಿಂತಿರುಗಿದರೆಂಬ ವೃತ್ತಾಂತವು ಅನುಸಂಧೇಯವು. ಆದುದ ರಿಂದ ಶ್ರಿಯಃಪತಿಯ ಚರಣಗಳಿಗೆ ಇತರ ಅವಯವಗಳಿಗಿಂತ ವಿಶೇಷ ಮಾಹಾ ತ್ಮ್ಯೆಯೂ, ಪಾವನತ್ವವೂ ಪಾದಗಳ ಮಾಹಾತ್ಮ್ಯೆಯನ್ನು ಹಿಂದೆಯೇ ಪ್ರಭಾವ ರಕ್ಷಾಧಿಕಾರದ ಸಂಗ್ರಹಶ್ಲೋಕವಾದ **"ಶಿಲಾದೇಃ"** ಎಂಬಲ್ಲಿ ನಿಪುಣತರವಾಗಿ ಉಪಪಾದಿತವು. ಪರಾಂಬರಿಸಬಹುದು. ಗಂಗಾನದಿಯು ಸ್ವಾಮಿಯ ಪಾದ

ದಿಂದ ಉತ್ಪನ್ನವಾದುದರಿಂದಲೇ ಅದರಲ್ಲಿ ಅವಗಾಹನಿಗೆ ಮಾಹಾತ್ಮ್ಯೆಯು. ರುದ್ರನು ಆ ಪ್ರವಾಹವನ್ನು ಶಿರಸ್ಸಿನಲ್ಲಿ ಧರಿಸಿದುದರಿಂದ ಪವಿತ್ರನಾದನೆಂದು "ಶಿವಶ್ಶಿವೋಽಭೂತ್" ಎಂಬ ಮಹರ್ಷಿಯ ಉಕ್ತಿಯೂ, ಗಂಗಾನದಿಯು **ಪವಿತ್ರಮಿತಿ ಪಸ್ಪೃಶುಃ** ಎಂಬ ಇನ್ನೊಬ್ಬ ಮಹರ್ಷಿಯ ಪ್ರಯೋಗವೂ ಇರುತ್ತದೆ. ರುಕ್ಮಿಣಿಯು ಪತಿಗೆ ಬರೆದ ಲೇಖನದಲ್ಲಿ **"ಯಸ್ಯಾಂಘ್ರಿಪಂಕಜರಜಸ್ಸ್ನಪನಂ ಮಹಾನ್ತೋ ವಾಂಛಂತ್ಯುಮಾಪತಿ ರಿವಾತ್ಮತಮೋಽಪಹತ್ಯೈ"** ಎಂದರೆ ಯಾವ ನಿನ್ನ ಪಾದಕಮಲದ ಪರಾಗದ ಸ್ನಪನವನ್ನು ಮಹಾಭಾಗವತೋತ್ತಮರು ತಮ್ಮ ತಮೋಗುಣ ವಿನಾಶಕ್ಕಾಗಿ ಅಥವಾ ತಮ್ಮ ಮನಸ್ಸಿನ ಅಂಧಕಾರ ನಿವೃತ್ತಿಗಾಗಿ ರುದ್ರನಹಾಗೆ ಅಪೇಕ್ಷಿಸುತ್ತಾರೋ ಅಂತಹ ಪಾದಕಮಲದ ಅನುಗ್ರಹವು ನನಗೆ ಲಭಿಸದೇ ಇದ್ದರೆ ನಾನು ಪ್ರಾಣವನ್ನು ಬಿಡುವೆನು ಎಂದು ಮುಂದೆ ಇದೆ ಇದು ಅನುಸಂಧೇಯವು.

ಈ ಸಂದರ್ಭದಲ್ಲಿ ಒಂದು ಶಙ್ಕೆ ಉಂಟಾಗಬಹುದು. ಏನೆಂದರೆ, ಲಕ್ಷ್ಮೀವಿಗ್ರಹ ವಿಶಿಷ್ಟ ದಿವ್ಯಮಂಗಳ ವಿಗ್ರಹವಲ್ಲವೇ ಅನುಸಂಧೇಯವಾದುದು? ಹಾಗಾದರೆ ಇಬ್ಬರಿರುವಾಗ **ಚರಣೌ** ಎಂಬ ದ್ವಿವಚನವು ಹೇಗೆ ಸಮಂಜಸವು? **ಚರಣೋಽಸ್ತ್ರಿಯಾಮ್** ಎಂದಿರುವದರಿಂದ ಚರಣಾಃ ಎಂದಾಗಲಿ ಚರಣಾನಿ ಎಂದಾಗಲಿ ಇರತಕ್ಕದ್ದಲ್ಲವೇ? ಎಂದರೆ ಲಕ್ಷ್ಮಿಯು ವಿಶೇಷಣವಾದುದರಿಂದ **ಸವಿಶೇಷಣೇಹಿ** ಎಂಬ ನ್ಯಾಯಾನುಸಾರ ಲಕ್ಷ್ಮಿಯನ್ನು ವಿಶೇಷಣವಾಗಿ ಹೊಂದಿರುವವನ ಚರಣೌ ಎಂದು ಹೇಳಿದರೆ, ಆಕೆಯೂ ಚರಣವನ್ನು ಹೊಂದಿರುವಳೆಂಬ ಭಾವವು ಅಂತರ್ಗತವಾಗಿರುವದರಿಂದ, ಇಲ್ಲಿ **ಚರಣೌ** ಎಂಬ ದ್ವಿವಚನ ಪ್ರಯೋಗದಲ್ಲಿ ಅಸಾಮಂಜಸ್ಯವೇನೂ ಇಲ್ಲವು. ಲಕ್ಷ್ಮಿಯೊಂದಿಗಿರುವವನ ಚರಣೌ ಎಂದು ಹೇಳಿದರೆ, ಲಕ್ಷ್ಮಿಯೂ ದಿವ್ಯಮಂಗಳವಿಗ್ರಹ ಯುಕ್ತಳಾಗಿ ಪಾದಾರವಿಂದಯುಗಳ ಯುಕ್ತಳಾಗಿರುವಳೂ ಎಂಬುದು ಅರ್ಥಾತ್ ತೋರಿಬರುವದರಿಂದ, ಅವುಗಳನ್ನು ಹೇಳಬೇಕಾದ ಆವಶ್ಯಕತೆಯೂ ಇಲ್ಲವು. ಸನ್ನಿಯೋಗಶಿಷ್ಟನ್ಯಾಯದ ಪ್ರಕಾರ ಇಬ್ಬರ ಚರಣಗಳು ಉದ್ದೇಶ್ಯವೆಂಬ ಭಾವವು ತಪ್ಪದು. ವಿಶೇಷ್ಯವಾದ ದಿವ್ಯಮಂಗಳ ವಿಗ್ರಹಕ್ಕೆ ಪ್ರಾಧಾನ್ಯವಾಗಿ ಚರಣೌ ಎಂಬದಾಗಿ ದ್ವಿವಚನ ಪ್ರಯೋಗವು. ಲಕ್ಷ್ಮಿಯು ಯಾವಾಗಲೂ ನಿತ್ಯಯೋಗವನ್ನೂ ದಿವ್ಯಮಂಗಳ ವಿಗ್ರಹವನ್ನೂ ಹೊಂದಿರುವವಳಾಗಿ ಆಕೆಗೂ ಚರಣಯುಗ್ಮ ಉಂಟೆಂಬುದು ಸ್ವತಃ ಪ್ರಾಪ್ತವಾದುದರಿಂದ ಅದನ್ನು ಸೇರಿಸಿ ಹೇಳಬೇಕೆಂಬ ನಿಯಮವಿಲ್ಲವು. ಆದುದರಿಂದ ದ್ವಿವಚನ ಪ್ರಯೋಗದಲ್ಲಿ ಸರ್ವಸಾಮಂಜಸ್ಯವಿರುತ್ತದೆಂದು ಭಾವಿಸತಕ್ಕದ್ದು. ಈ ವಿಷಯವನ್ನು ಶ್ರೀ ನಿಗಮಾಂತ ದೇಶಿಕರು ಮುಂದೆ ಉಪಪಾದಿಸುತ್ತಾರೆ.—

## ದಿವ್ಯಾತ್ಮಸ್ವರೂಪಕಲ್ಯಾಣಗುಣಾಪೇಕ್ಷಯಾ ಜ್ಞಾತವ್ಯತ್ವೇ ದಿವ್ಯಮಙ್ಗಳ ವಿಗ್ರಹಸ್ಯ ಕಥಂ ಪ್ರಾಧಾನ್ಯಮ್ ?

---

**ದಿವ್ಯಾತ್ಮಸ್ವರೂಪತ್ತಿಲುಮ್, ಕೀೞ್ ಚೊನ್ನಗುಣಾದಿಗಳಿಲುಮ್, ತೆಳಿವಿಲ್ಲಾದಾರ್ಕ್ಕುಮ್ ಶುದ್ಧಸತ್ತ್ವದ್ರವ್ಯಮಯಮಾಯ್, ಸ್ವವಿಷಯಜ್ಞಾನತ್ತಾಲೇ ಜ್ಞಾನಸಙ್ಕೋಚತ್ತುಕ್ಕು ನಿವರ್ತಕಮಾಯ್, ಪರತ್ವಸೌಲಭ್ಯ ವ್ಯಂಜಕಮಾನ ದಿವ್ಯಮಙ್ಗಳವಿಗ್ರಹಮೇಯಿಲಕ್ಕಾಮ್.**

ದಿವ್ಯಾತ್ಮಸ್ವರೂಪಕಲ್ಯಾಣಗುಣಗಳಿಗಿಂತಲೂ, ಜ್ಞಾತವ್ಯದಲ್ಲಿ ಪ್ರಾಧಾನ್ಯವು ದಿವ್ಯಮಙ್ಗಳ ವಿಗ್ರಹಕ್ಕೆ ಹೇಗೆ ?

---

ಕೆಲವು ಕಡೆ ದಿವ್ಯಾತ್ಮಸ್ವರೂಪವಾದ, "**ಸತ್ಯಂಜ್ಞಾನಮನಂತಂಬ್ರಹ್ಮ**" ಎಂಬುದರಿಂದ ಉಂಟಾಗುವ ಜ್ಞಾನ, ಸರ್ವವ್ಯಾಪಕತ್ವಮೂಲಕ ಸರ್ವಶೇಷಿ ಎಂಬ ಇತ್ಯಾದಿ ಜ್ಞಾನವು ಪ್ರಾಧಾನ್ಯವೆಂದು ಹೇಳಲ್ಪಟ್ಟಿತು. ಇನ್ನು ಕೆಲವು ಕಡೆಗಳಲ್ಲಿ ಕಲ್ಯಾಣಗುಣಗಳ ಅನುಸಂಧಾನವು ಅವಶ್ಯಕವೆಂದೂ ಹೇಳಲ್ಪಟ್ಟಿರುತ್ತದೆ. "**ತಸ್ಮಿನ್ಯದಂತಸ್ತದುಪಾಸಿತವ್ಯಂ**" (ತೈ. ನಾ. ೧೨) ಎಂಬ ಶ್ರುತಿ ವಾಕ್ಯವೂ ಇರುತ್ತದೆ. ಹೀಗಿರುವಾಗ ದಿವ್ಯಮಙ್ಗಳ ವಿಗ್ರಹದ ಅನುಸಂಧಾನಕ್ಕೆ ಪ್ರಾಧಾನ್ಯವು ಹೇಗೆ ? ಎಂದರೆ ತಿಳಿಸುತ್ತಾರೆ—

**ದಿವ್ಯಾತ್ಮಸ್ವರೂಪತ್ತಿಲುಮ್**-ಪರಮಾತ್ಮನ ಸ್ವರೂಪದಲ್ಲೂ, "ಸತ್ಯಂ ಜ್ಞಾನಮನಂತಂಬ್ರಹ್ಮ" (ತೈ. ಆನಂ. ೧) ಎಂಬಲ್ಲಿ ತೋರಿಬರುವ ನಿರ್ವಿಕಾರವಾಗಿ ಸತ್ಯವಾಗಿ, ಜ್ಞಾನವಾಗಿ, ಅನಂತವಾಗಿ, ಮತ್ತು ಆನಂದವಾಗಿ ಅಮಲವಾಗಿರುವ ಪರಬ್ರಹ್ಮಸ್ವರೂಪದಲ್ಲೂ, **ಕೀೞ್ ಚೊನ್ನಗುಣಾದಿಗಳಿಲುಂ**-ಹಿಂದೆ ಹೇಳಲ್ಪಟ್ಟ ಆಶ್ರಿತನಿಗೆ ಉಪಯುಕ್ತವಾಗಿ ಮುಖ್ಯವೆಂದು ಹೇಳಲ್ಪಟ್ಟ ೧೨ ಗುಣಗಳಲ್ಲೂ, **ತೆಳಿವಿಲ್ಲಾದಾರ್ಕ್ಕುಂ**-ಜ್ಞಾನವಿಲ್ಲದಿರುವವರಿಗೆ, **ಶುದ್ಧಸತ್ತ್ವದ್ರವ್ಯಮಯಮಾಯ್**-ಸ್ವಯಂಪ್ರಕಾಶವಾಗಿ ಶುದ್ಧ ಸತ್ವದ್ರವ್ಯರೂಪವಾಗಿಯೂ, **ಸ್ವವಿಷಯಜ್ಞಾನತ್ತಾಲೇ**-ಆ ದಿವ್ಯಮಙ್ಗಳ ವಿಗ್ರಹದ ಅನುಸಂಧಾನದಿಂದ, **ಜ್ಞಾನಸಙ್ಕೋಚತ್ತುಕ್ಕು ನಿವರ್ತಕಮಾಯ್**-ಈ ಚೇತನನ ಧರ್ಮಭೂತಜ್ಞಾನದ ಸಂಕೋಚವನ್ನು ಹೋಗಲಾಡಿಸುವದಾಗಿಯೂ, **ಪರತ್ವಸೌಲಭ್ಯವ್ಯಂಜಕಮಾನ**-ಸರ್ವೇಶ್ವರನ ಪರತ್ವವನ್ನೂ ಸೌಲಭ್ಯವನ್ನೂ ಚನ್ನಾಗಿ ಪ್ರದರ್ಶಿಸುವ, **ದಿವ್ಯಮಙ್ಗಳವಿಗ್ರಹಮೇಯಿಲಕ್ಕಾಮ್**-ದಿವ್ಯಮಙ್ಗಳ ವಿಗ್ರಹವೇ, ಲಕ್ಷ್ಯವಾದುದು ಎಂದರೆ ಪ್ರಾಧಾನ್ಯೇನ ಬೇಕಾದುದು ಎಂದು ಭಾವವು. ಇದರಿಂದ ಭರನ್ಯಾಸನಿಷ್ಠನಾಗುವವನಿಗೆ **ಪರಮಾತ್ಮನ ಸ್ವರೂಪ ಕಲ್ಯಾಣಗುಣಗಳ ಜ್ಞಾನಾಪೇಕ್ಷಯಾ ದಿವ್ಯಮಙ್ಗಳ**

## ದಿವ್ಯಮಙ್ಗಳವಿಗ್ರಹಾನುಸಂಧಾನಪ್ರಾಧಾನ್ಯತ್ವೇ ಪ್ರಮಾಣಾನಿ

**ಇಪ್ಪ್ರಾಧಾನ್ಯತ್ತೈಪ್ಪತ್ತಿ ಗದ್ಯತ್ತಿಲ್ ಗುಣಙ್ಗಳುಕ್ಕುಮುನ್ನೇ ದಿವ್ಯ**

ವಿಗ್ರಹಜ್ಞಾನವು ಅತಿಶಯವಾದುದು ; ಏಕೆಂದರೆ (೧) ದಿವ್ಯಮಙ್ಗಳ ವಿಗ್ರಹವು ಶುದ್ಧಸತ್ವರೂಪವಾದುದರಿಂದ ಅದು ಸ್ವಯಂಪ್ರಕಾಶವಾದುದರಿಂದ, ಆಶ್ರಿತನ ಜ್ಞಾನಸಂಕೋಚವನ್ನು ಹೋಗಲಾಡಿಸುತ್ತದೆ. (೨) ಪರತ್ವ ಮತ್ತು ಸೌಲಭ್ಯವು ಪರಮಾತ್ಮನಿಗೆ ಉಂಟೆಂದು ಪ್ರದರ್ಶಿಸುತ್ತದೆ. ಈ ಕಾರಣಗಳಿಂದ ದಿವ್ಯಮಙ್ಗಳ ವಿಗ್ರಹಾನುಸಂಧಾನಕ್ಕೆ ಪ್ರಾಧಾನ್ಯವೆಂಬುದು ತಾತ್ಪರ್ಯವು.

ಜ್ಞಾನಸಂಕೋಚನಿವರ್ತಕವೆಂಬುದನ್ನು **"ಸಂದರ್ಶನಾದಕಸ್ಮಾಚ್ಚ ಪುಂಸಾಂ ಸಮ್ಮೂಢಚೇತಸಾಂ । ಕುವಾಸನಾ ಕುಬುದ್ಧಿಶ್ಚ ಕುತರ್ಕಶ್ಚ ಕುನಿಶ್ಚಯಃ । ಕುಹೇತುಶ್ಚ ಕುಭಾವಶ್ಚ ನಾಸ್ತಿಕತ್ವಂ ಲಯಂ ವ್ರಜೇತ್"** (ಪೌಷ್ಕರ ಸಂಹಿತಾ) ಎಂಬ ಪ್ರಮಾಣದಿಂದ ಅರಿಯಬಹುದು. ಇದರ ಅರ್ಥಕ್ಕೆ ೧೨೨ನೆಯ ಪುಟವನ್ನು ನೋಡಿ. **ಪರತ್ವಸೌಲಭ್ಯವ್ಯಂಜಕವು** ಹೇಗೆ ಎಂದರೆ, ಅಪೇಕ್ಷಿತಾರ್ಥ ವನ್ನು ಕೊಡುವುದರ ಮೂಲಕ ಪರತ್ವವೂ, ಮನುಷ್ಯರ ಕಣ್ಣಿಗೆ ಗೋಚರವಾಗು ವದರ ಮೂಲಕ ಸೌಲಭ್ಯವೂ ಇವೆರಡರ ವ್ಯಂಜಕವಾದುದು. ಅರ್ಚಾವತಾರ ವಿಗ್ರಹವು ಆಗಮಸಂಸ್ಕಾರದಮೂಲಕ ಇಂತಹ ದಿವ್ಯಮಙ್ಗಳ ವಿಗ್ರಹಯುಕ್ತವಾ ಗಿರುವದರಿಂದ ನಮ್ಮ ಸಿದ್ಧಾಸ್ತಿಗಳಿಗೆ ವಿಶೇಷೋಪಾದೇಯವಾಗಿರುತ್ತದೆ. ನಮ್ಮಾ ಳ್ವಾರ್ ಮೊದಲುಗೊಂಡು ಎಲ್ಲಾ ಆಳ್ವಾರ್ ಆಚಾರ್ಯರುಗಳೂ ಸ್ವಯಂವ್ಯಕ್ತ ವಾಗಿಯೂ ಅಥವಾ ಸುಪ್ರತಿಷ್ಠಿತವಾಗಿಯೂ ಇರುವ ದಿವ್ಯದೇಶದ ಬಿಂಬದಲ್ಲಿರುವ ದಿವ್ಯಮಙ್ಗಳ ವಿಗ್ರಹಕ್ಕೆ ವಿಶೇಷಾತಿಶಯವನ್ನು ಕೊಟ್ಟಿರುತ್ತಾರೆ.

### ದಿವ್ಯಮಙ್ಗಳ ವಿಗ್ರಹಾನುಸಂಧಾನದ ಪ್ರಾಧಾನ್ಯದ ವಿಷಯದಲ್ಲಿ ಪ್ರಮಾಣಗಳು

ಈ ಪ್ರಾಧಾನ್ಯವನ್ನು ಮನಸ್ಸಿನಲ್ಲಿಟ್ಟೇ ಶರಣಾಗತಿ ಪದ್ಯದಲ್ಲಿ ಶ್ರೀಮನ್ನಾರಾ ಯಣನ ಕಲ್ಯಾಣಗುಣಗಳನ್ನು ಕೊಂಡಾಡುವದಕ್ಕೆ ಮುಂಚಿತವಾಗಿ ದಿವ್ಯಮಙ್ಗಳ ವಿಗ್ರಹವನ್ನು ವರ್ಣಿಸಿರುತ್ತಾರೆಂದು ಉಪದೇಶಿಸುತ್ತಾರೆ—

**ಇಪ್ಪ್ರಾಧಾನ್ಯತ್ತೈಪತ್ತಿ**-ಈ ದಿವ್ಯಮಙ್ಗಳ ವಿಗ್ರಹದ ಪ್ರಾಧಾನ್ಯವನ್ನು ಕುರಿತು ಎಂದರೆ ಮನಸ್ಸಿನಲ್ಲಿಟ್ಟು, **ಗುಣಙ್ಗಳುಕ್ಕುಮುನ್ನೇ**-ಕಲ್ಯಾಣಗುಣ ಗಳನ್ನು ಕುರಿತು ಹೇಳುವದಕ್ಕೆ ಮುಂಚಿತವಾಗಿಯೇ, **ದಿವ್ಯಮಙ್ಗಳವಿಗ್ರಹತ್ತೈ** ದಿವ್ಯಮಙ್ಗಳವಿಗ್ರಹವನ್ನು ಕುರಿತು, **ಅರುಳಿಚ್ಚೆಯ್‌ದಾರ್**-ಕೃಪಯಾ ಉಪದೇ ಶಿಸಿರುತ್ತಾರೆ. ಎಲ್ಲಿ? ಎಂದರೆ **"ಸ್ವಾಭಿಮತಾನುರೂಪೈಕರೂಪಾಚಿನ್ತ್ಯ ದಿವ್ಯಾ**

**ಮಙ್ಗಳ ವಿಗ್ರಹತ್ತೈಯರುಳಿಚ್ಚೆಯ್‌ದಾರ್. ದಿವ್ಯಾತ್ಮಸ್ವರೂಪತ್ತಿಲ್ ಶೇಷಿ ದ್ಭುತ ನಿತ್ಯನಿರವದ್ಯ ನಿರತಿಶಯೌಜ್ಜ್ವಲ್ಯ ಸೌಂದರ್ಯಸೌಗನ್ಧ್ಯಸೌಕುಮಾರ್ಯ ಲಾವಣ್ಯಯೌವನಾದ್ಯನನ್ತಗುಣನಿಧಿದಿವ್ಯರೂಪ"** ಎಂದು ದಿವ್ಯಮಙ್ಗಳವಿಗ್ರಹ ವನ್ನು ಕೊಂಡಾಡಿ, ಅನಂತರ **"ಸ್ವಾಭಾವಿಕಾನವಧಿಕಾತಿಶಯಜ್ಞಾನಬಲ"** ಎಂದು ಆರಂಭಿಸಿ **"ಅಸಂಖ್ಯೇಯಕಲ್ಯಾಣಗುಣಗಣೌಘಮಹಾರ್ಣವ"** ಎಂದು ಅಪ್ಪಣೆ ಕೊಡಿಸಿರುತ್ತಾರೆ.

ಮೇಲಿನ ವಾಕ್ಯಗಳಲ್ಲಿ ದಿವ್ಯಾತ್ಮಸ್ವರೂಪಗುಣಗಳಲ್ಲಿ ಒಳ್ಳೇ ಜ್ಞಾನವಿಲ್ಲದ ವರಿಗೆ ಈ ದಿವ್ಯಮಙ್ಗಳ ವಿಗ್ರಹಾನುಸಂಧಾನವು ವಿಶೇಷ ಫಲದಾಯಿಕವೆಂದಲ್ಲವೇ ಹಿಂದಿನ ವಾಕ್ಯದಲ್ಲಿ ಹೇಳಲ್ಪಟ್ಟಿದುದು. ಹಾಗಾದರೆ ಸ್ವರೂಪಗುಣಗಳ ವಿಷಯ ದಲ್ಲಿ ಒಳ್ಳೇ ಜ್ಞಾನವುಳ್ಳವರಿಗೆ ಇಂತಹ ದಿವ್ಯಮಙ್ಗಳ ವಿಗ್ರಹದ ಅನುಸಂಧಾನವು ಬೇಕಿಲ್ಲವೋ ಎಂದರೆ ಅವರಿಗೂ ಹಾಗೆ ಎಲ್ಲರಿಗೂ ಬೇಕು ಎಂದು ತಿಳಿಸುತ್ತಾರೆ- ಜ್ಞಾನಾಗ್ರೇಸರುಗಳಾದ ಯಾಮುನಾರ್ಯರೂ ತಿರುಮಙ್ಗೈಯಾಳ್ವಾರವರೂ ಸಹ ಹಾಗೆಯೇ ದಿವ್ಯಮಙ್ಗಳ ವಿಗ್ರಹದ ಅನುಸಂಧಾನಕ್ಕೆ ಪ್ರಾಧಾನ್ಯವನ್ನು ಬೋಧಿಸಿ ರುತ್ತಾರೆಂದು ಶ್ರೀ ಯಾಮುನೇಯರವರ ಉಕ್ತಿಯನ್ನು ಉದಾಹರಿಸಿ ತಿರುಮಙ್ಗೈ ಯಾಳ್ವಾರವರ ಸರಸೋಕ್ತಿಯನ್ನೂ ತಿಳಿಸುತ್ತಾರೆ- ಈ ಸಂದರ್ಭದಲ್ಲಿ **"ಅಗ್ನೌ ತಿಷ್ಠತಿ ವಿಪ್ರಾಣಾಂ ಹೃದಿ ತಿಷ್ಠತಿ ಯೋಗಿನಾಂ । ಪ್ರತಿಮಾಸ್ವಪ್ರಬುದ್ಧಾನಾಂ ಸರ್ವತ್ರಸಮದರ್ಶಿನಾಮ್"** ವಿಪ್ರರಿಗೆ ಅಗ್ನಿಯಲ್ಲೂ, ಎಂದರೆ ಅವರುಗಳು ಮಾಡುವ ಯಜ್ಞದಲ್ಲಿ, **"ಯಜ್ಞೋವೈವಿಷ್ಣುಃ"** ಎಂದು ಹೇಳಿರುವ ಹಾಗೆ ಪರಮಾತ್ಮನಿರುತ್ತಾನೆ; ಯೋಗಿಗಳಿಗೆ ಹೃದಯಗುಹೆಯಲ್ಲೇ **"ಅಙ್ಗುಷ್ಠ ಮಾತ್ರಃ ಪುರುಷಃ"** ಉಪಾಸ್ಯನಾಗಿರುತ್ತಾನೆ. ಅಪ್ರಬುದ್ಧರಿಗೆ ಪ್ರತಿಮೆಗಳಲ್ಲಿ ರುತ್ತಾನೆ. ಸಮದರ್ಶಿಗಳಿಗೆ ಎಲ್ಲಾ ಕಡೆಯಲ್ಲೂ ಇರುತ್ತಾನೆಂಬುದು ಈ ಶ್ಲೋಕಾರ್ಥವು. ಇಲ್ಲಿ ಅಪ್ರಬುದ್ಧರಿಗೆ ಮಾತ್ರವೇ ಪ್ರತಿಮೆಗಳಲ್ಲಿರುತ್ತಾನೆ ಎಂದು ಅಪಾರ್ಥಮಾಡಿ **"ಸರ್ವಂವಾಕ್ಯಂ ಸಾವಧಾರಣಮ್"** ಎಂಬ ನ್ಯಾಯರೀತ್ಯಾ **ಪ್ರತಿಮಾಸ್ವಪ್ರಬುದ್ಧಾನಾಮೇವ** ಎಂದರೆ ಅಪ್ರಬುದ್ಧರಿಗೆ ಮಾತ್ರವೇ ಪ್ರತಿಮೆ ಗಳಲ್ಲಿ ಎಂದರೆ ಇತರರಿಗಿಲ್ಲವೆಂಬ ಅಪಾರ್ಥ ಉಂಟಾಗುವದರಿಂದ **ಪ್ರತಿಮಾಸ್ವೇವ ಅಪ್ರಬುದ್ಧಾನಾಂ** ಎಂದರೆ ಅಪ್ರಬುದ್ಧರಾದುದರಿಂದ ಇನ್ನು ಯಾವುದರ ಮೂಲ ಕವೂ ಗ್ರಹಿಸಲಾರರಾದುದರಿಂದ ಪ್ರತಿಮೆಗಳಲ್ಲಿ ಮಾತ್ರವೇ ಸ್ವಾಮಿ ಇರುತ್ತಾರೆಂಬ ಅರ್ಥವು ಯುಕ್ತವು.

**ಅಪ್ರಬುದ್ಧಾನಾಂ ಪ್ರತಿಮಾಸ್ವೇವ** ಎಂಬುದು ಹೇಗೋ ಹಾಗೆಯೇ ಸಂಕುಚಿತ ಜ್ಞಾನವುಳ್ಳವರಿಗೆ ದಿವ್ಯಮಙ್ಗಳ ವಿಗ್ರಹತ್ವಾನುಸಂಧಾನವೇ ಪ್ರಾಧಾನ್ಯ ವೆಂದು ಹೇಳಿದುದರಿಂದ ಜ್ಞಾನಾಧಿಕಾರಿಗಳಿಗೆ ಪ್ರಾಧಾನ್ಯವಲ್ಲವು ,ಎಂಬ

**ವುಡೈಯರಾಯಿರುಕ್ಕ ಚೆಯ್‌ದೇಯುಮ್ (೧) "ಮೂರ್ತಂ ಬ್ರಹ್ಮತತೋಽಪಿ ತತ್ಪ್ರಿಯತರಂ ರೂಪಂ ಯದತ್ಯದ್ಭುತಮ್" ಎನ್ರುಮ್ಪಡಿ, ಈಶ್ವರ್ರ ತನಕ್ಕುಂ ಭೋಗ್ಯತಮಮಾನ ನಿತ್ಯವಿಗ್ರಹಾನುಭವತ್ತಿಲ್ ಊತ್ತತ್ತಾಲೇ ತಿರುಮಂಗೈಯಾಳ್ವಾರ್ ತಮ್ಮೈ ಈಶ್ವರ ವಿಷಯತ್ತಿಲ್ ದೇಹಾತ್ಮವಾದಿಗಳಾಕ ವರುಳಿಚ್ಚೆಯ್(ದಾರ್)ವರ್.**

ಅಭಿಪ್ರಾಯವಲ್ಲವು; ಜ್ಞಾನಾಧಿಕಾರಿಗಳಿಗೂ ಕೂಡ ದಿವ್ಯಮಙ್ಗಳ ವಿಗ್ರಹಾನುಸಂಧಾನವು ಆವಶ್ಯಕವೆಂಬುವ ಭಾವವನ್ನು ಮುಂದೆ ಪ್ರದರ್ಶಿಸುತ್ತಾರೆ. ಹಾಗೆಯೇ ಜ್ಞಾನಾಧಿಕಾರಿಗಳಾದ ಶ್ರೀ ಯಾಮುನೇಯರ ಮತ್ತು ತಿರುಮಙ್ಗೈಯಾಳ್ವಾರುಗಳ ಅಭಿಪ್ರಾಯವೆಂದು ತಿಳಿಸುತ್ತಾರೆ—**ದಿವ್ಯಾತ್ಮಸ್ವರೂಪತ್ತಿಲ್**-ಪರಮಾತ್ಮನ ದಿವ್ಯಸ್ವರೂಪದಲ್ಲಿ, **ತೆಳಿವುಡೈಯರಾಯಿರುಕ್ಕಚೆಯ್‌ದೇಯುಂ**-ಒಳ್ಳೇ ಜ್ಞಾನವುಳ್ಳವರಾಗಿದ್ದರೂ ಸಹ(೧)ಇದರಹಿಂದೆ "**ಯದ್ಬ್ರಹ್ಮರೂಪಂ ಹರೇಃ** ಎಂದಿರುತ್ತದೆ. ಶ್ರೀ ಮಹಾವಿಷ್ಣುವಿನ ನಿರತಿಶಯಬೃಹತ್ತ್ವರೂಪ ಸ್ವರೂಪವು, **ಯತ್**-ಯಾವುದುಂಟೋ, ಅದೂ, **ತತೋಽಪಿ**-ಆ ಸ್ವರೂಪಕ್ಕಿಂತಲೂ, **ತತ್ಪ್ರಿಯತರಂ**-ಶ್ರೀಹರಿಗೆ ಅತಿಪ್ರಿಯವಾದ, **ಮೂರ್ತಂ**-ದಿವ್ಯಮಙ್ಗಳವಿಗ್ರಹಯುಕ್ತವಾದುದಾಗಿಯೂ, **ಅತ್ಯದ್ಭುತಮ್**-ಅತ್ಯಾಶ್ಚರ್ಯಕರವಾಗಿಯೂ, **ರೂಪಮ್**-ಶುಭಾಶ್ರಯವಾದ ರೂಪವು **ಯತ್**-ಯಾವುದುಂಟೋ, ಅವುಗಳಿಗೆ ಅನುರೂಪವಾದ **ರಾಘವತ್ವೇ ಭವೇತ್ಸೀತಾ** ಎಂಬಲ್ಲಿ ಉಪಪಾದಿಸಿರುವ ಹಾಗೆ ಲಕ್ಷ್ಮಿಯೂ ದಿವ್ಯಮಙ್ಗಳ ವಿಗ್ರಹರೂಪಗಳನ್ನು ಹೊಂದುವಳೆಂದು ಹೇಳಲ್ಪಟ್ಟಿರುತ್ತದೆ. ಪೂರಾ ಶ್ಲೋಕಕ್ಕೂ ಅರ್ಥ ಮತ್ತು ಉಪಪಾದನೆಗಳಿಗೆ ದಾಸನು ಬರೆದಿರುವ **ಚತುಶ್ಶ್ಲೋಕಿಯ** ವ್ಯಾಖ್ಯಾನವನ್ನು ಪರಾಂಬರಿಸಬಹುದು. **ಎನ್ರುಮ್‌ಪಡಿ**-ಎಂದು ಹೇಳಿರುವ ಹಾಗೆ, **ಈಶ್ವರ್ರ ತನುಕ್ಕುಂ**-ಸರ್ವೇಶ್ವರನಿಗೆ, **ಭೋಗ್ಯತಮಮಾನ**-ಅತ್ಯಂತ ಭೋಗ್ಯವಾದ, **ನಿತ್ಯವಿಗ್ರಹಾನುಭವತ್ತಿಲ್**-ನಿತ್ಯವಾದ ದಿವ್ಯಮಂಗಳವಿಗ್ರಹದ ಅನುಭವದಲ್ಲಿ, **ಊತ್ತತ್ತಾಲೆ**-ಶ್ರದ್ಧಾತಿಶಯದಿಂದ, ತಿರುಮಂಗೈಯಾಳ್ವಾರವರು, **ತಮ್ಮೈ**-ತಮ್ಮನ್ನು, **ಈಶ್ವರವಿಷಯತ್ತಿಲ್**-ಸರ್ವೇಶ್ವರನ ವಿಷಯದಲ್ಲಿ, **ದೇಹಾತ್ಮವಾದಿಗಳಾಕ**-ಪರಮಾತ್ಮನ ಶರೀರವೇ ಪರಮಾತ್ಮ ಸ್ವರೂಪವೆಂದು ವಾದಿಸುವವರನ್ನಾಗಿ, **ಅರುಳಿಚ್ಚೆಯ್‌ದಾರ್**-ಹೇಳಿಕೊಂಡರು. ಮನುಷ್ಯನ ಶರೀರವೇ ಆತ್ಮಾ ಎಂದು ಚಾರ್ವಾಕರ ವಾದವು. ಅದು ಏನೋ ಅಪಸಿದ್ಧಾನ್ತವೆಂದು ಒಪ್ಪತಕ್ಕದ್ದೇ. ಆದರೆ ಪರಮಾತ್ಮನ ಶರೀರವು ದಿವ್ಯಮಂಗಳ ವಿಗ್ರಹವು ಭೋಗ್ಯತಮವಾದುದರಿಂದ ಪರಮಾತ್ಮನ ದೇಹವೇ ತಮಗೆ ಪರಮಾತ್ಮಸ್ವರೂಪವು, ಆದುದರಿಂದ ಪರಮಾತ್ಮನ ವಿಷಯದಲ್ಲಿ ಮಾತ್ರ ಚಾರ್ವಾಕರ ಹಾಗೆ ದೇಹಾತ್ಮ

(೧) ಆಳ. ಚತು. ೪.

**ಸ್ವರೂಪಾದ್ಯಪೇಕ್ಷಯಾ ದಿವ್ಯಮಂಗಳ ವಿಗ್ರಹಸ್ಯೇ ಕೋ ವಿಶೇಷಃ ?**
**ದಿವ್ಯಮಂಗಳ ವಿಗ್ರಹಸ್ಯೈವ ಶುಭಾಶ್ರಯತ್ವಮ್**

---

**ಸರ್ವೇಶ್ವರನುಡೈಯ ದಿವ್ಯಮಂಗಳ ವಿಗ್ರಹತ್ತುಕ್ಕು (೧) "ಪಾಪಂ** ವಾದಿಗಳಿಂದು ಚಮತ್ಕಾರವಾಗಿ ತಾವೇ ಹೇಳಿಕೊಂಡಿದ್ದಾರೆಂಬ ತಾತ್ಪರ್ಯವು. ಅದನ್ನು ಎಲ್ಲಿ ಹೇಳಿದ್ದಾರೆ ಎಂದರೆ ಸಾರಪ್ರಕಾಶಿಕೆಯುವರು ಶಿರಿಯತಿರುಮಡಲ್, ಪೆರಿಯತಿರುಮಡಲ್ ಎಂಬ ತಮ್ಮ ಗ್ರಂಥಗಳಲ್ಲಿ ಹಾಗೆ ವಿನೋದಕರವಾಗಿ ಹೇಳಿ ಕೊಂಡಿರುತ್ತಾರೆ. ಈಶ್ವರನ ವಿಷಯದಲ್ಲಿ ಮಾತ್ರ ತಾವೂ ಚಾರ್ವಾಕರ ಹಾಗೆ ದೇಹವೇ ಆತ್ಮಾ ಎಂದು ವಾದಿಸುವರೇ ಎಂದು ಹೇಳಿಕೊಂಡಿದ್ದಾರೆಂಬ ಭಾವವು. ನಮ್ಮಾಳ್ವಾರವರು ಕೊನೆಯ ಹತ್ತು ಪಾಶುರದಲ್ಲೂ, ಪರಮಾತ್ಮ ಸ್ವರೂಪವು ಎಲ್ಲಾ ಕಡೆಯಲ್ಲೂ ಇರುವಾಗ ಈ ಲೀಲಾ ವಿಭೂತಿಯಲ್ಲೇ ಪರಮಾತ್ಮನನ್ನು ಅನುಭವಿಸಬಹುದಲ್ಲಾ, ನಿತ್ಯವಿಭೂತಿಯಲ್ಲಿ ಅನುಭವಾಪೇಕ್ಷೆಯು ಏತಕ್ಕೆ? ಎಂಬ ಆಶಯದಲ್ಲಿ ಆತನ ದಿವ್ಯಮಂಗಳ ವಿಗ್ರಹದ ಸಾಕ್ಷಾತ್ಕಾರವಲ್ಲವೇ ಈಗ ಪರಮ ಭಕ್ತಿ ಎನ್ನುವ ಭಕ್ತಿಯ ಪರಾಕಾಷ್ಠದೆಶೆಯನ್ನು ತಮಗೆ ಉಂಟುಮಾಡಿ ಪರಮಾತ್ಮ ನನ್ನಗಲಿ ಒಂದು ಕ್ಷಣವಾಗಲಿ ಜೀವಿಸಿರಲಾರೆನೆಂದು ಆರ್ತಸ್ವರದಿಂದ ಕೂಗಿ ಕೊಳ್ಳುವ ಹಾಗೆ ಮಾಡಿರುವದು; ಆದುದರಿಂದ, ಆ ಕಣ್ಣಿನ ಸೊಬಗೂ ರೂಪಲಾವ ಣ್ಯಾದಿಗಳಿಂದಲೂ ಕೂಡಿದ ದಿವ್ಯಮಂಗಳ ವಿಗ್ರಹದೊಂದಿಗೆ ಯಾವಾಗಲೂ ಇರುವದೇ ತಮಗೆ ಪುರುಷಾರ್ಥವೆಂದು ಹೇಳಿಕೊಂಡಿರುತ್ತಾರೆ.

ಸ್ವರೂಪಾದಿಗಳಿಗಿಂತ ದಿವ್ಯಮಂಗಳ ವಿಗ್ರಹದಲ್ಲಿ ಏನು ವಿಶೇಷವು?
ದಿವ್ಯಮಂಗಳ ವಿಗ್ರಹಕ್ಕೆ ಮಾತ್ರವೇ ಶುಭಾಶ್ರಯತ್ವವು.

---

ಸ್ವರೂಪಾದಿಗಳಿಗಿಂತ ದಿವ್ಯಮಂಗಳವಿಗ್ರಹದಲ್ಲಿರುವ ಮಾಹಾತ್ಮ್ಯ ಏನು ? ಎಂದರೆ ಶುಭತ್ವವೂ ಆಶ್ರಯತ್ವವೂ ಎರಡೂ ಉಂಟು; ಆದುದರಿಂದ ದಿವ್ಯ ಮಂಗಳ ವಿಗ್ರಹವು ಶುಭಾಶ್ರಯವೆನಿಸುತ್ತದೆ. ಇವು ಎರಡೂ ಭಗವತ್ಸ್ವರೂ ಪಕ್ಕೂ ಮತ್ತು ನಿತ್ಯಮುಕ್ತಾದಿಗಳ ವಿಗ್ರಹಗಳಿಗೂ ಇಲ್ಲವಾದುದರಿಂದ ಪರಮಪುರುಷನ ದಿವ್ಯಮಂಗಳ ವಿಗ್ರಹಕ್ಕೆ ಆದರಲ್ಲೂ ಯಾವಾಗಲೂ ನಿತ್ಯ ವಾದ ಪರರೂಪವೆನಿಸುವ ಪರವಾಸುದೇವ ರೂಪಕ್ಕೆ ನಿರತಿಶಯವಾದ ಮಾಹಾ ತ್ಮ್ಯೆಯು ಎಂದು ಮುಂದೆ ಉಪಪಾದಿಸುತ್ತಾರೆ. **ಸರ್ವೇಶ್ವರನುಡೈಯ**-ಸರ್ವೇ ಶ್ವರನ, **ದಿವ್ಯಮಂಗಳ ವಿಗ್ರಹಕ್ಕೆ** (೧) ಶುಭತ್ವವೂ, (೨) ಆಶ್ರಯತ್ವವೂ

---

(೧) ವಿ. ಪು.

**ಹರತಿ ಯತ್ಪುಂಸಾಂ ಸ್ಮೃತಂ ಸಂಕಲ್ಪನಾಮಯಂ । ತತ್ಪುಂಡರೀಕ ನಯನಂ ವಿಷ್ಣೋರ್ದ್ರಕ್ಷ್ಯಾಮ್ಯಹಂ ಮುಖಮ್ ।" (೨) "ರೂಪೌದಾರ್ಯ**

ಹೀಗೆ ಎರಡೂ ಉಂಟೆಂದು ಹೇಳುತ್ತಾರೆ. ಶುಭತ್ವ ಉಂಟೆಂಬುದಕ್ಕೆ ಒಂದು ಪ್ರಮಾಣವನ್ನೂ ಆಶ್ರಯತ್ವಕ್ಕೆ ಒಂದು ಪ್ರಮಾಣವನ್ನೂ ಉದಾಹರಿಸುತ್ತಾರೆ. **ಈ** ಶುಭತ್ವಕ್ಕೆ ಪ್ರಮಾಣವು—**ಯತ್**- ಯಾವುದು, **ಸ್ಮೃತಂ**-ಸ್ಮರಿಸಲ್ಪಟ್ಟರೆ ಎಂದರೆ ಸದಾ ನೋಡುತ್ತಾ ಧ್ಯಾನಿಸುತ್ತಿದ್ದರೆ, **ಸಂಕಲ್ಪನಾಮಯಮ್**- ಇಚ್ಛಾ ರೂಪವಾದ ಎಂದರೆ ಮುಂದೆ ಪಾಪವನ್ನು ಮಾಡಬೇಕೆಂದು ಮನಸ್ಸಿನಲ್ಲಿ ಸಂಕಲ್ಪಿಸಲ್ಪಟ್ಟ, **ಪಾಪಮ್**-ಪಾಪವೂ ಕೂಡ, **ಹರತಿ**-ನಾಶಮಾಡುತ್ತದೋ, ಯಾವಾಗ ಸಂಕಲ್ಪಿಸಲ್ಪಟ್ಟ ಪಾಪವೂ ನಾಶವಾಗುತ್ತದೆಂದು ಹೇಳಿದುದರಿಂದ ಹಿಂದಿನ ಪಾಪವೂ ಕೂಡ ನಾಶವಾಗುತ್ತದೆಂದು ಹೇಳಿದಂತೇ ಆಯಿತು, **ತತ್**-ಅಂತಹ ಮಾಹಾತ್ಮ್ಯಯುಳ್ಳ, **ಪುಂಡರೀಕನಯನಂ-ಕಪ್ಯಾಸಂ** ಎಂಬ ಶ್ರುತಿಯಲ್ಲಿ ಹೇಳಿರುವ ಹಾಗೆ ದಿವ್ಯಕಟಾಕ್ಷಮಾತ್ರದಿಂದಲೇ ಸರ್ವಪಾಪವನ್ನೂ ಹೋಗಲಾಡಿಸುವ ಹಾಗೆ ಕಮಲಸದೃಶ ಕಣ್ಣುಗಳನ್ನುಳ್ಳ, **ವಿಷ್ಣೋರ್ಮುಖಮ್**-ಸರ್ವಲಾವಣ್ಯ ಯುಕ್ತವಾದ ವಿಷ್ಣುವಿನ ಮುಖವನ್ನು, ಇದು ಆತನ ದಿವ್ಯಮಂಗಳವಿಗ್ರಹಕ್ಕೆಲ್ಲಾ ಉಪಲಕ್ಷಣವು, **ಅಹಂ**-ಆತನೊಂದಿಗೆ ನಿತ್ಯಯೋಗವನ್ನು ಬಯಸುವ ನಾನು, **ದ್ರಕ್ಷ್ಯಾಮಿ**-ನೋಡುವೆನು" ಇದು ಪಾಪಪರಿಹಾರರೂಪವಾದ ಶುಭತ್ವಕ್ಕೆ ಪ್ರಮಾಣವು. "ರೂಪೌದಾರ್ಯ" ವೆಂಬುದಕ್ಕೆ ಪೂರ್ವಾರ್ಧವು **"ಚಂದ್ರಕಾಂತಾನನಂ ರಾಮಮತೀವ ಪ್ರಿಯದರ್ಶನಂ"** ಎಂದಿರುತ್ತದೆ. ಚಂದ್ರನಿಗಿಂತಲೂ ಮನೋಹರವಾದ ಮುಖವುಳ್ಳವನನ್ನು, ಇದರಿಂದ ಅವಯವ ಶೋಭೆಯಿಂದ ಯುಕ್ತನೆಂದು ಹೇಳಲ್ಪಟ್ಟಿತು, **ರಾಮಂ**-ವಿಗ್ರಹಗುಣಗಳಿಂದಲೂ ಸ್ವರೂಪಗುಣಗಳಿಂದಲೂ ಭಕ್ತರನ್ನು ಆನಂದಗೊಳಿಸುವವನನ್ನೂ, ಇದರಿಂದ ಸಮುದಾಯ ಶೋಭಾವತ್ವ ಹೇಳಲ್ಪಟ್ಟಿತು ; ಆದುದರಿಂದಲೇ **ಅತೀವ ಪ್ರಿಯದರ್ಶನಮ್**-ನಿರಂತರ ನೋಡುತ್ತಿದ್ದರೂ ಹೊಸಹೊಸ ದರ್ಶನವನ್ನು ಕೊಡುವವನನ್ನು, ಎಂದರೆ ನೋಡುವದರಲ್ಲಿ ತೃಪ್ತಿಯೇ ಇಲ್ಲದೆ ಸದಾ ನೋಡಬೇಕೆಂದು ದೃಷ್ಟಿಗೆ ಆಸೇಚನಕನಾಗಿರುವವನನ್ನು, **ರೂಪೌದಾರ್ಯಗುಣೈಃ**-ರೂಪಗುಣೈಃ ದಿವ್ಯಮಂಗಳವಿಗ್ರಹ ಗುಣಗಳಿಂದಲೂ, **ಔದಾರ್ಯಗುಣೈಃ**-ತನ್ನನ್ನು ಅನುಭವಿಸಬೇಕೆಂಬ ಅಪೇಕ್ಷೆಯುಳ್ಳವರಿಗೆ ಅನುಭವವನ್ನು ಕೊಡುವ ಉದಾರಗುಣಗಳಿಂದಲೂ, ಅಥವಾ ರೂಪವೇನು ಔದಾರ್ಯವೇನು, ಗುಣವೆಂದರೆ ಗುಣ್ಯತೇ-ಸದಾನುಸಂಧೀಯತೇ ಇತಿ ಗುಣಃ ಎಂಬ ವ್ಯುತ್ಪತ್ತಿಯ ಮೂಲಕ ಅಂತಹ ಗುಣವಾದ ಸೌಶೀಲ್ಯವೇನು, ಇವುಗಳಿಂದ **ಪುಂಸಾಂ**-ಪುರುಷರ ಎಂದರೆ ಉಪಲಕ್ಷಣವಾಗಿ ಸರ್ವಪ್ರಾಣಿಗಳ, **ದೃಷ್ಟಿಚಿತ್ತಾಪಹಾರಿಣಮ್**-ದೃಷ್ಟಿ ಮತ್ತು ಮನಸ್ಸನ್ನು ಆಕರ್ಷಿಸುವಂತವನನ್ನು, ಸ್ವಲ್ಪ ಕಠಿಣ

**ಗುಣೈಃ ಪುಂಸಾಂ ದೃಷ್ಟಿಚಿತ್ತಾಪಹಾರಿಣಮ್" ಇತ್ಯಾದಿಗಳಿಲ್ಪಡಿಯೇ, ಶುಭತ್ವಮುಮ್ ಆಶ್ರಯತ್ವಮುಮುಣ್ಡು. ಬದ್ಧರ್ಕ್ಕು ಆಶ್ರಯತ್ವಮುಂಡಾಗಿಲುಮ್ ಶುಭತ್ವಮಿಲ್ಲೈ. ಭಗವತ್ಸ್ವರೂಪತ್ತುಕ್ಕು ಶುಭತ್ವಮುಣ್ಡೇಯಾಗಿಲುಮ್ ಆಶ್ರಯತ್ವಮಿಲ್ಲೈ. ಸಂಸಾರಬಂಧರಹಿತಮಾನ ಶುದ್ಧಾ**

ಮನಸ್ಕರಾದ ಪುರುಷರ ದೃಷ್ಟಿಚಿತ್ತಾಪಹಾರಿ ಎಂದು ಹೇಳಿದ ನಂತರ ಮೃದು ಸ್ವಭಾವರಾದ ಸ್ತ್ರೀಯರ ದೃಷ್ಟಿಚಿತ್ತಾಪಹಾರಿ ಎಂದು ಹೇಳುವ ಆವಶ್ಯಕವೇ ಇಲ್ಲವೆಂಬ ಭಾವವು; ಇಂತಹ ರಾಮನನ್ನು ನೋಡುತ್ತಾ ನೋಡುತ್ತಾ ತಂದೆಯಾದ ದಶರಥನು **ನ ತತರ್ಪ**-ತೃಪ್ತಿಯನ್ನು ಹೊಂದಲೇ ಇಲ್ಲವೆಂದು ಮುಂದಕ್ಕೆ ಅನ್ವಯವು; ಇದರಿಂದ ಆಶ್ರಯತ್ವವು ಉಪಪಾದಿತವು; **ಇತ್ಯಾದಿಗಳಿಲ್ಪಡಿಯೇ**-ಇವೇ ಮೊದಲಾದ ಮಹರ್ಷಿ ವಾಕ್ಯಗಳಲ್ಲಿ ಹೇಳಿರುವ ಹಾಗೆ, **ಶುಭತ್ವವೂ ಆಶ್ರಯತ್ವವೂ, ಉಣ್ಡು**. ಈ ದಿವ್ಯಮಂಗಳ ವಿಗ್ರಹಕ್ಕೆ ಉಂಟು.

ಹೀಗೆ ಶುಭತ್ವವೂ ಆಶ್ರಯತ್ವವೂ ಇರುವದರಿಂದಲೇ ಪರಮಾತ್ಮನ ದಿವ್ಯ ಮಂಗಳ ವಿಗ್ರಹವು ಶುಭಾಶ್ರಯವೆಂದು ಹೇಳಲ್ಪಡುತ್ತದೆ. **ದಿವ್ಯಮಂಗಳ ವಿಗ್ರಹ**ವೆಂದು ಹೇಳುವದರಲ್ಲೂ ಈ ಅಭಿಪ್ರಾಯಗಳೇ ಗರ್ಭಿತವು; ಹೇಗೆಂದರೆ ಮಂಗಳತ್ವವು ಪಾಪಹರ ರೂಪದಲ್ಲಿಯಾದುದರಿಂದ **ಶುಭತ್ವವು** ಹೇಳಲ್ಪಟ್ಟಿತು. **ದಿವ್ಯತ್ವದಿಂದ** ಅಪ್ರಾಕೃತತ್ವವಾಗಲಿ ತೇಜೋಮಯತ್ವವಾಗಲಿ ಉಪಪಾದಿತವಾದುದರಿಂದ ಆಶ್ರಯತ್ವವೂ ದ್ಯೋತಿತವು. ಆದುದರಿಂದ ದಿವ್ಯಮಂಗಳವಿಗ್ರಹಕ್ಕೆ ಶುಭಾಶ್ರಯತ್ವಗಳುಂಟೆಂದು ಹೇಳಲ್ಪಟ್ಟಿತು.

**ಬದ್ಧರ್ಕ್ಕು** - ಬದ್ಧರಿಗೆ ಮನುಷ್ಯದೇವತೆಗಳಿಗೆ, **ಆಶ್ರಯತ್ವಮುಂಡಾಗಿಲುಮ್**-ಆಶ್ರಯತ್ವವಿದ್ದರೂ, **ಶುಭತ್ವಮಿಲ್ಲೈ**-ಶುಭತ್ವವಿಲ್ಲವು.

ಮುಂದೆ ಪರಮಪುರುಷನ ದಿವ್ಯಮಂಗಳ ವಿಗ್ರಹಕ್ಕೆ ಈ ಶುಭತ್ವ ಆಶ್ರಯತ್ವ ಎರಡು ಗುಣಗಳೂ ಉಂಟೇ ವಿನಾ, ಭಗವತ್ಸ್ವರೂಪಕ್ಕಾಗಲಿ, ಇತರ ಬದ್ಧ ಮುಕ್ತ ನಿತ್ಯರುಗಳ ಶರೀರಕ್ಕಾಗಲಿ ಇಲ್ಲವೆಂದು ಉಪಪಾದಿಸಿ ಹೇಳುತ್ತಾರೆ.—**ಭಗವತ್ಸ್ವರೂಪತ್ತುಕ್ಕು** - ಭಗವತ್ಸ್ವರೂಪಕ್ಕೆ, **ಶುಭತ್ವಮುಣ್ಡೇಯಾಗಿಲುಮ್** - ಪಾಪಪರಿಹಾರರೂಪ ಶುಭತ್ವವೇನೋ ಉಂಟು, ಆದರೂ, **ಆಶ್ರಯತ್ವಮಿಲ್ಲೈ**-ಆಶ್ರಯಿಸುವಹಾಗೆ ಮಾಡುವ ಆಕರ್ಷಣಶಕ್ತಿ ಇಲ್ಲವು. ಆದುದರಿಂದ ಭಗವತ್ಸ್ವರೂಪದಲ್ಲಿ ಈ ಎರಡು ಗುಣಗಳಲ್ಲಿ ಒಂದೇ ಇರುತ್ತದೇ ವಿನಾ ಎರಡೂ ಇಲ್ಲವು. ಆದುದರಿಂದ ಮುಮುಕ್ಷುವಿನ ಧ್ಯಾನಕ್ಕೆ ದಿವ್ಯಮಂಗಳವಿಗ್ರಹವೇ ಯೋಗ್ಯವಾದುದೆಂಬ ಭಾವವು. ಇದರಿಂದ ನಿರ್ಗುಣ ಬ್ರಹ್ಮೋಪಾಸನವು ನಿರಸ್ತವು.

ಮುಂದೆ ಮುಕ್ತಾತ್ಮ ಸ್ವರೂಪಕ್ಕೆ ಎರಡೂ ಇಲ್ಲವೆಂದು ಹೇಳುತ್ತಾರೆ.—**ಸಂಸಾರಬಂಧರಹಿತಮಾನ** - ಸಂಸಾರಬಂಧವಿಲ್ಲದಿರುವ, **ಶುದ್ಧಾತ್ಮಸ್ವರೂಪ**

**ತ್ಮಸ್ವರೂಪತ್ತುಕ್ಕು, ಸಂಸರಿಕ್ಕೈಕ್ಕು ಸಹಕಾರಿಯೋಗ್ಯತೈಯಿಲ್ಲೈಯೇ ಯಾಗಿಲುಮ್, ಪರತಂತ್ರಚೇತನತ್ತೈಯಾಲೇ ಸಂಸರಿಕ್ಕೈಕ್ಕು ಸ್ವರೂಪ ಯೋಗ್ಯವಸ್ತುವಾಗೈಯಾಲೇ ಯದುಕ್ಕು ಹೇಯಪ್ರತ್ಯನೀಕತ್ವರೂಪ ಶುಭ ತ್ವಮುಮಿಲ್ಲೈ, ಆಶ್ರಯತ್ವಮುಮಿಲ್ಲೈ. ಮುಕ್ತರುಡ್ಮೈಯ ವಿಗ್ರಹಪರಿ ಗ್ರಹದಶೈಯಿಲುಮ್, ನಿತ್ಯವಿಗ್ರಹರಾನ ನಿತ್ಯರ್ಕ್ಕುಮ್, ಆಶ್ರಯತ್ವಮುಣ್ಡೇ ಯಾಗಿಲುಮ್ ಸಂಸಾರನಿವರ್ತನ ಕ್ಷಮಮಾನ ಶುಭತ್ವಮಿಲ್ಲೈ. ಆಗೈ**

**ತ್ತುಕ್ಕು**-ಪರಿಶುದ್ಧವಾದ ಮುಕ್ತಾತ್ಮಸ್ವರೂಪಕ್ಕೆ, **ಸಂಸರಿಕ್ಕೈಕ್ಕು ಸಹಕಾರಿ ಯೋಗ್ಯತೇಯಿಲ್ಲೇಯಾಗಿಲುಮ್**-ಪುನಃ ಸಂಸಾರವನ್ನು ಹೊಂದಲು ಪ್ರಕೃತಿ ಸಂಬಂಧ, ಕರ್ಮಶೇಷ ಮೊದಲಾದ ಸಹಕಾರಿಯನ್ನು ಹೊಂದಲು ಅರ್ಹತೆ ಇಲ್ಲದೇ ಇದ್ದರೂ, **ಪರತಂತ್ರಚೇತನತ್ತೈಯಾಲೇ**-ಸ್ವರೂಪಾವಸ್ಥೆಯಲ್ಲಿ ಅಣು ವಾಗಿ ಏನನ್ನೂ ಮಾಡಲು ಅಸಾಧ್ಯವಾದ ಪರತಂತ್ರವಾದ ಚೇತನತ್ವವನ್ನೂ ಹೊಂದಿರುವದರಿಂದ, **ಸಂಸರಿಕ್ಕೈಕ್ಕು ಸ್ವರೂಪಯೋಗ್ಯವಸ್ತುವಾಗೈಯಾಲೇ**-ಅಪರಿಶುದ್ಧವಾದ ಪ್ರಕೃತಿಸಂಬಂಧವನ್ನು ಹೊಂದಿ ಸಂಸೃತಿಯನ್ನು ಹೊಂದಲು ಸ್ವರೂಪತಃ ಯೋಗ್ಯತೆ ಇರುವ ವಸ್ತುವಾದುದರಿಂದ, **ಅದುಕ್ಕು**-ಪರಿಶುದ್ಧಾತ್ಮ ಸ್ವರೂಪಕ್ಕೆ, **ಹೇಯಪ್ರತ್ಯನೀಕತ್ವರೂಪ**-ಹೇಯಸಂಬಂಧವಿಲ್ಲದಿರುವ, **ಶುಭ ತ್ವವೂ ಇಲ್ಲೈ**-ಇಲ್ಲವು, **ಆಶ್ರಯತ್ವಮುಮಿಲ್ಲೈ**-ಆಶ್ರಯಿಸುವಹಾಗೆ ಮಾಡುವ ಶಕ್ತಿಯೂ ಇಲ್ಲವು.

ಹೋಗಲಿ ಮುಕ್ತದೆಶೆಯಲ್ಲಿ ಬರೀ ಸ್ವರೂಪತಃ ಇರುವದಕ್ಕೆ ಶುಭಾಶ್ರಯತ್ವ ವಿಲ್ಲವೆಂಬುದನ್ನೇನೋ ಒಪ್ಪೋಣ. ಶರೀರ ಪರಿಗ್ರಹ ಮಾಡಿದ ಅವಸ್ಥೆಯಲ್ಲಿ ಹೇಗೆ? ಹಾಗೆಯೇ ನಿತ್ಯರೂ ಯಾವಾಗಲೂ ಪರಿಶುದ್ಧ ವಿಗ್ರಹಯುಕ್ತರೂ, ಇವ ರಿಬ್ಬರಿಗೆ ಶುಭಾಶ್ರಯತ್ವ ಉಂಟೋ? ಎಂದರೆ ಆಶ್ರಯತ್ವವೇನೋ ಉಂಟು; ಶುಭತ್ವವಿಲ್ಲವೆಂದು ಉಪದೇಶಿಸುತ್ತಾರೆ. ಮುಕ್ತರುಡ್ಮೈಯ ವಿಗ್ರಹಪರಿಗ್ರಹದಶೈ ಯಿಲುಮ್ ಎಂದು ಈ ವಾಕ್ಯವನ್ನು ಪ್ರಾರಂಭಿಸಿರುವದರಿಂದ, ಹಿಂದಿನ ವಾಕ್ಯ ದಲ್ಲಿ ಹೇಳಿದುದು ಮುಕ್ತರುಡ್ಮೈಯ ವಿಗ್ರಹದ ಅಪರಿಗ್ರಹದಶೈ ಎಂಬುದು ವ್ಯಕ್ತವು; ಮುಕ್ತರು ಅಪ್ರಾಕೃತವಾಗಿ ಪರಿಶುದ್ಧವಾದ ಶರೀರವನ್ನು ಹೊಂದಿರುವ ಅವಸ್ಥೆ ಯಲ್ಲೂ, ಹಾಗೆಯೇ **ನಿತ್ಯವಿಗ್ರಹರಾನ ನಿತ್ಯರ್ಕ್ಕುಮ್**-ಪರಮಾತ್ಮ ಸಂಕಲ್ಪಾನು ಸಾರ ನಿತ್ಯವಾದ ವಿಗ್ರಹವನ್ನು ಧರಿಸಿರುವ ಗರುಡ, ಅನಂತ, ವಿಷ್ವಕ್ಸೇನಾದಿ ಗಳಾದ ನಿತ್ಯರಿಗೂ ಸಹ, **ಆಶ್ರಯತ್ವಮುಣ್ಡೇಯಾಗಿಲುಮ್**-ಆಶ್ರಯಿಸಲು ಯೋಗ್ಯತೆಯು ಇದ್ದರೂ, **ಸಂಸಾರನಿವರ್ತನಕ್ಷಮಮಾನ**-ಸಂಸಾರದಿಂದ ಬಿಡು ಗಡೆಯನ್ನು ಹೊಂದಿಸಲು ಯೋಗ್ಯವಾದ, **ಶುಭತ್ವಮಿಲ್ಲೈ**-ಪಾಪನಿವಾರಕತ್ವ ದೊಂದಿಗೆ ಮೋಕ್ಷವನ್ನು ಕೊಡುವ ಶುಭತ್ವವು, **ಇಲ್ಲೈ**-ಇಲ್ಲವು, ನಿತ್ಯಮುಕ್ತರು

**ಯಾಲ್ ದಿವ್ಯಮಂಗಳ ವಿಗ್ರಹತ್ತುಕ್ಕೇ ಮುಮುಕ್ಷೋಪಯುಕ್ತಮಾನ ಶುಭತ್ವಮುಮ್, ಆಶ್ರಯತ್ವಮುಮ್ ಉಳ್ಳದು.**

**ಉಕ್ತಮರ್ಥಂ ಕಾರಿಕಯಾ ಸಂಗೃಹ್ಣಾತಿ**

---

ಗಳ ಶರೀರಕ್ಕೆ ಆಶ್ರಯತ್ವ ಉಂಟು, ಶುಭತ್ವವಿಲ್ಲ ಎಂದು ಹೇಳಿದರು. ಹೀಗೆ ಆಶ್ರಯತ್ವವು ನಿತ್ಯಮುಕ್ತರುಗಳಿಗೆ ಇರುವದರಿಂದ "ನಿತ್ಯೋಪಂದ್ಯೋನಚಾನಿತ್ಯಃ ಕರ್ಮವಶ್ಯೋ ಮುಮುಕ್ಷುಭಿಃ" ಎಂದು ನಿತ್ಯರು ಮುಕ್ತರೂ ಆಚಾರ್ಯರೂ ಸಹ ಪ್ರಣಾಮಾದಿಗಳಿಂದ ಮೋಕ್ಷಾರ್ಥಿ ಸೇವಿಸಲು ಅರ್ಹರು, ಇತರ ಕೇವಲ ಬದ್ಧರು ಹಾಗಲ್ಲವು ಎಂದು ಹೇಳಲ್ಪಟ್ಟಿರುತ್ತದೆ. ಇಲ್ಲಿ ಮುಕ್ತರು ಅಶರೀರವಾಗಿಯಾಗಲಿ ಶರೀರವಾಗಿಯಾಗಲಿ ಇರಬಹುದೆಂಬುದು ತೋರಿಬರುತ್ತದೆ. ಆದರೆ **ನಿತ್ಯವಿಗ್ರಹರಾನ ನಿತ್ಯರ್** ಎಂದು ಹೇಳಿರುವದರಿಂದ ಇವರು ಪರಮಪುರುಷ ಸಂಕಲ್ಪಾನುಸಾರ ಸದಾ ಅಪ್ರಾಕೃತ ಶರೀರವುಳ್ಳವರಾಗಿಯೇ ಇರುತ್ತಾರೆ. ಈಗ ಶುಭಾಶ್ರಯತ್ವ ವಿಷಯದಲ್ಲಿ ಹೇಳಿದುದು ಏನೆಂದರೆ—

೧. ಮುಕ್ತದೆಶೆಯಲ್ಲಿ ಅಶರೀರಾವಸ್ಥೆಯಲ್ಲಿ ಶುಭತ್ವವೂ ಇಲ್ಲವು, ಆಶ್ರಯತ್ವವೂ ಇಲ್ಲವು.

೨. ಮುಕ್ತದೆಶೆಯಲ್ಲಿ ಸಶರೀರಾವಸ್ಥೆಯಲ್ಲಿ ಶುಭತ್ವವು ಇಲ್ಲವು, ಆಶ್ರಯತ್ವವು ಉಂಟು.

೩. ನಿತ್ಯರು ಸದಾ ಸಶರೀರರು; ಅವರಿಗೂ ಶುಭತ್ವವು ಇಲ್ಲವು, ಆಶ್ರಯತ್ವವು ಉಂಟು.

೪. ಪರಮಾತ್ಮ ಸ್ವರೂಪಕ್ಕೆ ಶುಭತ್ವ ಉಂಟು, ಆಶ್ರಯತ್ವವಿಲ್ಲವು.

೫. ಪರಮಾತ್ಮ ವಿಗ್ರಹಕ್ಕೇ ಎರಡೂ ಉಂಟು, ಆಶ್ರಯತ್ವವೂ ಶುಭತ್ವವೂ ಉಂಟು. ಇದನ್ನೇ ಮುಂದಿನ ವಾಕ್ಯದಿಂದ ನಿಗಮನಮಾಡಿ ಹೇಳುತ್ತಾರೆ.—

**ಆಗೈಯಾಲ್**-ಆದುದರಿಂದಲೇ, ಎಂದರೆ ಪರಮಪುರುಷನ ದಿವ್ಯಮಂಗಳ ವಿಗ್ರಹವನ್ನು ಬಿಟ್ಟರೆ, ಇನ್ನು ಯಾವುದಕ್ಕೂ ಶುಭತ್ವವೂ ಆಶ್ರಯತ್ವವೂ ಎರಡೂ ಇಲ್ಲವಾದುದರಿಂದ, **ದಿವ್ಯಮಂಗಳ ವಿಗ್ರಹತ್ತುಕ್ಕೇ**-ಪರಮಪುರುಷನಾದ ಶ್ರೀಮನ್ನಾರಾಯಣನ ದಿವ್ಯಮಂಗಳ ವಿಗ್ರಹಕ್ಕೆ ಮಾತ್ರವೇ, **ಮುಮುಕ್ಷೋಪಯುಕ್ತಮಾನ**-ಮೋಕ್ಷಾರ್ಥಿಗೆ ಉಪಯೋಗಕರವಾದ **ಶುಭತ್ವವೂ, ಆಶ್ರಯತ್ವವೂ** ಎರಡನ್ನೂ **ಉಳ್ಳದು**-ಹೊಂದಿರುದು.

ಮೇಲೆ ಉಪಪಾದಿಸಿದ ಅರ್ಥವನ್ನು ಕಾರಿಕೆಯ ಮೂಲಕ ಸಂಗ್ರಹಿಸುತ್ತಾರೆ.

---

ಧ್ಯಾನಾದಿಗಳಿಗೆ ಭಗವತ್ ಸ್ವರೂಪಕ್ಕಿಂತ ಭಗವದ್ದಿವ್ಯಮಂಗಳ ವಿಗ್ರಹವೇ ಪ್ರೀಯಸ್ಸನ್ನುಂಟುಮಾಡುವದಾಗಿ ಅತ್ಯಂತ ಯೋಗ್ಯವಾದುದೆಂದು ಹೇಳುತ್ತಾರೆ.

**ಕಾ. ಪರಾವರ ಸುಖಗ್ರಾಹ್ಯಂ ಪ್ರೇಮಬೋಧ ಪ್ರಸಾವಕಮ್ ।**
**ಸ್ವರೂಪಾತ್ ಸ್ವಾಮಿನೋರೂಪ ಮುಪಾದೇಯತಮಂ ವಿದುಃ ||೧೦೦||**

**ಶರಣಾಗತಿ ವಿಧಾಯಕ ವಾಕ್ಯತ್ತಿಲುಮ್ "ಮಾಮೇಕಂ ಶರಣಂ**

**ಅರ್ಥ— ಪರಾವರ ಸುಖಗ್ರಾಹ್ಯಂ**-ಪರರಾದ ಬ್ರಹ್ಮಾದಿ ದೇವತೆಗಳು, ಅವರ ರಾದ ಮನುಷ್ಯಾದಿಗಳು, ಇವರುಗಳಿಂದ ಸುಲಭವಾಗಿ ಗ್ರಹಿಸಲು ತಿಳಿಯಲು ಯೋಗ್ಯವಾದ, **ಪ್ರೇಮಬೋಧಪ್ರಸಾವಕಂ**-ಅತಿಶಯ ಭಕ್ತಿಜನಕವಾಗಿಯೂ ಜ್ಞಾನಜನಕವಾಗಿಯೂ ಇರುವ, **ಸ್ವಾಮಿನಃ**-ಎಲ್ಲರಿಗೂ ಸ್ವಾಮಿಯಾಗಿರುವ ಸರ್ವೇಶ್ವರನ, **ರೂಪಂ**-ದಿವ್ಯಮಂಗಳ ವಿಗ್ರಹವು, **ಸ್ವರೂಪಾತ್**-ಆತನ ಸ್ವರೂಪಕ್ಕಿಂತಲೂ, **ಉಪಾದೇಯತಮಂ**-ಅತ್ಯಂತ ಗ್ರಾಹ್ಯವಾದುದು. ಎಂದರೆ ಧ್ಯಾನಕ್ಕೆ ಯೋಗ್ಯವಾದುದು, ಎಂದು **ವಿದುಃ**-ತಿಳಿದುಕೊಂಡರು; ಯಾರು ಎಂದರೆ ಪ್ರಾಜ್ಞರು ಎಂದು ಇಟ್ಟುಕೊಳ್ಳತಕ್ಕದ್ದು, **ಪ್ರೇಮಜನಕವು** ಹೇಗೆ ಎಂದರೆ ಅತಿಶಯ ಶೋಭೆ ರೂಪ ಲಾವಣ್ಯ ಕಣ್ಣಿನ ಸೊಬಗು ಮುಖದ ಮನೋ ಹರತ್ವ ಮೊದಲಾದುವುಗಳಿಂದ ಪ್ರೇಮಜನಕವು; ಬೋಧಜನಕವು ಹೇಗೆ ಎಂದರೆ ಪಾಪಗಳು ನಶಿಸಿಹೋಗುವದರ ಮೂಲಕ ಜ್ಞಾನಸಂಕೋಚವು ಕಮ್ಮಿಯಾಗು ವದರ ಮೂಲಕವೆಂದು ತಿಳಿಯತಕ್ಕದ್ದು. ತುಂಬಾ ಪ್ರಿಯವಾದುದಾದರೆ "ದದಾಮಿ ಬುದ್ಧಿಯೋಗಂ" (ಗೀ. ) ಎಂದು ಹೇಳಿರುವ ಹಾಗೆ ಸ್ವಾಮಿಯ ಕೃಪಾಮೂಲಕ ವುಂಟಾಗಬಹುದು. ಪರಾವರರಿಗೆ ಸುಖಗ್ರಾಹ್ಯವು ಹೇಗೆಂದರೆ– ಪ್ರತ್ಯಕ್ಷವಾಗಿ ಚಕ್ಷುರಿಂದ್ರಿಯಕ್ಕೆ ವಿಷಯವಾಗುವದರಿಂದ ಸುಲಭವಾಗಿ ಗ್ರಹಿಸ ಬಹುದು ಎಂಬ ತಾತ್ಪರ್ಯವು. ಈ ಅನುಕೂಲವು ಅರ್ಚಾವಿಗ್ರಹದಲ್ಲಿರುವದರಿಂ ದಲೇ ಆಳ್ವಾರಾಚಾರ್ಯರುಗಳು ಆಗಮಪೂರ್ವಕವಾಗಿ ಪ್ರತಿಷ್ಠಿತವಾದ ಅಥವಾ ಸ್ವಯಂ ವ್ಯಕ್ತವಾದ ದೇವಾಲಯದ ದಿವ್ಯಾಕಾರಗಳ ವಿಷಯದಲ್ಲಿ ವಿಶೇಷವಾದ ಆದರವನ್ನು ಪ್ರದರ್ಶಿಸಿ ಇರುತ್ತಾರೆ. ಈ ಆನುಕೂಲ್ಯತೆಯು ಪರ, ವ್ಯೂಹ, ಹಾರ್ದ್ರ ರೂಪಗಳಲ್ಲಿ ಇಲ್ಲವು. ವಿಭವರೂಪದಲ್ಲಾದರೋ ಆ ಕಾಲದವರಿಗೆ ಮಾತ್ರ ಉಂಟು. ಅರ್ಚಾವಿಗ್ರಹದಲ್ಲಾದರೋ ಸರ್ವರಿಗೂ ಉಂಟು. ಅರ್ಚಾ ವಿಗ್ರಹವಲ್ಲದ ಇತರ ರೂಪಗಳನ್ನು ಉಪಾಸನೆಯ ಬಲದಿಂದ ಸಾಕ್ಷಾತ್ಕರಿಸಲು ಸಾಧ್ಯವು. ಈ ಎಲ್ಲಾ ಐದು ರೂಪಗಳೂ ಅಪ್ರಾಕೃತಗಳಾಗಿ ಅವುಗಳಿಗೆಲ್ಲಾ ಶುಭಾಶ್ರಯತ್ವ ಉಂಟೆಂಬುದನ್ನು ಸದ್ಯದಲ್ಲೇ ಉಪಪಾದಿಸುತ್ತಾರೆ.

ಆದುದರಿಂದ ಈ ಮುಂದಿನ ವಾಕ್ಯದಿಂದ ಭರನ್ಯಾಸನಿಷ್ಠನಿಗೆ ಉದ್ದೇಶ್ಯ ದೇವ ತೆಯು ದಿವ್ಯಮಂಗಳ ವಿಗ್ರಹಯುಕ್ತನಾದ ಭಗವಂತನೇ ಎಂದು ತಿಳಿಸುತ್ತಾರೆ.— **ಶರಣಾಗತಿವಿಧಾಯಕ ವಾಕ್ಯತ್ತಿಲುಮ್**-ಶರಣಾಗತಿಯನ್ನು ವಿಧಿಸುವ ಚರಮ ಶ್ಲೋಕದ ವಾಕ್ಯದಲ್ಲೂ, **"ಮಾಮೇಕಂ ಶರಣಂವ್ರಜ" ಎನ್ರು**-ಎಂಬದಾಗಿ,

**ವ್ರಜ ।" ಎನ್ರು ವಿಗ್ರಹ ವಿಶಿಷ್ಟರ್ ಇಲಕ್ಕಾಯ್ ತೋತ್ತಿನಾನ್.**

**ಶುಭಾಶ್ರಯತ್ವಂ ಪರತ್ವಾದ್ಯವಸ್ಥಾ ಪಂಚಕತ್ವೇಪಿ ಸಾಧಾರಣಮ್**

---

**ಇದ್ದಿವ್ಯವಿಗ್ರಹಂ ಪರವ್ಯೂಹಾದ್ಯವಸ್ಥಾಪಂಚಕತ್ತಿಲುಮ್ ಶುಭಾಶ್ರಯಮೆನ್ನುಮಿಡಮ್ ಶಾಸ್ತ್ರಸಿದ್ಧಮ್.**

---

**ವಿಗ್ರಹ ವಿಶಿಷ್ಟರ್**-ದಿವ್ಯಮಂಗಳ ವಿಗ್ರಹದಿಂದ ಕೂಡಿದವನೇ (ಗೀ. ೧೮-೬೬) **ಇಲಕ್ಕಾಯ್ ತೋತ್ತಿನಾನ್**-ಲಕ್ಷ್ಯವಾಗಿ ತೋರ್ಪಡಿಸಿಕೊಂಡನು. ಅರ್ಜುನ ರಥದಲ್ಲಿ ಅರ್ಜುನನಿಗೆ ಲೀಲಾಸಾರಥಿಯು ದಿವ್ಯಮಂಗಳವಿಗ್ರಹಯುಕ್ತನಾಗಿಯೇ "ಮಾಮೇಕಂ ಶರಣಂ ವ್ರಜ" ಎಂದು ಹೇಳಿದುದರಿಂದ, ಭರನ್ಯಾಸನಿಷ್ಠನಿಗೂ ಧ್ಯಾನೋಪಾದೇಯವಾದುದು ಶುಭಾಶ್ರಯವಾದ ಪರಮಪುರುಷನ ದಿವ್ಯಮಂಗಳ ವಿಗ್ರಹವೇ ಎಂಬ ತಾತ್ಪರ್ಯವು. **ಮಾಮೇಕಂ** ಎಂಬುದರಿಂದ ತನ್ನ ಸ್ವರೂಪ ಮಾತ್ರವೇ ಹೇಳಲ್ಪಟ್ಟಿತೆಂಬ ಅಪಾರ್ಥವು ಯುಕ್ತವಲ್ಲವು. ಸರ್ವವಿಶೇಷಣ ವಿಶಿಷ್ಟನಾದ "ಮಾಮೇಕಂ" ಎಂದು ಭಾವಿಸತಕ್ಕದ್ದೆಂಬ ಭಾವವು; ಲಕ್ಷ್ಮೀ ಕಲ್ಯಾಣ ಗುಣಗಳು, ದಿವ್ಯಮಂಗಳವಿಗ್ರಹ, ಇವೇ ಮೊದಲಾದವುಗಳಿಂದ ಯುಕ್ತನಾದ **ಮಾಮೇಕಂ** ಎಂದೇ ಭಾವಿಸತಕ್ಕದ್ದೆಂಬ ತಾತ್ಪರ್ಯವು.

ಶುಭಾಶ್ರಯತ್ವವು ಪರವ್ಯೂಹಾದಿ ರೂಪಪಂಚಕಗಳಿಗೂ ಉಂಟು.

---

ಮುಂದೆ ಈ ಶುಭಾಶ್ರಯತ್ವವು ಎಲ್ಲಾ ಐದುವಿಧವಾದ ಪರಮಪುರುಷನ ರೂಪಗಳಿಗೂ ಉಂಟೋ? ಎಂದರೆ ಎಲ್ಲಾ ರೂಪಗಳಿಗೂ ಶುಭಾಶ್ರಯತ್ವ ಉಂಟೆಂಬುದು ಭಗವಚ್ಛಾಸ್ತ್ರಸಿದ್ಧವೆಂದು ಹೇಳುತ್ತಾರೆ.—**ಇದ್ದಿವ್ಯವಿಗ್ರಹಮ್**-ಈ ದಿವ್ಯಮಂಗಳ ವಿಗ್ರಹವು, **ಪರವ್ಯೂಹಾದ್ಯವಸ್ಥಾಪಂಚಕತ್ತಿಲುಮ್** - ಪರ ವ್ಯೂಹವೇ ಮೊದಲಾದ, ಮೊದಲಾದ ಎಂಬುದರಿಂದ ವಿಭವ, ಹಾರ್ದ, ಅರ್ಚಾವತಾರವಾದ ಐದುವಿಧ ರೂಪಗಳಲ್ಲೂ, **ಶುಭಾಶ್ರಯಮೆನ್ನುಮಿಡಮ್**-ಶುಭತ್ವ ಆಶ್ರಯತ್ವಗಳನ್ನುಳ್ಳವು ಎಂಬುವ ಸಂದರ್ಭವು, **ಶಾಸ್ತ್ರಸಿದ್ಧಮ್**-ಭಗವಚ್ಛಾಸ್ತ್ರ ಸಿದ್ಧವು. ಅಲ್ಲಿ "ದೇವೋ ವೈಕುಂಠನಾಥಸ್ತು" ಎಂದಾರಂಭಿಸಿ **"ಧ್ಯಾತವ್ಯೋ ನಿತ್ಯಲೋಕಸ್ಥೋ ಭುಕ್ತಿಮುಕ್ತಿ ಫಲಪ್ರದಃ । ತಥಾಪಿ ಪುರುಷಾಕಾರೋ ಭಕ್ತಾನಾಂ ತ್ವಂ ಪ್ರಕಾಶಸೇ । ಯೋಗಿನಾಮಧಿಕಾರಸ್ಸ್ಯಾದೇಕಸ್ಮಿನ್ ಹೃದಯೇಶಯೇ । ಸುರೂಪಾಂ ಪ್ರತಿಮಾಂ ವಿಷ್ಣೋಃ ಪ್ರಸನ್ನವದನೇಕ್ಷಣಾಮ್** ಎಂದು ಹೇಳಲ್ಪಟ್ಟಿರುತ್ತದೆ. ಮುಂದಿನ ಗ್ರಂಥಕ್ಕೆ ೫೮೧-೨ ನೆಯ ಪುಟಗಳನ್ನು ನೋಡಿ.

ಪರಮಾತ್ಮನ ದಿವ್ಯಮಂಗಳ ವಿಗ್ರಹಕ್ಕೆ ಮಾತ್ರವೇ ಶುಭಾಶ್ರಯತ್ವ ಉಂಟೇ ವಿನಾ ಇನ್ನು ಇತರರ ಶರೀರಕ್ಕೆ ಇಲ್ಲವೆಂದು ಶ್ರೀ ಪರಾಶರರೂ ಷಷ್ಠಾಂಶ ಸಪ್ತ

**ದಿವ್ಯಮಂಗಳ ವಿಗ್ರಹಸ್ಯ ಶುಭಾಶ್ರಯತ್ವೇ ಸ್ಥಿತೇ, ಚರಣಯೋರೇವ ಶರಣತ್ವೇ ಕೋ ಹೇತುಃ?**

---

**ಚಿತ್ತಾಲಂಬನಸೌಕರ್ಯ ಕೃಪೋತ್ತಂಭಕ (ನ) ತಾದಿಭಿಃ ।**
**ಉಪಾಯತ್ವಮಿಹ ಸ್ವಾಮಿಪಾದಯೋ ರನುಸಂಹಿತಮ್** ॥॥

ಮಾಧ್ಯಾಯದಲ್ಲಿ **"ಸಮುಸ್ತಾಶ್ಶಕ್ತಯಶ್ಚೈತಾ ನೃಪ ಯತ್ರ ಪ್ರತಿಷ್ಠಿತಾಃ । ತದ್ವಿಶ್ವರೂಪವೈರೂಪ್ಯಂ ರೂಪಮನ್ಯದ್ಧರೇರ್ಮಹತ್"** ಎಂದಾರಂಭಿಸಿ, **"ಶುಭಾಶ್ರಯಸಚಿತ್ತಸ್ಯ"** ಎಂಬ ಶ್ಲೋಕದಲ್ಲಿ ಶುಭಾಶ್ರಯತ್ವವನ್ನು ಉಪ ಪಾದಿಸಿ, ಈ ಶುಭಾಶ್ರಯತ್ವವು ಇತರರಿಗಿಲ್ಲವು, ಏಕೆಂದರೆ **"ಅಶುದ್ಧಾಸ್ತೇ ಸಮುಸ್ತಾಸ್ತು ದೇವಾದ್ಯಾಃ ಕರ್ಮಯೋನಯಃ"** ಎಂದು ಕಾರಣವನ್ನು ಹೇಳಿ, ಶುಭಾಶ್ರಯತ್ವವುಳ್ಳ ರೂಪವೆಂತಾದ್ದು ಎಂದರೆ ಅದನ್ನು ವಿಸ್ತರಿಸಿ ವರ್ಣಿಸುವವರಾಗಿ **"ಪ್ರಸನ್ನವದನಂ ಚಾರುಪದ್ಮಪತ್ರೋಪಮೇಕ್ಷಣಮ್ । ಸುಕಪೋಲಂ ಸುವಿಸ್ತೀರ್ಣ ಲಲಾಟಫಲಕೋಜ್ಜ್ವಲಮ್"** ಎಂದು ಆರು ಶ್ಲೋಕಗಳಿಂದ ಮುಗಿಸಿರುತ್ತಾರೆ. ಈ ಶುಭಾಶ್ರಯತ್ವವುಳ್ಳ ಧ್ಯೇಯವಸ್ತುವು ೮ ಅಥವಾ ೪ ಭುಜಗಳಿಂದ ಯುಕ್ತವೆಂದು ಹೇಳಿರುವದರಿಂದ ಕೆಲವರು ಇದು ಪರರೂಪ ವರ್ಣನೆಯೆಂದು ಅದು ಮಾತ್ರವೇ ಶುಭಾಶ್ರಯವುಳ್ಳದ್ದೆಂದೂ ಮಿಕ್ಕ ರೂಪಗಳಲ್ಲವೆಂದೂ ಭಾವಿಸುವರು. ಶೌನಕಾದಿ ವಾಕ್ಯಗಳಿಗೆ ಈ ಅಭಿಪ್ರಾಯವು ಪರಮ ವಿರುದ್ಧವು. ಅಲ್ಲಿ ವಾಮನ ನರಸಿಂಹಾದಿರೂಪಗಳೂ ಕೂಡ ಮೋಕ್ಷಾರ್ಥಿಗೆ ಉಪಕಾರಕವಾಗಿ ಶುಭಾಶ್ರಯತ್ವ ಉಂಟೆಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ ಗೀತೆಯಲ್ಲೂ **"ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ"** (ಗೀ. ೪-೬) ಎಂದು ಹೇಳಿರುವದರಿಂದ ಅಜಹತ್ಸ್ವ ಸ್ವಭಾವನಾಗಿಯೇ ಅವತರಿಸುವದರಿಂದ ವಿಭವರೂಪಾದಿಗಳಿಗೂ ಶುಭಾಶ್ರಯತ್ವ ಉಂಟೆಂಬುದು ಸುಪ್ರಸಿದ್ಧವು. ಭಗವಚ್ಛಾಸ್ತ್ರವಾದ ಪಾಂಚರಾತ್ರದಲ್ಲಿ ಇದು ಸುವ್ಯಕ್ತವೆಂಬ ಭಾವದಿಂದಲೇ **ಶಾಸ್ತ್ರಸಿದ್ಧಮ್** ಎಂದು ಅಪ್ಪಣೆ ಕೊಡಿಸಿರುತ್ತಾರೆ.

ದಿವ್ಯಮಂಗಳ ವಿಗ್ರಹಕ್ಕೆ ಶುಭಾಶ್ರಯತ್ವವು ಸ್ಥಾಪಿತವಾದ ನಂತರ ಏಕದೇಶವಾದ ಚರಣಗಳು ಹೇಗೆ ಮುಮುಕ್ಷುವಿಗೆ ರಕ್ಷಕವು?

---

ಇದಕ್ಕೆ ಸಮಾಧಾನವನ್ನು ಹೇಳುತ್ತಾರೆ.— **ಚಿತ್ತಾಲಂಬನ ಸೌಕರ್ಯ**-ಮನಸ್ಸಿನ ಮೂಲಕ ಧ್ಯಾನಕ್ಕೆ ಚರಣಗಳ ಧ್ಯಾನವು ಸುಕರವಾಗಿರುವದೇನು ಎಂದರೆ, ದಿವ್ಯಮಂಗಳ ವಿಗ್ರಹವನ್ನೆಲ್ಲಾ ಏಕಕಾಲದಲ್ಲಿ ಸಾಕ್ಷಾತ್ಕರಿಸುವದು ಸುಲಭಸಾಧ್ಯವಲ್ಲವು; ಚರಣಗಳನ್ನು ಧ್ಯಾನಿಸುವದು ಸುಲಭವು; ಇದೊಂದು ಕಾರಣವು, **ಎರಡನೆ**

**ಇಙ್ಗ ದಾಸಭೂರ್ತ ಔಚಿತ್ಯಾತಿಶಯತ್ತಾಲುಮ್, (೧) "ಅನತಿಕ್ರಮಣೀಯಂಹಿ ಚರಣಗ್ರಹಣಮ್" ಎಙ್ಗಿರಪಡಿಯೇ ಕೃಪೋತ್ತಂಭಕತ್ವಾತಿ**

ಯದು, **ಕೃಪೋತ್ತಂಭಕತಾದಿಭಿಃ**-ಕೃಪೆಯನ್ನು ವೃದ್ಧಿಗೊಳಿಸುವುದೇನು, ಇವೇ ಮೊದಲಾದವುಗಳಿಂದ, ಆದಿಪದದಿಂದ, ಔಚಿತ್ಯ, ಭೋಗ್ಯತ್ವಾದಿಗಳು ಹೇಳಲ್ಪಟ್ಟವು; ಮತ್ತು ಶರಣಾಗತನಾಗುವಾಗ ದಣ್ಡವತ್ಪ್ರಣಾಮವು ಉಚಿತವು, ಆ ಕಾಲದಲ್ಲಿ ದೃಷ್ಟಿಪಥಕ್ಕೆ ಬೀಳುವದು ಚರಣಗಳೇ ಮಸ್ತಕಾದಿಗಳಲ್ಲವು; ಈ ಕಾರಣವೂ ಆದಿಪದದಲ್ಲಿ ಸೇರಿದುದು, ಈ ಸಂದರ್ಭದಲ್ಲಿ **"ನಾಹಂ ಜಾನಾಮಿ ಕೇಯೂರೇ ನಾಹಂ ಜಾನಾಮಿ ಕುಂಡಲೇ । ನೂಪುರೇ ತ್ವಭಿಜಾನಾಮಿ ನಿತ್ಯಂ ಪಾದಾಭಿವನ್ದನಾತ್"** (ರಾಮಾ. ಕಿಷ್ಕಿ. ೬-೨೨) ಎಂದು ಲಕ್ಷ್ಮಣನು ಅಣ್ಣನಿಗೆ ಹೇಳುವ ವಾಕ್ಯವು. ಸೀತೆಯು ಕಿಷ್ಕಿಂಧೆಯ ಸಮೀಪದಲ್ಲಿ ಬೀಳಿಸಿದ ಆಭರಣಗಳನ್ನು ಸುಗ್ರೀವನು ತಂದು ತೋರಿಸಿದಾಗ, ಈ ಕೈಗೆ ಹಾಕಿಕೊಳ್ಳುವ ಬಾಜುಬಂದುವು, ಕಿವಿಗೆ ಹಾಕಿಕೊಳ್ಳುವ ಕುಂಡಲಗಳು ಸೀತೆಯದೇ ಎಂಬುದು ನನಗೆ ತಿಳಿಯದು; ಆದರೆ ಕಾಲಿಗೆ ಹಾಕಿಕೊಳ್ಳುವ ಕಾಲುಸರಗಳು ಮಾತ್ರ ಸೀತೆಯದು ಎಂಬುದು ನನಗೆ ಚನ್ನಾಗಿ ತಿಳಿಯುವದು; ಏಕೆಂದರೆ ನಿತ್ಯವೂ ಆಕೆಯ ಪಾದಗಳಿಗೆ ನಮಸ್ಕರಿಸುವದರಿಂದ ವ್ಯಕ್ತವೆಂದು ಹೇಳಿರುತ್ತಾನೆ. ಶರಣಾಗತಿಯು ಪ್ರಣಾಮರೂಪವಾದುದರಿಂದ ಪಾದಗಳೇ ಶರಣಾಗತನಿಗೆ ದೃಷ್ಟಿಪಥಕ್ಕೆ ಬೀಳುವದರಿಂದ, ಅವುಗಳೇ ಪ್ರಾಧಾನ್ಯವಾಗಿ **ಅನುಸಂಹಿತಮ್** ಎಂದು ಹೇಳಲ್ಪಟ್ಟಿತು. ಈ ಕಾರಣಗಳಿಂದ, **ಇಹ**-ಈ ಸಂದರ್ಭದಲ್ಲಿ ಎಂದರೆ ದ್ವಯದ ಮೂಲಕ ಉಪಾಯಾನುಷ್ಠಾನವನ್ನು ಮಾಡುವವರಲ್ಲಿ, **ಉಪಾಯತ್ವವು ಸ್ವಾಮಿಪಾದಯೋಃ**-ಸರ್ವೇಶ್ವರನ ಪಾದಗಳಲ್ಲಿ, **ಅನುಸಂಹಿತಮ್**-ಅನುಸಂಧೇಯವು.

ಕಾರಿಕೆಯ ಅರ್ಥವನ್ನೇ ಮುಂದಿನ ವಾಕ್ಯಗಳಿಂದ ಉಪಪಾದಿಸುತ್ತಾರೆ.— **ಇಙ್ಗ**-ಈ ದ್ವಯಮನ್ತ್ರದ ಮೂಲಕ ಶರಣಾಗತಿಯನ್ನು ಅನುಷ್ಠಿಸುವಾಗ, **ದಾಸಭೂರ್ತ**-ದಾಸಭೂತನಾಗಿರುವ ಈ ಮುಮುಕ್ಷುವು, **ಔಚಿತ್ಯಾತಿಶಯತ್ತಾಲುಂ**-ದಾಸಭೂತನಾದವನು ಸ್ವಾಮಿಯ ಪಾದಗ್ರಹಣದಲ್ಲಿ ಔಚಿತ್ಯವಿರುವದರಿಂದ, ಅಂತಹ ಔಚಿತ್ಯಾತಿಶಯದಿಂದಲೂ (೧) **ಚರಣಗ್ರಹಣಮ್**-ತನ್ನ ಸ್ವಾಮಿಗೆ ಅಪರಾಧ ಮಾಡಿದವನು ಅಪರಾಧ ಕ್ಷಮಾಪಣೆಗಾಗಿ ಸ್ವಾಮಿಯ ಚರಣಗ್ರಹಣವು ಎಂದರೆ ಕಾಲುಗಳನ್ನು ಹಿಡಿದುಕೊಳ್ಳುವದು, **ಅನತಿಕ್ರಮಣೀಯಮ್**-ಉಲ್ಲಂಘಿಸಲು ಸ್ವಾಮಿಗೆ ಸಾಧ್ಯವಲ್ಲವು, ಎಂದರೆ ಅಪರಾಧಿಯು ಯಾವಾಗ ಕಾಲನ್ನು ಘಟ್ಟಿಯಾಗಿ ಹಿಡಿದುಕೊಂಡನೋ ಆಗ ರಕ್ಷಿಸಲೇಬೇಕೆಂಬ ನಿರ್ಬಂಧ ಉಂಟು ಎಂಬ ತಾತ್ಪರ್ಯವು, **ಎಙ್ಗಿರಪಡಿಯೇ**-ಎಂದು ಹೇಳಿರುವ ಹಾಗೆ, **ಕೃಪೋತ್ತಂಭ**

---

(೧)

**ಶಯತ್ತಾಲುಮ್, (೨) "ತವಾಮೃತಸ್ಯಂದಿನಿ" ಇತ್ಯಾದಿಗಳಿರ್ಪಡಿಯೇ ಭೋಗ್ಯತ್ವಾತಿಶಯತ್ತಾಲುಮ್ ತಿರುವಡಿಗಳೈ ಅವಲಂಬಿಕ್ಕಿರ್ರಾ.**

**ಕತ್ವಾ ತಿಶಯತ್ತಾಲುಮ್**-ಭಗವಂತನ ಕೃಪೆಯನ್ನು ವೃದ್ಧಿಹೊಂದಿಸುವದರಿಂದಲೂ, ಮತ್ತು (೨) **"ತವಾಮೃತಸ್ಯಂದಿನಿ" ಇತ್ಯಾದಿಗಳಿರ್ ಪಡಿಯೇ**-ಇವೇ ಮೊದಲಾದವುಗಳಲ್ಲಿ ಹೇಳಿರುವ ಹಾಗೆ, **ಭೋಗ್ಯತ್ವಾತಿಶಯತ್ತಾಲುಂ**-ಭೋಗ್ಯತ್ವಾತಿಶಯದಿಂದಲೂ, **ತಿರುವಡಿಗಳೈ**-ಪರಮಾತ್ಮನ ಪಾದಗಳು, **ಅವಲಂಬಿಕ್ಕಿರ್ರಾ**-ಆಶ್ರಯಿಸುತ್ತಾನೆ. ಇಲ್ಲಿ ಮೂರು ಕಾರಣಗಳನ್ನು ಚರಣಾನುಸಂಧಾನಕ್ಕೆ ಹೇಳಲ್ಪಟ್ಟವು.—

(೧) ದಾಸಭೂತನಿಗೆ ಸ್ವಾಮಿಯ ಪಾದಗ್ರಹಣದಲ್ಲಿ ಔಚಿತ್ಯವೂ

(೨) ಸಾಪರಾಧಿಗೆ ಪಾದಗ್ರಹಣವೇ ಕೃಪೋತ್ತಂಭಕವೂ

(೩) ಶೇಷಭೂತನಿಗೆ ಪಾದಸೇವೆಯಲ್ಲೇ ಭೋಗ್ಯತ್ವವೂ, ಹೀಗೆ ಮೂರು ಕಾರಣಗಳು ಹೇಳಲ್ಪಟ್ಟವು.

**"ತವಾಮೃತಸ್ಯಂದಿನಿಪಾದಪಂಕಜೇ ನಿವೇಶಿತಾತ್ಮಾ ಕಥಮನ್ಯದಿಚ್ಛತಿ ।**
**ಸ್ಥಿತೇಽರವಿಂದೇ ಮಕರಂದ ನಿರ್ಭರೇ ಮಧುವ್ರತೋ ನೇಕ್ಷುರಕಂ ಹಿ ವೀಕ್ಷತೇ" ॥೨೭॥**

ನಿನ್ನ ಪರಮಭೋಗ್ಯವಾದ ಮತ್ತು ಪರಿಪೂರ್ಣ ಬ್ರಹ್ಮಾನುಭವವನ್ನುಂಟು ಮಾಡುವ ನಿನ್ನ ಪಾದಕಮಲಗಳಲ್ಲಿಟ್ಟ ಮನಸ್ಸು ತುಚ್ಛಫಲಗಳನ್ನು ಕೊಡುವುವುಗಳನ್ನು ಆಶ್ರಯಿಸುತ್ತದಯೇ? ಎಂದು ಹೇಳುತ್ತಾರೆ, **ಅಮೃತಸ್ಯಂದಿನಿ**-ಮೋಕ್ಷಸುಖವಾದ ಅಮೃತವನ್ನು ಸ್ರವಿಸುವ, **ತವ ಪಾದಪಂಕಜೇ**-ನಿನ್ನ ಪಾದಕಮಲದಲ್ಲಿ, **ನಿವೇಶಿತಾತ್ಮಾ**-ಇಡಲ್ಪಟ್ಟ ಮನಸ್ಸು, **ಕಥಮನ್ಯದಿಚ್ಛತಿ**-ವಿಷತುಲ್ಯವಾಗಿ ನಶ್ವರವಾಗಿರುವ ಫಲಕೊಡುವ ಬೇರೆ ಯಾವುದನ್ನು ಹೇಗೆ ಅಪೇಕ್ಷಿಸೀತು? ಎಂದಿಗೂ ಅಪೇಕ್ಷಿಸಲಾರದೆಂಬ ಭಾವವು. ಒಂದು ದೃಷ್ಟಾಂತದ ಮೂಲಕ ವ್ಯಕ್ತಪಡಿಸುತ್ತಾರೆ. **ಸ್ಥಿತೇಽರವಿಂದೇ ಮಕರಂದ ನಿರ್ಭರೇ**-ಅಮೃತಸದೃಶವಾದ ಮಕರಂದ ತುಂಬಿರುವ, ಆಗತಾನೇ ಅರಳಿ, ಬಹು ಸ್ವಾದುವಾದ ಮಕರಂದದಿಂದ ಪರಿಪೂರ್ಣವಾದ ಕಮಲಪುಷ್ಪವು ಭೋಗ್ಯತಮವಾದುದಾಗಿ ನನ್ನಿಹಿತವಾಗಿರುವಾಗ, **ಮಧುವ್ರತಃ**-ಸಾರತಮವಾದುದನ್ನೇ ಗ್ರಹಿಸುವ ಶಕ್ತಿಯುಳ್ಳ ಕೀಟಜಾತಿಯಲ್ಲಿರುವ ಭ್ರಮರವೇ, **ನೇಕ್ಷುರಕಂಹಿವೀಕ್ಷತೇ**-ಕಂಟಕಗಳಿಂದ ಆವೃತವಾಗಿ ನಿರ್ಗಂಧವಾದ ಕ್ಷುದ್ರಪುಷ್ಪವನ್ನು ಕಣ್ಣು ಎತ್ತಿ ನೋಡೀತೇ? ಹೀಗಿರುವಾಗ ವಿವೇಕ ಜ್ಞಾನಗಳನ್ನು ನೀನು ದಯಪಾಲಿಸಿದ ಮನುಷ್ಯಜಾತಿಯಲ್ಲಿ ಹುಟ್ಟಿ, ನಿನ್ನ ಕೃಪೆಗೆ ಪಾತ್ರನಾಗಿ "ದದಾಮಿ ಬುದ್ಧಿಯೋಗಂತಂ" ಎಂಬಲ್ಲಿ ಹೇಳಿರುವ ಹಾಗೆ,

---

**(೨) ಆಳ. ಸ್ತೋ. ೨೭.**

ಇವ್ಯರ್ಥಂ (೩) "ಸರ್ವದಾ ಚರಣದ್ವಂದ್ವಮ್" (೪) "ತ್ವತ್ಪಾದಕಮಲಾದನ್ಯತ್" (೫) "ಮಮತೇ ಪಾದಯೋಸ್ಸ್ಥಿತಮ್" (೬) "ಲೋಕ

ಬುದ್ಧಿಯೋಗವನ್ನು ಹೊಂದಿರುವ ನಾನು ಅಮೃತಸ್ಯಂದಿನಿಯಾದ ನಿನ್ನ ಪಾದಕಮಲಗಳನ್ನು ತ್ಯಜಿಸಿ, ಕ್ಷುದ್ರಫಲದಾಯಕಗಳಲ್ಲಿ ಮನಸ್ಸನ್ನು ಎಂದಿಗಾದರೂ ಇಟ್ಟೇನೆ ಎಂಬುದು ತಾತ್ಪರ್ಯ. ಈ ಶ್ಲೋಕವು ಪಾದಕಮಲಗಳಿಗಿರುವ ನಿರತಿಶಯ ಭೋಗ್ಯತ್ವವನ್ನು ಉಪಪಾದಿಸುತ್ತದೆ.

ಮುಂದೆ ಈ ಔಚಿತ್ಯ, ಕೃಪೋತ್ತಂಭಕತ್ವ, ಭೋಗ್ಯತ್ವಾದಿಗಳ ಉಪಪಾದನೆಗೆ ಪ್ರಮಾಣಗಳನ್ನು ಉದಾಹರಿಸುತ್ತಾರೆ.—(೩) **ದೇವಾನಾಂ ದಾನವಾನಾಂಚ ಸಾಮಾನ್ಯಮಧಿದೈವತಮ್। ಸರ್ವದಾ ಚರಣದ್ವಂದ್ವಂ ವ್ರಜಾಮಿ ಶರಣಾಂತವ"** ಎಂಬುದು ಶ್ಲೋಕವು. ಅರ್ಥವು ಸ್ಪಷ್ಟವು. ಇಲ್ಲಿ ಔಚಿತ್ಯವು ಹೇಳಲ್ಪಟ್ಟಿತು. (೪) **ತ್ವತ್ಪಾದಕಮಲಾದನ್ಯನ್ನಮೇ ಜನ್ಮಾನ್ತರೇಷ್ವಪಿ। ನಿಮಿತ್ತಂ ಕುಶಲಸ್ಯಾಸ್ತಿ ಯೇನ ಗಚ್ಛಾಮಿ ಸದ್ಗತಿಮ್"** ನನ್ನ ಕ್ಷೇಮಕ್ಕೆ ಕಾರಣಭೂತವಾದುದಾಗಿಯೂ ಯಾವುದರಿಂದ ನಾನು ಸದ್ಗತಿಯನ್ನು ಹೊಂದಬಹುದೋ ಅದು ಈ ಜನ್ಮದಲ್ಲಾಗಲಿ ಬೇರೆ ಜನ್ಮದಲ್ಲಾಗಲಿ ನಿನ್ನ ಪಾದಕಮಲಕ್ಕಿಂತ ಬೇರೆಯಾಗುವದಿಲ್ಲವು. ಇದು ಕೃಪೋತ್ತಂಭಕಕ್ಕೆ ಪ್ರಮಾಣವು. (೫) **"ನ ಕಾಮಕಲುಷಂ ಚಿತ್ತಂಮಮತೇ ಪಾದಯೋಃ ಸ್ಥಿತಮ್। ಕಾಮಯೇ ವೈಷ್ಣವತ್ವಂತು ಸರ್ವಜನ್ಮಸುಕೇವಲಮ್॥"** ನನ್ನ ಐಹಿಕ ಕಾಮಗಳಿಂದ ಕಲುಷಿತವಾದ ಮನಸ್ಸು ನಿನ್ನ ಪಾದಗಳಲ್ಲದೆ ಹೋಯಿತು ಆದುದರಿಂದ ಮನನ್ನು ನಿರ್ಮಲವಾಗಿ ನಿನ್ನ ಪಾದಕಮಲಗಳಲ್ಲಿರುವದಕ್ಕಾಗಿ ನನಗೆ ಎಲ್ಲಾ ಜನ್ಮಗಳಲ್ಲೂ ನಿನ್ನನ್ನು ಆಶ್ರಯಿಸುವ ವೈಷ್ಣವತ್ವವನ್ನು ಅಪೇಕ್ಷಿಸುತ್ತೇನೆ. ಇದೂ ಔಚಿತ್ಯ ಬೋಧಕವು. (೬) **"ಸರ್ವಧರ್ಮಾಂಶ್ಚ ಸನ್ತ್ಯಜ್ಯ ಸರ್ವಕಾಮಾಂಶ್ಚ ಸಾಕ್ಷರಾ। ಲೋಕವಿಕ್ರಾನ್ತ ಚರಣೌ ಶರಣಂತೇಽವ್ರಜಂ ವಿಭೋ॥" "ಸರ್ವಧರ್ಮಾಂಶ್ಚ**-ಮೋಕ್ಷಸಾಧನಭೂತ ಸಪರಿಕರ ಉಪಾಸನರೂಪ ಬ್ರಹ್ಮವಿದ್ಯೆಗಳನ್ನೆಲ್ಲಾ, **ಸನ್ತ್ಯಜ್ಯ**-ಚನ್ನಾಗಿ ಸವಾಸನವಾಗಿ ಬಿಟ್ಟು, ಮೋಕ್ಷೋಪಾಯತ್ವೇನ ಪರಿತ್ಯಾಗ ಮಾಡಿ ಎಂಬರ್ಥವು, ಅಥವಾ ಈ ಎಲ್ಲಾ ಧರ್ಮಗಳೂ ಈ ಪ್ರಪತ್ತಿಗೆ ಅಂಗವಲ್ಲವಾದುದರಿಂದ ಅಂಗತ್ವೇನ ಪರಿತ್ಯಾಗ ಮಾಡಿ, ಇದರಿಂದ ಭಗವದಾಜ್ಞಾರೂಪ ನಿತ್ಯನೈಮಿತ್ತಿಕಗಳ ತ್ಯಾಗವು ಹೇಳಲ್ಪಡಲಿಲ್ಲವು, **ಹೇ ವಿಭೋ**-ಓ ಸರ್ವವ್ಯಾಪಿಯಾಗಿ ಸರ್ವಶಕ್ತನೇ, **ತೇ**-ನಿನ್ನ, **ಲೋಕವಿಕ್ರಾನ್ತ ಚರಣೌ**-ಲೋಕಕ್ಕೆಲ್ಲಾ ನಿನ್ನ ಚರಣಗಳೇ ರಕ್ಷಕವೆಂಬುದನ್ನು ತಿಳಿಸುವದಕ್ಕಾಗಿ

(೩) ಜಿತನ್ತಾ. ೧-೧೨. (೪) ಜಿತನ್ತಾ. ೧-೧೦. (೫) ಜಿತನ್ತಾ. ೧-೧೩. (೬) ಶರಣಾಗತಿಗದ್ಯವು.

**ವಿಕ್ರಾನ್ತ ಚರಣೌ ಶರಣಂ ತೇಽವ್ರಜಂ ವಿಭೋ" (೭) "ಸಭ್ರಾತುಶ್ಚರಣೌ ಗಾಢಮ್" (೮) "ತಸ್ಯ ತಾಮ್ರತಲೌ ತಾತ ಚರಣೌ ಸುಪ್ರತಿಷ್ಠಿತೌ । ಸುಜಾತಮ್ಮೃದುರಕ್ತಾಭಿ ರಙ್ಗುಲೀಭಿರಲಂಕೃತೌ । ಪ್ರಯತೇನ ಮಯಾ ಮೂರ್ಧ್ನಾ ಗೃಹೀತ್ವಾಹ್ಯಭಿವಂದಿತೌ ॥" (೯) "ಚರಣೌ ಶರಣಂ ಯಾತಃ" (೧೦) "ಪ್ರಪನ್ನಾಘೌಘವಿಧ್ವಂಸಿ ಚರಣೌ ಶರಣಂಗತಃ", ಇತ್ಯಾದಿಗಳಿಲುಮ್ ಪ್ರಸಿದ್ಧಮ್. ಇವತ್ತೈಯಡಿಯೊತ್ತಿನ (ವರ್‌ಗಳುಮ್) ಆಳ್‌ವಾರ್‌ಗಳುಮ್ (೧೧) "ಉನ್ನಡಿ ಕ್ಕೀಳ್ ಅಮರ್‌ನ್ದು ಪುಗು**

ತ್ರಿವಿಕ್ರಮನಾಗಿ ಎಲ್ಲಾ ಲೋಕವನ್ನೂ ಆಕ್ರಮಿಸಿದ ಪಾದದ್ವಂದ್ವವನ್ನು, **ಶರಣಂ**-ಉಪಾಯವನ್ನಾಗಿ, **ಅವ್ರಜಮ್**-ಪ್ರಜಾಪಿ, ಹೊಂದುವೆನು, ಇದು ಔಚಿತ್ಯಾದಿ ಮೂರಕ್ಕೂ ನಿದರ್ಶನವು. ಇಲ್ಲಿ **ಲೋಕವಿಕ್ರಾಂತ** ಎಂದು ಬೇರೆ ಪದವೆಂದು ಭಾವಿಸಿ ಸಂಬೋಧನೆಯನ್ನಾಗಿಯೂ ಅರ್ಥ ಹೇಳಬಹುದು. (೭) **"ಸಭ್ರಾತುಶ್ಚರಣೌಗಾಢಂ ನಿಪೀಡ್ಯ ರಘುನಂದನಃ"** ಈ ಶ್ಲೋಕವು ಹಿಂದೆ ಎರಡು ಸಲ ಈ ಪ್ರಯಾಧಿಕಾರದಲ್ಲೇ ಉದಾಹೃತವು ನೆಯ ಪುಟಗಳನ್ನು ನೋಡಿ. ಈ ಶ್ಲೋಕವು ಕೃಪೋತ್ತಂಭಕತ್ವಕ್ಕೆ ಉದಾಹರಣೆಯು. (೮) **ಹೇ ತಾತ**-ಓ ಅಪ್ಪನೇ, **ತಸ್ಯ**-ಆ ಭಗವಂತನ, **ತಾಮ್ರತಲೌ**-ಕೆಂಪಗಿರುವ ಅಂಗಾಲುಳ್ಳ, **ಸುಪ್ರತಿಷ್ಠಿತೌ**-ಚನ್ನಾಗಿ ಪ್ರತಿಷ್ಠಿತಗಳಾದ, **ಮೃದುರಕ್ತಾಭಿಃ ಅಙ್ಗುಲೀಭಿರಲಂಕೃತೌ**-ಮೃದುವಾಗಿಯೂ ಕೆಂಪಗೂ ಇರುವ ಬೆರಳುಗಳಿಂದ ಅಲಂಕೃತವಾಗಿರುವ, **ಚರಣೌ**-ಪಾದದ್ವಂದ್ವವನ್ನು, **ಪ್ರಯತೇನ**-ಪರಿಶುದ್ಧನಾದ ಅಥವಾ ಅನನ್ಯಗತಿಕನಾದ, **"ಪವಿತ್ರಃ ಪ್ರಯತಃ ಪೂತಃ"** ಎಂದು ಅಮರ ನಿಘಂಟು ಇದೆ. **ಮಯಾ**-ನನ್ನಿಂದ, **ಮೂರ್ಧ್ನಾ**-ಶಿರಸ್ಸಿನಿಂದ, **ಗೃಹೀತ್ವಾ** ಧರಿಸಲ್ಪಟ್ಟು, **ಅಭಿವಂದಿತೌ**-ಸೇವಿಸಲ್ಪಟ್ಟವಲ್ಲೇ" ಇದು ಭೋಗ್ಯತ್ವಕ್ಕೆ ನಿದರ್ಶನವು. (೯) **"ಚರಣೌ**-ಪಾದದ್ವಂದ್ವವನ್ನು, **ಶರಣಂಯಾತಃ**-ಉಪಾಯವನ್ನಾಗಿ ಹೊಂದಿದೆನು." ಇದು ಮೂರಕ್ಕೂ ಉದಾಹರಣೆಯು. (೧೦) **ಪ್ರಪನ್ನಾಘೌಘವಿಧ್ವಂಸಿ**-ಪ್ರಪನ್ನರ ಪಾಪಗಳ ಸಮೂಹವನ್ನು ನಾಶಮಾಡುವ, **ಚರಣೌ**-ಪಾದದ್ವಂದ್ವವನ್ನು, **ಶರಣಂಗತಃ**-ಉಪಾಯವಾಗಿ ಹೊಂದಿದೆನು, **ಇತ್ಯಾದಿಗಳಿಲುಂ**-ಇವೇ ಮೊದಲಾದ ಪ್ರಮಾಣಗಳಲ್ಲಿ, **ಪ್ರಸಿದ್ಧಮ್**-ಪ್ರಸಿದ್ಧವು. ಹಿಂದೆ ಮಹರ್ಷಿಸೂಕ್ತಗಳು ಉದಾಹರಿಸಲ್ಪಟ್ಟವು. ಮುಂದೆ ಆಳ್ವಾರ್ ಆಚಾರ್ಯರ ದಿವ್ಯಸೂಕ್ತಿಗಳನ್ನು ನಿದರ್ಶನವಾಗಿ ಉದಾಹರಿಸುತ್ತಾರೆ. **ಇವತ್ತೈ ಅಡಿಯೊತ್ತಿನಾಳ್ವಾರ್‌ಗಳುಮ್**-ಈ ಮೇಲಿನ ಪ್ರಮಾಣಗಳಿಗನುಸಾರವಾಗಿ ನಡೆ

(೭) ರಾಮಾ. ಅಯೋಧ್ಯಾ. ೩೧-೨. (೮) ಭಾರತ. ಅರಣ್ಯ. ೧೭೦-೧೩೫.
(೯) (೧೦) (೧೧) ೬-೧೦-೧೦.

**ನ್ದೇನೇ" ಎನ್ರುಮ್ (೧೨) "ತ್ವತ್ಪಾದಮೂಲಮ್ ಶರಣಂ ಪ್ರಪದ್ಯೇ" ಎನ್ರುಮ್ ಅರುಳಿಚ್ಚೆಯ್‌ದಾರ್‌ಗಳ್, ಸೌಗಂಧ್ಯ ಸೌಕುಮಾರ್ಯಾದಿ ಗುಣ ವಿಗ್ರಹವಾ್ ಹರಿಃ । ತಸ್ಯಸ್ವಾತ್ಮ ಪ್ರದಾನೇತು ಸಾಧನಂ ಸ್ವಪದದ್ವಯಮ್" ಎನ್ರು ಅಭಿಯುಕ್ತರುಮ್ ಪ್ರತಿಪಾದಿತ್ತಾರ್‌ಗಳ್. ಸೌಗಂಧ್ಯ ಸೌಕುಮಾರ್ಯಾದಿ ಗುಣವಿಗ್ರಹವಾ್ ಹರಿಃ । ತಸ್ಯಸ್ವಾತ್ಮ ಪ್ರದಾನೇತು ಸಾಧನಂ ಸ್ವಪದದ್ವಯಮ್ " ಎನ್ರು ಅಭಿಯುಕ್ತರುಂ ಪ್ರತಿಪಾದಿತ್ತಾರ್‌ಗಳ್.**

ಯುವ ಆಳ್ವಾರ್‌ಗಳೂ ಎಂದರೆ ನಮ್ಮಾಳ್ವಾರ್ ಪ್ರಭೃತಿಗಳು, **(೧೧) "ಉನ್ನಡಿಕ್ಕೀಳ್ ಅಮರ್‌ನ್ದು ಪುಗಂದೇನೇ ?"**-ನಿನ್ನನ್ನಾಶ್ರಯಿಸಿ ನಿನ್ನ ಪಾದಗಳ ಕೆಳಗೆ ಸೇರಿಕೊಂಡಿರುತ್ತೇನೆ, ಎಂದರೆ ಅವುಗಳನ್ನು ಉಪಾಯವಾಗಿ ಆಶ್ರಯಿಸಿರುತ್ತೇನೆ, **ಎನ್ರುಮ್**-ಎಂಬದಾಗಿಯೂ, **(೧೨) ತ್ವತ್ಪಾದಮೂಲಮ್** - ಭಗವಂತನಾದ ನಿನ್ನ ಪಾದಮೂಲವನ್ನು, **ಶರಣಂ ಪ್ರಪದ್ಯೇ**-ಉಪಾಯವನ್ನಾಗಿ ಹೊಂದಿದೆನು, (ಇವಕ್ಕೆ ಹಿಂದೆ ಪುಟವನ್ನು ನೋಡಿ) **ಎನ್ರುಮ್**-ಎಂಬದಾಗಿಯೂ, **ಅರುಳಿಚ್ಚೆಯ್‌ದಾರ್‌ಗಳ್** - ಹೀಗೆ ಔಚಿತ್ಯದಿಂದಲೂ, ಕೃಪೋತ್ತಂಭಕವೆಂಬ ಭಾವದಿಂದಲೂ. ಭೋಗ್ಯಭಾವದಿಂದಲೂ ಭಗವಂತನ ಪಾದದ್ವಂದ್ವವನ್ನು ಆಶ್ರಯಿಸಿ, ಹಿಂದಿನ ಪಾಪಗಳನ್ನೆಲ್ಲಾ ಹೋಗಲಾಡಿಸಿಕೊಂಡು, ಮೋಕ್ಷಕ್ಕೆ ಮಾರ್ಗ ಮಾಡಿಕೊಂಡರೆಂಬ ಭಾವವು.

**ಸೌಗಂಧ್ಯ**-**"ಸರ್ವಗಂಧಃ"** ಎಂದು ಶ್ರುತಿಯಲ್ಲಿ ಹೇಳಿರುವ ಹಾಗೆ ಅನುಕೂಲ ಗಂಧವು, **ಸೌಕುಮಾರ್ಯ**-**"ಸುಕುಮಾರೌ ಮಹಾಬಲೌ"** ಎಂದು ಮಹರ್ಷಿಯು ಹೇಳಿರುವ ಹಾಗೆ ಮಹಾಬಲವಿದ್ದರೂ ಮೃದುವಾಗಿರುವ ಸ್ವಭಾವವು **ಆದಿ**-ಲಾವಣ್ಯ ಯೌವನಾದಿಗಳು ಹೇಳಲ್ಪಟ್ಟವು, ಇಂತಹ **ಗುಣವಿಗ್ರಹವಾ್**-ಗುಣಗಳಿಂದ ಸೇರಿದ ದಿವ್ಯಮಂಗಳ ವಿಗ್ರಹವನ್ನು ಹೊಂದಿದವನು, ಅಥವಾ ಅಂತಹ ಗುಣಗಳೇನು ಶುಭಾಶ್ರಯವಾದ ವಿಗ್ರಹವೇನು ಇವುಗಳನ್ನು ಹೊಂದಿದವನಾದವನು, **ಹರಿಃ**-ಶ್ರೀ ಮಹಾವಿಷ್ಣುವು ; **ತಸ್ಯ**-ಆ ಮಹಾವಿಷ್ಣುವಿಗೆ, **ಸ್ವಾತ್ಮ ಪ್ರದಾನೇತು**-ಮೋಕ್ಷಾರ್ಥಿಗಳಾಗಿ ತನ್ನನ್ನು ಆಶ್ರಯಿಸಬೇಕೆಂದಿರುವವರಿಗೆ ತನ್ನ ಆತ್ಮಾವನ್ನು ಕೊಡುವ ವಿಷಯದಲ್ಲಾದರೋ ಎಂದರೆ ಪರಿಪೂರ್ಣ ಬ್ರಹ್ಮಾನುಭವ ರೂಪ ಆನಂದವನ್ನು ಕೊಡುವುದರಲ್ಲಾದರೋ, **ಸಾಧನಂ**-ಸಾಧನವು, ಉಪಾಯವು, **ಸ್ವಪದದ್ವಯಂ**-ತನ್ನ ಪಾದಯುಗ್ಮವೇ ಎಂದರೆ ತನ್ನ ಪಾದದ್ವಂದ್ವದಲ್ಲಿ ಮಾಡುವ ಶರಣಾಗತಿಯೇ ಎಂಬ ಭಾವವು, **ಎನ್ರು**-ಎಂಬದಾಗಿ, **ಅಭಿಯುಕ್ತರುಮ್** - ಪೂಜ್ಯರಾದ **ಅರುಳಾಳಪ್ಪೆರುಮಾಳೆಮ್ಬೆರುಮಾನಾರ್**ರವರು, **ಪ್ರತಿ**

---

(೧೨) ಆಳ. ಸ್ತೋ. ೨೨.

## ಚರಣೌ ಶಬ್ದೇ ಅವಧಾರಣಂ ವಿವಕ್ಷಿತಮ್

**ಚರಣೌ ಎಙ್ಗಿರ ವಿಡತ್ತಿಲೇ (೧) "ತಮೇವ ಶರಣಂ ಗಚ್ಛ" ಪಾದಿತ್ತಾರ್‌ಗಳ್** - ಪ್ರತಿಪಾದಿಸಿ ಹೇಳಿದರು. ಇವರ ವೃತ್ತಾಂತಕ್ಕೆ ನೆಯ ಪುಟವನ್ನು ಈ ಅಧಿಕಾರದಲ್ಲೇ ನೋಡಿ. ಮುವ್ವಾಯಿರಪ್ಪಡಿ ಗುರುಪರಂಪರಾಸಾರದ ೭೦ ನೆಯ ಪುಟವನ್ನು ನೋಡಿ. ಇಲ್ಲಿಯೂ ಭೋಗ್ಯತ್ವವು ಉಪಪಾದಿತವು. ಶರಣ್ಯನಾದ ಮುಕುಂದನಿಗೂ ತನ್ನ ಪದದ್ವಂದ್ವ ಮೂಲಕವಾಗಿಯೇ ಮುಕ್ತಿಯನ್ನೀಯಲು ಅಭಿಮತವೆಂಬ ಭಾವವನ್ನು ಈ ಪೂಜ್ಯರು ಪ್ರದರ್ಶಿಸಿದರೆಂಬುದು ತಾತ್ಪರ್ಯವು. ಸಾರಪ್ರಕಾಶಿಕೆಯವರು ಅಭಿಯುಕ್ತರು ಶ್ರೀ ಪರಾಶರಭಟ್ಟರೆಂದು ಹೇಳಿರುತ್ತಾರೆ. ಸಾರವಿವರಣೆಯವರು ಅರುಳಾಳ್‌ಪ್ಪೆರುಮಾಳ್ ಎಂಬೆರುಮಾನಾರೆಂದೇ ಅಪ್ಪಣೆ ಕೊಡಿಸಿರುತ್ತಾರ.

### "ಚರಣೌ" ಎಂಬ ಶಬ್ದದಲ್ಲಿ ಅವಧಾರಣವು ವಿವಕ್ಷಿತವು

ಶರಣ್ಯನ ಚರಣದ್ವಂದ್ವವೇ ಉಪಾಯವೆಂದರೆ ಆ ಪಾದದ್ವಂದ್ವದಲ್ಲಿ ಮಾಡುವ ಭರಸಮರ್ಪಣೆಯೇ ಉಪಾಯವೆಂಬುದು ಶ್ರುತಿ ಇತಿಹಾಸಾದಿಗಳಲ್ಲಿ ಸ್ಥಾಪಿತವಾದುದರಿಂದ ತದಿತರ ಉಪಾಯ ನಿರಾಸಕ್ಕಾಗಿ ಈ ಚರಣೌ ಶಬ್ದವು ಅವಧಾರಣಯುಕ್ತವಾಗಿ **ಚರಣಾವೇವ** ಎಂದು ಇಟ್ಟುಕೊಳ್ಳಬೇಕೆಂದು ಸಪ್ರಮಾಣವಾಗಿ ಉಪಪಾದಿಸುತ್ತಾರೆ.—**ಚರಣೌ ಎಙ್ಗಿರವಿಡತ್ತಿಲೇ**-"ಚರಣೌ" ಎಂಬ ಸ್ಥಳದಲ್ಲೇ, ಎಂದಾರಂಭಿಸಿ ಕೆಲವು ಪ್ರಮಾಣಗಳನ್ನು ಉದಾಹರಿಸಿ, **ಅವಧಾರಣಮ್**-ಏವ ಪದವು, ಅದರಿಂದ ಪಾದದ್ವಂದ್ವಗಳನ್ನೇ ಎಂಬರ್ಥವು, **ವಿವಕ್ಷಿತಂ**-ಹೇಳಲ್ಪಡತಕ್ಕದ್ದಾಗಿರುತ್ತದೆ. ಏಕೆಂದರೆ ಇತರ ಉಪಾಯಗಳನ್ನು ವ್ಯಾವರ್ತಿಸಿ ಹೇಳಬೇಕಾದ್ದು ಅಪೇಕ್ಷಿತವಾದುದರಿಂದ ಅವಧಾರಣಾರ್ಥವು ವ್ಯಕ್ತವೆಂಬ ಭಾವವು. ಆ ಪ್ರಮಾಣಗಳು ಯಾವುವೆಂದರೆ-(೧) **"ತಮೇವ ಶರಣಂಗಚ್ಛ ಸರ್ವಭಾವೇನ ಭಾರತ। ತತ್ಪ್ರಸಾದಾತ್ಪರಾಂಶಾನ್ತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್"** ಎಂಬುದು ಶ್ಲೋಕವು. **ತಮೇವ ಶರಣಂಗಚ್ಛ**-ಸರ್ವರಿಗೂ ಶಾಸ್ತ್ರಾವಾಗಿ ನಿಯಾಮಕನಾಗಿರುವ ಶರಣ್ಯನನ್ನೇ ಉಪಾಯವಾಗಿ ಹೊಂದು ಎಂದರೆ ಆತನ ಪಾದದ್ವಂದ್ವದಲ್ಲೇ ಶರಣಾಗತಿಯನ್ನನುಷ್ಠಿಸು ಎಂಬ ಭಾವವು. **ಸರ್ವಭಾವೇನ ಶರಣಂಗಚ್ಛ** ಎಂದಿರುವದರಿಂದ ನಿನ್ನ ಮನೋಭಾವಾನುಸಾರವಾಗಿ ಶರಣುವನ್ನು ಹೊಂದು. ಆ ಪರಮಪುರುಷನ ಅನುಗ್ರಹದ ಮೂಲಕ ಸರ್ವಕರ್ಮಬಂಧರೂಪ ಕ್ಲೇಶಗಳಿಂದ ಉಪಶಮನವನ್ನೂ, ಶಾಶ್ವತವಾದ ದಿವ್ಯ ವೈಕುಂಠ ಪ್ರಾಪ್ತಿಯನ್ನೂ ಹೊಂದುವಿ ಎಂಬುದು ಶ್ಲೋಕತಾತ್ಪರ್ಯವು. ಇಲ್ಲಿ **ತಮೇವ**

---

(೧) ಗೀ. ೧೮-೬೨.

(೨) "ಕಳಲ್‌ಗಳ್ ವೈಯೇ ಶರಣಾಗ" (೩) ನಾಕಣೈಮಿಶೈ ನಪ್ಪಿರಾನ್ ಶರಣೇ ಶರಣನ್" ಇತ್ಯಾದಿಗಳಿರ್‌ಪಡಿಯೇ ಅವಧಾರಣಮ್ ವಿವಕ್ಷಿತಮ್.

**ಶರಣಂಗಚ್ಛ** ಎಂದಿರುವದಕ್ಕೆ ಅಭಿಪ್ರಾಯವು **ತಚ್ಚರಣಾವೇವ ಶರಣಂಗಚ್ಛ** ಎಂಬ ಭಾವದಿಂದ ಅವಧಾರಣ ಪ್ರದರ್ಶನಕ್ಕಾಗಿ ಉದಾಹರಿಸಿರುತ್ತಾರೆ. ಸರ್ವ ವಾಕ್ಯವು ಅವಧಾರಣಯುಕ್ತವಾದುದಾಗಿ, ಆತನ ಪಾದಗಳನ್ನೇ ರಕ್ಷಕವನ್ನಾಗಿಯಾಗಲಿ ಅಥವಾ ಉಪಾಯವನ್ನಾಗಲಿ ಅವಲಂಬಿಸು, ಇನ್ನು ಯಾವುದನ್ನು ಅವಲಂಬಿಸುವದು ನಿರರ್ಥಕವೆಂಬ ಭಾವದಿಂದ ಹೇಳಿದ ವಾಕ್ಯವಾದುದರಿಂದ ಚರಣಗಳಲ್ಲದ ಇತರವಾದುವನ್ನು ವ್ಯಾವರ್ತಿಸಿ ಹೇಳುವದೇ ಪ್ರಕೃತಕ್ಕೆ ಬೇಕಾದುದರಿಂದ **ಏವ** ಎಂಬ ಅವಧಾರಣವನ್ನು **ಚರಣಾವೇವ** ಎಂದು ಚರಣೌ ಶಬ್ದದ ಮೇಲೆ ಹಾಕತಕ್ಕದ್ದೆಂಬ ಭಾವವು.

(೨) "**ಕಳಲ್‌ಗಳವೈಯೇ ಶರಣಾಕ**"-"ಶರಣ್ಯನ ಆ ಪಾದದ್ವಂದ್ವಗಳನ್ನೇ **ಶರಣಾಕ**-ಉಪಾಯವಾಗಿ ಸ್ವೀಕರಿಸಿದರು ಎಂಬ ಭಾವವು.

**(೩) ನಾಕಣೈಮಿಶೈನಪ್ಪಿರಾ಼ ಶರಣೇಶರಣೆಮುಕ್ಕೆನ್ರುನಾಡೊರು।**
**ಮೇಕಶಿನ್ದೈಯನಾಯ್ ಕುರುಗೂರ್ ಚ್ಚಡಗೋಪ಼ ಮಾರ಼।**
**ಆಕನೂತ್ತವನ್ದಾದಿಯಾಯಿರತ್ತುಳ್ಳಿವೈಯು ಮೋರ್ ಪತ್ತುಂ ವಲ್ಲಾರ್।**
**ಮಾಕವೈಗುನ್ಪತ್ತು ಮಗಿಳ್ವೈಯ್‌ದುವರ್ ವೈಕಲುಮೇ ॥೧೧॥**

**ನಾಗಣೈಮಿಶೈ**-ಆದಿಶೇಷನನ್ನೇ ಹಾಸಿಗೆಯಾಗಿವುಳ್ಳ, **ನಪ್ಪಿರಾ಼**-ನಮ್ಮ ಸ್ವಾಮಿಯಾಗಿ ಆಶ್ರಿತರ ವಿಷಯದಲ್ಲಿ ಪರೋಪಕಾರನಾದವನ, **ಶರಣೇ**-ಚರಣಗಳೇ ಇಲ್ಲಿ ಏವಕಾರವು ವ್ಯಕ್ತವು, **ಶರಣಂನಮುಕ್ಕೆನ್ರು**-ನಮಗೆ ಉಪಾಯವೆಂದು, **ನಾಡೊರುಂ ಏಕಶಿನ್ದೈಯನಾಯ್**-ಪ್ರತಿದಿನವೂ ಒಂದೇವಿಧ ಮನೋರಥವನ್ನು ಮನಸ್ಸಿನಲ್ಲಿಟ್ಟು ಧ್ಯಾನಿಸುವವರಾದ, **ಕುರುಗೂರ್‌ಚ್ಚಡಗೋಪ಼ ಮಾರ಼**-ಕುರುಗೂರ್ ನಗರಿಗೆ ಸ್ವಾಮಿಯಾಗಿ ಶಡಗೋಪರೆಂಬ ಅಪರನಾಮಧೇಯವುಳ್ಳ ನಮ್ಮಾಳ್ವಾರ್‌ರವರು **ಆಗನೂತ್ತ ಅನ್ದಾದಿ ಆಯಿರತ್ತುಳ್**-ತಮ್ಮ ಉಜ್ಜೀವನ ಆಗುವಹಾಗೆ ದಯಪಾಲಿಸಿದ ಅನ್ದಾದಿ ರೂಪದಲ್ಲಿರುವ ಸಾವಿರ ಪಾಶುರದಲ್ಲಿ, **ಓರ್ ಇವೈಪತ್ತುಮ್‌ವಲ್ಲಾರ್**-ಅಸದೃಶವಾದ ಈ ಹತ್ತು ಪಾಶುರಗಳನ್ನು ಅರ್ಥದೊಂದಿಗೆ ಅಧ್ಯಯನ ಮಾಡುವವರು, **ಮಾಕಂ ವೈಕುಂದತ್ತು ವೈಕಲುಂ**-ಪರಮಾಕಾಶವೆನಿಸುವ ಶ್ರೀ ವೈಕುಂಠದಲ್ಲಿ ಸದಾಕಾಲದಲ್ಲೂ, **ಮಗಳ್ವೈಯ್‌ದುವರ್**-ನಿರತಿಶಯಾನಂದವನ್ನು ಹೊಂದುವರು **ಶರಣೇ ಶರಣಂ**-ಎಂಬಲ್ಲಿ ಅವಧಾರಣವು ಸೂಚಿತವು. ಚರಣಗಳಲ್ಲದೆ ಇನ್ನು ಯಾವುದೂ ಉಪಾ

---

(೩) ತಿರು. 5-10-11.

**"ಚರಣೌ" ಇತಿ ದ್ವಿವಚನಾತ್ ಪೂರ್ವಖಂಡೇ ಶ್ರಿಯೋಽಪ್ಯುಪಾಯತ್ವಾನು ಪಪತ್ತಿರಿತ್ಯತ್ರಾಹ**

---

**ಚರಣಾವಿತಿ ನಿರ್ದೇಶಃ ಪತ್ನೀ ವೈಶಿಷ್ಟ್ಯಬಾಧಕಃ ।**
**ಇತೀಮಂ (ದ್ವೈರಿದಂ) ದೇರಿತಂ ಪ್ರೋಕ್ತಂ ಶ್ರೀಮಚ್ಛಬ್ದವಿರೋಧತಃ ॥೧೦೨॥**

ಯವಲ್ಲವೆಂಬ ವ್ಯಾವೃತ್ತಿಯನ್ನು ಅವಧಾರಣವು ಬೋಧಿಸುತ್ತದೆ ಹಾಗೆ ಚರಣ ಗಳನ್ನು ಆಶ್ರಯಿಸಿ ಪ್ರಪನ್ನರಾದವರು ದಿವ್ಯವೈಕುಂಠವನ್ನು ಹೊಂದಿ ನಿರತಿ ಶಯಾನಂದವನ್ನು ಶಾಶ್ವತವಾಗಿ ಅನುಭವಿಸುವರು ಎಂಬುದು ಪಾಶುರ ತಾತ್ಪ ರ್ಯವು." **ಇತ್ಯಾದಿಗಳಿರ್ಪಡಿಯೇ** - ಇತ್ಯಾದಿ ಪ್ರಮಾಣಗಳಲ್ಲಿ ತೋರಿಬರುವ ಹಾಗೆ, **ಅವಧಾರಣಂ** - **ಚರಣೌ** ಎಂಬ ಶಬ್ದದಲ್ಲಿ ಏವಕಾರವಾದ ಅವಧಾರಣವು, **ವಿವಕ್ಷಿತಂ**-ಹೇಳಲ್ಪಡತಕ್ಕದ್ದಾಗಿರುತ್ತದೆ. **"ಸರ್ವಂ ವಾಕ್ಯಂ ಸಾವಧಾರಣಂ"** ಎಲ್ಲಾ ವಾಕ್ಯಗಳೂ ಪ್ರಕರಣಾನುಗುಣವಾಗಿ ಅವಧಾರಣಯುಕ್ತಗಳಾದುದರಿಂದ, ಈ ದ್ವಯದ ಪ್ರಥಮಖಂಡದ ವಾಕ್ಯದಲ್ಲಿ ಅವಧಾರಣವನ್ನು ಯಾವ ಪದದಮೇಲೆ ಹಾಕತಕ್ಕದ್ದೆಂಬ ವಿಚಾರದಲ್ಲಿ, ಶ್ರಿಯಃಪತಿಯ ಚರಣದಲ್ಲಿ ಮಾಡುವ ಶರಣಾ ಗತಿಯೇ ಉಪಾಯವೆಂದು ಹೇಳುವದು ಪ್ರಕೃತವಾದುದರಿಂದ **ಚರಣಾವೇವ** ಎಂದು **ಚರಣೌ** ಎಂಬ ಪದದ ಮೇಲೆ ಅವಧಾರಣವು ಈಗ ವಿವಕ್ಷಿತವೆಂಬ ಭಾವವು.

**"ಚರಣೌ"** ಎಂಬ ದ್ವಿವಚನವಿರುವದರಿಂದ ಲಕ್ಷ್ಮಿಗೆ ಉಪಾಯತ್ವವಿಲ್ಲವೆಂಬ ವಾದದ ನಿರಸನವು.

---

**ಚರಣೌ** ಎಂದು ಪೂರ್ವಖಂಡದಲ್ಲಿ ದ್ವಿವಚನ ಪ್ರಯೋಗವಿರುವದರಿಂದ ನಾರಾಯಣನೊಬ್ಬನಿಗೆ ಉಪಾಯತ್ವದಲ್ಲಿ ಅನ್ವಯವು. ನೀವು ಹಿಂದೆ ಸ್ಥಾಪಿಸಿದ ಹಾಗೆ ಮತುಪ್ ಪ್ರತ್ಯಯ ಸ್ವಾರಸ್ಯದಿಂದ ಲಕ್ಷ್ಮಿಗೂ ಉಪಾಯತ್ವದಲ್ಲಿ ಅನ್ವಯ ವಿದ್ದುದಾದರೆ ಲಕ್ಷ್ಮಿಯ ಚರಣಗಳನ್ನೂ ಸೇರಿಸಿ **ಚರಣಾನ್** ಎಂದು ಪೂರ್ವಖಂಡ ದಲ್ಲಿರಬೇಕಾಗಿತ್ತು. ಅದೂ ಅಲ್ಲದೆ ಉಪಾಯತ್ವದಲ್ಲಿ **ಲಕ್ಷ್ಮೀಸಹಾಯವಾನ್** ನಾರಾಯಣನು ಎಂದು ಹೇಳಬೇಕಾಗುತ್ತದೆಯಾದುದರಿಂದ ಲಕ್ಷ್ಮಿಗೆ ಉಪಾಯ ತ್ವದಲ್ಲಿ ಅನ್ವಯವಿಲ್ಲವು. ಹೀಗೆ **ಚರಣಾನ್** ಎಂದು ಬಹುವಚನವಿಲ್ಲದುದರಿಂದ, **ಶ್ರೀಮತ್** ಎಂಬ ಶಬ್ದವು ವಿಶೇಷಣವಾಗುವದಿಲ್ಲವು, ಉಪಲಕ್ಷಣಮಾತ್ರವೇ ಎಂಬ ವಾದವನ್ನು ಮುಂದಿನ ಕಾರಿಕೆಗಳಿಂದ ಖಂಡಿಸುತ್ತಾರೆ. ಮೊದಲು ಅವರು ಹೇಳುವ ಪೂರ್ವಪಕ್ಷವನ್ನು ಮಾಡಿ ಅನಂತರ ಮುಂದಿನ **ಕಾರಿಕೆಯಿಂದ** ಸಿದ್ಧಾಂ ತವನ್ನು ಉಪಪಾದಿಸುತ್ತಾರೆ. **ಚರಣಾವಿತಿನಿರ್ದೇಶಃ-ಚರಣೌ ಎಂದು ಹೇಳಿ**

**ಶಬ್ದಸ್ವರಸತಃ ಪ್ರಾಪ್ತಂ ವೈಶಿಷ್ಟ್ಯಂ ಪ್ರಥಮಂ ಶ್ರುತಮ್ ।**
**ವಿಶೇಷ್ಯ ಚರಣದ್ವಿತ್ವಂ ನಹಿಬಾಧಿತು ಮರ್ಹತಿ ॥೧೦೩॥**

ರುವದು ಎಂದರೆ ಪ್ರಯೋಗವು. **ಪತ್ನೀವೈಶಿಷ್ಟ್ಯಬಾಧಕಃ**-ಪತ್ನೀವಿಶಿಷ್ಟನಾಗಿಯೇ ನಾರಾಯಣನು ಉಪಾಯವೆಂಬ ಭಾವಕ್ಕೆ ಬಾಧಕವಾದುದು; ಏಕೆಂದರೆ ಲಕ್ಷ್ಮಿಯು ಎರಡು ಚರಣಗಳೂ ನಾರಾಯಣನ ಎರಡು ಚರಣಗಳೂ ಸೇರಿ, **ಚರಣಾಃ** ಎಂದು ಬಹುವಚನವಿರಬೇಕಾಗಿತ್ತು. ಹಾಗಿಲ್ಲದೆ ದ್ವಿವಚನವಿರುವದರಿಂದ ಲಕ್ಷ್ಮಿಗೆ ಉಪಾಯತ್ವದಲ್ಲಿ ಸಂಬಂಧವಿಲ್ಲ. ಲಕ್ಷ್ಮೀಪತಿಯು ಉಪಾಯವು ಎಂದು ಹೇಳಿದರೆ ಲಕ್ಷ್ಮಿಯೂ ಉಪಾಯಕೋಟಿಯಲ್ಲೇ ಸೇರಿದವಳೆಂದು ಹೇಗೆ ಹೇಳಲಾಗುತ್ತದೆಂಬುದು ಪೂರ್ವಪಕ್ಷವು; **ಇತಿ**-ಹೀಗೆ, **ಮಂದೈಃ**-ಜ್ಞಾನಶೂನ್ಯರಿಂದ, ಅಲ್ಪಜ್ಞಾನವುಳ್ಳವರಿಂದ, **ಇದಂಪ್ರೋಕ್ತಂ**-ಈ ಅಭಿಪ್ರಾಯವು ಹೇಳಲ್ಪಟ್ಟಿತು. ಇದು ಹೇಗೆ ವಿವೇಕಶೂನ್ಯರಾದ ಅಲ್ಪಜ್ಞರಿಂದ ಹೇಳಲ್ಪಟ್ಟಿತು ಎಂದರೆ **ಶ್ರೀಮಚ್ಛಬ್ದ ವಿರೋಧತಃ**-ಪ್ರಥಮದಲ್ಲೇ ವಿಶೇಷಣವಾಗಿ ಹೇಳಲ್ಪಟ್ಟ ಶ್ರೀಮಚ್ಛಬ್ದಕ್ಕೆ ಅವರ ಅಭಿಪ್ರಾಯವು ವಿರೋಧವಾದುದರಿಂದ. ಮಂತ್ರವು ಲಕ್ಷ್ಮೀವಿಶಿಷ್ಟತೆಯನ್ನು ಪ್ರಥಮತಃ ಹೇಳುವದರಿಂದ ಮುಂದೆ ಹೇಳುವ **ಚರಣೌ** ಎಂಬ ನಿರ್ದೇಶವು ಮೊದಲಲ್ಲಿ ಹೇಳಿದ ಅರ್ಥಕ್ಕೆ ಬಾಧಕವೆಂದಿಗೂ ಆಗಲಾರದು. **ಈ ನ್ಯಾಯವು** ಪೂರ್ವಮೀಮಾಂಸೆಯಲ್ಲಿ ಉಪಪಾದಿತವೆಂದು ಮುಂದಿನ ಕಾರಿಕೆಯಿಂದ **ತಿಳಿಸು**ತ್ತಾರೆ. ಮೊದಲು ಹೇಳಿದ ವಿಶೇಷಣಾರ್ಥವು ಪ್ರಬಲವು. ಅದನ್ನು ಎರಡನೆಯ ಅಭಿಪ್ರಾಯವು ಬಾಧಿಸಲು ಸಾಧ್ಯವಿಲ್ಲವೆನ್ನುತ್ತಾರೆ; ಎರಡನೆಯ ಅಭಿಪ್ರಾಯವು ವಿಶೇಷ್ಯದ ಚರಣದ್ವಿತ್ವವು; ಇದು ಮೊದಲು ಹೇಳಲ್ಪಟ್ಟ ವಿಶೇಷಣದ ಪ್ರಾಬಲ್ಯವನ್ನು ಹೋಗಲಾಡಿಸಲಾರದು ಎಂಬ ಭಾವವು. ಇದನ್ನೇ ಮುಂದೆ ಉಪಪಾದಿಸಿ ಹೇಳುತ್ತಾರೆ—ಮೀಮಾಂಸೆಯ ಉಪಕ್ರಮಾಧಿಕರಣ ನ್ಯಾಯದ ಪ್ರಕಾರ, ಉಪಕ್ರಮದಲ್ಲಿ ಮೊದಲು ಹೇಳಲ್ಪಟ್ಟ ಅಭಿಪ್ರಾಯಕ್ಕೆ ಎರಡನೆಯ ಅಭಿಪ್ರಾಯವು ಬಾಧಕವಾಗುವದಿಲ್ಲವು. ಹೇಗೆಂದರೆ **"ಗುರೋಸ್ಸದಾರಸ್ಯ ನಿಷೀಡ್ಯಪಾದೌ"** ಎಂಬಲ್ಲಿ **ಸದಾರಸ್ಯ** ಎಂದು ಪ್ರಥಮದಲ್ಲಿ ಹೇಳಲ್ಪಟ್ಟದುದು ಪ್ರಬಲವಾದುದರಿಂದ, **ಪಾದೌ** ಎಂದು ದ್ವಿವಚನವಿದ್ದರೂ, ಗುರುಪತ್ನಿಯ ಪಾದಗಳನ್ನೂ ಕೂಡ **ನಿಷೀಡ್ಯ** ಎಂದು ಹೇಗೆ ಅರ್ಥವನ್ನು ಹೇಳಬೇಕೋ ಹಾಗೆ ಎಂಬ ಭಾವವು. ಇದನ್ನೇ ಮುಂದಿನ ಕಾರಿಕೆಯಿಂದ ವ್ಯಕ್ತಪಡಿಸುತ್ತಾರೆ.—**ಅರ್ಥವು**—**ಶಬ್ದಸ್ವರಸತಃ**-ಶಬ್ದಸ್ವಾರಸ್ಯದಿಂದ, **ಪ್ರಾಪ್ತಂ**-ಉಂಟಾದ, **ಪ್ರಥಮಂ ಶ್ರುತಂ**-ಉಪಕ್ರಮದಲ್ಲೇ ಮೊದಲೇ ಹೇಳಲ್ಪಟ್ಟಿರುವ, **ವೈಶಿಷ್ಟ್ಯಂ**-**ಶ್ರೀಮತ್** ಎಂಬ ಶಬ್ದದ ಮೂಲಕ ಲಕ್ಷ್ಮೀವಿಶಿಷ್ಟತೆಯನ್ನು ಪೂರ್ವಮೀಮಾಂಸೆಯ ಉಪಕ್ರಮಾಧಿಕರಣ ನ್ಯಾಯದ ಪ್ರಕಾರ, **ವಿಶೇಷ್ಯ ಚರಣದ್ವಿತ್ವಂ**-ಅನಂತರ ಹೇಳಲ್ಪಟ್ಟ **ವಿಶೇಷ್ಯ**

**ಚರಣಾನಿತಿವಕ್ತವ್ಯ ಮಿತಿಯುಕ್ತ್ಯಾ ಪ್ರಸಂಜಿತಮ್ ।**
**ಗ್ರಂಥಜ್ಞೈರಪಹಾಸ್ಯಂ ತತ್ಪತಿಪ್ರಾಧಾನ್ಯತೋಽನ್ವಯಾತ್ ॥೧೦೪॥**

ವಾದ ನಾರಾಯಣನ ಚರಣೌ ಎಂಬಲ್ಲಿ ಹೇಳಲ್ಪಟ್ಟ ಪಾದದ್ವಿತ್ವವು, **ಬಾಧಿತುಂ**-ಬಾಧಿಸಲು, **ನಾರ್ಹತಿ**-ಯೋಗ್ಯವಾಗಲಾರದು. ಉಪಕ್ರಮಾಭಿಪ್ರಾಯವು, ಎರಡನೆಯದು ದುರ್ಬಲವು; ಆದುದರಿಂದ ಉಪಾಯದಲ್ಲೂ ಶ್ರೀ ವೈಶಿಷ್ಟ್ಯವುಂಟೆಂಬ ಭಾವವನ್ನು, **ಚರಣೌ** ಎಂಬ ಅನಂತರ ಪ್ರಯೋಗದಿಂದ ಬಾಧಿಸಲು ಸಾಧ್ಯವಿಲ್ಲವೆಂಬ ಭಾವವು. ಏಕೆಂದರೆ ಶಬ್ದಸ್ವಾರಸ್ಯದಿಂದ ವೈಶಿಷ್ಟ್ಯವನ್ನು ಉಪಕ್ರಮದಲ್ಲೇ ಹೇಳಿ ಅದಕ್ಕೆ ವಿಶೇಷ್ಯದೊಂದಿಗೆ ಕ್ರಿಯೆಯಲ್ಲೇ ಅನ್ವಯವಾದುದರಿಂದ, ಅನಂತರ ಹೇಳಲ್ಪಟ್ಟ ವಿಶೇಷ್ಯದಲ್ಲಿ ತೋರುವ ಅಭಿಪ್ರಾಯವು ಎಂದಿಗೂ ವಿಶೇಷಣಾಭಿಪ್ರಾಯಕ್ಕೆ ಬಾಧಕವಾಗುವದಿಲ್ಲವು. ಇವುಗಳನ್ನೆಲ್ಲಾ ಮನಸ್ಸಿನಲ್ಲಿಟ್ಟೇ ಲಕ್ಷ್ಮೀತಂತ್ರದಲ್ಲಿ **"ಲಕ್ಷ್ಮ್ಯಾಸಹ ಹೃಷೀಕೇಶೋ ದೇವ್ಯಾ ಕಾರುಣ್ಯರೂಪಯಾ । ರಕ್ಷಕಸ್ಸರ್ವಶಾಸ್ತ್ರೇಷು ವೇದಾಂತೇಷು ಚ ಗೀಯತೇ"** ಎಂದು ಹೇಳಲ್ಪಟ್ಟಿತು. ಪುನಃ ಪೂರ್ವಪಕ್ಷಿಯು ಹೇಳಬಹುದು ಏನೆಂದರೆ? ಈ ಉಪಕ್ರಮಾಧಿಕರಣನ್ಯಾಯಕ್ಕೆ ವಿರೋಧ ಉಂಟಾಗಲು ಕಾರಣವೇ ಇಲ್ಲವು, ಏಕೆಂದರೆ–ಹೇ ಶ್ರೀಮನ್ನಾರಾಯಣ ಎಂದು ಸಂಬೋಧಿಸಿ, ತವಚರಣೌ ಶರಣಂ ಪ್ರಪದ್ಯೇ ಎಂದು ಅನ್ವಯಿಸಿದರೆ ವಿರೋಧವಿಲ್ಲವಲ್ಲಾ ಎಂದು ಸಮಾಧಾನ ತಂದರೆ, ಆಗ ಮುಂದಿನ ಕಾರಿಕೆಯ ಮೂಲಕ ಪೂರ್ವಪಕ್ಷವೇ ಉದಿಸಲು ಅವಕಾಶವಿಲ್ಲವಾದುದರಿಂದ ಬಾಧಕವೇ ಇಲ್ಲವೆಂದು ಉಪಪಾದಿಸುತ್ತಾರೆ.–ಹಸೆಯಮಣೆಯಲ್ಲಿ ಕೂತಿದ್ದ ವಟುವು ಉಪನಯನ ಸಂಸ್ಕಾರಾನಂತರ ಪತ್ನೀಸಮೇತ ಕೂತಿದ್ದ ತನ್ನ ಪಿತಾವಿಗೆ ನಮಸ್ಕರಿಸಿದನು ಎಂದರೆ ತಾಯಿಗೆ ನಮಸ್ಕರಿಸಲಿಲ್ಲವು, ತಾಯಿಯು ಸಂಸ್ಕಾರವನ್ನು ಉಂಟುಮಾಡಲಿಲ್ಲವು, ಆದುದರಿಂದ ನಮಸ್ಕರಿಸುವ ಆವಶ್ಯಕವಿಲ್ಲವು ಎಂದರೆ ಈ ವಾದವು ಶಾಸ್ತ್ರಜ್ಞರ ಅಪಹಾಸ್ಯಕ್ಕೆ ಗುರಿಯಾದುದು ಎಂದು ಹೇಳುತ್ತಾರೆ. **ಅರ್ಥವು—"ಚರಣಾಃ" ಇತಿ**-ಲಕ್ಷ್ಮೀನಾರಾಯಣರು ಸೇರಿ ನಾಲ್ಕು ಪಾದಗಳಾದುದರಿಂದ, **ಚರಣಾಃ** - ಪಾದಗಳನ್ನು ಎಂದು ಬಹುವಚನವಾಗಿ, **ವಕ್ತವ್ಯಮಿತಿ** - ಹೇಳತಕ್ಕದ್ದೆಂಬ, **ಯುಕ್ತ್ಯಾ ಪ್ರಸಂಜಿತಮ್** - ಯಾವ ಯುಕ್ತಿವಾದವು, ಪ್ರಸಂಗಮಾಡಲ್ಪಟ್ಟಿತೋ, ಹೇಳಲ್ಪಟ್ಟಿತೋ, **ತತ್**-ಅದು, **ಗ್ರಂಥಜ್ಞೈಃ** - ಶಾಸ್ತ್ರಗ್ರಂಥಗಳನ್ನು ತಿಳಿದಿರುವವರಿಂದ, **ಅಪಹಾಸ್ಯಂ** - ಪರಿಹಾಸ ಮಾಡಲು ಯೋಗ್ಯವಾದುದು. ಏಕೆಂದರೆ **ಪತಿ ಪ್ರಾಧಾನ್ಯತೋ ಅನ್ವಯಾತ್**-ಲಕ್ಷ್ಮಿಯು ತನ್ನ ಪತಿಗೆ ಶೇಷಭೂತಳಾಗಿರುವದರಿಂದ, ಪತಿಗೆ ಪ್ರಾಧಾನ್ಯವನ್ನು ಕೊಟ್ಟು ಅನ್ವಯಿಸಿರುವದರಿಂದ, **ನಾರಾಯಣ ಚರಣೌ ಶರಣಂ ಪ್ರಪದ್ಯೇ** ಎಂದು **ಹೇಳಲ್ಪಟ್ಟಿತು.** ಇದರಿಂದ ಲಕ್ಷ್ಮಿಯು ವ್ಯಾವರ್ತಿಸಿ **ಹೇಳಲ್ಪಡಲಿಲ್ಲ**

**ನ ಸಮ್ರಾಜಿ ಸಪತ್ನೀಕೇ ಸದ್ವಿತೀಯೋಕ್ತಿ ಸಾಹಸಮ್ ।**
**ತಥಾತ್ರೇತ್ಯಪರಾಮೃಶ್ಯ ದರ್ಶಿತಂ ಗುರುಸಾಹಸಮ್ ॥೧೦೩॥**

ವೆಂಬ ಭಾವವು. ಹಾಗೆಯೇ ಸಾಮಾತ್ಯನಾದ ರಾಜನು ಹೇಳಿದನು ಎಂಬ ಪ್ರಯೋದಗಲ್ಲಿ ಅಮಾತ್ಯನ ಅಭಿಪ್ರಾಯವೂ ರಾಜನ ಅಭಿಪ್ರಾಯದಂತಾದರೆ, ಹೇಳಿದರು ಎಂದಿರಬೇಕೆಂದು ಹೇಳುವದು ಹಾಸ್ಯಾಸ್ಪದವೇ. ಆಗಲಿ, ಯಾವ ಗ್ರಂಥಗಳಲ್ಲಿ ಪತಿಗೆ ಪ್ರಾಧಾನ್ಯವನ್ನು ಹೇಳಿರುತ್ತದೆ ಎಂದರೆ ಭಗವಚ್ಛಾಸ್ತ್ರದಲ್ಲಿ "ಮಚ್ಛೇಷಭೂತಾ ಸರ್ವೇಷಾಂ ಈಶ್ವರೀವಲ್ಲಭಾಮಮ" ಎಂದಿರುತ್ತದೆ. **"ಮಿತಂದದಾತಿಹಿ ಪಿತಾ ಮಿತಂಮಾತಾ ಮಿತಂಸುತಃ। ಅಮಿತಸ್ಯ ಚ ದಾತಾರಂ ಭರ್ತಾರಂಕಾನುಪೂಜಯೇತ್"** ಎಂಬ ಸೀತಾವಾಕ್ಯದಿಂದ ಇತಿಹಾಸದಲ್ಲೂ ಇದು ಉಪಬೃಂಹಿತವು. ಹೀಗೆಯೇ ಗ್ರಂಥಗಳಲ್ಲಿ ಪತಿಪ್ರಾಧಾನ್ಯಬೋಧಿತಗಳಾದ ಅನೇಕ ಪ್ರಮಾಣಗಳುಂಟು. ಅಪಹಾಸ್ಯವು ಹೇಗೆಂದರೆ **ಲಕ್ಷ್ಮಣವಿಶಿಷ್ಟರಾಮಭದ್ರಆಗತಃ** ಎಂಬ ವಾಕ್ಯದಲ್ಲಿ ಪೂರ್ವಪಕ್ಷಿಯು ಇಬ್ಬರೂ ಬಂದಿದ್ದರೆ ಆಗತಃ ಎಂಬುದು ತಪ್ಪು, ಆಗತೌ ಎಂದು ಇರಬೇಕೆಂಬುದು ಹೇಗೆ ಅಪಹಾಸ್ಯವೋ, ಹಾಗೆಯೇ ಇಲ್ಲೂ **ಚರಣೌ** ಎಂದಿರಕೂಡದು ಚರಣಾ ಎಂದಿರತಕ್ಕದ್ದೆಂಬುದೂ ಅಪಹಾಸ್ಯವು.

ಪತಿಪ್ರಾಧಾನ್ಯದಿಂದ **ಚರಣೌ** ಎಂಬ ಪ್ರಯೋಗವು ಎಂದು ಹೇಳಿ, ಇದರಿಂದ ಲಕ್ಷ್ಮಿಗೆ ಉಪಾಯತ್ವದಲ್ಲಿ ಅನ್ವಯವಿಲ್ಲವೆಂದು ಹೇಳುವದು ಹಾಸ್ಯಾಸ್ಪದವಾದ ಉಕ್ತಿಯು, ಶಾಸ್ತ್ರಜ್ಞಾನವಿಲ್ಲದ ವಿಜೃಂಭಣೆಯು ಎಂದು ಉಪದೇಶಿಸಿದರು. ಆ ಅಭಿಪ್ರಾಯವನ್ನೇ ಒಂದು ದೃಷ್ಟಾಂತ ಮೂಲಕ ಉಪಪಾದಿಸಿ ಹೇಳುತ್ತಾರೆ. ಚರಮಶ್ಲೋಕದಲ್ಲಿ **"ಮಾಮೇಕಂ ಶರಣಂ ವ್ರಜ"** ಎಂದು ಹೇಳಿರುವಾಗ ಲಕ್ಷ್ಮಿಗೆ ಉಪಾಯತ್ವವನ್ನು ಹೇಳುವದು ಹೇಗೆ? ಲಕ್ಷ್ಮಿಯೂ ಉಪಾಯಕೋಟಿಯಲ್ಲಿ ಸೇರಿದರೆ ಪರಮಾತ್ಮನಿಗೆ ಸದ್ವಿತೀಯ ಚೇತನವುಂಟು ಎಂದು ಹೇಳಿದಂತಾಗುವದಿಲ್ಲವೇ? **"ನತತ್ಸಮಶ್ಚಾಧಿಕಂ ಚದೃಶ್ಯತೇ"** (ಶ್ವೇ.೬-೮) ಎಂಬ ಶ್ರುತಿಗೂ ವಿರೋಧವಾಗುವದಿಲ್ಲವೇ? ಎಂಬ ಆಕ್ಷೇಪಗಳನ್ನು ತಂದರೆ ದೃಷ್ಟಾಂತಮುಖೇನ ಸಮಾಧಾನವನ್ನು ಹೇಳುತ್ತಾರೆ.—

**ಅರ್ಥವು—ಸಪತ್ನೀಕೇ**-ಪತ್ನಿಯೊಂದಿಗೆ ಸೇರಿರುವ **ಸಮ್ರಾಜಿ**-ಸಾರ್ವಭೌಮನಲ್ಲಿ, **ಸದ್ವಿತೀಯೋಕ್ತಿಸಾಹಸಮ್**-ರಾಜನಿಗೆ ಸಮಳಾದ ಹೆಂಡತಿ ಇರುವಳೆಂಬ ಹೇಳಿಕೆಯ ಸಾಹಸವು, **ನ**-ಸರಿಯಾದುದಲ್ಲವು. **ತಥಾ**-ಹಾಗೆಯೇ, **ಅತ್ರ**-ಈ ಸಂದರ್ಭದಲ್ಲೂ ಎಂದರೆ ದ್ವಯಮನ್ತ್ರಾರ್ಥದ ಉಪಪಾದನೆಯಲ್ಲೂ, **ಇತಿ**-ಎಂಬದಾಗಿ **ಅಪರಾಮೃಶ್ಯ**-ಸ್ವಲ್ಪವೂ ಯೋಚಿಸಿ ತಿಳಿಯದಿರುವದರಿಂದ, **ಗುರುಸಾಹಸಮ್**-ಅದು ಬರೀ ಸಾಹಸವಾದರೆ ಇದು ಗುರುತರವಾದ ಸಾಹಸವು. ಹೇಗೆಂದರೆ, ಲೋಕದಲ್ಲಿ ರಾಜದಂಪತಿಗಳಿಬ್ಬರೂ ಸೇರಿ ರಾಜ್ಯಾಡಳಿತವನ್ನು ನೆರ

ವೇರಿಸಿದರೂ, ರಾಜನಿಗೆ ಹೆಂಡತಿಯು ಸಮಾನಳು ಎಂಬ ಹೇಳಿಕೆಯು ಸಾಹಸವೇ ಸರಿ. ಪತಿವ್ರತೆಯಾಗಿ ಭರ್ತಾವಿಗೆ ತಾನು ಶೇಷಭೂತಳೆಂಬ ಭಾವನೆಯು ಆಕೆಗೆ ಇರುವದರಿಂದ ಪತಿಗೆ ಸಮಾನಳೆಂದು ಹೇಳುವದು ಸಾಹಸವೇ ಸರಿ. ರಾಜನು ಆಪಳಿತಕ್ಕಾಗಿ, ಮಂತ್ರಿಗಳನ್ನೂ ಮಂತ್ರಾಲೋಚನೆ ಸಭೆಯನ್ನೂ, ಇನ್ನೂ ದೊಡ್ಡ ದೊಡ್ಡ ಆಫೀಸರುಗಳನ್ನೂ ಇಟ್ಟು ನಡೆಸಿದರೆ, ಇವರೆಲ್ಲಾ ಆತನಿಗೆ ಸಮ ರಾದರೆಂಬ ಹೇಳಿಕೆಯು ಹೇಗೆ ಸಾಹಸವಾಗಿ ಹಾಸ್ಯಾಸ್ಪದವೋ, ಹಾಗೆಯೇ ಶ್ರೀಮನ್ನಾರಾಯಣನೂ ಲೀಲಾರಸವನ್ನು ಸಹಧರ್ಮಚಾರಿಣಿಯೊಂದಿಗೆ ಅನುಭವಿ ಸುವವನಾಗಿ ಸರ್ವಪ್ರವೃತ್ತಿಯಲ್ಲೂ ಆಕೆಗೆ ಅನ್ವಯವಿದ್ದರೆ, ಆಗ ಅದರಿಂದ ಪತಿಗೆ ಶೇಷಭೂತಳಾದವಳನ್ನು ಆತನಿಗೆ ಸಮಳೆಂದು ಹೇಳುವದು ಇನ್ನೂ ಸಾಹಸವೇ ಸರಿ ಎಂಬ ಭಾವವು. ಏಕೆಂದರೆ ಆ ಅಭಿಪ್ರಾಯವು ಪ್ರಮಾಣಗಳಿಗೆ ವಿರೋಧವಾದುದೂ ಅಲ್ಲದೆ ತಮ್ಮ ಆಚಾರ್ಯರುಗಳ ಅಭಿಪ್ರಾಯಕ್ಕೂ ವಿರೋಧವಾದುದೆಂಬ ತಾತ್ಪರ್ಯವು. ಪ್ರಮಾಣಗಳಿಗೆ ವಿರೋಧ ಹೇಗೆಂದರೆ—ಲಕ್ಷ್ಮಿಯು “ಭರ್ತಾ ಹಿಮಮದೈವತಮ್” (ರಾ. ಅಯೋಧ್ಯಾ ೨೯-೧೬) ಎಂದು ಸೀತೆಯೇ ಹೇಳಿ ಕೊಂಡಿರುತ್ತಾಳೆ. **“ಭರ್ತಾತುಖಲುನಾರೀಣಾಂ ಗುಣವಾನ್ನಿರ್ಗುಣೋಪಿವಾ। ಧರ್ಮಂ ವಿಮೃಶ್ಯಮಾನಾನಾಂ ಪ್ರತ್ಯಕ್ಷಂದೇವಿ ದೈವತಮ್”** ॥ (ರಾ. ಅಯೋ. ೬೨-೮) ಎಂದು ಹೇಳಿರುವ ಹಾಗೂ, **“ಮಚ್ಛೇಷಭೂತಾಸರ್ವೇಷಾಂ ಈಶ್ವರೀವಲ್ಲಭಾಮಮ”** ಎಂಬ ವಿಷ್ವಕ್ಸೇನ ಸಂಹಿತೆಯಲ್ಲಿ ಲಕ್ಷ್ಮಿಯು ಪರಮಾ ತ್ಮನಿಗೆ ಶೇಷಭೂತಳೆಂದು ಭಗವಂತನಿಂದಲೇ ಹೇಳಲ್ಪಟ್ಟ ಪ್ರಮಾಣವೂ ಇರು ತ್ತದೆ. ನಾರಾಯಣನಿಗೆ ಸಹಧರ್ಮಚಾರಿಣಿಯಾಗಿ ನಾರಾಯಣನೊಂದಿಗೆ ಲಕ್ಷ್ಮಿಯು ಚೇತನರಿಗೆ ಉಪಾಯ ವಿಷಯದಲ್ಲಿ ಪ್ರವರ್ತಿಸಿದರೆ, ನಾರಾಯಣನಿಗೆ ಲಕ್ಷ್ಮಿಯು ಸಮಳಾದಳು ಎಂದು ಹೇಳುವದು **ಗುರುಸಾಹಸಮ್** ಇನ್ನೂ ಪ್ರಬಲವಾದ ಸಾಹಸವೇ ಸರಿ ಎಂಬುದು ತಾತ್ಪರ್ಯವು **ಗುರುಸಾಹಸಮ್** ಎಂಬ ಪ್ರಯೋಗದಿಂದ ಶ್ಲೇಷಾರ್ಥವು ತೋರಿಬರುತ್ತದೆ. ತಮ್ಮ ಗುರುಗಳಾದ ಮತ್ತು ಪೂರ್ವಾಚಾರ್ಯರುಗಳ ಅಭಿಪ್ರಾಯಕ್ಕೂ ವಿರುದ್ಧವಾದ ಸಾಹಸವೆಂದೂ ಅರ್ಥವನ್ನು ಹೇಳಬಹುದು.

ಈ ಅಭಿಪ್ರಾಯವನ್ನು ಶ್ರೀ ಯಾಮುನಾರ್ಯರು **“ಯಥಾಚೋಳನೃಪಸ್ಸಂ ಮ್ರಾಡದ್ವಿತೀಯೋಸ್ತಿಭೂತಲೇ। ಇತಿತತ್ತುಲ್ಯನೃಪತಿ ನಿವಾರಣಪರಂವಚಃ। ನತುತತ್ಪುತ್ರತದ್ಭೃತ್ಯ ಕಳತ್ರಾದೇರ್ನಿವಾರಣಮ್”** ಚೋಳದೇಶದ ರಾಜನು ಈ ಭೂತಲದಲ್ಲಿ ಅದ್ವಿತೀಯನಾಗಿ ರಾಜ್ಯವನ್ನಾಳುತ್ತಾನೆ ಎಂದು ಹೇಳಿದ ಮಾತು, ಆತನಿಗೆ ಸಮನಾದ ರಾಜನಿಲ್ಲವೆಂದು ಹೇಳಿದಂತೆಯೂ ಅಲ್ಲವು ಮತ್ತು ಆತನಿಗೆ ಪುತ್ರರು ಭೃತ್ಯರು ಕಳತ್ರ ಮೊದಲಾದವರು ಯಾರೂ ಇಲ್ಲವೆಂದು ಹೇಗೆ ಆಗುವ ದಿಲ್ಲವೋ ಹಾಗೆ ಇಲ್ಲಿಯೂ ಎಂಬ ಭಾವವು.

**ಶ್ರಿಯೋಽಪ್ಯುಪಾಯತ್ವೇಭಗವತಸ್ಸರ್ವಶಕ್ತಿತ್ವವಿರೋಧಇತ್ಯಾಶಂಕ್ಯಪರಿಹರತಿ.**

---

**ಸರ್ವಶಕ್ತಿಯಾನವರ್ ಉಪಾಯಮಾಮ್ಪೋದು ಇವ್ವಿಶೇಷಣತ್ತಾಲ್ ಅಪೇಕ್ಷೈಯೇನ್ ? ಸಾಪೇಕ್ಷನಾಗಿಲ್ ಸರ್ವಶಕ್ತಿಯನ್ರಿಕ್ಕೇ ಯೊಳಿಯಾನೋ ವೆನ್ನಿಲ್ ? ಇಚ್ಚೋದ್ಯಂ ನಾರಾಯಣ ಶಬ್ದತ್ತಾಲುಮ್, ಚರಣಶಬ್ದತ್ತಾ ಲುಮ್, ಶೊಲ್ಲಪ್ಪಟ್ಟಗುಣವಿಗ್ರಹಯೋಗತ್ತಿಲುಮ್ ಪಣ್ಣಲಾಮ್.**

ಲಕ್ಷ್ಮಿಯು ಅಪೃಥಕ್ಸಿದ್ಧ ವಿಶೇಷಣವಾಗಿ ನಾರಾಯಣನೊಂದಿಗೆ ನಿತ್ಯಯೋಗವನ್ನು ಹೊಂದಿ ಆತನ ಸಹಧರ್ಮಚಾರಿಣಿಯಾದುದರಿಂದ ಲೀಲಾರಸಾನುಗುಣವಾಗಿ ಸೃಷ್ಟಿ ಮೊದಲಾದ ಸರ್ವಲೀಲಾವಿಭೂತಿಯ ಪ್ರವೃತ್ತಿಗಳಲ್ಲೂ ಹಾಗೆಯೇ ಚೇತನನಿಗೆ ಉಪಾಯಭೂತಗಳಾಗಿರುವದರಲ್ಲೂ ಅನ್ವಯ ಉಂಟೆಂದು ಇಲ್ಲಿ ಹೇಳಲ್ಪಟ್ಟಿತು. ಅಪೃಥಕ್ಸಿದ್ಧವಿಶೇಷಣಕ್ಕೆ ಇಂತಹ ಉಪಾಯತ್ವವನ್ನು ಹೇಳುವುದು ಸರಿಯಿಲ್ಲವಾದರೆ, ಅಪೃಥಕ್ಸಿದ್ಧ ವಿಶೇಷಣಗಳಾದ ಕಲ್ಯಾಣಗುಣಗಳೂ ಕೂಡ ನಿಷ್ಪ್ರಯೋಜನಗಳಾಗಿ ಅದ್ವೈತಿಯ ಹಾಗೆ ನಿರ್ವಿಶೇಷಬ್ರಹ್ಮಕ್ಕೆ ಮಾತ್ರವೇ ಶರಣ್ಯತೆಯನ್ನು ಹೇಳಬೇಕಾಗುತ್ತದೆ. ಲಕ್ಷ್ಮಿಯೊಂದಿಗೆ ಸೇರದವನಾಗಿಯೇ ನಾರಾಯಣನು ಉಪಾಯವೆಂದರೆ, ಕಲ್ಯಾಣಗುಣಗಳಿಂದಲೂ ಸೇರದವನಾಗಿಯೇ ಉಪಾಯನೆಂದೂ ಹೇಳಬೇಕಾಗುತ್ತದೆಂಬುದು ತಾತ್ಪರ್ಯವು. ಈ ಅಭಿಪ್ರಾಯವನ್ನೇ ಮುಂದೆ ಸ್ಫುಟವಾಗಿ ತಿಳಿಸುತ್ತಾರೆ.

ಲಕ್ಷ್ಮಿಗೂ ಉಪಾಯತ್ವ ಉಂಟೆಂದರೆ ಭಗವಂತನ ಸರ್ವಶಕ್ತಿತ್ವಕ್ಕೆ ವಿರೋಧವೆಂಬ ಶಂಕೆಗೆ ಪರಿಹಾರವು.

---

**ಸರ್ವಶಕ್ತಿಯಾನವರ್**-ಸರ್ವಶಕ್ತಿಯುಳ್ಳ ನಾರಾಯಣನು, **ಉಪಾಯಮಾಮ್ಪೋದು**-ಉಪಾಯವಾಗುವಾಗ, **ಇವ್ವಿಶೇಷಣತ್ತಾಲ್**-ಈ ಅಪೃಥಕ್ಸಿದ್ಧ ವಿಶೇಷಣಳಾದ ಲಕ್ಷ್ಮಿಯ, **ಅಪೇಕ್ಷೈಯೇನ್**-ಅಪೇಕ್ಷೆಯು ಏತಕ್ಕೆ ? **ಸಾಪೇಕ್ಷನಾಗಿಲ್**-ಅಪೇಕ್ಷೆಯು ಆವಶ್ಯಕವೆಂದರೆ, **ಸರ್ವಶಕ್ತಿಯನ್ರಿಕ್ಕೇಯೊಳಿಯಾನೋವೆನ್ನಿಲ್**-ಸರ್ವಶಕ್ತಿತ್ವವಿಲ್ಲದವನೆಂದು ಆಗುವದಿಲ್ಲವೋ? ಎಂದರೆ ಲಕ್ಷ್ಮಿಯ ಅಪೇಕ್ಷೆಯು ಆವಶ್ಯಕವಾದರೆ ಆತನ ಸರ್ವಶಕ್ತಿತ್ವಕ್ಕೆ ಹಾನಿಯಲ್ಲವೋ ? **ಇಚ್ಚೋದ್ಯಮ್**-ಈ ಪೂರ್ವಪಕ್ಷವನ್ನು, ಈ ಅತಿವಾದವನ್ನು, **ನಾರಾಯಣಶಬ್ದತ್ತಾಲುಂ** ನಾರಾಯಣ ಶಬ್ದದಿಂದಲೂ, **ಚರಣಶಬ್ದತ್ತಾಲುಂ**-ಚರಣಶಬ್ದದಿಂದಲೂ, **ಶೊಲ್ಲಪ್ಪಟ್ಟ**-ಹೇಳಲ್ಪಟ್ಟ, **ಗುಣವಿಗ್ರಹಯೋಗತ್ತಿಲುಮ್** - ಕಲ್ಯಾಣಗುಣಗಳ ಯೋಗದಲ್ಲೂ, ದಿವ್ಯಮಙ್ಗಳವಿಗ್ರಹದ ಯೋಗದಲ್ಲೂ ಸಹ, **ಪಣ್ಣಲಾಮ್**-ಮಾಡಬಹುದು. ದಿವ್ಯಮಙ್ಗಳವಿಗ್ರಹವು ಅತಿ ಸುಂದರವಾಗಿರುವದರಿಂದ ಭಕ್ತರ ಮನಸ್ಸನ್ನು ಆಕರ್ಷಿಸಿ ತನ್ನನ್ನು ಭಜಿಸುವ ಹಾಗೆ ಮಾಡುವದರಿಂದಲೂ ಸರ್ವ

**ಅವೈ ಇವನುಕ್ಕು ವಿಶೇಷಣಙ್ಗಳಾಗೈಯಾಲುಮ್ ಅವತ್ತುಕ್ಕು ವಸ್ತ್ವನುರೂಪಮಾಗ ಉಪಯೋಗ ವಿಶೇಷಙ್ಗಳ್ ಉಣ್ಡಾಗೈಯಾಲುಮ್, ಅವತ್ತಾಲ್ ಸರ್ವಶಕ್ತಿತ್ವವಿರೋಧ ಮಿಲ್ಲೈ ಎನ್ರು ಯಥಾಪ್ರಮಾಣ ಕೊಳ್ಳಿಲ್, ಇದು ಬಹು ಪ್ರಮಾಣಪ್ರಾಪ್ತಮಾಯ್ ಇಙ್ಗು ಶ್ರೀಮಚ್ಛಬ್ದತ್ತಿಲುಮ್ ಸ್ವಾರಸಿಕ ವಿಶೇಷಣ ಭಾವಮಾನ ಪತ್ನೀ ಸಂಬಂಧತ್ತಿಲುಮ್ ತುಲ್ಯಮ್.**

---

ಶಕ್ತಿತ್ವಕ್ಕೆ ಕುಂದಕವೆಂದೇ ಹೇಳಬೇಕಾಗುತ್ತದೆ. ಹಾಗೆಯೇ ಭಕ್ತರು ತನ್ನನ್ನು ಆಶ್ರಯಿಸಲು ಉಪಯುಕ್ತವಾದ ಕಲ್ಯಾಣಗುಣಗಳನ್ನು ಹೊಂದಿರುವದೂ ಸಹ ಆತನ ಸರ್ವಶಕ್ತಿತ್ವಕ್ಕೆ ಕುಂದಕವೆಂದು ಹೇಳಬೇಕಾಗುತ್ತದೆ. ಈ ಎರಡು ಸಂದರ್ಭದಲ್ಲೂ ಆತನ ಸರ್ವಶಕ್ತಿತ್ವಕ್ಕೆ ಕುಂದಕವೇನೂ ಇಲ್ಲವೆಂದರೆ ಲಕ್ಷ್ಮಿಯೂ ಅಪೃಥಕ್ಸಿದ್ಧ ವಿಶೇಷಣವಾಗಿ ಉಪಾಯತ್ವದಲ್ಲಿ ಅನ್ವಯವನ್ನು ಹೊಂದಿರುವದೂ ಸಹ ಆತನ ಸರ್ವಶಕ್ತಿತ್ವಕ್ಕೆ ಕುಂದಕವೇನೂ ಇಲ್ಲವೆಂದೇ ಹೇಳತಕ್ಕದ್ದಾಗಿರುತ್ತದೆ. ನಾರಾಯಣಶಬ್ದದಿಂದ ಗುಣವಿಗ್ರಹ ಯೋಗಗಳು ಹೇಳಲ್ಪಟ್ಟವೆಂದು ಹಿಂದೆಯೇ ಮೂಲಮನ್ತ್ರಾಧಿಕಾರದಲ್ಲಿ ಉಪಪಾದಿಸಲ್ಪಟ್ಟಿರುತ್ತದೆ. ಹೇಗೆಂದರೆ—**ನಾರಾಃ ಅಯನಂ ಯಸ್ಯ ಸಃ** ಎಂಬ ಷಷ್ಠೀತತ್ಪುರುಷದ ಮೂಲಕ, ನಾರಾಃ ಎಂದರೆ ನಿತ್ಯವಾದವುಗಳ ಸಮೂಹವು ಎಂಬುದರಲ್ಲಿ ನಾರಾಯಣನ ದಿವ್ಯಮಙ್ಗಳವಿಗ್ರಹವೂ ದಿವ್ಯಸ್ವರೂಪಾತ್ಮಗುಣಗಳೂ ಹೇಳಲ್ಪಟ್ಟವು. ಇವುಗಳಿಗೆ ಅಯನಂ ಎಂದರೆ ಆಧಾರನು ಯಾರೋ ಅವನು ನಾರಾಯಣನು. ಚರಣಶಬ್ದವಲ್ಲಿ ಇವುಗಳು ಹೇಳಲ್ಪಟ್ಟವೆ ಎಂಬುದಕ್ಕೆ ನೆಯ ಪುಟವನ್ನು ನೋಡಿ. "**ಚರಣೌ ಎನ್ಗಿರವಿಡತ್ತಿಲೇ ನಿತ್ಯವಿಗ್ರಹಯೋಗಮುಮ್ ಅನುಸಂಧೇಯಮ್**" ಎಂದೂ, "**ಪರತ್ವ ಸೌಲಭ್ಯವ್ಯಂಜಕಮಾನ ದಿವ್ಯಮಂಗಳವಿಗ್ರಹಮೇಯಿಲಕ್ಷ್ಯಮ್**" ಎಂದೂ ಹೇಳಲ್ಪಟ್ಟಿರುತ್ತದೆ. ಮೇಲೆ ಹೇಳಿದುದನ್ನೇ ಮುಂದಿನ ವಾಕ್ಯದಿಂದ ಉಪಪಾದಿಸುತ್ತಾರೆ. **ಅವೈ**-ಗುಣವಿಗ್ರಹಯೋಗಗಳು, **ಇವನುಕ್ಕು**-ಸರ್ವೇಶ್ವರನಿಗೆ, **ವಿಶೇಷಣಙ್ಗಳಾಗೈಯಾಲುಮ್**-ವಿಶೇಷಣಗಳಾದುದರಿಂದಲೂ, **ಅವತ್ತುಕ್ಕು**-ಆ ಗುಣವಿಗ್ರಹಯೋಗಕ್ಕೆ **ವಸ್ತ್ವನುರೂಪಮಾಗ**-ವಿಶೇಷ್ಯವಸ್ತುವಾದ ಪರಮಾತ್ಮನಿಗೆ ಅನುರೂಪವಾದ, **ಉಪಯೋಗವಿಶೇಷಙ್ಗಳ್**-ಪ್ರಪನ್ನನಾಗಿ ಮಾಡಲು ಆಕರ್ಷಣ, ಸಾಧನಾನುಷ್ಠಾನ ಮೊದಲಾದ ಪ್ರಯೋಜನ ವಿಶೇಷಗಳು, **ಉಣ್ಡಾಗೈಯಾಲುಮ್**-ಉಂಟಾಗುವದರಿಂದಲೂ, **ಅವತ್ತಾಲ್**-ಆ ಕಲ್ಯಾಣಗುಣಯೋಗ, ದಿವ್ಯಮಙ್ಗಳವಿಗ್ರಹಯೋಗ, ಅವುಗಳಿಂದ, **ಸರ್ವಶಕ್ತಿತ್ವವಿರೋಧ ಮಿಲ್ಲೈ**-ಸರ್ವಶಕ್ತಿತ್ವಕ್ಕೇನೂ ವಿರೋಧವಿಲ್ಲವು, **ಎನ್ರು**-ಎಂಬುದಾಗಿ, **ಯಥಾಪ್ರಮಾಣಂಕೊಳ್ಳಿಲ್**-ಪ್ರಮಾಣಾನುಸಾರವಾಗಿ ಅಙ್ಗೀಕರಿಸಿದರೆ, **ಇದು**-ಹೀಗೆ **ಸರ್ವಶಕ್ತಿತ್ವಕ್ಕೆ**-ವಿರೋಧವಿಲ್ಲದಿರೋಣವು, **ಬಹುಪ್ರಮಾಣಪ್ರಾಪ್ತಮಾಯಿರು**

**ಇಪ್ಪಡಿ ಇರುಕ್ಕ " ಚರಣೌ " ಎಂಗಿರ ದ್ವಿವಚನಮಾತ್ರತ್ತೈಕ್ಕೊಂಡು ಶ್ರೀಸಂಬಂಧತ್ತೈ ಉಪಲಕ್ಷಣಮೆನ್ನಿಲ್, ಇಗ್ಗುಣಾದಿಸಂಬಂಧತ್ತೈಯುಂ**

**ಕ್ಕುಮ್**-ಅನೇಕ ಪ್ರಮಾಣಗಳಿಂದ ತೋರಿಬರುವ, **ಶ್ರೀಮಚ್ಛಬ್ದತ್ತಿಲ್**-ಶ್ರೀಮಚ್ಛಬ್ದದಲ್ಲಿ, **ಸ್ವಾರಸಿಕವಿಶೇಷಣಭಾವಮಾನ** ಬಹು ಸ್ವಾರಸ್ಯಾರ್ಥ ಗರ್ಭವಾದ ವಿಶೇಷಣಭಾವವಿರುವ, **ಪತ್ನೀಸಂಬಂಧತ್ತಿಲುಮ್** ಪತ್ನಿಯಾದ ಲಕ್ಷ್ಮೀ ಸಂಬಂಧದಲ್ಲೂ, **ತುಲ್ಯಮ್** ಸಮಾನವು. ಪರಮಾತ್ಮನ ಸ್ವರೂಪಾತ್ಮ ಗುಣಯೋಗವೇನು, ಆತನ ದಿವ್ಯಮಙ್ಗಳ ವಿಗ್ರಹಯೋಗವೇನು, ಇವುಗಳು ವಿಶೇಷಣಗಳಾಗಿರುವದರಿಂದ ಪ್ರಸನ್ನನಾಗುವದಕ್ಕೆ ಇವು ತುಂಬಾ ಸಹಕಾರಿ ಯೆಂದು ನೀವು ಒಪ್ಪಿಕೊಂಡು, ಆದರಿಂದ ಪರಮಪುರುಷನ ಸರ್ವಶಕ್ತಿತ್ವಕ್ಕೇನೂ ತೊಂದರೆ ಇಲ್ಲವೆಂದರೆ, ಹಾಗೆಯೇ ಲಕ್ಷ್ಮಿಯೂ ವಿಶೇಷಣವೆಂದೂ ಹೇಳುವದರಲ್ಲಿ ವಿಶೇಷವಾಗಿ ಸ್ವಾರಸ್ಯಾರ್ಥವೂ ಉಂಟಾಗುತ್ತದೆ. ಅದೂ ಅಲ್ಲದೆ ಆತನ ಸರ್ವಶಕ್ತಿತ್ವಕ್ಕೆ ಏನೊಂದೂ ವಿರೋಧವಿಲ್ಲವು. ಕಲ್ಯಾಣಗುಣಯೋಗವನ್ನೂ ದಿವ್ಯಮಙ್ಗಳ ವಿಗ್ರಹಯೋಗವನ್ನೂ ತಿಳಿಸುವ ಬಹುಪ್ರಮಾಣಗಳುಂಟು. ಎಂದರೆ, ಲಕ್ಷ್ಮಿಯೂ ನಾರಾಯಣನಿಗೆ ವಿಶೇಷಣವೆಂದು ಹೇಳುವ ಪ್ರಮಾಣಬಾಹುಳ್ಯವೂ ಉಂಟು; ಮತ್ತು ಆ ವಿಶೇಷಣ ಭಾವದಿಂದ ಬಹು ಸ್ವಾರಸ್ಯಾರ್ಥಗಳೂ ಉಂಟು. ಹೀಗಾದನಂತರ ಆ ಗುಣಯೋಗ, ದಿವ್ಯಮಙ್ಗಳ ಯೋಗಗಳಿಂದ ಸರ್ವಶಕ್ತಿತ್ವಕ್ಕೆ ಕುಂದಕವಿಲ್ಲವೆಂದು ಒಪ್ಪಿಕೊಂಡರೆ, ಲಕ್ಷ್ಮಿಯ ನಿತ್ಯಯೋಗದಿಂದಲೂ ಸರ್ವ ಶಕ್ತಿತ್ವಕ್ಕೆ ಏನೊಂದೂ ಕುಂದಕವಿಲ್ಲವೆಂದು ಏಕೆ ಒಪ್ಪಿಕೊಳ್ಳಕೂಡದು? ಅವುಗಳು ವಿಶೇಷಣಗಳಾದರೆ ಲಕ್ಷ್ಮಿಯೂ ವಿಶೇಷಣವೆಂದು ಒಪ್ಪಲು ಅಭ್ಯಂತರವೇನೆಂಬ ಭಾವವು.

ಪೂರ್ವಖಂಡದಲ್ಲಿ ಶ್ರೀಮಚ್ಛಬ್ದವು ವಿಶೇಷಣವಲ್ಲವಾದುದರಿಂದ ಉಪಾಯತ್ವ ದಲ್ಲಿ ಅನ್ವಯವಿಲ್ಲವು, ಅದು ಉಪಲಕ್ಷಣವು ಎಂದೂ, ಆದುದರಿಂದ ಆಕೆಗೆ ಪುರುಷ ಕಾರತ್ವ ಮಾತ್ರವೇ ಎಂಬ ಅಭಿಪ್ರಾಯವನ್ನು ಹಿಂದೆ ಸಿದ್ಧೋಪಾಯಶೋಧನಾಧಿ ಕಾರದಲ್ಲಿ ಉಪಪಾದಿಸಿದ್ದರು. ೨೦೮೮-೯೭ ನೆಯ ಪುಟವನ್ನು ನೋಡಿ. ಆ ಪ್ರಕರಣವೇ ಈಗಲೂ ಒದಗಿರುವದರಿಂದ ಅದನ್ನೇ ಪುನಃ ಅವಗಾಹನೆಗೆ ತರುತ್ತಾರೆ.—**ಇಪ್ಪಡಿ ಇರುಕ್ಕ**-ಮೇಲೆ ಉಪಪಾದಿಸಿದ ರೀತಿಯಲ್ಲಿ ಎಂದರೆ ಪರಮಾತ್ಮನು ಲಕ್ಷ್ಮಿಯೊಂದಿಗೆ ಸೇರಿಯೇ ಉಪಾಯನೆಂಬುದಕ್ಕೆ ಅನೇಕ ಪ್ರಮಾಣಗಳಿರುವಾಗ, **ಚರಣೌ ಎಂಗಿರದ್ವಿವಚನತ್ತೈ**-ಚರಣೌ ಎಂಬಲ್ಲಿರುವ ದ್ವಿವಚನವನ್ನುಮಾತ್ರ ಅಙ್ಗೀಕರಿಸಿ, **ಶ್ರೀಸಂಬಂಧತ್ತೈ**-ಲಕ್ಷ್ಮಿಯೊಂದಿಗೆ ಸೇರಿ ರೋಣವನ್ನೂ **ಉಪಲಕ್ಷಣಮೆನ್ನಿಲ್**-ಉಪಲಕ್ಷಣವೆಂದು ಹೇಳಿದರೆ, ಈ ಪೂರ್ವ ಪಕ್ಷಕ್ಕೆ ಸಮಾಧಾನವನ್ನು ಪ್ರತಿಬಂದಿವಾದದ ಮೂಲಕ ಹೇಳುತ್ತಾರೆ. **ಈಗ್ಗುಣಾ ದಿಸಂಬಂಧತ್ತೈಯುಮ್**-ಈ ಕಲ್ಯಾಣಗುಣಗಳ ಯೋಗವನ್ನೂ ದಿವ್ಯಮಙ್ಗಳ

**ಇಪ್ಪಡಿ ಶೊಲ್ಲಪ್ರಸಙ್ಗಿಕ್ಕುಮ್. ಚರಣಶಬ್ದತ್ತಿಲ್ ಉಪಾಯವಾಚಿ ಶಬ್ದ ಸಮಭಿವ್ಯಾಹಾರತ್ತಾಲೇ ಉಪಯುಕ್ತಗುಣ ವಿಗ್ರಹ ವಿಶಿಷ್ಟರ್ ಉಪಾಯ ಮಾಗಿರಾನೆನ್ರು ವಿವಕ್ಷಿತಮೆನ್ನಿಲ್, ಇದು ಇಙ್ಗುಮ್ ತುಲ್ಯಮ್.**

**ಇಪ್ಪಡಿಇರುಕ್ಕ ಇವಳೈ ವಿಶೇಷಣಮಾಗಕೊಳ್ಳಿಲ್ ಸರ್ವಶಕ್ತಿತ್ವ**

ವಿಗ್ರಹಯೋಗವನ್ನೂ ಸಹ, **ಇಪ್ಪಡಿಶೊಲ್ಲಪ್ರಸಙ್ಗಿಕ್ಕುಮ್**-ಉಪಲಕ್ಷಣವೆಂದು ಹೇಳಬೇಕಾಗಿ ಬಂದೀತು. ಆದರೆ ಈ ಗುಣಯೋಗವನ್ನೂ ದಿವ್ಯವಿಗ್ರಹಯೋಗ ವನ್ನೂ ಉಪಲಕ್ಷಣವಲ್ಲವು, ವಿಶೇಷಣವೆಂದು ಹೇಳುವವಾದರೆ ಲಕ್ಷ್ಮಿಯ ನಿತ್ಯ ಯೋಗವನ್ನೂ ವಿಶೇಷಣವೆಂದು ಹೇಳಲು ಅಭ್ಯಂತರವೇನೆಂಬ ಭಾವವು. ಉಪ ಲಕ್ಷಣ ಶಬ್ದಾರ್ಥಕ್ಕೆ ೨೦೮೮ ನೆಯ ಪುಟವನ್ನು ನೋಡಿ. ಈ ವಾದವನ್ನೇ ಮುಂದಿನ ವಾಕ್ಯದಿಂದ ಉಪಪಾದಿಸುತ್ತಾರೆ.—

ಈ ಗುಣಯೋಗವೂ ದಿವ್ಯಮಙ್ಗಳ ವಿಗ್ರಹಯೋಗವೂ ಉಪಲಕ್ಷಣವೆಂದು ಹೇಳಲು ಸಾಧ್ಯವಿಲ್ಲವು, ಏಕೆಂದರೆ ಪರಮಪುರುಷನು ಉಪಾಯವಾಗಿರಲು ಇವು ಬೇಕಾದ ಸಹಕಾರಿಗಳು, ಆದುದರಿಂದ ಇವು ವಿಶೇಷಣಗಳೇ ವಿನಾ ಉಪಲಕ್ಷಣವಾಗುವದಿಲ್ಲವೆಂದು ಪೂರ್ವಪಕ್ಷಿಯು ವಾದವನ್ನು ತಂದರೆ, ಲಕ್ಷ್ಮಿಯೂ ಸಹ ಆ ಕಾರಣದಿಂದಲೇ ವಿಶೇಷಣವೆಂದು ಭಾವಿಸಲು ಅಭ್ಯಂತರವೇನೆಂದು ಮುಂದಿನ ವಾಕ್ಯದಿಂದ ಹೇಳುತ್ತಾರೆ. **ಚರಣಶಬ್ದತ್ತಿಲ್**-ಚರಣೌ ಎಂಬ ಶಬ್ದದಲ್ಲಿ, **ಉಪಾಯವಾಚಿಶಬ್ದಸಮಭಿವ್ಯಾಹಾರತ್ತಾಲೇ** - ಉಪಾಯವನ್ನು ಹೇಳುವ ಶಬ್ದವಾದ **ಶರಣಂ**-ಎಂಬುದರೊಂದಿಗೆ ಪ್ರಯೋಗಿಸಿರುವದರಿಂದ, **ಉಪಯುಕ್ತ ಗುಣವಿಗ್ರಹವಿಶಿಷ್ಟರ್**-ಉಪಾಯತ್ವಕ್ಕೆ ಪ್ರಯೋಜನಕರವಾದ ಕಲ್ಯಾಣಗುಣ ಗಳಿಂದಲೂ ದಿವ್ಯಮಙ್ಗಳ ವಿಗ್ರಹದಿಂದಲೂ ಯುಕ್ತನಾದ ನಾರಾಯಣನು, **ಉಪಾಯಮಾಗಿರಾನ್**-ಉಪಾಯನಾಗುವನು, ಎಂದರೆ ಆತನು ಉಪಾಯ ನಾಗಲು ಇವುಗಳ ವಿಶಿಷ್ಟತೆಯು ಆವಶ್ಯಕವೆಂಬ ಭಾವವು, **ಎನ್ರುವಿವಕ್ಷಿತ ಮೆನ್ನಿಲ್**-ಎಂಬುದು ಹೇಳಲ್ಪಡತಕ್ಕುದ್ದಾಗಿರುತ್ತದೆ ಎಂದರೆ **ಇದು**-ಈ ಕಾರಣವೇ **ಇಙ್ಗುಮ್ತುಲ್ಯಮ್**-ಈ ಲಕ್ಷ್ಮಿಯ ನಿತ್ಯಯೋಗವೂ ಉಪಾಯತ್ವಕ್ಕೆ ಆವಶ್ಯಕ ವೆಂದೇ ಹೇಳಿ, ವಿಶೇಷಣವೆಂದೇ ಅಙ್ಗೀಕರಿಸತಕ್ಕದ್ದು ಸಮಾನವಾದುದೇ. ಕಲ್ಯಾಣಗುಣಗಳೂ ಮತ್ತು ದಿವ್ಯಮಙ್ಗಳ ವಿಗ್ರಹವೂ ಪರಮಾತ್ಮನ ಉಪಾಯ ತ್ವಕ್ಕೆ ಅವು ವಿಶೇಷಣವಾದುದರಿಂದ ಉಪಯುಕ್ತವೆಂದು ಭಾವಿಸಿದರೆ, ಲಕ್ಷ್ಮಿಯೂ ಸಹ ಅದೇ ಕಾರಣದಿಂದಲೇ ವಿಶೇಷಣವೇ ಎಂದು ಉಪದೇಶಿಸಿದರು.

ಶ್ರೀಮಹಾಲಕ್ಷ್ಮಿಗೆ ಉಪಾಯತ್ವವನ್ನು ಅಙ್ಗೀಕರಿಸಿದರೆ ಸರ್ವೇಶ್ವರನ ಸರ್ವಶಕ್ತಿತ್ವಕ್ಕೆ ವಿರೋಧವುಂಟಾಗುವದರಿಂದ ಪುರುಷಕಾರತ್ವವನ್ನು ಮಾತ್ರ ಹೇಳುವದು ಯುಕ್ತವೆಂಬ ಪೂರ್ವಪಕ್ಷಿಯ ವಾದಕ್ಕೆ ಪ್ರತಿಬಂದಿವಾದದಿಂದ ಪುರುಷ ಕಾರತ್ವವನ್ನು ಹೇಳಿದರೂ ಸರ್ವಶಕ್ತಿತ್ವಕ್ಕೆ ಭಂಗಉಂಟಾಗುತ್ತದೆಂದು ಹೇಳುತ್ತಾರೆ.

**ವಿರೋಧಮ್ ವರುಮೆನ್ಬಾರ್ಕು ಇಪ್ಪುರುಷಕಾರಾಪೇಕ್ಷೈಯಿಲುಮ್ ಸರ್ವ ಶಕ್ತಿತ್ವವಿರೋಧಮ್ ಪ್ರಸಜ್ಗಿಕ್ಕುಮ್.**

**(೧)" ಯುವತ್ವಾದೌತುಲ್ಯೇ " ಎಜ್ಗಿರ ಶ್ಲೋಕತ್ತಿಲ್ ಚೊನ್ನ ಗುಣ ವಿಭಾಗತ್ತಿನ್ ಪಡಿಯೇ ಪುಂಸ್ತ್ವಪಿತೃತ್ವಪ್ರಶಾಸಿತೃತ್ವಾದಿಗಳಾಲೇ ಪ್ರಶಾ ಪೋತ್ತರನಾಯ್, ದಂಡಧರನಾಯ್, ನಿರ್ಕ್ಕಿರ ಈಶ್ವರನ್ನೈಪ್ಪತ್ತುಇಳಿವಾರ್ಕು**

**ಇಪ್ಪಡಿಇರುಕ್ಕ**-ಹೀಗೆ ಯಾವ ವಾದದ ಮೂಲಕವಾಗಿಯೇ ಆಗಲಿ, ಪ್ರಮಾಣ ಮೂಲಕವಾಗಿಯೇಯಾಗಲಿ ಲಕ್ಷ್ಮಿಯೂ ನಾರಾಯಣನಿಗೆ **ವಿಶೇಷಣ**ವೆಂದು ಹೇಳಲು ತೊಂದರೆ ಇಲ್ಲದಿರುವಾಗ, **ಇವಳೈ**-ಶ್ರೀಮಹಾಲಕ್ಷ್ಮಿಯನ್ನು, **ವಿಶೇಷಣ ಮಾಗಕೊಳ್ಳಿಲ್**-ದ್ವಯಪೂರ್ವಖಂಡದಲ್ಲಿ ವಿಶೇಷಣವೆಂದು ಅಜ್ಗೀಕರಿಸಿದರೆ. **ಸರ್ವಶಕ್ತಿತ್ವವಿರೋಧಮ್ ವರುಮ್**-ನಾರಾಯಣನ ಸರ್ವಶಕ್ತಿತ್ವಕ್ಕೆ ವಿರೋಧ ವುಂಟಾಗುತ್ತದೆ, **ಎನ್ಬಾರ್ಕು**-ಎಂದು ವಾದಿಸುವರಿಗೆ, **ಇಪ್ಪುರುಷಕಾರಾಪೇಕ್ಷೈ ಯಿಲುಮ್**-ಲಕ್ಷ್ಮಿಗೆ ಪುರುಷಕಾರತ್ವ ಉಂಟೆಂದು ಒಪ್ಪಿಕೊಳ್ಳುವದರಲ್ಲೂ ಸಹ, **ಸರ್ವಶಕ್ತಿತ್ವವಿರೋಧಮ್ ಪ್ರಸಜ್ಗಿಕ್ಕುಮ್**-ಸರ್ವಶಕ್ತಿತ್ವಕ್ಕೇ ವಿರೋಧವು ಆಗಲೂ ಬಂದೇ ಬರುತ್ತದೆ. ಹೇಗೆಂದರೆ ಪರಮಪುರುಷನು ಸರ್ವಶಕ್ತನಾಗಿರುವಾಗ ಲಕ್ಷ್ಮಿಯ ಪುರುಷಕಾರತ್ವವನ್ನು ಏಕೆ ಪ್ರತೀಕ್ಷಿಸಬೇಕು ; ಸರ್ವಶಕ್ತನಾದವನಿಗೆ ಇನ್ನು ಯಾವುದರ ಅಪೇಕ್ಷೆಯೂ ಕೂಡದು. ಹೀಗಿರುವಾಗ ಲಕ್ಷ್ಮಿಯ ಪುರುಷ ಕಾರತ್ವದ ಅಪೇಕ್ಷೆಯು ಏತಕ್ಕೆ ? ಹೀಗೆ ಅಪೇಕ್ಷಿಸಿದರೆ ಆಗಲೂ ಅತನ ಸರ್ವ ಶಕ್ತಿತ್ವಕ್ಕೇ ಭಂಗವೇ ಎಂಬ ಭಾವವು. ಮುಂದೆ ಪೂರ್ವಪಕ್ಷಿಗಳು ಶ್ರೀ ಪರಾಶರ ಭಟ್ಟರ ದಿವ್ಯಸೂಕ್ತಿಯ ಮೂಲಕ ಪುರುಷಕಾರತ್ವವನ್ನು ಉಪಪಾದಿಸಿ, ತನ್ಮೂಲಕ ಈಶ್ವರಸ್ವಾತಂತ್ರ್ಯಕ್ಕೆ ಭಂಗವಿಲ್ಲವೆಂದು ಹೇಳುವ ವಾದಕ್ಕೂ ಸಮಾಧಾನವನ್ನು ಹೇಳುತ್ತಾರೆ; ಲಕ್ಷ್ಮಿಯು ವಿಶೇಷವಾಗಿ ಉಪಾಯತ್ವಕ್ಕೂ ಸಹಕಾರಿಯು ಎಂದು ಒಪ್ಪಿಕೊಂಡರೂ ಈಶ್ವರ ಸ್ವಾತಂತ್ರ್ಯಕ್ಕೇನೂ ವಿರೋಧವಿಲ್ಲವೆಂದು ತಿಳಿಸುತ್ತಾರೆ.

**(೧)" ಯುವತ್ವಾದೌತುಲ್ಯೇ " ಎಜ್ಗಿರಶ್ಲೋಕತ್ತಿಲ್ಚೊನ್ನ** ಎಂಬ ಶ್ಲೋಕದಲ್ಲಿ ಹೇಳಲ್ಪಟ್ಟ, **ಗುಣವಿಭಾಗತ್ತಿನ್ ಪಡಿಯೇ**-ಪರಮಾತ್ಮನೂ ಲಕ್ಷ್ಮಿಯೂ ಸಹ ಮಾಡಿಕ್ಕೊಂಡಿರುವ ಗುಣವಿಭಾಗದ ಹಾಗೆಯೇ, ಎಂದರೆ ಪರಮಾತ್ಮನು ಪುರುಷನಿಗೆ ಸಹಜವಾದ ಕಠಿಣಗಳಾದ ನಿಗ್ರಹರೂಪವಾದ ಅಪರಾ ಧಿಗಳ ಶಿಕ್ಷಣೆ, ವೊದಲಾದ ಗುಣಗಳನ್ನೂ, ಲಕ್ಷ್ಮಿಯು ಸ್ತ್ರೀಗೆ ಸಹಜವಾದ ಅನುಗ್ರಹಾದಿಗಳನ್ನು ಮಾಡುವ ಸ್ವಭಾವವನ್ನೂ ವಿಭಾಗಿಸಿಕೊಂಡಿರುವ ಮೇರೆಗೆ **ಪುಂಸ್ತ್ವ**-ಪುರುಷನಾಗಿರುವದಕ್ಕೆ ಯೋಗ್ಯವಾದ ಗುಣ, **ಪಿತೃತ್ವ**-ಲೋಕಪಿತಾವಾಗಿ ತನ್ನ ಮಕ್ಕಳು ಹಿತಾಚರಣೆಯನ್ನು ಮಾಡುವ ಹಾಗೆ ಮಾಡಬೇಕೆಂಬ ಕುತೂಹಲ,

---

(೧) ಶ್ರೀಗುಣ. 34.

**ಸ್ತ್ರೀತ್ವಮಾತೃತ್ವಾದಿಗಳಾಲೇ ವನ್ದಮಾರ್ದವ ವಾತ್ಸಲ್ಯಾದಿಗುಣಾತಿಶಯುತ್ತಾಲೇ ಇವಳ್ ಅವನ್ನೈಪ್ಪತ್ತನಮುಕ್ಕುಪುರುಷಕಾರಮಾಗೈಯುಮ್, ಈಶ್ವರಸ್ವಾತಂತ್ರ್ಯನಿಯಮಿತಮೆನ್ರು ಶೊಲ್ಲಿಲ್, ಇಪ್ಪಡಿಯೇ ಸಹಧರ್ಮಚಾರಿಣಿಯಾನ ಅವಳಾಲೇ ವಿಶಿಷ್ಟನಾಯ್‌ಕ್ಕೊಂಡು ಶರಣ್ಯನಾಗೈಯುಮ್, ಈಶ್ವರಸ್ವಾತಂತ್ರ್ಯನಿಯತಮೆನ್ರುಕೊಣ್ಡಾಲ್ ಒರು ಪ್ರಮಾಣತ್ತಿಕ್ಕುಮ್ ವಿರೋಧಮಿಲ್ಲೈ.**

**ಪ್ರಶಾಸಿತೃತ್ವಾದಿಗಳಾಲೇ** ಜ್ಞಾನವಿವೇಕ ಶಾಸ್ತ್ರಾದಿಗಳನ್ನು ಕೊಟ್ಟಿದ್ದರೂ ಅಧರ್ಮಪ್ರವರ್ತನೆಯಲ್ಲಿ ನಿರತರಾದವರನ್ನು ಶಿಕ್ಷಿಸುವದೇ ಮೊದಲಾದವುಗಳಿಂದ, **ಪ್ರತಾಪೋತ್ತರಮಾಯ್**-ನಿರತಿಶಯ ಪರಾಕ್ರಮುವನ್ನು ಹೊಂದಿದವನಾಗಿ, **ದಂಡಧರನಾಯ್**-ಅಪರಾಧಿಗಳನ್ನು ಶಿಕ್ಷಿಸುವವನಾಗಿ, ಶಾಸ್ತಾವಾಗಿ, **ನಿರ್ಕಿರ ಈಶ್ವರನ್ನೈಪತ್ತ**-ಇರುವ ಸರ್ವನಿಯಾಮಕನಾಗಿರುವ ಪರಮಾತ್ಮನನ್ನು ಕುರಿತು, **ಇಳಿವಾರ್ಕು**-ಆಶ್ರಯಿಸುವವರಿಗೆ, **ಸ್ತ್ರೀತ್ವಮಾತೃತ್ವಾದಿಗಳಾಲೇ**-ಉತ್ತಮ ಸ್ತ್ರೀಯಾಗಿಯೂ ಲೋಕಮಾತೆಯಾಗಿಯೂ ಇರೋಣವೇ ಮೊದಲಾದವುಗಳಿಂದ, **ವಂದ**-ಉಂಟಾದ, **ಮಾರ್ದವ ವಾತ್ಸಲ್ಯಾದಿಗಳಾಲೇ**-ಮೃದುವಾದ ಸ್ವಭಾವ, ತನ್ನಮಕ್ಕಳೇ ಎಂದು ದೋಷವನ್ನು ಪರಿಗಣಿಸದೇ ಇರುವ ವಾತ್ಸಲ್ಯವೇ ಮೊದಲಾದ ಗುಣಗಳಿಂದ, **ಇವಳ್** ಲಕ್ಷ್ಮಿಯು, **ಅವನ್ನೈಪ್ಪತ್ತ** ತನ್ನಪತಿಯನ್ನು ಕುರಿತ, **ನಮುಕ್ಕುಪುರುಷಕಾರಮಾಗೈಯುಮ್**-ನಮುಗೆ ಲಕ್ಷ್ಮಿಯು ಪುರುಷಕಾರಭೂತಳಾಗಿರುವುದು, **ಈಶ್ವರಸ್ವಾತಂತ್ರನಿಯತಮ್**-ಸರ್ವೇಶ್ವರನ ಸ್ವಾತಂತ್ರ್ಯಕ್ಕೆವಿಹಿತವಾದುದು, **ಎನ್ರುಶೊಲ್ಲಿಲ್**-ಎಂದು ಹೇಳಿದರೆ, ಎಂದು ಒಪ್ಪಿಕೊಂಡರೆ, ಇದರಿಂದ ಪೂರ್ವಪಕ್ಷಿಯ ಅಭಿಪ್ರಾಯವನ್ನು ಉಪಪಾದಿಸಿದರು, ಅದಕ್ಕೆ ಸಮಾಧಾನವನ್ನು ಮುಂದೆ ಹೇಳುತ್ತಾರೆ.— **ಅಪ್ಪಡಿಯೇ**-ಹಾಗೆಯೇ, ಎಂದರೆ ಆ ವಾದದಪ್ರಕಾರವೇ, **ಸಹಧರ್ಮಚಾರಿಣಿಯಾನ**-ಎಲ್ಲಾ ಪ್ರವೃತ್ತಿಯಲ್ಲೂ "**ಇಯಂ ಸೀತಾಮಮಸುತಾ ಸಹಧರ್ಮಚರೀತವ**" ಎಂದು (ರಾಮಾ. ಬಾಲ. ) ಜ್ಞಾನಾಗ್ರೇಸರರಾದ ಜನಕಮಹಾರಾಜರ್ಷಿಯ ವಾಕ್ಯದ ಹಾಗೆ, ಎಲ್ಲಾ ಪ್ರವೃತ್ತಿಯಲ್ಲೂ ಸಹಧರ್ಮಚಾರಿಣಿಯಾದ, **ಅವಳಾಲೇ**-ಆ ಲಕ್ಷ್ಮಿಯಿಂದ **ವಿಶಿಷ್ಟನಾಯ್‌ಕ್ಕೊಂಡು**-ನಿತ್ಯಯೋಗವು ಶ್ರುತಿಸ್ಮೃತಿ ಇತಿಹಾಸ ಪುರಾಣಾದಿಗಳಲ್ಲಿ ಸುಪ್ರಸಿದ್ಧವಾದುದರಿಂದ, ವಿಶಿಷ್ಟನಾಗಿಯೇ, **ಶರಣ್ಯನಾಗೈಯುಮ್**-ಉಪಾಯೋಪೇಯನಾಗಿರುವದೂ ಸಹ, **ಈಶ್ವರಸ್ವಾತಂತ್ರ್ಯನಿಯತಮೆನ್ರುಕೊಂಡಾಲ್**-ಲಕ್ಷ್ಮಿಯು ಪತಿಗೆ ವಿಶೇಷಣಭೂತಳಾಗಿ ವಿಧೇಯಳಾಗಿ, ತನ್ನ ವಾಲ್ಲಭ್ಯಾತಿಶಯದಿಂದಲೂ ಸದಾನುಕೂಲಳಾಗಿಯೂ ಇರುವವರಿಂದ ಈಶ್ವರನ ಸ್ವಾತಂತ್ರ್ಯಕ್ಕೆ ವಿಹಿತವಾದುದೆಂದೇ, **ಕೊಂಡಾಲ್**-ಅಙ್ಗೀಕರಿಸಿದರೆ, **ಒರು ಪ್ರಮಾಣತ್ತಿಕ್ಕುಂ ವಿರೋಧಮಿಲ್ಲೈ**-ಯಾವ ಪ್ರಮಾಣಗಳಿಗೂ ವಿರೋಧ

## ಶರಣಶಬ್ದಾರ್ಥಃ

ಇವ್ವಿಡತ್ತಿಲ್ "ಶರಣ" ಶಬ್ದಮ್ (೧) **"ಉಪಾಯೇ ಗೃಹರಕ್ಷತ್ರೋಃ ಶ್ಯಬ್ದ ಶ್ಯರಣಮಿತ್ಯಯಮ್ । ವರ್ತತೇ ಸಾಂಪ್ರತಂ ತ್ವೇಷ ಉಪಾಯಾರ್ಥೈಕ ವಾಚಕಃ" ಎನ್ರು ವಿಶೇಷಿಕ್ಕೈಯಾಲೇ ಉಪಾಯಪರಮ್.**

ವಾಗುವುದಿಲ್ಲವು. ಈ ಸಂದರ್ಭದಲ್ಲಿ **"ಲಕ್ಷ್ಮ್ಯಾಸಹಹೃಷೀಕೇಶೋದೇವ್ಯಾ ಕಾರುಣ್ಯರೂಪಯಾ । ರಕ್ಷಕಸ್ಸರ್ವಸಿದ್ಧಾನ್ತೇ ವೇದಾನ್ತೇಷುಚಗೀಯತೇ" "ತಥಾವ್ಯಾಪ್ತಂ ತಯಾಸರ್ವಂ ನಿಯನ್ತ್ರೀಚತಥೇಶ್ವರೀ" "ಶ್ರದ್ಧಯಾದೇವೋ ದೇವತ್ವಮಶ್ನುತೇ" "ಉಲ್ಲಾಸಪಲ್ಲವಿತಪಾಲಿತ ಸಪ್ತಲೋಕೀ" "ತತೋವಲೋಕಿತಾದೇವಾ ಹರಿವಕ್ಷಸ್ಥಲಸ್ಥಯಾ । ಲಕ್ಷ್ಮ್ಯಾಮೈತ್ರೇಯಸಹಸಾ ಪರಾಂ ನಿರ್ವೃತಿ ಮಾಗತಾಃ" "ಅವತಾರಂ ಕರೋತ್ಯೇಷಾ ತದಾತತ್ಸಹಾಯಿನೀ"** ಇತ್ಯಾದಿ ಪ್ರಮಾಣಗಳು ಅನುಸಂಧೇಯವು. ಹಾಗೆಯೇ ಈಗ ನೀವು ಹೇಳುವ ಹಾಗೆ ವಿಶೇಷಣವಲ್ಲವು, ಆ ಕಾರಣದಿಂದ ಉಪಾಯತ್ವದಲ್ಲಿ ಈ ಸಹಧರ್ಮಚಾರಿಣಿಗೆ ಅನ್ವಯವಿಲ್ಲವೆಂದರೆ ಬಹುಪ್ರಮಾಣಗಳಿಗೆ ವಿರುದ್ಧವಾಗುತ್ತದೆಂಬುದು ಸೂಚಿತವು. ಯಾವ ಪ್ರಮಾಣಗಳಿಗೆ ವಿರುದ್ಧವೆಂಬುದೂ ಹಿಂದೆಯೇ ಉಪಪಾದಿತವು. ೫೯೬ ನೆಯ ಪುಟವನ್ನು ನೋಡಿ. ಲಕ್ಷ್ಮಿಯೊಂದಿಗೇನೇ ಉಪಾಯತ್ವವನ್ನು ಬೋಧಿಸುವ ಅನೇಕ ಪ್ರಮಾಣಗಳಿಗೆ ವಿರೋಧವಾಗುತ್ತದೆ. ಆ ಪ್ರಮಾಣಗಳಿಗಾಗಿ ೨೧೧೬-೭ ನೆಯ ಪುಟಗಳನ್ನು ಪರಾಂಬರಿಸಿ. ಈ **"ಯುವತ್ವಾದೌ ತುಲ್ಯೇ"** ಎಂಬ ಶ್ಲೋಕದ ಪ್ರತಿಪದಾರ್ಥ ತಾತ್ಪರ್ಯಗಳಿಗೆ ಹಿಂದೆ ತತ್ವತ್ರಯಾಧಿಕಾರದ ೫೯೮-೯ ನೆಯ ಪುಟವನ್ನು ನೋಡಿ.

ಆಗಲಿ, ಲಕ್ಷ್ಮಿಗೆ ಉಪಾಯತ್ವದಲ್ಲೂ ಅನ್ವಯವಿದ್ದುದಾದರೆ ಪುರುಷಕಾರತ್ವವು ಹೇಗೆ ಕೂಡುತ್ತದೆ? ಅಸಂಗತವಲ್ಲವೋ? ಎಂದರೆ ಈ ಹಿಂದಿನ ವಾಕ್ಯವು ಎರಡೂ ಲಕ್ಷ್ಮಿಯಲ್ಲಿರುವದರಲ್ಲೇನೂ ಅಸಾಮಂಜಸ್ಯವಿಲ್ಲವು ಎಂದು ತಿಳಿಸುತ್ತದೆ. ಪರಮಾತ್ಮನು ತನ್ನ ಪ್ರಿಯವಲ್ಲಭೆಯೊಂದಿಗೆ ಸೇರಿ ಐಕಮತ್ಯದಿಂದ ಉಪಾಯವಾಗುವದರಲ್ಲೇನೂ ಅಸಂಗತವಾದುದಿಲ್ಲವು. ಪತಿಗೆ ಶೇಷಭೂತಳಾಗಿರುವದರಿಂದ ಸಾಪರಾಧಿಯ ವಿಷಯದಲ್ಲಿ, ಪತಿಪಾರತಂತ್ರ್ಯವನ್ನು ತೋರಿಸಿ ತನ್ನ ಸ್ತ್ರೀತ್ವ, ಮಾತೃತ್ವಾದಿಗಳಿಂದುಂಟಾದ ವಾತ್ಸಲ್ಯಾದಿಗಳ ಮೂಲಕ ಪುರುಷಕಾರಭೂತೆಯ ರೂಪದಲ್ಲಿ ಪ್ರವೃತ್ತಿಯುಂಟೆಂದು ಹೇಳುವದರಲ್ಲಿ ಏನೊಂದೂ ಅಸಂಗತವಾದುದಿಲ್ಲವೆಂಬ ಭಾವವು.

## ಶರಣವೆಂಬ ಶಬ್ದದ ಅರ್ಥವು

ಶರಣಶಬ್ದಕ್ಕೆ ಅನೇಕಾರ್ಥಗಳು ಉಂಟು. ಅವುಗಳು ಯಾವುವೆಂದು ತಿಳಿಸಿ,

(೧) ಅಹಿ. ಸಂ. ೩೭-೨೯.

## ಶರಣಶಬ್ದಸ್ಯೋಪಾಯಪರತ್ವಂ ಕಥಮಿತ್ಯತ್ರಾಹ

ಈ ದ್ವಯಮನ್ತ್ರದ ಶರಣಶಬ್ದಕ್ಕೆ ಉಪಾಯವೆಂದೇ ಅರ್ಥವೆಂಬುದನ್ನು ಸಪ್ರಮಾಣವಾಗಿ ತಿಳಿಸುತ್ತಾರೆ. ಈ ಅಭಿಪ್ರಾಯವು ಹಿಂದೆಯೇ ಪರಿಕರವಿಭಾಗಾಧಿಕಾರದ ಕೊನೆಯವಾಕ್ಯದಲ್ಲಿ ಉಪಪಾದಿತವು. ೧೦೪೦ ನೆಯ ಪುಟವನ್ನು ನೋಡಿ. ಅಲ್ಲಿ ಶರಣಶಬ್ದವು ಶಾಬ್ದವಾಗಿ ಉಪಾಯತ್ವವನ್ನೂ, ಅರ್ಥವಾಗಿ ಗೋಪ್ತೃತ್ವವರಣವನ್ನೂ ಬೋಧಿಸುತ್ತದೆಂದು ಹೇಳಿರುತ್ತಾರೆ.—**ಇವ್ವಿಡತ್ತಿಲ್**-ಈ ಸಂದರ್ಭದಲ್ಲಿ, **ಶರಣಶಬ್ದವು**–"**ಉಪಾಯೇ**-ಉಪಾಯವೆಂಬರ್ಥದಲ್ಲೂ, **ಗೃಹರಕ್ಷಿತ್ರೋಃ**-ಮನೆ ಮತ್ತು ರಕ್ಷಕನೆಂದೂ, ಹೀಗೆ ಮೂರರ್ಥದಲ್ಲಿ, **ಶರಣಮಿತ್ಯಯಂ ಶಬ್ದಃ** ಶರಣವೆಂಬೀ ಶಬ್ದವು, **ವರ್ತತೇ**-ಇರುತ್ತದೆ. **ಸಾಂಪ್ರತಂ**-ಈ ದ್ವಯಮನ್ತ್ರದಲ್ಲಿಯಾದರೋ, **ಏಷಃ**-ಈ ಶರಣಶಬ್ದವು, **ಉಪಾಯಾರ್ಥೈಕವಾಚಕಃ**-ಉಪಾಯವೆಂಬರ್ಥವನ್ನು ಮಾತ್ರವೇ ಬೋಧಿಸುತ್ತದೆ. **ಎನ್ರು**-ಎಂಬುದಾಗಿ, **ವಿಶೇಷಿಕ್ಕೈಯಾಲೇ**-ವಿಶೇಷಿಸಿ ಸಂಹಿತೆಯು ಹೇಳಿರುವದರಿಂದ **ಉಪಾಯಪರಂ** ಉಪಾಯವನ್ನೇ ಬೋಧಿಸುತ್ತದೆ. ಆದುದರಿಂದ ದ್ವಯಮನ್ತ್ರವು ಉಪಾಯಪರವಾಗಿ ಸಾಧ್ಯೋಪಾಯವಾದ ಭರನ್ಯಾಸಾನುಷ್ಠಾನರೂಪವಾದುದು.

ಶರಣಶಬ್ದಕ್ಕೆ ಉಪಾಯಪರತ್ವವು ಹೇಗೆ ಎಂಬ ಸಂದರ್ಭದಲ್ಲಿ ಹೇಳುತ್ತಾರೆ—

---

ಶರಣಶಬ್ದಕ್ಕಿರುವ ಮೂರರ್ಥದಲ್ಲಿ ಈ ದ್ವಯಮನ್ತ್ರದಲ್ಲಿರುವ ಪದಕ್ಕೆ ಉಪಾಯವೆಂದೇ ಅರ್ಥವೆಂದು ಹೇಳಲ್ಪಟ್ಟಿತು. ಇದಕ್ಕೆ ಪ್ರಮಾಣವಾಗಿ ಸಂಹಿತಾವಾಕ್ಯವೂ ಉದಾಹರಿಸಲ್ಪಟ್ಟಿತು. ಚನ್ನಾಗಿ ಆರಾಧಿಸಲ್ಪಟ್ಟ ಶ್ರೀಮನ್ನಾರಾಯಣನೇ ಸರ್ವಫಲಪ್ರದನಾಗಿರುವಾಗ, ಈ ದ್ವಯಮನ್ತ್ರದ ಮೂಲಕ ಉಪಾಯಾನುಷ್ಠಾನವು ಏತಕ್ಕೆ? ಈ ಅಚೇತನರೂಪವಾದ ಅನುಷ್ಠಾನವು ಏನನ್ನು ಮಾಡಬಲ್ಲುದು? ಎಂದರೆ, ಮೋಕ್ಷೋಪಾಯವಾದ ಭಕ್ತಿಯೋ ನಿಷ್ಠೆಯಲ್ಲಿ ತನಗೆ ಅಶಕ್ತತೆ ಇರುವದರಿಂದ, ಆ ಉಪಾಯಸ್ಥಾನದಲ್ಲಿ ನೀನೇ ನಿಂತು, ಅದರಿಂದ ಸಾಧ್ಯವಾದ ಫಲವನ್ನು ಸಹಜಕಾರುಣ್ಯಾತಿಶಯದಿಂದ, ನೀನೇ ಕೊಡತಕ್ಕದ್ದು; ನನ್ನ ತಲೆಯ ಮೇಲೆ ಮೋಕ್ಷೋಪಾಯವಾದ, ನನ್ನಿಂದ ಅಸಾಧ್ಯವಾದ ಭಕ್ತಿಯೋಗರೂಪ ಭಾರವನ್ನು ಹಾಕಬೇಡ, ನನ್ನನ್ನು ರಕ್ಷಿಸುವ ಭಾರವೆಲ್ಲಾ ನಿನ್ನದು; ಈ ಸಂದರ್ಭದಲ್ಲಿ ನಾನು ಇನ್ನ್ಯಾವ ಉಪಾಯವನ್ನು ಅವಲಂಬಿಸುವ ಶಕ್ತಿಯಿಲ್ಲದವನು; ಆದುದರಿಂದ ಆ ಕಷ್ಟವಾದ ಉಪಾಸನಾನುಷ್ಠಾನದ ಸ್ಥಾನದಲ್ಲಿ ನೀನೇ ನಿಂತು ರಕ್ಷಿಸತಕ್ಕದ್ದು; ಆ ಕಾರಣದಿಂದ ನಿನ್ನ ವಸ್ತುವಾದ ಆತ್ಮವನ್ನು ನಿನ್ನ ಪಾದದಲ್ಲಿ ಸಮರ್ಪಿಸಿರುತ್ತೇನೆ ಎಂಬರ್ಥವು ಭರನ್ಯಾಸಕ್ಕೆ ಏರ್ಪಡುವದರಿಂದ ಇದೂ ಉಪಾಯವೇ ಎಂಬ ಭಾವವು. ಶರಣಶಬ್ದವು ಆ ಕಾರಣದಿಂದ ಉಪಾಯಪರವೆಂದು ಈ ಕಾರಿಕೆಯಿಂದ ಹೇಳುತ್ತಾರೆ.—

**ಭರನ್ಯಾಸ ಬಲಾದೇವ ಸ್ವಯತ್ನವಿನಿವೃತ್ತಯೇ ।**
**ಅತ್ರೋಪಾಯಾಂತರಸ್ಥಾನೇ ರಕ್ಷಕೋ ವಿನಿವೇಶಿತಃ ॥೧೦೬॥**

**ಸರ್ವಾಧಿಕಾರಿಗಳುಕ್ಕುಮ್ ಅವ್ವೋಶಾಸ್ತ್ರಾರ್ಥಙ್ಗಳಾಲೇ ಆರಾಧಿತ ನಾನ ಸರ್ವೇಶ್ವರ್ರ ಫಲೋಪಾಯಮಾಯಿರುಕ್ಕ ಇಙ್ಗು, ವಿಶೇಷಿತ್ತು**

**ಅರ್ಥವು—ಭರನ್ಯಾಸಬಲಾದೇವ**-ಭರನ್ಯಾಸವನ್ನು ಅನುಷ್ಠಿಸಿದ ಬಲ ದಿಂದಲೇ, ಎಂದರೆ ಈ ದ್ವಯಮನ್ತ್ರದ ಮೂಲಕ ಮಾಡಿದ ಪ್ರಪದನದ ಬಲ ದಿಂದಲೇ, ಈ ಭರನ್ಯಾಸ ಅಥವಾ ಪ್ರಪದನವು ಯಾವುದು ಎಂಬುದು ಹಿಂದೆ ಸಾಙ್ಗಪ್ರಪದನಾಧಿಕಾರದ ಸಙ್ಗ್ರಹ ಶ್ಲೋಕವಾದ, "**ಅಭೀಷ್ಟೇದುಸ್ಸಾಧೇ**" ಎಂಬಲ್ಲಿ ಉಪಪಾದಿತವು. ೧೫೨-೪ ನೆಯ ಪುಟಗಳನ್ನು ನೋಡಿ; **ಸ್ವಯತ್ನ ವಿನಿವೃತ್ತಯೇ**-ಆ ಶ್ಲೋಕದ ಉತ್ತರಾರ್ಧದಲ್ಲಿ ಹೇಳಿರುವ ಹಾಗೆ ಅದಕ್ಕಾಗಿ ತನ್ನ ವ್ಯಾಪಾರನಿವೃತ್ತಿಗಾಗಿ, ಎಂದರೆ ಮೋಕ್ಷಪ್ರಾಪ್ತಿಗಾಗಿ ಬೇಕಾದ ಇತರ ವ್ಯಾಪಾರಗಳ ನಿವೃತ್ತಿಗಾಗಿ, **ಅತ್ರ**-ಈ ದ್ವಯಮನ್ತ್ರದ ಮೂಲಕ ಮಾಡುವ ಭರನ್ಯಾಸ ಪ್ರಕರಣದಲ್ಲಿ, **ಉಪಾಯಾಂತರಸ್ಥಾನೇ**-ಕಷ್ಟತರವಾಗಿ ತನಗೆ ಅಸಾಧ್ಯ ವಾಗಿರುವ ಭಕ್ತಿಯೋಗರೂಪವಾದ ಉಪಾಸನ ಸ್ಥಾನದಲ್ಲಿ, **ರಕ್ಷಕಃ**-ಶ್ರೀಮನ್ನಾ ರಾಯಣನನ್ನು ರಕ್ಷಕನನ್ನಾಗಿ, **ವಿನಿವೇಶಿತಃ**-ಇಡಲ್ಪಟ್ಟನು. ಇದೀಗ ಭರನ್ಯಾಸದ ಅರ್ಥವು; ಆದುದರಿಂದ ಉಪಾಯಾನ್ತರದ ಸ್ಥಾನದಲ್ಲಿ ಶ್ರೀಮನ್ನಾರಾಯಣನನ್ನೇ ಇಟ್ಟು, ಆತನಲ್ಲಿ ಸರ್ವಭರವನ್ನೂ ಒಪ್ಪಿಸಿಬಿಟ್ಟು, ನಿರ್ಭರನಾಗಿಯೂ ನಿರ್ಭಯ ನಾಗಿಯೂ ಇರುವ ಉಪಾಯವಾದುದರಿಂದ **ಶರಣ** ಶಬ್ದವು ಉಪಾಯಪರವೆಂಬ ಭಾವವು; ಹೀಗೆ ಸರ್ವಭರವನ್ನೂ ಆ ಶ್ರೀಮನ್ನಾರಾಯಣನಲ್ಲಿ ಇಟ್ಟಹೊರತು ಆತನು ಫಲದಾಯಕನಾಗುವದಿಲ್ಲವಾದುದು, ಈ ಭರನ್ಯಾಸರೂಪವಾದ ಉಪಾ ಯಾನುಷ್ಠಾನಕ್ಕೆ ಆವಶ್ಯಕವು. ಶರಣಶಬ್ದದ ಮೂಲಕ ಹೇಳಲ್ಪಟ್ಟ ಉಪಾಯದ ತಾತ್ಪರ್ಯವು ಹಿಂದಿನ ಶ್ಲೋಕದಲ್ಲಿ ಸಙ್ಗ್ರಹವಾಗಿ ಉಪದೇಶಿಸಲ್ಪಟ್ಟಿತು. ಅದನ್ನೇ ಸಮರ್ಥಿಸಿ ಹೇಳುತ್ತಾರೆ. **ಸರ್ವೇಶ್ವರನೇ**-ಸರ್ವಫಲಪ್ರದನು. ಆತನನ್ನು ಶಾಸ್ತ್ರ ಮೂಲಕ ಆರಾಧಿಸಿದ ತೆರದಿ ಆತನು ಫಲವನ್ನೀಯುವನು. ಈ ಭರನ್ಯಾಸದ ಆವಶ್ಯಕತೆಯು ಹೇಗೆ? ಅದರ ತಾತ್ಪರ್ಯವೇನು? ಎಂದು ಶಂಕಿಸಿ ಸಮಾಧಾನ ವನ್ನು ಹೇಳುತ್ತಾರೆ. ಇದೆಲ್ಲಾ ಹಿಂದೆಯೇ ಉಪಪಾದಿತವಾಗಿದ್ದರೂ, ದ್ವಯ ಮನ್ತ್ರದ ವಿವರಣದಲ್ಲಿ ಶರಣಶಬ್ದದ ಅರ್ಥವನ್ನು ಹೇಳಬೇಕಾದ ಪ್ರಕರಣವು ಒದಗಿರುವದರಿಂದ ಹಿಂದೆ ಹೇಳಿದುದನ್ನೇ ಜ್ಞಾಪಕಕ್ಕೆ ತರುತ್ತಾರೆ.—**ಸರ್ವಾಧಿಕಾ ರಿಗಳುಕ್ಕುಮ್**-ಬುಭುಕ್ಷು ಮುಮುಕ್ಷುಗಳಾದ ಸಮಸ್ತ ಅಧಿಕಾರಿಗಳಿಗೂ, **ಅವ್ವೋಶಾಸ್ತ್ರಾರ್ಥಙ್ಗಳಾಲೇ**-ಆಯಾ ಫಲಗಳಿಗಾಗಿ ಆಯಾ ಅನುಷ್ಠಾನ ಗಳೆಂದು ಶಾಸ್ತ್ರಗಳಲ್ಲಿ ಹೇಳಿರುವ ಪ್ರಕಾರ, **ಆರಾಧಿತನಾನ**-ಆರಾಧಿಸಲ್ಪಟ್ಟ ಎಂದರೆ ಅಂತಹ ಅನುಷ್ಠಾನದಿಂದ ಪ್ರೀತನಾದ, **ಸರ್ವೇಶ್ವರ್ರ**-ಲಕ್ಷ್ಮೀನಾರಾಯಣನು,

**ಉಪಾಯಮೆನ್ನವೇಣ್ಡಿತ್ತು? ವುಪಾಯಾನ್ತರ ಸ್ಥಾನತ್ತಿಲೇ ಸಹಜಕಾರುಣ್ಯಾದಿ ವಿಶಿಷ್ಟನಾನ ಈಶ್ವರನೈನಿರುತ್ತುಗಿರ ಪ್ರಪತ್ತಿಪ್ರಕಾರಮ್ ತೋತ್ತುಗೈಕ್ಕಾಹ (ವಾಮತ್ತನೈ).**

**ಫಲೋಪಾಯಮಾಯಿರುಕ್ಕ**-ಹಾಗೆ ಅನುಷ್ಠಿಸಿದವನು ಕೋರಿದ ಫಲಕ್ಕೆ ಉಪಾಯನಾಗಿರಲಾಗಿ, **ಇಙ್ಗು**-ಈ ಸಂದರ್ಭದಲ್ಲಿ ಎಂದರೆ ದ್ವಯಮನ್ತ್ರದ ಶರಣ ಶಬ್ದಕ್ಕೆ ಅರ್ಥ ಹೇಳುವ ಸಂದರ್ಭದಲ್ಲಿ, **ವಿಶೇಷಿತ್ತು**-ಇತರ ಅರ್ಥಗಳನ್ನು ತ್ಯಾಗ ಮಾಡಿ ಮುಖ್ಯವಾಗಿ, **ಉಪಾಯಮೆನ್ನವೇಣ್ಡಿತ್ತು?**-ಉಪಾಯವೆಂದು ಹೇಳುವದರಲ್ಲಿ ಏನು ಅಪೇಕ್ಷಿತವು? ಇದಕ್ಕೆ ಮುಂದಿನ ವಾಕ್ಯದಿಂದ ಈ ಚೋದ್ಯಕ್ಕೆ ಸಮಾಧಾನವನ್ನು ಹೇಳುತ್ತಾರೆ-**ಉಪಾಯಾನ್ತರಸ್ಥಾನತ್ತಿಲ್**-ತನಗೆ ಅಸಾಧ್ಯವಾಗಿರುವ ಬೇರೇ ಉಪಾಯವಾದ ಭಕ್ತಿಯೋಗದ ಸ್ಥಾನದಲ್ಲಿ, **ಸಹಜಕಾರುಣ್ಯ-ಆದಿ** ಶಬ್ದದಿಂದ ಸೌಶೀಲ್ಯವಾತ್ಸಲ್ಯಾದಿಗುಣಗಳಿಂದ, **ವಿಶಿಷ್ಟನಾನ**-ಕೂಡಿದ, **ಈಶ್ವರನೈ**-ಶ್ರಿಯಃಪತಿಯನ್ನು, **ನಿರುತ್ತಿಗಿರ**-ನಿಲ್ಲಿಸಿರುವ **ಪ್ರಪತ್ತಿಪ್ರಕಾರಮ್**-ಭರನ್ಯಾಸ ಅಥವಾ ಪ್ರಪತ್ತಿ, ಪ್ರಪದನ, ಶರಣಾಗತಿ ಇತ್ಯಾದಿ ಹೆಸರಿನಿಂದ ಹೇಳಿಸಿಕೊಳ್ಳುವ ಅನುಷ್ಠಾನದ ಕ್ರಮವು, **ತೋತ್ತುಗೈಕ್ಕಾಹ**-ಸ್ಫುಟವಾಗಿ ಅನುಸಂಧಾನಕ್ಕೆ ಬರುವದಕ್ಕಾಗಿ ಎಂದು ತಿಳಿಯತಕ್ಕದ್ದು. (**ಆಮತ್ತನೈ**-ಆಗುತ್ತದೆ, ಅಷ್ಟುಮಾತ್ರವೇ ಅಭಿಪ್ರಾಯವು ಎಂಬರ್ಥವು). ಈ ವಾಕ್ಯದಿಂದ ಭರನ್ಯಾಸದ ತಾತ್ಪರ್ಯವನ್ನು ಹಿಂದೆ ಹೇಳಿದುದನ್ನೇ ಬಹು ಚನ್ನಾಗಿ ಉಪಪಾದಿಸಿರುತ್ತಾರೆ. ಇಲ್ಲಿ ಪ್ರಪತ್ತಿಪ್ರಕಾರವು ಯಾವುದೆಂದರೆ, ಉಪಾಯಾನ್ತರದ ಸ್ಥಾನದಲ್ಲಿ ಸಹಜ ಕಾರುಣ್ಯವಿಶಿಷ್ಟನಾದ ಈಶ್ವರನು ನಿಲ್ಲಬೇಕೆಂದು ಪ್ರಾರ್ಥಿಸೋಣವೆಂದು ಹೇಳಿರುತ್ತಾರೆ. ಇದು ಹಿಂದೆಯೇ ಹೇಳಲ್ಪಟ್ಟಿತು. ಹಿಂದೆ ೧೦೫೩ನೆಯ ಪುಟವನ್ನು ನೋಡಿ. " **ಅನನ್ಯಸಾಧ್ಯೇಸ್ವಾಭೀಷ್ಟೇ ಮಹಾವಿಶ್ವಾಸಪೂರ್ವಕಂ। ತದೇಕೋಪಾಯತಾ ಯಾಚ್ಞಾಪ್ರಪತ್ತಿಶ್ಶರಣಾಗತಿಃ** " ಎಂಬ ಭರತಮುನಿಯ ವಾಕ್ಯದಲ್ಲಿರುವ " **ತದೇಕೋಪಾಯತಾಯಾಚ್ಞಾ** " ಎಂಬ ಪ್ರಯೋಗದಿಂದಲೂ, ಮತ್ತು ಅಹಿರ್ಬುಧ್ನ್ಯಸಂಹಿತಾವಾಕ್ಯವಾದ " **ತ್ವಮೇವೋಪಾಯಭೂತೋಮೇ ಭವೇತಿ ಪ್ರಾರ್ಥನಾ ಮತಿಃ । ಶರಣಾಗತಿಃ** " ಎಂಬ ಪ್ರಯೋಗದಿಂದಲೂ ಶರಣಾಗತಿಯ ಅರ್ಥವು ಭಗವಂತನನ್ನು ನನಗೆ ಉಪಾಯವಾಗು ಎಂಬ ಪ್ರಾರ್ಥನೆ ಎಂಬುದು ವ್ಯಕ್ತವು. **ತದೇಕೋಪಾಯತಾಯಾಚ್ಞಾ**-ಎಂಬಲ್ಲಿರುವ ಏಕಶಬ್ದದಿಂದ **ಸ್ವಯತ್ನ**-ನಿವೃತ್ತಿಯು ಹೇಳಲ್ಪಟ್ಟಿತು. ಹೀಗೆ ಉಪಾಯತ್ವ ಪ್ರಾರ್ಥನೆ ಮಾಡುವಾಗ ಸರ್ವಭರನ್ಯಾಸವೂ ಸಿದ್ಧಿಸುತ್ತದೆ. ಈ ಭರನ್ಯಾಸದಲ್ಲಿ ರಕ್ಷಕತ್ವ ಪ್ರಾರ್ಥನೆಯೂ ಉಂಟು. ಇದು ಅರ್ಥವಾಗಿ ತೋರುತ್ತದೆಂದೂ ಇದರಿಂದ ಗೋಪ್ತೃತ್ವವರಣರೂಪ ಅಙ್ಗವು ಶರಣಾಗತಿಗೆ ಉಂಟಾಗುತ್ತದೆಂದೂ ೧೧೪೦ನೆಯ ಪುಟದಲ್ಲಿ ಉಪಪಾದಿಸಿದರು. **ಈ ಎರಡನೆಯದಾದ ಉಪಾಯತ್ವ**

ಪ್ರಾರ್ಥನೆಯು ಯಾವುದೆಂದರೆ–ಅಕಿಂಚನಾಧಿಕಾರಿಯಾದ ತನ್ನ ವಿಷಯದಲ್ಲಿ ಉಪಾಯಾನ್ತರವಾದ ಭಕ್ತಿಯೋಗಕ್ಕೆ ತಾನು ಅಶಕ್ತನಾದುದರಿಂದ ಅದರ ಸ್ಥಾನದಲ್ಲಿ ಭಗವಂತನೇ ನಿಂತು ತತ್ಫಲವನ್ನು ಅನುಗ್ರಹಿಸಬೇಕೆಂಬ ಪ್ರಾರ್ಥನೆಯು ಹಾಗೆಯೇ ಹಿಂದೆ ವಿರೋಧಪರಿಹಾರಾಧಿಕಾರದಲ್ಲಿ ಹೇಳಿರುತ್ತಾರೆ; ಹೇಗೆಂದರೆ— **" ಎನಕ್ಕುಭರಮಿಲ್ಲಾದಪಡಿ ಉಪಾಯಾನ್ತರಸ್ಥಾನತ್ತಿಲೇ ನಿನ್ರು ರಕ್ಷಿಕ್ಕ ವೇಣುಮೆನ್ರಿರೆ ಉಪಾಯಶಬ್ದತುಕ್ಕು ತಾತ್ಪರ್ಯಮ್ "** ಎಂಬುದಾಗಿ ಇರುತ್ತದೆ. ಈ ರಕ್ಷಕತ್ವ ಪ್ರಾರ್ಥನೆಗೂ ಈ ಉಪಾಯವಾಗಬೇಕೆಂಬ ಪ್ರಾರ್ಥನೆಗೂ ತಾರತಮ್ಯವುಂಟು. ರಕ್ಷಕನಾಗು ಎಂಬ ಅರ್ಥವು ನ್ಯೂನಾರ್ಥ ವುಳ್ಳದ್ದು. ಉಪಾಯವಾಗು ಎಂಬ ಪ್ರಾರ್ಥನೆಯು ಹೆಚ್ಚು ಅರ್ಥವುಳ್ಳದ್ದು; ಹೇಗೆಂದರೆ ಸರ್ವೇಶ್ವರನು ಒಂದುವೇಳೆ **" ತಮೇವಂ ವಿದ್ವಾನ್ ಅಮೃತ ಇಹ ಭವತಿ, ನಾನ್ಯಃ ಪನ್ಥಾ ವಿದ್ಯತೇ ಅಯನಾಯ "** ಎಂಬ ಶಾಸ್ತ್ರರೀತ್ಯಾ ಮುಕ್ತಿಗೆ ಉಪಾಯವು ಭಕ್ತಿಯೋಗವೇ, ಅದನ್ನೇ ಅನುಷ್ಠಿಸು ಎಂದು ಭಗವಂತನು ಹೇಳಿ ದುದಾದರೆ ಅದಕ್ಕೆ ನನಗೆ ಯೋಗ್ಯತೆಯೇ ಇಲ್ಲವು ಎಂದು ತನ್ನ ಆಕಿಂಚನ್ಯವನ್ನು ಪ್ರದರ್ಶಿಸಿ, ಮಹಾವಿಶ್ವಾಸದಿಂದ ಆ ಭಕ್ತಿಯೋಗಸ್ಥಾನದಲ್ಲೂ ನೀನೇ ನಿಂತು ಅದರಿಂದುಂಟಾಗುವ ಫಲವನ್ನು ಕೊಡುವ ಸರ್ವಭಾರವು ನಿನ್ನದೇ, ನೀನು ಹೀಗೆ ಉಪಾಯವಾಗಿ ನಿಂತು ನಡೆಸಿಕೊಡು, ನಾನು ಇನ್ನು ಯಾವ ಪ್ರಯತ್ನವನ್ನು ಮಾಡಲೂ ಅಶಕ್ತನೆಂದಿಷ್ಟು ಅರ್ಥಗರ್ಭಿತವಾದುದೆಂದು ಭಾವಿಸತಕ್ಕದ್ದು. ಆದುದರಿಂದ ಗೃಹರಕ್ಷತ್ರಾರ್ಥಗಳನ್ನು ತ್ಯಜಿಸಿ, ಮಹಾಪ್ರಾಜ್ಞರು **" ಉಪಾಯಾರ್ಥೈಕವಾಚಕಃ "** ಎಂದು ನಿರ್ಧರಿಸುತ್ತಾರೆ. ಕಷ್ಟತರವಾದ ಭಕ್ತಿಯೋಗ ಫಲವನ್ನು ಈ ಅಧಿಕಾರಿಯು ಆಕಿಂಚನ್ಯದಿಂದಲೂ ಮಹಾವಿಶ್ವಾಸದಿಂದಲೂ ಭರನ್ಯಾಸದ ಮೂಲಕ ಉಪಾಯನಾಗು ಎಂದು ಇಷ್ಟುಮಾತ್ರ ಪ್ರಾರ್ಥಿಸಿದರೆ ಗುರೂಪಾಯದಿಂದ ಲಭಿಸುವ ಫಲವನ್ನು ಈ ಅಲ್ಪವ್ಯಾಜದ ಬಲದಿಂದ ಕೊಡುವನೋ? ಎಂಬ ಸಂದೇಹ ನಿವಾರಣೆಗಾಗಿ ಈ ವಾಕ್ಯದಲ್ಲಿ **" ಸಹಜ ಕಾರುಣ್ಯಾದಿವಿಶಿಷ್ಟನಾನ ಈಶ್ವರನ್ "** ಎಂಬ ಪ್ರಯೋಗವು. ಇಲ್ಲಿ ಪ್ರಪತ್ತಿ ಪ್ರಕಾರಮ್ ಎಂಬ ಪ್ರಯೋಗವು ಭರತಮುನಿಗಳ ಮತ್ತು ಅಹಿರ್ಬುಧ್ನ್ಯಸಂಹಿತಾ ವಾಕ್ಯಗಳಲ್ಲಿ ತೋರಿಬರುವ ಪ್ರಪತ್ತಿಯಲ್ಲಿರುವ ಪ್ರಾರ್ಥನೆಯ ಪ್ರಕಾರವು ಸೂಚಿಸಲ್ಪಟ್ಟಿತು. ಆಗಲಿ, ಪ್ರಪದನವು ಭಕ್ತಿಯೋಗದ ಹಾಗೆ ಮೋಕ್ಷಸಾಧಕ ವಾದ ಉಪಾಯವು ಎಂದೂ, ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಗಳು ಯಾವುದನ್ನು ಸಾಧಿಸಕೊಡಲಾರವೋ ಅವೆಲ್ಲವನ್ನೂ ಭರನ್ಯಾಸವು ಸಾಧಿಸಿಕೊಡು ತ್ತದೆಂದು ಅಹಿರ್ಬುಧ್ನ್ಯ ಸಂಹಿತಾವಾಕ್ಯಗಳಾದ (೧) **" ಯದ್ಯೇವ ಕಾಮ ಕಾಮೇನ ನ ಸಾಧ್ಯಂ ಸಾಧನಾಂತರೈಃ । ಮುಮುಕ್ಷುಣಾಯತ್ಸಾಂಖ್ಯೇನ**

(೧) ಅಹಿ. ಸಂ. ೩೭-೨೫.

**ಇಜ್ಜು ಭಕ್ತಿಯೋಗಸ್ಥಾನತ್ತಿಲೇ ಪ್ರಪತ್ತಿ ನಿಲ್ಲಾನಿರ್ಕ ಈಶ್ವರನುಪಾಯಾಂತರ ಸ್ಥಾನತ್ತಿಲೇ ನಿರ್ಕ್ಕೈಯಾವದೆನ್ನೆನ್ನಿಲ್ ? ಅಜ್ಗಮಾಕ ಪ್ರಪತ್ತಿಯುಮ್ ಪಣ್ಣಿ, ಉಪಾಯಮಾಕ ಉಪಾಸನಮು ಮನುಷ್ಠಿತ್ತು, ಪ್ಪೆರವೇಣ್ಡುಮ್ ಫಲತ್ತೈ ಅವ್ವುಪಾಯಮೊಳಿಯವೇ ಪ್ರಪತ್ತಿಮಾತ್ರತ್ತಾಲೇ ಪೆರುಗೈಕ್ಕಡಿ ಈಶ್ವರನುಡೈಯ ಸಹಜಕಾರುಣ್ಯಾದಿ ಸ್ವಭಾವ ವಿಶೇಷಮ್ ; ಆಗೈಯಾಲೇ**

---

**ಯೋಗೇನ ನಚ ಭಕ್ತಿತಃ । ಪ್ರಾಪ್ಯತೇ ಪರಮಂಧಾಮ ಯತೋ ನಾವರ್ತತೇ ಯತಿಃ । ತೇ ನ ತೇನಾಪ್ಯತೇ ತತ್ತನ್ನ್ಯಾಸೇನೈವ ಮಹಾಮುನೇ "** ಎಂಬಲ್ಲಿ ಹೇಳಲ್ಪಟ್ಟಿರುತ್ತದೆ. ಹಾಗೆಯೇ (೨) " **ಭಕ್ತ್ಯಾಪರಮಯಾವಾಪಿ ಪ್ರಪತ್ತ್ಯಾವಾಮಹಾಮತೇ । ಪ್ರಾಪ್ಯೋಽಹಂ ನಾನ್ಯಥಾಪ್ರಾಪ್ಯೋ ಮಮಕೈಂಕರ್ಯ ಲಿಪ್ಸುಭಿಃ "** ಇತ್ಯಾದಿ ಪ್ರಮಾಣಗಳೂ ಉಂಟು. ಹೀಗಿರುವಾಗ ಭಕ್ತಿಯೋಗ ಸ್ಥಾನದಲ್ಲಿ ನೀನೇ ನಿಂತು ಉಪಾಯವಾಗು ಎಂಬ ಪ್ರಾರ್ಥನೆಯ ಆವಶ್ಯಕತೆಯು ಏತಕ್ಕೆ? ಎಂಬ ಶಂಕಾ ಉಂಟಾಗಬಹುದು ; ಅದನ್ನು ಉಪಪಾದಿಸಿ ಸಮಾಧಾನ ವನ್ನು ಮುಂದಿನ ಎರಡು ವಾಕ್ಯಗಳ ಮೂಲಕ ತಿಳಿಸುತ್ತಾರೆ.—**ಇಜ್ಜು**-ಈ ಸಂದರ್ಭದಲ್ಲಿ ಶ್ರಿಯಃಪತಿಯನ್ನು ಉಪಾಯವಾಗು ಎಂದು ಪ್ರಾರ್ಥಿಸುವ ಸಂದರ್ಭದಲ್ಲಿ, **ಭಕ್ತಿಯೋಗಸ್ಥಾನತ್ತಿಲೇ**-ಭಕ್ತಿಯೋಗದ ಸ್ಥಾನದಲ್ಲಿ ಎಂದರೆ ಅದಕ್ಕೆ ಬದಲಾಗಿ, **ಪ್ರಪತ್ತಿನಿಲ್ಲಾನಿರ್ಕ**-ವಿಕಲ್ಪದಿಂದ ಪ್ರಪತ್ತಿಯು ಮೇಲಿನ ಪ್ರಮಾಣಗಳಲ್ಲಿ ವಿಧಿಸಲ್ಪಟ್ಟಿರುವಾಗ, **ಈಶ್ವರನು, ಉಪಾಯಾನ್ತರಸ್ಥಾನತ್ತಿಲ್ ನಿರ್ಕ್ಕೈ**-ಬೇರೇ ಉಪಾಯವಾದ ಭಕ್ತಿಯೋಗದ ಸ್ಥಾನದಲ್ಲಿ ನಿಲ್ಲೋಣವು, **ಯಾವದೆನ್ನೆನ್ನಿಲ್**-ಎಂತಾದ್ದು? ಎಂದರೆ, **ಅಜ್ಗಮಾಕಪ್ರಪತ್ತಿಯುಮ್ ಪಣ್ಣಿ**-ಭಕ್ತ್ಯುಪಾಯದಲ್ಲಿ ಅದಕ್ಕೆ ಅಜ್ಗವಾಗಿ ಪ್ರಪದನವನ್ನು ಅನುಷ್ಠಿಸಿ, **ಉಪಾಯ ಮಾಗ ಉಪಾಸನಮುಂ ಅನುಷ್ಠಿತ್ತು**-ಉಪಾಯವಾಗಿ ಭಕ್ತಿಯೋಗವಾದ ಉಪಾಸನವನ್ನನುಷ್ಠಿಸಿ, **ಪೆರವೇಣ್ಡುಮ್ ಫಲತ್ತೈ**-ಹೊಂದಬೇಕಾದ ಫಲ ವನ್ನು, ಬುಭುಕ್ಷುವಾಗಿದ್ದರೆ ಐಹಿಕ ಶ್ರೇಯಸ್ಸನ್ನೂ, ಮುಮುಕ್ಷುವಾಗಿದ್ದರೆ ಮುಕ್ತಿಯನ್ನೂ ಎಂಬರ್ಥವು, **ಅವ್ವುಪಾಯಮೊಳಿಯವೇ**-ಆ ಭಕ್ತಿಯೋಗವಾದ ಉಪಾಸನವನ್ನು ತ್ಯಜಿಸಿ, **ಪ್ರಪತ್ತಿಮಾತ್ರದಿಂದ, ಪೆರುಗೈಕ್ಕಡಿ**-ಹೊಂದುವದಕ್ಕೆ ಮೂಲಕಾರಣವು, **ಈಶ್ವರನುಡೈಯ ಸಹಜಕಾರುಣ್ಯಾದಿ ಸ್ವಭಾವವಿಶೇಷಮ್**-ಸರ್ವೇಶ್ವರನ ಸಹಜವಾದ, ಕಾರುಣ್ಯವೇ ಮೊದಲಾದ ಎಂದರೆ ಸೌಲಭ್ಯಸೌಶೀಲ್ಯ ವಾತ್ಸಲ್ಯಾದಿಗಳುಳ್ಳ ಸ್ವಭಾವ ವಿಶೇಷವು. ಭಕ್ತ್ಯುಪಾಯಕ್ಕೆ ಅಜ್ಗವಾಗಿ ಪ್ರಪದನವೂ ಅಜ್ಗಿಯಾಗಿ ಉಪಾಸನದ ಮೂಲಕ ಪರಮಾತ್ಮಸಾಕ್ಷಾತ್ಕಾರವು ; ಅಜ್ಗವು ಸುಲಭವು, ಅಜ್ಗಿಯು ದುಸ್ಸಾಧ್ಯವು. ಹೀಗೆ ಮೋಕ್ಷವನ್ನು ಸಾಧಿಸಿ ಕೊಳ್ಳಲು ಎರಡೂ ಆವಶ್ಯಕವು. ಹೀಗಿರುವಾಗ ಈ ಭರನ್ಯಾಸದಲ್ಲಿ ಸುಲಭವಾದ ಪ್ರಪದನವನ್ನು ಮಾತ್ರ ಅನುಷ್ಠಿಸಿದುದರಿಂದ, ಆ ಗುರುವಾದ ಭಾಗವನ್ನು

**ಆಕಿಂಚನನುಕ್ಕು ಈಶ್ವರ್‍ರ್ ಉಪಾಯಾಂತರ ಸ್ಥಾನತ್ತಿಲೇ ನಿನ್ರಾನೆಜ್ಗಿರದು. ಅಭಿಮತಫಲತ್ತುಕ್ಕು ಉಪಾಯಮಾಕ ವಿಹಿತಮಾನಭರಮ್ ಶುಮಕ್ಕಮೊಟ್ಟಾದ ವಕಿಂಚನನ್ ಗೋಪ್ತಾವಾಯ್ ನಿರ್ಕ್ಕಿರ ಅವನ್ನೈ, ನೀಎನಕ್ಕು ಉಪಾಯವಾಗವೇಣುಮೆನ್ರು ಉಪಾಯಾನ್ತರ ಸ್ಥಾನತ್ತಿಲೇ ನಿವೇಶಿಪ್ಪಿಕ್ಕೈಯಾವದು? ಎನ್ ತಲೈಯಿಲ್ ಉಪಾಯಾನ್ತರತ್ತೈಚ್ಚುಮತ್ತಾದೆ,**

ಅವಲಂಬಿಸಲು ತನಗೆ ಸಾಧ್ಯವಿಲ್ಲವೇ ಎಂದು ಆಕಿಂಚನ್ಯವನ್ನು ಪ್ರದರ್ಶಿಸಿ ದಯಾರ್ದ್ರಹೃದಯನೆಂಬ ಸಂಪೂರ್ಣ ವಿಶ್ವಾಸದ ಮೂಲಕ ಆ ಗುರುಭಾಗದ ಸ್ಥಾನದಲ್ಲಿ ನೀನೇ ನಿಂತು, ಅದರಿಂದುಂಟಾಗುವ ಫಲವನ್ನು ನೀನೇ ಕೊಡುವದಕ್ಕಾಗಿ ಉಪಾಯಭೂತನಾಗು ಎಂಬ ಪ್ರಾರ್ಥನೆಯು. ಇದನ್ನೇ ಮುಂದಿನ ವಾಕ್ಯದಿಂದ ಹೇಳುತ್ತಾರೆ. **ಆಗ್ಯೈಯಲ್**-ಆದುದರಿಂದ, **ಅಕಿಂಚನನಕ್ಕು**-ಆ ಗುರುವಾದ ಉಪಾಯವನ್ನು ಅನುಷ್ಠಿಸಲು ಶಕ್ತಿಯಿಲ್ಲವೇ ಎಂದು ಕಾರ್ಪಣ್ಯವನ್ನು ಪ್ರದರ್ಶಿಸಿದವನಿಗೆ **ಈಶ್ವರನು, ಉಪಾಯಾಂತರಸ್ಥಾನತ್ತಿಲೇ**-ಭಕ್ತಿಯೋಗದ ಸ್ಥಾನದಲ್ಲಿ, **ನಿನ್ರಾನೆಜ್ಗಿರದು**-ನಿಲ್ಲುವನು ಎಂಬ ಹೇಳಿಕೆಯು. ಆತುರನಾದವನು ಅವಗಾಹನ ಸ್ನಾನಕ್ಕೆ ಅನರ್ಹನಾಗಿರುವಾಗ, ಹೇಗೆ ಆ ಅವಗಾಹನ ಸ್ನಾನದ ಸ್ಥಳದಲ್ಲಿ ಮನ್ತ್ರಾದಿ ಸ್ನಾನದ ಅಪೇಕ್ಷೆಯೋ, ಹಾಗೆಯೇ ಇಲ್ಲಿಯೂ ಭಗವದುಪಾಸನಕ್ಕೆ ಯೋಗ್ಯತೆ ಇಲ್ಲದುದರಿಂದ ಅದರ ಸ್ಥಾನದಲ್ಲಿ ಭಗವಂತನೇ ನಿಂತು ಅದರ ಫಲವನ್ನೇ ಕೊಡು ಎಂಬ ಪ್ರಾರ್ಥನೆ ಎಂಬ ಭಾವವು.

ಮುಂದೆ ಭಗವಂತನನ್ನು ಭಕ್ತ್ಯುಪಾಯಸ್ಥಾನದಲ್ಲಿ ನಿಲ್ಲುವ ಹಾಗೆ ಪ್ರಾರ್ಥನೆಯ ಅಭಿಪ್ರಾಯವೇನೆಂಬುದನ್ನು ಸ್ಫುಟವಾಗಿ ತಿಳಿಸುತ್ತಾರೆ—**ಅಭಿಮತ ಫಲತ್ತುಕ್ಕು**-ಅಧಿಕಾರಿಗೆ ಬೇಕಾದ ಫಲಕ್ಕೆ, **ಉಪಾಯಮಾಗವಿಹಿತಭರಮ್ ಶುಮಕ್ಕಮೊಟ್ಟಾದ**-ಉಪಾಯವಾಗಿ ಶಾಸ್ತ್ರದಲ್ಲಿ ಹೇಳಲ್ಪಟ್ಟ ಉಪಾಸನರೂಪ ಭಾರವನ್ನು ಹೊರಲಾರದ, **ಅಕಿಂಚನನ್**-ದೈನ್ಯವನ್ನು ಹೊಂದಿದ ಅಧಿಕಾರಿಯು, ಎಂದರೆ ಭರನ್ಯಾಸವನ್ನು ಅನುಷ್ಠಿಸುವವನು, **ಗೋಪ್ತಾವಾಯ್ ನಿರ್ಕ್ಕಿರವನ್ನೈ**-ರಕ್ಷಕನಾಗಿರಲು ಸಾಮರ್ಥ್ಯವುಳ್ಳವನನ್ನು, **ನೀಎನಕ್ಕುಉಪಾಯವಾಗವೇಣುಮೆನ್ರು**-ನೀನು ನನಗೆ ಉಪಾಯವಾಗಬೇಕೆಂದು, **ಉಪಾಯಾನ್ತರಸ್ಥಾನತ್ತಿಲೇ**-ಬೇರೆ ಉಪಾಯವಾದ ಉಪಾಸನದ ಸ್ಥಾನದಲ್ಲಿ, **ನಿವೇಶಿಪ್ಪಿಕ್ಕೈಯಾವದು?**-ಇಡುವದು ಎಂದರೇನು? ಇದಕ್ಕೆ ಉತ್ತರವನ್ನು ಹೇಳುತ್ತಾರೆ–**ಎನ್ ತಲೈಯಿಲ್ ಉಪಾಯಾನ್ತರತ್ತೈಚ್ಚುಮತ್ತಾದೆ**-ನನ್ನ ತಲೆಯಲ್ಲಿ ಈ ಹೊರಲು ಅಸಾಧ್ಯ ಭಾರವಾದ ಉಪಾಸನವನ್ನು ಹೊರಸದೆ, **ಅವತ್ತೈಚ್ಚುಮನ್ದಾಲ್**-ಶಕ್ತಿಯಿರುವ ಅಧಿಕಾರಿಯು ಒಂದುವೇಳೆ ಆ ಭಾರವನ್ನು ಹೊತ್ತರೆ, **ಮೇಲ್ ವರುಮ್**-ಮುಂದೆ ಬರುವ, **ಅಭಿಮತಮೆಲ್ಲಾಮ್**-ಪುರುಷಾರ್ಥವನ್ನೆಲ್ಲಾ, **ತರುಕೈ**-ದಯಪಾಲಿಸೋಣವನ್ನು, **ಸಮರ್ಥಕಾರುಣಿಕನಾಗ**-ಸಮರ್ಥನಾಗಿಯೂ, **ಕಾರುಣಿಕ**

**ಅವತ್ತೈಚ್ಚುಮನ್ನಾಲ್ ಮೇಲ್‌ವರುಮ್ ಅಭಿಮತಮೆಲ್ಲಾಮ್ ತರುಗೈ ಸಮರ್ಥ ಕಾರುಣಿಕನಾನ ವುನಕ್ಕೇ ಭರಮಾಗ ಏರಿಟ್ಟುಕೊಳ್ಳವೇಣುಮೆನ್ಗ್ಯೆ.**

---

ನಾಗಿಯೂ ಇರುವ, **ವುನಕ್ಕೇ**-ನಿನಗೇನೇ, **ಭರಮಾಗ**-ಉಪಾಯಾಂತರರೂಪ ಭಾರವಾಗಿ, **ಏರಿಟ್ಟುಕೊಳ್ಳವೇಣುಮೆನ್ಗೈ**-ವಹಿಸಿಕೊಳ್ಳತಕ್ಕದ್ದೆಂಬ ತಾತ್ಪರ್ಯವು. ಇದನ್ನೇ ಶ್ರೀ ಪರಾಶರಭಟ್ಟರು "**ತವಭರೋಹಮ್**" ಎಂಬ ಶ್ಲೋಕದಲ್ಲಿ "**ಕುರುಭರಂತವರಙ್ಗದುರಂಧರ**" ಎಂದು ಉಪಪಾದಿಸಿರುತ್ತಾರೆ. (೮೯-೮೧೦ ನೆಯ ಪುಟವನ್ನು ನೋಡಿ). **ಸಮರ್ಥಕಾರುಣಿಕನಾನ ವುನಕ್ಕೇ** ಎಂಬಲ್ಲಿ ಸಾಮರ್ಥ್ಯವೂ ಸಹಜಕಾರುಣತ್ವವೂ ಏಕೆ ಮುಖ್ಯವಾಗಿ ಭಗವಂತನಲ್ಲಿ ಹೇಳಲ್ಪಟ್ಟಿತೆಂದರೆ ಸಾಮರ್ಥ್ಯವಿಲ್ಲದ ಕರುಣೆಯೂ, ಕರುಣೆಯಿಲ್ಲದ ಸಾಮರ್ಥ್ಯವೂ ಫಲಾಪಾದಕವಲ್ಲವು. ಫಲಪ್ರಾಪ್ತಿಗೆ ಆಶ್ರಯಿಸುವನಲ್ಲಿ ಸಾಮರ್ಥ್ಯವೂ ಕಾರುಣ್ಯವೂ ಎರಡೂ ಇರತಕ್ಕದ್ದು. ಕರುಣೆಯಿಲ್ಲದ ಲೋಭಿಯ ಪುಷ್ಕಲಧನವಿರುವ ಸಾಮರ್ಥ್ಯವೂ, ದರಿದ್ರನಾಗಿ ಧನಸಾಮರ್ಥ್ಯವಿಲ್ಲದವನ ಕರುಣೆಯು, ಧನಾರ್ಥಿಗೆ ಪ್ರಯೋಜನವಾಗಲಾರದು. ಆದುದರಿಂದ ಹಾಗೆ ಪ್ರಯೋಗವು. ಅಧಿಕಾರಿಗೆ ಅಭಿಮತವಾದ ಫಲಕ್ಕೆ ಉಪಾಯವಾಗಿ ವಿಹಿತವಾದ ಭಾರವನ್ನು ಹೊರಲಾರೆನೆಂದು ಆ ಕಿಂಚನ್ಯವನ್ನು ಪ್ರದರ್ಶಿಸಿ, ಸಾಮರ್ಥ್ಯಕಾರುಣ್ಯಗಳಿಂದ ಪ್ರೇರಿತನಾದ ಗೋಪ್ತಾವಾದ ಸರ್ವೇಶ್ವರನನ್ನು ನನಗೆ ಉಪಾಯವಾಗು ಎಂಬ ಪ್ರಾರ್ಥನೆಯು ಸಾಭಿಪ್ರಾಯವಾದುದು. ಹೇಗೆಂದರೆ, ಸರ್ವೇಶ್ವರನನ್ನು ಕುರಿತು ರಕ್ಷಿಸು ಎಂದು ಇಷ್ಟು ಮಾತ್ರ ಪ್ರಾರ್ಥನೆಯಲ್ಲಿ, ಐಕಾನ್ತ್ಯದಿಂದ ಉಪಾಸನಮಾಡು, ತದಂಗವಾಗಿ ಕರ್ಮಯೋಗವನ್ನೂ ಅನುಷ್ಠಿಸು ಎಂದು ಪ್ರತ್ಯುತ್ತರವನ್ನು ಕೊಟ್ಟು ಸುಮ್ಮನಾಗಬಹುದು, ಸಮಸ್ತ ಭರವೂ ನಿನ್ನನ್ನು ಸೇರಿದುದು; ನೀನೇ ಉಪಾಯವಾಗಿ ವಹಿಸತಕ್ಕದ್ದು; ನನಗೆ ಅದನ್ನು ವಹಿಸಲು ಶಕ್ತಿಯಿಲ್ಲವು; ಉಪಾಸನವನ್ನು ಕೈಕೊಳ್ಳಲೂ ನನಗೆ ಶಕ್ತಿಯಿಲ್ಲವು; ಅದರ ಸ್ಥಾನದಲ್ಲಿ ನೀನೇ ನಿಂತು, ನೀನೇ ಅದರ ಫಲವನ್ನೂ ಕೊಡತಕ್ಕದ್ದು ಎಂಬ ಸ್ವಾರಸ್ಯವೂ ಏರ್ಪಡುತ್ತದೆ ಎಂಬ ಭಾವವು. ಈ ಉಪಾಯ ಪ್ರಾರ್ಥನೆಯು ಭಗವಂತನ ಕೇವಲ ರಕ್ಷಕತ್ವರೂಪವಾದುದಲ್ಲವು. ಮತ್ತೇನೆಂದರೆ, ಉಪಾಯಾನ್ತರ ಸ್ಥಾನದಲ್ಲಿ ನೀನು ನಿಲ್ಲಬೇಕೆಂಬ ಪ್ರಾರ್ಥನೆಯು; ತಾನು ಮಾಡುವ ಭರನ್ಯಾಸವನ್ನು ಸ್ವೀಕರಿಸಿ, ಅದರ ಕಾರ್ಯವಾದ ಮೋಕ್ಷಪ್ರಾಪ್ತಿಯನ್ನುಂಟುಮಾಡಬೇಕೆಂಬ ಪ್ರಾರ್ಥನೆಯು. ಇದರಿಂದ ಅರ್ಥವಾಗಿ ತೋರುತ್ತದೆ. ಇದರಿಂದ ಆ ಉಪಾಯ ಪ್ರಾರ್ಥನೆಯೊಂದಿಗೆ ಭರನ್ಯಾಸಸ್ವೀಕಾರ ಪ್ರಾರ್ಥನೆಯೂ ಉಂಟೆಂದು ಭಾವಿಸತಕ್ಕದ್ದು. **ಎನ್‌ತಲ್ಯೆಯಿಲೆಶುಮತ್ತಾದೇ** ಎಂಬ ಪ್ರಯೋಗದಿಂದ ಭರನ್ಯಾಸನಿಷ್ಠನಿಗೆ ಮಿಕ್ಕ ವಿಷಯಗಳಲ್ಲೆಲ್ಲಾ ತನಗೆ ಯಾವುದೊಂದೂ ಸಂಬಂಧವಿಲ್ಲದೆ ತಾನು

**ಇವ್ವಂಶತ್ತೈ ನಿಷ್ಕರ್ಷಿತ್ತು ನಿಕ್ಷೇಪತ್ತೈ ಅಙ್ಗಿಯೆನ್ರು ಶೊಲ್ಲುಗಿರದು. ಇದು ಸ್ವನಿರ್ಭರತ್ವಪರ್ಯಂತಮ್.**

---

ಕೃತಕೃತ್ಯನೆಂಬ ಭಾವವು ಸೂಚಿತವು. ಮುಖ್ಯವಾಗಿ ಭರನ್ಯಾಸವನ್ನು ಭಗವಂತನು ಸ್ವೀಕರಿಸಬೇಕಾದರೆ, ಸ್ವಸಾಮರ್ಥ್ಯದಲ್ಲಿ ಸಂಪೂರ್ಣ ಮಮತಾತ್ಯಾಗವು ಆವಶ್ಯಕವಾಗಿ ಅಂತಹ ಸರ್ವಭರವನ್ನೂ, ಕರುಣಾಶಾಲಿಯಾದ ಸಮರ್ಥನಲ್ಲಿ ಇಟ್ಟುಬಿಟ್ಟು ತಾನು ಕೃತಕೃತ್ಯನೆಂಬ ಮಹಾವಿಶ್ವಾಸವನ್ನು ತೋರಿದರೇನೇ ಆತನು ಸರ್ವಭರವನ್ನೂ ವಹಿಸಿ, ಉಪಾಯಾಂತರವು ಏನನ್ನು ಆತನ ಮೂಲಕ ದಯಪಾಲಿಸಬಲ್ಲದೋ, ಅದನ್ನು ಆ ಉಪಾಯಾನ್ತರ ಸ್ಥಾನದಲ್ಲಿ ನಿಂತು ದಯಪಾಲಿಸುವನೆಂಬ ಭಾವವು ಉಪಪಾದಿಸಲ್ಪಟ್ಟಿತು. ಆದುದರಿಂದ ಉಪಾಯತ್ವ ಪ್ರಾರ್ಥನೆಯೊಂದಿಗೆ ಸೇರಿದ ಭರಸಮರ್ಪಣೆಯೂ ಇದ್ದರೆ, ಸಮರ್ಥನಾಗಿಯೂ ಕಾರುಣಿಕನಾಗಿಯೂ ಇರುವ ಶ್ರಿಯಃಪತಿಯು, ಉಪಾಯಾಂತರ ಸ್ಥಾನದಲ್ಲಿ ತಾನೇ ನಿಂತು ಮುಮುಕ್ಷುವಿನ ಅಭಿಮತವನ್ನು ನಡೆಸಿಕೊಡುವನೆಂಬುದು ಸ್ಥಾಪಿತವು.

**ಇವಂಶತ್ತೈ**-ನನ್ನ ತಲೆಯಲ್ಲಿ ಉಪಾಯಾನ್ತರ ಭಾರವನ್ನು ಹೊರಸದೆ ನೀನೇ ಸರ್ವಭರವನ್ನು ವಹಿಸಬೇಕು ಎಂದು ಪ್ರಾರ್ಥಿಸಿ, ಭರಸಮರ್ಪಣೆ ಮಾಡಬೇಕು ಎಂಬ ತಾತ್ಪರ್ಯವನ್ನು, **ನಿಷ್ಕರ್ಷಿತ್ತು**-ಬೇರೆಯಾಗಿ ಭಾವಿಸಿ, **ನಿಕ್ಷೇಪತ್ತೈ**-ಆತ್ಮನಿಕ್ಷೇಪರೂಪ ಭರಸಮರ್ಪಣೆಯನ್ನು, **ಅಙ್ಗಿ ಎನ್ರು ಶೊಲ್ಲುಗಿರದು** - ಅಂಗಿ ಎಂದು ಹೇಳಲ್ಪಡುತ್ತದೆ. ಉಪಾಯಾನ್ತರ ಸ್ಥಾನದಲ್ಲಿ ನೀನೇ ನಿಂತು ಉಪಾಯವಾಗಬೇಕೆಂದು ಪ್ರಾರ್ಥಿಸಿ ಭರಸಮರ್ಪಣರೂಪವಾದ ಶರಣಾಗತಿಯ ಅನುಷ್ಠಾನವೇ ಅಙ್ಗಿಯು ಎಂಬ ಭಾವವು. ಅದು ಹೇಗೆಂದರೆ ಈ ದ್ರವ್ಯವು ನಿನ್ನದಾಗಿ ಇದನ್ನು ನಾನು ರಕ್ಷಿಸಲು ಸಮರ್ಥನಲ್ಲವು, ನೀನೇ ರಕ್ಷಿಸತಕ್ಕದ್ದು ಎಂದು ಪ್ರಾರ್ಥಿಸುವಾಗ, ಆ ದ್ರವ್ಯವನ್ನು ಆ ಸಮರ್ಥನಲ್ಲಿ ಒಪ್ಪಿಸಿಬಿಟ್ಟರಲ್ಲವೇ ಆತನು ರಕ್ಷಿಸಲು ಯತ್ನಿಸುವನು; ಹಾಗೆ ಸಮರ್ಪಿಸದಿದ್ದರೆ ಎಂದಿಗೂ ರಕ್ಷಿಸನು ಎಂಬ ಭಾವವು. **ಇದು**-ಈ ಶರಣಶಬ್ದವು ಉಪಾಯಾರ್ಥವನ್ನೇ ಬೋಧಿಸುತ್ತದೆಂಬುದು, **ಸ್ವನಿರ್ಭರತ್ವಪರ್ಯಂತಮ್**-ಸ್ವನಿರ್ಭರತ್ವಪರ್ಯಂತವಾದ ಭರನ್ಯಾಸದಲ್ಲಿ ಪರ್ಯವಸಾನವನ್ನು ಹೊಂದುತ್ತದೆ. ಪ್ರಪದನದ ಆನುಕೂಲ್ಯ ಸಂಕಲ್ಪಾದಿ ಅಂಗಗಳು ಎಂದಿಗೂ ಉಪಾಯಾನ್ತರಸ್ಥಾನದಲ್ಲಿಡಲು ಕಾರಣವಾಗಲಾರವು; ಈ ಆತ್ಮನಿಕ್ಷೇಪವು ಕಾರಣವಾಗಬಹುದಾದುದರಿಂದ ಇದು ಅಂಗಿ ಎಂದು ಹೇಳಲ್ಪಡುತ್ತದೆಂಬ ಭಾವವು. **"ಆತ್ಮಾನಂಮಯಿನಿಕ್ಷಿಪೇತ್" "ಮಯಿನಿಕ್ಷಿಪ್ತಕರ್ತವ್ಯಃ ಕೃತಕೃತ್ಯೋಭವಿಷ್ಯಸಿ" "ಓಮಿತ್ಯಾತ್ಮಾನಂ ಯುಂಜೀತ"** ಇತ್ಯಾದಿ ಪ್ರಮಾಣಗಳ ಮೂಲಕ ನಿರ್ಭರತ್ವವು ಸಿದ್ಧವು. ಈ ಭರನ್ಯಾಸನಿಷ್ಠನು ಹೇಗೆ ನಿರ್ಭರನು ಎಂಬುದಕ್ಕೆ೧೧ಳಂ ನೆಯ ಪುಟವನ್ನು ನೋಡಿ.

**ಇನ್ನಿಷ್ಕರ್ಷತ್ತೈ ನಿನೈತ್ತು "ಸಾಂಪ್ರತಂತ್ವೇಷ ಉಪಾಯಾರ್ಥೈಕ ವಾಚಕಃ" ಎಙ್ಗಿರದು.**

**ಉಪಾಯಪ್ರಾರ್ಥನೈಯೈಯುಮ್ ನಿಕ್ಷೇಪತ್ತೈಯುಮ್ ಓರ್ ಇಡ**

**ಇನ್ನಿಷ್ಕರ್ಷತ್ತೈ**-ಭರನ್ಯಾಸವು, ಉಪಾಯಾಂತರಸ್ಥಾನದಲ್ಲಿ ನೀನೇ ನಿಂತು ರಕ್ಷಕನಾಗುವ ಸರ್ವಭರವನ್ನೂ ನೀನೇ ವಹಿಸತಕ್ಕದ್ದೆಂಬ ಉಪಾಯ ಪ್ರಾರ್ಥನೆಯೊಂದಿಗೆ ಸೇರಿರಬೇಕೆಂಬ ನಿಷ್ಕರ್ಷೆಯನ್ನು, **ನಿನೈತ್ತು**-ಮನಸ್ಸಿನಲ್ಲಿಟ್ಟೇ, **"ಸಾಂಪ್ರತಂತು**-ಈ ಭರನ್ಯಾಸ ಸಂದರ್ಭದಲ್ಲಾದರೋ, **ಏಷಃ**-ಈ ಚರಣ ಶಬ್ದವು, **ಉಪಾಯಾರ್ಥೈಕವಾಚಕಃ"**-ಉಪಾಯವೆಂಬ ಮುಖ್ಯವಾದ ಒಂದೇ ಅರ್ಥವನ್ನುಳ್ಳದ್ದು, ಇತರ ಅರ್ಥಗಳು ಸರಿಹೋಗುವದಿಲ್ಲವೆಂಬ ಭಾವವು, ಅಂಗಿಯು ಮೂರು ಅಂಶಗಳನ್ನುಳ್ಳದೆಂದು ಹಿಂದೆಯೇ ಹೇಳಲ್ಪಟ್ಟಿರುತ್ತದೆ. (೧) ಸ್ವರೂಪ ಸಮರ್ಪಣ (೨) ಭರಸಮರ್ಪಣ (೩) ಫಲಸಮರ್ಪಣ ಈ ಮೂರೂ ಪ್ರಾರ್ಥನಾಪರವಾಗುದೇ. ಆದುದರಿಂದ ಚರಣ ಶಬ್ದವು ಉಪಾಯಾರ್ಥವುಳ್ಳದು. ಆದುದರಿಂದ ಉಪಾಯಾನ್ತರಸ್ಥಾನದಲ್ಲಿ ನೀನೇ ನಿಂತು ಸರ್ವಭರವನ್ನೂ ಸ್ವೀಕರಿಸಬೇಕೆಂಬ ಆತ್ಮನಿಕ್ಷೇಪದಲ್ಲಿ, ಈ ಎರಡಂಶವು ಬೇರೆ ಬೇರೆಯೂ ಅಲ್ಲವು, ಪುನರುಕ್ತಿಯೂ ಅಲ್ಲವು.

ಭರನ್ಯಾಸವು ಉಪಾಯವರಣಕ್ಕೆ ಹೇತುವೆಂದು ಹೇಳಲ್ಪಟ್ಟಿತು. ಹಾಗಾದರೆ ಎರಡೂ ಕೆಲವು ಸಂದರ್ಭಗಳಲ್ಲಿ ಉಪಾಯತ್ವ ಪ್ರಾರ್ಥನೆಯೂ, ಆತ್ಮನಿಕ್ಷೇಪವೂ ಬೇರೆಬೇರೆಯಾಗಿ ಹೇಳಲ್ಪಡಲು ಕಾರಣವೇನು? ಎರಡೂ ಬೇರೆಯಲ್ಲವಾದರೆ ಪುನರುಕ್ತಿಯೇ ಎಂದರೆ ಅಲ್ಲವೆಂದು ಹೇಳುತ್ತಾರೆ. **"ಸಂಪ್ರಾರ್ಥ್ಯ ಶರಣಂ ಪರಮ್ । ವ್ರಜ ತಸ್ಯೈವ ಚರಣೌ ತತ್ರೈವಾತ್ಮಾನ ಮರ್ಪಯ"** ಎಂಬಲ್ಲೂ, ಮತ್ತು **"ಆತ್ಮಾತ್ಮೀಯಂ ಚ ಯತ್ಕಿಂಚಿದ್ದುರ್ಭರಂ ದುಸ್ತ್ಯಜಂ ಮಮ । ತತ್ಸರ್ವಂ ತವ ವಿನ್ಯಸ್ತಂ ಶುಭಯೋಃ ಪಾದಪದ್ಮಯೋಃ । ಉಪೇಯಸ್ಯ ತವ ಪ್ರಾಪ್ತ್ಯೈ ತ್ವಾಮುಪಾಯತಯಾ ವೃಣೇ । ಉಪಾಯೋ ಭವ ಮೇ ದೇವ ಶರಣಂ ಭವ ಮೇಽಚ್ಯುತ । ಆತ್ಮಾತ್ಮೀಯಭರಂ ಸರ್ವಂ ನಿಕ್ಷಿಪ್ಯ ಶ್ರೀಪತೇಃ ಪದೇ । ಉಪಾಯಂ ವೃಣು ಲಕ್ಷ್ಮೀಶಂ ತ ಮುಪೇಯಂ ವಿಚಿನ್ತ್ಯ ಚ ॥"** ಎಂಬಿವೇ ಮೊದಲಾದ ಸ್ಥಳಗಳಲ್ಲೂ ಎರಡಕ್ಕೂ ವ್ಯತ್ಯಾಸವಿಲ್ಲದಿದ್ದರೆ ಪುನರುಕ್ತಿಯಾಗುವದಿಲ್ಲವೋ? ಎಂಬುದು ಆಕ್ಷೇಪವು. ಪುನರುಕ್ತಿದೋಷವಾಗುವದಿಲ್ಲವೆಂದು ಹೇಳುತ್ತಾರೆ.—

**ಉಪಾಯಪ್ರಾರ್ಥನೈಯೈಯುಮ್**-ಉಪಾಯಾನ್ತರ ಸ್ಥಾನದಲ್ಲಿ ನೀನೇ ನಿಂತು ಸರ್ವಭರವನ್ನೂ ವಹಿಸಿಕೊಡುವ ಉಪಾಯವಾಗಬೇಕೆಂಬ ಪ್ರಾರ್ಥನೆಯನ್ನೂ, **ನಿಕ್ಷೇಪತ್ತೈಯುಮ್**-ಆತ್ಮನಿಕ್ಷೇಪರೂಪ ಶರಣಾಗತಿಯನ್ನೂ,

**ತ್ತಿಲೇ ಪಿರಿಯುಚ್ಚೊಲ್ಲುಮಿಡಂಗಳಿಲ್ (೧) ಉಪಾಯಶಬ್ದತ್ತಿಲ್ ಇವ್ವಿವಕ್ಷೈಯೈತ್ತವಿರುತಲ್ (೨) ಭರಸಮರ್ಪಣಾದಿಗಳ್ ಸುವ್ಯಕ್ತಙ್ಗಳಾಗೈಕ್ಕಾಕ ಪಿರಿಯಚ್ಚೊಲ್ಲುಗಿರದಾದಲ್ (೩) ಇಙ್ಗು ಸ್ವರೂಪಮುಂ ಫಲಮುಂ ಸಮರ್ಪಣೀಯಮಾಗ್ಗೈಯಾಲೇ ಅನೇಕಾಂಶ ವಿಶಿಷ್ಟಮಾನಸಮರ್ಪಣತ್ತಿಲ್" ಅಂಶಾನ್ತರಪರಮಾದಲಾಹಕ್ಕಡವದು. ಇನ್ನೈ ಮೂನ್ರುಪ್ರಕಾರತ್ತುಕ್ಕುಮ್**

**ಓರಿಡತ್ತಿಲೇ ಪಿರಿಯಚ್ಚೊಲ್ಲುಮಿಡಂಗಳಿಲ್**-ಒಂದೇ ಸ್ಥಳದಲ್ಲೇ ಬೇರೆಯಾಗಿ ಪ್ರತ್ಯೇಕಿಸಿ ಹೇಳುವ ಸ್ಥಳಗಳಲ್ಲಿ, **ಉಪಾಯ ಶಬ್ದತ್ತಿಲ್**-ಉಪಾಯವನ್ನು ಬೋಧಿಸುವ, **ಶರಣಂ**-ಇತ್ಯಾದಿ ಶಬ್ದದಲ್ಲಿ, **ಇವ್ವಿವಕ್ಷೈತ್ತವಿರುತಲ್**-ಈ ಉಪಾಯತ್ವ ಅಭಿಪ್ರಾಯವನ್ನು, ಪರಿತ್ಯಾಗಮಾಡಿ ಗೋಪ್ತೃತ್ವವರಣ ಅಭಿಪ್ರಾಯವನ್ನು ಹೇಳುವದರಿಂದಾಗಲಿ, ಅಥವಾ **ಭರಸಮರ್ಪಣಾದಿಗಳ್** - ಭರಸಮರ್ಪಣವೇ ಮೊದಲಾದವು, **ಸುವ್ಯಕ್ತಙ್ಗಳಾಗೈಕ್ಕಾಗ ಪಿರಿಯುಚ್ಚೊಲ್ಲಿತ್ತಾದಲ್**-ಚನ್ನಾಗಿ ವ್ಯಕ್ತಪಡುವದಕ್ಕಾಗಿ ಅದರ ವ್ಯಾಖ್ಯಾನರೂಪದಲ್ಲಿ ಬೇರೆಯಾಗಿ ಪ್ರತ್ಯೇಕಿಸಿ ಹೇಳಿತೆಂದಾಗಲಿ, ಅಥವಾ, **ಇಙ್ಗು**-ಈ ಭರನ್ಯಾಸದಲ್ಲಿ, ಸ್ವರೂಪ ಸಮರ್ಪಣೆಯು ಎಂದರೆ ಆತ್ಮಸಮರ್ಪಣೆಯೂ, ಫಲಸಮರ್ಪಣೆಯೂ, **ಆಗ್ಗೈಯಾಲ್** - ಇರುವದರಿಂದ, **ಅನೇಕಾಂಶ ವಿಶಿಷ್ಟಮಾನ ಸಮರ್ಪಣತ್ತಿಲ್** - ಸ್ವರೂಪಸಮರ್ಪಣ, ರಕ್ಷಾಭರಸಮರ್ಪಣ, ಫಲಸಮರ್ಪಣ ಹೀಗೆ ಅನೇಕಾಂಶಗಳಿಂದ ಕೂಡಿದ ಸಮರ್ಪಣದಲ್ಲಿ, **ಅಂಶಾನ್ತರಪರಮಾದಲಾಗಕ್ಕಡವದು**-ಉಪಾಯವರಣದಲ್ಲಿ ಮೂರಂಶಗಳಲ್ಲಿ ಎರಡಾದ ಸ್ವರೂಪ ಫಲ ಸಮರ್ಪಣಗಳೂ, ಭರನ್ಯಾಸದಲ್ಲಿ ಮೂರನೆಯದಾದ ರಕ್ಷಾಭರಸಮರ್ಪಣ ರೂಪ ಅಂಶಪರವೆಂದಾಗಲಿ, **ಕಡವದು**-ಆಗಬಹುದು, **ಇನ್ನೈ**-ಆದುದರಿಂದ ಈ ಉಪಾಯ ಪ್ರಾರ್ಥನೆ, ನಿಕ್ಷೇಪಗಳೆರಡೂ, **ಮೂನ್ರುಪ್ರಕಾರತ್ತುಕ್ಕುಮ್**-ಮೇಲೆ ತಿಳಿಸಿದ ಮೂರು ವಿಧಗಳಾದ ಅಭಿಪ್ರಾಯಗಳಿಗೂ, **ಪುನರುಕ್ತಿದೋಷಮಿಲ್ಲೈ**-ಪುನರುಕ್ತಿ ದೋಷವಿಲ್ಲವು. ಈ ಮೂರು ಅಭಿಪ್ರಾಯಗಳೂ ಯಾವುವೆಂದರೆ—ಎರಡೂ ಒಟ್ಟಿಗೆ ಹೇಳಿದ ಸಂದರ್ಭದಲ್ಲಿ,

೧. ಉಪಾಯತ್ವಶಬ್ದದಿಂದ ಗೋಪ್ತೃತ್ವವರಣವು ಹೇಳಲ್ಪಟ್ಟಿತೆಂಬ ಭಾವನೆ.

೨. ಅಥವಾ ಭರಸಮರ್ಪಣೆಯ ಅಭಿಪ್ರಾಯವನ್ನು ಇವೆರಡೂ ಸ್ಪಷ್ಟವಾಗಿ ವಿವರಿಸುತ್ತವೆ ಎಂಬ ಭಾವನೆ.

೩. ಭರನ್ಯಾಸದಲ್ಲಿ, ಸ್ವರೂಪ, ರಕ್ಷಾಭರ, ಫಲಸಮರ್ಪಣೆಗಳು ಮೂರು ಇರಬೇಕಾದಲ್ಲಿ ಉಪಾಯದಿಂದ ಎರಡಂಶವೂ, ಭರನ್ಯಾಸದಿಂದ ಇನ್ನೊಂದಂಶವೂ ಹೇಳಲ್ಪಟ್ಟವೆಂಬ ಭಾವನೆಯು.

ಹೀಗೆ ಈ ಮೂರು ಭಾವನೆಗಳಲ್ಲೂ ಪುನರುಕ್ತಿದೋಷವಿಲ್ಲವೆಂದು ಹೇಳಿದರು.

**ಪುನರುಕ್ತಿದೋಷಮಿಲ್ಲೈ. ಇವ್ವುಪಾಯತ್ವಂ ನ್ಯಾಸವಿದ್ಯೈಕ್ಕು ವಿಶೇಷಿತ್ತ ವೇದ್ಯಾಕಾರಮ್.**

ಮುಂದೆ ನ್ಯಾಸವಿದ್ಯೆಯಲ್ಲಿರುವ ವೈಲಕ್ಷಣ್ಯವನ್ನು ತಿಳಿಸುತ್ತಾರೆ.— **ಇವ್ವುಪಾಯತ್ವಮ್**-ಭಕ್ತಿಯೋಗಸ್ಥಾನದಲ್ಲಿ ಭಗವಂತನನ್ನಿರಬೇಕೆಂಬ ಉಪಾಯಪ್ರಾರ್ಥನೆಯು, ಉಪಾಸನಾದಿಗಳಿಲ್ಲದೇನೇ ಉಪಾಯಭೂತನಾಗು ಎಂಬ ಪ್ರಾರ್ಥನೆಯು, **ನ್ಯಾಸವಿದ್ಯೈಕ್ಕು**-ಈ ಭರನ್ಯಾಸವಿದ್ಯೆಗೆ, **ವಿಶೇಷಿತ್ತವೇದ್ಯಾಕಾರಮ್**-ವಿಶೇಷವಾದ ಎಂದರೆ ಅಸಾಧಾರಣವಾದ ಸ್ವರೂಪವು. ಆದುದರಿಂದ ಭರನ್ಯಾಸವು ಸಾಕ್ಷಾದುಪಾಯವಾಗುವದಿಲ್ಲವು; ಭಗವಂತನೇ ಉಪಾಯವೆಂಬ ಭಾವನೆಯಿಂದುಂಟಾಗಿ, ಅದರಿಂದ ಭಗವಂತನು ಪ್ರೀತನಾಗಿ ಫಲಪ್ರಾಪ್ತಿಯೆಂಬುದು ಸೂಚಿತವು.

ಕರ್ಮಯೋಗಾದಿಗಳಿಗೆ ಅಧಿಕಾರಿಯು ಅನುಷ್ಠಿಸುವ ಭಕ್ತಿಯೋಗದ್ವಾರವೇ ಫಲಸಿದ್ಧಿಯಾದುದರಿಂದ ಭಕ್ತಿಯೋಗಕ್ಕೆ ಕರ್ಮಯೋಗ ಜ್ಞಾನಯೋಗಗಳೊಂದಿಗೆ ವಿಕಲ್ಪವು ಎಂದಿಗೂ ಕೂಡುವದಿಲ್ಲವು. ಆದರೆ ಭರನ್ಯಾಸ ವಿಷಯದಲ್ಲಿ ಅದು ಬರೀ ವ್ಯಾಜವೇ ಆಗಿ, ಭಗವಂತನೇ ಸಾಕ್ಷಾದುಪಾಯವಾದರೂ, ಈ ಸಂದರ್ಭದಲ್ಲಿ ಅಧಿಕಾರಿಯು ಅನುಷ್ಠಿಸಬೇಕಾದುದು ಯಾವುದೂ ಇಲ್ಲವಾದುದರಿಂದ, ಭರನ್ಯಾಸವನ್ನೂ ಭಗವದುಪಾಯತ್ವವನ್ನೂ ವಿಕಲ್ಪವಾಗಿ ಭಾವಿಸಬಹುದು; ಏಕೆಂದರೆ ಪುರುಷಪ್ರಯತ್ನವಿಲ್ಲದೆ ಒಂದು ಸಿದ್ಧಿಸಿದರೆ ಇನ್ನೊಂದೂ ಸಿದ್ಧಿಸುತ್ತದೆ. ಭಗವಂತನ ಉಪಾಯತ್ವವು ಸಾರಪ್ರಕಾಶಿಕೆಯವರು ಎರಡು ವಿಧವೆಂದು ಉಪಪಾದಿಸಿರುತ್ತಾರೆ—(೧) ಸ್ವರೂಪಯೋಗ್ಯತಾರೂಪವೆಂದೂ (೨) ಫಲೋಪಹಿತರೂಪವೆಂದೂ.

(೧) ಈ ಅಧಿಕಾರಿಯು ಅಕಿಂಚನನು; ನನ್ನಲ್ಲಿ ಸರ್ವಭರವನ್ನೂ ಇಟ್ಟಿರುತ್ತಾನೆ; ಆದುದರಿಂದ ನಾನು ಸರ್ವಭರವನ್ನೂ ವಹಿಸುವದು ಯುಕ್ತವು; ಹೀಗೆ ಶ್ರಿಯಃಪತಿಯು ಭರನ್ಯಾಸವನ್ನು ಸ್ವೀಕರಿಸಿ, ಭಕ್ತಿಯೋಗದ ಅಪೇಕ್ಷೆಯಿಲ್ಲದೆ, ಅದರಿಂದ ಆತನಿಗೆಉಂಟಾಗತಕ್ಕ ಸರ್ವಫಲವನ್ನೂ ಕೊಡುವನು ಎಂದು ಸಹಜಕಾರುಣ್ಯಮೂಲಕ ಪ್ರಸನ್ನತೆಯು. ಇದು ಸ್ವರೂಪಯೋಗ್ಯತಾರೂಪವಾದುದು.

(೨) ಈ ಅಧಿಕಾರಿಯ ಭರವೆಲ್ಲವೂ ನನ್ನದೇ; ಆತನು ಸರ್ವಭರವನ್ನೂ ಸ್ವೀಕರಿಸಬೇಕೆಂದು ಪ್ರಾರ್ಥಿಸಿರುವನು; ಆ ಭರಸಮರ್ಪಣವು ತನ್ನ ಸಮಸ್ತ ಪಾಪಗಳ ಕ್ಷಯರೂಪ ಫಲಕ್ಕಾಗಿ ಮಾಡಿದುದು. ಆದುದರಿಂದ ಅವನ್ನು ಸ್ವೀಕರಿಸುವದು ತನಗೆ ಯುಕ್ತವೆಂಬ ಭಾವನೆಯು.

ಇಂತಹ ಉಪಾಯತ್ವವೇ ಈನ್ಯಾಸವಿದ್ಯೆಯ ಅಸಾಧಾರಣ ಸ್ವರೂಪವೆಂದು ಹೇಳಿದರು. ಹೀಗೆ ಹೇಳಿದುದರಿಂದ ಇನ್ನೊಂದು ವಿಷಯವೂ ಸೂಚಿತವು.

**ಇದುಕ್ಕು ಅಪೇಕ್ಷಿತ (ಉಪಯುಕ್ತ) ಮಾಯ್‌ಕ್ಕೊಳ್ಳು ಜ್ಞಾನಶಕ್ತ್ಯಾದಿಗಳ್ ವರುಗಿರನ.**

ರೋಗಿಷ್ಠನಾದವನು ಮಹಾಕ್ಷೇತ್ರವಾದ ಸೇತುವನ್ನು ಕಂಡು ಗೌಣಸ್ನಾನವನ್ನು ಆಚರಿಸಿದರೂ, ಕ್ಷೇತ್ರಮಹಾತ್ಮ್ಯೆಯು ಈತನನ್ನು ಬಲಾತ್ಕರಿಸಿ ಕಡೆಗೆ ಸೇತುವಿನಲ್ಲಿ ಅವಗಾಹನೆಯ ಸ್ನಾನವನ್ನು ಆಚರಿಸುವ ಹಾಗಾದರೆ ಸುಕೃತಪ್ರಾಪ್ತಿಯೇ ವಿನಾ ಪ್ರತ್ಯವಾಯವಿಲ್ಲವು. ಈ ಉಪಾಯತ್ವದಲ್ಲಿ ಭಕ್ತಿಯೋಗಸ್ಥಾನದಲ್ಲಿ ನೀನು ನಿಲ್ಲಬೇಕೆಂಬಪ್ರಾರ್ಥನೆಯು ಇರುತ್ತದೆ. ಆದರೆ ಕ್ರಮೇಣ ಭಕ್ತಿಯೋಗವನ್ನೇ ಅನುಷ್ಠಿಸಬೇಕೆಂಬ ಮನಸ್ಸುಂಟಾದರೆ, ಅದು ಸರಿಯಲ್ಲವು. ಅದು ಸುಕೃತವಾಗಿ ಪರಿಣಮಿಸುವದಿಲ್ಲವು. ಏಕೆಂದರೆ ಮಹಾಕೃಪಾಳುವಾದ ಶರಣ್ಯನನ್ನು ಭಕ್ತಿಯೋಗಸ್ಥಾನದಲ್ಲಿ ನೀನು ನಿಲ್ಲಬೇಕೆಂಬ ಪ್ರಾರ್ಥನೆಯೊಂದಿಗೆ ಭರಸಮರ್ಪಣವನ್ನು ಮಾಡಿರುತ್ತಾನೆ. ಇದರಿಂದ ಆತನು ಸ್ವೀಕೃತಭರನಾದನು. ಇಂತಹ ಆತನ ಕೃಪಾಪ್ರಭಾವಕ್ಕೆ ಕುಂದಕವಾಗಿ, ಆತನ ಪರಮೋಪಕಾರವನ್ನು ತಿರಸ್ಕರಿಸಿದವನಾದುದರಿಂದ ಅದು ಭಗವದಪಚಾರಕೋಟಿಯಲ್ಲಿ ನಿಲ್ಲುತ್ತದೆ. ಇದು **ವಿಶೇಷವೇದ್ಯಾಕಾರಂ** ಎಂಬಲ್ಲಿ ಅರ್ಥವಾಗಿ ತೋರಿಬರುತ್ತದೆ. ಇಂತಹ ವಿಶೇಷ ವೇದ್ಯಾಕಾರವನ್ನು ತಿರಸ್ಕರಿಸಿದಂತಾಗುತ್ತದೆ.

ಇಷ್ಟೇ ಅಲ್ಲವು ; ಭರನ್ಯಾಸವಿದ್ಯೆಗೆ ಈ ವೇದ್ಯಾಕಾರವಿಲ್ಲವಾದರೆ ಎಂದರೆ ಶರಣ್ಯಗತೋಪಾಯಾಂತರವನ್ನು ಹೊಂದಿರುವ ಉಪಾಯಪ್ರಾರ್ಥನಾರೂಪವಾದ ಆಕಾರವಿಲ್ಲವಾದರೆ, ಅದು ಸ್ವತಂತ್ರಪ್ರಪತ್ತಿಯೇ ಆಗುವದಿಲ್ಲವು ; ಏಕೆಂದರೆ ಆಗ ಕರ್ಮಯೋಗದ ಹಾಗೆ ಭಕ್ತಿಯೋಗದ್ವಾರವೇ ಆಗಬೇಕಾಗುತ್ತದೆ. ಆಗ ಉಪಾಯಗಳಿಗೆ ಗುರು ಲಘುವ್ಯತ್ಯಾಸವೇ ಇರುವದಿಲ್ಲವು. ಪ್ರಪತ್ತಿಯು ಸ್ವತಂತ್ರವಾದುದಾಗಬೇಕಾದರೆ ಆಗ ಗುರುವಾದ ಭಕ್ತಿಯೋಗಸ್ಥಾನದಲ್ಲಿ ಲಘುವಾದ ಪ್ರವೃತ್ತಿಯು ಯಾವುದೆಂದರೆ ಭಕ್ತಿಯೋಗಸ್ಥಾನದಲ್ಲಿ ಭಗವಂತನನ್ನೇ ಉಪಾಯವಾಗಿರಬೇಕೆಂಬ ಪ್ರಾರ್ಥನೆಯೇ ಇರಬೇಕು. ಈ ಅರ್ಥವೇ

**" ಶರಣಂ ತ್ವಾಂ ಪ್ರಪನ್ನಾಯೇ ಧ್ಯಾನಯೋಗವಿವರ್ಜಿತಾಃ |**
**ತೇಪಿ ಮೃತ್ಯು ಮತಿಕ್ರಮ್ಯಯಾನ್ತಿತದ್ವೈಷ್ಣವಂ ಪದಮ್ ॥**

(ಬ್ರಾ. ಪು. ೨೪) ೧೨ ನೆಯ ಪುಟ ನೋಡಿ.

ಎಂಬಲ್ಲಿ ವ್ಯಕ್ತವು. ಮತ್ತು ಗೀತಾಚರಮಶ್ಲೋಕದಲ್ಲಿ **" ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ "** ಎಂಬಲ್ಲೂ ಸುಸ್ಪಷ್ಟವು. ಮುಂದೆಯೂ **" ಪ್ರಪತ್ತಿನೇರೊನ್ರುಕ್ಕಙ್ಗಮಾಗನಿಲ್ಲಾದಪಡಿ ಶರಣ್ಯರ್ತಾನ್ ಉಪಾಯಾನ್ತರಸ್ಥಾನತ್ತಿಲ್ ನಿನ್ರು ಫಲಂಕೊಡುಕ್ಕಿರವಂಶಂ ಏತ್ತಮಾನಪಡಿಯಾಲೇ "** ಎಂಬಲ್ಲಿ ಈ ಅಭಿಪ್ರಾಯವನ್ನೇ ವಿಶದೀಕರಿಸಿರುತ್ತಾರೆ. ಇದು ಮುಖ್ಯವಾದಂಶವಾ

## ಅಥ "ಪ್ರಪದ್ಯೇ" ಇತ್ಯಸ್ಯಾರ್ಥಮಾಹ

---

**"ಪ್ರಪದ್ಯೇ"** ಎಙ್ಗಿರ ವಿಡತ್ತಿಲ್ **ಗತಿವಾಚಿಯಾನ ಧಾತುಗತ್ಯರ್ಥಙ್ಗಳ್ ಬುದ್ಧ್ಯರ್ಥಙ್ಗಳಾಗೈಯಾಲೇ ಇಙ್ಗು ಅಪೇಕ್ಷಿತ ಬುದ್ಧಿವಿಶೇಷತ್ತೈ ಚೊಲ್ಲುಗಿರದು. ಬುದ್ಧಿಯಾವ್ರುದು ? ಇವ್ವಿಡತ್ತಿಲ್ "ರಕ್ಷಿಷ್ಯತೀತಿ ವಿಶ್ವಾ**

- - - - - - - - - - - - - - - -

ದುದಾಗಿ ಸ್ವತಂತ್ರಪ್ರಪತ್ತಿಗೆ ವೇದ್ಯಾಕಾರವಾದುದರಿಂದಲೇ, **"ಸುದುಷ್ಕರೇಣಶೋಚೇದ್ಯಃ ಯೇನ ಯೇನೇಷ್ಟಹೇತುನಾ । ಸ ಸ ತಸ್ಯಾಹ ಮೇವೇತಿ ಚರಮಶ್ಲೋಕಾರ್ಥ ಸಙ್ಗ್ರಹಃ"** ಎಂದು ಕಾರಿಕೆಯ ಮೂಲಕ ಅನುಗ್ರಹಿಸಿರುತ್ತಾರೆ. ಸಿಕ್ಷೇಪರಕ್ಷೆಯಲ್ಲೂ ಭಕ್ತಿಯೋಗಕ್ಕೆ ಉಪಾಯಭೂತವಾದ ಅಙ್ಗಪ್ರಪತ್ತಿಯಲ್ಲೂ ಭಕ್ತಿಯ ಸ್ಥಾನದಲ್ಲಿ ಭಗವಂತನನ್ನಿಡತಕ್ಕದ್ದೆಂದು ಹೇಳಲ್ಪಟ್ಟಿರುತ್ತದೆ.

ಹೀಗೆ ಭರಸ್ವೀಕಾರಮಾಡಿ ಉಪಾಯಾನ್ತರಸ್ಥಾನದಲ್ಲಿ ನಿಲ್ಲಬೇಕೆಂಬ ಪ್ರಾರ್ಥನೆಯಲ್ಲಿ, ಆ ಭಗವಂತನಲ್ಲಿ ಅಪೇಕ್ಷಿತಗಳಾದ ದಯಾ, ಜ್ಞಾನ, ಶಕ್ತಿಯೇ ಮೊದಲಾದ ಕಲ್ಯಾಣಗುಣಗಳ ಅನುಸಂಧಾನವು ಭಕ್ತಿಯೋಗದಲ್ಲಿ **"ತಸ್ಮಿನ್ ಯದಂತಸ್ತದುಪಾಸಿತವ್ಯಂ"** ಎಂಬಲ್ಲಿ ಹೇಳಿರುವಹಾಗೆ ಇರಬೇಕಲ್ಲವೋ? ಎಂದರೆ ಅಂತಹ ಅನುಸಂಧಾನವು ತಾನಾಗಿಯೇ ಉಂಟಾಗುತ್ತದೆಂದು ಉಪದೇಶಿಸುತ್ತಾರೆ—**ಇದುಕ್ಕು**-ಈ ಉಪಾಯತ್ವಕ್ಕೆ, **ಅಪೇಕ್ಷಿತಮಾಯ್ ಕ್ಕೊಂಡು**-ಬೇಕಾದವುಗಳಾಗಿರುವ, **ಜ್ಞಾನಶಕ್ತ್ಯಾದಿಗಳ್**-ಭಗವಂತನ ಜ್ಞಾನ, ಶಕ್ತಿ, ಆದಿಶಬ್ದದಿಂದ ಷಡ್ಗುಣಗಳಲ್ಲಿ ಮಿಕ್ಕಗುಣಗಳೂ ಕಾರುಣ್ಯವಾತ್ಸಲ್ಯಾದಿಗಳೂ, **ವರುಗಿರನ**-ಉಂಟಾಗುತ್ತವೆ. ಭಗವತ್ಕೃಪಯಾ ಅನುಸಂಧೇಯಗಳಾಗುತ್ತವೆ ಎಂಬ ಭಾವವು.

ಮುಂದೆ **"ಪ್ರಪದ್ಯೇ"** ಎಂಬುದರ ಅರ್ಥವನ್ನು ಹೇಳುತ್ತಾರೆ.

---

**"ಪ್ರಪದ್ಯೇ", ಎಙ್ಗಿರ ವಿಡತ್ತಿಲ್**-ಎಂಬುವ ಸ್ಥಳದಲ್ಲಿ, **ಗತಿವಾಚಿಯಾನ**-ಗತಿಯನ್ನು ಬೋಧಿಸುವ, **ಧಾತುಗತ್ಯರ್ಥಙ್ಗಳ್-ಪದಲ್**-ಗತೌ ಎಂಬ ಧಾತುವೂ, ಅದರಿಂದುಂಟಾಗುವ ಗತ್ಯರ್ಥಗಳೂ, **ಬುದ್ಧ್ಯರ್ಥಙ್ಗಳಾಗೈಯಾಲೇ**-ಬುದ್ಧ್ಯರ್ಥವನ್ನುಳ್ಳವುಗಳಾದುದರಿಂದ, **ಇಙ್ಗು**-ಈ ಸಂದರ್ಭದಲ್ಲಿ "ಪ್ರಪದ್ಯೇ" ಎಂದು ಈ ಭರನ್ಯಾಸಾನುಷ್ಠಾನಮಾಡುವ ಸಂದರ್ಭದಲ್ಲಿ, **ಅಪೇಕ್ಷಿತ ಬುದ್ಧಿವಿಶೇಷತ್ತೈ**-ಆವಶ್ಯಕವಾದ, ಬೇಕಾದ ಬುದ್ಧಿವಿಶೇಷವಾದ ಮಹಾ ವಿಶ್ವಾಸವನ್ನು, **ಚೊಲ್ಲುಗಿರದು**-ಹೇಳುತ್ತದೆ, ಬೋಧಿಸುತ್ತದೆಂಬ ತಾತ್ಪರ್ಯವು; **ಬುದ್ಧಿಯಾವದು ?**-ಆ ಅಪೇಕ್ಷಿತವಾದ ಬುದ್ಧಿವಿಶೇಷವು ಯಾವುದು? ಅದಕ್ಕೆ ಉತ್ತರವು, **ಇವ್ವಿಡತ್ತಿಲ್**-ಈ ಸಂದರ್ಭದಲ್ಲಿ, **"ರಕ್ಷಿಷ್ಯತೀತಿ ವಿಶ್ವಾಸಃ"** "ಶರಣ್ಯನಾದ ಭಗವಂತನು ಭರಸಮರ್ಪಣೆಯನ್ನು ಸ್ವೀಕರಿಸಿ ರಕ್ಷಿಸಿಯೇ ರಕ್ಷಿಸುವನು,

**ಸಃ" ಎಙ್ಗಿರ ಅಧ್ಯವಸಾಯುಮ್. ಅಙ್ಗಙ್ಗಳಿಲ್ ಸಾರಮಾನ ವಿಶ್ವಾಸತ್ತೈ ಮುನ್ನಿಟ್ಟುಕೊಂಡು ಸಪರಿಕರಮಾನ ಸಾಧ್ಯೋಪಾಯುಂ ಇಙ್ಗೇತೋತ್ತುಕಿರದು. ಎಙ್ಙನೇಯನ್ನಿಲ್? ಇಙ್ಗು "ಪ್ರ" ಎಙ್ಗಿರ ಉಪಸರ್ಗಮ್**

---

**"ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ"** ಎಂದು ಹೇಳಿದವನಾದುದರಿಂದ ರಕ್ಷಿಸದೇ ಇರುವವನಲ್ಲವೆಂಬ ಮಹಾ ವಿಶ್ವಾಸವು" **ಎಙ್ಗಿರ**-ಎನ್ನುವ, **ಅಧ್ಯವಸಾಯುಮ್**-ದೃಢನಂಬಿಕೆಯು ; **ಪ್ರಪದ್ಯೇ** ಎಂಬುವುದು ಧಾತ್ವರ್ಥದಿಂದ ಮಹಾವಿಶ್ವಾಸವನ್ನು ಬೋಧಿಸುತ್ತದೆ ಎಂದು ಹೇಳಲ್ಪಟ್ಟಿತು.

ಹೀಗೆ ಅರ್ಥ ಹೇಳಿದರೆ, ಪ್ರಪದ್ಯೇ ಎಂಬುದು ಅಙ್ಗಿಯಾದ ಆತ್ಮನಿಕ್ಷೇಪವನ್ನು ಬೋಧಿಸಬೇಡವೇ? ಮಹಾ ವಿಶ್ವಾಸವು ಐದು ಅಙ್ಗಗಳಲ್ಲಿ ಒಂದು ಅಂಗವು. ಹಾಗಾದರೆ ಇದು ಭರನ್ಯಾಸರೂಪವಾದುದು ಹೇಗೆ? ಎಂದರೆ ಮುಂದಿನ ವಾಕ್ಯದಿಂದ ಮಹಾ ವಿಶ್ವಾಸವು ಇತರ ಅಂಗಗಳಿಗಿಂತಲೂ ಸಾರಭೂತವಾದುದರಿಂದ ಇದು ತೋರಿ, ಅದರಿಂದ ಕೂಡಿದ ಅಙ್ಗಿಯಾದ ಸಾಧ್ಯೋಪಾಯವಾದ ಭರನ್ಯಾಸವೇ ಇಲ್ಲಿ ಹೇಳಲ್ಪಟ್ಟಿತೆಂದು, "ಅಙ್ಗಙ್ಗಳಿಲ್" ಎಂಬ ವಾಕ್ಯದಿಂದ ಉಪಪಾದಿಸುತ್ತಾರೆ. **ಅಙ್ಗಙ್ಗಳಿಲ್**-ಪ್ರಪದನದ ಐದು ಅಙ್ಗಗಳಲ್ಲಿ, **ಸಾರಮಾನ ವಿಶ್ವಾಸತ್ತೈ**-ಶ್ರೇಷ್ಠವಾದ ಅಙ್ಗವಾದ ಮಹಾವಿಶ್ವಾಸವನ್ನು, **ಮುನ್ನಿಟ್ಟುಕ್ಕೊಂಡು**-ಮುಂದೆ ಮಾಡಿಕೊಂಡು, ಎಂದರೆ ಯಾವಾಗ ಸಾರಭೂತವಾದ ಅಂಗವು ಹೇಳಲ್ಪಟ್ಟಿತೋ, ತನ್ಮೂಲವಾಗಿ ಅದು ಮಿಕ್ಕ ನಾಲ್ಕು ಅಂಗಗಳಿಗೂ ಉಪಲಕ್ಷಣವಾಗಿ, ಎಂದರೆ ಪ್ರಪದನಕಾಲದಲ್ಲಿ ಈ ಅಧ್ಯವಸಾಯದೊಂದಿಗೆ ಇತರ ಅಂಗಗಳೂ ಇರಬೇಕೆಂಬುದು **ಮುನ್ನಿಟ್ಟುಕೊಂಡು**, ಎಂಬುದರಿಂದ ವ್ಯಕ್ತವು, **ಸಪರಿಕರಮಾನ**-ಐದು ಅಂಗಗಳಿಂದಲೂ ಕೂಡಿದ, **ಸಾಧ್ಯೋಪಾಯುಂ**-ಸಾಧ್ಯೋಪಾಯವಾದ ಭರಸಮರ್ಪಣೆಯು, **ಇಙ್ಗೇತೋತ್ತುಕಿರದು**-ಈ "ಪ್ರಪದ್ಯೇ" ಎಂಬ ಶಬ್ದದಲ್ಲಿ ತೋರಿಬರುತ್ತದೆ. ಸಾರಭೂತವಾದ ಅಂಗವು ಯಾವಾಗ ಹೇಳಲ್ಪಟ್ಟಿತೋ, ಆಗ ಮಿಕ್ಕ ಅಂಗಗಳೂ ಇರಬೇಕೆಂದು ಹೇಳಿದಂತಾಯಿತು. ಅಂತಹ ಸಪರಿಕರ ಪ್ರಪದನವೇ **ಪ್ರಪದ್ಯೇ** ಎಂಬ ಪದದಿಂದ ಬೋಧಿತವೆಂಬ ತಾತ್ಪರ್ಯವು.

ಅಧಿಕಾರಿಯ ಅಪರಾಧಗಳೋ ಅನಂತವಾದುವು, ಉಪಾಯವಾದರೋ ಅತಿ ಲಘುವಾದುದು, ಫಲವೋ ಅತ್ಯುನ್ನತಪದವಿಯರೂಪವಾದುದು, ಹೀಗಿರುವ ಸಂದರ್ಭದಲ್ಲಿ ಈ ನಿಕೃಷ್ಟನಾದವನಿಗೆ ಅಂತಹ ನಿರತಿಶಯಫಲಪ್ರಾಪ್ತಿಯು ಈ ಲಘೂಪಾಯದಿಂದ ಸಾಧ್ಯವೇ? ಹೀಗಿರುವಾಗ ಮಹಾವಿಶ್ವಾಸವು ಉಂಟಾಗುವದು ಹೇಗೆ? ಅದಕ್ಕೆ ಸಾರತಮತ್ವವು ಹೇಗೆ? ಇತರೋಪಾಯಗಳ ಕಡೆ ಈತನಿಗೆ ಮನಸ್ಸು ಹೋಗದಿರುವದಕ್ಕಾಗಿ ಶರೀರಪಾತದವರೆಗೂ ಹೇಗೆ ಇದ್ದೀತು?

**ವಿಶ್ವಾಸತ್ತಿನುಡೈಯ ಪ್ರಕರ್ಷರೂಪಮಾನ ಮಹತ್ತ್ವೈಯೈಕ್ಕಾಟ್ಟುಮ್. ಇವ್ವಿಶ್ವಾಸಪ್ರಕರ್ಷಮ್ ಶ್ರೀಮಚ್ಛಬ್ದತ್ತಿಲುಂ ನಾರಾಯಣಶಬ್ದತ್ತಿಲುಮ್ ಉಳ್ಳ ಪುರುಷಕಾರ ಸಂಬಂಧಗುಣಾದಿಗಳೈ ಅನುಸಂಧಿತ್ತವಾರೇ ವರುಮ್.**

ಈ ಆಕ್ಷೇಪಗಳಿಗೆ ಮುಂದಿನ "ಎಜ್ಗನೇ ಎನ್ನಿಲ್" ಎಂಬ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಾರೆ. ಆದರೆ ಹಿಂದೆ ಸಾಧ್ಯೋಪಾಯಶೋಧನಾಧಿಕಾರದಲ್ಲೇ ಈ ಅಂಗದ ಪ್ರಾಧಾನ್ಯವನ್ನು ಉಪಪಾದಿಸಿರುತ್ತಾರೆ. ೨೨೧೫ ನೆಯ ಪುಟವನ್ನು ನೋಡಿ; ಅಲ್ಲಿ **"ನಾರಾಯಣಂ ಸಲಕ್ಷ್ಮೀಕಂ ಪ್ರಾಪ್ತುಂ ತಚ್ಚರಣದ್ವಯಮ್, ಉಪಾಯ ಇತಿ ವಿಶ್ವಾಸೋ ದ್ವಯಾರ್ಥಶ್ಶರಣಾಗತಿಃ"** ಎಂಬ ಅಭಿಯುಕ್ತರ ಪಾಶುರವು **"ಅಧಿಕಾರಕೋಟಿಯಿಲುಮ್ ಅಜ್ಗಕೋಟಿಯಿಲುಮ್ ನಿರ್ಕ್ಕಿರ ವಿಶ್ವಾಸತ್ತಿನುಡೈಯ ಪ್ರಾಧಾನ್ಯಂ ಶೊಲ್ಲುಗೈಕ್ಕಾಗವತ್ತನೇ"** ಎಂದು ಉಪಪಾದಿಸಿರುತ್ತಾರೆ. ಅದನ್ನೇ ಇಲ್ಲಿ ಸಮರ್ಥಿಸಿ ಹೇಳುತ್ತಾರೆ. ಹಿಂದೆ **ಪದಲ್ಗತೌ** ಎಂಬ ಧಾತ್ವರ್ಥದಿಂದುಂಟಾದ ಅರ್ಥದಿಂದ ಮಹಾ ವಿಶ್ವಾಸವು ತೋರಿಬರುತ್ತದೆಂದು ಹೇಳಿದರು. ಮುಂದೆ ಪ್ರ ಎಂಬ ಉಪಸರ್ಗವು ವಿಶ್ವಾಸದ ಪ್ರಕರ್ಷತೆಯನ್ನು ಬೋಧಿಸುತ್ತದೆಂದು ಹೇಳುತ್ತಾರೆ. **"ಎಜ್ಗನೇ ಎನ್ನಿಲ್"** ಎಂದಾರಂಭಿಸಿದ ವಾಕ್ಯಗಳ ಮೂಲಕವಾಗಿ. **ಇಜ್ಞು**-ಈ ಪ್ರಪದ್ಯೇ ಎಂಬ ಶಬ್ದದಲ್ಲಿ, **ಪ್ರ ಎಂಬುವ ಉಪಸರ್ಗವು, ವಿಶ್ವಾಸತ್ತಿನುಡೈಯ**-ವಿಶ್ವಾಸದ, **ಪ್ರಕರ್ಷರೂಪಮಾನ**-ಉತ್ಕೃಷ್ಟತೆಯ ರೂಪವಾದ, **ಮಹತ್ತ್ವೈಯೇ**-ಮಹತ್ತನ್ನು, **ಕಾಟ್ಟುಮ್**-ಪ್ರದರ್ಶಿಸುತ್ತದೆ. ಪ್ರಪದ್ಯೇ ಎಂಬಲ್ಲಿ ತೋರಿಬರುವ ಮಹಾ ವಿಶ್ವಾಸವು ಉಂಟಾಗುವ ಬಗೆ ಹೇಗೆ? ಎಂದರೆ ತಿಳಿಸುತ್ತಾರೆ. **ಇವ್ವಿಶ್ವಾಸಪ್ರಕರ್ಷಮ್**-ಈ ವಿಶ್ವಾಸದ ಮಹತ್ವವು, **ಶ್ರೀಮಚ್ಛಬ್ದತ್ತಿಲುಮ್**-ಶ್ರೀಮಚ್ಛಬ್ದದಲ್ಲೂ, **ನಾರಾಯಣಶಬ್ದದಲ್ಲೂ, ಉಳ್ಳ**-ತೋರಿಬರುವ, **ಪುರುಷಕಾರಸಂಬಂಧ ಗುಣಾದಿಗಳೈ**-ಅವಿನಾಭೂತಳಾಗಿರುವ ಲಕ್ಷ್ಮಿಯ ಪುರುಷಕಾರತ್ವವೂ, ಇದು ಶ್ರೀಮಚ್ಛಬ್ದದಿಂದ ದ್ಯೋತಿತವು, ನಿತ್ಯಸಂಬಂಧವೂ, ನಿತ್ಯಗಳಾದ ಕಲ್ಯಾಣಗುಣಗಳೂ, ಆದಿಶಬ್ದದಿಂದ ಸಹಕಾರ್ಯಂತರದ ಅಪೇಕ್ಷೆಯಿಲ್ಲದ ಸತ್ಯಸಂಕಲ್ಪತೆಯೂ, ಬಂಧನಿವೃತ್ತಿಯ ಮೂಲಕ ಭಗವತ್ಕೈಂಕರ್ಯಪ್ರಾಪ್ತಿ, ಇವುಗಳನ್ನೂ ಇದು ನಾರಾಯಣ ಶಬ್ದದಿಂದ ತೋರಿಬರುವಂಥಾದ್ದು, ಇವುಗಳನ್ನು, **ಅನುಸಂಧಿತ್ತವಾರೇ**-ಅನುಸಂಧಾನಮಾಡಿದ ಒಡನೆಯೇ, **ವರುಮ್**-ಉಂಟಾಗುತ್ತದೆ. ಈ ಮಹಾವಿಶ್ವಾಸವು ಹೀಗೆ ಉಂಟಾದರೆ, ಅದರಿಂದ ಪ್ರಾಪ್ತವಾಗುವ ಪ್ರಯೋಜನವನ್ನು ತಿಳಿಸುತ್ತಾರೆ.—**ಇತ್ತಾಲ್**-ಹೀಗೆ ಶ್ರೀಮನ್ನಾರಾಯಣ ಶಬ್ದಾರ್ಥವನ್ನು ಅನುಸಂಧಾನಮಾಡಿ **ಪ್ರಪದ್ಯೇ** ಎಂದು ಭರನ್ಯಾಸವನ್ನು ಅನುಷ್ಠಿಸುವದರ ಮೂಲಕ ಮಹಾವಿಶ್ವಾಸವು ಉಂಟಾಗುವದರಿಂದ, **ತೀ ಅಪಚಾರ ಪ್ರಾಚುರ್ಯಾ**

**ಇತ್ತಾಲೇ ತನ್ ಅಪಚಾರ ಪ್ರಾಚುರ್ಯಾದಿಗಳ್ ಅಡಿಯಾಗವರುಂ ಶಙ್ಕೈ ಗಳೆಲ್ಲಾಂ ಕಳೈಯುಮ್.**

## "ಪ್ರಪದ್ಯೇ" ಇತ್ಯತ್ರ ಸೂಚಿತ ಮಹಾವಿಶ್ವಾಸಸ್ಯ ಆವಶ್ಯಕತ್ವಮ್

---

**ದಿಗಳ್ ಅಡಿಯಾಗವರುಂ**-ಪ್ರಪನ್ನನಾದ ತನ್ನ ಅಪರಾಧಗಳ ಆಧಿಕ್ಯದ ಮೂಲಕ ಉಂಟಾಗುವ, **ಶಂಕೈಗಳೆಲ್ಲಾಮ್**-ಎಲ್ಲಾ ಶಂಕೆಗಳು, **ಕಳೈಯುಮ್**-ನಿವರ್ತಿಸುತ್ತವೆ, ಹೋಗುತ್ತವೆಂಬ ಭಾವವು. ಪರಮಕಾರುಣ್ಯ ಪ್ರೇರಿತನಾದ ಶರಣ್ಯನ ರಕ್ಷಕತ್ವ ವಿಷಯದಲ್ಲಿ ಉಂಟಾಗುವ ಶಙ್ಕಾಗಳಿಗೆ ಕಾರಣವು ಈತನು ಮಾಡಿರುವ ಅನಂತಾಪರಾಧಗಳ ಮೂಲಕ ಉಂಟಾಗುವ ಜ್ಞಾನತಿರೋಹಿತತ್ವವು. ವ್ಯಕ್ತವಾದ ವಿಷಯದಲ್ಲಿ ಈ ಜ್ಞಾನತಿರೋಹಿತತ್ವವು ಸಂದೇಹಗಳನ್ನು ಉಂಟುಮಾಡಿಬಿಡುತ್ತದೆ. ಈ ಸಂದರ್ಭದಲ್ಲಿ ಉಂಟಾಗುವ ಶಙ್ಕಾಗಳು ಯಾವುವೆಂಬುದನ್ನು ಹಿಂದೆಯೇ ತಿಳಿಸಿರುವೆವು ಪರಮಾತ್ಮನು ಮಹತ್ತಾದ ಉನ್ನತ ಸ್ಥಿತಿಯಲ್ಲಿರುವವನು, ಈ ಅಲ್ಪನಾಗಿ ನಿಕೃಷ್ಟಸ್ಥಿತಿಯಲ್ಲಿರುವವನ ಪ್ರಾರ್ಥನೆಯನ್ನು ಪರಿಗಣಿಸುವನೇ? ಸೃಷ್ಟಿಯು ಮೊದಲುಗೊಂಡು ಲೆಖ್ಖವಿಲ್ಲದ ಜನ್ಮ ಸಂತತಿಗಳು ಕಳೆದುಹೋದುವು. ಜನ್ಮಜನ್ಮದಲ್ಲೂ ಮಾಡಿದ ಅಪರಾಧಗಳನ್ನು ಲೆಖ್ಖಮಾಡಲು ಸಾಧ್ಯವಿಲ್ಲವು. ಇಂತಹ ಅಪರಾಧಗಳನ್ನೆಲ್ಲಾ ಈ ಅಲ್ಪವಾದ ವ್ಯಾಜರೂಪಾನುಷ್ಠಾನದಿಂದ ಭಗವಂತನು ತೊಲಗಿಸುವನೇ? ಇತ್ಯಾದಿ ಶಂಕಾಗಳು ಇಲ್ಲಿ ಸೂಚಿಸಲ್ಪಟ್ಟವು. ಇಂತಹ ಶಂಕಾಗಳು ತೊಲಗಬೇಕಾದರೆ **ಶ್ರೀಮನ್ನಾರಾಯಣ** ಶಬ್ದಗಳಲ್ಲಿ ತೋರಿಬರುವ ಕರುಣಾನಿಧಿಯಾಗಿ ಅನುಗ್ರಹಮಯಳಾದವಳ ಸಂಬಂಧವೂ ಪುರುಷಕಾರತ್ವವೂ ಈ ಅನುಗ್ರಹಕ್ಕೆ ಪ್ರತಿಬಂಧಕವೇ ಇಲ್ಲದಿರುವ ಆಕೆಯ ವಾತ್ಸಲ್ಯಾತಿಶಯವೂ, ಆದಕ್ಕನುಗುಣವಾಗಿ ನಾರಾಯಣನಲ್ಲಿ ತೋರಿಬರುವ ಕಲ್ಯಾಣಗುಣಗಳೂ ಪ್ರಪನ್ನನನ್ನು ರಕ್ಷಿಸತಕ್ಕದ್ದೇ ತನ್ನ ವ್ರತವೆಂಬ ಅಪ್ರತಿಹತ ಸತ್ಯಸಂಕಲ್ಪತೆಯೂ, ಇವುಗಳ ಅನುಸಂಧಾನದೊಂದಿಗೆ ನೀನು ಶರಣವಾಗತಕ್ಕದ್ದೆಂದು ಪ್ರಾರ್ಥಿಸಿ, ಪ್ರಪದ್ಯೇ ಎಂದು ಭರಸಮರ್ಪಣೆ ಮಾಡುವಾಗ ಆ ಶಬ್ದದಲ್ಲಿ ತೋರಿಬರುವ ಮಹಾವಿಶ್ವಾಸವು ಉದಯಿಸದೇ ಇರುವದಿಲ್ಲವೆಂದು ಉಪದೇಶಿಸಿದರು.

ಹಿಂದೆ ಪರಿಕರವಿಭಾಗಾಧಿಕಾರದಲ್ಲಿ ಮುಖ್ಯವಾದ ಶಙ್ಕಾಪಂಚಕಗಳು ಉಪಪಾದಿಸಲ್ಪಟ್ಟು ಅವುಗಳಿಗೆ ಸಮಾಧಾನಗಳೂ ಹೇಳಲ್ಪಟ್ಟಿವೆ ಶಂಕೆಗಳ ಉಪಪಾದನೆಗೆ ೧೧೦೦ನೆಯ ಪುಟವನ್ನೂ, ಅವುಗಳ ಸಮಾಧಾನಕ್ಕೆ ೧೧೧೨ ರಿಂದ ೧೧೨೩ ನೆಯ ಪುಟಗಳನ್ನೂ ನೋಡಿ.

**ಇವ್ವಿಶ್ವಾಸದಾರ್ಢ್ಯಂ ವೇಣುಮೆನ್ನುಮಿಡತ್ತೈ (೧) "ರಾಕ್ಷಸಾನಾ ಮವಿಸ್ರಂಭಾ ದಾಂಜನೇಯಸ್ಯಬನ್ಧನೇ । ಯಥಾ ವಿಗಳಿತಾ ಸದ್ಯ ಸ್ತ್ವಮೋಘಾಪ್ಯ ಸ್ತ್ರಬಂಧನಾ । ತಥಾ ಪುಂಸಾಮವಿಸ್ರಂಭಾತ್ ಪ್ರಪತ್ತಿಃ ಪ್ರಚ್ಯುತಾ ಭವೇತ್ । ತಸ್ಮಾದ್ವಿಸ್ರಂಭಯುಕ್ತಾನಾಂ ಮುಕ್ತಿಂ ದಾಸ್ಯತಿ ಸಾಚಿರಾತ್" ಎನ್ರು ಶೊಲ್ಲಿತ್ತು.**

"ಪ್ರಪದ್ಯೇ" ಎಂಬಲ್ಲಿ ತೋರಿಬರುವ ವಿಶ್ವಾಸಪ್ರಕರ್ಷದ ಆವಶ್ಯಕತೆಯು

---

ಹಿಂದೆ **ಪ್ರಪದ್ಯೇ** ಎಂಬ ಶಬ್ದದಲ್ಲಿರುವ ಧಾತು ಪ್ರತ್ಯಯಗಳ ಮೂಲಕ ವಿಶ್ವಾಸದ ಪ್ರಕರ್ಷತೆಯು ಉಪದೇಶಿಸಲ್ಪಟ್ಟು, ಅನಂತರ ಅದು **ಶ್ರೀಮನ್ನಾರಾಯಣ** ಶಬ್ದಾರ್ಥಗಳ ಅನುಸಂಧಾನದಿಂದ ಉದಿಸುತ್ತದೆಂದು ಹೇಳಿದರು. ಈ ಮಹಾ ವಿಶ್ವಾಸವು ಪ್ರಪನ್ನನಿಗೆ ಶರಣಾಗತಿಯನ್ನನುಷ್ಠಿಸಿದ ಕಾಲದಲ್ಲೂ, ಅನಂತರ ದೇಹವಿಯೋಗ ಉಂಟಾಗುವವರೆಗೂ ಈ ಮಹಾ ವಿಶ್ವಾಸದ ದಾರ್ಢ್ಯವು ಅತ್ಯಾವಶ್ಯಕವೆಂದು ಸಪ್ರಮಾಣವಾಗಿ ಉಪದೇಶಿಸುತ್ತಾರೆ.— **ಆಂಜನೇಯಸ್ಯ ಬಂಧನೇ**- ಇಂದ್ರಜಿತ್ತು ಬ್ರಹ್ಮಾಸ್ತ್ರದಿಂದ ಆಂಜನೇಯನನ್ನು ಬಂಧಿಸಿದ ವಿಷಯದಲ್ಲಿ, **ರಾಕ್ಷಸಾನಾಂ ಅವಿಸ್ರಂಭಾತ್** - ರಾಕ್ಷಸರುಗಳಿಗೆ ಆ ಅಸ್ತ್ರಬಂಧನದಲ್ಲಿ ನಂಬಿಕೆ ಇಲ್ಲದುದರಿಂದ, **ಅಸ್ತ್ರಬಂಧನಾ**-ಅಸ್ತ್ರದ ಬಂಧನವು, **ಅಮೋಘಾಪಿ**- ಅಮೋಘವಾಗಿದ್ದರೂ ಕೂಡ, **ಯಥಾ**-ಹೇಗೆ, **ಸದ್ಯಃ**-ಒಡನೆಯೇ ಎಂದರೆ ರಾಕ್ಷಸರು ಆಂಜನೇಯನನ್ನು ಹಗ್ಗದಿಂದ ಕಟ್ಟಿದ ಒಡನೆಯೇ, **ವಿಗಳಿತಾ**-- ಬ್ರಹ್ಮಾಸ್ತ್ರವು ಹಗ್ಗದಿಂದ ಕಟ್ಟುವ ಅವಮಾನವನ್ನು ಸಹಿಸದೆ ನಿಷ್ಫಲವಾದುದಾಯಿತೋ, **ತಥಾ**-ಹಾಗೆಯೇ, **ಪುಂಸಾಂ**-ಪ್ರಪದನಾಧಿಕಾರಿಗಳಾದ ಪುರುಷರಿಗೆ, **ಪ್ರಪತ್ತಿಃ**-ಪ್ರಪದನವು, **ಪ್ರಚ್ಯುತಾಭವೇತ್**-ಮುಖ್ಯವಾದ ಅಂಗವೇ ಇಲ್ಲದುದರಿಂದ ಫಲಕಾರಿಯಾಗದೇ ಹೋಗುತ್ತದೆ, **ತಸ್ಮಾತ್**-ಆ ಕಾರಣದಿಂದ, **ಸಾ**-ಆ ಪ್ರಪದನವು, **ವಿಸ್ರಂಭಯುಕ್ತಾನಾಂ**-ಮಹಾ ವಿಶ್ವಾಸವುಳ್ಳವರಿಗೆ, **ಅಚಿರಾತ್**- ಶೀಘ್ರದಲ್ಲೇ, **ಮುಕ್ತಿಂದಾಸ್ಯತಿ** - ದೈವಾನುಗ್ರಹದ ಮೂಲಕ ಮುಕ್ತಿಯನ್ನು ಸಾಧಿಸಿಕೊಡುತ್ತದೆ. ಅದೇ ಕೊಡಲಾರದು, ಅದು ಬರೀ ವ್ಯಾಜವು; ಅದು ಸ್ವಾಮಿಯ ಕೃಪೆಯನ್ನುಂಟುಮಾಡುವದರಿಂದ ಮುಕುಂದನು ಮುಕ್ತಿಯನ್ನು ಕೊಡುವನು ಎಂಬ ಭಾವವು. **ಎನ್ರು ಶೊಲ್ಲಿತ್ತು**-ಎಂದು ಸಂಹಿತೆಯಲ್ಲಿ ಹೇಳಲ್ಪಟ್ಟಿತು. ಈ ಇತಿಹಾಸವು ಶ್ರೀಮದ್ರಾಮಾಯಣದಲ್ಲಿ ಉಪಪಾದಿತವು. ಅಲ್ಲಿ ಹೇಳಿರುವದೇನೆಂದರೆ— ಚತುರ್ಮುಖನ ಅಸ್ತ್ರವಾದುದರಿಂದ ಅದಕ್ಕೆ ತಾನು ಮರ್ಯಾದೆಯನ್ನು ಕೊಡುವದು ಉಚಿತವು; ಅದರ ಬಂಧದಿಂದ ರಾವಣನೊಂದಿಗೆ

---

(೧) ಸನತ್ಕುಮಾರ ಸಂಹಿತೆ.

**ಇವ್ಯವಸಾಯತ್ತಿನುಡ್ಯೆಯ ಪ್ರಭಾವವಮ್ (೨) "ವ್ಯವಸಾಯಾದೃತೇ ಬ್ರಹ್ಮನ್ನಾಸಾದಯತಿ ತತ್ಪರಮ್ ।" (೩) ನಿಸ್ಸಂಶಯೇಷು ಸರ್ವೇಷು ನಿತ್ಯಂ**

ಸಂವಾದವು ದೊರಕುವದರ ಮೂಲಕ ತನಗೆ ತುಂಬಾ ಪ್ರಯೋಜನ ಉಂಟೆಂದು ಬಂಧನಕ್ಕೆ ಸಿಕ್ಕಿದನು. ಅನಂತರ ರಾಕ್ಷಸರು ಸುಮ್ಮನಿರದೆ **"ತತಸ್ತಂ ರಾಕ್ಷಸಾ ದೃಷ್ಟ್ವಾ ನಿರ್ವಿಚೇಷ್ಟ ಮರಿಂದಮಮ್ । ಬಬಂಧುಶ್ಶಣವಲ್ಕೈಶ್ಚ ದ್ರುಮ ಚೀರೈಶ್ಚ ಸಂಹತೈಃ"** ಎಂದು ಹೇಳಿರುವಹಾಗೆ ಶಣಬುಹಗ್ಗ ವಲ್ಕಲಗಳಿಂದ ಕಟ್ಟಿದರು. **"ಸಬದ್ಧಸ್ತೇನ ವಲ್ಕೇನ ವಿಮುಕ್ತೋಸ್ತ್ರೇಣ ವೀರ್ಯವಾನ್ । ಅಸ್ತ್ರ ಬಂಧ ಸ್ಸಚಾನ್ಯಂಹಿ ನಬಂಧ ಮನುವರ್ತತೇ"** ಹಾಗೆ ಕಟ್ಟಿದ ಒಡನೆಯೇ ಈ ಪರಾಕ್ರಮಶಾಲಿಯಾದ ಆಂಜನೇಯನು ಒಡನೆಯೇ ಬ್ರಹ್ಮಾಸ್ತ್ರದಿಂದ ಬಿಡ ಲ್ಪಟ್ಟನು; ಏಕೆಂದರೆ ಬ್ರಹ್ಮಾಸ್ತ್ರಬಂಧವು ಬೇರೆ ಬಂಧನವನ್ನು ಸಹಿಸುವು ದಿಲ್ಲವು. ಅಮೋಘವಾದ ಬ್ರಹ್ಮಾಸ್ತ್ರಬಂಧಕ್ಕೆ ಸಿಕ್ಕಿರುವಾಗ ಅದರಲ್ಲಿ ನಂಬಿಕೆ ಯಿಲ್ಲದುದರಿಂದ ರಾಕ್ಷಸರು ಹಗ್ಗದಿಂದ ಕಟ್ಟಿದುದರಿಂದ ಬ್ರಹ್ಮಾಸ್ತ್ರವು ಫಲಕಾರಿ ಯಲ್ಲದೇ ಹೋಯಿತು. ಹಾಗೆಯೇ ಶರಣಾಗತಿಯಲ್ಲಿ ಮಹಾವಿಶ್ವಾಸವಿಲ್ಲದಿದ್ದರೆ ಅದು ಅಷ್ಟು ಅಮೋಘವಾಗಿದ್ದರೂ, ಬ್ರಹ್ಮಾಸ್ತ್ರ ಸ್ಥಾನದಲ್ಲಿರುವ ದ್ವಯಮನ್ತ್ರದ ಮೂಲಕ ಭರನ್ಯಾಸವು ಫಲಕಾರಿಯಾಗುವದಿಲ್ಲವೆಂಬ ಭಾವವು. ಶರಣಾಗತಿಯಲ್ಲಿ ವಿಶ್ವಾಸವಿಲ್ಲದೆ ಉಪಾಯಾಂತರ ಅವಲಂಬನವೂ, ಅನ್ಯದೇವತಾ ಭಜನವೂ ಇವುಗಳು ಶರಣಾಗತಿಯನ್ನು ಹಾಳುಮಾಡುವವು ಎಂಬ ಭಾವವು; ಫಲೋನ್ಮು ಖಕ್ಕೆ ವಿಘ್ನಗಳಾಗಿ ಪರಿಣಮಿಸುವುವು ಎಂಬ ತಾತ್ಪರ್ಯವು. ಆದುದರಿಂದ ಮಹಾ ವಿಶ್ವಾಸದಿಂದ ಭರನ್ಯಾಸವನ್ನನುಷ್ಠಿಸಿ ತಾನು ಕೃತಕೃತ್ಯನೆಂದು ಭಾವಿಸಿ ಅಂತಹ ಮಹಾವಿಶ್ವಾಸದ ದಾರ್ಢ್ಯವನ್ನು ದೇಹಾವಸಾನದವರೆಗೂ ಹೊಂದಿರಬೇಕೆಂಬ ತಾತ್ಪರ್ಯವು.

**ಇವ್ಯವಸಾಯತ್ತಿನುಡ್ಯೆಯ ಪ್ರಭಾವವಮ್**-ಶಾಸ್ತ್ರಪಙ್ಕ್ತಿಗಳಲ್ಲಿ ಸಂಪೂರ್ಣ ವಿಶ್ವಾಸದಿಂದುಂಟಾಗುವ ನಿಶ್ಚಯಜ್ಞಾನದ ಪ್ರಭಾವವು, **(೨) ಹೇ ಬ್ರಹ್ಮನ್**- ಓ ಶಂಕರೇ, ಇದು ಜನಕರು ಶುಕರಿಗೆ ಹೇಳುವ ವಾಕ್ಯವು, **ವ್ಯವಸಾಯಾದೃತೇ**- ಇಂತಹ ನಿಶ್ಚಯಜ್ಞಾನವಿಲ್ಲದೇ, **ತತ್ಪರಮ್**-ಆ ಶ್ರೇಷ್ಠನಾದ ಪರಬ್ರಹ್ಮವನ್ನು, **ನಾಸಾದಯತಿ**-ಹೊಂದುವದಿಲ್ಲವು. ಇದರ ಪೂರ್ವಾರ್ಧವು—**"ಭವಾಂಶ್ಚೋ ತ್ಪನ್ನವಿಜ್ಞಾನಃ ಸ್ಥಿರೇಬುದ್ಧಿ ರಲೋಲುಪಃ"** ಎಂದಿರುತ್ತದೆ. ಉತ್ಪನ್ನವಿಜ್ಞಾನ ವೇನು ಅದರಿಂದುಂಟಾಗುವ ಸ್ಥಿರಬುದ್ಧಿಯೇನು, ಇವುಗಳಲ್ಲಿ ಅಡಗಿರುವ ಅರ್ಥ ವೇ ವ್ಯವಸಾಯ ಶಬ್ದದಿಂದ ಬೋಧಿತವಾದುದು. **"ಬ್ರಹ್ಮನಾಸಾದಯತಿ"** **(೩)** ಎಂಬುದು ವೈಶಂಪಾಯನರು ಜನಮೇಜಯನಿಗೆ ಹೇಳುವ ವಾಕ್ಯವು. ಇದರ

---

(೨) ಭಾರ ಶಾನ್ತಿ. 334-47, (೩) ಭಾರ. ಶಾನ್ತಿ. 359-71.

**ವಸತಿವ್ಯೈಹರಿಃ । ಸಸಂಶಯೋ್ಹ ಹೇತುಬಲಾನ್ನಾಧ್ಯಾವಸತಿ ಮಾಧವಃ" ಇತ್ಯಾದಿಗಳಿಲುಮ್ ಪ್ರಸಿದ್ಧಮ್, ಇಮ್ಮಹಾವಿಶ್ವಾಸಮ್ ಉಂಡಾನಾಲ್ ಪಿನ್ಬು ವಿಮರ್ಶಕಾಲತ್ತಿಲ್ ಒರುಕ್ಕಾಲಂ ಸಂಶಯಂ ಪಿರವಾದು.**

**ಆಗೈಯಾಲ್ ಪಿನ್ಬು ಒರುಕ್ಕಾಲುಮ್ ಇವ್ವಿಷಯತ್ತಿಲ್ ಸಂಶಯಂ ಪಿರಿಯೊದಪಡಿಯಾನ ಪ್ರಥಮಕ್ಷಣತ್ತಿಲ್ ಮಹಾವಿಶ್ವಾಸಂ ಪ್ರಪತ್ತಿಕ್ಕು**

---

ಪ್ರತಿಪದಾರ್ಥಕ್ಕೆ ೧೯೯೭-೯೮ ನೆಯ ಪುಟಗಳನ್ನು ನೋಡಿ. ಶಾಸ್ತ್ರಜ್ಞಾನದಲ್ಲಿ ಪರಿಪೂರ್ಣ ವಿಶ್ವಾಸವಿರಬೇಕು. ಗುರುಮುಖೇನ ಮಾಡಿದ ಭರನ್ಯಾಸಾನುಷ್ಠಾನ ದಿಂದ ಪ್ರತಿಬಂಧಕ ಪಾಪಗಳೆಲ್ಲಾ ಕಳೆದು ಮೋಕ್ಷಪ್ರಾಪ್ತಿಯುಂಟಾಗುತ್ತದೆಂದು ಶಾಸ್ತ್ರವು ಹೇಳಿದರೆ ಅದರಲ್ಲಿ ದೃಢವಾದ ನಂಬಿಕೆ ಇರಬೇಕು. ಹಾಗಲ್ಲದೆ ಸಂಶಯಾತ್ಮಾವಾದರೆ ನಾಶವಾಗುವನು ಎಂಬ ಭಾವವು. **ಇತ್ಯಾದಿಗಳಿಲುಮ್**-ಇವೇ ಮೊದಲಾದ ಪ್ರಮಾಣಗಳಲ್ಲೂ ಪ್ರಸಿದ್ಧವು. **ಇಮ್ಮಹಾವಿಶ್ವಾಸಮುಂಡಾನಾಲ್**-ಈ ಮಹಾ ವಿಶ್ವಾಸವು ಗುರುಕೃಪಾ, ಶಾಸ್ತ್ರಜ್ಞಾನಗಳಿಂದ ಉಂಟಾದರೆ, **ಪಿನ್ಬು**-ಅನಂತರ, **ವಿಮರ್ಶಕಾಲತ್ತಿಲ್**-ಈ ಭರನ್ಯಾಸದ ಮಾಹಾತ್ಮ್ಯೆಯನ್ನು ವಿಮರ್ಶಿಸಿ ತಿಳಿಯುವ ಉತ್ತರಕಾಲದಲ್ಲಿ, **ಒರುಕ್ಕಾಲಂ**-ಎಂದಿಗೂ, **ಸಂಶಯಂ**-ಆ ಉಪಾಯಾನುಷ್ಠಾನದಲ್ಲಿ ಅಪನಂಬಿಕೆಯು, **ಪಿರವಾದು**-ಹುಟ್ಟಲಾರದು. ಗುರುಕಟಾಕ್ಷದಿಂದಲೂ ತದನುಗ್ರಹದಿಂದುಂಟಾಗುವ ಶಾಸ್ತ್ರೋಪದೇಶಬಲದಿಂದಲೂ, ಭರನ್ಯಾಸವನ್ನು ಅನುಷ್ಠಿಸುವ ಕಾಲದಲ್ಲಿ ಈ ಮಹಾ ವಿಶ್ವಾಸರೂಪ ಅಂಗವು ಉಂಟಾದರೆ, ಅನಂತರ ಉತ್ತರಕಾಲದಲ್ಲಿ ಆ ಭರನ್ಯಾಸ ಮಹಾತ್ಮ್ಯೆಯಿಂದಲೇ ವಿಮರ್ಶಜ್ಞಾನವು ಉಂಟಾದಾಗ ಅದು ವೃದ್ಧಿಯಾಗುತ್ತದೆಯೇ ವಿನಾ ಸಂಶಯವು ಎಂದಿಗೂ ಉಂಟಾಗಲಾರದೆಂಬ ಭಾವವು. ಪ್ರಪದನ ಕಾಲದಲ್ಲಿ ಮಹಾ ವಿಶ್ವಾಸರೂಪವಾದ ಅಂಗವು ಅತ್ಯಾವಶ್ಯಕವು. ಅದು ಉಂಟಾದ ನಂತರ ಪ್ರಬಲ ಪ್ರಾರಬ್ಧವಶಾತ್ ಈ ಮಹಾ ವಿಶ್ವಾಸವು ನಶಿಸಿ ಹೋಗಲಾರದೋ? ಎಂದರೆ ಹೋಗುವದಿಲ್ಲವೆಂದು ಹೇಳಿದರು, ಅದನ್ನೇ ಮುಂದಿನ ವಾಕ್ಯಗಳಿಂದ ಉಪಪಾದಿಸುತ್ತಾರೆ.—**ಆಗೈಯಾಲ್**-ಆ ಕಾರಣದಿಂದ, **ಪಿನ್ಬು**-ಭರನ್ಯಾಸೋತ್ತರ ಕಾಲದಲ್ಲಿ, **ಒರುಕ್ಕಾಲುಂ**-ಒಂದು ಕಾಲದಲ್ಲಾಗಲಿ, **ಇವ್ವಿಷಯತ್ತಿಲ್**-ಈ ಅಲ್ಪೋಪಾಯವು ನಿರತಿಶಯ ಫಲಕೊಡುವದರಲ್ಲಿ, **ಸಂಶಯಂ ಪಿರಿವಾದಪಡಿಯಾನ**-ಸಂಶಯವು ಉಂಟಾಗದ ಹಾಗೆ ಮಾಡುವ, **ಪ್ರಥಮಕ್ಷಣತ್ತಿಲ್**-ಭರನ್ಯಾಸದ ಮೊದಲಿನ ಕ್ಷಣದಲ್ಲಿ, **ಮಹಾವಿಶ್ವಾಸವು, ಪ್ರಪತ್ತಿಕ್ಕು ಅಜ್ಗಮ್**-ಪ್ರಪದನಕ್ಕೆ ಸಾರಭೂತವಾದ ಅಂಗವು. ಪ್ರಪದನ ಕಾಲದ ಪ್ರಥಮ ಕ್ಷಣದಲ್ಲಿ ಆವಶ್ಯಕವಾದ ಅಂಗವಾದ ಮಹಾ ವಿಶ್ವಾಸವು, ತದು

**ಅಜ್ಞಮ್. ಇದು ಮುಂದಮಾಯಿರುನ್ದಾಲುಂ ವಿಶೇಷಿತ್ತು ಕಟಾಕ್ಷಿಕ್ಕ ತೊಡಂಗಿನ ಈಶ್ವರರ್ ಶೇಷಪೂರಣಂ ಪಣ್ಣುಮ್.**

---

ತ್ತರ ಕಾಲದಲ್ಲಿ ಭರನ್ಯಾಸವು ಕೊಡುವ ಫಲದಲ್ಲಿ ಸಂಶಯವು ಎಂದಿಗೂ ಉಂಟಾಗದ ಹಾಗೆ ಮಾಡುತ್ತದೆ.

ಪ್ರಪದನ ಕಾಲದಲ್ಲಿ ಎಲ್ಲೋ ಸ್ವಲ್ಪಮಟ್ಟಿಗೆ ಈ ಮಹಾ ವಿಶ್ವಾಸವು ಇರಬಹುದು. ಪ್ರಬಲ ಪ್ರಾರಬ್ಧಕರ್ಮವಶದಿಂದ ನಶಿಸಿಹೋಗಲಾರದೋ? ಎಂಬಾಕ್ಷೇಪಕ್ಕೆ **"ಇದು ಮುಂದಮಾಯ್"** ಎಂಬ ವಾಕ್ಯದ ಮೂಲಕ ಸಮಾಧಾನವನ್ನು ಹೇಳುತ್ತಾರೆ. ಈ ವಿಶ್ವಾಸವು ಪ್ರಪದನ ಕಾಲದಲ್ಲಿ ಮುಂದವಾಗಿದ್ದರೂ, ಪ್ರಪನ್ನನು ಸ್ವಾಮಿಗೆ ತುಂಬಾ ಪ್ರಿಯನಾಗುವದರಿಂದ, **"ಲೋಚನಾಭ್ಯಾಂ ಪಿಬನ್ನಿವ"** ಎಂಬಲ್ಲಿ ವಿಭೀಷಣನು ಶ್ರೀರಾಮನಿಂದ ಕಟಾಕ್ಷಿಸಲ್ಪಟ್ಟ ಹಾಗೆ, ಆತನನ್ನು ತನ್ನ ದಿವ್ಯ ಕಟಾಕ್ಷದಿಂದ ಅವಲೋಕಿಸುವದರಿಂದ, ಆತನಿಗೆ ವಿಶ್ವಾಸವು ವೃದ್ಧಿಹೊಂದುತ್ತದೆಯೇ ವಿನಾ ಕ್ಷೀಣವಾಗುವದಿಲ್ಲವೆಂದು ಹೇಳುತ್ತಾರೆ.— **ಇದು**-ಈ ವಿಶ್ವಾಸವು, **ಮುಂದಮಾಯಿರುನ್ದಾಲುಂ**-ಸ್ವಲ್ಪ ಕಮ್ಮಿಯಾಗಿದ್ದರೂ, **ವಿಶೇಷಿತ್ತು ಕಟಾಕ್ಷಿಕ್ಕ ತೊಡಂಗಿನ**-ಯಾವಾಗ ಪ್ರಪನ್ನನಾದರೆ ಆಗ ತನ್ನವನೆಂದು ಭಾವಿಸಿ ಹೆಚ್ಚಾಗಿ ತನ್ನ ದಿವ್ಯ ಕಟಾಕ್ಷದಿಂದ ನೋಡಲುಪಕ್ರಮಿಸಿದ, **ಈಶ್ವರರ್**-ಭಕ್ತವತ್ಸಲನಾದ ಸರ್ವೇಶ್ವರನು, **ಶೇಷಪೂರಣಂ ಪಣ್ಣುಮ್**-ವಿಶ್ವಾಸವು ಸಾಲದೆ ಮುಂದವಾಗಿದ್ದ ನ್ಯೂನತೆಯನ್ನು ಹೋಗಲಾಡಿಸಿ, ಸಂಪೂರ್ಣವಾಗಿ ಮಹಾ ವಿಶ್ವಾಸ ಉಂಟಾಗುವಹಾಗೆ ಮಾಡುವನು. ಇದು ಕೃಪಾಸಾಗರನ ಕಾರ್ಯವು. ಸುಗ್ರೀವನಿಗೆ ಶ್ರೀರಾಮಚಂದ್ರ ಪ್ರಭುವಿನಿಂದ ಪಡೆಯಬಹುದಾದ ಫಲದ ವಿಷಯದಲ್ಲಿ, ಆತನಿಗೆ ನಂಬಿಕೆಯು ಪ್ರಪದನಮಾಡಿದ ಕಾಲದಲ್ಲಿ ಮುಂದವಾಗಿಯೇ ಇತ್ತು. ಅದು ಶ್ರೀರಾಮಕೃಪಯಾ ವೃದ್ಧಿಯನ್ನು ಹೊಂದಿ ಕೊನೆಗೆ **"ಸುಹೃದೋವಾ ಭವದ್ವಿಧಾಃ"** ಎಂದು ಶ್ರೀರಾಮನಿಂದಲೇ ಆತನನ್ನು ಕೊಂಡಾಡುವ ಹಾಗೆ ಪೂರ್ಣತೆಯನ್ನು ಹೊಂದಿತು. ಆದುದರಿಂದಲೇ ಸಮುದ್ರವನ್ನು ದಾಟಿ, ಪರ್ವತಾಗ್ರದಿಂದ ರಾವಣನನ್ನು ನೋಡಿದ ಒಡನೆಯೇ, ಈ ನೀಚನೇ ಸೀತಾ ಚೋರನು ಎಂದು **"ಕ್ರೋಧವೇಗೇನ ಸಂಯುಕ್ತ"** ನಾಗಿ ಅಲ್ಲಿಂದ ರಾವಣನಲ್ಲಿಗೆ ಹಾರಿ, ತಾನು ರಾಮದಾಸನೆಂದು ಹೇಳಿ, ಆತನಮೇಲೆ ಬಿದ್ದು **"ಆಕೃಷ್ಯ ಮುಕುಟಂ ಚಿತ್ರಂ"** ಆತನ ದಿವ್ಯ ಕಿರೀಟವನ್ನು ಕಿತ್ತು ಕೆಳಗೆ ಬೀಳಿಸಿದನು. ಇದು ಮಹಾವಿಶ್ವಾಸವು ವೃದ್ಧಿಯಾಗುತ್ತಾಬಂದ ವ್ಯಾಪಾರಗಳು. ಹಾಗೆಯೇ ವಿಭೀಷಣನಿಗೆ ಭರನ್ಯಾಸ ಕಾಲದಲ್ಲಿ ಸುಗ್ರೀವನಷ್ಟು ಮುಂದವಾಗಿಲ್ಲದಿದ್ದರೂ, ಯಾವಾಗ ಶರಣ್ಯನ ಪಾದಕಮಲಗಳಲ್ಲಿ ವಿಭೀಷಣನು ಬಿದ್ದನೋ, ಆಗ ಆತನನ್ನು ಶ್ರೀರಾಮನು **"ಲೋಚನಾಭ್ಯಾಂ ಪಿಬನ್ನಿವ"** ಎಂದು ಹೇಳಿರುವ ಹಾಗೆ ದಿವ್ಯ

(೧) "**ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ**" ಎನ್ನು

ಕಟಾಕ್ಷದಿಂದ ನೋಡಿ, ಆತನನ್ನು ತಮ್ಮ ಗೋಷ್ಠಿಗೆ ಸೇರಿಸಿಕೊಂಡು "**ಆಖ್ಯಾಹಿ ಮಮತತ್ತ್ವೇನ ರಾಕ್ಷಸಾನಾಂ ಬಲಾಬಲಂ**" ರಾಕ್ಷಸರಾದ ನಿಮ್ಮಗಳ ಬಲಾಬಲಗಳನ್ನು ತಿಳಿಸು ಎಂದು ಕೇಳಲು, ಆತನು ತಮ್ಮವನಾದುದರಿಂದ ರಾಕ್ಷಸರ ಬಲಾಬಲಗಳನ್ನು ತಿಳಿಸು ಎಂದು ಶ್ರೀರಾಮಚಂದ್ರ ಪ್ರಭುವು ಪ್ರಶ್ನಿಸುತ್ತಾರೆ. ಇದರಿಂದ ಮಹಾ ವಿಶ್ವಾಸವು ವೃದ್ಧಿಯನ್ನು ಹೊಂದಿ, ವಿಭೀಷಣನು ಹೇಳುತ್ತಾನೇನೆಂದರೆ—"**ರಾಕ್ಷಸಾನಾಂ ವಧೇಸಾಹ್ಯಂ ಲಂಕಾಯಾಶ್ಚ ಪ್ರಧರ್ಷಣಮ್ । ಕರಿಷ್ಯಾಮಿ ಯಥಾಪ್ರಾಣಂ ಪ್ರವೇಕ್ಷ್ಯಾಮಿ ಚ ವಾಹಿನೀಮ್**" (ರಾ. ಯುದ್ಧ. ೨೧-೨೩) ರಾಕ್ಷಸರ ವಧೆಯಲ್ಲೂ ಲಂಕಾಪುರಿಯ ನಾಶದಲ್ಲೂ ತನಗೆ ಪ್ರಾಣವಿರುವವರೆಗೂ ಸಹಾಯವನ್ನು ಮಾಡುವೆನೆಂದು ಪ್ರತಿಜ್ಞೆಯನ್ನು ಮಾಡುತ್ತಾನೆ. ಇದೆಲ್ಲಾ ಮಹಾವಿಶ್ವಾಸವು ವೃದ್ಧಿಯಾಗುತ್ತಾ ಬಂದುದರ ಮಹಿಮೆಯು.

ಯಾವಾಗ ಮಂದವಿಶ್ವಾಸ ಮೂಲಕವಾಗಿಯಾಗಲಿ ಸರ್ವಭರವನ್ನೂ ಸರ್ವೇಶ್ವರನ ಮೇಲೆ ಹಾಕಿ ಭರನ್ಯಾಸವನ್ನು ಅನುಷ್ಠಿಸಿದನೋ, ಆಗ ಮಿಕ್ಕ ವಿಷಯವೆಲ್ಲಾ ಸರ್ವೇಶ್ವರನಿಗೆ ಸೇರಿದುದಾಗಿ ಸಂಪೂರ್ಣ ವಿಶ್ವಾಸವನ್ನುಂಟುಮಾಡುವ ಭಾರವೂ ಸಹ ಆತನಿಗೆ ಸೇರಿದುದೇ ಎಂಬ ಭಾವವು. ಯಾವಾಗ ಪ್ರಪನ್ನನು ತನ್ನವನಾದನೋ ಆಗ ಆತನನ್ನು ದಿವ್ಯಕಟಾಕ್ಷದಿಂದ ಈಕ್ಷಿಸುವದರ ಮೂಲಕ ಪ್ರಪನ್ನನಿಗೆ ವಿಶ್ವಾಸವು ವೃದ್ಧಿಯಾಗುತ್ತಾ ಪೂರ್ಣತೆಯನ್ನು ಹೊಂದುತ್ತದೆಂಬ ಭಾವವು. ಪ್ರಪನ್ನಾಧಿಕಾರಿಯನ್ನು ಎಂದಿಗೂ ಕೈಬಿಡನೆಂಬ ಭಾವವು. ಮುಂದಿನ ವಾಕ್ಯದಿಂದ ಭಗವದುಕ್ತಿಯನ್ನು ಉದಾಹರಿಸಿ ಈ ಅಭಿಪ್ರಾಯವನ್ನು ಸಮರ್ಥಿಸುತ್ತಾರೆ.—(೧) "**ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ**" ಭರನ್ಯಾಸವನ್ನು ಸರಿಯಾಗಿ ಅನುಷ್ಠಿಸಿ ನನ್ನವನೆಂದು ಹೇಳಿ, ಸರ್ವಭರವನ್ನೂ ನನ್ನಲ್ಲಿಟ್ಟು ಬಂದವನನ್ನು ನಾನು ಎಂದಿಗಾದರೂ ಕೈಬಿಡುವೆನೇ? ನಿರತಿಶಯ ಫಲವನ್ನು ಅಪೇಕ್ಷಿಸಿರುವಾಗ ಅವನ್ನೇ ಕೊಟ್ಟೇತೀರಬೇಕಾಗಿರುವಾಗ ಅದಕ್ಕೆ ಬೇಕಾದ ಮಹಾವಿಶ್ವಾಸವನ್ನು ವೃದ್ಧಿಪಡಿಸುವದೂ ನನಗೇ ಸೇರಿದುದಲ್ಲವೇ ಎಂಬ ಭಾವನೆಯಿಂದ ಈ ಭಗವದ್ವಾಕ್ಯವು ಉದಾಹೃತವು. ಈ ಶ್ಲೋಕವು ಹಿಂದೆಯೇ ಸಾಧ್ಯೋಪಾಯದಲ್ಲೂ ಉದಾಹೃತವು. ಅದರಲ್ಲಿ ಅಡಗಿರುವ ಅಮೋಘಾರ್ಥಗಳ ಉಪಪಾದನೆಗಾಗಿ ೨೩೬೯ ರಿಂದ ೨೩೭೨ ನೆಯ ಪುಟಗಳವರೆಗೂ ನೋಡಿ.

ಇಲ್ಲಿ ಮಿತ್ರಭಾವನೆಯಿಂದ ಭರನ್ಯಾಸವನ್ನನುಷ್ಠಿಸಿದವನನ್ನು ಎಂದಿಗೂ ಕೈಬಿಡುವನಲ್ಲವು ಎಂದು ಹೇಳಿ ಕೊನೆಗೂ ರಕ್ಷಿಸುವೆನೆಂದು ಕಂಕಣಬದ್ಧನಾಗಿರು

---

(೧) ರಾಮಾ. ಯುದ್ಧ. ೧೮-೩.

**ಶರಣ್ಯರ್ ಅರುಳಿಚ್ಚೆಯ್‌ದಾನಿರೇ. ಅಂಜಲ್ಯಾದಿಗಳುಂ ಅಗಪ್ಪಡ (೨) "ನಜಾತುಹೀಯತೇ" ಎನ್ರುಮ್ಪಡಿಯಿರೇ ಇರುಪ್ಪದು.**

ವಾಗ, ಮಂದವಿಶ್ವಾಸವನ್ನು ಮಹಾವಿಶ್ವಾಸವಾಗಿ ವೃದ್ಧಿಯಾಗುವಹಾಗೆ ಮಾಡುವ ಭಾರವೂ ಆತನದಲ್ಲವೇ ? ಇದೂ ಆತನಿಗೆ ಸೇರಿದುದೆಂಬುದು ಕೈಮುತಿಕನ್ಯಾಯಸಿದ್ಧವು. ಆತನನ್ನು ಎಂದಿಗೂ ನಾನು ಕೈಬಿಡುವದಿಲ್ಲವೆಂದು ಹೇಳಿದ ನಂತರ ಅದಕ್ಕೆ ಬೇಕಾದ ಮಹಾವಿಶ್ವಾಸವನ್ನು ಬೆಳೆಸುವೆನು ಎಂದು ಹೇಳಬೇಕೇ ? ಇದು ಕೈಮುತಿಕನ್ಯಾಯಸಿದ್ಧವೆಂಬ ಭಾವವು. ಈ ಕೈಮುತ್ಯಸಿದ್ಧವೆಂದು ಹೇಳಿದುದನ್ನು ಇನ್ನೊಂದಾದ ಆಚಾರ್ಯೋಕ್ತಿಯಿಂದಲೂ ಸಮರ್ಥನೆಯನ್ನು ಮಾಡುತ್ತಾರೆ. ಈ ವಿಶ್ವಾಸವಾದರೂ ಭರನ್ಯಾಸಕ್ಕೆ ಅಂಗವು. ಭರನ್ಯಾಸವನ್ನು ಅಂಗೀಕರಿಸಿದ ವೇಳೆಯಲ್ಲಿ ಅದು ಮಂದವಾಗಿದ್ದರೂ ಅದನ್ನು ಕರುಣಾಮಹೋದಧಿಯು ವೃದ್ಧಿಪಡಿಸಿ ಪೂರ್ಣಮಾಡುವ ಮಾತು ಹಾಗಿರಲಿ; ಅಂಗವೇನೂ ಅಲ್ಲದ ಒಂದು ಅಂಜಲಿಯೇ ಸಾಂಗಪ್ರಪದನದ್ವಾರಾ ಮೋಕ್ಷಪ್ರಾಪ್ತಿಗೆ ಹೇತುವಾಗುವಾಗ, ಮಹಾವಿಶ್ವಾಸವನ್ನುಂಟುಮಾಡಿ ಮುಕ್ತಿಕೊಡನೇ? ಅದು ಕೈಮುತಿಕನ್ಯಾಯಸಿದ್ಧವೆಂದು ಶ್ರೀ ಯಾಮುನೇಯೋಕ್ತಿಯನ್ನು ಉದಾಹರಿಸುತ್ತಾರೆ.– **ಅಂಜಲ್ಯಾದಿಗಳುಂ** - ಅಂಜಲಿಯನ್ನು ಮಾಡುವದು, ಆದಿಪದದಿಂದ ಆತನ ನಾಮ ಸಂಕೀರ್ತನ, ತೀರ್ಥಯಾತ್ರೆ, ದಿವ್ಯಕ್ಷೇತ್ರವಾಸ, ದೀಪಾರೋಪಣ, ಪುಷ್ಪಮಾಲಾ ಸಮರ್ಪಣಾದಿಗಳೆಲ್ಲಾ ಹೇಳಲ್ಪಟ್ಟವು, **ಅಗಪ್ಪಡ**-ಉಂಟಾದುದಾದರೆ, **"ನಜಾತುಹೀಯತೇ"** - ಒಂದು ಕಾಲದಲ್ಲೂ ಫಲಕಾರಿಯಾಗದೇ ಹೋಗುವದಿಲ್ಲವು, **ಎನ್ರುಮ್ಪಡಿಯಿಲೇ**-ಎಂದು ಹೇಳಿರುವ ಹಾಗೆ, **ಇರುಪ್ಪದು**-ಇರುತ್ತದೆ ಎಂದರೆ ಈ ಮಂದವಿಶ್ವಾಸವು ಪೂರ್ಣವಾದ ಮಹಾವಿಶ್ವಾಸವಾಗುತ್ತದೆಂಬುದೂ ಹಾಗೆಯೇ ಇರುತ್ತದೆಂಬ ಭಾವವು. ಈ ಪೂರಾ ಶ್ಲೋಕವು ಯಾವುದೆಂದರೆ?— **"ತ್ವದಂಘ್ರಿಮುದ್ದಿಶ್ಯ ಕದಾಪಿ ಕೇನಚಿದ್ಯಥಾ ತಥಾ ವಾಪಿ ಸಕೃತ್ಕೃತೋಂಜಲಿಃ। ತದೈವ ಮುಷ್ಣಾತ್ಯಶುಭಾನ್ಯಶೇಷತ ಶ್ಶುಭಾನಿಪುಷ್ಣಾತಿ ನ ಜಾತು ಹೀಯತೇ"** ಇದರ ಅರ್ಥವು–**ತ್ವದಂಘ್ರಿಮುದ್ದಿಶ್ಯ**-ಅಶಕ್ತರಾದ ಬ್ರಹ್ಮರುದ್ರಾದಿಗಳನ್ನಾಶ್ರಯಿಸದೇ ಮುಕ್ತಿದಾಯಕನಾದ ನಿನ್ನ ಸರ್ವಲೋಕಶರಣ್ಯವಾಗಿಯೂ, ಸರ್ವಭೋಗ್ಯಾತಿಶಯವಾಗಿಯೂ ಇರುವ ನಿನ್ನ ಪಾದಕಮಲಗಳನ್ನು ಉಪಾಯವಾಗಿಯೂ ಪ್ರಾಪ್ಯವಾಗಿಯೂ ಉದ್ದೇಶಿಸಿ ಎಂದರೆ ಭಾವಿಸಿ, **ಕದಾಪಿ**-ಸುಲಗ್ನ ಸುಮುಹೂರ್ತಗಳು, ಯಜ್ಞಯಾಗಾದಿಗಳು, ಆರಂಭಕ್ಕೆ ಬೇಕಾದ ಹಾಗೆ ಅಲ್ಲದೆ, ಯಾವ ಕಾಲದಲ್ಲೇ ಆಗಲಿ, **ಕೇನಚಿತ್**-ಉಪಾಯಾಂತರವಾದ, ಉಪಾಸನೆಗೆ ತ್ರಿವರ್ಗದವರೇ ಆಗಬೇಕೆಂಬ ನಿಯಮವಿಲ್ಲದೆ ಅವರಿಗೂ ಸ್ತ್ರೀ ಶೂದ್ರ ಚಂಡಾಲರೇ

---

(೨) ಸ್ತೋತ್ರರತ್ನ ೨೮.

ಆಗಲಿ, ಹೀಗೆ ಯಾರಿಂದಲಾಗಲಿ, **ಯಥಾತಥಾವಾಪಿ** ಸರಿಯಾಗಿ ಅಂಜಲಿ ರಚನೆಯು ತಿಳಿಯದೇಯಾಗಲಿ ಅಥವ ಅಂಗವೈಕಲ್ಯದಿಂದೇ ಆಗಲಿ, ಹೇಗೆ ಆಗಲಿ, **ಸಕೃತ್ಕೃತೋಂಜಲಿಃ**-ಉಪಾಸನಕ್ಕೆ ಬೇಕಾದಹಾಗೆ ಆವೃತ್ತಿ ಬೇಕಾಗದೆ ಒಂದು ಸಲ ಮಾಡಿದ ಅಂಜಲಿಯು, **"ವಸಂತೇ ವಸಂತೇ ಜ್ಯೋತಿಷಾ ಯಜೇತ"** ಎಂಬಲ್ಲಿ ಪ್ರತಿ ವಸಂತರ್ತುವಿನಲ್ಲೂ ಮಾಡಬೇಕೆಂದಿರುವುಗಳ ಹಾಗೆ ಅಲ್ಲದೆ, ಪ್ರತಿ ಧನುರ್ಮಾಸದಲ್ಲೂ ಮಾಡಬೇಕೆಂದಿರುವ ಆರಾಧನೆಯ ಹಾಗೂ ಅಲ್ಲದೆ, ಒಂದುಸಲ ಮಾತ್ರ ಮಾಡಿದ ಅಂಜಲಿಬಂಧವು, ಹೀಗೆ ಹೇಳಿದುದು ಸ್ಮರಣ, ನಾಮಸಂಕೀರ್ತನ, ಸಮ್ಮಾರ್ಜನ, ಮಾಲಾಕರಣ, ದೀಪಾರೋಪಣ, ಮೊದಲಾದ ನಾನಾವಿಧ ಕೈಂಕರ್ಯಕ್ಕೂ ಉಪಲಕ್ಷಣವು, ಆದರೆ ಕೆಲವುಗಳಲ್ಲಿ ದೇಹಾಯಾಸವೂ, ಇನ್ನೂ ಕೆಲವುಗಳಲ್ಲಿ ದ್ರವ್ಯವ್ಯಯವೂ ಉಂಟು; ಈ ಅಂಜಲಿಯನ್ನು ಸಕೃತ್ ಮಾಡುವದರಲ್ಲಿ ಇಂತಹ ಕಷ್ಟಗಳೇನೂ ಇಲ್ಲವೆಂಬ ಭಾವವು. ಆದುದರಿಂದ ಮೇಲೆ ಹೇಳಿದವುಗಳಿಗಿಂತ ಸುಕರವು ಮತ್ತು ನಿರತಿಶಯ ಫಲದಾಯಕವೆಂಬ ಭಾವವು. ಆದುದರಿಂದಲೇ ಮಹಾ ಪ್ರಾಜ್ಞನಾದ ಆಂಜನೇಯನು ಸುಗ್ರೀವನಿಗೆ ಲಕ್ಷ್ಮಣನ ಕೋಪೋಪಶಮನಕ್ಕಾಗಿಯೂ, ಶ್ರೀ ರಾಮಚಂದ್ರ ಸನ್ನಿಧಿಯಲ್ಲಿ ಮಾಡಿದ ಅಪರಾಧಕ್ಕಾಗಿಯೂ ಅಂಜಲಿಬಂಧವು ಒಳ್ಳೇ ಉಪಾಯವೆಂದು ಹೇಳಿರುತ್ತಾನೆ:–**"ಕೃತಾಪರಾಧಸ್ಯ ತೇ ನಾನ್ಯತ್ಪಶ್ಯಾಮ್ಯಹಂ ಕ್ಷಮಮ್। ಅಂತರೇಣಾಂಜಲಿಂ ಬದ್ಧ್ವಾ ಲಕ್ಷ್ಮಣಸ್ಯ ಪ್ರಸಾದನಾತ್"** ಎಂಬದಾಗಿ, ಇಂತಹ ಅಂಜಲಿಬಂಧವು, **ತದೈವ**-ಅಂಜಲಿಮಾಡಿದ ಉತ್ತರಕ್ಷಣದಲ್ಲೇ, **ಅಶುಭಾನಿ**-ಸಮಸ್ತ ಬಂಧಕ ಪುಣ್ಯಪಾಪಗಳನ್ನು, **ಅಶೇಷತಃ**-ಸ್ವಲ್ಪವೂ ಉಳಿಯದ ಹಾಗೆ, ನಿಶ್ಶೇಷವಾಗಿ. **ಮುಷ್ಣಾತಿ**-ಅಪಹರಿಸುತ್ತದೆ, ಕೃಚ್ಛ್ರ ಚಾಂದ್ರಾಯಣಾದಿ ಪ್ರಾಯಶ್ಚಿತ್ತಗಳು ನಿಯತ ಪಾಪಗಳನ್ನು ಮಾತ್ರ ಹೋಗಲಾಡಿಸಬಲ್ಲವು. ಇದು ಹಾಗಲ್ಲದೆ ಎಲ್ಲವನ್ನೂ ಹೋಗಲಾಡಿಸುತ್ತದೆಂಬ ಭಾವವು. ಇಷ್ಟುಮಾತ್ರವೇ ಅಲ್ಲವು. **ಶುಭಾನಿಪುಷ್ಣಾತಿ** - ಶ್ರೇಯಸ್ಸುಗಳನ್ನು ಉಂಟುಮಾಡಿ ಸಾಧನಾನುಷ್ಠಾನದ್ವಾರಾ ಮುಕ್ತಿಯವರೆಗೂ ಬೇಕಾದುವನ್ನೆಲ್ಲಾ ಸಾಧಿಸಿಕೊಡುತ್ತದೆ, **ನಜಾತುಹೀಯತೇ**-**"ಸ್ವಲ್ಪಮಪ್ಯಸ್ಯಧರ್ಮಸ್ಯ ತ್ರಾಯತೇ ಮಹತೋ ಭಯಾತ್"** (ಗೀ. ೨-೪೦.) ಎಂದು ಹೇಳಿರುವ ಹಾಗೆ, ಎಂದಿಗೂ ಆ ಅಂಜಲಿಯು ನಿರರ್ಥಕವಾದುದು ಆಗುವದಿಲ್ಲವು. ಈ ಸಂದರ್ಭದಲ್ಲಿ **"ಸಕೃತ್ಸ್ಮೃತೋಪಿ ಗೋವಿಂದೋ ನೃಣಾಂ ಜನ್ಮಶತೈಶ್ಚಿತಮ್ । ಪಾಪರಾಶಿಂ ದಹತ್ಯಾಶು ತೂಲರಾಶಿ ಮಿವಾನಲಃ । ಸಕೃದುಚ್ಚಾರಿತಂ ಯೇನ ಹರಿರಿತ್ಯಕ್ಷರದ್ವಯಮ್ ! ಬದ್ಧಃ ಪರಿಕರಸ್ತೇನ ಮೋಕ್ಷಾಯ ಗಮನಂ ಪ್ರತಿ"** ಎಂದರೆ "ಒಂದು ಸಲ ಗೋವಿಂದ ಸ್ಮರಣೆಯು ಅನೇಕ ಜನ್ಮಸಂತತಿಯಲ್ಲೂ ಮಾಡಿದ ಪಾಪರಾಶಿಯನ್ನೆಲ್ಲಾ ಅಗ್ನಿಯು ಹತ್ತಿಯರಾಶಿಯನ್ನೆಲ್ಲಾ ದಹಿಸುವಹಾಗೆ ಹೋಗಲಾಡಿಸುತ್ತದೆ.

ಹಾಗೆಯೇ **ಹರಿಃ** ಎಂಬೆರಡಕ್ಷರವನ್ನು ಒಂದಾವರ್ತಿ ಉಚ್ಚರಿಸೋಣವು ಮೋಕ್ಷವನ್ನು ಕುರಿತು ಹೋಗುವದಕ್ಕಾಗಿ ಸೊಂಟಕ್ಕೆ ಕಟ್ಟಿದ ದಟ್ಟಿಯಹಾಗೆ ಎಂದು ಭಾವಿಸತಕ್ಕದ್ದು" ಎಂಬಿವು ಅನುಸಂಧೇಯಗಳು. ಆ ಅಂಜಲಿಯಿಂದ ಸರ್ವೇಶ್ವರನು ಪ್ರೀತನಾದರೆ ಮೋಕ್ಷದವರೆಗೆ ಸರ್ವಶ್ರೇಯಸ್ಸೂ ಉಂಟಾಗುತ್ತದೆ. **"ತಸ್ಮಿನ್ ಪ್ರಸನ್ನೇಕಿಮಿಹಾಸ್ತ್ಯಲಭ್ಯಂ"** (ವಿ. ಪು.        ) ಎಂಬ ಪರಾಶರೋಕ್ತಿಯ ಹಾಗೆ ಮೋಕ್ಷವೂ ಕೂಡ ಲಭಿಸಬಹುದೆಂಬ ಭಾವವು. **"ಅಂಜಲಿಃ ಪರಮಾ ಮುದ್ರಾ"** ಎಂದು ಶ್ಲಾಘಿಸಲ್ಪಟ್ಟ **"ಕ್ಷಿಪ್ರಂದೇವಪ್ರಸಾದನೀ"** ಬಹಳಕಾಲ ನಿರೀಕ್ಷಣೆ ಇಲ್ಲದೆ ಬೇಗ ಸರ್ವೇಶ್ವರಾನುಗ್ರಹವನ್ನು ಸಾಧಿಸಿಕೊಡುತ್ತದೆಂದು ಹೇಳಲ್ಪಟ್ಟಿದೆ. ಈ ಅಂಜಲಯೇನು ಸಾಕ್ಷಾದುಪಾಯವೇ ಅಲ್ಲವೇ ಎಂಬ ವಿವೇಚನೆಯಲ್ಲಿ ನಮಸ್ಕಾರವಾಗಲಿ ಅಂಜಲಿಯಾಗಲಿ ಭರಸಮರ್ಪಣದೊಂದಿಗೆ ನಡೆದಿದ್ದ ಪಕ್ಷದಲ್ಲಿ ಮೋಕ್ಷೋಪಾಯವಾಗುವದರಲ್ಲೇನೂ ಸಂದೇಹವಿಲ್ಲವು. ಬಹುಶಃ ಭರಸಮರ್ಪಣೆಯೊಂದಿಗೆ ಮಾಡಿದುದೆಂಬ ಭಾವನೆಯಿಂದ **ಸಕೃತ್ಕೃತೋಽಂಜಲಿಃ** ಎಂಬ ಪ್ರಯೋಗವಾಗಿರಬಹುದು. ಹಾಗೆ ಭರಸಮರ್ಪಣೆಯಿಂದ ಕೂಡಿದುದಲ್ಲವಾದರೆ ಸಾಕ್ಷಾತ್ತಾಗಿ ಮೋಕ್ಷಹೇತುವಲ್ಲವು. **ವ್ಯವಹಿತಸಾಧನ** ವೆಂದು ಭಾವಿಸತಕ್ಕದ್ದು. ಈ ಅಂಜಲಿಯು ಪರಮಾತ್ಮನ ಪ್ರಸನ್ನತೆಯನ್ನುಂಟು ಮಾಡುವದರ ಮೂಲಕ ಸಾಧುಸಮಾಗಮ, ಗುರೂಪಸದನ, ಉಪಾಯಾನುಷ್ಠಾನ ಹೀಗೆ ಕ್ರಮವಾಗಿ ಶ್ರೇಯಃಪರಂಪರೆಗಳನ್ನುಂಟುಮಾಡಿ ಮುಕ್ತಿದಾಯಕವು. ಕೆಲವರು ಅಂಜಲಿಗೆ ಇಷ್ಟುಮಾಹಾತ್ಮ್ಯೆಯನ್ನು ಹೇಳುವದು ಅತಿಶಯೋಕ್ತಿಎಂದು ಭಾವಿಸುವರು. ಇದು ಶಾಸ್ತ್ರಜ್ಞಾನ ನ್ಯೂನತೆಯ ವೈಭವವು. ಇನ್ನು ಕೆಲವರು ಈ ಅಂಜಲಿಯೇ ಸಾಕ್ಷಾದುಪಾಯವಾಗಿ ಅವ್ಯವಹಿತವಾದ ಉಪಾಯವೆಂದು ಭಾವಿಸುವರು. ಇಂತಹ ಭಾವನೆಯೀಗ ಅತಿಶಯೋಕ್ತಿಯೆಂದು ಹೇಳಬಹುದು. ಹಾಗೆ ಭಾವಿಸಿದರೆ **"ಭಕ್ತ್ಯಾಪರಮಯಾವಾಪಿ ಪ್ರಪತ್ತ್ಯಾವಾ ಮಹಾಮತೇ। ಪ್ರಾಪ್ಯೋಹಮ್ ನ್ಯಾನ್ಯಥಾಪ್ರಾಪ್ಯಃ"** ಎಂಬ ಪ್ರಮಾಣಕ್ಕೆ ವಿರುದ್ಧವಾದುದಾಗುತ್ತದೆ. ಫಲಾನ್ತರ ಪ್ರಯೋಜನವನ್ನು ಪ್ರಾರ್ಥಿಸುವನಿಗೆ ಅದನ್ನೂ ಈ ಅಂಜಲಿಯು ಕೊಡಬಲ್ಲದು. ಅಂತಹ ಫಲಾಪೇಕ್ಷೆಯಿಲ್ಲದವನಿಗೆ ಉಪಾಯಕ್ಕೆ ಸಾಧನವಾಗಿ ಮುಕ್ತಿಪ್ರಾಪ್ತಿಯುಂಟಾಗುವವರೆಗೂ ಸಹಕಾರಿಯಾಗುತ್ತದೆ ಈ ಅಂಜಲಿಗೆ ಕಾಲನಿಯಮವಾಗಲಿ ದೇಶನಿಯಮವಾಗಲಿ ಇಲ್ಲವೆಂದೂ, ವರ್ಣಾಶ್ರಮಾದಿಗಳ ಮತ್ತು ಉತ್ಕೃಷ್ಟ ನಿಕೃಷ್ಟ ಜಾತಿಗುಣಾದಿಗಳ ನಿಯಮವಾಗಲಿ ಬೇಕಿಲ್ಲವೆಂದೂ, ಇದಕ್ಕೆ ಆ ವೃತ್ತಿಯೂ ಬೇಕಿಲ್ಲವೆಂದೂ, ಕ್ಷಿಪ್ರಾನುಗ್ರಹದಾಯಕವೆಂದೂ, ಸರ್ವಪಾಪನಾಶಕವೆಂದೂ, ಕೊನೆಗೆ ನಿರತಿಶಯ ಫಲದಾಯಕವೆಂದೂ ಈ ಶ್ಲೋಕದಲ್ಲಿ ಹೇಳಲ್ಪಟ್ಟಿತು. ವಿಶೇಷ ಭಾವನೆಗಳನ್ನು ಪರಿಶೀಲಿಸಿ ತಿಳಿಯ ಬೇಕೆಂಬ ಅಪೇಕ್ಷೆಯುಳ್ಳವರು ಶ್ರೀ ನಿಗಮಾಂತರವರ **"ಅಂಜಲಿವೈಭವ"** ವೆಂಬ

**ಆಗೈಯಾಲ್ ಮಂದವಿಶ್ವಾಸಮುಮ್ ಮಹಾವಿಶ್ವಾಸಪರ್ಯಂತಮಾಮ್.**

೨೩ನೆಯ ಚಿಲ್ಲರೆ ರಹಸ್ಯವನ್ನು ಪರಾಂಬರಿಸತಕ್ಕದ್ದು. ಸಾಕ್ಷಾತ್ತಾಗಿ ಉಪಾಯ ಗಳು ಎಂದರೆ ಅವ್ಯವಹಿತೋಪಾಯಗಳು ಎರಡೇ (೧) ಉಪಾಸನೆ (೨) ಭರನ್ಯಾಸ ವೆಂದು ಜ್ಞಾಪಕದಲ್ಲಿಡತಕ್ಕದ್ದು. "**ಪ್ರಪನ್ನಶ್ಚ ದ್ವೇಧಾ**" ಎಂಬ ಉಕ್ತಿಯು ಅನುಸಂಧೇಯವು. "**ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಮ್ । ಕಲೇರ್ದೋಷನಿಧೇ ರಾಜನ್ನಸ್ತಿ ಹ್ಯೇಕೋ ಮಹಾನ್ಗುಣಃ । ಕೀರ್ತನಾದೇವ ಕೃಷ್ಣಸ್ಯ ಮುಕ್ತಬಂಧಃ ಪರಂವ್ರಜೇತ್**" ಎಂಬಲ್ಲಿಯೂ **ಕೀರ್ತನಾದೇವ** ಎಂದು ಏವಕಾರವಿದ್ದರೂ ಸಾಕ್ಷಾದುಪಾಯವಲ್ಲವು. ಕಲಿಯುಗ ದಲ್ಲಿ ಕೇಶವಸಂಕೀರ್ತನವು ಮಹತ್ತಾದುದು, ಅದು ಕೃಷ್ಣಾನುಗ್ರಹವನ್ನು ನಿಸ್ಸಂಶಯವಾಗಿ ಉಂಟುಮಾಡುವದರ ಮೂಲಕ ಉಪಾಯಾನುಷ್ಠಾನಕ್ಕೆ ಸಾಧನವಾಗದೇ ಎಂದಿಗೂ ಇರುವದಿಲ್ಲವೆಂಬುದರಲ್ಲಿ ಆ ಶ್ಲೋಕಕ್ಕೆ ತಾತ್ಪರ್ಯವು. ಹಾಗೆಯೇ ಸ್ಮರಣ, ಭಗವತ್ಕಥಾಶ್ರವಣ, ತೀರ್ಥಯಾತ್ರೆ, ಪುಣ್ಯಕ್ಷೇತ್ರವಾಸ, ದೀಪಾರೋಪಣ, ಮಾಲಾಕರಣ ಮೊದಲಾದ ಕೈಂಕರ್ಯಗಳೆಲ್ಲಾ ಉಪಾಯಕ್ಕೆ ಸಾಧನಗಳೆಂದು ಭಾವಿಸತಕ್ಕದ್ದು. ಆದುದರಿಂದ ವಿಶ್ವಾಸದಲ್ಲಿ ಸ್ವಲ್ಪ ನ್ಯೂನತೆಯು ಭರನ್ಯಾಸಕಾಲದಲ್ಲಿದ್ದರೂ, ಭಗವತ್ಕೃಪೆಯಿಂದ ಅದು ವೃದ್ಧಿಹೊಂದಿ ಕಾರ್ಯಕಾರಿ ಯಾಗದೇ ಇರುವದಿಲ್ಲವೆಂದು ಉಪದೇಶಿಸಿದರು. ಆದುದರಿಂದ ನಿಗಮನಮಾಡಿ ಹೇಳುತ್ತಾರೆ. ವಿಶ್ವಾಸವು ಮಂದವಾಗಿತ್ತೆಂದು ಸರ್ವೇಶ್ವರನು ಕೈಬಿಡುವದಿಲ್ಲವು; ಅದರಲ್ಲಿ ಸಂಶಯವು ಬೇಕಿಲ್ಲವು; ಆತನ ಕೃಪಾಪ್ರಭಾವ ಮಹಿಮೆಯು ಆ ಮಂದವಿಶ್ವಾಸವನ್ನು ಮಹಾವಿಶ್ವಾಸಪರ್ಯಂತವಾಗಿ ವೃದ್ಧಿಹೊಂದಿಸುವದೆಂದು ಹೇಳುತ್ತಾರೆ. **ಆಗೈಯಾಲ್**-ಆ ಕಾರಣದಿಂದ ಮಂದವಿಶ್ವಾಸವೂ, **ಮಹಾ ವಿಶ್ವಾಸಪರ್ಯನ್ತಮಾಮ್**-ಮಹಾವಿಶ್ವಾಸ ಪರ್ಯನ್ತವೂ ವೃದ್ಧಿಹೊಂದುತ್ತದೆ ಎಂಬ ಭಾವವು.

ಹಿಂದೆ ಸಾಙ್ಗಪ್ರಪದನಾಧಿಕಾರದಲ್ಲಿ ಭರನ್ಯಾಸವು "**ಯಾಚ್ಞಾನ್ವಿತಂ**" ಉಪಾಯವಾಗಿರು ಎಂಬ ಪ್ರಾರ್ಥನೆಯಿಂದ ಕೂಡಿದುದು ಎಂದು ತೀರ್ಮಾನಮಾಡಿ, ಇದಕ್ಕೆ ಭರತಮುನಿವಾಕ್ಯವಾದ "**ಅನನ್ಯಸಾಧ್ಯೇ**" ಎಂಬಲ್ಲೂ "**ತ್ವಮೇವೋ ಪಾಯಭೂತೋ ಮೇ ಭವೇತಿಪ್ರಾರ್ಥನಾಮತಿಃ**" ಎಂಬ ಅಹಿರ್ಬುಧ್ನ್ಯ ವಾಕ್ಯವನ್ನೂ ಉದಾಹರಿಸಿದ್ದರು. ಈಗ **ಪ್ರಪದ್ಯೇ** ಎಂಬುದು ಅಂತಹ ಅಭಿ ಬೋಧಕಶಬ್ದವಾದರೆ, ಅದರಲ್ಲಿ ಮಹಾವಿಶ್ವಾಸವು ಬೋಧಿತವೆಂದೇನೋ ಉಪಪಾ ದಿಸಿದ್ದಾಯಿತು. ಆದರೆ **ತದೇಕೋಪಾಯತಾಯಾಚ್ಞಾ**-ನೀನು ಉಪಾಯ ನಾಗಿರು ಎಂಬ ಪ್ರಾರ್ಥನೆಯು ತೋರಿಬರುತ್ತದೆಯೋ ಎಂದು ಆಕ್ಷೇಪಿಸಿದರೆ, **ಶರಣ**-ಶಬ್ದದೊಡನೆ ಸೇರಿಸಿ, **ಶರಣಂಪ್ರಪದ್ಯೇ**-ಎಂಬ ಪ್ರಯೋಗದಿಂದ

**ಇಪ್ಪಡಿ ಉಪಾಯಮಾಗ ಅಧ್ಯವಸಿಕ್ಕಿರೇನೆನ್ರು ಮಹಾವಿಶ್ವಾಸತ್ತೈ ಚ್ಚೊಲ್ಲಿ । (೧) " ಅನನ್ಯಸಾಧ್ಯೇಸ್ವಾಭೀಷ್ಟೇ ಮಹಾವಿಶ್ವಾಸಪೂರ್ವಕಮ್ । ತದೇಕೋಪಾಯತಾಯಾಚ್ಞಾ ಪ್ರಪತ್ತಿಶ್ಶರಣಾಗತಿಃ " (೨) " ತ್ವಮೇವೋಪಾಯಭೂತೋಮೇ ಭವೇತಿ ಪ್ರಾರ್ಥನಾಮತಿಃ । ಶರಣಾಗತಿರಿತ್ಯುಕ್ತಾ " (೩) " ಭವಶರಣಮ್ " ಇತ್ಯಾದಿ ಪ್ರಮಾಣಾನುಸಾರತ್ತಾಲೇ ಪ್ರಾರ್ಥನೈಯುಮ್ ಇಙ್ಗೇ ಶೊಲ್ಲಿತ್ತಾಯಿತ್ತು.**

## ಉಪಾಯಪ್ರಾರ್ಥನಾಯಾಂ ಗೋಪ್ತೃತ್ವವರಣಮ್ ಅಂತರ್ಗತಮ್

**ಇವ್ವುಪಾಯಪ್ರಾರ್ಥನೆಯಿಲೇ ಗೋಪ್ತೃತ್ವವರಣಮ್ ಅಂತರ್ಗತಂ ಪೃಥಗ್ಭೂತಮನ್ರು.**

---

ಪ್ರಾರ್ಥನೆಯೂ ತೋರಿಬರುತ್ತದೆಂದು ಹೇಳುತ್ತಾರೆ.-**ಇಪ್ಪಡಿ**-ಹೀಗೆ ವಿಶ್ವಾಸದೊಂದಿಗೆ, **ಅಧ್ಯವಸಿಕ್ಕಿರೇನ್ ಎನ್ರು**-ನಿಶ್ಚಯಿಸಿರುತ್ತೇನೆಂದು, **ಮಹಾವಿಶ್ವಾಸತ್ತೈಚ್ಚೊಲ್ಲಿ**-ಯಾವಾಗ ಸಂಪೂರ್ಣ ನಂಬಿಕೆಯು ಹೇಳಲ್ಪಟ್ಟಿತೋ, ಆಗ, **" ಅನನ್ಯಸಾಧ್ಯೇಸ್ವಾಭೀಷ್ಟೇ "** ಎಂಬ ಭರತಮುನಿವಾಕ್ಯದಲ್ಲೂ, **" ತ್ವಮೇವೋಪಾಯಭೂತೋಮೇ "** ಎಂಬ ಅಹಿರ್ಬುಧ್ನ್ಯಸಂಹಿತಾ ವಾಕ್ಯದಲ್ಲೂ, ಮತ್ತು **" ಭವಶರಣಮ್ "** ಎಂಬ ವಿಷ್ಣುಪುರಾಣ ವಾಕ್ಯದಲ್ಲೂ, **ಇತ್ಯಾದಿಪ್ರಮಾಣಾನುಸಾರತ್ತಾಲೇ**-ಇವೇ ಮೊದಲಾದ ಪ್ರಮಾಣಗಳಿಗನುಸಾರವಾಗಿ, **ಪ್ರಾರ್ಥನೆಯುಮ್**-ನೀನು ಉಪಾಯನಾಗಿರಬೇಕೆಂಬ ಪ್ರಾರ್ಥನೆಯೂ, **ಇಙ್ಗೇ**-ಈ, **ಪ್ರಪದ್ಯೇ**-ಎಂಬ ಪದದಲ್ಲಿ, **ಶೊಲ್ಲಿತ್ತಾಯಿತ್ತು**-ಹೇಳಿದಂತೆ ಆಯಿತು, **ಶರಣಂಪ್ರಪದ್ಯೇ**-ಮಹಾವಿಶ್ವಾಸದಿಂದ ಉಪಾಯವಾಗಿ ಹೊಂದಿರುತ್ತೇನೆ ಎಂದರೆ ನೀನು ಉಪಾಯವಾಗಬೇಕು ಎಂಬ ಪ್ರಾರ್ಥನೆಯನ್ನೇ ಬೋಧಿಸುತ್ತದೆ ಎಂಬ ತಾತ್ಪರ್ಯವು. ಈ ಭರತಮುನಿ, ಅಹಿರ್ಬುಧ್ನ್ಯಸಂಹಿತಾ ವಾಕ್ಯಗಳ ಅರ್ಥೋಪಪಾದನೆಗಳಿಗೆ ೧೦೫೩-೪ನೆಯ ಪುಟಗಳನ್ನು ವಿಷ್ಣುಪುರಾಣದ **" ಭವಶರಣಂ "** ಎಂಬ ಶ್ಲೋಕಕ್ಕೆ ೧೫೦೮-೯ ನೆಯ ಪುಟಗಳನ್ನೂ ಪರಾಂಬರಿಸಿ.

## ಉಪಾಯಪ್ರಾರ್ಥನೆಯಲ್ಲಿ ಗೋಪ್ತೃತ್ವವರಣವು ಅಂತರ್ಗತವು

**ಇವ್ವುಪಾಯಪ್ರಾರ್ಥನೆಯಿಲೇ**-ಪ್ರಪದ್ಯೇ ಎಂಬಲ್ಲಿರುವ ಧಾತುಪ್ರತ್ಯಯಗಳಿಂದ ತೋರಿಬರುವ ಉಪಾಯದ ಪ್ರಾರ್ಥನೆಯಲ್ಲೇ, **ಗೋಪ್ತೃತ್ವವರಣಮ್**-ಪ್ರಪತ್ತಿಯ ಅಂಗವಾದ ಸಂರಕ್ಷಿಸಬೇಕೆಂಬ ಪ್ರಾರ್ಥನೆಯೂ ಕೂಡ, **ಅಂತರ್ಗತಂ**-ಅಡಗಿರುತ್ತದೆ. ಉಪಾಯಪ್ರಾರ್ಥನೆಯು ಎಂತಹದ್ದೆಂದರೆ ಉಪಾಸನೆಯ ಸ್ಥಾನದಲ್ಲಿ ನಿಂತು ನನ್ನ ತಲೆಯಲ್ಲಿ ಯಾವ ಭಾರವನ್ನೂ ಹಾಕದೇ ಸರ್ವಭರವನ್ನೂ ನೀನೇ ವಹಿಸತಕ್ಕದ್ದೆಂಬ ಪ್ರಾರ್ಥನೆಯನ್ನು **ಪ್ರಪದ್ಯೇ**-ಎಂಬ ಪದವು ಬೋಧ

## ಪ್ರಪದ್ಯೇ ಇತ್ಯತ್ರ ಪ್ರಾರ್ಥನೀಯಾಂಶ ನಿರ್ಧಾರಣಮ್

**ಇಷ್ಟಪ್ರಾಪ್ತ್ಯನಿಷ್ಟನಿವೃತ್ತಿರೂಪಮಾನ ಫಲತ್ತಿನುಡೈಯ ಪ್ರಾರ್ಥನೈಯೈ ಉತ್ತರಖಂಡತ್ತಿಲೇ ಪಣ್ಣಾನಿರ್ಕ ಇಙ್ಗು ಫಲಪ್ರಾರ್ಥನೈಯೈಪಣ್ಣಿನಾಲ್ ಪುನರುಕ್ತಿಯುಂಡಾಮ್. ಪ್ರಪತ್ತಿಕ್ಕುಫಲಮಾಗ ಭಕ್ತಿರೂಪೋಪಾಯತ್ತೈ ಪ್ರಾರ್ಥಿಕ್ಕುಮಾಪ್ಪೋಲೆ ಸ್ವತಂತ್ರಪ್ರಪತ್ತಿನಿಷ್ಠನುಕ್ಕು ಇಙ್ಗು**

---

ಸುತ್ತದೆ ಎಂದಾಯಿತೋ ಆಗ ರಕ್ಷಣಾಭರವನ್ನು ನೀನೇ ವಹಿಸತಕ್ಕದ್ದೆಂಬ ಪ್ರಾರ್ಥನೆಯೂ ಅವರಲ್ಲೇ ಅಡಗಿರುತ್ತದೆಂಬ ಭಾವವು. ಆದುದರಿಂದ **ಪೃಥಗ್ಭೂತಮನ್ರು**-ಆ ಉಪಾಯಪ್ರಾರ್ಥನೆಗಿಂತ ಗೋಪ್ತೃತ್ವವರಣವು ಬೇರೆಯಾದುದಲ್ಲವೆಂಬ ಭಾವವು.

ಆದರೆ ಗೋಪ್ತೃತ್ವವರಣವೂ ಈ ಉಪಾಯ ಪ್ರಾರ್ಥನೆಯಲ್ಲಿ ಅಂತರ್ಗತವೆಂದು ಭಾವಿಸಿದರೆ ದ್ವಯದ ಉತ್ತರಖಂಡಾಭಿಪ್ರಾಯವೂ ರಕ್ಷಣ ಮತ್ತು ನಿತ್ಯಕೈಂಕರ್ಯಪ್ರಾಪ್ತಿಫಲವನ್ನೇ ಬೋಧಿಸುವದರಿಂದ ಅದರೊಂದಿಗೆ ಪುನರುಕ್ತಿಯಾಗುವದಿಲ್ಲವೇ ? ಎಂಬ ಪೂರ್ವಪಕ್ಷವು ಉದಯಿಸಬಹುದು. ಪೂರ್ವಪಕ್ಷವೇ ಮುಂದೆ ಮೂಲದಲ್ಲೇ ಉಪಪಾದಿಸಿ ಅವಕ್ಕೆ ಸಮಾಧಾನವನ್ನು ಹೇಳುತ್ತಾರೆ.

ಪ್ರಪದ್ಯೇ ಎಂಬಲ್ಲಿ ಪ್ರಾರ್ಥನೆಯು ಯದ್ರೂಪವಾದುದೆಂಬುದರ ನಿಷ್ಕರ್ಷೆಯು

---

**ಇಷ್ಟಪ್ರಾಪ್ತ್ಯನಿಷ್ಟನಿವೃತ್ತಿರೂಪಮಾನ ಫಲತ್ತಿನುಡೈಯಪ್ರಾರ್ಥನೈಯೈ**-ಮೋಕ್ಷದಶೆಯಲ್ಲಿ ಭಗವತ್ಕೈಙ್ಕರ್ಯರೂಪ ಇಷ್ಟಪ್ರಾಪ್ತಿ ಮತ್ತು ಸರ್ವಪುಣ್ಯಪಾಪಗಳ ಅನಿಷ್ಟಗಳ ನಿವೃತ್ತಿರೂಪವಾದ ಫಲದ ಪ್ರಾರ್ಥನೆಯು, **ಉತ್ತರಖಂಡತ್ತಿಲೇ**-ದ್ವಯದ ಉತ್ತರಖಂಡದಲ್ಲಿ, **ಪಣ್ಣಾನಿರ್ಕ**-ಮಾಡುತ್ತಿರುವಾಗ, **ಇಙ್ಗು**-ಈ ಪೂರ್ವಖಂಡದಲ್ಲಿರುವ **" ಪ್ರಪದ್ಯೇ "** ಎಂಬಲ್ಲಿ, **ಫಲಪ್ರಾರ್ಥನೈಯೈ**-ಗೋಪ್ತೃತ್ವವರಣದಲ್ಲಿ ತೋರುವ, **ಫಲಪ್ರಾಥನೈಯೈ**-ಫಲಪ್ರಾರ್ಥನೆಯನ್ನು, **ಪಣ್ಣಿನಾಲ್**-ಮಾಡಿದರೆ, **ಪುನರುಕ್ತಿಯುಂಡಾಮ್**-ಪುನರುಕ್ತಿಯುಂಟಾಗುತ್ತದೆಂಬುದು ಆಕ್ಷೇಪವು; ಇದಕ್ಕೆ ಸಮಾಧಾನವಾಗಿ ಉಪಾಸನವನ್ನು ಸಾಧಿಸಿಕೊಡುವ ಅಙ್ಗಪ್ರಪದನವು ಹೇಗೋ ಹಾಗೆ ಎಂದೇನಾದರೂ ಹೇಳಿದರೆ, ಪ್ರಪತ್ತಿಯಿಂದ ಈ ಭರನ್ಯಾಸದಲ್ಲಿ ಸಾಧಿಸತಕ್ಕದ್ದು ಏನೂ ಇಲ್ಲವೆಂದು ಮುಂದೆ ಹೇಳುತ್ತಾರೆ.—**ಪ್ರಪತ್ತಿಕ್ಕುಫಲಮಾಗ**-ಅಙ್ಗರೂಪಶರಣಾಗತಿಗೆ ಫಲವಾಗಿ, **ಭಕ್ತಿರೂಪೋಪಾಯತ್ತೈ**-ಉಪಾಸನರೂಪ ಉಪಾಯವನ್ನು, **ಪ್ರಾರ್ಥಿಕ್ಕುಮಾಪ್ಪೋಲೆ**-ಹೇಗೆ ಸಾಧಿಸಿ ಕೊಡುತ್ತದೋ, ಅದರಹಾಗೆ, **ಪ್ರಪತ್ತಿನಿಷ್ಠನುಕ್ಕು**-ಪ್ರಪದ್ಯೇ ಎಂದು ಹೇಳಿ ಭರನ್ಯಾಸವನ್ನು ಅನುಷ್ಠಿಸುವವನಿಗೆ, **ಇಙ್ಗುಸಾಧ್ಯಮಾಯ್**-ಈ ಸಂದರ್ಭದಲ್ಲಿ ಸಾಧಿಸಬೇಕಾದುದಾಗಿಯೂ, **ಪ್ರಾರ್ಥನೀಯ**

**ಸಾಧ್ಯಮಾಯ್ ಪ್ರಾರ್ಥನೀಯಮಾಯಿರುಪ್ಪದೊರು ಉಪಾಯಮಿಲ್ಲೈ. ಆನಪಿನ್ಬು, ಇಜ್ಗು ಪ್ರಾರ್ಥನೈಶೊಲ್ಲುಗಿರಪಡಿ ಎನ್ನೆನ್ನಿಲ್? ಫಲಪ್ರದಾನಮ್ಪಣ್ಣುಗಿರವಿಡಮ್ ಸರ್ವಾಧಿಕಾರಿ ವಿಷಯತ್ತಿಲುಮ್ ಪೊದುವಾಯಿರುಕ್ಕ ಅಕಿಂಚನನಾಯ್ ಸರ್ವಭರನ್ಯಾಸಂ ಪಣ್ಣುಗಿರವನ್ ಪಕ್ಕಲ್ ಪ್ರಪತ್ತಿ, ವೇರೊರು ಉಪಾಯತ್ತುಕ್ಕು ಅಂಗಮಾಗ ನಿಲ್ಲಾದಪಡಿ ಶರಣ್ಯರ್ ತಾಮ್ ಉಪಾಯಾಂತರಸ್ಥಾನತ್ತಿಲೇ ನಿನ್ರುಫಲಮ್ ಕೊಡುಕ್ಕಿರ ಅಂಶಮ್,**

**ಮಾಯ್**-ಅಪೇಕ್ಷಿನತಕ್ಕದ್ದಾಗಿಯೂ **ಇರುಪ್ಪದೊರು ಉಪಾಯಮಿಲ್ಲೈ**-ಇರುವಂತಹ ಇನ್ನು ಯಾವ ಉಪಾಯವೂ ಇಲ್ಲವು. **ಆನಪಿನ್ಬು**-ಹೀಗಾದನಂತರ, **ಇಜ್ಗೇ**-ಈ ಪ್ರಪದ್ಯೇ ಎಂಬುವ ಸ್ಥಳದಲ್ಲಿ, **ಪ್ರಾರ್ಥನೈಶೊಲ್ಲುಗಿರಪ್ಪಡಿಎನ್ನೆನ್ನಿಲ್**-ಉಪಾಯಪ್ರಾರ್ಥನೆಯು ಬೋಧಿಸುವ ಕ್ರಮದ ನಿರ್ವಹಣೆಯು ಎಲ್ಲಿ? ಎಂದರೆ ವ್ಯಕ್ತವಡಿಸಿ ನಿಷ್ಕರ್ಷೆಯಿಂದ ಹೇಳುತ್ತಾರೆ **ಫಲಪ್ರದಾನಂಪಣ್ಣುಗಿರವಿಡಮ್**-ಸರ್ವೇಶ್ವರನು ಫಲವನ್ನು ಅನುಗ್ರಹಿಸುವ ಸಂದರ್ಭವು, **ಸರ್ವಾಧಿಕಾರಿ ವಿಷಯತ್ತಿಲುಮ್**-ಬುಭುಕ್ಷುವಾಗಿ ಐಹಿಕಫಲವನ್ನಪೇಕ್ಷಿಸುವ, ಮತ್ತು ಮುಮುಕ್ಷುವಾಗಿ ಮೋಕ್ಷಫಲವನ್ನು ಅಪೇಕ್ಷಿಸುವ, ಹೀಗೆ ಎರಡು ವಿಧವಾದ ಸರ್ವಾಧಿಕಾರಿಗಳ ವಿಷಯದಲ್ಲೂ, **ಪೊದುವಾಯಿರುಕ್ಕ**-ಸಮವಾಗಿರುವಾಗ, ಎಂದರೆ ಅವರವರ ಇಷ್ಟಾನುಸಾರ ಫಲವನ್ನು ಕೊಡುವನಾಗಿರುವಾಗ, **ಅಕಿಂಚನನಾಗಿ, ಸರ್ವಭರನ್ಯಾಸಂಪಣ್ಣುಗಿರವರ್ಪಕ್ಕಲ್**-ಸಮಸ್ತ ಭರನ್ಯಾಸವನ್ನೂ ಮಾಡುವವನ ಸಂದರ್ಭದಲ್ಲಿ, **ಪ್ರಪತ್ತಿವೇರೊರು ಉಪಾಯತ್ತುಕ್ಕುಅಂಗಮಾಗನಿಲ್ಲಾದಪಡಿ**-ಪ್ರಪದನವು ಬೇರೆ ಇನ್ನು ಯಾವ ಉಪಾಯಕ್ಕೂ ಅಂಗವಾಗಿರದಹಾಗೆ, **ಶರಣ್ಯರ್ತಾಮ್**-ಸರ್ವಶರಣ್ಯನಾದ ತಾನು, **ಉಪಾಯಾಂತರಸ್ಥಾನತ್ತಿಲೇನಿನ್ರು**-ಬೇರೇ ಉಪಾಯವಾದ ಭಕ್ತಿ ಅಥವಾ ಉಪಾಸನದ ಸ್ಥಾನದಲ್ಲಿ ನಿಂತು, **ಫಲಂಕೊಡುಕ್ಕಿರಅಂಶಮ್**-ಫಲವನ್ನು ಕೊಡುವ ಅಂಶವು, **ಏತ್ತಮಾನಪಡಿಯಾಲೇ**-ವಿಶೇಷವಾಗಿ ಮುಖ್ಯವಾದುದಾದುದರಿಂದ, **ಅನ್ವೇತ್ತಮಾನ**-ಅಂತಹ ಉತ್ಕೃಷ್ಟವಾದ, **ಭರನ್ಯಾಸಸ್ವೀಕಾರಮ್**-ಭರನ್ಯಾಸದ ಸ್ವೀಕಾರವು, **ಇಜ್ಗು**-ಈ ದ್ವಯಪೂರ್ವಖಂಡದ **ಪ್ರಪದ್ಯೇ**-ಎಂಬಲ್ಲಿ, **ಪ್ರಾರ್ಥಿಕ್ಕಪಡುಗಿರದು**-ಪ್ರಾರ್ಥಿಸಲ್ಪಡುತ್ತದೆ. ಇಲ್ಲಿ ಒಂದು ಪೂರ್ವಪಕ್ಷವು ಉಂಟಾಗಬಹುದು, ಏನೆಂದರೆ— **ಪ್ರಪದ್ಯೇ**-ಎಂಬಲ್ಲಿ ಗೋಪ್ತೃತ್ವಾಭಿಪ್ರಾಯವೂ ಅಂತರ್ಗತವಾಗಿದ್ದರೆ, ಉತ್ತರಖಂಡವು ಫಲವನ್ನು ಬೋಧಿಸುವದರಿಂದ, ಎರಡರ ಅಭಿಪ್ರಾಯವೂ ಒಂದೇಯಾಗಿ ಪುನರುಕ್ತಿದೋಷಉಂಟಾಗುವದಿಲ್ಲವೋ? ಎಂಬುದು. ಈ ಪೂರ್ವಪಕ್ಷಕ್ಕೆ ಅವಕಾಶವಿಲ್ಲವೆನ್ನುತ್ತಾರೆ. ಪೂರ್ವಖಂಡಪ್ರಾರ್ಥನೆಗೂ ಉತ್ತರಖಂಡಪ್ರಾರ್ಥನೆಗೂ ವ್ಯತ್ಯಾಸವುಂಟು, ಪುನರುಕ್ತಿಯಾಗುವದಿಲ್ಲವೆನ್ನುತ್ತಾರೆ. ಗೋಪ್ತೃತ್ವವರಣವು ಭರಸ್ವೀಕಾರಪ್ರಾರ್ಥನೆಗೆ ಆ ಕಾಲದಲ್ಲಿ ಅಂಗವು, ತಾನು ಅಶಕ್ತನಾಗಿ

**ಏತ್ತವಾನಪಡಿಯಾಲೆ ಅವ್ವೇತ್ತಮಾನ ಭರಸ್ವೀಕಾರಾಂಶಂ ಇಜ್ಜುಪ್ರಾರ್ಥಿಕ್ಕಪಡುಗಿರದು.**

ಅಕಿಂಚನನಾದುದರಿಂದ ಭಕ್ತಿಯೋಗವನ್ನು ಅನುಷ್ಠಿಸಲು ಸಾಧ್ಯವಿಲ್ಲವು; ಆದುದರಿಂದ ಅದರ ಸ್ಥಾನದಲ್ಲಿ ನೀನೇ ನಿಂತು ಅದು ಕೊಡುವ ಫಲವನ್ನು ಸಾಧಿಸಿಕೊಡುವ ಸರ್ವಭರವನ್ನೂ ನೀನೇ ವಹಿಸತಕ್ಕದ್ದು ಎಂಬ ಪ್ರಾರ್ಥನೆಯೊಡನೆ ಆತ್ಮನಿಕ್ಷೇಪವು; ಉತ್ತರಖಂಡದಲ್ಲಾದರೋ, ಅದರಿಂದುಂಟಾಗುವ ನಿತ್ಯಕೈಙ್ಕರ್ಯಪ್ರಾಪ್ತಿಯನ್ನುಂಟುಮಾಡಬೇಕೆಂಬ ಪ್ರಾರ್ಥನೆಯು ಹೀಗೆ ಎರಡಕ್ಕೂ ವ್ಯತ್ಯಾಸವು. ಸರ್ವಭರವನ್ನೂ ಸ್ವೀಕರಿಸಬೇಕೆಂಬ ಪ್ರಾರ್ಥನೆಯು ಪೂರ್ವಖಂಡದಲ್ಲಿ; ಹೀಗೆ ಸ್ವೀಕರಿಸಿ, ಫಲವನ್ನು ದಯಪಾಲಿಸಬೇಕೆಂಬುದು ಉತ್ತರಖಂಡದಲ್ಲಿ; ಹೀಗೆ ಪ್ರಾರ್ಥನೆಯಲ್ಲಿ ಭೇದವು ಎಂಬ ತಾತ್ಪರ್ಯವು.

ಉತ್ತರಖಂಡದ ಮುಖ್ಯ ತಾತ್ಪರ್ಯವು, ಇಷ್ಟಪ್ರಾಪ್ತಿ ಅನಿಷ್ಟನಿವೃತ್ತಿರೂಪ ಫಲದ ಪ್ರಾಪ್ತಿಯೆಂದು **“ಇಷ್ಟಪ್ರಾಪ್ತ್ಯನಿಷ್ಟನಿವೃತ್ತಿರೂಪಮಾನಫಲತ್ತಿನುಡೈಯಪ್ರಾರ್ಥನೈ”** ಎಂಬುದರಿಂದ ತಿಳಿಸಿರುತ್ತಾರೆ. ಈ ಸಂದರ್ಭದಲ್ಲಿ **“ತಮೇವ ಶರಣಂಗಚ್ಛ ಸರ್ವಭಾವೇನ ಭಾರತ । ತತ್ಪ್ರಸಾದಾತ್ಪರಾಂ ಶಾನ್ತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್”** (ಗೀ. ೧೮-೬೨) ಎಂಬ ಶ್ಲೋಕಾರ್ಥವು ಭರನ್ಯಾಸದಿಂದುಂಟಾಗುವ ಅನಿಷ್ಟನಿವೃತ್ತಿ, ಇಷ್ಟಪ್ರಾಪ್ತಿಗಳನ್ನು ಉಪಪಾದಿಸುತ್ತದೆ. ಪೂರ್ವಖಂಡದ ಮುಖ್ಯ ತಾತ್ಪರ್ಯವನ್ನು **“ಅಕಿಂಚನನಾಯ್ ಸರ್ವಭರನ್ಯಾಸಂ”** ಎಂದಾರಂಭಿಸಿ **“ಭರಸ್ವೀಕಾರಮ್ ಇಜ್ಜುಪ್ರಾರ್ಥಿಕ್ಕಪಡುಗಿರದು”** ಎಂದು ಪೂರೈಸಿದ ವಾಕ್ಯವು ಉಪಪಾದಿಸುತ್ತದೆ. ಆದುದರಿಂದ ಉತ್ತರಖಂಡವು ಪೂರ್ವಖಂಡದ ಪುನರುಕ್ತಿಯಾಗುವದಿಲ್ಲವು. ಗೋಪ್ತೃತ್ವವರಣವಾದರೋ ತಾತ್ಕಾಲಿಕ ಸರ್ವಭರ ಪ್ರಾರ್ಥನೆಯೊಂದಿಗೆ ಮಾಡುವ ಆತ್ಮಸಮರ್ಪಣೆಗೆ ಅಂಗವು ಎಂದು ಭಾವಿಸತಕ್ಕದ್ದು. ಅದು ಭರನ್ಯಾಸಾವಿನಾಭೂತವಾಗಿ ಭರಸ್ವೀಕಾರ ಪ್ರಾರ್ಥನೆಗೆ ಅಂಗವು. ಅಷ್ಟುಮಾತ್ರವೇ.

ಭಕ್ತಿಯೋಗದ ಪ್ರಪತ್ತಿಗೂ ಇದಕ್ಕೂ ವ್ಯತ್ಯಾಸಉಂಟೆಂದೂ ಈ ಮೇಲಿನ ವಾಕ್ಯದಿಂದ ಹೇಳಿದರು. ಭಕ್ತಿಯೋಗದ ಪ್ರಪತ್ತಿಯು, ಉಪಾಸನಕ್ಕೆಅಂಗವಾಗಿ ಉಪಾಸನ ನಿಷ್ಪತ್ತಿಯನ್ನುಂಟುಮಾಡುತ್ತದೆ. ಹಾಗೆಯೇ ಈ ಪ್ರಪತ್ತಿಯೂ ಕೂಡ ರಕ್ಷಣೆಯನ್ನು ಸಾಧಿಸಿಕೊಡುತ್ತದೆ ಎಂದು ಏಕೆ ಭಾವಿಸಕೂಡದು? ಎಂದಾಕ್ಷೇಪಿಸಿದರೆ, ಭರನ್ಯಾಸಪ್ರಪತ್ತಿಯು ಭರಸ್ವೀಕಾರಕ್ಕಾಗಿ ಮಾತ್ರವೇ ಅಲ್ಲದೆ ಯಾವುದನ್ನೂ ಸಾಧಿಸಕೊಡಬೇಕಾದುದಿಲ್ಲವು; ಏಕೆಂದರೆ ಸರ್ವಭರವನ್ನೂ ಶ್ರಿಯಃಪತಿಯಲ್ಲಿಟ್ಟಿರುವದರಿಂದ ಆತನೇ ಎಲ್ಲವನ್ನೂ ಉಂಟುಮಾಡುವವನು; ಇದನ್ನೇ **“ಪ್ರಪತ್ತಿಕ್ಕುಫಲಮಾಹಭಕ್ತಿರೂಪೋಪಾಯತ್ತೈಪ್ರಾರ್ಥಿಕ್ಕುಮಾಪ್ಪೋಲೆ”**

**ಆನಾಲುಮ್, ಇಪ್ಪಡಿ ಉಪಾಯಮಾಯ್ ನಿರ್ಕವೇಣುಮೆನ್ರು ಅಪೇಕ್ಷಿಕ್ಕವೇ ಅಭಿಮತಫಲವಿಶೇಷತ್ತೈ ಉಪಾಯಾನ್ತರ ವ್ಯವಧಾನಮರತ್ತರ**

ಎಂಬ ವಾಕ್ಯದ ಮೂಲಕ ತಿಳಿಸಿರುತ್ತಾರೆ. ಮುಂದೆ ಇನ್ನೊಂದು ಪೂರ್ವಪಕ್ಷವನ್ನು ಹೇಳಿ ಅದಕ್ಕೆ ಸಮಾಧಾನವನ್ನು ತಿಳಿಸುತ್ತಾರೆ—ಆಗಲಿ, ನೀವು ಹೇಳುವಹಾಗೆ ಭರಸ್ವೀಕಾರಪ್ರಾರ್ಥನೆಯೆಂದೇ ಒಪ್ಪೋಣ; ಯಾವಾಗ ಉಪಾಯಾನ್ತರದ ಆವಶ್ಯಕತೆ ಇಲ್ಲದೆ, ಉಪಾಯಾನ್ತರಸ್ಥಾನದಲ್ಲಿ ನಿಂತು ನಿರ್ವಹಿಸಿಕೊಡುವ ಭರವೆಲ್ಲಾ ತಮ್ಮದೇ, ಈ ಭರವನ್ನು ಸ್ವೀಕರಿಸಬೇಕೆಂಬ ಪ್ರಾರ್ಥನೆಯು ಎಂದಾಯಿತೋ, ಆಗ ಉಪಾಯಾನ್ತರದ ಆವಶ್ಯಕತೆಯಿಲ್ಲದೆ ಫಲವನ್ನು ದಯಪಾಲಿಸಬೇಕೆಂದು ಆಗಲಿಲ್ಲವೋ, ಆಗ ಉತ್ತರಖಂಡವು ಅಧಿಕವಾದ ವಿಷಯವಲ್ಲವೋ ? ಅದರ ಆವಶ್ಯಕತೆ ಏನು ? ಎಂದಾಕ್ಷೇಪತಂದರೆ ಸಮಾಧಾನವನ್ನು ಹೇಳುತ್ತಾರೆ. ಎರಡು ವಿಧವಾಗಿ ಸಮಾಧಾನವನ್ನು ಹೇಳುತ್ತಾರೆ. ಹೇಗೆಂದರೆ—(೧) ಪ್ರಾರ್ಥನೆಯಲ್ಲಿ ಅಂಶದ ಭೇದವುಂಟು. ಪೂರ್ವಖಂಡದಲ್ಲಿ ಉಪಾಯಾನ್ತರದ ಆವಶ್ಯಕತೆಯಿಲ್ಲದೆ ಅದರ ಸ್ಥಾನದಲ್ಲಿ ನೀನೇ ನಿಂತು ಸರ್ವಭರವನ್ನು ನೀನೇ ಸ್ವೀಕರಿಸಬೇಕೆಂಬ ಪ್ರಾರ್ಥನೆಯು. ಉತ್ತರಖಂಡದಲ್ಲಿ ಅದರ ಫಲವಾದ ನಿನಗೆ ನಿತ್ಯಕೈಂಕರ್ಯ ಮಾಡುವ ಫಲದ ಪ್ರಾರ್ಥನೆಯು. ಆಗಲಿ, **"ಶ್ರೀಮತೇ ನಾರಾಯಣಾಯ ನಮಃ"** ಎಂದು ಇಷ್ಟೇ ಇರುವಾಗ ಪ್ರಾರ್ಥನೆಯೇ ತೋರುವದಿಲ್ಲವೇ ? ಪೂರ್ವಖಂಡಕ್ಕೂ ಉತ್ತರಖಂಡಕ್ಕೂ ಸಮನ್ವಯವೇ **"ನಮಃ"** ಎಂಬ ಇಷ್ಟೇ ಪ್ರಯೋಗವಿರುವದರಿಂದ ತೋರುವದಿಲ್ಲವೇ ? ಎಂದರೆ **"ನಮಃ ಇತಿಪ್ರಾರ್ಥನಾ"** ಎಂದು ಅಧ್ಯಾಹಾರಮಾಡಿಕೊಳ್ಳಬಹುದೆಂಬುದು ಅರ್ಥವಾಗಿ ತೋರಿಬರುತ್ತದೆ, (೨) ಹಾಗೆ ಅಧ್ಯಾಹಾರಮಾಡಿಕೊಳ್ಳುವದು ಸರಿಯಲ್ಲವು; ಮನ್ತ್ರದಲ್ಲಿ ಇಲ್ಲದಿರುವ ಪದಗಳನ್ನು ಅಧ್ಯಾಹಾರಮಾಡಿಕೊಳ್ಳುವದು ಯಾವ ನ್ಯಾಯವು ? ಎಂದಾಕ್ಷೇಪಿಸಿದರೆ, ಪೂರ್ವಖಂಡದಲ್ಲಿ ತೋರಿಬರುವ ಉಪಾಯಪ್ರಾರ್ಥನೆಯಿಂದ ಉಂಟಾಗುವ ಫಲದ ಸ್ವರೂಪವನ್ನು ಉತ್ತರಖಂಡವು ಬೋಧಿಸುತ್ತದೆಂದು ಇಟ್ಟುಕೊಳ್ಳಬಹುದು. ಹೀಗೆ ಪುನರುಕ್ತಿ ಎಂಬ ಆಕ್ಷೇಪಣೆಗೆ ಪರಿಹಾರವನ್ನು ಕಾಣಬಹುದೆಂದು ಉಪದೇಶಿಸುತ್ತಾರೆ.

**ಆನಾಲುಮ್**-ನೀವು ಹೇಳುವ ಹಾಗೆ ಒಪ್ಪಿದರೂ, ಇನ್ನೂ ಆಕ್ಷೇಪವು ಹೋಗಲಿಲ್ಲವೆಂದು ಪೂರ್ವಪಕ್ಷಿಯು ಹೇಳಬಹುದು. **ಇಪ್ಪಡಿ**-ಈಗ ಉಪಪಾದಿಸಿದ ರೀತಿಯಲ್ಲಿ, **ಉಪಾಯಮಾಯ್ ನಿರ್ಕವೇಣುಮೆನ್ರು**-ಉಪಾಸನದ ಸ್ಥಾನದಲ್ಲಿ ನೀನು ಉಪಾಯವಾಗಿ ನಿಲ್ಲಬೇಕೆಂದು, **ಅಪೇಕ್ಷಿಕ್ಕವೇ**-ಯಾವಾಗ ಅಧಿಕಾರಿಯು ಅಪೇಕ್ಷಿಸಿದನೋ ಆಗ, **ಅಭಿಮತಫಲವಿಶೇಷತ್ತೈ**-ಭರನ್ಯಾಸನಿಷ್ಠನಿಗೆ ಅಪೇಕ್ಷಿತವಾದ ಫಲವಿಶೇಷವನ್ನು, **ಉಪಾಯಾನ್ತರ ವ್ಯವಧಾನಮರ**-ಉಪಾಯಾನ್ತರವಾದ ಉಪಾಸನಕ್ಕೆ ಬೇಕಾದ ಕಾಲವಿಳಂಬವಿಲ್ಲದೆ ಎಂದರೆ ಆ ಉಪಾಸನದ

**ವೇಣುಮೆನ್ರು ಪ್ರಾರ್ಥಿತ್ತದಾಗಾದೋ? ಆಗೈಯಾಲ್ ಉತ್ತರಖಂಡತ್ತಿಲ್ ಪ್ರಾರ್ಥನೈ ಮಿಗುದಿಯನ್ರೋ? ವೆನ್ನಿಲ್, ಉಕ್ತಪ್ರಕಾರತ್ತಾಲೇ ಪ್ರಾರ್ಥನಾ ವಿಷಯತ್ತಿಲ್ ಅಂಶಭೇದಂ ತೋತ್ತುಗೈಕ್ಕಾಗ ಪ್ಪಿರಿಯು ಅಪೇಕ್ಷಿಕ್ಕಿರದಾಗೈ ಯಾಲೇ ಮಿಗುದಿಯಿಲ್ಲೈ. ಉತ್ತರಖಂಡತ್ತಿಲ್ ಅಪೇಕ್ಷಣೀಯ ಫಲವಿಶೇಷ ವ್ಯಂಜಕಮಾನ ವಾಕ್ಯತ್ತಿನುಡೈಯ ಅನ್ವಯಮಾತ್ರತ್ತುಕ್ಕಾಹ ಪ್ರಾರ್ಥನಾ ಪದಮ್ ಅಧ್ಯಾಹರಿತ್ತಾಲುಮ್ ಫಲಸ್ವರೂಪಮಾತ್ರತ್ತಿಲೇ ತಾತ್ಪರ್ಯಮೆನ್ರು ಪರಿಹಾರಮಾಗವುಮಾಮ್.**

---

ಆವಶ್ಯಕತೆ ಇಲ್ಲದೇನೇ, **ತರವೇಣುಮೆನ್ರು**-ದಯಪಾಲಿಸಬೇಕೆಂದು, **ಪ್ರಾರ್ಥಿತ್ತ ದಾಗಾದೋ**-ಪ್ರಾರ್ಥಿಸಿದಂತೆ ಆಗುವದಿಲ್ಲವೋ? **ಆಗೈಯಾಲ್**-ಆ ಕಾರಣದಿಂದ **ಉತ್ತರಖಂಡತ್ತಿಲ್**-ಉತ್ತರಖಂಡದಲ್ಲಿ, **ಪ್ರಾರ್ಥನೈ**-ಪುನಃ ಫಲವನ್ನು ಅಪೇಕ್ಷಿಸೋಣವು, **ಮಿಗುದಿಯನ್ರೋ**-ಅಧಿಕಾಂಶವಲ್ಲವೋ? ಹೆಚ್ಚಾದ ಅನಾವಶ್ಯಕವಾದ ವಿಷಯವಲ್ಲವೋ? **ಎನ್ನಿಲ್**-ಎಂದು ಆಕ್ಷೇಪತಂದರೆ, ಅದಕ್ಕೆ ಸಮಾಧಾನವನ್ನು ಹೇಳುವೆವು ಎಂಬ ಭಾವವು; **ಉಕ್ತಪ್ರಕಾರತ್ತಿಲೇ**-ಮೇಲೆ ನಾವು ತಿಳಿಸಿದರೀತ್ಯಾ, **ಪ್ರಾರ್ಥನಾವಿಷಯತ್ತಿಲ್**-ಪ್ರಾರ್ಥನೆಯ ವಿಷಯದಲ್ಲಿ, **ಅಂಶಭೇದಂತೋತ್ತುಗೈಕ್ಕಾಗೈಯಾಗ**-ಸ್ವಲ್ಪ ವ್ಯತ್ಯಾಸವು ತೋರಿಬರುವದಕ್ಕಾಗಿ, **ಮಿಗುದಿಯಿಲ್ಲೈ**-ಉತ್ತರಖಂಡವು ಹೆಚ್ಚಾದುದಾಗಿ ಅನಾವಶ್ಯಕವಾದುದೆಂದು ಹೇಳಲು ಆಗುವದಿಲ್ಲವು. ಉತ್ತರಖಂಡದಲ್ಲಿ ಪ್ರಾರ್ಥನೆಯನ್ನು ಪ್ರದರ್ಶಿಸುವ ಪದವೇ ಇಲ್ಲವೇ? ಹೀಗಿರುವಾಗ ಪ್ರಾರ್ಥನೆಯ ಅಂಶದಲ್ಲಿ ಭೇದಉಂಟೆಂದು ಹೇಗೆ ಹೇಳುವಿರಿ? ಎಂದರೆ ಸಮಾಧಾನವನ್ನು ಹೇಳುತ್ತಾರೆ, **ಉತ್ತರಖಂಡತ್ತಿಲ್**-ಉತ್ತರಖಂಡದಲ್ಲಿ, **ಅಪೇಕ್ಷಣೀಯಫಲವಿಶೇಷವ್ಯಂಜಕಮಾನ ವಾಕ್ಯತ್ತಿನುಡೈಯ**-ಅಪೇಕ್ಷಿಸಲು ಯೋಗ್ಯವಾದ ಮೋಕ್ಷದೆಶೆಯಲ್ಲಿ ನಿತ್ಯಕೈಂಕರ್ಯ ಪ್ರಾಪ್ತಿರೂಪಫಲವಿಶೇಷವನ್ನು ವ್ಯಕ್ತಗೊಳಿಸುವ ವಾಕ್ಯದ, **ಅನ್ವಯಮಾತ್ರತ್ತುಕ್ಕಾಹ**-ಅನ್ವಯವುಂಟಾಗುವದಕ್ಕಾಗಿ, **ಪ್ರಾರ್ಥನಾಪದಮ್**-ಪ್ರಾರ್ಥನಾ ಎಂಬ ಪದವನ್ನು, **ಅಧ್ಯಾಹರಿತ್ತಾಲುಮ್**-ಅಧ್ಯಾಹಾರಮಾಡಿಕ್ಕೊಂಡಾದರೂ, **ಫಲಸ್ವರೂಪಮಾತ್ರತ್ತಿಲೇ**-ತನ್ನ ಸ್ವಾಮಿಗೆ ಈ ದಾಸನು ಮಾಡುವ ಫಲರೂಪವಾದ ನಿತ್ಯಕೈಙ್ಕರ್ಯಪ್ರಾಪ್ತಿಯ ಪ್ರಾರ್ಥನೆಯ ಮಾತ್ರದಲ್ಲಿ, **ತಾತ್ಪರ್ಯಮೆನ್ರು**-ತಾತ್ಪರ್ಯವೆಂದು, **ಪರಿಹಾರಮಾಗವುಮಾಮ್**-ಪುನರುಕ್ತಿ ಎಂಬ ಶಙ್ಕಾವಿನ ಪರಿಹಾರವಾಗುತ್ತದೆ. ಎರಡರಲ್ಲೂ ಪ್ರಾರ್ಥನೆಯುಂಟು. ಪೂರ್ವಖಂಡದ ಪ್ರಾರ್ಥನೆಯಲ್ಲಿ ನೀನು ಉಪಾಯಾನ್ತರ ಸ್ಥಾನದಲ್ಲಿ ನಿಂತು ಸರ್ವಭರವನ್ನೂ ವಹಿಸುವ ಉಪಾಯವಾಗಿರತಕ್ಕದ್ದು ಎಂಬ ಭಾವನೆಯೂ, ಉತ್ತರಖಂಡದಲ್ಲಾದರೋ ನಿತ್ಯಕೈಂಕರ್ಯರೂಪದ ಪ್ರಾರ್ಥನೆಯು ಎಂಬ ಭಾವನೆಯೂ ಇರುವವರಿಂದ ಪ್ರಾರ್ಥನೆಯಲ್ಲಿ ವ್ಯತ್ಯಾಸ ಉಂಟು. ಆದುದರಿಂದ ಪುನರುಕ್ತಿದೋಷಕ್ಕೆ ಅವಕಾಶ

## ಖಂಡದ್ವಯೋಸ್ಸ ಏಕವಾಕ್ಯಾರ್ಥಸಿದ್ಧಿಃ ; ದ್ವಯಸ್ಯನಿಷ್ಕೃಷ್ಟಾರ್ಥಃ

---

**ಪೂರ್ವೋತ್ತರಖಂಡಙ್ಗಳ್ ಇರಣ್ಡುಕ್ಕುಮ್ ತಿರಣ್ಡಪೊರುಳ್ ನಿಷ್ಕರ್ಷಿಕ್ಕುಮಿಡತ್ತಿಲ್, "ಅಕಿಂಚನನಾನ ಎನಕ್ಕು ನೀ ಉಪಾಯಾಂತರ**

ವಿಲ್ಲವು. ಇದಕ್ಕಾಗಿ **"ಶ್ರೀಮತೇ ನಾರಾಯಣಾಯನಮ ಇತಿಪ್ರಾರ್ಥನಾಸ್ಯಾತ್"** ಎಂದು ಅಧ್ಯಾಹಾರಮಾಡಿಕೊಳ್ಳಬಹುದೆಂದು ಉಪದೇಶಿಸಿದರು.

ಆಗಲಿ, ಹೀಗೆ ಎರಡು ಪ್ರಾರ್ಥನೆಗಳು ದ್ವಯಮಂತ್ರದಲ್ಲಿ ಉಂಟೆಂದು ಉಪಪಾದಿಸಿದ ಹಾಗಾಯಿತು. ಪೂರ್ವಖಂಡದಲ್ಲಿ, ನನಗೆ ಉಪಾಯವಾಗು ಎಂಬ ಪ್ರಾರ್ಥನೆಯು, ಉತ್ತರಖಂಡದಲ್ಲಿ ಲಕ್ಷ್ಮೀನಾರಾಯಣರಿಗೆ ನಿತ್ಯಕೈಙ್ಕರ್ಯ ಉಂಟಾಗಲಿ, ಹೀಗೆ ಎರಡು ಪ್ರಾರ್ಥನೆಯು ಸರಿಯೋ, ಮಂತ್ರದಲ್ಲಿ ಮುಖ್ಯವಾಗಿ ಒಂದೇ ಅಭಿಪ್ರಾಯವಿರತಕ್ಕದ್ದಲ್ಲವೇ ಎಂಬ ಆಕ್ಷೇಪವನ್ನು ತಂದರೆ ಅದಕ್ಕೆ ಮುಂದಿನ ವಾಕ್ಯದಿಂದ ದ್ವಯದ ಮುಖ್ಯಾರ್ಥವನ್ನು ಹೇಳುವವರಾಗಿ ಒಂದು ವಿಶಿಷ್ಟಪ್ರಾರ್ಥನೆಯೇ ವಿನಾ ಭಿನ್ನಗಳಾದ ಪ್ರಾರ್ಥನೆಗಳಲ್ಲವೆಂದು ಹೇಳುತ್ತಾರೆ. ಅದರಿಂದ ದ್ವಯದ ಸಾರಭೂತಾಭಿಪ್ರಾಯವನ್ನು ಉಪದೇಶಿಸುತ್ತಾರೆ.—ಸಾರಾಸ್ವಾದನಿಯವರು ಈ ಪೂರ್ವಪಕ್ಷವನ್ನು ಉಪಪಾದಿಸುವದರಲ್ಲಿ, ಎರಡಕ್ಕೆ ಬದಲಾಗಿ ಮೂರು ವಾಕ್ಯವಾಗಿ ಪರಿಣಮಿಸಿ ವಾಕ್ಯಭೇದ ದೋಷವುಂಟಾಗುತ್ತದೆಂದು ಹೇಳುತ್ತಾರೆ.—ಹೇಗೆಂದರೆ—೧. ಈ ದ್ವಯಾಖ್ಯಮಂತ್ರಕ್ಕೆ ಲಕ್ಷ್ಮೀನಾರಾಯಣರ ತಿರುವಡಿಗಳನ್ನು ಉಪಾಯವಾಗಿ ವರಿಸುವೆನು. ೨. ಭರವನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತೇನೆ. ೩. ತಮ್ಮುಗಳ ನಿತ್ಯಕೈಂಕರ್ಯಪ್ರಾಪ್ತಿಯನ್ನು ಪ್ರಾರ್ಥಿಸುತ್ತೇನೆ ಎಂಬದಾಗಿ ಮೂರು ಪ್ರಾರ್ಥನೆಗಳೆಂದು ಪೂರ್ವಪಕ್ಷದ ಉಪಪಾದನೆಯು.

### ಎರಡು ಖಂಡಗಳಿಂದಲೂ ಒಂದೇ ಅಭಿಪ್ರಾಯದ ಸಿದ್ಧಿಯು.
### ದ್ವಯದ ನಿಷ್ಕರ್ಷಾರ್ಥವು.

---

ಈ ಮುಂದಿನ ವಾಕ್ಯದಿಂದ ಎರಡು ಖಂಡಗಳಿಂದಲೂ ಒಂದೇ ವಿಶಿಷ್ಟ ಪ್ರಾರ್ಥನೆ ಎಂದೂ, ಅದೇ ದ್ವಯಮೂಲಕವಾಗಿ ಮಾಡುವ ಭರಸಮರ್ಪಣೆಯು ಸಾರಭೂತವಾದ ನಿಷ್ಕರ್ಷಾಭಿಪ್ರಾಯವೆಂದೂ ಹೇಳುತ್ತಾರೆ—**ಪೂರ್ವೋತ್ತರ ಖಂಡಙ್ಗಳ್ ಇರಣ್ಡುಕ್ಕುಮ್**-ಈ ದ್ವಯದ ಪೂರ್ವೋತ್ತರಖಂಡಗಳೆರಡಕ್ಕೂ, **ತಿರಣ್ಡಪೊರುಳ್**-ನಿಷ್ಕೃಷ್ಟವಾದ ಪ್ರಧಾನಾಭಿಪ್ರಾಯವನ್ನು, ಸಾರಭೂತವಾದ ತಾತ್ಪರ್ಯವನ್ನು, **ನಿಷ್ಕರ್ಷಿಕ್ಕುಮಿಡತ್ತಿಲ್**-ನಿಷ್ಕರ್ಷವಮಾಡುವ ಸಂದರ್ಭದಲ್ಲಿ, ನಿಷ್ಕರ್ಷಾರ್ಥ ಯಾವುದೆಂಬುದನ್ನು ಉಪದೇಶಿಸುತ್ತಾರೆ—**"ಅಕಿಂಚನನಾದ ಎನಕ್ಕು**-ಅನನ್ಯಗತಿಕನಾದ ನನಗೆ, **ನೀ ಉಪಾಯಾನ್ತರಸ್ಥಾನತ್ತಿಲೇ ನಿಸ್ರು-**

**ಸ್ಥಾನತ್ತಿಲೇ ನಿನ್ರು ಫಲವಿಶೇಷತ್ತೈ ತರುಗೈಕ್ಕಾಗ ಯಥೋಕ್ತಮಾನ ಆತ್ಮರಕ್ಷಾಭರನಿಕ್ಷೇಪಂ ” ಪಣ್ಣುಗಿರೇಁ ಎನ್ರು ಒರುವಿಶಿಷ್ಟಪ್ರಾರ್ಥನಾನ್ವಿತ ಭರಸಮರ್ಪಣಮಾಮ್.**

ಹಿತಚಿನ್ತಕನಾದ ನೀನು ಬೇರೆ ಉಪಾಯವಾದ ಉಪಾಸನೆಯ ಸ್ಥಾನದಲ್ಲಿ ನಿಂತು, **ಫಲವಿಶೇಷತ್ತೈತ್ತರುಗೈಕ್ಕಾಗ**-ನಿರತಿಶಯ ಫಲವಿಶೇಷವಾದ ಮೋಕ್ಷವನ್ನು ದಯಪಾಲಿಸುವದಕ್ಕಾಗಿ, **ಯಥೋಕ್ತಮಾನ**-ಹೇಗೆ ಶಾಸ್ತ್ರದಲ್ಲಿ ಹೇಳಿದೆಯೋ ಆ ಪ್ರಕಾರವಾಗಿ, ಎಂದರೆ ಮಹಾವಿಶ್ವಾಸಾದಿ ಪರಿಕರಗಳೊಂದಿಗೆ ಎಂಬ ಭಾವವು. **ಆತ್ಮಾರಕ್ಷಾಭರನಿಕ್ಷೇಪಂ ಪಣ್ಣುಗಿರೇಁ**-ಆತ್ಮವನ್ನು ರಕ್ಷಿಸುವ ಭಾರವನ್ನು ನಿನ್ನಲ್ಲಿ ಸಮರ್ಪಿಸಿರುತ್ತೇನೆ ’ **ಎನ್ರು**-ಎಂಬದಾಗಿ, **ಒರುವಿಶಿಷ್ಟಪ್ರಾರ್ಥನಾನ್ವಿತ ಭರಸಮರ್ಪಣಮಾಮ್**-ಎರಡು ಖಂಡದಿಂದಲೂ ಸೇರಿ ಒಂದೇ ಒಟ್ಟು ಪ್ರಾರ್ಥನೆಯಿಂದ ಸೇರಿದ, ಸ್ವಾಮಿಯ ಪಾದದಲ್ಲಿ ಭರವನ್ನು ಸಮರ್ಪಿಸಿದ ತಾತ್ಪರ್ಯವಾಗುತ್ತದೆ. ಹೀಗೆ ತಾತ್ಪರ್ಯವಾಗುವದರಿಂದ ಈ ಮನ್ತ್ರಕ್ಕೆ ವಾಕ್ಯಭೇದ ದೋಷಕ್ಕೆ ಕಾರಣವಿಲ್ಲವೆಂಬ ತಾತ್ಪರ್ಯವು. ಮೇಲೆ ಪೂರ್ವಪಕ್ಷಿಗಳು ಹೇಳಿರುವ ಮೂರು ವಾಕ್ಯವೂ ಸೇರಿ ಒಂದೇ ಅಭಿಪ್ರಾಯವು ; ಹೇಗೆಂದರೆ “ **ನಿತ್ಯಕೈಂಕರ್ಯಪ್ರಾಪ್ತಿಗಾಗಿ ನಾನು ಅಕಿಂಚನನಾದುದರಿಂದ ನಿನ್ನ ತಿರುವಡಿಗಳನ್ನು ಉಪಾಯವಾಗಿ ವರಿಸಿ, ಉಪಾಸನಕ್ಕೆ ಶಕ್ತಿಯಿಲ್ಲದುದರಿಂದ ಅದರ ಸ್ಥಾನದಲ್ಲಿ ನೀನೇ ನಿಂತು, ಆದರಿಂದುಂಟಾಗುವ ಫಲವನ್ನು ಕೊಟ್ಟು ಈ ಆತ್ಮವನ್ನು ರಕ್ಷಿಸುವ ಸರ್ವಭರವೂ ನಿನಗೆ ಸೇರಿದುದು ಎಂಬ ಈ ಆತ್ಮರಕ್ಷಾಭರಸಮರ್ಪಣೆಯನ್ನು ನೀನು ಸ್ವೀಕರಿಸತಕ್ಕದ್ದು** ” ಎಂಬ ಏಕವಾಕ್ಯಾಭಿಪ್ರಾಯವೆಂಬ ಭಾವವು. ಆದುದರಿಂದ ಉತ್ತರಖಂಡವು ಪೂರ್ವಖಂಡದ ಪುನರುಕ್ತಿ ಎಂಬ ಪೂರ್ವಪಕ್ಷಕ್ಕೆ ಕಾರಣವಿಲ್ಲವು. ಎರಡು ಖಂಡವೂ ಸೇರಿದರೇನೇ ಭರಸಮರ್ಪಣದ ಸಂಪೂರ್ಣಾರ್ಥವು ಹೊರಪಟ್ಟು ಏಕಾಭಿಪ್ರಾಯವು ಉಂಟಾಗುತ್ತದೇ ವಿನಾ, ಒಂದೊಂದು ಖಂಡದಿಂದಲೇ ಸಂಪೂರ್ಣಾಭಿಪ್ರಾಯವು ವ್ಯಕ್ತಪಡುವದಿಲ್ಲವೆಂಬ ಭಾವವು ಸ್ಥಾಪಿತವು. ಆದುದರಿಂದ ಎರಡೂ ಸೇರಿ ಒಂದು ವಿಶಿಷ್ಟಪ್ರಾರ್ಥನೆ ಎಂದು ಭಾವಿಸತಕ್ಕದ್ದು.

ಹೀಗೆ ಏಕವಾಕ್ಯವಾಗಿ ಭಾವಿಸುವಪರಲ್ಲಿ, ಪ್ರಧಾನಭೂತವಾದುದು ಭರಸಮರ್ಪಣೆಯು, ಅದನ್ನು ಅರ್ಥವಾಗಿಯೂ, ಇದಕ್ಕೆ ಅಂಗವಾದ ವಿಶ್ವಾಸ ಮೊದಲಾದವುಗಳನ್ನು ಶಾಬ್ದವಾಗಿಯೂ, ಉಪಪಾದಿಸಿದ ಹಾಗಾಗಲಿಲ್ಲವೇ ? ಇದು ಸರಿಯೋ ? ಮಹಾವಿಶ್ವಾಸದಿಂದ ಕೂಡಿದ ಜ್ಞಾನರೂಪವಾದ ಸಂಪೂರ್ಣ ನಂಬಿಕೆಯನ್ನು ಈ ಭರಸಮರ್ಪಣೆಯು ತೋರಿಸತಕ್ಕದ್ದು. ಅಂತಹ ಅಧ್ಯವಸಾಯವನ್ನು ಈ ಸಮರ್ಪಣೆಯು ಪ್ರದರ್ಶಿಸುತ್ತದೆಯೇ ? ಎಂದರೆ ಈ ಸಮರ್ಪಣವೇ ಅಧ್ಯವಸಾಯದ ಶಬ್ದಾರ್ಥವಾಗುತ್ತದೆಂದು ತಿಳಿಸುತ್ತಾರೆ.—

**ಇಸ್ಸಮರ್ಪಣಮುಮ್ ಅಧ್ಯವಸಾಯ ಶಬ್ದಾರ್ಥ(ಮು)ಮಾಮ್-**

**ಇಪ್ಪಡಿ ಸಪರಿಕರಮಾನ ಭರಸಮರ್ಪಣಮೇ ಪ್ರಪತ್ತಿಶಾಸ್ತ್ರಾರ್ಥ**

**ಇಸ್ಸಮರ್ಪಣಮ್**-ಪ್ರಪದ್ಯೇ ಎಂಬಲ್ಲಿ ತೋರುವ ಭರಸಮರ್ಪಣವು, **ಅಧ್ಯವಸಾಯಶಬ್ದಾರ್ಥಮಾಮ್**-ಸಾಙ್ಗಭರಸಮರ್ಪಣವಾದುದರಿಂದ, ಪ್ರಪದ್ಯೇ ಎಂಬ ಶಬ್ದದಲ್ಲೇ ತೋರುವ ಅರ್ಥವಾಗುತ್ತದೆಂಬ ಕೆಲವು ಕೋಶಗಳಲ್ಲಿ **ಅಧ್ಯವಸಾಯ ಶಬ್ದಾರ್ಥಮುಮಾಮ್**-ಎಂದಿರುವ ಪಾಠಾಂತರವು ಹೆಚ್ಚು ಸ್ವಾರಸ್ಯವುಳ್ಳದ್ದು; ಹೇಗೆಂದರೆ ಭರಸಮರ್ಪಣೆಯಾಗಬೇಕಾದರೆ ಮಹಾವಿಶ್ವಾಸವು ಇದ್ದೇ ತೀರಬೇಕಾದುದರಿಂದ ಆರ್ಥವಾಗಿ ಪ್ರಪದ್ಯೇ ಎಂಬಲ್ಲಿ ತೋರಿಬರುತ್ತದೆ ಎಂದು ಉಪಪಾದಿಸುವದಕ್ಕಿಂತ ಶಾಬ್ದವಾಗಿಯೇ ತೋರಿಬರುತ್ತದೆಂದು ಹೇಳಬಹುದು. ಹೇಗೆಂದರೆ ಶ್ರೀ ನಿಗಮಾನ್ತದೇಶಿಕರವರೇ ತಾವು ಅನುಗ್ರಹಿಸಿದ ಚಿಲ್ಲರೆ ರಹಸ್ಯವಾದ **ಶ್ರೀಮತ್ಸಾರಸಾರಃ** ಎಂಬ ಗ್ರಂಥದಲ್ಲಿ ಬರೆದಿರುತ್ತಾರೇನೆಂದರೆ—"**ಇದಿಲ್ (ಪ್ರಪದ್ಯೇ) ಗತ್ಯರ್ಥಮಾನಧಾತುಬುದ್ಧ್ಯರ್ಥಮಾಗೈಯಾಲುಮ್, ಬುದ್ಧಿಶಬ್ದಮ್ ಅಧ್ಯವಸಾಯತ್ತೈಚ್ಚೊಲ್ಲುಗೈಯಾಲುಮ್ ಇದಿ ಮಹತ್ತೈಯೈ, "ಪ್ರ" ಎಙ್ಗಿರ ಉಪಸರ್ಗಮ್ ಕಾಟ್ಟುಗೈಯಾಲುಮ್, ಮಹಾವಿಶ್ವಾಸಮ್ ಶೊಲ್ಲಿಯದಾಯಿತ್ತು**" ಎಂಬದಾಗಿ. ಆದುದರಿಂದ ಅಧ್ಯವಸಾಯವನ್ನು ಪ್ರಕಟಿಸುವ ಮಹಾವಿಶ್ವಾಸವು ಶಾಬ್ದವಾಗಿಯೇ ಹೇಳಲ್ಪಟ್ಟಿರುತ್ತದೆಂಬುದು ಆಚಾರ್ಯವರ್ಯರ ಅಭಿಪ್ರಾಯವು. ಹಾಗೆಯೇ ಶ್ರೀಯತಿವರ್ಯರೂ "**ಪ್ರಪತ್ತಿರ್ವಿಶ್ವಾಸಃ**" ಪ್ರಪತ್ತಿಯೇ ವಿಶ್ವಾಸವೆಂದೂ, "**ವಿಶ್ವಾಸಪೂರ್ವಕಂ ಪ್ರಾರ್ಥನಮಿತಿಯಾವತ್**" ಎಂದೂ ಹೇಳಿ, "**ವಿಶ್ವಾಸಪೂರ್ವಕಂ ಭಗವನ್ತಂ ನಿತ್ಯಕಿಂಕರತಾಂ ಪ್ರಾರ್ಥಯೇ**" ಎಂದು ಪ್ರಾರ್ಥಿಸಿರುತ್ತಾರೆ. ಹಿಂದೆಯೂ ಕೂಡ ಶ್ರೀ ಗುರುವರ್ಯರು ಇದನ್ನೇ ಉಪದೇಶಿಸಿರುತ್ತಾರೆ —"**ಇಙ್ಗು 'ಪ್ರ' ಎಙ್ಗಿರ ಉಪಸರ್ಗಂ ವಿಶ್ವಾಸತ್ತಿನುಡೈಯ ಪ್ರಕರ್ಷರೂಪಮಾನ ಮಹತ್ತೈಯೈಕ್ಕಾಟ್ಟುಮ್**".

ಹೀಗೆ ಏಕವಾಕ್ಯವಾಗಿ ದ್ವಯಾರ್ಥಾನುಸಂಧಾನಪರಬೇಕು; ಏಕೆಂದರೆ ಸಪರಿಕರವಾದ ಭರಸಮರ್ಪಣವೇ ಪ್ರಪತ್ತಿಶಬ್ದಾರ್ಥವು. ಹೀಗೆಯೇ ಪ್ರಪತ್ತಿಶಾಸ್ತ್ರದಲ್ಲಿ ಹೇಳಲ್ಪಟ್ಟಿರುತ್ತದೆಂಬುದನ್ನು ಸಪ್ರಮಾಣವಾಗಿ ಅನೇಕ ಸ್ಥಳಗಳಲ್ಲಿ ಉಪಪಾದಿಸಿರುತ್ತೇವೆಂದು ತಿಳಿಸಿರುತ್ತಾರೆ--**ಪ್ರಪದ್ಯೇ**-ಎಂಬ ಪದವು ಸಾಙ್ಗಭರಸಮರ್ಪಣೆಯನ್ನು ಬೋಧಿಸುತ್ತದೆ ಎಂಬ ಅಭಿಪ್ರಾಯದಿಂದ ಹೇಳುತ್ತಾರೆ — **ಇಪ್ಪಡಿ**-ಈ ಮೇಲೆ ಉಪಪಾದಿಸಿದ ರೀತಿಯಲ್ಲಿ, **ಸಪರಿಕರಮಾನಭರಸಮರ್ಪಣಮೇ**-ಐದು ಅಙ್ಗಗಳಿಂದಲೂ ಕೂಡಿದ ಭರಸಮರ್ಪಣವೇ, **ಪ್ರಪತ್ತಿಶಾಸ್ತ್ರಾರ್ಥಮೆನ್ನುಮಿಡಮ್**-ಪ್ರಪತ್ತಿಶಾಸ್ತ್ರದ ಅಭಿಪ್ರಾಯವೆಂಬುದನ್ನು, ಪ್ರಮಾಣಸಂಪ್ರದಾಯಗಳ ಮೂಲಕವಾಗಿ, **ಪಲವಿಡತ್ತಿಲುಮ್**-ಕೆಲವು ಸ್ಥಳಗಳಲ್ಲಿ, **ಸಮರ್ಥಿ**

**ಮೆನ್ನು ಮಿಡವ್ ಪ್ರಮಾಣ ಸಂಪ್ರದಾಯಙ್ಗಳಾಲೇ ಪಲವಿಡತ್ತಿಲುಮ್ ಸಮರ್ಥಿತ್ತೋಮ್.**

**ತ್ತೋಮ್**-ಹಿಂದೆ ಸಮರ್ಥಿಸಿ ಹೇಳಿದೆವು. ಎಲ್ಲಿ? ಎಂದರೆ ಪರಿಕರವಿಭಾಗ ಸಾಙ್ಗಪ್ರಪದನಾಧಿಕಾರಗಳಲ್ಲಿ ಸಮರ್ಥಿಸಲ್ಪಟ್ಟಿವೆ ಎಂಬ ಭಾವವು **"ನಿಕ್ಷೇಪಾಪರಪರ್ಯಾಯೋನ್ಯಾಸಃ ಪಂಚಾಂಗಸಂಯುತಃ । ಸನ್ನ್ಯಾಸಸ್ತ್ಯಾಗ ಇತ್ಯುಕ್ತಶ್ಶರಣಾಗತಿರಿತ್ಯಪಿ"** ಎಂಬ ಲಕ್ಷ್ಮೀತಂತ್ರಪ್ರಮಾಣವು (954 ನೇ ಪುಟ) ವು ಅನುಸಂಧೇಯವು; ಮುಂದೆ ಅಹಿರ್ಬುಧ್ನ್ಯಸಂಹಿತಾವಾಕ್ಯಾನುಸಾರ ಫಲಸಙ್ಗಕರ್ತೃತ್ವಾದಿಗಳ ತ್ಯಾಗಪೂರ್ವಕವಾದ ಸಪರಿಕರ ಶರಣಾಗತಿಯೇ ಪ್ರಪತ್ತಿಯು. ಆದುದರಿಂದ **"ಆಗೈಯಾಲ್ ನ್ಯಾಸಃ ಪಂಚಾಂಗಸಂಯುತಃ' ಎಙ್ಗಿರ ಶಾಸ್ತ್ರಾರ್ಥಂ ಇಙ್ಗೇ ಪೂರ್ಣಮ್"** ಎಂದು ಹೇಳಿರುತ್ತಾರೆ.—೯೮೩ ನೆಯ ಪುಟ ನೋಡಿ. ಹಾಗೆಯೇ ಸಾಙ್ಗಪ್ರಪದನಾಧಿಕಾರದ ಪ್ರಥಮ ಸಙ್ಗ್ರಹಶ್ಲೋಕವನ್ನೂ ಮತ್ತು ೧೦೫೩ ನೆಯ ಪುಟದಲ್ಲಿ ಉದಾಹರಿಸಿರುವ ಭರತಮುನಿ ಮತ್ತು ಅಹಿರ್ಬುಧ್ನ್ಯಸಂಹಿತಾವಾಕ್ಯಗಳನ್ನೂ ಪರಾಂಬರಿಸಿ. ೧೧೦೩ ನೆಯ ಪುಟವನ್ನು ನೋಡಿ. **ಸಂಪ್ರದಾಯಕ್ಕೆ** ೧೧೧೩ ನೆಯ ಪುಟವನ್ನೂ ಅವಲೋಕಿಸತಕ್ಕದ್ದು.

ಆಗಲಿ **"ಅನನ್ಯಸಾಧ್ಯೇಸ್ವಾಭೀಷ್ಟೇ ಮಹಾವಿಶ್ವಾಸಪೂರ್ವಕಮ್ ।**
**ತದೇಕೋಪಾಯತಾಯಾಚ್ಞಾ ಪ್ರಪತ್ತಿಶ್ಶರಣಾಗತಿಃ"** ಎಂಬ

ಭರತಮುನಿವಾಕ್ಯದಲ್ಲೂ ಮತ್ತು **"ತ್ವಮೇವೋಪಾಯಭೂತೋಮೇ ಭವೇತಿ ಪ್ರಾರ್ಥನಾಮತಿಃ । ಶರಣಾಗತಿರಿತ್ಯುಕ್ತಾಸಾದೇವೇಸ್ಮಿನ್ ಪ್ರಯುಜ್ಯತಾಮ್"** ಎಂಬ ಅಹಿರ್ಬುಧ್ನ್ಯವಾಕ್ಯದಲ್ಲೂ, **"ಪ್ರಪತ್ತಿರ್ವಿಶ್ವಾಸಃ"** ಎಂಬ ಶ್ರೀ ಯತಿರಾಜರ ವಾಕ್ಯದಲ್ಲೂ (೨೨೧೬ ನೆಯ ಪುಟ) ಮತ್ತೂ **"ಸ್ವಪ್ರವೃತ್ತಿ ನಿವೃತ್ತಿಃ ಪ್ರಪತ್ತಿಃ"** ಎಂಬಲ್ಲೂ ಮಹಾವಿಶ್ವಾಸವೇ ತೋರುತ್ತದೆಯಲ್ಲವೇ? ಆತ್ಮನಿಕ್ಷೇಪವು ತೋರುವದಿಲ್ಲವೇ? ಎಂದರೆ, ಅಲ್ಲಿಯೇ ಉಪಪಾದಿಸಿರುವ ಹಾಗೆ, ಇಲ್ಲಿಯೂ ಆತ್ಮನಿಕ್ಷೇಪವೂ ಮಂತ್ರಾನ್ತರಗಳಲ್ಲಿ ಹೇಳಿರುವ ಹಾಗೆ ಬೋಧಿತವೆಂದು ಮುಂದಿನ ವಾಕ್ಯಗಳಿಂದ ಹೇಳುತ್ತಾರೆ. **"ಕ್ರಿಯಾಂ ತತ್ಸಂಬಂಧಿನಂವಾ ಪ್ರಕಾಶಯತೋಮನ್ತ್ರಸ್ಯಾಂಗತ್ವಮ್"** ಎಂದರೆ ಅನುಷ್ಠಾನಪ್ರಕ್ರಿಯೆಯನ್ನಾಗಲಿ ಅದಕ್ಕೆ ಸೇರಿದುದನ್ನಾಗಲಿ ಪ್ರಕಾಶಪಡಿಸುವ ಮಂತ್ರವನ್ನು ಅಂಗತ್ವೇನ ಭಾವಿಸತಕ್ಕದ್ದೆಂಬ ನ್ಯಾಯವಿರುವಾಗ, ಮತ್ತು ಈ ಕರಣಮನ್ತ್ರವನ್ನು ಭರಸಮರ್ಪಣವಾಗಿ ಭಾವಿಸತಕ್ಕದ್ದಾಗಿರುವಾಗ, ಆತ್ಮನಿಕ್ಷೇಪವೂ ಇಲ್ಲಿ ಬೋಧಿತವೆಂಬುದು ಹೇಗೆ? ಆತ್ಮನಿಕ್ಷೇಪವಲ್ಲವೇ ಪ್ರಧಾನವಾದುದಾಗಿ ಅಂಗಿಯು? ಹೀಗೆ ಆಕ್ಷೇಪತಂದರೆ ಸಮಾಧಾನವನ್ನು ಹೇಳುತ್ತಾರೆ ಏನೆಂದರೆ, ಈ ಪ್ರಪದ್ಯೇ ಎಂಬ ಪದದಿಂದಲೂ ಆತ್ಮನಿಕ್ಷೇಪವು ಬೋಧಿತವು; ಈ ಆತ್ಮನಿಕ್ಷೇಪಕ್ಕೆ ಇದು ಒಂದೇ ಕರಣಮನ್ತ್ರ

**(೧) "ಅನೇನೈವತು ಮನ್ತ್ರೇಣ ಸ್ವಾತ್ಮಾನಂ ಮಯಿ ನಿಕ್ಷಿಪೇತ್ । ಮಯಿನಿಕ್ಷಿಪ್ತಕರ್ತವ್ಯಃ ಕೃತಕೃತ್ಯೋಭವಿಷ್ಯತಿ" ಎನ್ರು ಪ್ರಪತ್ತಿಮನ್ತ್ರಾಂ ತರತ್ತಿಲ್ಶೊನ್ನ ಕರ್ತವ್ಯಂ ಆತ್ಮನಿಕ್ಷೇಪಪ್ರಾಧಾನ್ಯಮ್ ಇಙ್ಗುಮ್ ತುಲ್ಯಮ್.**

---

ವಲ್ಲವು. ಇತರ ಕರಣಮನ್ತ್ರಗಳುಂಟು—"**ವಸುರಣ್ಯೋ ವಿಭೂರಸಿ**"ಎಂದಾರಂಭಿಸಿ, "**ಓಮಿತ್ಯಾತ್ಮಾನಂ ಯುಂಜೀತ**" ಎಂದು ಮುಗಿಸಿ ಹೇಳುವ ತೈತ್ತರೀಯ ಮನ್ತ್ರದಲ್ಲಿ ಆತ್ಮನಿಕ್ಷೇಪವು ವ್ಯಕ್ತವು. ಮತ್ತು "**ತದ್ವಿಷ್ಣೋಃ ಪರಮಂಪದಮ್**" ಎಂಬುದು ಇನ್ನೊಂದು ಮನ್ತ್ರವು; ಸಾತ್ಯಕಿ ತನ್ತ್ರದಲ್ಲಿ ಈ ಮನ್ತ್ರವನ್ನು ಕರಣಮಂತ್ರನಾಗಿಟ್ಟುಕೊಂಡು "**ಸ್ವಾತ್ಮಾನಂ ಮಯಿ ನಿಕ್ಷಿಪೇತ್**" ಎಂದು ಹೇಳಿರುವದರಿಂದಲೂ ಆತ್ಮನಿಕ್ಷೇಪವೇ ಪ್ರಧಾನವಾದುದಾಗಿ ಅಂಗಿ ಎಂಬುದು ವ್ಯಕ್ತಪಡುತ್ತದೆ; ಆದುದರಿಂದ ಈ ದ್ವಯವನ್ನು ಕರಣಮನ್ತ್ರವಾಗಿ ಭಾವಿಸಿ, ಆತ್ಮನಿಕ್ಷೇಪಕ್ಕೆ ಅಂಗವೆಂಬ ಭಾವ ಉಂಟಾದರೂ "**ಸರ್ವಶಾಖಾ ಪ್ರತ್ಯಯ**" ನ್ಯಾಯದ ಪ್ರಕಾರ (ಶಾರೀ ) ಈ ಮನ್ತ್ರದಲ್ಲೂ ಬೋಧಿತವೆಂದು ಇಟ್ಟುಕೊಳ್ಳಲು ಯಾವ ಅಭ್ಯನ್ತರವೂ ಇಲ್ಲವೆಂದು ಮುಂದೆ ಉಪಪಾದಿಸುತ್ತಾರೆ. ಪ್ರಪದ್ಯೇ ಎಂಬುದು ಅನುಷ್ಠಾನವನ್ನುಸೂಚಿಸುವದರಿಂದ, ಅಲ್ಲಿರುವ ಉತ್ತಮಪುರುಷವು ಈ ಆತ್ಮನಿಕ್ಷೇಪರೂಪವಾದ ಪ್ರಧಾನವಾದ ಅಂಗಿಯನ್ನು ಸೂಚಿಸುತ್ತದೆಂಬುದು ನಿರ್ವಿವಾದವೆಂದೂ ತಿಳಿಸುತ್ತಾರೆ.—

**(೧) ಈ "ತದ್ವಿಷ್ಣೋಃ ಪರಮಂಪದಂ ಸದಾಪಶ್ಯನ್ತಿ ಸೂರಯಃ"** ಎಂಬ ಮನ್ತ್ರದ ಮೂಲಕವಾಗಿ, "**ಸ್ವಾತ್ಮಾನಂ ಮಯಿನಿಕ್ಷಿಪೇತ್**" ತನ್ನ ಆತ್ಮಾವನ್ನು ನನ್ನಲ್ಲಿ ಸಮರ್ಪಿಸತಕ್ಕದ್ದು. ಹೀಗೆ ಅನುಷ್ಠಿಸುವದರಿಂದ ಮುಮುಕ್ಷುವು ಕೃತಕೃತ್ಯನಾಗುವನು, **ಎನ್ರು**-ಎಂಬುದಾಗಿ, **ಪ್ರಪತ್ತಿಮನ್ತ್ರಾಂತತ್ತಿಲ್ಶೊನ್ನ**—"**ತದ್ವಿಷ್ಣೋಃ**" ಎಂಬ ಬೇರೆ ಪ್ರಪತ್ತಿಮನ್ತ್ರದಲ್ಲಿ ಹೇಳಿದ, ಕರ್ತವ್ಯವಾದ, **ಆತ್ಮನಿಕ್ಷೇಪಪ್ರಾಧಾನ್ಯಮ್**-ಅಂಗಿಯಾದ ಆತ್ಮಸಮರ್ಪಣದ ಪ್ರಾಧಾನ್ಯವು, **ಇಙ್ಗುಂ**-ಪ್ರಪತ್ತಿಕರಣಮನ್ತ್ರವಾಗಿರುವ ದ್ವಯಮನ್ತ್ರದಲ್ಲೂ, **ತುಲ್ಯಮ್**-ಸರ್ವಶಾಖಾಪ್ರತ್ಯಯನ್ಯಾಯದ ಪ್ರಕಾರ ಸಮಾನವು. ಸರ್ವಶಾಖಾಪ್ರತ್ಯಯನ್ಯಾಯವು ಬ್ರಹ್ಮಸೂತ್ರದ ೩-೩-೧ ರಲ್ಲಿ "**ಸರ್ವವೇದಾನ್ತಪ್ರತ್ಯಯಂ ಚೋದನಾದ್ಯವಿಶೇಷಾತ್**" ಎಂಬ ಬ್ರಹ್ಮಸೂತ್ರದಲ್ಲಿ ಉಪಪಾದಿತವು. ಅಲ್ಲಿ ಹೇಳಿರುವದೇನೆಂದರೆ **ದಹರವಿದ್ಯೆ** ಎಂಬ ಬ್ರಹ್ಮವಿದ್ಯೆಯು ಎರಡು ಶಾಖೆಗಳಲ್ಲಿ ಹೇಳಲ್ಪಟ್ಟಿದ್ದರೂ, ಅದು ಒಂದೇ ವಿದ್ಯೆಯೇ ವಿನಾ ಬೇರೆ ಅಲ್ಲವು. ಒಂದುಕಡೆ ಒಂದು ವಿಷಯವು ಹೇಳದಿರುವದರಿಂದ ಭಿನ್ನವೆಂದು ಭಾವಿಸತಕ್ಕದ್ದಲ್ಲವು ಆ ಹೇಳದಿರುವ ಅಂಶವನ್ನು ಇನ್ನೊಂದು ಕಡೆಯಲ್ಲೂ ಹೇಳಲ್ಪಟ್ಟಹಾಗೆ ಭಾವಿಸತಕ್ಕದ್ದೆಂಬುದು ಮುಖ್ಯ ತಾತ್ಪರ್ಯವು. ಇಲ್ಲಿ

---

(೧) ಸಾತ್ಯಕಿತನ್ತ್ರ.

**ಮೋಕ್ಷಪ್ರದಮಾನಸಿದ್ಧೋಪಾಯುತ್ತುಕ್ಕು, ಮುಮುಕ್ಷುವಿನ್ ಪಕ್ಕಲಿಲೇ ಉಳ್ಳದೊರು ಶಾಸ್ತ್ರೀಯಮಾನ ಸಾಧ್ಯವ್ಯಾಜಮ್ ವಶೀಕರಣಮೆನ್ನು ಮಿಡಮ್ ತನ್ನೈಕರ್ತ್ತಾವಾಗ ಕ್ಕಾಟ್ಟುಗಿರ ಉತ್ತಮನಾಲೇ ಸಿದ್ಧಮ್.**

ಕರಣಮನ್ತ್ರವನ್ನು ಹೇಳುವ ಕಾಲದಲ್ಲಿ ಆತ್ಮನಿಕ್ಷೇಪವನ್ನು ಸಾತ್ವಕಿತನ್ತ್ರದಲ್ಲಿ ಬೋಧಿಸಿರುವದರಿಂದ ದ್ವಯಮನ್ತ್ರವನ್ನು ಕರಣಮನ್ತ್ರವಾಗಿ ಉಪಯೋಗಿಸುವ ಕಾಲದಲ್ಲೂ ಆತ್ಮನಿಕ್ಷೇಪವು ಬೋಧಿತವೆಂಬ ಭಾವವು.

ಮುಂದೆ ಸಿದ್ಧೋಪಾಯನಾದ ಸರ್ವೇಶ್ವರನು ಇಂತಹ ಆತ್ಮನಿಕ್ಷೇಪರೂಪ ಸಾಧ್ಯೋಪಾಯವನ್ನು ವ್ಯಾಜೀಕರಿಸಿಯೇ ಪ್ರಪನ್ನನಿಗೆ ವಶನಾಗಿ ಅನುಗ್ರಹಿಸುವ ನೆಂಬುದು ವ್ಯಕ್ತವು. ಇದನ್ನು "**ಪ್ರಪದ್ಯೇ**" ಎಂಬಲ್ಲಿ ವ್ಯಾಜರೂಪ ಅನುಷ್ಠಾನವು ಕ್ರಿಯಾಪದದಲ್ಲಿರುವ ಉತ್ತಮಪುರುಷದಿಂದ ವ್ಯಕ್ತವೆಂದು ತಿಳಿಸುತ್ತಾರೆ—**ಮೋಕ್ಷಪ್ರದಮಾನಸಿದ್ಧೋಪಾಯುತ್ತುಕ್ಕು**-ಮೋಕ್ಷವನ್ನು ಕೊಡಲು ಸಿದ್ಧೋಪಾಯವಾಗಿ ನಿಂತಿರುವ ಪರಬ್ರಹ್ಮವು, **ಮುಮುಕ್ಷುವಿನ್ ಪಕ್ಕಲಿಲೇ**-ಮೋಕ್ಷಾರ್ಥಿಯಾಗಿ ಉಪಾಯವನ್ನು ಅನುಷ್ಠಿಸುವನಲ್ಲಿ, **ಉಳ್ಳದೊರು ಶಾಸ್ತ್ರೀಯಮಾನ ಸಾಧ್ಯವ್ಯಾಜಮ್**-ಯೋಗ್ಯವಾದ ಒಂದು ಸಾಧ್ಯೋಪಾಯವಾದ ಉಪಾಸನವೋ ಅಥವಾ ಭರನ್ಯಾಸವೋ ವ್ಯಾಜವಾಗಿ, **ವಶೀಕರಣಮೆನ್ನು ಮಿಡಮ್**-ಭಗವಂತನನ್ನು ತನಗೆ ಪರಮಪುರುಷಾರ್ಥಪ್ರದಾತಾವಾಗುವ ಹಾಗೆ ವಶಮಾಡಿಕೊಡುತ್ತದೆಂಬ ಸಂದರ್ಭವು, **ತನ್ನೈಕರ್ತ್ತಾವಾಗಿಕಾಟ್ಟುಗಿರ**-ಅಧಿಕಾರಿಯಾದ ತನ್ನನ್ನು ಆ ಸಾಧ್ಯೋಪಾಯಾನುಷ್ಠಾನಕರ್ತ್ತಾವಾಗಿ ತೋರಿಸುವ, **ಉತ್ತಮನಾಲೇ**—"**ಪ್ರಪದ್ಯೇ**" ಎಂಬಲ್ಲಿರುವ ಉತ್ತಮಪುರುಷದಿಂದ, **ಸಿದ್ಧಮ್**-ವ್ಯಕ್ತವು. ಸಿದ್ಧೋಪಾಯನಾದ ಶ್ರಿಯಃಪತಿಯು ಒಂದು ವ್ಯಾಜವನ್ನು ಎದುರುನೋಡಿಯೇ ರಕ್ಷಿಸುವನು; ಹಾಗಿಲ್ಲದೆ ರಕ್ಷಿಸಿದುದಾದರೆ ಆತನಿಗೆ ಪಕ್ಷಪಾತಿ ಎಂಬ ಅಪವಾದ ಉಂಟಾಗುತ್ತದೆ ಆದುದರಿಂದ ಶಾಸ್ತ್ರದಲ್ಲಿ ತಾನೇ ಹೇಳಿರುವ ನಿಬಂಧನೆಗಳಿಗನುಸಾರ ನಡೆದರೆ ತನಗೆ ಅಪವಾದವಿಲ್ಲವು "**ಭಕ್ತ್ಯಾ ಪರಮಯಾವಾಪಿ ಪ್ರಪತ್ತ್ಯಾ ವಾ ಮಹಾಮತೇ। ಪ್ರಾಪ್ಯೋಽಹಂ ನಾನ್ಯಥಾಪ್ರಾಪ್ಯೋ ಮಮ ಕೈಙ್ಕರ್ಯಲಿಪ್ಸುಭಿಃ**" (                    ) ಎಂಬಲ್ಲಿ ಹೇಳಿರುವ ಹಾಗೆ ಯಾವುದಾದರೂ ಒಂದು ಸಾಧ್ಯೋಪಾಯವನ್ನು ಅನುಷ್ಠಿಸಿದರೇನೇ, ಅದನ್ನು ವ್ಯಾಜಮಾಡಿಕೊಂಡು ಮೋಕ್ಷವನ್ನು ಕೊಡುವನು. ಈ ಉಪಾಯಗಳು ಅಧಿಕಾರಿಗಳ ಅನುಷ್ಠಾನರೂಪವಾದುದರಿಂದ **ಕರ್ತ್ತಾ**ವೆಂದೂ **ಸಾಧ್ಯವ್ಯಾಜ**ವೆಂದೂ ಪ್ರಯೋಗಗಳು. ಈ ವ್ಯಾಜಗಳು ಶಾಸ್ತ್ರಗಳಲ್ಲಿ ಹೇಳಿರುವುವುಗಳಾಗಿರಬೇಕು. ತನಗೆ ಇಷ್ಟವಾದವುಗಳನ್ನು ಅನುಷ್ಠಿಸಿ ಮೋಕ್ಷಬೇಕೆಂದರೆ ದೊರೆಯುವದಿಲ್ಲವು. ಆದುದರಿಂದ **ಶಾಸ್ತ್ರೀಯಮಾನಸಾಧ್ಯವ್ಯಾಜಮ್**-ನಾನು ನಿನ್ನನ್ನು ಸ್ತೋತ್ರ ಮಾಡುತ್ತಾ ಇದ್ದೇನೆ, ಮೋಕ್ಷವನ್ನು ಕೊಡು ಎಂದರೆ ಸಾಕ್ಷಾತ್ತಾಗಿ ಅದರಿಂದಲೇ

ಮೋಕ್ಷವಿಲ್ಲವು. **ವಶೀಕರಣವೆಂಬ** ಪ್ರಯೋಗವು ಇಲ್ಲಿ ಏಕೆಂದರೆ **"ತಸ್ಯಚ ವಶೀಕರಣಂತಚ್ಛರಣಾಗತಿರೇವ"** ಎಂಬ ಶ್ರೀಯತಿವರ್ಯರ ದಿವ್ಯಸೂಕ್ತ್ಯನುಸಾರಪ್ರಯೋಗವು. ಎರಡು ಉಪಾಯಗಳಿಗೂ ಶರಣಾಗತಿಯು **ಆವಶ್ಯಕವು**; ಉಪಾಸನಕ್ಕೆ ಅಂಗವಾಗಿಯೂ ಭರನ್ಯಾಸದಲ್ಲಿ ಅಂಗಿಯಾಗಿಯೂ ಆವಶ್ಯಕವು. ಮೊದಲನೆಯ ಸಂದರ್ಭದಲ್ಲಿ ಸದ್ವಾರಕ ಶರಣಾಗತಿ ಎಂದೂ ಎರಡನೆಯದರಲ್ಲಿ ಅದ್ವಾರಕವೆಂದೂ ಹೇಳಲ್ಪಡುತ್ತದೆ. ನೆಯ ಪುಟವನ್ನು ನೋಡಿ **ಉತ್ತಮನಾಲೇ ಸಿದ್ಧಮ್** ಎಂಬಲ್ಲಿ ಉತ್ತಮ ಪುರುಷವು ಅನುಷ್ಠಾನವನ್ನು ಬೋಧಿಸುವದರಿಂದ, ಈ ಸಂದರ್ಭದಲ್ಲಿ ಆ ಅನುಷ್ಠಾನವು ಯಾವುದೆಂದರೆ ತಾನು ಉಪಾಸನೆಗೆ ಅಶಕ್ತನಾಗಿರುವದರಿಂದ, ನೀನೇ ಆ ಸ್ಥಾನದಲ್ಲಿ ನಿಂತು ಅದರ ಫಲವನ್ನು ಕೊಟ್ಟು ಈ ಆತ್ಮನನ್ನು ರಕ್ಷಿಸತಕ್ಕದ್ದೆಂದು ಸರ್ವಭರವನ್ನೂ ಆತನಲ್ಲಿಡುವದಕ್ಕಾಗಿ ಸರ್ವಭರನ್ಯಾಸರೂಪವಾದ ಆತ್ಮನಿಕ್ಷೇಪವು. ಇದರಿಂದ ಭರನ್ಯಾಸಕ್ಕೆ ಅರ್ಹನಾದ ಅಧಿಕಾರಿವಿಶೇಷವೂ, ಕಾರ್ಪಣ್ಯವೂ ಮಹಾವಿಶ್ವಾಸಾದಿಗಳೂ **ಎಲ್ಲವೂ ಈ** ಉತ್ತಮಪುರುಷದಲ್ಲಿರುವ ಪ್ರಪದ್ಯೇ ಎಂಬುದರಿಂದ ವ್ಯಕ್ತವೆಂಬ ಭಾವವು. **ಈ** ವ್ಯಾಜವೇ ಜಡವಾದುದರಿಂದ ಫಲಪ್ರದವಲ್ಲವು, ಫಲಪ್ರದನು ಈಶ್ವರನೇ ಎಂಬ ಭಾವವು. **ಸಾಧ್ಯವ್ಯಾಜಮ್ ವಶೀಕರಣಮ್** ಎಂಬ ಪ್ರಯೋಗದಿಂದ ಸೂಚಿತವು. ಇಲ್ಲಿ ಒಂದು ಪೂರ್ವಪಕ್ಷವನ್ನು ತರಬಹುದು. ಏನೆಂದರೆ–ಕಾರುಣ್ಯ ವಾತ್ಸಲ್ಯಾದಿಗಳಿಂದ ಪೂರ್ಣನಾಗಿರುವ ಸರ್ವೇಶ್ವರನು ಒಂದು ವ್ಯಾಜವನ್ನು ಅಪೇಕ್ಷಿಸುವದು ನ್ಯಾಯವೋ? ಲೋಕದಲ್ಲಿ ಕೂಡ ತಾಯಿಯೇ ಮಗುವಿಗೆ ಯಾವಾಗ ಸ್ತನ್ಯಬೇಕೋ ಅದನ್ನು ಪರ್ಯಾಲೋಚಿಸಿ ಸ್ತನ್ಯವನ್ನು ಕೊಡಬೇಕಲ್ಲವೆ? ಸ್ವಾಮಿಯು **"ಪಿತಾತ್ವಂ ಮಾತಾತ್ವಂ"** ಎಂದು ಹೇಳಿದ ರೀತಿಯಲ್ಲಿ ತಾಯಿಗೆ ಸಮಾನನು. ನಾವು ಮೋಕ್ಷಾರ್ಥಿಗಳಾಗಿರುವ ಆತನ ಸ್ತನಂಧಯರು. ತಾನೇ ತಿಳಿದುಕೊಡಬೇಕಲ್ಲವೇ? ಮಗುವು ಅಳುವ ತನಕ ನಿರೀಕ್ಷಿಸಬೇಕೆ? ಎಂದರೆ ಇಂತಹ ಲಘುವಾದ ಒಂದು ವ್ಯಾಜವನ್ನು ಉದ್ದೇಶಿಸಿ ಮೋಕ್ಷವನ್ನು ಕೊಡದೇ ಹೋದಲ್ಲಿ, ತಿಳುವಳಿಕೆ ಇಲ್ಲದ ಜನರು ನಿಷ್ಪಕ್ಷಪಾತಿಯಾದ ಸರ್ವೇಶ್ವರನನ್ನು ಪಕ್ಷಪಾತಿಯೆನ್ನುವರು. ಅದೂ ಅಲ್ಲದೆ ತಾನು ಶಾಸ್ತ್ರವಾಗಿ ಒಂದು ನಿಬಂಧನ ಪ್ರಕಾರ ಸಾಧುಕಾರಿಗೆ ಸಾಧುಫಲವನ್ನೂ ಪಾಪಕಾರಿಗೆ ಪಾಪಫಲವನ್ನೂ ಕೊಡುವನಲ್ಲವೆಂಬ ನಿಂದೆಗೆ ಒಳಗಾಗಬೇಕಾಗುತ್ತದೆ. ಆದುದರಿಂದ ತಾನೇ ಫಲಪ್ರದನಾದರೂ ಶಾಸ್ತ್ರವಿಹಿತ ವ್ಯಾಜಗಳು ಅವಶ್ಯಕಗಳು. ಇದೂ ಅಲ್ಲದೆ ಸಹಜ ಕರುಣಾನಿಧಿಯಾದುದರಿಂದ ಸರ್ವಮುಕ್ತಿಪ್ರಸಂಗ ಬಂದು ಲೀಲಾವಿಭೂತಿಯೇ ಅಳಿಸಿಹೋಗಬೇಕಾಗುತ್ತದೆ. ಸಿದ್ಧೋಪಾಯನು ಈತನಿಂದ ಪ್ರೀತನಾಗಬೇಕು. ಆ ಪ್ರೀತಿಯನ್ನು ಆಕರ್ಷಿಸುವದಕ್ಕೆ ಒಂದು ವ್ಯಾಜರೂಪಪ್ರಪತ್ತಿಯೂ ಮಂತ್ರೋಚ್ಚಾರಣೆಯೂ, ಗುರುವಿನ ಪ್ರಾರ್ಥನೆಯೂ ಇವೆಲ್ಲಾ **ಆವಶ್ಯಕವು**

## " ಪ್ರಪದ್ಯೇ " ತಿ ಶಬ್ದೇನ ಅಧಿಕಾರವಿಶೇಷಂ ನ ಪರಿಕರಸಾಙ್ಗ ಪ್ರಪದನಂ ಸಪ್ರಮಾಣಮುಪಪಾದಯತಿ

**ಇದಿಲ್ ಔಚಿತ್ಯತ್ತಾಲೇ (೧) " ಪುಕಲೊನ್ರಿಲ್ಲಾವಡಿಯೇರ್ ", (೨) " ಅಹಮಸ್ಮ್ಯಪರಾಧಾನಾಮಾಲಯೋಽಕಿಂಚನೋಽಗತಿಃ " (೩) ನಧರ್ಮ**

ಆದುದರಿಂದಲೇ ಜ್ಞಾನಸಿಧಿಗಳಾದ ಶ್ರೀ ಯತಿವರ್ಯರು " **ತಸ್ಯಚವಶೀಕರಣಂ ತಚ್ಛರಣಾಗತಿರೇವ** " ಎಂದು ವಶೀಕರಣ ಪರಂಪರೆಯನ್ನು ಹೇಳಿ ಮುಗಿಸುವ ಸಂದರ್ಭದಲ್ಲಿ ಪರಮ ಹಿತೋಪದೇಶವನ್ನು ಮಾಡಿರುತ್ತಾರೆ. ಇಂತಹ ಪರಮ ಹಿತೋಪದೇಶವನ್ನು ನಿರಾಕರಿಸಿ ವಾದಮಾಡಬಹುದೋ? ಅಂತಹ ವಾದವು ಸರ್ವಾತ್ಮನಾ ಯುಕ್ತವೇ ಅಲ್ಲವು.

ಪ್ರಪದ್ಯೇ ಎಂಬ ಪದದಿಂದ ಅಧಿಕಾರಿವಿಶೇಷವನ್ನೂ ಸಪರಿಕರವಾದ ಸಾಙ್ಗ ಪ್ರಪದನವನ್ನೂ ಸಪ್ರಮಾಣವಾಗಿ ಉಪಪಾದಿಸುತ್ತಾರೆ.

ಮೊದಲು ಅಧಿಕಾರವಿಶೇಷವನ್ನು ಈ ಪ್ರಪದ್ಯೇ ಎಂಬಲ್ಲಿರುವ ಅಹಮರ್ಥದಿಂದ ಕಾರ್ಪಣ್ಯದಿಂದ ಕೂಡಿದವನೆಂದು ತೋರಿಬರುತ್ತದೆಂದು, ಅಂತಹ ಆಕಿಂಚನ್ಯವನ್ನು ನಮ್ಮಾಳ್ವಾರ್, ಯಾಮುನಾರ್ಯ, ಯತೀಂದ್ರರ ದಿವ್ಯಸೂಕ್ತಿಗಳಿಂದ ವ್ಯಕ್ತಪಡಿಸುತ್ತಾರೆ.—**ಇದಿಲ್**-ಈ " **ಪ್ರಪದ್ಯೇ** " ಎಂಬಲ್ಲಿ, **ಔಚಿತ್ಯತ್ತಾಲೇ**-ಅದಕ್ಕೆ ಅರ್ಹತೆಯನ್ನುಂಟುಮಾಡುವ ಔಚಿತ್ಯದಿಂದ, **ಇತ್ಯಾದಿಗಳಿಲ್ ಪಡಿಯೇ**-ಮೇಲೆ ಉದಾಹರಿಸಿದ ಮೂರು ಪ್ರಮಾಣಗಳೇ ಮೊದಲಾದವುಗಳಲ್ಲಿ ಹೇಳಲ್ಪಟ್ಟಿರುವ ಹಾಗೆ, **ಅಧಿಕಾರವಿಶೇಷಮ್**-ಉಪಾಸನಕ್ಕೆ ಅಶಕ್ತನಾಗಿ ಲಘೂಪಾಯಾನುಷ್ಠಾನಕ್ಕೆ ಅರ್ಹನಾಗಿರುವ ಅಧಿಕಾರ ವಿಶೇಷವೂ, **ಕಾರ್ಪಣ್ಯಮಾಗಿರಪರಿಕರಮುಮ್**-ಹೀಗೆ ಅನನ್ಯಗತಿಕನಾಗಿರುವದರಿಂದ ಕಾರ್ಪಣ್ಯವೆಂಬ ಅಂಗವೂ, **ಸೂಚಿತಮ್**-ಸೂಚಿತವು. ಆ ಪ್ರಮಾಣಗಳು ಯಾವುವೆಂದರೆ-(೧) **ಪುಗಲೊನ್ರಿಲ್ಲಾವಡಿಯೇ.** ಇದು ಅನೇಕಸಲ ಉದಾಹೃತವು (೧೨೬೬ ನೆಯ ಪುಟಗಳನ್ನು ನೋಡಿ.) ಇಲ್ಲಿ ಉದಾಹರಿಸಿರುವ ಭಾಗವು ಅನನ್ಯಗತಿತ್ವವುಳ್ಳ ಅಧಿಕಾರಿವಿಶೇಷವನ್ನು ಸೂಚಿಸುತ್ತದೆ. ಭರನ್ಯಾಸಕ್ಕೆ ಅರ್ಹನಾಗಬೇಕಾದ ಅಧಿಕಾರವಿಶೇಷವ್ಯಾವುದು ಎಂದರೆ ಅನನ್ಯಗತಿತ್ವವು; ಇದು ಉಪಾಸನಾದಿಗಳಿಗೆ ಶಕ್ತಿ ಇಲ್ಲವೇ ಎಂಬ ಕಾರ್ಪಣ್ಯವನ್ನು ಪ್ರಕಟಿಸುತ್ತದೆ. ಹೀಗೆ ಇರುವದಲ್ಲದೆ ಶೇಷತ್ವಜ್ಞಾನವೂ ಆವಶ್ಯಕವೆಂದು **ಅಡಿಯೇ** ಎಂಬ ಶಬ್ದದಿಂದ ಹೇಳಲ್ಪಟ್ಟಿತು. **ಪುಗಲ್** ಎಂದರೆ ಉಪಾಯವು, ಕರ್ಮಯೋಗಾದಿಗಳಿಂದ ಸಹಕೃತವಾದ ಭಕ್ತಿಯೋಗವೆಂದು ಹೇಳಿಸಿಕೊಳ್ಳುವ ಉಪಾಯವು, **ಪುಗಲ್ ಇಲ್ಲಾಒನ್ರು**-ಇಂತಹ

(೧) ತಿರು. ೬-೧೦-೧೦. (೨) (೩) ಆಳ.ಸ್ತೋ. ೨೨.

**-ನಿಷ್ಠೋಽಸ್ಮಿ ನಚಾತ್ಮವೇದಿ" ಇತ್ಯಾದಿಗಳಿಲ್ಪಡಿಯೇ ಅಧಿಕಾರ ವಿಶೇಷಮುಮ್ ಕಾರ್ಪಣ್ಯಮಾಗಿರ ಪರಿಕರಮುಮ್ ಸೂಚಿತಮ್.**

---

ಕಷ್ಟಸಾಧ್ಯವಾದ ಗುರೂಪಾಯವೂ ತತ್ಪರಿಕರಗಳೂ ಒಂದೂ ನನ್ನಲ್ಲಿಲ್ಲವು ಎಂದರೆ ತಾನು ಅಶಕ್ತನು, ಮತ್ತು ಸಿದ್ಧೋಪಾಯನಾಗಿ ನೀನಲ್ಲದೆ ಇನ್ನು ಯಾರನ್ನೂ ಕಾಣೆನು; ಈ ಕಾರಣಗಳಿಂದ ನಿನಗೇನೇ ಶೇಷಭೂತನೆಂದು ಚನ್ನಾಗಿ ಅರಿತಿರುವ ನಾನು, ಎಂಬರ್ಥವು, ಇದರಿಂದ ಅಧಿಕಾರಿವಿಶೇಷವೂ, ಅನನ್ಯಗತಿತ್ವ ಕಾರ್ಪಣ್ಯ ಶೇಷತ್ವ, ಮಹಾ ವಿಶ್ವಾಸಾದಿಗಳಿಂದ ವ್ಯಕ್ತವು; ಅದರೊಂದಿಗೆ ಈ ಪರಿಕರಗಳೂ ಉಪಪಾದಿತವು, (೨) **ಅಪರಾಧಾನಾಮಾಲಯಃ**- ಅಪರಾಧಗಳಿಗೆಲ್ಲಾ ತೌರು ಮನೆಯು, ಮತ್ತು ಆಕಿಂಚನನು; ಬೇರೆ ಯಾವ ಉಪಾಯಕ್ಕೂ ಅರ್ಹನಲ್ಲದೆ ದೀನನಾದವನು, ಅಗತಿಃ- ಪರಮಾತ್ಮನಲ್ಲದೆ ಬೇರೆ ಗತಿಯಿಲ್ಲದವನು, (೩)

**ನಧರ್ಮ ನಿಷ್ಠೋಽಸ್ಮಿ ನಚಾತ್ಮವೇದಿ ನಭಕ್ತಿಮಾ೯ ತ್ವಚ್ಚರಣಾರವಿಂದೇ।**
**ಅಕಿಂಚನೋಽನನ್ಯಗತಿಶ್ಶರಣ್ಯ ತ್ವತ್ಪಾದಮೂಲಂ ಶರಣಂ ಪ್ರಪದ್ಯೇ॥**

ಈ ಶ್ಲೋಕಾರ್ಥಕ್ಕೆ ೧೨೬೪ ನೆಯ ಪುಟವನ್ನು ನೋಡಿ. ಈ ಶ್ಲೋಕದಲ್ಲಿ ಭಕ್ತಿಯೋಗವಾದ ಇನ್ನೊಂದು ಉಪಾಯಾನುಷ್ಠಾನ ಮಾಡಲು, ಅದರ ಮುಖ್ಯಾಂಗವಾದ ಕರ್ಮಯೋಗವನ್ನು ಅನುಷ್ಠಿಸಲು ಶಕ್ತಿಯಿಲ್ಲವು. ನಿತ್ಯ ನೈಮಿತ್ತಿಕಾನುಷ್ಠಾನಕ್ಕೆ ಶಕ್ತಿಯಿಲ್ಲವೆಂದು ಹೇಳಲಿಲ್ಲವು. ಕರ್ಮಯೋಗಕ್ಕೆ ಬೇಕಾದ ಅಂಗಿ ಮತ್ತುಅದಕ್ಕೇಬೇಕಾದ ಆತ್ಮಯಾಥಾತ್ಮಜ್ಞಾನ,ಅದಕ್ಕಾಗಿ ಧ್ಯಾನ ಮತ್ತು ನಾಲ್ಕು ವಿಧ ನಮುತ್ಪಜ್ಞಾನ ಇವು ಒಂದೂ ತಿಳಿಯದೆಂಬ ಭಾವವು. ಒಂದುವೇಳೆ ಇದು ಸಿದ್ಧಿಸಿದರೂ ಜ್ಞಾನಯೋಗವನ್ನಾಗಲಿ ಅನುಷ್ಠಿಸಲು ಶಕ್ತಿಯಿಲ್ಲವು. ಆದುದರಿಂದ ತಾನು ಅಕಿಂಚನನು., ಅನನ್ಯಗತಿಕನೆಂದು ಹೇಳಿಕೊಂಡಿರುತ್ತಾರೆ. ಆಕಿಂಚನ್ಯವೂ ಅನನ್ಯಗತಿತ್ವವೂ ತಮಗೆ ಉಪಾಸನೆಯಲ್ಲಿ ಶಕ್ತಿಯೇ ಇಲ್ಲದುದರಿಂದ ಎಂದು ಹೇಳಿದರು. ಆದರೆ ಈ ಶ್ಲೋಕದಲ್ಲಿ ಕೆಲವರು ಹೇಳುವುದೇನೆಂದರೆ, **ನಧರ್ಮನಿಷ್ಠೋಽಸ್ಮಿ**- ಎಂಬಲ್ಲಿ ಮೊದಲುಮೆಟ್ಟಲಾದ ಪ್ರಧಾನವಾದ ಅಂಗವನ್ನು ಹತ್ತಲಾರೆ ಅನುಷ್ಠಿಸಲಾರೆ ಎಂದು ಹೇಳಿದ್ದರೆ ನಾಕಾಗಿತ್ತು. **ನಚಾತ್ಮವೇದೀ,** ಮತ್ತು **ನಭಕ್ತಿಮಾ೯** ಎಂದು ಹೇಳಿರುವದರಿಂದ ಪೂರ್ವಜನ್ಮದಲ್ಲಿ ಕರ್ಮಯೋಗವು ಪರಿಪಕ್ವವಾಗಿದ್ದರೆ,ಅವನ್ನು ತ್ಯಜಿಸಿ ಜ್ಞಾನಯೋಗ ಮಾಡು ಎಂದರೆ ಅದಕ್ಕೂ ತಮಗೆ ಯೋಗ್ಯತೆಯಿಲ್ಲವೆಂದು ನಚಾತ್ಮವೇದೀ ಎಂದು ಹೇಳಿದರಂದೂ ಕರ್ಮಯೋಗ ಜ್ಞಾನಯೋಗಗಳು ಪೂರ್ವಜನ್ಮದಲ್ಲಿ ಸಿದ್ಧಿಸಿದ್ದರೆ. ಭಕ್ತಿಯೋಗಕ್ಕೂ ತನಗೆ ಶಕ್ತಿಯಿಲ್ಲವೆಂದು ಹೇಳುವುದಕ್ಕಾಗಿ **ನಭಕ್ತಿಮಾ೯**-ಎಂದು ಹೇಳಿಕೊಂಡರೆಂದುಹೇಳುವರು. ಇದು ಅಪಸಿದ್ಧಾಂತವು. ಹೀಗೆ ಹೇಳಿದರೆ ಅನೇಕ ಆಕ್ಷೇಪಗಳಿಗೆ ಕಾರಣವಾಗುತ್ತದೆ.

(೧) ಅಂಗಾಂಗಗಳ ಸಮುಚ್ಚಯವು ಫಲಕ್ಕೆ ಅವಶ್ಯಕವಿಲ್ಲವೆಂದಾಗಿ ಈ ಲೋಕದಲ್ಲಿ ಅಂಗಗಳಿಲ್ಲದೇನೆ ಅಂಗಿಯನ್ನು ಅನುಷ್ಠಿಸಬಹುವೆಂಬ ಅನುಮತಿಗೂ ಶಾಸ್ತ್ರಾತಿಕ್ರಮಣಕ್ಕೂ ಕಾರಣವಾಗಿ ಲೋಕವಿರುದ್ಧವಾವ ವಿಷಯವಾಗುತ್ತದೆ.- ಬರೀ ಅಂಗಗಳು, ಬರೀ ಅಂಗಿಯೂ ಫಲವನ್ನು ಕೊಡಲಾರವು. ಈ ಜನ್ಮದಲ್ಲೇ ಒಬ್ಬನು ಒಂದು ಯಜ್ಞವನ್ನು ಅನುಷ್ಠಿಸುತ್ತಿರುವಾಗ ಯಜ್ಞ ಪೂರ್ತಿಯಾಗುವುದಕ್ಕೆ ಮುಂಚೆ ಪ್ರತಿಬಂಧಕವುಂಟಾಗಿ ನಿಂತುಹೋದುದರಿಂದ ಖಿನ್ನನಾಗಿ ಪುನಃ ಅದನ್ನು ಅನುಷ್ಠಿಸಬೇಕೆಂಬ ಉತ್ಸಾಹಯುಕ್ತನಾದರೆ, ಬಿಟ್ಟುಹೋದ ಭಾಗದಿಂದ ಮುಂದಕ್ಕೆ ಅನುಷ್ಠಿಸುವುದು ಹೇಗೆ ಯುಕ್ತವಲ್ಲದೆ ಪುನಃ ಯಜ್ಞಾರಂಭವೇ ಆಗಬೇಕೋ, ಆ ನ್ಯಾಯದಿಂದಲೇ ಹಿಂದಿನ ಜನ್ಮದ ಕರ್ಮಯೋಗ ನಿಷ್ಪತ್ತಿಯ ಮುಂದಕ್ಕೆ ಜ್ಞಾನಯೋಗವನ್ನವಲಂಬಿಸುವದೂ ಅಶಾಸ್ತ್ರೀಯವೇ.

(೨) ಹುಟ್ಟಿದವನು ಬಾಲನಾಗಿ ಹುಟ್ಟಿ ವಿದ್ಯಾಭ್ಯಾಸಾದಿಗಳಿಲ್ಲಾ, ಮತ್ತು ಉಪನಯನಾದಿ ಸಂಸ್ಕಾರಗಳೂ ಸಹ ಹೇಗೆ ಅವಶ್ಯಕವೋ ಹಾಗೆಯೇ, ಉಪಾಸನಕ್ಕೆ ಕರ್ಮಯೋಗವೂ ಅವಶ್ಯಕವು. ಆದರೆ ಹಿಂದಿನ ಪರಿಪಕ್ವ ಕರ್ಮಯೋಗ ಬಲದಿಂದುಂಟಾದ ಸ್ವಾಮಿಯ ಅನುಗ್ರಹ ರೂಪ ಸಂಸ್ಕಾರವು ವ್ಯರ್ಥವಾಗುವುದಿಲ್ಲವು. ಕರ್ಮಯೋಗವು ಬಹು ಶೀಘ್ರ ಫಲದಾಯಕವಾಗುತ್ತದೆ. ಹಿಂದಿನ ಜನ್ಮದಲ್ಲಿ ನಾನು ಇಂಟರ್‌ಮೀಡಿಯಟ್ ಪರೀಕ್ಷೆ ಮಾಡಿದ್ದೆನು. ಈಗ ಬಿ. ಎ. ಕ್ಲಾಸಿಗೆ ಸೇರಿಸಿ ಎಂದರೆ ಅಧಿಕಾರಿಗಳು ಸೇರಿಸುವುದಿಲ್ಲವು. ಹಾಗೆ ಕರ್ಮಯೋಗ ನಿಷ್ಪತ್ತಿತನಗೆ ಆಗಿತ್ತೆಂಬ ಸ್ಮೃತಿ ಇರುವಂಥಾದ್ದೂ ಲೋಕವಿರುದ್ಧ ವಿಷಯವು.

(೩) ಶ್ರೀಭಾಷ್ಯಕಾರರಸೂಕ್ತಿಗೂ ವಿರುದ್ಧವು."ಅಥವಾಯೋಗಿನಾಮೇವ" ಎಂಬ ಗೀ. ೬. ೪೨ ನೆಯ ಶ್ಲೋಕ ಭಾಷ್ಯದಲ್ಲಿ "ಪರಿಪಕ್ವಯೋಗಶ್ಚಲಿತಶ್ಚೇತ್ ಯೋಗಂಕುರ್ವತಾಂಸ್ವಯಮೇವ ಯೋಗೋಪದೇಶವಕ್ಷ್ಯಮಾಣಾಂ ಕುಲೇ ಭವತಿ" ಎಂದು ಅಪ್ಪಣೆ ಕೊಡಿಸಿರುತ್ತಾರೆ. ಪರಿಪಕ್ವ ಕರ್ಮಯೋಗಿಯು ಭಕ್ತಿಯೋಗಿಯ ಮನೆಯಲ್ಲಿ ಹುಟ್ಟುವನೆಂದು ಬರೆಯಲಿಲ್ಲವು ಆತನು ಕರ್ಮಯೋಗವನ್ನು ಪದೇಶಿಸುವವನ ಮನೆಯಲ್ಲಿ ಆ ಕರ್ಮಭ್ರಷ್ಟನಿಗೆ ಜನ್ಮವೆಂದು ಹೇಳಿರುತ್ತಾರೆ. ದಾಸನು ಬರೆದಿರುವ ಭಗವದ್ಗೀತೆಯ ಈ ಶ್ಲೋಕದ ಉಪಪಾದನೆಯನ್ನು ನೋಡಿ. (೭೨೬ ನೆಯ ಪುಟ)

ಹಾಗಾದರೆ ಈ ಮೂರನ್ನೂ ಏಕೆ ಹೇಳಿದರೆಂದು ಪ್ರತಿಕಕ್ಷಿಯು ಕೇಳಿದರೆ ಉತ್ತರವು ಇಷ್ಟೇ. ಇನ್ನೊಂದು ಉಪಾಯವಾದುದು ತುಂಬಾ ಗುರುತರವು. ಅದಕ್ಕೆ ಕರ್ಮಯೋಗ ಜ್ಞಾನಯೋಗ ಭಕ್ತಿಯೋಗ ಹೀಗೆ ಬಹು ಕಷ್ಟತರವಾದ ಮತ್ತು ಬಹುಕಾಲ ಅನುಷ್ಠಿಸಬೇಕಾದುದು; ಹೀಗೆ ಅನುಷ್ಠಿಸಲು ತನಗೆ ಸಾಧ್ಯವಿಲ್ಲವೆಂದಾಗಲಿ, ತಿಳಿಸುವದಕ್ಕಾಗಿ. ಅಥವಾ ಕರ್ಮಯೋಗವೇ ಅಸಾಧ್ಯವು; ಒಂದು ವೇಳೆ ಕಷ್ಟಪಟ್ಟು ನಿರ್ವಹಿಸಿದರೂ, ಜ್ಞಾನಯೋಗ ಮಾಡಲು ಸಾಧ್ಯವಿಲ್ಲವು;

**ಇದು ಗದ್ಯತ್ತಿಲ್ "ಅನನ್ಯ ಶರಣಃ" ಎಜ್ಗ್ರಪದತ್ತಿಲುಮ್, ಶಿರುಗದ್ಯತ್ತಿಲ್ "ಸ್ವಾತ್ಮ ನಿತ್ಯನಿಯಾಮ್ಯ" ಎಜ್ಗ್ರ ಚೂರ್ಣಿಕೈಯಿಲುಮ್, ಶ್ರೀ ವೈಕುಂಠಗದ್ಯತ್ತಿಲ್ "ತತ್ಪ್ರಾಪ್ತಯೇಚ ತತ್ಪಾದಾಂಬುಜದ್ವಯ ಪ್ರಪತ್ತೇರನ್ಯನ್ನಮೇ ಕಲ್ಪಕೋಟಿ ಸಹಸ್ರೇಣಾಪಿ ಸಾಧನಮಸ್ತೀತಿ ಮನ್ವಾನಃ" ಎಜ್ಗ್ರಚೂರ್ಣಿಕೈಯಿಲುಮ್, ಪ್ರಪಂಚಿತಮಾಯ್ತ್ತು.**

---

ಹೋಗಲಿ, ಇದು ಬೇಡವೆಂದರೂ ಅಥವಾ ಒಂದುವೇಳೆ ಸಿದ್ಧಿಸಿದರೂ ಭಕ್ತಿಯೋಗವನ್ನು ಅನುಷ್ಠಿಸಲು ಸಾಧ್ಯವೇ ಇಲ್ಲವೆಂದು ಹೇಳುವುದಕ್ಕಾಗಲಿ, ಮೂರೂ ಹೇಳಲ್ಪಟ್ಟವೆಂದು ಶಾಸ್ತ್ರ ವಿರೋಧಾದಿಗಳಿಲ್ಲದಹಾಗೆ ಅನ್ವಯಿಸಬಹುದು.

ಹೀಗೆ ತನಗೆ ಇವುಗಳಲ್ಲಿ ಸಾಮರ್ಥ್ಯವಿಲ್ಲದುದರಿಂದ **ಅಕಿಂಚನೋಽನನ್ಯಗತಿಯು**- ಎಂದುಹೇಳಿ ಇದರಿಂದ ತಮಗೆ ಲಘೂಪಾಯದಲ್ಲಿ ಅನ್ವಯ ಉಂಟಾಯಿತೆಂದು **ತತ್ಪಾದಮೂಲಂ ಶರಣಂ ಪ್ರಪದ್ಯೇ**- ಎಂದು ಅಪ್ಪಣೆಕೊಡಿಸಿದರು.

ಮುಂದೆ ಶ್ರೀ ಭಾಷ್ಯಕಾರರ ದಿವ್ಯ ಸೂಕ್ತಿಯಿಂದಲೂ **ಪ್ರಪದ್ಯೇ**- ಎಂಬಲ್ಲಿ ಅಧಿಕಾರ ವಿಶೇಷವೂ ಕಾರ್ಪಣ್ಯವೂ ದ್ಯೋತಿತವೆಂದು ತಿಳಿಸುತ್ತಾರೆ.-**ಇದು** ಎಂದರೆ ಶರಣಂ ಪ್ರಪದ್ಯೇ ಎಂಬಲ್ಲಿ ಅಧಿಕಾರ ವಿಶೇಷವೂ ಕಾರ್ಪಣ್ಯವೂ ತೋರಿಬರುತ್ತವೆಂಬುದು, **ಗದ್ಯತ್ತಿಲ್**- ಪೃಥು ಅಥವಾ ಶರಣಾಗತಿ ಗದ್ಯದಲ್ಲಿ, "ಅನನ್ಯಶರಣಃ" **ಎಜ್ಗ್ರಪದತ್ತಿಲುಮ್**- ಎಂಬ ಪದದಲ್ಲೂ ಮತ್ತು **ಶಿರುಗದ್ಯತ್ತಿಲ್**- ಮಿತಗದ್ಯ ಅಥವಾ ಶ್ರೀರಂಗಗದ್ಯದಲ್ಲಿ, "ಸ್ವಾತ್ಮನಿತ್ಯನಿಯಾಮ್ಯ" **ಎಜ್ಗ್ರ ಚೂರ್ಣಿಕೆಯಿಲುಮ್** — ಎನ್ನುವ ಪದ್ಯರೂಪವಲ್ಲದ ವಾಕ್ಯರೂಪದಲ್ಲಿರುವ ಗ್ರಂಥದಲ್ಲಿ, ಚೂರ್ಣಿಕೆ ಎಂದರೆ ಗಂಭೀರವಾಗಿರುವ ಗದ್ಯಕ್ಕೆ ಹೆಸರು. ಮತ್ತು ಶ್ರೀ ವೈಕುಂಠ ಗದ್ಯದಲ್ಲಿ **"ತತ್ಪ್ರಾಪ್ತಯೇಚ"**- ಎಂದಾರಂಭಿಸಿ ಹೇಳಿರುವ **ಚೂರ್ಣಿಕೈಯಿಲುಮ್**- ಚೂರ್ಣಿಕೆಯಲ್ಲೂ, **ಪ್ರಪಂಚಿತಮಾಯ್ತ್ತು** - ವಿವರಿಸಿ ಹೇಳಲ್ಪಟ್ಟಿತು. ಹೀಗೆ ಗದ್ಯತ್ರಯದಲ್ಲೂ ಶರಣಂ ಪ್ರಪದ್ಯೇ ಎಂಬಲ್ಲಿ ಭರನ್ಯಾಸವನ್ನು ಅನುಷ್ಠಿಸುವಾಗ. ಆ ಕ್ರಿಯಾಪದದಲ್ಲಿ ಅಧಿಕಾರವಿಶೇಷವೂ ಅಕಿಂಚನ್ಯವೂ ದ್ಯೋತಿತವೆಂಬುದು ವ್ಯಕ್ತವಾಗಿ ಹೇಳಲ್ಪಟ್ಟಿದೆ ಎಂದು ಉಪಪಾದಿಸಿದರು.

(೧) ಶರಣಾಗತಿಗದ್ಯದ ವಾಕ್ಯವು ಯಾವುದೆಂದರೆ **"ಶ್ರೀಮನ್ನಾರಾಯಣ ಅಶರಣ್ಯಶರಣ್ಯ ಅನನ್ಯ ಶರಣಃ ತ್ವತ್ಪಾದಾರವಿಂದಯುಗಳಂ ಶರಣಮಹಂ ಪ್ರಪದ್ಯೇ"** ಇಲ್ಲಿ **ಶ್ರೀಮನ್ನಾರಾಯಣ**- ಎಂಬುವರಿಂದ ಲಕ್ಷ್ಮೀಸಹಿತನೇ ಸಿದ್ಧೋಪಾಯನೆಂಬುದು ಸೂಚಿತವು: **ಅಶರಣ್ಯಶರಣ್ಯ**- ಎಂಬುದರಿಂದ ಆತನೇ ಗತಿಯೇ ವಿನಾ ಬೇರೆ ಗತಿಯಿಲ್ಲವೆಂದು ಅನನ್ಯಗತಿತ್ವಭಾವವು ಸೂಚಿತವು, **ಅನನ್ಯಶರಣಃ**- ಎಂಬುದರಿಂದ ಅನನ್ಯಪ್ರಯೋಜನನಾದ ನನಗೆ ನೀನಲ್ಲದೆ ಇನ್ನು ಯಾರೂ ದಯಪಾಲಿಸರೆಂಬುದರಿಂದ ಕಾರ್ಪಣ್ಯವು ಸೂಚಿತವು. **ಪ್ರಪದ್ಯೇ** ಎಂಬಲ್ಲೆ ಉತ್ತಮಪುರುಷವು ಸೂಚಿತವಾಗಿರುವಾಗ ಬೇರೆ **ಅಹಂ**-ಎಂಬುವರಿಂದ

ನನಗೆ ನಾನೂ ಶರಣನಲ್ಲವು, ಎಂಬುದರಿಂದಲೂ ಕಾರ್ಪಣ್ಯವು ಸೂಚಿತವು. ಅಥವಾ **ಅನನ್ಯಶರಣಃ**– ಬೇರೆ ಇನ್ನಾ ಯಾವ ಉಪಾಯವಿಲ್ಲವವನು ನಾನು ಎಂಬುದರಿಂದ ಕಾರ್ಪಣ್ಯವು ಸೂಚಿತವು. **ಈ ಅನನ್ಯಶರಣಃ**– ಎಂಬುದರಿಂದ (೧) ಉಪಾಯಾಂತರದಲ್ಲಿ ಅಶಕ್ತಿಯೂ (೨) ತಾನು ಪ್ರಯೋಜನಾಂತರದ ಮತ್ತು ಅದಕ್ಕೆ ಉಪಾಯಗಳ ತ್ಯಾಗವೂ ತೋರಿಬರುತ್ತದೆಂದು ವ್ಯಾಖ್ಯಾನ ಮಾಡಿರುತ್ತಾರೆ. ಇದರಿಂದೆಲ್ಲಾ ಕಾರ್ಪಣ್ಯವು ವೇದ್ಯವು.

(೨) ಶ್ರೀರಂಗ ಗದ್ಯವಾಕ್ಯವು ಯಾವುದೆಂದರೆ– "ಸ್ವಾತ್ಮನಿತ್ಯನಿಯಾಮ್ಯ" ಎಂಬುದರಿಂದ ವಾಕ್ಯಾರಂಭವೆಂದು ಸೂಚಿಸಿರುತ್ತಾರೆ. ಆ ಪೂರಾವಾಕ್ಯವು **"ಅನಾಗತಾನನ್ತಕಾಲ ಸಮೀಕ್ಷಯಾಪ್ಯದೃಷ್ಟಸಂತಾರೋಪಾಯಃ ನಿಖಿಲ ಜಂತು ಶರಣ್ಯ ಶ್ರೀಮನ್ನಾರಾಯಣ ತವ ಚರಣಾರವಿಂದ ಯುಗಳಂ ಶರಣ ಮಹಂಪ್ರಪದ್ಯೆ"** ಎಂದು ಮುಗಿಯುತ್ತದೆ. ಈ ಅಮೋಘ ಚೂರ್ಣಿಕೆಯಿಂದ ತಾನು ಹೇಗೆ ಹೇಗೆ ಅಕಿಂಚನನು, ಅನನ್ಯಗತಿಕನೆಂಬುದನ್ನು ವಿಸ್ತರಿಸಿ ಉಪಪಾದಿಸಿರುತ್ತಾರೆ. ಸರ್ವೇಶ್ವರನೇ ನಿನ್ನ ನಿತ್ಯ ಕೈಂಕರ್ಯಾವಾಪ್ತಿಯಿಂದುಂಟಾಗುವ ಆನಂದದ ಸ್ವಾನುಭವಸ್ವಾರಸ್ಯವನ್ನು ತಿಳಿದು ಅದಕ್ಕೆ ಸಾಧನವಾದ ಪರಭಕ್ತಿ, ಅದರ ಸಾಧನ, ಅದಕ್ಕೆ ಬೇಕಾದ ಕರ್ಮಯೋಗನಿಷ್ಠೆ, ಅದು ಪಕ್ವವಾಗಲು ಬೇಕಾದ ಅನೇಕ ಆತ್ಮಗುಣಗಳು ಇವೆಲ್ಲಾ ಇಲ್ಲದುದರಿಂದ ನಾನು ವಿಹೀನನು; ಪಾಪವಾಸನಾರೂಪ ಮಹಾರ್ಣವದಲ್ಲಿ ಮುಳುಗಿಹೋದವನು; ಸಾರಾಸಾರ ವಿವೇಚನೆಯಿಲ್ಲದಹಾಗೆ ಯಾವಾಗಲೂ ಸ್ವರೂಪ ವಿಕಾರವಿರುವ ಜಡವಾದ ದೇಹದಿಂದ ಬಂಧಿಸಿರುವ ಪ್ರಕೃತಿಯಿಂದ ಜ್ಞಾನತಿರೋಹಿತತ್ವವನ್ನು ಹೊಂದಿರುವವನು; ಅನಾದಿಯಾಗಿ ಬಂದಿರುವ ಅಜ್ಞಾನದಿಂದ ಮೋಹವನ್ನುಂಟುಮಾಡುವ ಕರ್ಮಪಾಶದಿಂದ ಬಿಗಿಸಲ್ಪಟ್ಟಿರುವವನು; ಇದು ಮೊದಲುಗೊಂಡು ಮುಂದೆ ಎಷ್ಟುಕಾಲದವರೆಗೂ ನೋಡಿದರೂ ತನಗೆ ಇವುಗಳಿಂದ ಬಿಡಿಸಿಕೊಂಡು ದಾಟಿಹೋಗುವ ಉಪಾಯವ್ಯಾವುದೂ ತಿಳಿಯದವನು; ಇಂತಹ ದೀನಾವಸ್ಥೆಯನ್ನು ಹೊಂದಿದವನಾದುದರಿಂದ ಸಮಸ್ತ ಪ್ರಾಣಿಗಳಿಗೂ ಶರಣ್ಯನಾದ ಶ್ರೀಮನ್ನಾರಾಯಣನೇ, ನಿನ್ನ ಪಾದಾರವಿಂದದ್ವಂದ್ವವನ್ನು ಉಪಾಯವಾಗಿ ಹೀಗೆ ಅಕಿಂಚನನಾಗಿಯೂ ಅನನ್ಯಗತಿಕನಾಗಿಯೂ ಇರುವ ನಾನು ಹೊಂದಿರುತ್ತೇನೆ; ಎಂಬುದು ಸಂಗ್ರಹವಾದ ಆ ವಾಕ್ಯಾರ್ಥವು. ಪ್ರತಿಯೊಂದು ಪದಗಳಲ್ಲೂ ತುಂಬಾ ಅರ್ಥಗರ್ಭಿತವು. ಮಹಾರ್ಗಳಾದ ಗುರುಗಳ ಮೂಲಕವಾಗಿ ಸ್ವಾರಸ್ಯಗಳನ್ನೆಲ್ಲಾ ಗ್ರಹಿಸಬಹುದು ಈ ಮೇಲಿನ ಸಂಗ್ರಹಾರ್ಥದಿಂದಲೇ ಕಾರ್ಪಣ್ಯರೂಪವಾದ ಅಂಗವೆಂಬುದೂ ಆ ಕಾರಣದಿಂದಲೇ ವಿಶೇಷಾಧಿಕಾರಿ ಎಂಬುದೂ ಸ್ಫುಟವು.

(೩) ಈ ವೈಕುಂಠಗದ್ಯದಲ್ಲಿರುವ "**ತತ್ಪ್ರಾಪ್ತ್ಯೇ ಚ ತತ್ಪಾದಾಂಬುಜ ದ್ವಯ ಪ್ರಪತ್ತೇರನ್ಯನ್ನಮೇ ಕಲ್ಪಕೋಟಿ ಸಹಸ್ರೇಣಾಪಿ ಸಾಧನಮಸ್ತೀತಿ ಮನ್ವಾನಃ ತಸ್ಯೈವ ಭಗವತೋ ನಾರಾಯಣಸ್ಯಾಖಿಲಸತ್ತ್ವದಯೈಕಸಾಗರ ಸ್ಯಾನಾಲೋಚಿತ ಗುಣಗಣಾಖಂಡ ಜನಾನುಕೂಲಾಮರ್ಯಾದಶೀಲವತಃ ಸ್ವಾಭಾವಿಕಾನವಧಿಕಾತಿಶಯ ಗುಣವತ್ತಯಾ ದೇವತಿರ್ಯಙ್ಮನುಷ್ಯಾದ್ಯ ಖಿಲಜನ ಹೃದಯಾನಂದನಸ್ಯ ಆಶ್ರಿತವಾತ್ಸಲ್ಯೈಕಜಲಧೇರ್ಭಕ್ತಜನಸಂ ಶ್ಲೇಷೈಕಭೋಗಸ್ಯ ನಿತ್ಯಜ್ಞಾನಕ್ರಿಯೈಶ್ವರ್ಯಭೋಗಸಾಮಗ್ರೀ ಸಮೃದ್ಧ ಸ್ಯಮಹಾವಿಭೂತೇಃ ಶ್ರೀಮಚ್ಚರಣಾರವಿಂದಯುಗಳಂ ಅನನ್ಯಾತ್ಮಸಂಜೀ ವನೇನ ತದ್ಗತಸರ್ವಭಾವೇನ ಶರಣಮನುವ್ರಜೇತ್, ತತಶ್ಚ ಪ್ರತ್ಯಹಂ ಆತ್ಮೋಜ್ಜೀವನಾಯ ಏವಮನುಸ್ಮರೇತ್**"— ಆತನಿಗೆ ದಿವ್ಯ ವೈಕುಂಠದಲ್ಲಿ ನಿತ್ಯ ಕೈಂಕರ್ಯ ಪ್ರಾಪ್ತಿಗೆ ಶ್ರಿಯಃಪತಿಯ ಚರಣಾರವಿಂದದಲ್ಲಿ ಮಾಡುವ ಶರ ಣಾಗತಿಗಿಂತ ನನಗೆ ಬೇರೆ ಉಪಾಯವು ಕಲ್ಪಕೋಟಿ ಸಹಸ್ರದಿಂದಲೂ ಇಲ್ಲವೆಂ ದು ದೃಢವಾಗಿ ತಿಳಿದವನಾಗಿ, ಸಮಸ್ತ ಪ್ರಾಣಿವರ್ಗಕ್ಕೂ ದಯಾಸಾಗರನಾದ, ಅಧಿಕಾರಿಯ ಗುಣಾವಗುಣ ತಾರತಮ್ಯವನ್ನು ಪರಿಗಣಿಸದೇಯಿರುವ ಶೀಲವುಳ್ಳ ವನಾದ, ಸ್ವಾಭಾವಿಕವಾಗಿ ನಿರತಿಶಯವಾದ ಆನಂದಸ್ವರೂಪನಾಗಿರುವದರಿಂದ ಮೃಗಾದಿಗಳು ಮನುಷ್ಯ ದೇವ ಮೊದಲಾದ ಸರ್ವ ಜೀವರಾಶಿಗೂ ಆನಂದವನ್ನು ಉಂಟುಮಾಡುವವನಾದ, ಆಶ್ರಿತ ವಾತ್ಸಲ್ಯೈಕಜಲಧಿಯಾದ, ಭಕ್ತಜನರಿಗೆ ಕೊಡುವ ಸಾಯುಜ್ಯವೇ ತನಗೆ ಮುಖ್ಯ ಭೋಗವೆಂದು ಭಾವಿಸುವ, ನಿತ್ಯಜ್ಞಾನ ಕ್ರಿಯೈಶ್ವರ್ಯರೂಪಭೋಗ ಸಮೃದ್ಧಿಯುಳ್ಳ, ಮಹತ್ತಾದ ನಿಯಾಮ್ಯವರ್ಗ ವನ್ನು ಹೊಂದಿರುವ, ಲಕ್ಷ್ಮೀಪತಿಯಾದ ಭಗವಂತನಾದ ನಾರಾಯಣನ ಪಾದಾ ರವಿಂದದ್ವಂದ್ವವನ್ನು, ಆತ್ಮೋಜ್ಜೀವನಕ್ಕೆ ಬೇರೆ ಮಾರ್ಗವಿಲ್ಲದ, ಅದೇ ಸರ್ವಸ್ವ ವೆಂಬ ಭಾವನೆಯಿಂದ ಸಾಧನವಾಗಿ ಅನುಷ್ಠಿಸತಕ್ಕದ್ದು. ಅನಂತರದಲ್ಲಿ ಪ್ರತಿ ದಿನವೂ ಆತ್ಮೋಜ್ಜೀವನಕ್ಕಾಗಿ ಹೀಗೆ ಮಾಡಿದ ಶರಣಾಗತಿಯನ್ನು ಸ್ಮರಿಸ ತಕ್ಕದ್ದು, ಎಂದು ಉಪದೇಶಿಸಿರುತ್ತಾರ.

ಹೀಗೆ ಶ್ರೀ ಯತಿವರ್ಯರು ತಾವು ಅನುಗ್ರಹಿಸಿದ ಗದ್ಯತ್ರಯದಲ್ಲೂ **ಪ್ರಪದ್ಯೇ**— ಎಂಬಲ್ಲಿ ತೋರಿಬರುವುದನ್ನೇ ವಿಶದವಾಗಿ ವಿಸ್ತರಿಸಿ ಉಪದೇಶಿಸಿರು ತ್ತಾರೆಂದು ಹೇಳಿದರು. ಮುಂದ ಅವರ ಶಿಷ್ಯವರ್ಗಕ್ಕೆ ಸೇರಿದ ಅರುಳಾಳ್ ಪೆರು ಮಾಳ್ ಎಂಬೆರುಮಾನಾರ್ರವರೂ ಹಾಗೆಯೇ ಹೇಳಿರುತ್ತಾರೆಂದು ಅವರ ಸೂಕ್ತಿ ಯನ್ನು ಉದಾಹರಿಸುತ್ತಾರೆ. ಇವರ ವಿಷಯವು ಹಿಂದೆ ೩೪೪೯-೫೦ನೆಯ ಪುಟ ದಲ್ಲಿ ವ್ಯಕ್ತವು. ಇವರು ಮೊದಲು ಯಜ್ಞಮೂರ್ತಿ ಎಂಬ ಅದ್ವೈತಿಯು. ಇವ ರನ್ನು ಯತಿವರ್ಯರು ಯಾಮುನೇಯರ ದಿವ್ಯ ಸೂಕ್ತಿಗಳ ಮೂಲಕ ಗೆದ್ದು ಅವ ರಿಗೆ ಪಂಚ ಸಂಸ್ಕಾರಾದಿಗಳನ್ನು ದಯಪಾಲಿಸಿ ಆಶ್ರಮವನ್ನೂ ಅರುಳಾಳ್ ಪೆರು

**ಅರುಳಾಳಪ್ಪೆರುಮಾಳೆಂಬೆರುಮಾನಾರುಮ್ "ಸ್ವಾಭೀಷ್ಟೇಪರಸಂಬಂಧೇ ಸ್ವಾಶಕ್ತ್ಯಾಹೀನಸಾಧನಃ । ತತ್ಪ್ರಾಪ್ತ್ಯುಪಾಯಂ ತತ್ಪಾದೌ ಕೃತ್ವಾ ವಿಶ್ವಾಸಪೂರ್ವಕಮ್" ಎನ್ರರುಳಿಚ್ಚೆಯ್‌ದಾರ್. ಇಪ್ಪಡಿ ಅಕಿಂಚನಾಧಿಕಾರಮಾಯ್ ಭರಸಮರ್ಪಣ ರೂಪಮಾನ ಉಪಾಯತ್ತೈಚ್ಚೊಲ್ಲುಗೈಯಾಲೇ ದುಷ್ಕರ ಕರ್ಮಾಂತರ ನೈರಪೇಕ್ಷ್ಯಂ ಅರ್ಥಸಿದ್ಧಮ್.**

ಮಾಳ್ ಎಂಬೆರುಮಾನಾರ್ರವರೆಂಬ ಹೆಸರನ್ನು ದಯಪಾಲಿಸಿ, ರಹಸ್ಯಾರ್ಥಗಳನ್ನೂ ದ್ರಾವಿಡ ಪ್ರಬಂಧಾದಿಗಳನ್ನೂ ಉಪದೇಶಿಸಿದರು. ಆದುದರಿಂದ ಶ್ರೀಯತಿವರ್ಯರ ಅಭಿಪ್ರಾಯಗಳನ್ನೂ ಚನ್ನಾಗಿ ತಿಳಿದವರಾದಪ್ರಯುಕ್ತ ಅವರ ವಾಕ್ಯವನ್ನೂ ಉದಾಹರಿಸುತ್ತಾರೆ – **"ಸ್ವಾಭೀಷ್ಟೇ"** – ತನ್ನ ಮನೋರಥವಾದ **ಪರಸಂಬಂಧೇ**– ದಿವ್ಯ ವೈಕುಂಠದಲ್ಲಿ ಪರಬ್ರಹ್ಮನ ಸಂಬಂಧರೂಪ ಸಾಯುಜ್ಯ ಪ್ರಾಪ್ತಿಯಲ್ಲಿ, **ಸ್ವಾಶಕ್ತ್ಯಾ**– ತನಗೆ ಕರ್ಮಯೋಗಾದಿಗಳಿಂದ ಅನುಗ್ರಹೀತವಾದ ಉಪಾಸನೆಯಲ್ಲಿ ಅಶಕ್ತಿ ಇರುವದರಿಂದ **ಹೀನಸಾಧನಃ**– ಇಂತಹ ಭಕ್ತಿಯೋಗರೂಪ ಸಾಧನವಿಲ್ಲದವನಾಗಿ, **ವಿಶ್ವಾಸಪೂರ್ವಕಮ್** – ಮಹಾ ವಿಶ್ವಾಸಪೂರ್ವಕವಾಗಿ, **ತತ್ಪಾದೌ**–ಆ ಶ್ರಿಯಃಪತಿಯ ಪಾದದ್ವಂದ್ವದಲ್ಲಿ, **ತತ್ಪ್ರಾಪ್ತ್ಯುಪಾಯಂ**– ನಿತ್ಯ ಕೈಂಕರ್ಯರೂಪ ಮೋಕ್ಷಪ್ರಾಪ್ತಿಗೆ ಸಾಧನವಾದ ಶರಣಾಗತಿಯನ್ನು **ಕೃತ್ವಾ**– ಮಾಡಿ, ಹೀಗೆ ಈ ಮೇಲಿನ ಪ್ರಮಾಣಗಳಿಂದ **ಪ್ರಪದ್ಯೇ**–ಎಂಬಲ್ಲಿ ಅಕಿಂಚನ್ಯವೂ, ಮಹಾ ವಿಶ್ವಾಸಪೂರ್ವಕವಾಗಿ ಶರಣಾಗತಿಯೂ ವ್ಯಕ್ತವು. ಇದನ್ನೇ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

**ಇಪ್ಪಡಿ**–ಹೀಗೆ ಸಾತ್ವಕಿ ತನ್ತ್ರವೇನು, ಆಳ್ವಾರುಗಳ ದಿವ್ಯ ಸೂಕ್ತಿಯೇನು ಮತ್ತು ಯಾಮುನೇಯರು, ಯತಿರಾಜರು, ಅರುಳಾಳಪ್ಪೆರುಮಾಳೆಂಬರುಮಾನಾರರು ಹೀಗೆ ಆಚಾರ್ಯರುಗಳ ದಿವ್ಯ ಸೂಕ್ತಿಗಳೇನು, ಇವುಗಳ ಮೂಲಕವಾಗಿ ಉಪಪಾದಿಸಿದ ರೀತಿಯಲ್ಲಿ, **ಅಕಿಂಚನಾಧಿಕಾರಿಯಾಯ್** – ಅನನ್ಯಗತಿಕನಾಗಿ ಕಾರ್ಪಣ್ಯದಿಂದ ಕೂಡಿದ ಅಧಿಕಾರರೂಪನಾದ, **ಭರಸಮರ್ಪಣರೂಪಮಾನ** – ಭರಸಮರ್ಪಣರೂಪವಾದ, **ಉಪಾಯತ್ತೈಚ್ಚೊಲ್ಲುಗೈಯಾಲೇ**– ಸ್ವಾಮಿಪಾದದಲ್ಲಿ ಆತ್ಮನಿಕ್ಷೇಪವೆಂದು ಹೇಳಿಸಿಕೊಳ್ಳುವ ಶರಣಾಗತಿರೂಪ ಅನುಷ್ಠಾನವನ್ನು **ಪ್ರಪದ್ಯೇ**– ಎಂಬ ಪದವು ಬೋಧಿಸುವುದರಿಂದ, **ದುಷ್ಕರ ಕರ್ಮಾಂತರ ನೈರಪೇಕ್ಷ್ಯಂ ಅರ್ಥಸಿದ್ಧಮ್** – ತುಂಬಾ ಕಷ್ಟಸಾಧ್ಯವಾದ ಕರ್ಮಯೋಗಾದಿಗಳಿಂದ ಕೂಡಿದ ಬೇರೆ ಅನುಷ್ಠಾನವಾದ ಭಕ್ತಿಯೋಗದ ಅಪೇಕ್ಷೆಯು ಇದಕ್ಕೆ ಇಲ್ಲವೆಂಬುದು ಅರ್ಥವಾಗಿ ತೋರಿಬರುತ್ತದೆಂಬುದು ಸ್ಥಾಪಿತವು. ಭರಸಮರ್ಪಣದ ತಾತ್ಪರ್ಯವೇ ಇದು ಎಂಬ ಭಾವವು. ತನಗೆ ಭಕ್ತಿಯೋಗಾನುಷ್ಠಾನಕ್ಕೆ ಶಕ್ತಿ ಇಲ್ಲವೇ ಎಂಬುದೇ ಆಕಿಂಚನ್ಯಕ್ಕೆ ಹೇತುವು. ಆದುದರಿಂದ ಭಕ್ತಿಯೋಗಸ್ಥಾನದಲ್ಲಿ ನೀನೇ ನಿಂತು ಅದರ ಫಲವನ್ನು ಸಾಧಿಸಿಕೊಟ್ಟು ಈ ಆತ್ಮಾವನ್ನು ರಕ್ಷಿಸುವ

## ಪೂರ್ವಖಂಡೇ ಸಪರಿಕರಭರನ್ಯಾಸ ಇತ್ಯಾಹ

**ಇಪ್ಪಡಿ ಶರಣ ಶಬ್ದಾನ್ವಿತಮಾನ "ಪ್ರಪದ್ಯೇ" ಎಂಗಿರಪದತ್ತಿಲೇ (೧) "ರಕ್ಷಿಷ್ಯತೀತಿ ವಿಶ್ವಾಸೋ ಗೋಪ್ತೃತ್ವವರಣಂ ತಥಾ। ಆತ್ಮನಿಕ್ಷೇಪ ಕಾರ್ಪಣ್ಯೇ" ಎನ್ರು ನಿರ್ದಿಷ್ಟ ಮಾನ ನಾಲುಮ್ ಶೊಲ್ಲಿತ್ತಾಯಿತ್ತು. (೨) "ಚರಾಚರಾಣಿ ಭೂತಾನಿ ಸರ್ವಾಣಿ ಭಗವದ್ವಪುಃ। ಅತಸ್ತದಾನುಕೂಲ್ಯಂ ಮೇ ಕಾರ್ಯಮಿತ್ಯೇವ ನಿಶ್ಚಯಃ। ಸ್ವಸ್ಯಸ್ವಾಮಿನಿವೃತ್ತಿರ್ಯಾ ಪ್ರಾತಿಕೂಲ್ಯ ವಿವರ್ಜನಮ್"**

ಸರ್ವಭರವೂ ನಿನ್ನದು ಎಂದು ತನ್ನ ಆತ್ಮಾವನ್ನು ಶ್ರಿಯಃಪತಿಯ ಚರಣಾರವಿಂದದಲ್ಲಿ ಸಮರ್ಪಿಸುವುದೇ **ಪ್ರಪದ್ಯೇ**–ಎಂಬುದರಿಂದ ತೋರಿಬರುವ ಅರ್ಥವೆಂದು ಸ್ಥಾಪಿಸಿದರು.

"ಷಡ್ವಿಧಾ ಶರಣಾಗತಿಃ" ಎಂಬಲ್ಲಿ ಹೇಳಿರುವಹಾಗೆಯೂ, "ನ್ಯಾಸಃ ಪಂಚಾಂಗಸಂಯುತಃ" ಎಂದು ಹೇಳಿರುವಹಾಗೆಯೂ, ಈ **ಪ್ರಪದ್ಯೇ**–ಎಂಬ ಪದದಿಂದ ತೋರಿಬರುವದು, ಅಂಗಿಯಾದ ಆತ್ಮನಿಕ್ಷೇಪವಾದರೆ, ಇನ್ನೂ ಐದು ಅಂಗಗಳೂ ಇದರಲ್ಲಿ ಅಡಗಿದೆಯೋ? ಎಂದರೆ ಈ ಪದದಲ್ಲೇ ಆಕಿಂಚನ್ಯವೂ, ಗೋಪ್ತೃತ್ವವರಣವೂ, ಮಹಾ ವಿಶ್ವಾಸವೂ, ಹೀಗೆ ಈ ಮೂರು ಅಂಗಗಳೂ ಇವೆ ಎಂದು ಹಿಂದೆಯೇ ಉಪಪಾದಿಸಲ್ಪಟ್ಟಿರುವದರಿಂದ ಒಂದು ಅಂಗಿಯೂ ಮೂರು ಅಂಗಗಳೂ ಹೀಗೆ ನಾಲ್ಕೂ ತೋರಿಬರುತ್ತವೆಂದು ಹಿಂದೆ ಹೇಳಿದುದನ್ನೇ ಅನುವಾದ ಮಾಡಿ ಮುಂದಿನ ವಾಕ್ಯದಿಂದ ಹೇಳಿ, ಮಿಕ್ಕ ಎರಡು ಅಂಗಗಳಾದ ಆನುಕೂಲ್ಯ ಸಂಕಲ್ಪ ಪ್ರಾತಿಕೂಲ್ಯ ವರ್ಜನಗಳು, ನಾರಾಯಣ ಶಬ್ದದಲ್ಲಿ ತೋರಿಬರುತ್ತವೆಂದು ಹಿಂದೆ ಹೇಳಿರುತ್ತಾರೆ. ಈ ಶರಣಾಗತಿ ಮಂತ್ರದ ಪೂರ್ವಖಂಡದಲ್ಲಿ ಅಂಗಾಂಗಿಗಳ ಸಮುಚ್ಚಯವು ಬೇಕು. ಅಂಗಗಳಿಲ್ಲದೆ ಅಂಗಿಯೂ, ಅಂಗಿಯಿಲ್ಲದ ಅಂಗಗಳೂ ಕಾರ್ಯಕಾರಿಯಾಗುವದಿಲ್ಲವು. ಆದುದರಿಂದ ಇವು ಆರೂ ಈ ದ್ವಯಮಂತ್ರದಿಂದ ಅನುಷ್ಠಿಸುವ ಶರಣಾಗತಿಯಲ್ಲಿವೆ ಎಂಬುದು ಉಪಪಾದನೆಯು. ಇವೆಲ್ಲಾ ಹಿಂದೆಯೇ ಹೇಳಲ್ಪಟ್ಟಿರುವದರಿಂದ ಇಲ್ಲಿ ಸ್ಮಾರಿತವು.

ಪೂರ್ವಖಂಡದಲ್ಲಿ ಹೇಳಿರುವದು ಸಪರಿಕರಭರನ್ಯಾಸವು.

**ಇಪ್ಪಡಿ ಶರಣ ಶಬ್ದಾನ್ವಿತಮಾನ "ಪ್ರಪದ್ಯೇ" ಎಂಗಿರಪದತ್ತಿಲೇ**–ಹೀಗೆ **"ಶರಣಂ"** ಎಂಬ ಶಬ್ದದಿಂದಕೂಡಿದ, ಪ್ರಪದ್ಯೇ ಎನ್ನುವ ಪದದಲ್ಲಿ, (೧) "ಹಾಗೆಯೇ ಭಗವಂತನು ರಕ್ಷಿಸೇರಕ್ಷಿಸುವನು ಎಂಬ ಮಹಾ ವಿಶ್ವಾಸವೆಂಬುವ ಅಂಗವೂ, ಉಪಾಸನೆಯ ಸ್ಥಾನದಲ್ಲಿ ಪರಮಾತ್ಮನೇ ನಿಂತು ತತ್ಫಲವಾದ ಮೋಕ್ಷ

(೧) ಅಹಿರ್ಬುಧ್ನ್ಯ ಸಂಹಿತೆ. ೩೯. ೨೮.

**ಇತ್ಯಾದಿ ಪ್ರಮಾಣಂಗಳಿನ ಪಡಿಯೇ ಸ್ವಾಮಿತ್ವಾದಿ ನಿಬಂಧನಙ್ಗಳ್ೈ ಚ್ಚೊಲ್ಲುಗಿರ ಸವಿಶೇಷಣಮಾನ ನಾರಾಯಣ ಶಬ್ದತ್ತಿಲೆ ಆನುಕೂಲ್ಯ ಸಙ್ಕಲ್ಪಮುಮ್ ಪ್ರಾತಿಕೂಲ್ಯ ವರ್ಜನಮುಮ್ ಸೂಚಿತ ಮೆನ್ನುಮಿಡಮ್ ಮುನ್ಬೆಶೊನ್ನೋಮ್.**

ವನ್ನು ಕೊಟ್ಟು ಕಾಪಾಡು ಎಂಬ ಗೋಪ್ತೃತ್ವವರಣವೂ, ಆತ್ಮನಿಕ್ಷೇಪವೆಂಬ ಅಂಗಿಯೂ, ತಾನು ಉಪಾಸನೆಯನ್ನು ಮಾಡುವ ಶಕ್ತಿ ತನಗಿಲ್ಲದುದರಿಂದ, ತನಗೆ ಇನ್ನು ಯಾರೂ ಗತಿಯಿಲ್ಲವೆಂಬ ಕಾರ್ಪಣ್ಯವೂ" **ಎನ್ರು ನಿರ್ದಿಷ್ಟಮಾನ**– ಹೀಗೆ ಮೇಲಿನ ವಾಕ್ಯದಲ್ಲಿ ತೋರಿಬರುವ ನಾಲ್ಕು ಶೊಲ್ಲಿತ್ತಾಯಿತು– ಹೇಳಲ್ಪಟ್ಟ ದುದು ಆಯಿತು. (೨) **ಚರಾಚರಾಣಿ ಭೂತಾನಿ ಸರ್ವಾಣಿ**— ಜಂಗಮ ಸ್ಥಾವರಗ ಳಾದ ಭೂತಗಳೆಲ್ಲಾ, **ಭಗವದ್ವಪುಃ**– ಹೇಯಗುಣ ರಹಿತನಾಗಿ ಕಲ್ಯಾಣ ಗುಣಾ ಕರನಾದ ಸರ್ವೇಶ್ವರನ ಶರೀರವು - **ಅತಃ**– ಆ ಕಾರಣದಿಂದ, **ಸದಾನುಕೂಲ್ಯಂ**– ಅವುಗಳಿಗೆಲ್ಲಾ ಯಾವಾಗಲೂ ಅನುಕೂಲವಾಗಿರುವಿಕೆಯೇ, **ಕಾರ್ಯಂ**–ಮಾಡ ತಕ್ಕದ್ದು, **ಇತ್ಯೇವನಿಶ್ಚಯಃ** – ಎಂಬುವ ನಿಶ್ಚಯಜ್ಞಾನವು; ಇರತಕ್ಕದ್ದೆಂಬ ಭಾವವು, ಮುಂದೆ ಪ್ರಾತಿಕೂಲ್ಯವರ್ಜನವು ಹೇಳಲ್ಪಡುತ್ತದೆ. **ಸ್ವಸ್ಯ**– ದಾಸ ನಾದ ತನಗೆ, **ಸ್ವಾಮಿನಿ**– ಸ್ವಾಮಿಯಾಗಿಯೂ ಶೇಷಿಯಾಗಿಯೂ ಇರುವ, **ಯಾ ವೃತ್ತಿಃ**– ಯಾವ ಕೈಂಕರ್ಯ ಉಂಟೋ, ಸಾ ಎಂದು ಇಟ್ಟುಕೊಳ್ಳತಕ್ಕದ್ದು, ಅದು, **ಪ್ರಾತಿಕೂಲ್ಯ ವಿವರ್ಜನಮ್** – ಪ್ರಾತಿಕೂಲವನ್ನು ತ್ಯಾಗಮಾಡುವಿಕೆ ಎಂದು ಭಾವಿಸತಕ್ಕದ್ದು." ಪ್ರಾತಿಕೂಲ್ಯವರ್ಜನಕ್ಕೆ ನಿಬಂಧನವಾಗಿರುವ ಸ್ವಾಮಿ ತ್ವವು ವಿಶಿಷ್ಟವನ್ನೂ ಶರೀರವಾಗಿ ಹೊಂದಿರುವುದರಿಂದಲೇ, ಅಂತಹ ಶರೀರಗಳಿಗೂ ಪ್ರಾತಿಕೂಲ್ಯವು ಕೂಡದಾದುದರಿಂದ **ನಾರಾಯಣನೆಂಬ ಪ್ರಯೋಗವು. "ಚರಾಚರಾಣಿ ಭೂತಾನಿ"–ಇತ್ಯಾದಿ ಪ್ರಮಾಣಂಗಳಿನ್ ಪಡಿಯೇ**– ಇವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವಹಾಗೆ, **ಸ್ವಾಮಿತ್ವಾದಿ ನಿಬಂಧನಂಗಳ್ೈ**- ಸ್ವಾಮಿತ್ವವೇ ಮೊದಲಾದಕ್ರಮಗಳನ್ನು, ಆದಿ ಪದದಿಂದ ಸರ್ವ ಶರೀರತ್ವ ಸರ್ವಾತ್ಮತ್ವಗಳು ಹೇಳಲ್ಪಟ್ಟವು, **ಚೊಲ್ಲುಗಿರಲು**— ಪದೇಶಿಸುವ, **ಸವಿಶೇಷ ಣಮಾನ** – ಶ್ರೀಮತ್ ಎಂಬ ವಿಶೇಷಣದಿಂದ ಕೂಡಿದ, **ನಾರಾಯಣ ಶಬ್ದತ್ತಿಲೇ** – ಶ್ರೀಮನ್ನಾರಾಯಣ ಶಬ್ದದಲ್ಲಿ, **ಆನುಕೂಲ್ಯ ಸಂಕಲ್ಪವೂ ಪ್ರಾತಿಕೂಲ್ಯ ವರ್ಜನವೂ – ಸೂಚಿತಮೆನ್ನುಮಿಡಮ್ ಮುನ್ಬೆ ಶೊನ್ನೋಮ್**– ಸೂಚಿತವೆಂಬ ಸಂದರ್ಭವನ್ನು ಹಿಂದೆಯೇ ತಿಳಿಸಿರುತ್ತೇವೆ. ( ನೆಯ ಪುಟವನ್ನು ನೋಡಿ.) ಶ್ರೀಮನ್ನಾರಾಯಣ ಶಬ್ದದಲ್ಲಿನ ಬಹು ವ್ರೀಹ್ಯರ್ಥದಿಂದ ಸಮಸ್ತವೂ ಆತನಿಗೆ ಶರೀರವಾಗಿ ಎಲ್ಲಕ್ಕೂ ಆತನು ಆತ್ಮಾ ವಾಗಿ. ಆ ಕಾರಣದಿಂದ ತಾನೂ ಆತನಿಗೆ " **ಯಸ್ಯಾತ್ಮಾಶರೀರಂ** " ಎಂಬಲ್ಲಿ

**ಇಪ್ಪರಿಕರಙ್ಗಳುಮ್ ಉಪಾಯಾರ್ಥಮಾಕ(ಯ್) ಸಕೃತ್ಕರ್ತ್ತವ್ಯಙ್ಗ**

ಹೇಳಿರುವಹಾಗೆ, ಶರೀರವಾಗಿ ಆತನೂ ಸರ್ವಕ್ಕೂ ಆತ್ಮಾವಾಗಿರುವದರಿಂದ, ಶರಣಾಗತನಾಗುವವನು ಸರ್ವಾನುಕೂಲನಾಗಿ ಪ್ರತಿಕೂಲನಲ್ಲದೆಯೂ ಇರಬೇಕೆಂಬುದು ಸ್ವತಸ್ಸಿದ್ಧವಾಮುದಾಗಿ ನಾರಾಯಣಶಬ್ದದಿಂದ ಬೋಧಿತವೆಂಬ ತಾತ್ಪರ್ಯವು.

ಹಿಂದೆ ಹೇಳಿರುವದು ಎಲ್ಲಿ ? ಎಂದರೆ ಪರಿಕರ ವಿಭಾಗಾಧಿಕಾರದಲ್ಲಿ ಶಂಕಾ ಪಂಚಕಗಳಿಗೆ ಸಮಾಧಾನವನ್ನು ಹೇಳುವ ಸಂದರ್ಭದಲ್ಲಿ **"ಶ್ರೀಮಚ್ಛಬ್ದತ್ತಿಲುಮ್, ನಾರಾಯಣ ಶಬ್ದತ್ತಿಲುಮ್ ಅರ್ಥಮಾಕ ಅನುಕೂಲ್ಯ ಸಙ್ಕಲ್ಪಮುಮ್ ಪ್ರಾತಿಕೂಲ್ಯವರ್ಜನಮುಮ್ ಅನುಸನ್ಧೇಯ ಮಾಗಕ್ಕಡವದು"** ಎಂದು ಹೇಳಿರುತ್ತಾರೆ. ೧೧೧೦-೧೧೧೧ ನೆಯ ಪುಟಗಳನ್ನು ಪರಾಂಬರಿಸಿ.

ಪುರುಷಕಾರತ್ವೇನ ಶ್ರೀ ಮಹಾಲಕ್ಷ್ಮಿಯನ್ನು ವರಿಸಿ ತಾನು ಮಾಡಿದ ಸಹಸ್ರಾಪರಾಧಗಳಿಗಾಗಿ ಭಗವಂತನಿಗೆ ನಿಗ್ರಹ ಸಙ್ಕಲ್ಪವು ತೊಲಗಿ ಅನುಗ್ರಹ ಸಂಕಲ್ಪವು ಉಂಟಾಗಬೇಕಾದರೆ ಅವರುಗಳಿಗೆ ಅಭಿಮತನಾಗಿ ಶಾಸ್ತ್ರೋಲ್ಲಂಘನೆ ಮಾಡದೆ ತದನುಗುಣವಾಗಿ ವರ್ತಿಸಿ, ಆತನ ಶರೀರಗಳಾದ ಪ್ರಾಣಿಗಳ ವಿಷಯದಲ್ಲೂ ಪ್ರತಿಕೂಲನಲ್ಲದೆ, ಅನುಕೂಲನಾಗಿಯೇ ಇರಬೇಕೆಂಬುದು ಸ್ವತಃ ವ್ಯಕ್ತವು. ಅಂತಹ ಪ್ರಾಣಿಗಳ ವಿಷಯದಲ್ಲಿ ಹಿಂಸೆ, ದ್ವೇಷ, ದ್ರೋಹ ಚಿನ್ತನವೇ ಮೊದಲಾದವುಗಳು ಸರ್ವಥೈವ ಕೂಡದೆಂಬ ಭಾವವು.

ಹೀಗೆ ಯಾವಜ್ಜೀವವೂ ಮೋಕ್ಷಾರ್ಥಿಯು ಅನುಕೂಲನಾಗಿಯೂ, ಪ್ರತಿಕೂಲನಲ್ಲದೆಯೂ ಇರಬೇಕೇ ? ಹಾಗೆ ಯಾವಜ್ಜೀವವೂ ಇರಬೇಕು ಎಂದರೆ ಆಗ ಸಪರಿಕರ ಭರನ್ಯಾಸವು ಸಕೃತ್ಕರ್ತವ್ಯವೆಂಬ ಸಿದ್ಧಾಂತಕ್ಕೆ ಭಂಗವೇ ? ಎಂದರೆ, ಈ ಪರಿಕರಗಳು ಸಕೃತ್ಕರ್ತ್ತವ್ಯವಾದ ಭರನ್ಯಾಸಕ್ಕೆ ಅಂಗವಾಗಿರಬೇಕೆಂದು ಹಿಂದೆಯೇ ಹೇಳಿರುತ್ತೇವೆ ಎಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

**ಇಪ್ಪರಿಕರಙ್ಗಳುಮ್** - ಈ ಆನುಕೂಲ್ಯಸಙ್ಕಲ್ಪ ಪ್ರಾತಿಕೂಲ್ಯ ವರ್ಜನಗಳಾದ ಐದು ಅಂಗಗಳು, **ಉಪಾಯಾರ್ಥಮಾಗ** - ಆತ್ಮನಿಕ್ಷೇಪರೂಪ ಅಂಗಿಯನ್ನು ಅನುಷ್ಠಿಸುವಾಗ, **ಸಕೃತ್ಕರ್ತ್ತವ್ಯಂಗಳ್** - ಒಂದೇ ಸಲ ಅನುಷ್ಠಿಸತಕ್ಕದ್ದೆಂಬ ವಿಷಯವನ್ನು, **ಅಧಿಕಾರಾಂತರತ್ತಿಲೇ** - ಬೇರೆ ಅಧಿಕಾರದಲ್ಲಿ ಎಲ್ಲಿ ? ಎಂದರೆ ಸಾಙ್ಗಪ್ರಪದನಾಧಿಕಾರದಲ್ಲಿ, **ಶೊನ್ನೋಮ್** - ಹೇಳಿರುತ್ತೇವೆ. ಅನುಕೂಲ್ಯ ಸಙ್ಕಲ್ಪ ಪ್ರಾತಿಕೂಲ್ಯ ವರ್ಜನಗಳು ಯಾವಜ್ಜೀವವೂ ನಡಸತಕ್ಕದ್ದಾದರೂ, ಯಾವಜ್ಜೀವವೂ ಅಂಗವಾಗಿರತಕ್ಕದ್ದೆಂಬ ವಾದವು ಅಲ್ಲಿ ನಿರಸನ ಮಾಡಲ್ಪಟ್ಟಿರುತ್ತದೆ. ಸಕೃದನುಷ್ಠೇಯವಾದ ಭರಸಮರ್ಪಣ ಕಾಲದಲ್ಲಿ ಇವು ಅಂಗವಾಗಿರಬೇಕೆಂಬುದು ಶ್ರೀ ನಡಾದೂರಮ್ಮಾಳರವರ ಹೇಳಿಕೆಯಿಂದ ವ್ಯಕ್ತವು. ೧೧೧೩-೪ ನೆಯ ಪುಟಗಳನ್ನು ಪರಾಂಬರಿಸಿ. ಇದನ್ನನುಸರಿಸಿ, ಅಲ್ಲಿ ಶ್ರೀ

**ಳ್ ಎನ್ನುಮಿಡಮ್ ಅಧಿಕಾರಾಂತರತ್ತಿಲೇ ಶೊನ್ನೋಮ್**

**"ಪ್ರಪದ್ಯೇ" ಇತ್ಯತ್ರ ವರ್ತಮಾನ ನಿರ್ದೇಶಸ್ಯ ತಾತ್ಪರ್ಯಮಾಹ. ಇತರ ತಾತ್ಪರ್ಯಾಣಾಂ ಪ್ರಮಾಣ ವಿರೋಧಂ ದರ್ಶಯತಿ.**

---

**ಇಕ್ರಿಯಾ ಪದತ್ತಿಲ್ ವರ್ತಮಾನ ನಿರ್ದೇಶಮ್ "ಬರ್ಹಿರ್ಲವನಾದಿ" ಮನ್ತ್ರಙ್ಗಳಿರ್‌ಪ್ಪೋಲೆ ಅನುಷ್ಠಾನಕಾಲಾಭಿಪ್ರಾಯಮ್ ; ಇಙ್ಗನನ್ರಿಕ್ಕೇ ಈ**

ನಿಗಮಾಂತದೇಶಿಕರವರು ಹೇಳಿರುವದೇನೆಂದರೆ—**"ಇಪ್ಪಿಡತ್ತಿಲ್ ಆನುಕೂಲ್ಯ ಸಙ್ಕಲ್ಪಾದಿಗಳ್ ಉಪಾಯ ಪರಿಕರಮಾಯ್ ಸಕೃತ್ತಾಯಿರುಕ್ಕುಮ್. ಮೇಲಿವನ್ನೋಲಿನವನುಕೂಲವೃತ್ತ್ಯಾದಿಗಳೋಡೆ ಪೋರುಗಿರವಿಡಮುಮ್ ಉಪಾಯ ಫಲಮಾಯ್ ಯಾವದಾತ್ಮಭಾವಿಯಾಯಿರುಕ್ಕುಮ್."** (೧೧೧೬-೭ನೆಯ ಪುಟಗಳನ್ನು ನೋಡಿ.)

**ಪ್ರಪದ್ಯೇ** ಎಂಬಲ್ಲಿ ವರ್ತಮಾನ ನಿರ್ದೇಶವಿದೆ. ಅದರ ಪ್ರಯೋಜನವೇನು ಎಂಬ ಚರ್ಚೆಯಲ್ಲಿ, ಅನೇಕರು ನಾನಾವಿಧವಾದ ಪ್ರಯೋಜನವನ್ನು ಹೇಳುವರು. ಅವುಗಳನ್ನೆಲ್ಲಾ ಉಪಪಾದನಮಾಡಿ, ಅವುಗಳೆಲ್ಲಾ ಪ್ರಮಾಣಗಳಿಗೆ ವಿರೋಧವೆಂದು ಉಪದೇಶಿಸುತ್ತಾರೆ.

**"ಪ್ರಪದ್ಯೇ" ಎಂಬಲ್ಲಿರುವ ವರ್ತಮಾನಕಾಲ ತಾತ್ಪರ್ಯವನ್ನು ತಿಳಿಸುತ್ತಾರೆ. ಇತರರ ತಾತ್ಪರ್ಯಗಳು ಪ್ರಮಾಣ ವಿರೋಧವಾದವು.**

---

**ಇಕ್ರಿಯಾಪದತ್ತಿಲ್** - ಈ **ಪ್ರಪದ್ಯೇ** ಎಂಬ ಕ್ರಿಯಾಪದದಲ್ಲಿರುವ, **ವರ್ತಮಾನ ನಿರ್ದೇಶಮ್** - ವರ್ತಮಾನಕಾಲದಲ್ಲಿ ಹೇಳಿರುವುದು, **ಬರ್ಹಿರ್ಲವನಾದಿ, ಮನ್ತ್ರಙ್ಗಳಿರ್‌ಪ್ಪೋಲೆ** - ಮನ್ತ್ರಗಳಹಾಗೆ, **ಅನುಷ್ಠಾನಕಾಲಾಭಿಪ್ರಾಯಮ್** - ಸಕೃತ್ ಅನುಷ್ಠಿಸುವ ಕಾಲವನ್ನು ಸೂಚಿಸುವದರ ಅಭಿಪ್ರಾಯವು. ಭರನ್ಯಾಸವು ಸಕೃದನುಷ್ಠೇಯವು. ಆ ಕಾಲದಲ್ಲೇ ಈ ಪಂಚ ಪರಿಕರಗಳೂ ಇರಬೇಕೆಂದು ಹೇಳಲ್ಪಟ್ಟಿತು. ಬರ್ಹಿರ್ಲವನ ಮನ್ತ್ರವು ಯಾವುದೆಂದರೆ **"ಬರ್ಹಿರ್ದೇವ ಸದನಂ ದಾಮಿ ದೇವಾನಾಂ ಪರಿಷೂತ ಮಸಿ"** ಇಲ್ಲಿ ಬರ್ಹಿರ್ಲವನವೆಂದರೆ ದರ್ಭೆಗಳನ್ನು ಕತ್ತರಿಸೋಣವು. ಈ ಮನ್ತ್ರದಲ್ಲೂ ದಾಮಿ ಎಂಬ ವರ್ತಮಾನ ನಿರ್ದೇಶವು ಆ ಕಾಲಕ್ಕೆ ಮಾತ್ರವೇ ಅನ್ವಯಿಸುತ್ತದೇ ವಿನಾ ಯಾವಜ್ಜೀವವೂ ಅನುಷ್ಠೇಯವೆಂಬುದನ್ನು ಸೂಚಿಸುವದಿಲ್ಲವು ಎಂಬ ಭಾವವು. ಸಾರದೀಪಿಕಾ ವ್ಯಾಖ್ಯಾತೃವು **ಬರ್ಹಿರ್ಲವನಾದಿ ಮನ್ತ್ರಂಗಳಿರ್ ಪೋಲೆ** ಎಂಬಲ್ಲಿರುವ ಆದಿ ಪದವು ಬರ್ಹಿರ್ಲವನ ಶಬ್ದದೊಂದಿಗೆ ಸೇರಿರುವದರಿಂದ ಸಂಭರಣ, ಗ್ರಥನ, ಉದ್ಯಮನ, ಆಹರಣಾದಿಗಳು ಹೇಳಲ್ಪಟ್ಟವೆಂದು ಅಭಿಪ್ರಾಯಪಟ್ಟಿರುತ್ತಾರೆ. ಆದುದರಿಂದ ದರ್ಭೆಗಳನ್ನು ಕತ್ತರಿಸುವದಕ್ಕೂ ಕಟ್ಟುವದು ತರುವುದು ಮುಂತಾದ್ದ

**ವರ್ತ್ತಮಾನ ವ್ಯಪದೇಶಮ್ (೧) ವರ್ತ್ತಮಾನ ದೇಹಾವಧಿಯೋಗ ಪ್ರಪತ್ತ್ಯನು ಷ್ಠಾನಕರ್ತ್ತವ್ಯತ್ತೈಯ್ಯೈ ವಿವಕ್ಷಿಕ್ಕಿರದೆನ್ರುಮ್; (೨) ಫಲಮ್‌ವರು ಮಳವುಮ್ ಪ್ರಪತ್ತಿ ಪರಿಕರಮಾನ ವಿಶ್ವಾಸಾನುವೃತ್ತಿಯ್ಯೈ ವಿವಕ್ಷಿಕ್ಕಿರದೆನ್ರುಮ್, (೩) ಪ್ರಪತ್ತಿಕಾಲತ್ತಿಲ್ ತಾನ್ ಸಙ್ಕಲ್ಪಿತ್ತಪಡಿಯೆ ಆನುಕೂಲ್ಯಾದಿಗಳ್ ಪ್ರಪತ್ತಿಪರಿಕರ ಮಾಗವೇ ಮೇಲ್ ಅನುವರ್ತ್ತಿಕ್ಕವೇಣ್ಡುಮ್ ಪಡಿಯ್ಯೈ ಕಾ**

---

ಕ್ಕೆಲ್ಲಾ ಮನ್ತ್ರಗಳಿವೆ. ಇವೆಲ್ಲಾ ಅಂತಹ ದರ್ಭಸಂಗ್ರಹಣಕಾಲಕ್ಕೆ ಮಾತ್ರವೇ ಅನ್ವಯವೇ ವಿನಾ, ಅನಂತರ ಕಾಲಕ್ಕೆ ಅನ್ವಯಿಸುವದಿಲ್ಲವು.

ಸಾರಾಸ್ವಾದಿನಿಯವರು **"ಅಗ್ನಯೇ ಜುಷ್ಟಂ ನಿರ್ವಪಾಯ"** ಇತ್ಯಾದಿ ಮಂತ್ರಗಳು ಆದಿಪದದಿಂದ ಹೇಳಲ್ಪಟ್ಟವೆಂದು ವ್ಯಾಖ್ಯಾನವನ್ನು ಬರೆದಿರುತ್ತಾರೆ.

ಈ ಬರ್ಹಿರ್ಲವನ ಮನ್ತ್ರವನ್ನು ಶ್ರೀದೇಶಿಕವರ್ಯರು ಉದಾಹರಿಸಿರುವದರ ಅಭಿಪ್ರಾಯವೇನೆಂದರೆ ದರ್ಭೆಗಳನ್ನು ಕತ್ತರಿಸುವ ಮನ್ತ್ರವನ್ನು ಆ ಕಾಲದಲ್ಲೇ ಹೇಳಿ ಸಕೃತ್ಕತ್ತರಿಸತಕ್ಕದ್ದೇವಿನಾ, ಪುನಃ ಪುನಃ ಆ ದರ್ಭೆಗಳನ್ನು ಕತ್ತರಿಸ ಬೇಕಾದ ಆವಶ್ಯಕತೆ ಹೇಗೆ ಇಲ್ಲವೋ, ಹಾಗೆಯೇ ಇಲ್ಲಿಯೂ ಪ್ರಪದ್ಯೇ ಎಂಬ ನಿರ್ದೇಶವು, ಆ ಕಾಲದಲ್ಲಿಮಾತ್ರ ಸಕೃದನುಷ್ಠೇಯವೇ ವಿನಾ, ಪುನಃ ಪುನಃ ಅನು ಷ್ಠಿಸಬೇಕಾದ ಆವಶ್ಯಕತೆಯಿಲ್ಲವು. ಪುನಃ ಪುನಃ ಅನುಷ್ಠೇಯವೆಂದರೆ **"ಸಕೃತ್ತದ್ದ್ವಯಂ ಸಕೃದುಚ್ಚಾರ್ಯಸ್ಸಂಸಾರವಿಮೋಚನಂ ಭವತಿ, ಸಕೃದೇವಹಿ ಶಾಸ್ತ್ರಾರ್ಥಃ ಕೃತೋಽಯಂ ತಾರಯೇನ್ನರಮ್"** ಇತ್ಯಾದಿಗಳಿಗೆ ವಿರೋಧವು. ಮುಂದೆ ಇತರ ಪೂರ್ವಪಕ್ಷಾಭಿಪ್ರಾಯಗಳನ್ನು ಅನುವದಿಸಿ ಮೇಲಿನಶಾಸ್ತ್ರ ಪ್ರಮಾಣಗಳಿಗೆ ವಿರುದ್ಧವೆಂದು ತಿಳಿಸುತ್ತಾರೆ.—**ಇಙ್ಗನನ್ರಿಕ್ಕೆ** - ಹಾಗಲ್ಲದೆ, **ಈ ವರ್ತ್ತಮಾನವ್ಯಪದೇಶಮ್-ಪ್ರಪದ್ಯೇ** ಎಂಬಲ್ಲಿ ವರ್ತಮಾನ ಹೇಳಿಕೆಯು, (೧) **ವರ್ತ್ತಮಾನದೇಹಾವಧಿಯೋಗ**- ಈಗ ಪ್ರಾಪ್ತವಾಗಿರುವ ದೇಹವಿರುವವರೆಗೂ, **ಪ್ರಪತ್ತ್ಯನುಷ್ಠಾನ ಕರ್ತ್ತವ್ಯತ್ತೈಯ್ಯೈ**-ಪ್ರಪದನಾನುಷ್ಠಾನವನ್ನು ಮಾಡಬೇಕಾದ ಆವಶ್ಯಕತೆಯನ್ನೂ, **ವಿವಕ್ಷಿಕ್ಕಿರದೆನ್ರುಮ್** - ತಿಳಿಸುತ್ತದೆ ಎಂದೂ, (೨) **ಫಲಮ್‌ವರು ಮಳವುಮ್ ಪ್ರಪತ್ತಿಪರಿಕರಮಾನ**-ಫಲವು ದೊರೆಯುವತನಕವೂ ಪ್ರಪದನಕ್ಕೆ ಅಂಗವಾದ, **ವಿಶ್ವಾಸಾನುವೃತ್ತಿಯ್ಯೈ**-ಮಹಾ ವಿಶ್ವಾಸವು ಅನುವರ್ತ್ತಿಸಿ ಬರತಕ್ಕದ್ದೆಂಬುದನ್ನು, **ವಿವಕ್ಷಿಕ್ಕಿರದೆನ್ರುಮ್**-ತಿಳಿಸುತ್ತವೇ ಎಂದೂ, (೩) **ಪ್ರಪತ್ತಿಕಾಲತ್ತಿಲ್**-ಪ್ರಪದನಾನುಷ್ಠಾನ ಕಾಲದಲ್ಲಿ, **ತಾನ್ ಸಙ್ಕಲ್ಪಿತ್ತ ಪಡಿಯ್ಯೈ**-ತಾನು ಆಗ ಇನ್ನುಮುಂದೆಯಲ್ಲಾ ಶಾಸ್ತ್ರಕ್ಕೆ ಅನುಕೂಲನಾಗಿಯೇ ನಡೆಯುವೆನು, ಪ್ರತಿಕೂಲನಾಗಿ ಆಚರಿಸುವದಿಲ್ಲವು ಎಂದು ಸಙ್ಕಲ್ಪಿಸಿದ ಹಾಗೆಯೇ, **ಆನುಕೂಲ್ಯಾದಿಗಳ್** ಅನುಕೂಲನಾಗಿರುವಿಕೆ, ಆದಿ ಪದದಿಂದ ಪ್ರಾತಿಕೂಲ್ಯವರ್ಜನವು ಹೇಳಲ್ಪಟ್ಟಿತು. ಇವುಗಳು, **ಪ್ರಪತ್ತಿ ಪರಿಕರ ಮಾಗವೇ**-ಪ್ರಪತ್ತಿಗೆ ಅಂಗವಾಗಿಯೇ ಇದ್ದು

**ಟ್ಟುಕಿರತೆನ್ರುಮ್ ಶೊಲ್ಲುಮ್ ಪಕ್ಷಙ್ಗಳ್, ಇವ್ವುಪಾಯಮ್ ಸಪರಿಕರಮಾಗ ಸಕೃತ್ಕರ್ತವ್ಯಮೆನ್ರು ಕಾಟ್ಟುಗಿರ ಪ್ರಮಾಣಙ್ಗಳೋಡೆ ವಿರೋಧಿಕ್ಕುಮ್.**

ಕೊಂಡು, **ಅನುವರ್ತ್ತಿಕ್ಕವೇಂಡುಮ್ ಪಡಿಯೈ** - ದೇಹವಿರುವವರೆಗೂ ಅನುವರ್ತಿಸಿ ಬರಬೇಕೆಂಬುದನ್ನು, **ಕಾಟ್ಟುಕಿರದೆನ್ರುಮ್** - ತೋರಿಸುತ್ತದೆಂದು, **ಶೊಲ್ಲುಮ್ ಪಕ್ಷಙ್ಗಳ್**-ಹೇಳುವ ಅಭಿಪ್ರಾಯಗಳು, **ಇವ್ವುಪಾಯಮ್** - ಈ ಪ್ರಪದನ ರೂಪೋಪಾಯವು, **ಸಪರಿಕರಮಾಗ** - ಈ ಐದು ಅಂಗಗಳೊಂದಿಗೆ ಸೇರಿಯೇ, **ಸಕೃತ್ಕರ್ತ್ತವ್ಯಮೆನ್ರು**- ಒಂದು ಸಲಮಾತ್ರವೇ ಅನುಷ್ಠಿಸತಕ್ಕದ್ದೆಂದು **ಕಾಟ್ಟುಗಿರ**–ತೋರ್ಪಡಿಸುವ **ಪ್ರಮಾಣಙ್ಗಳೋಡೆ ವಿರೋಧಿಕ್ಕುಮ್**-ಪ್ರಮಾಣಗಳೊಂದಿಗೆ ವಿರೋಧವಾದವಾಗುತ್ತದೆ. ಆ ಪ್ರಮಾಣಗಳು ಯಾವುವೆಂದರೆ ? **"ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂಸರ್ವಭೂತೇಭ್ಯೋ ದದಾಮ್ಯೇ ತದ್ವ್ರತಂ ಮಮ"** ಎಂಬುದೂ ಮತ್ತು ಮೇಲೆಯೇ ಉದಾಹರಿಸಿದ **"ಸಕೃಂ ತದ್ದ್ವಯಂ ಸಕೃತ್" "ಸಕೃದೇವ ಹಿ ಶಾಸ್ತ್ರಾರ್ಥಃ"** **ಇತ್ಯಾದಿಗಳು.**

ಆನುಕೂಲ್ಯ ಸಂಕಲ್ಪಾದಿಗಳು ಉಪಾಯಾನುಷ್ಠಾನ ಕಾಲದಲ್ಲಿನ ಪರಿಕರಗಳಾದರೂ (೧) ದೇಹವಿರುವವರೆಗೂ ಅನುಕೂಲ ಪ್ರವೃತ್ತಿ ಪ್ರತಿಕೂಲವರ್ಜನ ಪರಿಕರಗಳು ಅನುವರ್ತಿಸಿರಬೇಕೆಂಬುದನ್ನು (೨) ಫಲಪ್ರಾಪ್ತಿವರವಿಗೂ ಇರಬೇಕೆಂದೂ (೩) ಸಙ್ಕಲ್ಪಾನುಸಾರ ಪ್ರವೃತ್ತಿಯು ಕೊನೆಯವರೆಗೂ ಇರಬೇಕೆಂದೂ ವರ್ತಮಾನ ನಿರ್ದೇಶವು **ಪ್ರಪದ್ಯೇ** ಎಂಬಲ್ಲಿ ತೋರಿಸುತ್ತದೆಂದು ಕೆಲವರು ಅಭಿಪ್ರಾಯಪಡುವರೆಂದು ಹೇಳಿ, ಪ್ರಪದನವು ಸಕೃತ್ಕರ್ತ್ತವ್ಯವೆಂದು ಹೇಳುವ ಪ್ರಮಾಣಗಳಿಗೆ ವಿರೋಧವೆಂದು ತಿಳಿಸಿದರು. ಇದಕ್ಕೆ ನಿದರ್ಶನವಾಗಿ ದರ್ಭಲವನಾಹರಣಾದಿ ಮನ್ತ್ರಗಳನ್ನು ಉದಾಹರಿಸಿದರು. ಹಾಗೆಯೇ ಲೌಕಿಕ ನಿದರ್ಶನವನ್ನೂ ಕೊಡಬಹುದು; ಏನೆಂದರೆ ಯೂನಿವರ್ಸಿಟಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವನಿಗೆ ಕಾನ್ವಕೇಷನ್ನಲ್ಲಿ ಡಿಪ್ಲೋಮಾ ಕೊಡುವುದೂ ಸಕೃತ್ತೇ. "I do promise" ಎಂದು ಸಙ್ಕಲ್ಪಿಸುವ ಹಾಗೆ ಮಾಡಿ ಡಿಪ್ಲೋಮ ಕೊಡಲ್ಪಡುತ್ತದೆ. ದೇಹಾವಸಾನ ಮೊದಲಾದ ಕಾಲದವರೆಗೂ ಹೇಗೆ ನಿರೀಕ್ಷಿಸಬೇಕಿಲ್ಲವೋ ಹಾಗೆಯೇ ಈ ಸಂದರ್ಭದಲ್ಲೂ ಎಂದು ತಿಳಿಯತಕ್ಕದ್ದು.

ಆಗಲಿ, ಪೂರ್ವಪಕ್ಷಿಗಳು ಪುನಃ ಆಕ್ಷೇಪಿಸಿ ಕೇಳಬಹುದು. ಹೇಗೆಂದರೆ ? ಸಂಸಾರದಲ್ಲಿ ದುಃಖಾತಿಶಯವು ಸಾಮಾನ್ಯವಾಗಿ ಉಂಟು. ಇದನ್ನು ತಿಳಿದ ಪ್ರಾಜ್ಞನಿಗೆ ತ್ವರಾತಿಶಯವು ಪ್ರಾಪ್ತವಾಗಿ ಪುನಃ ಪ್ರಪದನವನ್ನು ಅನುಷ್ಠಿಸಕೂಡದೇ ? ಮತ್ತು ತನಗೆ ಮುಂದಕ್ಕೆ ನಿರತಿಶಯರೂಪ ಸುಖವು ಲಭಿಸುತ್ತದೆ ಎಂಬ ಅನುಭವಕ್ಕಾಗಿ ಭೋಗರೂಪದಲ್ಲಿ ಪುನಃ ಪುನಃ ಶರಣಾಗತಿಯನ್ನು

**ತ್ವರಾತಿಶಯತ್ತಾಲುಮ್ ಭೋಗರೂಪತ್ತೈಯಾಲುಮ್ ವರುಮ್ ಆವೃತ್ತಿಕ್ಕುಮ್, ಪೂರ್ವಖಂಡತ್ತಿರ್ಚ್ಚೊನ್ನಪಡಿಯೇ ಅನುಷ್ಠಿತಮಾನ ಉಪಾಯ ಶರೀರತ್ತಿಲ್ ಪ್ರವೇಶಮಿಲ್ಲೈ.**

ಅನುಷ್ಠಿಸುವದರಲ್ಲಿ ತಪ್ಪೇನು ? ಪ್ರಪದನವು ಸಕೃತ್ತೆಂದೂ, ವರ್ತಮಾನ ನಿರ್ದೇಶವು, ಆ ಕಾಲಕ್ಕೆ ಮಾತ್ರವೇ ಅನ್ವಯವೆಂದು ಹೇಗೆ ಹೇಳುತ್ತೀರಿ. ಶ್ರೀ ಯತಿವರ್ಯರು ಶರಣಾಗತಿಗದ್ಯವನ್ನು ಏತಕ್ಕಾಗಿ ಅನುಗ್ರಹಿಸಿದರು ? ನಿತ್ಯದಲ್ಲೂ ಪಠನ ಮಾಡಿ ಶರಣಾಗತಿಯನ್ನು ಅನುಷ್ಠಿಸತಕ್ಕದ್ದೆಂಬುದು ಅವರ ಅಭಿಪ್ರಾಯವಲ್ಲವೋ ? ಅವರು ಅಲ್ಲಿ ಹೇಳಿರುವದೇನೆಂದರೆ **"ದ್ವಯಮರ್ಥಾನು ಸಂಧಾನೇನ ಸಹ ಸದೈವಂ ವಕ್ತಾ"** ಎಂದಿರುವದರಿಂದ ರಾಗ ಪ್ರಾಪ್ತವಾದ ಭೋಗ್ಯತೆಯು ಸೂಚಿಸಲ್ಪಟ್ಟು, ಯಾವಾಗಲೂ ದ್ವಯವನ್ನುಚ್ಚರಿಸುತ್ತಾ **"ದ್ವಯಾನುಸಂಧಾನ ಸ್ಫುರಿತಾಧರಃ"** ಎಂಬದಾಗಿ ಕೆಳಗಿನ ತುಟಿಯು ಮೋಕ್ಷಾರ್ಥಿಯಾದ ಪ್ರಪನ್ನನಿಗೆ ಅದುರುತ್ತಾ ಇರಬೇಕೆಂದು ಹೇಳಲ್ಪಟ್ಟಿದೆಯಲ್ಲವೇ ? ಆದುದರಿಂದ ತ್ವರಾತಿಶಯದಿಂದಲೂ ಭೋಗಾತಿಶಯದಿಂದಲೂ ಪುನಃ ಪುನಃ ಶರಣಾಗತಿಯನ್ನು ಅನುಷ್ಠಿಸುವದು ಯುಕ್ತವಲ್ಲವೇ ? ಎಂದಾಕ್ಷೇಪತಂದರೆ ಅದಕ್ಕೆ ಸಮಾಧಾನವನ್ನು ಮುಂದಿನ ಎರಡು ವಾಕ್ಯಗಳ ಮೂಲಕ ತಿಳಿಸುತ್ತಾರೆ.

**ತ್ವರಾತಿಶಯತ್ತಾಲುಮ್** - ಈ ದುಃಖಕರವಾದ ಹೇಯ ದೇಹವನ್ನು ಶೀಘ್ರವಾಗಿ ತೊಲಗಿಸಬೇಕೆಂಬ ತ್ವರಾತಿಶಯದಿಂದಲಾಗಲಿ, ಮತ್ತು **ಭೋಗರೂಪತೆಯಾಲುಮ್** - ಮುಂದೆ ತನಗೆ ಪ್ರಾಪ್ತವಾಗುವ ನಿರತಿಶಯಾವಸ್ಥೆಯ ಅನುಸಂಧಾನದ ಭೋಗ್ಯತೆಯಿಂದಲಾಗಲಿ, **ವರುಮ್** - ಉಂಟಾಗುವ, **ಆವೃತ್ತಿಕ್ಕುಮ್** - ಪುನಃ ಪುನಃ ಅನುಷ್ಠಿಸತಕ್ಕದ್ದೆಂಬುವದಕ್ಕ, **ಪೂರ್ವಖಂಡತ್ತಿರ್ ಚೊನ್ನ** - ದ್ವಯಮನ್ತ್ರದ ಪೂರ್ವಖಂಡದಲ್ಲಿ ಉಪದೇಶಿಸಲ್ಪಟ್ಟ, **ಉಪಾಯ ಶರೀರತ್ತಿಲ್** - ಪ್ರಪದನದ ಸ್ವರೂಪದಲ್ಲಿ, **ಪ್ರವೇಶಮಿಲ್ಲೈ** - ಅನ್ವಯವಲ್ಲವು; ಎಂದರೆ ದ್ವಯಮನ್ತ್ರದಲ್ಲಿ ಹೇಳಿರುವಹಾಗೆ ಪೂರ್ವದಲ್ಲಿ ಅನುಷ್ಠಿಸಿದ ಪ್ರಪದನಕ್ಕೆ ಆ ಕಾಲದಲ್ಲಿರಬೇಕಾದುದು ಐದು ಅಂಗಗಳು. ಇದೇ ಸಾಙ್ಗಪ್ರಪದನವು. ಅದಕ್ಕೆ ಉತ್ತರಕಾಲೀನವಾದ ಯಾವ ಅಂಗವೂ ಬೇಕಾಗಿಲ್ಲವು. ಆದುದರಿಂದ ಪ್ರಪದನ ಕಾಲಕ್ಕೆ ಉತ್ತರ ಕಾಲದಲ್ಲಿ ಶರಣಾಗತಿಯ ಆವೃತ್ತಿಯು ಬೇಕಾಗಿಲ್ಲವೆಂಬ ಭಾವವು. ಉತ್ತರ ಕಾಲದಲ್ಲಿ ಬೇಕಾದುದು ತಾನು ಮಾಡಿದ ಮಹತ್ತಾದ ಉಪಾಯದ ಅನುಸಂಧಾನವು ಇದು ತ್ವರಾತಿಶಯಕ್ಕೂ ಭೋಗರೂಪವಾಗಿಯೂ ಬೇಕಾದುದು. ಇಂತಹ ಅನುಸಂಧಾನ ಮಾಡುವುದಕ್ಕೆ ಸಹಾಯವಾಗಿಯೂ, ಪ್ರಪದನ ಮಾಹಾತ್ಮ್ಯೆಯ ಪ್ರದರ್ಶನಕ್ಕಾಗಿಯೂ ಶರಣಾಗತಿಗದ್ಯವನ್ನು ಶ್ರೀ ಯತಿವರ್ಯರು ರಚಿಸಿ, ಅದರಲ್ಲಿ **"ದ್ವಯಮರ್ಥಾನು ಸಂಧಾನೇನ ಸಹ ಸದೈವಂ**

**ಆಗ್ಯೆಯಾಲ್ ಉಪಾಯವಾಕ್ಯತ್ತಿಲ್ ವರ್ತಮಾನ ವ್ಯಪದೇಶಮ್ "ದ್ವಯ ಮರ್ಥಾನುಸಂಧಾನೇನ ಸಹ ಸದೈವಂ ವಕ್ತಾ" ಎಜ್ಞ್ಱರಾಗಪ್ರಾಪ್ತಭೋಗ ರೂಪಾನು ವೃತ್ತಿಯೈ ವಿವಕ್ಷಿಕ್ಕಿರದು ಮೆನ್ಱು.**

## ಪೂರ್ವಖಂಡಸ್ಯಾರ್ಥ ನಿಗಮಯತಿ

---

**ಇಪ್ಪಡಿ (೧) ಸರ್ವಶರಣ್ಯತ್ವಮುಂ (೨) ಶರಣಾಗತಿಸ್ವರೂಪಮುಂ (೩)**

---

**ವಕ್ತಾ"** ಎಂದು ಅಪ್ಪಣೆಕೊಡಿಸಿರುತ್ತಾರೆ, ಅವರು ಪ್ರಯೋಗಿಸಿರುವದೇ **ಅನು ಸಂಧಾನ**ವೆಂಬುದಾಗಿ.

ತ್ವರಾತಿಶಯಕ್ಕಾಗಿ ಪುನಃ ಪ್ರಪದನಕೂಡದೋ ? ಎಂದರೆ ಒಂದು ವೇಳೆ ಅನುಷ್ಠಿಸಿದರೂ ಎರಡೂ ಬೇರೆ ಬೇರೇ ಫಲಕ್ಕಾಗಿ ಪ್ರಪದನವು. ಮೊದಲು ಅನುಷ್ಠಿಸಿದುದು ದೇಹಾವಸಾನಾನಂತರ ಮೋಕ್ಷ ಪ್ರಾಪ್ತಿಗಾಗಿ. ಎರಡನೆಯದು ಭೋಗ ಪ್ರಾಪ್ತಿಗಾಗಿ. ಆದುದರಿಂದ ಇದಕ್ಕೆ ಮೊದಲಿನ ಶರಣಾಗತಿಯ ಸಂಬಂಧ ವಿಲ್ಲವು. ಭೋಗರೂಪವಾಗಿ ಆವೃತ್ತಿಯನ್ನು ಶ್ರೀ ಯತಿವರ್ಯರು ಈ ಮೇಲಿನ ವಾಕ್ಯದಲ್ಲಿ ಅನುಮೋದಿಸಿರುತ್ತಾರೆಂಬ ಹೇಳುವದೂ ಸರಿಯಲ್ಲವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. **ಆಗ್ಯೆಯಾಲ್** - ಉಪಾಯಾವೃತ್ತಿಗೆ ಪೂರ್ವಪ್ರವೃತ್ತಿಯಲ್ಲಿ ಪ್ರವೇಶವಿಲ್ಲದುದರಿಂದ, **ಉಪಾಯ ವಾಕ್ಯತ್ತಿಲ್** - ದ್ವಯಪೂರ್ವಖಂಡದ ವಾಕ್ಯದಲ್ಲಿರುವ **ಪ್ರಪದ್ಯೇ** ಎಂಬ ಕ್ರಿಯಾಪದದಲ್ಲಿ, **ವರ್ತಮಾನವ್ಯಪದೇಶಮ್** ವರ್ತಮಾನಕಾಲದ ಹೇಳಿಕೆಯು, **"ದ್ವಯಮರ್ಥಾನು ಸಂಧಾನ ಇತ್ಯಾದಿ"** ಎಂಬಲ್ಲಿ ತೋರುವ **ರಾಗಪ್ರಾಪ್ತ ಭೋಗರೂಪಾನುವೃತ್ತಿಯೈ** - ಮಹಾ ವಿಶ್ವಾಸದಿಂದುಂಟಾದ, **ಭೋಗರೂಪಾನುವೃತ್ತಿಯೈ** - ಮುಂದೆ ಬರುವ ಆನಂದಾನುಭವದ ಅನುವೃತ್ತಿಯನ್ನು, **ವಿವಕ್ಷಿಕ್ಕಿರಿದನ್ಱು** - ಹೇಳುವದೂ ಇಲ್ಲವು. **ಅರ್ಥಾನು ಸಂಧಾನ**ವೆಂಬುದರಿಂದ, ರಾಗ ಪ್ರಾಪ್ತತ್ವವೂ, **ಸದೈವಂ ವಕ್ತಾ** ವೆಂಬುವದರಿಂದ ಭೋಗರೂಪತ್ವವೂ ಸೂಚಿತವು. ಇಲ್ಲಿ ಶ್ರೀಯತಿವರ್ಯರು ಹೇಳಿರುವದು ಪುನಃ ಪುನಃ ದ್ವಯಾರ್ಥಾನುಸಂಧಾನವನ್ನು ಹೇಳಿದರೇ ವಿನಾ ಪುನಃ ಪುನಃ ಶರಣಾಗತ್ಯಾವೃತ್ತಿಯು ಹೇಳಲ್ಪಡಲಿಲ್ಲವೆಂಬ ತಾತ್ಪರ್ಯವು. ಇದನ್ನೇ ಶ್ರೀದೇಶಿಕವರ್ಯರು ಈ ಅಧಿಕಾರಾದಿಯಲ್ಲೇ **ಆಮ್ರೇಡಿತೋ ದಿಶತಿ ಯಚ್ಚ ಕೃತಾರ್ಥಭಾವಂ,** ಇಲ್ಲಿ ಕೃತಾರ್ಥ ಭಾವವೇ ಭೋಗರೂಪತ್ವವು. ಇದಕ್ಕೆ ಕೈಂಕರ್ಯರೂಪದಲ್ಲಿ ಪರ್ಯವಸಾನವು.

ಪೂರ್ವಖಂಡದಲ್ಲಿ ಹೇಳಲ್ಪಟ್ಟ ಅಭಿಪ್ರಾಯಗಳನ್ನು ನಿಗಮನದಲ್ಲಿ ಹೇಳುತ್ತಾರೆ.

---

**ಇಪ್ಪಡಿ** - ಹೀಗೆ ನಾವು ಹಿಂದೆ ಉಪಪಾದಿಸಿದ ರೀತಿಯಲ್ಲಿ (೧) **ಸರ್ವ ಶರಣ್ಯತ್ವಮುಮ್** - ಸರ್ವರಿಗೂ ಶರಣ್ಯನೆಂಬಭಾವವೂ, (೨) **ಶರಣಾಗತಿ ಸ್ವರೂ**

**ಇದಿ್ ಪರಿಕರಙ್ಗಳುಮ್ (೪) ಅಧಿಕಾರಿ ವಿಶೇಷಮುಮ್ ಪೂರ್ವಖಂಡತ್ತಿಲೇ ಪ್ರಕಾಶಿತಮಾಯ್‌ತ್ತು. ಇತ್ತಾಲ್ ಅನನ್ಯೋಪಾಯತ್ವಮುಮ್ ಸಿದ್ಧಿತ್ತದು**

**ಷಮುಂ** ಎಂಬರೆ ಅದರ ನಿಕ್ಷೇಪರೂಪವಾದ ಅಭಿಪ್ರಾಯವೂ, ಭರನ್ಯಾಸವೆಂದರೇನೆಂಬ ಅಭಿಪ್ರಾಯವೂ, (೩) **ಇದಿ್ ಪರಿಕರಙ್ಗಳುಮ್**-ಅದಕ್ಕೆ ಬೇಕಾದ ಐದು ಅಂಗಗಳೂ, (೪) **ಅಧಿಕಾರವಿಶೇಷಮುಮ್** - ಇದಕ್ಕೆ ಅಧಿಕಾರಿ ಯಾರು ಎಂಬುದೂ, **ಪೂರ್ವಖಂಡತ್ತಿಲೆ ಪ್ರಕಾಶಿತಮಾಯ್‌ತ್ತು** - ದ್ವಯಪೂರ್ವಖಂಡದಲ್ಲಿ ದ್ಯೋತಿತವು. ಒಂದು ಉಪಾಧಿಯೂ ಬೇಕಿಲ್ಲದೆ **ಶರಣಂ ಪ್ರಪದ್ಯೇ** ಎಂದಿರುವದರಿಂದ **ಸರ್ವಶರಣ್ಯತ್ವವು** ಬೋಧಿತವು. **ಶರಣಂ ಪ್ರಪದ್ಯೇ** ಎಂಬುದರ ವಿವರಣೆಯಲ್ಲಿ ಶರಣಾಗತಿಯ ಸ್ವರೂಪವನ್ನು ಹೇಳಿದರು, ಅದು ಆತ್ಮನಿಕ್ಷೇಪರೂಪದಲ್ಲಿ ಸರ್ವಭರವನ್ನೂ ಭಗವಂತನಲ್ಲಿಡುವಂತಾದ್ದೆಂದು ಉಪಪಾದಿತವು. ಅದರಲ್ಲಿರುವ ಮೂರು ಪದಗಳ ಅರ್ಥವಿವರಣೆಯಿಂದಲೂ ಪರಿಕರಙ್ಗಳೆಲ್ಲಾ ಹೇಳಲ್ಪಟ್ಟವು. ಪ್ರಪದ್ಯೇ ಎಂಬ ಉತ್ತಮಪುರುಷದಿಂದ ಕಷ್ಟಸಾಧ್ಯವಾದ ಕರ್ಮಜ್ಞಾನಾನುಗೃಹೀತವಾದ ಭಕ್ತಿಯೋಗದಲ್ಲಿ ಅಶಕ್ತತೆಯಿಂದ ಅಧಿಕಾರ ವಿಶೇಷವೂ ದ್ಯೋತಿತವೆಂಬ ಭಾವವು. ಹೀಗೆ ಅಭಿಪ್ರಾಯಗಳು ಪೂರ್ವಖಂಡದಲ್ಲಿ ತೋರಿಬರುವದರಿಂದ ಈ ಅನುಷ್ಠಾನಕ್ಕೆ ಅನನ್ಯೋಪಾಯತ್ವವು ಈ ಭರಸಮರ್ಪಣೆಗೆ ಸಲ್ಲುತ್ತದೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. **ಇತ್ತಾಲೆ** - ಹೀಗೆ ನಾಲ್ಕು ಅಭಿಪ್ರಾಯಗಳು ಈ ಪೂರ್ವಖಂಡದಲ್ಲಿ ದ್ಯೋತಿತವಾದುದರಿಂದ, **ಅನನ್ಯೋಪಾಯತ್ವಮುಮ್** - ಈ ಭರನ್ಯಾಸಕ್ಕೆ ಬೇರೆ ಇತರ ಸಾಧನಗಳ ಅಪೇಕ್ಷೆಯೂ ಇಲ್ಲದಿರೋಣವು, ಇದೇ ಸಂಪೂರ್ಣವಾದ ಉಪಾಯವಾಗಿರೋಣವು, **ಸಿದ್ಧಿತ್ತದು** - ಸಿದ್ಧಿಸಿತು. ಉಪಾಯಾನ್ತರವಾದ ಭಕ್ತಿಯೋಗಕ್ಕಾದರೋ ಕರ್ಮಯೋಗ ಜ್ಞಾನಯೋಗಾದಿರೂಪ ಸಾಧನಾಪೇಕ್ಷೆಯುಂಟು, ಇದಕ್ಕೆ ಯಾವುದರ ಸಾಹಚರ್ಯಾಪೇಕ್ಷೆಯೂ ಇರುವದಿಲ್ಲವು. ಭಕ್ತಿಮಾರ್ಗಕ್ಕಾದರೋ ನಿತ್ಯನೈಮಿತ್ತಿಕಗಳು ಅಂಗಗಳಾಗಿ ದೇಹಾವಸಾನದವರೆಗೂ ಅನುವರ್ತಿಸಿ ಬರತಕ್ಕದ್ದಾಗಿರುತ್ತದೆ. ಇದಕ್ಕಾದರೋ ನಿತ್ಯನೈಮಿತ್ತಿಕಗಳು ಬೇರೆ ವಿಧಿಯಿಂದ ಪ್ರಾಪ್ತವಾದರೂ, ಅಂಗರೂಪದಲ್ಲಿ ಬೇಕಾಗಿಲ್ಲವು.

**"ಸಕೃದೇವಪ್ರಪನ್ನಸ್ಯ ಕೃತ್ಯಂ ನೈವಾನ್ಯದಿಷ್ಯತೇ ।**
**ಸಕೃಜ್ಜಪ್ತೇನ ಮನ್ತ್ರೇಣ ಕೃತಕೃತ್ಯಸ್ಸುಖೀಭವೇತ್"**
**"ಸಕೃದೇವಹಿ ಶಾಸ್ತ್ರಾರ್ಥಃ ಕೃತೋಽಯಂ ತಾರಯೇನ್ನರಮ್"**
**"ನಜಾತಿ ಭೇದಂ ನ ಕುಲಂ ನ ಲಿಂಗಂ ನ ಗುಣಕ್ರಿಯಾಃ ।**
**ನದೇಶಕಾಲೌ ನಾವಸ್ಥಾಂ ಯೋಗೋಹ್ಯಯ ಮಪೇಕ್ಷತೇ"**

ಇತ್ಯಾದಿಗಳು ಇಲ್ಲಿ ಅನುಸಂಧೇಯಗಳು.

**ಉತ್ತರಖಂಡಃ ಫಲಪ್ರಾರ್ಥನಾರೂಪ ಇತಿ ವ್ಯಾಖ್ಯಾತುಂ, ಪೂರ್ವೋತ್ತರ ಖಂಡಯೋಃ ಸ್ಸಙ್ಗತಿಮಾಹ**

---

**ಇಪ್ಪಡಿತ್ತೋತ್ತಿನ ಶರಣಾಗತಿ (೧) "ತಾವದಾರ್ತಿ ಸ್ತಥಾವಾಂಛಾ" ಇತ್ಯಾದಿಗಳಿರ್ಪಡಿಯೇ ಸಕಲ ಫಲಸಾಧನಮಾಗ್ಯೆಯಾಲುಮ್, (೨) ತದನ್ಯಃ ಕೋ ಮಹೋದಾರಃ ಎಙ್ಗಿರಪಡಿಯೇ ಪರಮೋದಾರನಾನಶರಣ್ಯ ಅರ್ಥಿತಾರ್ಥ ಪರಿದಾನದೀಕ್ಷಿತನಾಯ್, (೩) "ಕೊಳ್ಳಕ್ಕುರೈವಿಲ ವೇಣ್ಡ**

ಉತ್ತರಖಂಡವು ಫಲಪ್ರಾರ್ಥನಾರೂಪವಾದುದೆಂದು ಹೇಳಲು ಹೊರಟು ಪೂರ್ವೋತ್ತರಖಂಡಗಳಿಗಿರುವ ಸಙ್ಗತಿಯನ್ನು ತಿಳಿಸುತ್ತಾರೆ.

---

**ಇಪ್ಪಡಿತ್ತೋತ್ತಿನ ಶರಣಾಗತಿ** - ಹೀಗೆ ಪೂರ್ವಖಂಡದಲ್ಲಿ ತೋರಿಬರುವ ಉಪಾಯವಾದ, **ಶರಣಾಗತಿ** - ಭರಸಮರ್ಪಣರೂಪ ಶರಣಾಗತಿಯು, ಸಕಲ ಫಲಸಾಧನವು ಎಂದರೆ ಚತುರ್ವಿಧ ಪುರುಷಾರ್ಥಕ್ಕೂ ಸಾಧನವು ಎಂದು ಎರಡು ಪ್ರಮಾಣಗಳನ್ನು ಉದಾಹರಿಸುತ್ತಾರೆ. (೧) **"ತಾವದಾರ್ತಿಸ್ತಥಾ ವಾಂಛಾ"** ಎಂಬ ವಿಷ್ಣು ಪುರಾಣೋಕ್ತಿಯು. ಇದು ಹಿಂದೆ ಅಧಿಕಾರಿ ವಿಭಾಗಾಧಿಕಾರದಲ್ಲಿ ಉದಾಹೃತವು. ಇದಕ್ಕೆ ಅರ್ಥವು ಹಿಂದೆಯೇ ಉಪಪಾದಿತವು. ೧೪೦ನೆಯ ಪುಟವನ್ನು ನೋಡಿ. ಚತುರ್ವಿಧ ಪುರುಷಾರ್ಥಕ್ಕೂ ಈ ಶರಣಾಗತಿಯು ಸಾಧನವೆಂದು ಹೇಳಲ್ಪಟ್ಟಿರುತ್ತದೆ; ಹಾಗೆಯೇ ಇನ್ನೂ ಐದು ಪ್ರಮಾಣಗಳನ್ನು ಅಲ್ಲಿಯೇ ಉದಾಹರಿಸಿರುತ್ತಾರೆ. ೧೩೬-೧೩೮ನೆಯ ಪುಟಗಳನ್ನು ನೋಡಿ. **ಇತ್ಯಾದಿಗಳಿರ್ಪಡಿಯೇ**-ಇವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವಹಾಗೆ, ಆದಿಶಬ್ದದಿಂದ ೧೩೬-೮ನೆಯ ಪುಟಗಳಲ್ಲಿರುವ ಐದು ಪ್ರಮಾಣಗಳೂ ಸೂಚಿತವು. **ಸಕಲಫಲ ಸಾಧನಮಾಗ್ಯೆಯಾಲುಮ್** - ಸಮಸ್ತವಾದ ಚತುರ್ವಿಧ ಪುರುಷಾರ್ಥಗಳನ್ನೂ ಸಾಧಿಸಿಕೊಡುವದರಿಂದಲೂ, (೨) **"ತದನ್ಯಃ ಕೋ ಮಹೋದಾರಃ"**-ಸರ್ವೇಶ್ವರನಲ್ಲದೆ ಬೇರೆ ಯಾರು ಮಹೋದಾರನಾಗಿ **"ವಿದಧಾತಿ ಕಾಮಾನ್"**ಎಂದು ಶ್ರುತಿಯಲ್ಲಿ ಹೇಳಿರುವಹಾಗೆ ಸಕಲ ಪುರುಷಾರ್ಥಗಳನ್ನು ಕೊಡುವವನು ಯಾರು ಉಂಟು ? **ಎಙ್ಗಿರಪಡಿಯೇ**-ಎಂದು ಹೇಳಿರುವಹಾಗೆ, **ಪರಮೋದಾರನಾನಶರಣ್ಯ** - ಎಲ್ಲರಿಗಿಂತಲೂ ಸರ್ವೋತ್ಕೃಷ್ಟವಾದ ಉದಾರಭಾವವನ್ನು ಹೊಂದಿದ ಸರ್ವರಕ್ಷಕನು, **ಅರ್ಥಿತಾರ್ಥಪರಿದಾನ ದೀಕ್ಷಿತನಾಯ್**-ಆಶ್ರಿತರಿಂದ ಪ್ರಾರ್ಥಿಸಲ್ಪಟ್ಟ ಅಭೀಷ್ಟವನ್ನು, **ಪರಿದಾನ ದೀಕ್ಷಿತನಾಯ್**-ನಿರತಿಶಯವಾಗಿ ಅನುಬಂಧಿಪರ್ಯಂತವಾಗಿ ಕೊಡುವ ದೀಕ್ಷೆಯುಳ್ಳವನಾಗಿ, ಒಂದುವೇಳೆ ಮೋಕ್ಷವನ್ನು

---

(೧) ವಿ. ಪು. ೧-೯-೭೩. (೨) ಇತಿ ಸಮು. ೩೩-೧೧೯. (೩)

**ತ್ತೆಲ್ಲಾಂ ತರುಮ್" ಎನ್ನುಮ್ಪಡಿಯೇ ನಿರ್ಕ್ಕೈಯಾಲುಮ್, ಇಜ್ಙು ಎನ್ನ ಫಲತ್ತುಕ್ಕಾಗ ಪ್ರಪತ್ತಿ ಪಣ್ಣುಗಿರದೆನ್ಗಿರ ಅಪೇಕ್ಷೈಯಿಲೇ, ಮಹೋದಾರ**

ಪ್ರಾರ್ಥಿಸಿದರೂ ತನಗೂ ಅನುಬಂಧಿಗಳಿಗೂ ಕೊಡುವ ವ್ರಥಸಙ್ಕಲ್ಪನಾಗಿ, (೩) **"ಕೊಳ್ಳುಕ್ಕುರೈವಿಲರ್** - ಇದೂ ಅಧಿಕಾರಿ ವಿಭಾಗಾಧಿಕಾರದಲ್ಲೇ ಹಿಂದೆಯೇ ಉದಾಹೃತವು ೮೦೨ನೆಯ ಪುಟ ನೋಡಿ. ಅಲ್ಲಿ ತಾತ್ಪರ್ಯಾರ್ಥವನ್ನು ಬರೆದಿರುವದರಿಂದ ಪ್ರತಿಪದಾರ್ಥವೂ ಇಲ್ಲಿ ಬರೆಯಲ್ಪಡುತ್ತದೆ.

ಓ ಕವಿಗಳೇ ನಿಷ್ಪ್ರಯೋಜನವಾದ ಇತರ ಸ್ತೋತ್ರಗಳನ್ನು ತ್ಯಜಿಸಿ ಮಹೋದಾರನಾಗಿ ಸರ್ವಫಲಗಳನ್ನೂ ದಯಪಾಲಿಸುವ ನೀಲಮೇಘಶ್ಯಾಮನನ್ನು ಸ್ತುತಿಸೋಣ ಬನ್ನಿ ಎಂದು ಕರೆಯುತ್ತಾರೆ. **"ಕೊಳ್ಳುಂಪಯನಿಲ್ಲೈ**-ಹೊಂದಲು ಏನೊಂದೂ ಶಾಶ್ವತ ಪ್ರಯೋಜನವಿಲ್ಲದೆಯೂ, **ಕುಪ್ಪೈಯ್ಕೆಕಿಳಿರ್ ತನ್ನ ಶೆಲ್ವತ್ತೈ**-ಕಸದ ಗುಡ್ಡೆಯನ್ನು ಕೆದಕಿದರೆ ದುಷ್ಟವಾಸನೆ ಮೊದಲಾದ ದೋಷವುಳ್ಳ ಸಂಪತ್ತುಳ್ಳವರನ್ನು, **ವಳ್ಳಲ್‌ಪುಗಳ್‌ನ್ದು** - ಚನ್ನಾಗಿ, ಉದಾರವಾಗಿ ಸ್ತುತಿಸಿ, **ನುಮ್‌ವಾಯ್‌ಮೈ**-ನಿಮ್ಮ ಉತ್ಕೃಷ್ಟವಾದ ಕವಿತ್ವವನ್ನು, **ಇಳಕ್ಕುಂ ಪುಲವೀರ್‌ಗಳೇ**-ನೀಯಾಳಿಸಿಕೊಳ್ಳುವ ಮಹಾಕವಿಗಳೇ! **ಕೊಳ್ಳಕ್ಕುರೈವಿಲರ್**-ಹೊಂದಲು ಯಾವ ವಿಧವಾದ ನ್ಯೂನತೆಯಿಲ್ಲದೆ ಎಂದರೆ ಗುಣವಿಭವೈಶ್ವರ್ಯಾದಿಗಳಲ್ಲಿ ಏನೊಂದೂ ನ್ಯೂನತೆಯಿಲ್ಲದೆ ಪರಿಪೂರ್ಣಕಾಮನಾದ, **ಎಲ್ಲಾಂತರುಮ್**-ಚತುರ್ವಿಧ ಪುರುಷಾರ್ಥಗಳನ್ನೂ ಉದಾರವಾಗಿ ದಯಪಾಲಿಸುವ, **"ಭೌಮಂ ಮನೋರಥಂ ಸ್ವರ್ಗ್ಯಂ ಸ್ವರ್ಗಿವನ್ದ್ಯಂ ಚ ಯತ್ಪರಮ್ । ದದಾತಿ ಧ್ಯಾಯಿನಾಂ ನಿತ್ಯಮಪವರ್ಗಪ್ರದೋ ಹರಿಃ"** ಎಂದೂ, **"ಸಕಲ ಫಲಪ್ರದೋಹಿ ವಿಷ್ಣುಃ"** ಎಂದೂ, **"ವಿದಧಾತಿಕಾಮಾನ್"** ಎಂದೂ, **"ತಸ್ಮಿನ್ ಪ್ರಸನ್ನೇಕಿಮಿಹಾಸ್ತ್ಯಲಭ್ಯಂ ಧರ್ಮಾರ್ಥಕಾಮೈರಲಮಲ್ಪಕಾಸ್ತೇ । ಸಮಾಶ್ರಿತಾತ್ ಬ್ರಹ್ಮತರೋರನಂತಾನ್ನಿಸ್ಸಂಶಯೋ ಮುಕ್ತಿಫಲಪ್ರಪಾತಃ"** ಎಂದೂ ಹೇಳಿರುವ ಹಾಗೆ ಉದಾರನಾಗಿ ಕೊಡುವ ಎಂಬರ್ಥವು; **ಕೋತು ಇಲ್**-ಕೊಡುವದರಲ್ಲಿ ಏನೊಂದೂ ದೋಷವಿಲ್ಲದ ಎಂದರೆ ತಾರತಮ್ಯವಿಲ್ಲದೆ ತನಗೆ ಸಮವಾದ ಆನಂದವನ್ನು ಕೊಡುವ ಮತ್ತು ಏನೊಂದು ಪ್ರತ್ಯುಪಕಾರವನ್ನಾಗಲಿ ಅಪೇಕ್ಷಿಸದೇ ಕೊಡುವ, **ಎನ್ವಳ್ಳಲ್** - ನನಗೂ ಮಹೋದಾರನಾದ, **ಮಣಿವಣ್ಣನ್‌ತನ್ನೈ**-ನೀಲಮಣಿಯ ಹಾಗೆ ಶ್ಲಾಘ್ಯವಾದ ಅವಯವಶೋಭೆಯುಳ್ಳ ಭಗವಂತನನ್ನು, **ಕವಿಶೊಲ್ಲವಮ್ಮಿನ್** - ಕವಿಗಳೇ ಸ್ತೋತ್ರಮಾಡೋಣ ಬನ್ನಿ." **ಎನ್ನುಮ್ಪಡಿ** - ಎಂದು ಹೇಳಿರುವಹಾಗೆ, **ನಿರ್ಕ್ಕೈಯಾಲುಮ್** - ಸಕಲ ಪುರುಷಾರ್ಥಗಳನ್ನೂ ಅನುಗ್ರಹಿಸುವ ಶೀಲವುಳ್ಳ ಪರಮೋದಾರನಾಗಿ ಇರುವದರಿಂದ, **ಇಜ್ಙು** - ಈ ಶರಣಾಗತಿಯನ್ನು ಅನುಷ್ಠಿಸುವ ಸಂದರ್ಭದಲ್ಲಿ, **ಎನ್ನಫಲತ್ತುಕ್ಕಾಗ**-ಯಾವ

**ನಾನ ಶರಣ್ಯನುಕ್ಕುಮ್, ಸರ್ವೋತ್ಕೃಷ್ಟ ವಿಷಯಮಾನ ಇವ್ವಶೀಕರಣ ವಿಶೇಷತ್ತುಕ್ಕುಮ್, ಶೇಷತ್ವೈಕರಸನಾನ ತನ್ ಸ್ವರೂಪತ್ತುಕ್ಕುಮ್ ಅನು ರೂಪಮಾನ ಫಲವಿಶೇಷತ್ತೈ ಉತ್ತರಖಂಡಮ್, (೪) "ತನಕ್ಕೇಯಾಗವೆನ್ನೈಕ್ಕೊಳ್ಳುಮೀದೇ" ಎಙ್ಗಿರಪಡಿಯೇ, ಸಮಸ್ತವಿರೋಧಿ ನಿವೃತ್ತಿ ಪರ್ಯನ್ತ**

ಫಲಕ್ಕಾಗಿ, **ಪ್ರಪತ್ತಿ ಪಣ್ಣುಗಿರದು** - ಭರನ್ಯಾಸವನ್ನು ಅನುಷ್ಠಿಸುವದು, **ಎಙ್ಗಿರ ಅಪೇಕ್ಷೈಯಿಲೇ** - ಎನ್ನುವ ಅಪೇಕ್ಷೆಯಲ್ಲಿ, **ಮಹೋದಾರನಾನ ಶರಣ್ಯನುಕ್ಕುಮ್** - ಪರಮೋದಾರನಾಗಿರುವ ಸರ್ವರಕ್ಷಕನಿಗೂ **ಸರ್ವೋತ್ಕೃಷ್ಟ ವಿಷಯಮಾನ ಇವ್ವಶೀಕರಣ ವಿಶೇಷತ್ತುಕ್ಕುಮ್** - **"ತಸ್ಯ ಚ ವಶೀಕರಣಂ ತಚ್ಛರಣಾಗತಿರೇವ"** ಎಂದು ಶ್ರೀ ಯತಿವರ್ಯರು ಹೇಳಲ್ಪಟ್ಟಹಾಗೆ, ಸರ್ವೋತ್ಕೃಷ್ಟ ವಿಷಯವಾದ ಭಗವಂತನನ್ನು ತನ್ನ ವಶಮಾಡಿಕೊಳ್ಳುವ ಉಪಾಯ ವಿಷಯವಾದ ಶರಣಾಗತಿಗೂ, **ಶೇಷತ್ವೈಕರಸನಾನ** - ಭಗವಂತನಿಗೆ ದಾಸಭೂತನಾಗಿರುವದೇ ಪರಮಾನಂದವೆಂದು ಭಾವಿಸಿರುವ; **ತನ್ ಸ್ವರೂಪತ್ತುಕ್ಕುಮ್** - ಪ್ರಣವದಲ್ಲಿ ತೋರಿಬರುವ ತಾನು ಶ್ರಿಯಃಪತಿಗೆ ಶೇಷಭೂತನೆಂಬ ಸ್ವರೂಪಕ್ಕೂ, **ಅನುರೂಪಮಾನ ಫಲವಿಶೇಷತ್ತೈ** - ಉಚಿತವಾದ ಫಲವಿಶೇಷವನ್ನು, ದೇಹಾವಸಾನಾನಂತರ ಪ್ರಾಪ್ತವಾಗುವ, ಈ ಭರನ್ಯಾಸದಿಂದುಂಟಾಗುವ ಫಲವು ಯಾವುದೆಂದರೆ ಅನಿಷ್ಟ ನಿವೃತ್ತಿ ಪೂರ್ವಕವಾದ ಇಷ್ಟಪ್ರಾಪ್ತಿಯು; ಸರ್ವಪಾಪವಿಮೋಚನೆಯು, ಇದಕ್ಕೆ ಕಾರಣವಾಗಿದ್ದ ಹೇಯ ಪ್ರಾಕೃತ ಶರೀರದಿಂದ ವಿಮೋಚನವು, ಪರಿಪೂರ್ಣ ಬ್ರಹ್ಮಾನುಭವದೊಂದಿಗೆ ಇಂತಹ ಪರಮೋಪಕಾರನಾಗಿ ಪರಮೋದಾರನಿಗೆ ಮಾಡುವ ನಿತ್ಯ ಕೈಂಕರ್ಯವು; ಈ ನಿರತಿಶಯಫಲವು ಮೂರಕ್ಕೂ ಉಚಿತವಾದುದು ಎಂದು ಹೇಳಲ್ಪಟ್ಟಿತು.—(೧) ಮಹೋದಾರನಾದ ಸರ್ವಶರಣ್ಯನಿಗೂ ಉಚಿತವಾದುದು; (೨) ಈ ಸರ್ವೋತ್ಕೃಷ್ಟವಾಗಿ **"ನ್ಯಾಸಂ ತಪಸಾಂ ಅತಿರಿಕ್ತಮಾಹುಃ"** ಎಂದು ಶ್ಲಾಘಿಸಲ್ಪಟ್ಟ ಶರಣಾಗತಿಗೂ ಉಚಿತವಾದುದು. (೩) **"ದಾಸಭೂತಾಸ್ಸ್ವತಸ್ಸರ್ವೇ ಹ್ಯಾತ್ಮಾನಃ ಪರಮಾತ್ಮನಃ"** ಎಂಬಲ್ಲಿ ಹೇಳಿರುವಹಾಗೆ ಪರಮಾತ್ಮನಿಗೆ ಶೇಷಭೂತನೆಂದು ಆನಂದಿಸುವ ತನ್ನ ಸ್ವರೂಪಕ್ಕೂ ಉಚಿತವಾದುದು; ಇಂತಹ ಫಲವಿಶೇಷವನ್ನು ದ್ವಯದ ಉತ್ತರಖಂಡವು ಪ್ರಾರ್ಥಿಸುತ್ತದೆ ಎಂದು ಮುಂದೆ ಆಳ್ವಾರ್ ದಿವ್ಯಸೂಕ್ತಿಸಮರ್ಥನೆಯೊಂದಿಗೆ ತಿಳಿಸುತ್ತಾರೆ.-ಹೀಗೆ **ಉತ್ತರಖಂಡಮ್** - ದ್ವಯದ ಉತ್ತರಖಂಡವು **"ತನಕ್ಕೇಯಾಗವೆನ್ನೈಕ್ಕೊಳ್ಳುಮೀದೇ"** ಸರ್ವಶೇಷಿಯಾದ ತನಗೇನೇ, ಪರತಂತ್ರನಾಗಿ ಶೇಷಭೂತನಾಗಿ ನಿತ್ಯ ಕೈಂಕರ್ಯವನ್ನು ಎಸಗಲು ಅರ್ಹನೆಂದು ಅಙ್ಗೀಕರಿಸುವದೇ ತನಗೆ ಪರಮ ಪ್ರಯೋಜನವು **ಎಙ್ಗಿರಪಡಿಯೇ** - ಎಂದು ಹೇಳಿರುವಹಾಗೆ, **ಸಮಸ್ತವಿರೋಧಿ ನಿವೃತ್ತಿ**

---

(೪) ತಿರು. ೨. ೯. ೪.

**ಮಾಗ ಪ್ರಾರ್ಥಿಕ್ಕಿರದು. ಇತ್ತಾಲೇ ಅನನ್ಯಪ್ರಯೋಜನತ್ವಮುಮ್ ಸಿದ್ಧಿಕ್ಕಿರದು.**

---

**ಪರ್ಯನ್ತಮಾಗ**-ಸಮಸ್ತ ವಿರೋಧಿಗಳಾದ ಪ್ರಕೃತಿಸಂಬಂಧ, ಪಾಪಪುಣ್ಯರೂಪ ಕರ್ಮಗಳು ಅವುಗಳಿಂದುಂಟಾಗುವ ವಾಸನಾ ಮೊದಲಾದ ಸಮಸ್ತ ವಿರೋಧಿ ವರ್ಗದ ಪರ್ಯಂತವಾಗಿ, ಎಂದರೆ ಅನಿಷ್ಟನಿವೃತ್ತಿ ಪೂರ್ವಕವಾಗಿ **ಪ್ರಾರ್ಥಿಕ್ಕಿರದು** - ಪ್ರಾರ್ಥಿಸುತ್ತದೆ. ಉತ್ತರಖಂಡದಲ್ಲಿ ಹೇಳಿರುವದು ಅನಿಷ್ಟನಿವೃತ್ತಿ ಪೂರ್ವಕವಾದಇಷ್ಟಪ್ರಾಪ್ತಿಯು. ಅದು ಯಾವುದೆಂದರೆ ದಾಸಭೂತನಾಗಿರುವದೇ ತನಗೆ ಸ್ವರೂಪವಾದುದರಿಂದ ಆತನಿಗೆ ಕೈಙ್ಕರ್ಯವನ್ನು ಮಾಡುತ್ತಾ ತದೇಕ ಪ್ರಯೋಜನನಾಗಿರುವದೇ ಎಂಬ ಭಾವವು. ಈ **"ತೆನಕ್ಕೇಯಾಗ"** ಎಂಬ ಪಾಶುರವು ಹಿಂದೆಯೇ ಉತ್ತರ ಕೃತ್ಯಾಧಿಕಾರದಲ್ಲಿ ಉದಾಹೃತವು ೧೨೩೭ನೆಯ ಪುಟವನ್ನು ನೋಡಿ. ಪುನಃ ಸಾಧ್ಯೋಪಾಯಶೋಧನಾಧಿಕಾರದಲ್ಲೂ ಉದಾಹೃತವು. ೨೪೩೪ನೆಯ ಪುಟವನ್ನು ನೋಡಿ. ಈ ಪಾಶುರಾರ್ಥವೇ ಶ್ರೀಮದ್ರಾಮಾಯಣದಲ್ಲಿ ಲಕ್ಷ್ಮಣೋಕ್ತಿಯಿಂದಲೂ ವ್ಯಕ್ತವು-ಪ್ರಕರಣವೇನೆಂದರೆ- ಪಂಚವಟಿಯಲ್ಲಿ ಸ್ವಾಮಿ ಶ್ರೀರಾಮಚಂದ್ರ ಪ್ರಭುವಿಗೆ ಕೆಲವುಕಾಲ ವಸಿಸಬೇಕೆಂಬ ಅಭಿಪ್ರಾಯದಿಂದ ಲಕ್ಷ್ಮಣನನ್ನು ಕುರಿತು **"ವನರಾಮಣ್ಯಕಂ ಯತ್ರ ಸ್ಥಲರಾಮಣ್ಯಕಂ ತಥಾ। ಸನ್ನಿಕೃಷ್ಟಂ ಚ ಯತ್ರ ಸ್ಯಾತ್ ಸಮಿತ್ಪುಷ್ಪಕುಶೋದಕಮ್"** ಪುಷ್ಪಫಲಗಳ ಸಮೃದ್ಧಿಯುಳ್ಳ ಮತ್ತು ಸ್ಥಲರಮಣೀಯತೆಯುಳ್ಳ ಮತ್ತು ನಿನಗೆ ಸಮಿತ್ತು ಪುಷ್ಪ, ದರ್ಭೆ, ಜಲ ಇವುಗಳಿಗೆ ಹತ್ತಿರವಾಗಿ ಅನುಕೂಲ ವಾಗಿರುವ ಪ್ರದೇಶದಲ್ಲಿ ಆಶ್ರಮವನ್ನು ನಿರ್ಮಾಣಮಾಡು ಎಂದು ಆಜ್ಞಾಪಿಸಿದರು. ಇದಕ್ಕೆ ಶೇಷತ್ವ ಸ್ವರೂಪ ಜ್ಞಾನವುಳ್ಳ ಲಕ್ಷ್ಮಣನು ಪ್ರತ್ಯುತ್ತರವನ್ನು ಹೇಳುತ್ತಾನೇನೆಂದರೆ, **ಸೀತಾಸಮಕ್ಷಂ ಕಾಕುತ್ಸ್ಥಮಿದಂ ವಚನಮಬ್ರವೀತ್। ಪರವಾನಸ್ಮಿ ಕಾಕುತ್ಸ್ಥ ತ್ವಯಿ ವರ್ಷಶತಂ ಸ್ಥಿತೇ। ಸ್ವಯಂತು ರುಚಿರೇದೇಶೇ ಕ್ರಿಯತಾಮಿತಿ ಮಾಂ ವದ"** ಸೀತೆಯನ್ನು ಮುಂದಿಟ್ಟುಕೊಂಡು ಉತ್ತರವನ್ನು ರಾಮವಾಕ್ಯವನ್ನು ಸಹಿಸದೆ ಹೇಳುತ್ತಾನೆ. ತಾನಿರುವದು ತನ್ನ ಸೌಖ್ಯಕ್ಕಾಗಿಯಲ್ಲವು. ಪರತತ್ವವಾದ ನಿನಗೆ ಸಹಜ ದಾಸಭೂತನಾಗಿರುವದರಿಂದ, ನಿನ್ನ ಮತ್ತು ಸೀತೆಯ ಕೈಂಕರ್ಯ ಮತ್ತು ಪ್ರಯೋಜನಕ್ಕಾಗಿಯೇ ನಾನಿರುವದರಿಂದ, **"ಪರವಾನಸ್ಮಿ ಕಾಕುತ್ಸ್ಥ"**-ಓ ಶ್ರೀರಾಮಚಂದ್ರನೇ ನಿನಗೆ ಪರತಂತ್ರನಾಗಿ ನಿನ್ನ ಪ್ರಯೋಜನಕ್ಕಾಗಿರುವದೇ ನನಗೆ ಸ್ವರೂಪವು. ಈ ಪಾರತಂತ್ರ್ಯವು ಎಲ್ಲಿಯವರೆಗೆ ಇರತಕ್ಕದ್ದು ಎಂದು ಕೇಳುತ್ತೀಯೋ? **"ತ್ವಯಿ ವರ್ಷಶತಂ ಸ್ಥಿತೇ"** ಅನೇಕ ಕಾಲ ನೀನಿರುವತನಕ ಎಂದರೆ ನಿರುಪಾಧಿಕವಾಗಿ ಸದಾ ಇರತಕ್ಕದ್ದು. ನನ್ನ ಪ್ರಯೋಜನಕ್ಕಾಗಿ ಸುತರಾಂ ಅಲ್ಲವು. ಆದುದರಿಂದ ನಿನಗೂ ಸೀತೆಗೂ ಯಾವ

## ಉತ್ತರಖಂಡಸ್ಥ ನಾರಾಯಣಶಬ್ದಾರ್ಥಃ

**ಇವ್ವಿಡತ್ತಿಲೆ ಸವಿಶೇಷಣಮಾನ ನಾರಾಯಣ ಶಬ್ದಮ್, ಪ್ರಾಪ್ಯ** ಪ್ರದೇಶವು ರಮಣೀಯವೋ ಅನುಕೂಲವೋ ಅಂತಹ ಸ್ಥಳವನ್ನು ತೋರಿ ಆಶ್ರಮವನ್ನು ರಚಿಸು ಎಂದು ಆಜ್ಞಾಪಿಸು ಎಂದು ಪ್ರಾರ್ಥಿಸುತ್ತಾನೆ.-**"ಸ್ವಯಂತು ರುಚಿರೇದೇಶೇ ಕ್ರಿಯತಾಂ ಇತಿ ಮಾಂ ವದ"** - ಶ್ರೀರಾಮಚಂದ್ರಪ್ರಭುವು **"ಸುಪ್ರೀತಸ್ತೇನ ವಾಕ್ಯೇನ"** ತನ್ನ ಶೇಷತ್ವ ಸ್ವರೂಪವನ್ನು ಪ್ರಕಟಿಸಿದನೇ ಎಂದು ಆತನ ಮಾತಿನಿಂದ, ಹರ್ಷಿತನಾಗಿ, ಸರ್ವಗುಣಾನ್ವಿತವಾದ ಮನೋಹರ ವಾದ ಪ್ರದೇಶವನ್ನು ತೋರಿಸಿದರೆಂದು ಮುಂದೆ ಇರುತ್ತದೆ. ಶ್ರಿಯಃಪತಿಗೆ ದಿವ್ಯ ವೈಕುಂಠದಲ್ಲಿ ಸದಾ ಕೈಂಕರ್ಯಮಾಡುವದೇ ನಿರತಿಶಯ ಫಲವೆಂಬ ಭಾವವನ್ನು ಈ ಮೇಲಿನ ಇತಿಹಾಸವು ಅಮೋಘವಾಗಿ ಪ್ರದರ್ಶಿಸುತ್ತದೆ. ಹಾಗೆಯೇ ಈ ತತ್ವವನ್ನು ಚನ್ನಾಗಿ ತಿಳಿದ ಲಕ್ಷ್ಮಣನು ಅಯೋಧ್ಯೆಯಲ್ಲಿ ಯುವರಾಜನಾಗಿ ತನಗೆ ಸಮಾನ ಸುಖಗಳನ್ನನುಭವಿಸುವವನಾಗಿ ತನಗೆ ಸಮನಾಗಿ ರಾಜ್ಯವನ್ನು ಪರಿಪಾಲಿಸು ಎಂದು ಎಷ್ಟು ದೂರ ರಾಮಚಂದ್ರಪ್ರಭುವು ಬಲಾತ್ಕರಿಸಿದರೂ, ಸರ್ವಾತ್ಮನಾ ಒಪ್ಪಲಿಲ್ಲವೆಂದೂ ಹೇಳಲ್ಪಟ್ಟಿರುತ್ತದೆ. ಯೌವರಾಜ್ಯ ಭೋಗಕ್ಕೂ ಈ ಕೈಂಕರ್ಯರೂಪ ಬ್ರಹ್ಮಾನಂದಕ್ಕೂ ಅಜಗಜನ್ಯಾಯಃವೆಂಬ ಭಾವವು. ಇದ ರಿಂದಲೇ ಅನನ್ಯ ಪ್ರಯೋಜನತ್ವವೂ ಸಿದ್ಧವೆಂದು ಹೇಳಿದರು. ಇದಕ್ಕಿಂತ ಹೆಚ್ಚಾದ ಪ್ರಯೋಜನವೇ ಇಲ್ಲವು. ಈಶ್ವರನ ಪ್ರಯೋಜನಕ್ಕಾಗಿರುವದೇ ಪ್ರಯೋಜನವೇ ವಿನಾ ಬೇರೆ ಪ್ರಯೋಜನವೇ ಇಲ್ಲವೆಂಬ ಭಾವವು.

### ಉತ್ತರಖಂಡದಲ್ಲಿರುವ ನಾರಾಯಣ ಶಬ್ದಾರ್ಥವು

ಉತ್ತರಖಂಡದಲ್ಲಿರುವ **ಶ್ರೀಮತೇ ನಾರಾಯಣಾಯ** ಎಂಬ ಸವಿಶೇಷಣ ನಾರಾಯಣಶಬ್ದದಲ್ಲಿ ಅನುಸಂಧಾನಮಾಡತಕ್ಕದ್ದೇನೆಂದರೆ ಹೇಳುತ್ತಾರೆ. ಪೂರ್ವ ಖಂಡದಲ್ಲೂ **ಶ್ರೀಮನ್ನಾರಾಯಣಚರಣೌ** ಎಂಬಲ್ಲಿ ಈ ಎರಡು ಪದಗಳ ಅರ್ಥ ವಿವರಣವಾಯಿತಲ್ಲಾ, ಇಲ್ಲಿ ಪುನಃ ಅರ್ಥವಿವರಣೆ ಏತಕ್ಕೆ ? ಇಲ್ಲಿನ ಅರ್ಥಗಳು ಬೇರೆಯೇ ? ಎಂದರೆ ಹೊಸ ಅರ್ಥಗಳು ಯಾವುವೂ ಅಲ್ಲವು ಆ ಎರಡು ಪದ ಗಳಲ್ಲಿ ತೋರಿಬರುವ ಅರ್ಥಗಳಲ್ಲಿ ಪ್ರಾಪ್ಯದೆಶೆಯಲ್ಲಿ ಅನುಸಂಧಾನಾರ್ಹಭಾವಗಳು ಯಾವುವು ಎಂಬುದನ್ನು ಉಪದೇಶಿಸುತ್ತಾರೆ. **ಇವ್ವಿಡತ್ತಿಲ್** - ಈ ದ್ವಯದ ಉತ್ತರಖಂಡದಲ್ಲಿ ಪ್ರಾಪ್ಯವನ್ನು ಕುರಿತು ಹೇಳುವ ಸಂದರ್ಭದಲ್ಲಿ ಎಂಬ ಭಾವವು, **ಸವಿಶೇಷಣಮಾನ ನಾರಾಯಣ ಶಬ್ದಮ್**-ಶ್ರುತಿಯು **"ಹ್ರೀಶ್ಚತೇ ಲಕ್ಷ್ಮೀಶ್ಚ ಪತ್ನ್ಯೌ"** ಎಂದೂ **"ಸ್ವಧಯಾ ತದೇಕಮ್"** ಎಂದೂ ಹೇಳಿರುವ ಹಾಗೆ, **ಶ್ರೀಮತೇ ನಾರಾಯಣಾಯ** ಎಂದಿರುವದರಿಂದ, ಶ್ರೀಮಚ್ಛಬ್ದದಿಂದ ಕೂಡಿದ

**ತ್ತೈಕ್ಕು ಅನುರೂಪಮಾನ ಸ್ವಾಮಿತ್ವಾದಿಗಳೈಯುಮ್, ಅನಂತಗುಣ ವಿಭೂತಿ ವಿಶಿಷ್ಟನಾನ ಸ್ವಾಮಿನುಡೈಯ ಸರ್ವಪ್ರಕಾರ ನಿರತಿಶಯ ಭೋಗ್ಯ ತೈಯುಂ ಮಾಗಿರ ಆಕಾರಙ್ಗಳೈ ಯಥಾಪ್ರಮಾಣಮ್ ಪ್ರಾಧಾನ್ಯೇನ ಕಾಟ್ಟುಗಿರದು. ಇಪ್ಪಡಿ ಉಭಯ ವಿಭೂತಿ ವಿಶಿಷ್ಟಮ್ ಪ್ರಾಪ್ಯಮಾಯಿ**

ನಾರಾಯಣ ಶಬ್ದವು, **ಪ್ರಾಪ್ಯತ್ತುಕ್ಕು ಅನುರೂಪಮಾನ**-ಪ್ರಾಪ್ಯನಾಗಿರುವ ವಕ್ಕೆ ಅನುರೂಪವಾದ, **ಸ್ವಾಮಿತ್ವಾದಿಗಳುಮ್** - ಸರ್ವಶೇಷಿಯಾಗಿ, **"ಪತಿಂ ವಿಶ್ವಸ್ಯ"** ಎಂಬಲ್ಲಿ ಹೇಳಿರುವಹಾಗೆ ಇರುವ ಸ್ವಾಮಿತ್ವ ಲಕ್ಷ್ಮೀಪತಿತ್ವ ಸರ್ವಾನಂದ ಜನಕತ್ವ, ಲಾವಣ್ಯತ್ವಾದಿಗಳು ಆದಿಪದದಿಂದ ಸೂಚಿತವು, ಇದು **"ನಾರಾಣಾಂ ಅಯನಮ್"** ಎಂಬ ಷಷ್ಠೀ ತತ್ಪುರುಷದಿಂದ ತೋರಿಬರುವ ಪ್ರಾಪ್ಯನು, ಪ್ರಾಪಕನು, ಗತಿಯು ಎಂಬುದರಿಂದ ತೋರಿಬರುವ ಅರ್ಥವು, **ಅನನ್ತಗುಣ ವಿಭೂತಿವಿಶಿಷ್ಟನಾನ ಸ್ವಾಮಿಯುಡೈಯ**-ನಿರವಧಿಕ ನಿರತಿಶಯ ಕಲ್ಯಾಣಗುಣ ಗಳ ಮತ್ತು ಎರಡು ವಿಭೂತಿಗಳಿಂದ ಕೂಡಿದ ಸ್ವಾಮಿಯ, ಇದು **ನಾರ** ಶಬ್ದ ದಿಂದ ತೋರಿಬರುವದರಿಂದ ಇವುಗಳ ಯೋಗವು ಇಲ್ಲಿ ಹೇಳಲ್ಪಟ್ಟಿತು, ಇದು ಪರಿಪೂರ್ಣ ಬ್ರಹ್ಮಾನುಭವವನ್ನು ಕೊಡುವದರ ಮೂಲಕ ಪ್ರಾಪ್ಯದೆಶೆಯಲ್ಲಿ ಪರಮಭೋಗ್ಯತ್ವವನ್ನು ಸೂಚಿಸುತ್ತದೆ; **ಸರ್ವಪ್ರಕಾರ ನಿರತಿಶಯಭೋಗ್ಯ ತೆಯುಮಾಗಿರ**-ಈ ಸಮಸ್ತ ವಿಶೇಷಣಗಳ ಮೂಲಕ ನಿರತಿಶಯವಾದ ಭೋ ಗ್ಯತೆಯಾಗಿರುವ, **ಆಕಾರಂಗಳೈ** - ಸ್ವರೂಪ ಸ್ವಭಾವಗಳನ್ನು, **ಯಥಾಪ್ರಮಾ ಣಮ್**-ಶ್ರುತಿ ಸ್ಮೃತಿ ಇತಿಹಾಸ ಆಳ್ವಾರಾಚಾರ್ಯಸೂಕ್ತಿಗಳಿಗನುಗುಣವಾಗಿ, **ಪ್ರಾಧಾನ್ಯೇನ** - ಮುಖ್ಯವಾಗಿ, **ಕಾಟ್ಟುಗಿರದು**-ಪ್ರದರ್ಶಿಸುತ್ತದೆ. ಪ್ರಾಪ್ಯದೆಶೆ ಯಲ್ಲಿನ ಶ್ರೀ ವಾಸುದೇವಮೂರ್ತಿಯ ಸಮಸ್ತ ಆಕಾರಗಳ ಅನುಸಂಧಾನಕ್ಕಾಗಿ ಇಲ್ಲಿ ಉತ್ತರಖಂಡದಲ್ಲೂ ಪುನಃ ಈ ಶಬ್ದಗಳು ಪ್ರಯೋಗಿಸಲ್ಪಟ್ಟಿವೆ. ಆದುದ ರಿಂದ ಪುನರುಕ್ತಿದೋಷವೂ ಇಲ್ಲವು. ಈ ಪದಗಳಿಂದ ಪ್ರಾಪ್ಯದೆಶೆಯಲ್ಲಿ ಹೇಗೆ ಇರುವನೆಂಬ ಸಮಸ್ತಗಳಾದ ಆಕಾರಗಳನ್ನೂ ಗ್ರಹಿಸತಕ್ಕದ್ದೆಂಬ ಭಾವವು. ಆತನು ಸರ್ವರಕ್ಕೂ ಸ್ವಾಮಿಯು, ಕಲ್ಯಾಣಗುಣಮಹೋದಧಿಯು, ಬಹು ಉದಾ ರನು, ಪರಿಪೂರ್ಣಕೃಪಾವಿಶಿಷ್ಟನು, ತನ್ನ ನಿತ್ಯಾನಪಾಯನಿಯಾದ ಲಕ್ಷ್ಮಿಯೊಂದಿಗೆ ಅತ್ಯಂತ ಲಾವಣ್ಯಯುಕ್ತವಾದ ದಿವ್ಯಮಂಗಳವಿಗ್ರಹಯುಕ್ತನು, ವಿಚಿತ್ರದ್ವ್ಯು ತೋಭಯವಿಭೂತಿನಾಯಕನು, ಹೀಗೆ ಪರಿಪೂರ್ಣನು. ಹೀಗೆ ಪರಮಭೋಗ್ಯನು ಎಂಬೀ ಆಕಾರಗಳನ್ನು ಸೂಚಿಸುತ್ತದೆ. ಈ ಅಭಿಪ್ರಾಯಗಳೆಲ್ಲಾ ಹಿಂದೆಯೇ ಶ್ರುತಿ ಸ್ಮೃತ್ಯಾದಿ ಆಳ್ವಾರಾಚಾರ್ಯ ದಿವ್ಯಸೂಕ್ತಿ ಪ್ರಮಾಣಗಳೊಂದಿಗೆ ಪ್ರಾಪ್ಯ ಸ್ಥಳಗಳಲ್ಲಿ ಉಪಪಾದಿತವಾದುದರಿಂದ **ಯಥಾಪ್ರಮಾಣಂ** ಎಂಬ ಪ್ರಯೋ ಗವು. ಈ ಪ್ರಮಾಣಗಳಿಗೆ ಮುಖ್ಯವಾಗಿ ಅರ್ಥಪಂಚಕಾಧಿಕಾರದಲ್ಲಿ ಪ್ರಾಪ್ಯ

**ರುಕ್ಕ ಚೆಯ್‌ದೇಯುಮ್, ಆತ್ಮಹವಿರುದ್ದೇಶ್ಯರುಮಾಯ್, ಶೇಷತ್ವ ಪ್ರತಿಸಂಬಂಧಿಗಳುಮಾಯ್, ಅದಡಿಯಾಗವರುಗಿರ ಕೈಙ್ಕರ್ಯತ್ತುಕ್ಕುಮ್ ಇಲಕ್ಕಾಯ್‌ಕೊಂಡು ಪ್ರಧಾನ ಪ್ರಾಪ್ಯರಾಯಿರುಪ್ಪಾರ್ ಇವ್ವಿಶಿಷ್ಟ ದಂಪತಿ**

---

ವನ್ನು **ಬೋಧಿಸುವ** ಪ್ರಕರಣವನ್ನು ಪರಾಂಬರಿಸಬಹುದು. (೩೩೫ ನೆಯ ಪುಟದಿಂದ ೩೭೪ನೆಯ **ಪುಟ**ಗಳವರೆಗೂ ಪ್ರಮಾಣಗಳು ಉದಾಹರಿಸಲ್ಪಟ್ಟಿವೆ.) ಸರ್ವಾಧಿ**ಕಾರಿಗಳಿಗೂ** ಹೇಳಲ್ಪಟ್ಟವಾದುದರಿಂದ ಕೌಷೀತಕೀಯಲ್ಲಿ ಹೇಳಿರುವ ವಾಕ್ಯಗಳಲ್ಲವು. ಅವುಗಳಿಗೆ ಶ್ರೀ ಯತಿವರ್ಯರ ವೈಕುಂಠಗದ್ಯವೇ ಭಾಷ್ಯವನ್ನಾಗಿ ಭಾವಿಸಬಹುದು.

ಆಗಲಿ **ನಾರ** ಶಬ್ದದಿಂದಲೇ ಲಕ್ಷ್ಮೀವಿಶಿಷ್ಟತೆಯು ತೋರಿಬರುವಾಗ **ಶ್ರೀಮತೇ** ಎಂಬ ವಿಶೇಷಣವು **ಕೀಚಕೈರ್ಮಾರುತಪೂರ್ಣರಂಧ್ರೈಃ** ಎಂಬಲ್ಲಿ **ತೋ**ರಿಬರುವ ಹಾಗೆ ಅನಾವಶ್ಯಕವಲ್ಲವೋ ಎಂದರೆ, ಅಲ್ಲವೆಂದು ಉಪಪಾದಿಸುತ್ತಾರೆ. ಪ್ರಾಪ್ಯದೆಶೆಯಲ್ಲೂ ಲಕ್ಷ್ಮೀ ಸಂಬಂಧವನ್ನು ಹೇಳುವದು ಆವಶ್ಯಕವು, ಏಕೆಂದರೆ—ಈ ಆತ್ಮಹವಿಸ್ಸಮರ್ಪಣೆಗೆ ಲೋಕದಂಪತಿಗಳಿಬ್ಬರೂ ಉದ್ದೇಶ್ಯರಾಗಿರುವದರಿಂದ, ಫಲದೆಶೆಯಲ್ಲಿ **ಈ**ತನಿಗೆ ಲಭಿಸುವ ಕೈಂಕರ್ಯಕ್ಕೆ ಇಬ್ಬರೂ ಉದ್ದೇಶ್ಯರೆಂಬ ಅನುಸಂಧಾನಕ್ಕಾಗಿಯೂ ಪರಿಪೂರ್ಣ ಬ್ರಹ್ಮಾನುಭವರೂಪ ಆನಂದವುಂಟಾಗುವದಕ್ಕೆ ಆಕೆಯ ಸಂಬಂಧವು ಅತ್ಯಾವಶ್ಯಕವೆಂದು ಸೂಚಿಸುವದಕ್ಕಾಗಿಯೂ ಹಾಗೆ ಪ್ರಯೋಗವೆಂದು ಉಪದೇಶಿಸುತ್ತಾರೆ. **ಇಪ್ಪಡಿ ಉಭಯ ವಿಭೂತಿ ವಿಶಿಷ್ಟಮ್**-ನಾರಾಯಣ ಶಬ್ದದಲ್ಲಿ ತೋರುತ್ತದೆಂದು ಮೇಲೆ ಉಪಪಾದಿಸಿದ ರೀತಿಯಲ್ಲಿ ಲೀಲಾವಿಭೂತಿ ನಿತ್ಯವಿಭೂತಿಗಳಿಂದ ಕೂಡಿದವನಾಗಿ, ಎಂದರೆ ಅವುಗಳಿಗೆಲ್ಲಾ ತಾನೇ ಆತ್ಮಾವಾಗಿ ಅವುಗಳನ್ನು ಶರೀರವಾಗಿ ಹೊಂದಿರುವ, **ಪ್ರಾಪ್ಯಮಾಯಿರುಕ್ಕಚೆಯ್‌ದೇಯುಮ್**-ಪ್ರಾಪ್ಯವಾಗಿ ಇದ್ದುಕೊಂಡೇ, **ಆತ್ಮಹವಿರುದ್ದೇಶ್ಯರುಮಾಯ್** - ಆತ್ಮನಿಕ್ಷೇಪರೂಪವಾಗಿ, ತನ್ನ ಆತ್ಮವನ್ನೇ ಹವಿಸ್ಸಾಗಿ ಸಮರ್ಪಿಸುವದಕ್ಕೆ ಉದ್ದೇಶ್ಯರಾಗಿಯೂ, **ಶೇಷತ್ವ ಪ್ರತಿಸಂಬಂಧಿಗಳುಮಾಯ್** - ಈ ಹವಿಸ್ಸಮರ್ಪಣೆಯನ್ನು ಮಾಡುವ ಅಧಿಕಾರಿಯು ಇಬ್ಬರಿಗೂ ಶೇಷಭೂತನಾಗಿರುವದರಿಂದ, ಶೇಷತ್ವಕ್ಕೆ ಸಂಬಂಧಿಸಿರುವ, ಮತ್ತು **ಅದಡಿಯಾಗವರುಗಿರ ಕೈಙ್ಕರ್ಯತ್ತುಕ್ಕುಮ್** - ಹೀಗೆ ಇಬ್ಬರಿಗೂ ದಾಸಭೂತನಾಗಿರುವದರ ಮೂಲಕವಾಗಿ ಪ್ರಾಪ್ತವಾದ ಕೈಙ್ಕರ್ಯಕ್ಕೂ ಸಹ, **ಇಲಕ್ಕಾಯ್‌ಕ್ಕೊಂಡು**-ಲಕ್ಷ್ಯವಾಗಿದ್ದುಕೊಂಡು, ಎಂದರೆ ಉದ್ದೇಶ್ಯವಾಗಿದ್ದುಕ್ಕೊಂಡು, **ಪ್ರಧಾನಪ್ರಾಪ್ಯರಾಯಿರುಪ್ಪಾರ್** - ಮುಖ್ಯರಾದ ಪ್ರಾಪ್ಯರಾಗಿರುವವರು, **ಇವ್ವಿಶಿಷ್ಟದಂಪತಿಗಳಿನ್ರು**-ಪ್ರಾಪ್ಯತ್ವಕ್ಕೆ ಉಪಯುಕ್ತವಾದ ಉಭಯ ವಿಭೂತಿಯಿಂದಲೂ, ಕಲ್ಯಾಣ ಗುಣಗಳಿಂದಲೂ ಯುಕ್ತರಾದ ಲೋಕದಂಪತಿಗಳೆಂದು **ತೋತ್ತುಗೈಕ್ಕಾಗ**-

**ಗಳೆನ್ನುತ್ತೋತ್ತುಗೈಕ್ಯಾಗ ಇಜ್ಞುಶ್ರೀಮಚ್ಛಬ್ದಮ್. ಇವ್ವರ್ಥಂ(೧)"ವೈಕುಂ**

ತೋರಿಸುವದಕ್ಕಾಗಿ, ಇಜ್ಞು **ಶ್ರೀಮಚ್ಛಬ್ದಮ್** - ಈ ಉತ್ತರಖಂಡದಲ್ಲಿರುವ **"ಶ್ರೀಮತೇ"** ಎಂಬ ಪದವು ಆದುದರಿಂದ ಅನುಪಯುಕ್ತ ಪ್ರಯೋಗವೆಂದು ಭಾವಿಸತಕ್ಕದ್ದಲ್ಲವು. ಇಬ್ಬರೂ **"ಅಸ್ಯಾ ಮಮ ಚ ಶೇಷಂ ಹಿ ವಿಭೂತಿರುಭಯಾತ್ಮಿಕಾ"** ಎಂಬ ಸಂಹಿತಾ ವಾಕ್ಯಾನುಸಾರ ಉಭಯವಿಭೂತಿವಿಶಿಷ್ಟರೇ. **"ಜಾಯಾಪತ್ಯೋರ್ನವಿಭಾಗೋ ವಿದ್ಯತೇ"** ಎಂಬಲ್ಲಿ ಹೇಳಿರುವ ನ್ಯಾಯವು ಈ ಲೋಕದಲ್ಲೂ ಉಂಟಷ್ಟೇ. ಇಬ್ಬರೂ ಕಲ್ಯಾಣಗುಣಮಹೋದಧಿಗಳೇ. ಇಬ್ಬರಿಗೂ ಈತನು **"ದ್ವಾಚ ಸದೈಕ ಶೇಷೀ"** ಎಂಬ ಸಂಹಿತಾ ವಾಕ್ಯಾನುಗುಣವಾಗಿಯೂ, **"ಉಭಯಾಧಿಷ್ಠಾನಂ ಚೈಕಶೇಷಿತ್ವಮ್"** ಎಂಬಲ್ಲಿ ಹೇಳಿರುವ ಹಾಗೂ ಶೇಷಭೂತನು. ಈ ಹವಿಸ್ಸಮರ್ಪಣೆಗೆ ಲೋಕದಂಪತಿಗಳಿಬ್ಬರೂ ಉದ್ದೇಶ್ಯರೇ. **"ವಸುರಣ್ಯೋ ವಿಭೂರಸಿ"** ಎಂದಾರಂಭಿಸಿ ಹೇಳಿರುವ ಈ ಆತ್ಮಹವಿಸ್ಸಮರ್ಪಣ ಮನ್ತ್ರದಲ್ಲಿ **"ಬ್ರಹ್ಮಣೇ ತ್ವಾಮಹಸ । ಓಮಿತ್ಯಾತ್ಮಾನಂ ಯುಂಜೀತ"** ಎಂಬ ಪ್ರಯೋಗವಿರುವದರಿಂದ ಬ್ರಹ್ಮಶಬ್ದವು **"ಬ್ರಹ್ಮವಿದಾಪ್ನೋತಿಪರಂ"** ಎಂಬಲ್ಲಿನ ಪ್ರಾಪ್ಯವಾದ ಪರರೂಪ ಲಕ್ಷ್ಮೀವಿಶಿಷ್ಟ ದಿವ್ಯಮಙ್ಗಳ ವಿಗ್ರಹವನ್ನು ಬೋಧಿಸುವದರಿಂದ **ಬ್ರಹ್ಮಣೇ** ಎಂಬಲ್ಲಿರುವ ಪ್ರಯೋಗವೂ ಲಕ್ಷ್ಮೀವಿಶಿಷ್ಟತೆಯನ್ನೇ ಬೋಧಿಸುತ್ತದೆಂದು ಗ್ರಹಿಸಬಹುದು. ಆದುದರಿಂದ ಪ್ರಾಪ್ಯದೆಶೆಯಲ್ಲಿರುವ ಲಕ್ಷ್ಮೀನಾರಾಯಣರಿಬ್ಬರೂ ಸಹ ಈತನು ಮಾಡುವ ಕೈಂಕರ್ಯಗಳಿಗೂ ಸಹ ಉದ್ದೇಶ್ಯರೆಂಬುದು ವ್ಯಕ್ತವು. ಈ ಅಭಿಪ್ರಾಯವು ಸ್ಫುಟವಾಗಿ ವ್ಯಕ್ತವಾಗುವದಕ್ಕಾಗಿ, **ಶ್ರೀಮತೇ ನಾರಾಯಣಾಯ** ಎಂಬ ಪ್ರಯೋಗವೆಂದು ಭಾವಿಸತಕ್ಕದ್ದು. ಇಬ್ಬರೂ ಆತ್ಮಸಮರ್ಪಣೆಗುದ್ದೇಶ್ಯರೆಂದೂ ಪ್ರಾಪ್ಯದಲ್ಲಿನ ಕೈಂಕರ್ಯಕ್ಕೂ ಇಬ್ಬರೂ ಉದ್ದೇಶ್ಯರೆಂದೂ ಹೇಳಿದುದರಿಂದ, ಈ ಪ್ರಾಪ್ಯದೆಶೆಯಲ್ಲಿ ನಾರಾಯಣನಿಗೆ ಲಕ್ಷ್ಮಿಯು ವಿಶೇಷಣವಾದರೆ ಉಪಾಯದೆಶೆಯಲ್ಲೂ ವಿಶೇಷಣವೇ ವಿನಾ, ಇತರರು ಹೇಳುವ ಉಪಾಯದೆಶೆಯಲ್ಲಿ ಉಪಲಕ್ಷಣವೆಂದೂ ಪ್ರಾಪ್ಯದೆಶೆಯಲ್ಲಿ ವಿಶೇಷಣವೆಂದೂ ಹೇಳುವದು ನ್ಯಾಯವಲ್ಲವೆಂಬ ಭಾವವೂ ಇಲ್ಲಿ ಎರಡನ್ನೂ ಒಟ್ಟಿಗೆ ಹೇಳಿರುವದರಿಂದ ಸೂಚಿತವು. ಇಲ್ಲಿ **ಪ್ರಧಾನ ಪ್ರಾಪ್ಯ**ರೆಂಬ ಪ್ರಯೋಗವೇತಕ್ಕೆಂದರೆ–ಪ್ರಧಾನವಾಗಿ ಉದ್ದೇಶ್ಯನು ನಾರಾಯಣನು; ಲಕ್ಷ್ಮಿಯು ಅಪ್ರಧಾನಳು ಎಂಬ ಭಾವವನ್ನು ವ್ಯಾವರ್ತಿಸುವದಕ್ಕಾಗಿ; ಇಬ್ಬರೂ ಉದ್ದೇಶ್ಯರಾಗಿ ಇಬ್ಬರೂ ಪ್ರಾಧಾನ್ಯರೇ ಎಂಬ ಭಾವವು. **"ವೈಕುಂಠೇತುಪರೇ ಲೋಕೇ ಶ್ರಿಯಾಸಾರ್ಧಂ ಜಗತ್ಪತಿಃ । ಆಸ್ತೇ"** ಇತ್ಯಾದ್ಯನೇಕ ದಿವ್ಯಸೂಕ್ತಿಗಳಲ್ಲಿ ಇದು ವ್ಯಕ್ತವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.—(೧) ಅರ್ಥವು ಸ್ಪಷ್ಟವು. **ಪರೇಲೋಕೇ**-ಸರ್ವೋತ್ಕೃಷ್ಟವಾಗಿ ಪರರೂಪದಲ್ಲಿರುವ ಲೋಕವಾದ,

**ತೇತುಪರೇಲೋಕೇ ಶ್ರಿಯಾಸಾರ್ಧಂ ಜಗತ್ಪತಿಃ" (೨) "ತಯಾ ಸಹಾಸೀನಮನನ್ತಭೋಗಿನಿ", (೩) "ಆತ್ಮಾನುರೂಪಯಾ ಶ್ರಿಯಾ ಸಹಾಸೀನಮ್" (೪) "ಒಣ್ದೊಡಿಯಾಳ್ ತಿರುಮುಗಳುಮ್ ನೀಯುಮೇನಿಲಾನಿರ್ಪ" (೫) "ಕೋಲತ್ತಿರುಮಾಮುಗಳೋಡುನ್ನೈ" ಇತ್ಯಾದಿಗಳಿಲುಂ**

**ವೈಕುಂಠೇತು**-ದಿವ್ಯ ವೈಕುಂಠಪಲ್ಲಿಯಾದರೋ, **ಜಗತ್ಪತಿಃ** - ಲೋಕಗಳಿಗೆಲ್ಲಾ ಸ್ವಾಮಿಯಾದವನು, **ಶ್ರಿಯಾಸಾರ್ಧಂ** - ಲಕ್ಷ್ಮಿಯೊಂದಿಗೆ, **ಆಸ್ತೇ** - ಇರುತ್ತಾನೆ. ಮುಂದಕ್ಕೆ **ಆಸ್ತೆ ಅಚಿನ್ತ್ಯಾತ್ಮಾ ಭಕ್ತೈರ್ಭಾಗವತೈಸ್ಸಹ** ಎಂದಿರುತ್ತದೆ. ನಿತ್ಯಮುಕ್ತರುಗಳಿಗೆ ಸೇವೆಯನ್ನೀಯುವನಾಗಿ, ಆತನ ದಿವ್ಯ ಮಙ್ಗಳ ವಿಗ್ರಹವು ನಿರತಿಶಯ ಮಾಹಾತ್ಮ್ಯಯುಳ್ಳದಾದುದರಿಂದ ಯೋಚಿಸಲುಕೂಡ ಅಸಾಧ್ಯವಾದ ರೂಪವುಳ್ಳವನಾಗಿದ್ದಾನೆಂದು ಹೇಳಲ್ಪಟ್ಟಿರುತ್ತದೆ. (೨) **"ತಯಾಸಹಾಸೀನಮನನ್ತಭೋಗಿನಿ"**-ಪರರೂಪದಲ್ಲಿ ಶೇಷಪರ್ಯಙ್ಕದಲ್ಲಿ ಲಕ್ಷ್ಮಿಯೊಂದಿಗಿರುವ ವಾಸುದೇವನನ್ನು; ಇದು ಹಿಂದೆಯೇ ಉದಾಹೃತವು. ೩೪೫ನೆಯ ಪುಟವನ್ನು ನೋಡಿ. (೩) **ಆತ್ಮಾನುರೂಪಯಾ** - ಸರ್ವೇಶ್ವರನಾದ ತನಗೆ ಅನುರೂಪಳಾದ, **ಶ್ರಿಯಾ ಸಹಾಸೀನಂ**-ಲಕ್ಷ್ಮಿಯೊಂದಿಗೆ ಕೂತಿರುವವನನ್ನು, ಪ್ರಾಪ್ಯದಶೆಯಲ್ಲಿರುವ ದಿವ್ಯ ಮಙ್ಗಳ ವಿಗ್ರಹವು ಹೇಳಲ್ಪಟ್ಟಿತು. (೪) ಇದು ಅನೇಕಸಲ ಉದಾಹೃತವು. ೧೪೯, ೩೪೬, ೭೪೩ ನೆಯ ಪುಟಗಳನ್ನು ನೋಡಿ. (೫) **"ಕೋಲತ್ತಿರುಮಾಮಗಳೋಡುನ್ನೈ"** ಇದು ಹಿಂದೆಯೇ ೩೪೬ನೆಯ ಪುಟದಲ್ಲಿ ಉದಾಹೃತವು. ಪೂರಾಪಾಶುರದ ಅರ್ಥವನ್ನು ಅಲ್ಲಿ ಹೇಳಲಿಲ್ಲವಾದುದರಿಂದ, ಇಲ್ಲಿ ತಿಳಿಸುವೆವು. **ಞಾಲತ್ತೋಡೇ ನಡನ್ದುನಿನ್ರು ಇಕ್ಕಿಡನ್ದಿರುನ್ದುಮ್ । ಶಾಲಪ್ಪಲನಾಳುಕನ್ದೋರುಯಿರ್‌ಗಳ್‌ಕಾಪ್ಪಾನೇ । ಕೋಲತ್ತಿರುಮಾಮಗಳೋಡುನ್ನೈ ಕೂಡಾದೇ । ಶಾಲಪ್ಪಲನಾಳಡಿಯೇ ನಿನ್ನನ್ತಳರ್ವೇನೋ"** ಎಂಬುದು ಪಾಶುರವು. ಇದರ ಅರ್ಥವು. ವಿಶ್ವರೂಪಾದಿಗಳಮೂಲಕ ಜಗದಾಕಾರವನ್ನು ತೋರಿದುದರಿಂದ ಅರ್ಜುನನು ಪ್ರೀತನಾಗದೆ ತನಗೆ, ಆತನಿಗೇನೇ ಅಸಾಧಾರಣವಾಗಿ ಯಾವಾಗಲೂ ಶಾಶ್ವತವಾಗಿ ಪರರೂಪವಾಗಿ ಲಕ್ಷ್ಮಿಯೊಂದಿಗೆ ತನಗೆ ಪ್ರಾಪ್ಯವಾಗಿರುವ ಪರವಾಸುದೇವರೂಪವನ್ನು ತೋರು ಎಂದು ಪುನಃ ಪ್ರಾರ್ಥಿಸಿಕಂಡನೋ, ಅಂತಹ ದಿವ್ಯಮಙ್ಗಳ ವಿಗ್ರಹವನ್ನು ಶೀಘ್ರವಾಗಿ ಹೊಂದದೆ ಎಷ್ಟುಕಾಲ ಹೀಗೆ ತೊಂದರೆ ಪಡತಕ್ಕದ್ದೋ ತಿಳಿಯದೇ ಎನ್ನುತ್ತಾರೆ. **ಉಗನ್ದೋರುಮ್**-**"ಸಂಭವಾಮಿ ಯುಗೇ ಯುಗೇ"** ಎಂದು ತಾನೇ ಹೇಳಿರುವಹಾಗೆ ಯುಗಯುಗದಲ್ಲೂ, ಸಾಧುಪರಿತ್ರಾಣ ದುಷ್ಕೃತ ವಿನಾಶಕ್ಕೂ ಧರ್ಮಸಂಸ್ಥಾಪನಕ್ಕೂ

(೨) ಆಳ. ಸ್ತೋ. ೩೯. (೩) ವೈಕುಂಠ ಗದ್ಯ. (೪) ತಿರು. ೪-೯೧೦.
(೫) ೬-೯-೩.

**ವಿವಕ್ಷಿತಮ್.** ಶ್ರೀ ಶಬ್ದತ್ತುಕ್ಕು (೧) **"ಶೃಣಾತಿ ನಿಖಿಲಾನ್ ದೋಷಾನ್ ಶ್ರೀಣಾತಿ ಚ ಗುಣೈರ್ಜಗತ್ । ಶ್ರೀಯತೇ ಚಾಖಿಲೈರ್ನಿತ್ಯಂ ಶ್ರಯತೇ ಚ**

ಆವಶ್ಯಕತೆಯುಂಟಾದಾಗೆಲ್ಲಾ ಭೂಮಿ **ನಡನ್ದುಮ್**- **"ಚಚಾರವಸುಧಾತಲೇ"** ಎಂದು ಹೇಳಿರುವಹಾಗೆ ಸಂಚರಿಸಿ, **ನಿನ್ರು** - ರಾಮಾವತಾರಿಯಾಗಿ ಧನುರ್ಧಾರಿಯಾಗಿನಿಂತು, ಅಥವಾ ಕೃಷ್ಣಾವತಾರಿಯಾಗಿ ಗೋಪಾದಿಗಳ ರಕ್ಷಣಾರ್ಥವಾಗಿ ಗೋವರ್ಧನ ಪರ್ವತವನ್ನು ಕೊಡೆಯಾಗಿ ಹಿಡಿದುನಿಂತು, **ಕಿಡನ್ದುಮ್** - **"ಪ್ರತಿಶಿಶ್ಯೇಮಹೋದಧೇಃ"** ಎಂದು ಹೇಳಿರುವಹಾಗೆ ಸಮುದ್ರರಾಜನನ್ನು ಪ್ರಾರ್ಥಿಸುತ್ತಾ ಪವಡಿಸಿ, **ಇರುನ್ದುಮ್**-ಸೀತಾಸಮೇತನಾಗಿ ಇರುವವನಾಗಿ, **ಶಾಲಪ್ಪಲನಾಳ್ ಉಯಿರ್‌ಗಳ್ ಕಾಪ್ಪಾನೇ** -**"ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ"** (ರಾಮಾ. ಬಾ. ೧. ೯೭) ಎಂದು ಹೇಳಿರುವಹಾಗೆ ಅನೇಕಕಾಲ ರಾಜ್ಯವನ್ನಾಳುತ್ತಾ ಆಶ್ರಯಿಸಿದವರನ್ನೆಲ್ಲಾ ರಕ್ಷಿಸುವವನೇ, **ಕೋಲತ್ತಿರುಮಾಮಗಳೋಡುನ್ನೇ** - **"ರಾಘವೋಽರ್ಹತಿ ವೈದೇಹಿಂ ತಂಚೇಯಮಸಿತೇಕ್ಷಣಾ"** ಎಂದು ಹೇಳಿರುವಹಾಗೆ ಬಹು ಸುಂದರಳಾಗಿ ಅನುರೂಪಳಾಗಿ **"ನಾರೀಣಾಮುತ್ತಮಾವಧೂಃ"** ಎಂದು ಪ್ರಖ್ಯಾತಿಯನ್ನು ಹೊಂದಿರುವ ಲಕ್ಷ್ಮಿಯೊಂದಿಗೆ ಪ್ರಾಪ್ಯದೇಶೆಯಲ್ಲಿ ಸೇವೆಯನ್ನು ಈಯುವ ನಿನ್ನನ್ನು, **ಕೂಡಾದೆ**-ದಿವ್ಯ ವೈಕುಂಠವನ್ನು ಬಂದು ಸೇರದೆ ಎಂದರೆ ಅನುಭವಿಸದೆ, **ಶಾಲಪ್ಪಲನಾಳ್** - ಹೀಗೆ ಬಹುಕಾಲ, **ಅಡಿಯೇನ್** - ನಿನಗೆ ಶೇಷಭೂತನೆಂಬ ಜ್ಞಾನವಿರುವನಾನು, **ಇನ್ನಮ್** - ಇನ್ನು ಎಷ್ಟುಕಾಲ, **ತಳರ್ವೇನೋ**-ಕ್ಲೇಶವನ್ನು ಹೊಂದುವೆನೋ ? ಈ ಪಾಶುರವು ಪ್ರಣವಾರ್ಥ ವಿವರಣೆಯು. ರಕ್ಷಿಸುವ ಸಂದರ್ಭದಲ್ಲೂ ಪ್ರಾಪ್ಯದೆಶೆಯಲ್ಲೂ ಲಕ್ಷ್ಮೀ ವಿಶಿಷ್ಟತೆಯು ಬೋಧಿತವು. ಎಲ್ಲಾ ಅವತಾರಗಳಲ್ಲೂ **"ರಾಘವತ್ವೇ ಭವೇತ್ಸೀತಾ"** ಎಂಬಲ್ಲಿ ಹೇಳಿರುವಹಾಗೆ ಮಿಥುನವೇ ಉಪಾಯೋಪೇಯರೆಂಬ ಭಾವವು ಉಪಪಾದಿತವು. ಹೀಗೆ ಬಹ್ವರ್ಥ ಗರ್ಭಿತವಾದ ಪಾಶುರವು. **ಇತ್ಯಾದಿಗಳಿಲುಮ್**-ಇವೇ ಮೊದಲಾದ ಮಹರ್ಷಿಗಳ ಮತ್ತೂ ಆಳ್ವಾರುಗಳ ದಿವ್ಯಸೂಕ್ತಿಗಳಲ್ಲೂ, **ವಿವಕ್ಷಿತಮ್**-ಈ ಮುಕ್ತನು ಪ್ರಾಪ್ಯದೆಶೆಯಲ್ಲಿ ಮಾಡುವ ಕೈಙ್ಕರ್ಯಕ್ಕೆ, ಲಕ್ಷ್ಮೀನಾರಾಯಣರಿಬ್ಬರೂ ಉದ್ದೇಶ್ಯರೆಂಬುದು ತಿಳಿಸಲ್ಪಟ್ಟಿತು. ಮುಂದೆ ಇಲ್ಲಿರುವ ಶ್ರೀಮಚ್ಛಬ್ದಕ್ಕೆ ಮುಖ್ಯವಾದ ತಾತ್ಪರ್ಯವೇನೆಂಬುದನ್ನು ತಿಳಿಸುವ ಸಂದರ್ಭದಲ್ಲಿ, **ಶ್ರೀ** ಶಬ್ದಕ್ಕೆ ನಾಲ್ಕು ಧಾತುಗಳ ಮೂಲಕ ಉಂಟಾದ ಆರು ವಿಧ ವ್ಯುತ್ಪತ್ತಿಗಳು ಹಿಂದೆ ಉಪಪಾದಿತವಾದವುಗಳಲ್ಲಿ ಯಾವ ಅರ್ಥವು ಈ ಪ್ರಾಪ್ಯದೆಶೆಯಲ್ಲಿರುವ ಲಕ್ಷ್ಮಿಗೆ ಅನ್ವಯಿಸುತ್ತದೆ ಎಂಬುದನ್ನು ಉಪದೇಶಿಸುತ್ತಾರೆ. ಶ್ರೀಙ್ ಸೇವಾಯಾಂ ಎಂಬ ಧಾತು ವ್ಯುತ್ಪತ್ತಿಯಿಂದ ಲಕ್ಷ್ಮಿಯು ಪತಿಯೊಂದಿಗೆ ಸೇವ್ಯಳು

---

(೧) ಅಹಿರ್ಬುಧ್ನ್ಯಸಂಹಿತೆ.

**ಪರಂಪದಮ್ । ಶ್ರಯನ್ತೀಂ ಶ್ರೀಯಮಾಣಾಂ ಚ ಶೃಣಂತೀಂ ಶೃಣ್ವತೀ ಮಪಿ " ಇತ್ಯಾದಿಗಳಿರ್ಪ್ಪಡಿಯೇ, ಅನೇಕಾರ್ಥಂಗಳ್ ಉಂಡೇಯಾಗಿಲುಮ್, ಇಙ್ಗುತ್ತೈ ಶ್ರೀಮಚ್ಛಬ್ದಮ್ " ಶ್ರೀಞ್ ಸೇವಾಯಾಮ್ " ಎಙ್ಗಿರ ಧಾತು ವಿಲೇ ಸೇವ್ಯತ್ವಾದಿಗಳೈ ಚ್ಚೊಲ್ಲಿಕ್ಕೊಂಡು ಕೈಙ್ಕರ್ಯಪ್ರತಿಸಂಬಂಧಿತ್ವಪರಮ್.**

---

ಎಂಬರ್ಥವು ಉಂಟಾಗುವದರಿಂದ ಕೈಂಕರ್ಯಕ್ಕೆ ಇಬ್ಬರೂ ಉದ್ದೇಶ್ಯರೆಂಬುದು ವ್ಯಕ್ತವೆಂದು ತಿಳಿಸುತ್ತಾರೆ. **ಶ್ರೀಶಬ್ದತ್ತುಕ್ಕು** – ಶ್ರೀಶಬ್ದಕ್ಕೆ ಅನೇಕಾರ್ಥಗಳು. ಮುಖ್ಯವಾಗಿ ಆರರ್ಥಗಳು ಉಂಟೆಂಬುದಕ್ಕೆ ಹಿಂದೆ ಉದಾಹರಿಸಿದ ಸಂಹಿತಾ ವಾಕ್ಯವನ್ನು ಉದಾಹರಿಸಿರುತ್ತಾರೆ. ಇವುಗಳ ಅರ್ಥಕ್ಕೆ ನೆಯ ಪುಟ ಗಳನ್ನು ಪರಾಂಬರಿಸಿ. **ಇತ್ಯಾದಿಗಳಿರ್ಪ್ಪಡಿಯೇ**-ಇವೇ ಮೊದಲಾದ ಪ್ರಮಾಣ ಗಳಲ್ಲಿ ಹೇಳಿರುವ ಹಾಗೆ, **ಅನೇಕಾರ್ಥಗಳು ಉಂಡೇಯಾಗಿಲುಮ್**-ಅನೇ ಕಾರ್ಥಗಳು ಇದ್ದರೂ, **ಇಙ್ಗುತ್ತೈ ಶ್ರೀಮಚ್ಛಬ್ದಮ್**-ಈ ಉತ್ತರಖಂಡದಲ್ಲಿನ **ಶ್ರೀಮತೇ** ಎಂಬ ಶಬ್ದವು, **ಶ್ರೀಞ್ಸೇವಾಯಾಂ ಎಙ್ಗಿರ ಧಾತುವಿಲೇ**- ಎನ್ನುವ ಧಾತುವಿನ ಮೂಲಕ, **ಸೇವ್ಯತ್ವಾದಿಗಳೈಚ್ಚೊಲ್ಲಿಕ್ಕೊಂಡು,** ಇಲ್ಲಿನ ಆದಿಶಬ್ದದಿಂದ ಪರಿಪೂರ್ಣತ್ವ, ಆನಂದದಾಯಿಕತ್ವ, ಭೋಗಸಿದ್ಧತ್ವಗಳು ಹೇಳ ಲ್ಪಟ್ಟವು, **ಕೈಙ್ಕರ್ಯಪ್ರತಿಸಂಬಂಧಿತ್ವಪರಮ್** - ಮುಕ್ತನು ಪ್ರಾಪ್ಯದೆಶೆಯಲ್ಲಿ ಮಾಡುವ ಕೈಙ್ಕರ್ಯಕ್ಕೂ ಲಕ್ಷ್ಮಿಯೂ ಉದ್ದೇಶ್ಯಳೆಂಬುದನ್ನೂ ಸೂಚಿಸುವಂತಾದ್ದು. ಈ ಅಭಿಪ್ರಾಯವೇ **"ಮುಕ್ತಾನಾಂ ಭೋಗಸಿದ್ಧ್ಯರ್ಥಂ ಕೈಙ್ಕರ್ಯಾದಿ ವಿವರ್ಧನೀಮ್"** ಎಂಬಲ್ಲೂ ಹೇಳಲ್ಪಟ್ಟಿರುತ್ತದೆ. ಶ್ರೀಪರಾಶರಭಟ್ಟರೂ, ಅಷ್ಟಶ್ಲೋಕಿ ಯಲ್ಲಿ (೬) **"ಕರ್ತವ್ಯಭಾಗಂ ತ್ವಥ ಮಿಥುನಪರಂ ಪ್ರಾಪ್ಯಮೇವಂ ಪ್ರಸಿದ್ಧಮ್"** ಎಂದು ಈ ಅಭಿಪ್ರಾಯವನ್ನೇ ವ್ಯಕ್ತಪಡಿಸಿರುತ್ತಾರೆ. **"ಶ್ರೀಮತೇ"** ಎಂಬಲ್ಲಿನ ಮತುಪ್ ಪ್ರತ್ಯಯದಿಂದಲೇ ಪ್ರಾಪ್ಯದೆಶೆಯಲ್ಲಿರುವವನು ಲಕ್ಷ್ಮೀವಿಶಿಷ್ಟ ನೆಂದು ತೋರುವಾಗ, ಪುನಃ **ನಾರಾಯಣಾಯ** ಎಂಬ ಪ್ರಯೋಗದ ಆವಶ್ಯಕತೆ ಏನು ? ಎಂದು ಕೇಳಿದರೆ, **ಪ್ರಾಪ್ಯತ್ವಕ್ಕೆ** ಉಪಯುಕ್ತವಾದ ಪರಿಪೂರ್ಣಾನುಭವ ಸಿದ್ಧ್ಯರ್ಥವಾಗಿ, **ನಾರಾಯಣ** ಶಬ್ದದಿಂದಲೇ ಇಂತಹ ಪರಿಪೂರ್ಣತೆಯು ಸಿದ್ಧಿಸುವದರಿಂದ ಪದಪ್ರಯೋಜನ ಉಂಟೆಂದು ಮುಂದಿನ ವಾಕ್ಯದಿಂದ ಉಪ ದೇಶಿಸುತ್ತಾರೆ. ಇಬ್ಬರೂ ಉದ್ದೇಶ್ಯರೆಂಬ ಭಾವವು ವಿಶದವಾಗಿತೋರಿ ತನ್ಮೂಲಕ ವಾಗಿ ನಿರತಿಶಯಭಕ್ತಿ ವಿಶ್ವಾಸಗಳು ತಲೆದೋರಿ, ಅವರಿಬ್ಬರಿಗೂ ಮಾಡುವ ಕೈಙ್ಕರ್ಯಕ್ಕಿಂತ ಹೆಚ್ಚಾದುದು ಯಾವ ಸಂಪತ್ತೂ ಇಲ್ಲವೆಂಬ ಭಾವ ಉಂಟಾಗುವ ದಕ್ಕಾಗಿ ಆವಶ್ಯಕವೆಂದು ಹೇಳುತ್ತಾರೆ.

## ಅತ್ರತ್ಯ ನಾರಾಯಣ ಶಬ್ದಸ್ಯ ಪ್ರಯೋಜನಮಾಹ

**ಶ್ರೀಮತೇ ಎಙ್ಗಿರ ಶಬ್ದಮ್, ತನ್ನಾಲೆ ವಿಶಿಷ್ಟಮಾನ ಪ್ರತಿಸಂಬಂಧಿ ಕೋತ್ತಿತ್ತೇಯಾಗಿಲುಮ್, ಸರ್ವವಿಧಕೈಙ್ಕರ್ಯತ್ತುಕ್ಕುಮ್ ಪ್ರಯೋಜಕ ಮಾನ ಪ್ರೀತಿವಿಶೇಷತ್ತೈ ಪ್ಪಿರಪ್ಪಿಕ್ಕುಂ ಸಂಬಂಧಗುಣವಿಭೂತ್ಯಾದಿ ಪರಿ ಪೂರ್ಣಾನುಭವ ಸಿದ್ಧಿಕ್ಕಾಗ ಇಙ್ಗು ನಾರಾಯಣಶಬ್ದಮ್ ಪ್ರಯುಕ್ತ ಮಾಗಿರದು.**

ಇಲ್ಲಿರುವ ನಾರಾಯಣ ಶಬ್ದದ ಪ್ರಯೋಜನವನ್ನು ಹೇಳುತ್ತಾರೆ.

"**ಶ್ರೀಮತೇ**" **ಎಙ್ಗಿರ ಶಬ್ದಮ್**-ಎನ್ನುವ ಶಬ್ದವು, **ತನ್ನಾಲೇ ವಿಶಿಷ್ಟ ಮಾನ**-ತನ್ನೊಂದಿಗೆ ಸೇರಿರುವ, **ಪ್ರತಿಸಂಬಂಧಿತೋತ್ತಿತ್ತೇಯಾಗಿಲುಮ್** - ಮುಕ್ತನು ಪ್ರಾಪ್ಯದಲ್ಲಿ ಮಾಡುವ ಕೈಙ್ಕರ್ಯಕ್ಕೆ ನಾರಾಯಣನೂ ಉದ್ದೇಶ್ಯ ನೆಂಬುದು **ಶ್ರೀಮತೇ** ಎಂಬ ಪದದಿಂದಲೇ ತೋರಿಬಂದರೂ, **ಸರ್ವವಿಧಕೈಙ್ಕರ್ಯ ತ್ತುಕ್ಕುಮ್**-ಮುಕ್ತನು ಮಾಡುವ ನಾನಾವಿಧ ಕೈಙ್ಕರ್ಯಕ್ಕೂ, **ಪ್ರಯೋಜಕ ಮಾನ**-ಪ್ರೇರಕವಾದ, **ಪ್ರೀತಿವಿಶೇಷತ್ತೇ** - ಲಕ್ಷ್ಮೀನಾರಾಯಣರಲ್ಲಿ ಉಂಟಾಗ ಬೇಕಾದ ಪರಮಭಕ್ತಿಯನ್ನು, **ಪಿರಪ್ಪಿಕ್ಕುಮ್**-ಉಂಟುಮಾಡುವ, **ಸಂಬಂಧ**-ಲಕ್ಷ್ಮಿಯೊಂದಿಗೆ ಸಂಬಂಧವೇನು, **ಗುಣ**-ಕಲ್ಯಾಣಗುಣಗಣವೇನು, **ವಿಭೂತಿ**-ವಿವಿಧ ವಿಚಿತ್ರಾದ್ಭುತಗಳಾದ ಉಭಯ ವಿಭೂತಿ ಏನು (ಜಾತ್ಯೇಕವಚನಗಳು) ಇವೇ ಮೊದಲಾದವುಗಳಿಂದ, ಆದಿ ಶಬ್ದದಿಂದ ದಿವ್ಯಮಙ್ಗಳವಿಗ್ರಹ, ಐಶ್ವರ್ಯಾ ದಿಗಳು ಹೇಳಲ್ಪಟ್ಟವು, ಇವುಗಳಿಂದ, **ಪರಿಪೂರ್ಣಾನುಭವಸಿದ್ಧಿಕ್ಕಾಗ**-ಪರಿಪೂರ್ಣ ಬ್ರಹ್ಮಾನುಭವದಿಂದ ಉಂಟಾದ ಆನಂದ, ಭೋಗ್ಯತ್ವಾದಿಗಳ ಸಿದ್ಧಿಗಾಗಿ, **ಇಙ್ಗು** ಈ ಉತ್ತರಖಂಡದ, **ನಾರಾಯಣ ಶಬ್ದಮ್, ಪ್ರಯುಕ್ತಮಾಗಿರದು**-ಪ್ರಯೋ ಗಿಸಲ್ಪಟ್ಟಿರುವುದು. ಇವುಗಳ ಎಲ್ಲಾ ಪೂರ್ಣತೆಯು ನಾರಾಯಣಶಬ್ದದಲ್ಲಿ ಅಡಗಿರುವದರಿಂದ ಮೋಕ್ಷದೆಶೆಯಲ್ಲಿ ಪರಿಪೂರ್ಣಬ್ರಹ್ಮಾನುಭವವೂ ತತ್ಕೈಙ್ಕ ರ್ಯವೂ ಉಂಟೆಂಬುದನ್ನು ಉಪದೇಶಿಸುವದಕ್ಕಾಗಿ ನಾರಾಯಣ ಶಬ್ದವೆಂಬ ಭಾವವು. ಈ ನಾರಾಯಣ ಶಬ್ದದಿಂದ ಲಕ್ಷ್ಮೀ, ಕಲ್ಯಾಣಗುಣ ವಿಭೂತಿ ಮೊದಲಾದವುಗಳ ಯೋಗವು ತೋರಿಬರುವದರಿಂದ ಇಂತಹ ಪರಿಪೂರ್ಣ ಬ್ರಹ್ಮ ನಲ್ಲಿ ನಿರತಿಶಯ ಭಕ್ತಿಯೂ ತನ್ಮೂಲಕ ಅಂತವನಿಗೆ ಶೇಷಭೂತನಾದ ತಾನು ಕೈಂಕರ್ಯವನ್ನು ಮಾಡುವ ಸುಕೃತವು ಲಭಿಸಬೇಕೆಂಬ ಪ್ರಾರ್ಥನೆಯೂ ಉತ್ತರ ಖಂಡದಲ್ಲಿ ಅಡಗಿದೆ ಎಂಬ ತಾತ್ಪರ್ಯವು.

**ಅಥ ಚತುರ್ಥ್ಯರ್ಥಮಾಹ**

**ಇಜ್ಜು ಚತುರ್ಥೀ ತಾದರ್ಥ್ಯ ಮುಖತ್ತಾಲೇ ಕೈಙ್ಕರ್ಯತ್ತೈ ಕಣಿಶಿಕ್ಕಿರದು. ತಾದರ್ಥ್ಯಮಾತ್ರಂ ನಿತ್ಯಮಾಗೈಯಾಲೇ (೧) "ತಚ್ಛೇಷತ್ವಾನುಸಂಧಾನಪೂರ್ವಕ ತಚ್ಛೇಷವೃತ್ತಿಃ"(೨)"ಅಹಂ ಸರ್ವಂ ಕರಿಷ್ಯಾಮಿ" ಇತ್ಯಾದಿಗಳಿರ್ ಪಡಿಯೇ ಪರಿಪೂರ್ಣಾನುಭವಪೂರ್ವಕಮಾನ ಕೈಙ್ಕರ್ಯಮ್ ಪ್ರಾರ್ಥನೀಯಮ್.**

ಮುಂದೆ ನಾರಾಯಣಾಯ ಎಂಬಲ್ಲಿರುವ ಚತುರ್ಥಿಯ ಅರ್ಥವನ್ನು ಹೇಳುತ್ತಾರೆ.

**ನಾರಾಯಣಾಯ** ಎಂಬ ಪದದಲ್ಲಿರುವ ಚತುರ್ಥಿಯು ತಾದರ್ಥ್ಯವನ್ನು ಬೋಧಿಸುತ್ತದೆ. ಈ ದಾಸಭೂತನಾದ ಜೀವಾತ್ಮನು ಮಾಡುವದೆಲ್ಲಾ ಆ ನಾರಾಯಣನ ಪ್ರಯೋಜನಕ್ಕಾಗಿಯೇ ಎಂಬರ್ಥವು ಉಂಟಾಗುವದರಿಂದ, ಮೂಲಮನ್ತ್ರದಲ್ಲಿ ಉಪಪಾದಿಸಿದಹಾಗೆ ಕೈಙ್ಕರ್ಯವು ಈ ಚತುರ್ಥಿಯಿಂದ ಬೋಧಿತವಾಗಿ, ಅದು ಶ್ರೀಮನ್ನಾರಾಯಣನಿಗಾಗಿಯೇ ಎಂಬ ಭಾವವು ಬೋಧಿತವು. ಇದನ್ನೇ ಮುಂದಿನ ವಾಕ್ಯದಿಂದ ಹೇಳುತ್ತಾರೆ. **ಇಜ್ಜು**-ಈ ನಾರಾಯಣಾಯ ಎಂಬ ಪದದಲ್ಲಿರುವ, **ಚತುರ್ಥಿಯು, ತಾದರ್ಥ್ಯಮುಖತ್ತಾಲೇ**-ಆ ಶ್ರೀಮನ್ನಾರಾಯಣನಿಗೇನೇ ಎಂಬ ತಾದರ್ಥ್ಯವನ್ನು ಬೋಧಿಸುವ ರೀತಿಯಿಂದ, **ಕೈಙ್ಕರ್ಯತ್ತೈ** - ಶೇಷಭೂತನ ಶೇಷಿಗೆ ಮಾಡುವ ಕೈಙ್ಕರ್ಯವನ್ನೂ, **ಕಣಿಶಿಕ್ಕಿರದು** - ಅರ್ಥವಾಗಿ ಬೋಧಿಸುತ್ತದೆ. **ತಾದರ್ಥ್ಯಮಾತ್ರಂ- "ದಾಸಭೂತಾಸ್ಸ್ವತಸ್ಸರ್ವೇ"** ಎಂಬಲ್ಲಿಯೂ ಪ್ರಣವದಲ್ಲಿ, **ಮಕಾರ ವಾಚ್ಯಃ ಅಯ್ಯೈವ** ಎಂಬಲ್ಲಿಯೂ ಪರಮಾತ್ಮನಿಗಾಗಿಯೇ ತಾನು ಎಂಬ ಶೇಷಶೇಷಿ ಸಂಬಂಧವು ನಿತ್ಯವಾದುದರಿಂದ, (೧) **"ತಚ್ಛೇಷತ್ವಾನುಸಂಧಾನ ಪೂರ್ವಕ ತಚ್ಛೇಷ ವೃತ್ತಿತಃ"**-ಆ ಭಗವಂತನಿಗೇ ತಾನು ಶೇಷಭೂತನೆಂಬ ಅಭಿಪ್ರಾಯ ಪೂರ್ವಕವಾದ ತನ್ನ ಶೇಷಿಗೆ ಮಾಡುವ ಕೈಙ್ಕರ್ಯ ವ್ಯಾಪಾರಉಳ್ಳವನೆಂದು ಶ್ರೀಪರಾಶರಭಟ್ಟರುಬರೆದ ನಿತ್ಯವೆಂಬ ಗ್ರಂಥದ ಸೂಕ್ತಿಯು, ಮತ್ತು (೨) **"ಅಹಂ ಸರ್ವಂ ಕರಿಷ್ಯಾಮಿ"** - "ನಾನು ಸಮಸ್ತ ಕೈಙ್ಕರ್ಯಗಳನ್ನು ಮಾಡುವೆನು" ಎಂಬ ಶ್ರೀಲಕ್ಷ್ಮಣೋಕ್ತಿಯ; **ಇತ್ಯಾದಿಗಳಿರ್ ಪಡಿಯೇ**-ಇವೇ ಮೊದಲಾದವುಗಳಲ್ಲಿ ಹೇಳಿರುವಹಾಗೆ, **ಪೂರ್ಣಾನುಭವ ಪೂರ್ವಕಮಾನ ಕೈಙ್ಕರ್ಯಮ್** - ಪರಿಪೂರ್ಣಬ್ರಹ್ಮಾನುಭವದಿಂದ ಉಂಟಾಗುವ ಆನಂದಪೂರ್ವಕವಾಗಿ ಕೈಙ್ಕರ್ಯ ಮಾಡೋಣವು, **ಪ್ರಾರ್ಥನೀಯಮ್**-ಈ ಕರಣ ಮನ್ತ್ರವಾದ ದ್ವಯೋಚ್ಚಾರಣೆಯನ್ನು ಮಾಡುವಾಗ ಪ್ರಾರ್ಥಿಸತಕ್ಕದ್ದಾಗಿರುತ್ತದೆ.

(೧) ಶ್ರೀಭಟ್ಟರ ನಿತ್ಯವು. (೨) ರಾಮಾ. ಅಯೋಧ್ಯಾ. ೩೧. ೨೭.

ಶೇಷನಾದ ಲಕ್ಷ್ಮಣನು ತನಗೆ ಶೇಷಿಯಾದ ಶ್ರೀರಾಮಚಂದ್ರಪ್ರಭುವನ್ನು ಹಾಗೆಯೇ ಪ್ರಾರ್ಥಿಸುತ್ತಾನೆ. **"ಕುರುಷ್ವಮಾ ಮನುಚರಂ ವೈಧರ್ಮ್ಯಂನೇಹ ವಿದ್ಯತೇ । ಕೃತಾರ್ಥೋಽಹಂ ಭವಿಷ್ಯಾಮಿ ತವಚಾರ್ಥಃ ಪ್ರಕಲ್ಪತೇ" ಕುರುಷ್ವ ಮಾಮನುಚರಮ್**-ನಾನು ನಿನಗೆ ಶೇಷಭೂತನು ಕಿಂಕರನು, ಆದುದರಿಂದ ನಿನ್ನ ಕೈಙ್ಕರ್ಯಕ್ಕಾಗಿ ನೇಮಿಸಿಕೋ, **ವೈಧರ್ಮ್ಯಂ ನೇಹವಿದ್ಯತೇ** - ಸೇವ್ಯಸೇವಕ ಧರ್ಮ ಗಳಿಗೆ ಎಂದರೆ ಶೇಷಿಶೇಷಭಾವವೃತ್ತಿಗಳಿಗೇನೂ ಲೋಪವೂ ವಿರುದ್ಧವೂ ಇರುವ ದಿಲ್ಲವು. ಸ್ವಾಭಾವಿಕ ಶೇಷನಾದ ನನಗೆ ಶೇಷಿಯಾದ ನಿನಗೆ ಮಾಡುವ ಕೈಙ್ಕರ್ಯವೇ ಸ್ವರೂಪವಾದುದರಿಂದ ನೀನು ಅವಶ್ಯಸ್ವೀಕರಿಸತಕ್ಕದ್ದೆಂಬ ಭಾವವು. ಇದು ಇಬ್ಬ ರಿಗೂ ಸರಿಹೋಗುತ್ತದೆಂದು ಹೇಳುತ್ತಾರೆ. ಶೇಷನಾದ ನಾನು, **ಕೃತಾರ್ಥೋಽಹಂ ಭವಿಷ್ಯಾಮಿ**-ಸ್ವಾಮಿಗೆ ಕೈಂಕರ್ಯವನ್ನು ಮಾಡುವ ಸುಯೋಗವು ಲಭಿಸಿದುದರಿಂದ ಕೃತಕೃತ್ಯನಾಗುವೆನು; **ತವಚಾರ್ಥಃ ಪ್ರಕಲ್ಪತೇ**-ಶೇಷಿಯಾದ ನಿನಗೆ ಪ್ರಯೋ ಜನವು ಏರ್ಪಡುತ್ತದೆ. ನಿನಗೇನೇ ಆ ಪ್ರಯೋಜನವೇ ವಿನಾ ನನಗೆ ಸುತರಾಂ ಅಲ್ಲವು. ಹೀಗೆ ನಿತ್ಯ ಕೈಙ್ಕರ್ಯಮಾಡುವದೇ ಪ್ರಾರ್ಥಿಸಲ್ಪಟ್ಟಿತು. ಆದುದರಿಂದ ಮುಂದಕ್ಕೆ ಲಕ್ಷ್ಮಣನು ಹೇಳುತ್ತಾನೇನೆಂದರೆ **"ಭವಾಂಸ್ತು ಸಹ ವೈದೇಹ್ಯಾ ಗಿರಿಸಾನುಷು ರಂಸ್ಯತೇ । ಅಹಂ ಸರ್ವಂ ಕರಿಷ್ಯಾಮಿ ಜಾಗ್ರತಸ್ಸ್ವಪತಶ್ಚ ತೇ".** ಈ ತಾನು ಮಾಡುವ ಕೈಙ್ಕರ್ಯಕ್ಕೆ ಲೋಕದಂಪತಿಗಳಿಬ್ಬರೂ ಉದ್ದೇಶ್ಯರೆಂದು ಪೂರ್ವಾರ್ಧದಿಂದ ಹೇಳಿದರು. ಈ ದ್ವಯದ **ಶ್ರೀಮತೇ** ಎಂಬುದರ ಅರ್ಥವಿವರ ಣೆಯು, **ಅಹಂಸರ್ವಂಕರಿಷ್ಯಾಮಿ**-ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತ ಸಮಸ್ತ ಕೈಙ್ಕರ್ಯಗಳನ್ನು ಮಾಡುವೆನು ಎಂಬ ಪ್ರಾರ್ಥನೆಯಿಂದ **ನಾರಾಯಣಾಯ** ಎಂಬಲ್ಲಿರುವ ಚತುರ್ಥಿಯಿಂದ ತಾದರ್ಥ್ಯವು ವ್ಯಕ್ತವು **ಪರಿಪೂರ್ಣಾನುಭವ ಪೂರ್ವಕಮಾನ ಕೈಙ್ಕರ್ಯಮ್**-ಎಂಬುದರಿಂದ ನಮ್ಮ ಸಿದ್ಧಾನ್ತರೀತ್ಯಾ ಮುಕ್ತಿ ಎಂಬುವದೇನು ಎಂಬುದು ವ್ಯಕ್ತವಾಗಿ ಹೇಳಲ್ಪಟ್ಟಿತು. ಇದರ ಸಿದ್ಧಾಂತಿಗಳ ಮುಕ್ತಿಗೂ ನಮ್ಮ ಸಿದ್ಧಾನ್ತದ ಮುಕ್ತಿಗೂ ಇರುವ ವೈಲಕ್ಷಣ್ಯವು ದ್ಯೋತಿತವು. ಸ್ವರೂಪೈಕ್ಯ ಮೊದಲಾದ ಭಾವವೇ ಮುಕ್ತಿಯಾದರೆ. ಎಂದಿಗೂ ಪ್ರಾರ್ಥನೀಯ ವಾಗಲಾರದೆಂಬ ಭಾವವೂ ಈ ಪ್ರಯೋಗದಿಂದ ಸೂಚಿತವು.

ಆಗಲಿ, **"ಪ್ರಾರ್ಥನೀಯಮ್"** ಎಂದು ಹೇಳಿದುದು ಹೇಗೆ? **"ಶ್ರೀಮತೇ ನಾರಾಯಣಾಯ ನಮಃ"** ಎಂದು ಇಷ್ಟು ಮಾತ್ರವೇ ಇದೆಯಲ್ಲಾ ? ಎಂದು ಆಕ್ಷೇಪ ತಂದರೆ ಮುಂದಿನ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಾರೆ.— ಯಾವಾಗ ಸರ್ವಶರಣ್ಯನನ್ನು ಕುರಿತು ಶರಣಾಗತನಾದನೋ, ಆಗ ಈ ಶರಣಾ ಗತನು ತನ್ನ ಸ್ವರೂಪಕ್ಕೆ ಅನುಗುಣವಾಗಿ ವಿಲಕ್ಷಣವಾಗಿರುವ, ಮತ್ತು ತನಗೆ ಶರಣ್ಯನಾಗಿ ಶೇಷಿಯ ಸ್ವರೂಪಕ್ಕೂ ಉಚಿತವಾದ ಪ್ರಾರ್ಥನೆಯನ್ನು ಮಾಡುವ ನೆಂಬುದು ಸಿದ್ಧವಾದುದರಿಂದ, ಅರ್ಥವಾಗಿ ಪ್ರಾರ್ಥನೆಯು ತೋರಿಬರುತ್ತದೆಂದು

**ಶರಣಾಗತನಾನ್ವೋದು ಶರಣ್ಯನ್ನೈ ಅಭಿಮತಪ್ರಾರ್ಥನೈ ಪಣ್ಣುಗಿರ ನಾಗೈಯಾಲೇ ಇಜ್ಗೇ "ಭವೇಯಮ್", ಎನ್ರೊರುಪದಂ ಅಧ್ಯಾಹಾರಮ್.**

ಭಾವಿಸಿ, **"ಭವೇಯಮ್"** ಎಂಬೊಂದು ಪದವನ್ನು ಅಧ್ಯಾಹಾರಮಾಡಿಕೊಳ್ಳ ತಕ್ಕದ್ದೆಂದು ಉಪದೇಶಿಸುತ್ತಾರೆ.

**ಶರಣಾಗತನಾನ್ವೋದು** -ಆತ್ಮರಕ್ಷಾಭರಸಮರ್ಪಣೆಯನ್ನು ಮಾಡುವಾಗ, **ಶರಣ್ಯನ್ನೈ**-ರಕ್ಷಕನನ್ನು, **ಅಭಿಮತಪ್ರಾರ್ಥನೈಪಣ್ಣುಗಿರನಾಗೈಯಾಲೇ -** ತನಗೆ ಇಷ್ಟಪ್ರಾಪ್ತಿಯ ಪ್ರಾರ್ಥನೆಯನ್ನು ಮಾಡುವದರಿಂದ, **ಇಜ್ಗೇ**-ಈ ಸಂದರ್ಭದಲ್ಲಿ, ದ್ವಯೋತ್ತರ ಖಂಡಾಂತ್ಯದಲ್ಲಿ **ಭವೇಯಮ್** - ಆಗುವೆನು ಎಂದರೆ ಪರಿಪೂರ್ಣ ಬ್ರಹ್ಮಾನುಭವಪೂರ್ವಕವಾದ ನಿತ್ಯ ಕೈಙ್ಕರ್ಯಪ್ರಾಪ್ತಿಯನ್ನು ಹೊಂದಿದವನಾಗುವೆನು, **ಎನ್ರೊರುಪದಮ್**-ಎಂಬ ಒಂದು ಪದವನ್ನು **ಅಧ್ಯಾಹಾರ್ಯಮ್ -** ಅಧ್ಯಾಹಾರಮಾಡಿಕೊಳ್ಳತಕ್ಕದ್ದು. ಪ್ರಾರ್ಥನೆಯು ಆವಶ್ಯಕವಾಗಿ ಅರ್ಥವಾಗಿ ತೋರಿ ಬರುವದರಿಂದ, ಹಾಗೆ **"ಭವೇಯಮ್"** ಎಂಬೊಂದು ಪದವನ್ನು ಇಟ್ಟುಕೊಳ್ಳ ತಕ್ಕದ್ದು. ಇಲ್ಲದ ಪದವನ್ನು ಇಟ್ಟುಕೊಂಡರೆಂಬ ಆಕ್ಷೇಪಕ್ಕೆ ಕಾರಣವಿಲ್ಲವು. ಏಕೆ ಎಂದರೆ ಶರಣಾತನಾಗಬೇಕಾದರೆ ಏನೋ ಒಂದು ಅಭೀಷ್ಟವನ್ನು ಮನಸ್ಸಿನಲ್ಲಿಟ್ಟು, ತತ್ಪ್ರಾರ್ಥನೆಯೊಂದಿಗೆ ಅನುಷ್ಠಿಸುವನೆಂಬುದು ಸುವ್ಯಕ್ತವು. ಆದುದರಿಂದ **ಶ್ರೀಮತೇನಾರಾಯಣಾಯ ಭವೇಯಮ್** ಎಂಬುದರ ವಾಕ್ಯಾರ್ಥವು **ಶ್ರೀಮನ್ನಾರಾಯಣಸಂಬಂಧಿ ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತ ಸರ್ವವಿಧ ಕೈಂಕರ್ಯವಾನ್"** ಎಂಬದಾಗಿ ಎಂದು ಸಾರವಿವರಣೆಯವರು ಅಪ್ಪಣೆಕೊಡಿಸಿರುತ್ತಾರೆ.

ಮುಂದೆ ನಮಶ್ಶಬ್ದಾರ್ಥವು ಹೇಳಲ್ಪಡುತ್ತದೆ.

---

ಪುರುಷಾರ್ಥವು, ಅನಿಷ್ಟ ನಿವೃತ್ತಿಯು ಮತ್ತು ಇಷ್ಟಪ್ರಾಪ್ತಿಯು ಎಂದು ಎರಡು ವಿಧವು; ಅನಿಷ್ಟ ನಿವೃತ್ತಿ ಇಲ್ಲದೆ ಇಷ್ಟಪ್ರಾಪ್ತಿಯು ಸಾಧ್ಯವಲ್ಲವು. ಇಷ್ಟ ಪ್ರಾಪ್ತಿಯ ಪ್ರಾರ್ಥನೆಯು ಹಿಂದೆ ವ್ಯಕ್ತವಾದರೂ, ಅನಿಷ್ಟ ನಿವೃತ್ತಿಯನ್ನೂ ಈ ಮನ್ತ್ರವು ಬೋಧಿಸತಕ್ಕದ್ದಾಗಿರುತ್ತದೆ. ಗೀತೆಯಲ್ಲಿ **"ತಮೇವ ಶರಣಂಗಚ್ಛ ಸರ್ವಭಾವೇನ ಭಾರತ । ತತ್ಪ್ರಸಾದಾತ್ಪರಾಂ ಶಾನ್ತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್"** (ಗೀ. ೧೮. ೬೨) ಎಂಬಲ್ಲಿ ಅನಿಷ್ಟನಿವೃತ್ತಿಯೂ ಇಷ್ಟಪ್ರಾಪ್ತಿಯೂ ಎರಡೂ ಶರಣಾಗತಿಯ ಫಲವಾಗಿ ಲಭಿಸುತ್ತವೆ ಎಂದು ಹೇಳಲ್ಪಟ್ಟಿರುತ್ತದೆ. ಶ್ರೀ ಭಾಷ್ಯಕಾರರು **"ಸರ್ವಕರ್ಮಬಂಧೋಪಶಮಂ ಶಾಶ್ವತಂ ಚ ಸ್ಥಾನಂ ಪ್ರಾಪ್ಸ್ಯಸಿ"** ಎಂದು ವ್ಯಾಖ್ಯಾನಮಾಡಿರುತ್ತಾರೆ. **"ಸರ್ವಕರ್ಮಬಂಧೋಪಶಮಃಪರಶಾನ್ತಿಶಬ್ದೇನ ಅನಿಷ್ಟ ನಿವೃತ್ತಿರುಕ್ತಾ"** ಎಂದು ಶ್ರೀ ನಿಗಮಾಂತದೇಶಿಕರ ಭಾಷ್ಯವು. ಇಲ್ಲಿ ಇಷ್ಟಪ್ರಾಪ್ತಿಯ ಪ್ರಾರ್ಥನೆಯು ಚತುರ್ಥಿಯಿಂದ ಹೇಳಲ್ಪ

## ಅಥ ನಮಶ್ಶಬ್ದಾರ್ಥಃ

**ಇಪ್ಪಡಿ, ಪ್ರಾಧಾನ್ಯತ್ತಾಲೇ ಮುರ್ಪಡ ಇಷ್ಟಪ್ರಾಪ್ತಿಯೈ ಅಪೇಕ್ಷಿತ್ತು ಇದಕ್ಕಾಗ ಅನಂತರ ನಮಸ್ಸಾಲೇ ಸರ್ವಾನಿಷ್ಟ ನಿವೃತ್ತಿಯಮ್ ಪ್ರಾರ್ಥಿಕ್ಕಿರದು ನಮಶ್ಶಬ್ದಾರ್ಥಬೋದಿತ ವಿರೋಧಿಸ್ವರೂಪಂ ತನ್ನಿವೃತ್ತಿ ಪ್ರಕಾರಂಚ**

ಟ್ಟಿತು. ಅನಿಷ್ಟ ನಿವೃತ್ತಿಯ ಪ್ರಾರ್ಥನೆಯು ನಮಶ್ಶಬ್ದದಿಂದ ಹೇಳಲ್ಪಡುತ್ತದೆಂದು ಮುಂದಿನ ವಾಕ್ಯಗಳಿಂದ ತಿಳಿಸುತ್ತಾರೆ. ಆದರೆ ಅನಿಷ್ಟ ನಿವೃತ್ತಿಯನ್ನು ಮೊದಲು ಹೇಳತಕ್ಕದ್ದಲ್ಲವೇ ? ಎಂದರೆ ಎರಡು ಒಟ್ಟಿಗೆ ಲಭಿಸತಕ್ಕದ್ದಾದ್ದರಿಂದ **"ಅಗ್ನಿಹೋತ್ರಂ ಜುಹೋತಿ ಯವಾಗೂಂಪಚತಿ"** ಎಂಬಲ್ಲಿ ಹೇಳಿರುವ ಹಾಗೂ, ಮತ್ತು **"ಬ್ರಾಹ್ಮಣಾ ಭೋಜಯಿತ್ವಾ ಗೃಹಂ ಪ್ರವೇಶಂ ಕುರು"** ಇತ್ಯಾದಿ ಪ್ರಯೋಗಗಳಹಾಗೆ ಆಕ್ಷೇಪಣೆಗೆ ಕಾರಣವಿಲ್ಲವು.

**ಇಪ್ಪಡಿ**-ಹೀಗೆ ನಾರಾಯಣಾಯ ಎಂಬ ಪದದ ಅರ್ಥವಿವರಣೆಯಲ್ಲಿ **ಪ್ರಾಧಾನ್ಯತ್ತಾಲೆ**-ಅನಿಷ್ಟ ನಿವೃತ್ತಿ ಇಷ್ಟಪ್ರಾಪ್ತಿಗಳೆರಡರಲ್ಲಿ ಇಷ್ಟ ಪ್ರಾಪ್ತಿಯೇ ಮುಖ್ಯವಾದುದರಿಂದ, **ಮುರ್ಪಡ** - ಮೊದಲು, **ಇಷ್ಟಪ್ರಾಪ್ತಿಯೈ ಅಪೇಕ್ಷಿತ್ತು**-ನಾರಾಯಣಾಯ ಎಂಬುದರಿಂದ, ಇಷ್ಟಪ್ರಾಪ್ತಿಯಾದ ಕೈಂಕರ್ಯವನ್ನು ಆಪೇಕ್ಷಿಸಿ, **ಇದಕ್ಕಾಗ** - ಈ ಇಷ್ಟಪ್ರಾಪ್ತಿಗೆ ಅಂಗವಾಗಿ **ಅನಂತರ, ನಮುಸ್ಸಾಲೇ**-ನಮಶ್ಶಬ್ದದಿಂದ, **ಸರ್ವಾನಿಷ್ಟನಿವೃತ್ತಿಯುಮ್** - ಸಮಸ್ತ ಅನಿಷ್ಟನಿವೃತ್ತಿಯನ್ನೂ, ಅವಿದ್ಯಾಕರ್ಮವಾಸನಾರುಚಿ ಪ್ರಕೃತಿ ಸಂಬಂಧ ಮತ್ತು ತನ್ಮೂಲಕವಾಗಿ ಉಂಟಾಗುವ ಅಹಂಕಾರ ಮಮಕಾರಾದಿ ಸಮಸ್ತ ಅನಿಷ್ಟ ನಿವೃತ್ತಿಯನ್ನೂ, **ಪ್ರಾರ್ಥಿಕ್ಕಿರದು**-ಪ್ರಾರ್ಥಿಸುತ್ತದೆ. ಮೊದಲು ಅನಿಷ್ಟನಿವೃತ್ತಿಯಾದರಲ್ಲವೇ ಇಷ್ಟಪ್ರಾಪ್ತಿಯು. ಹೀಗಿರುವಾಗ ಮೊದಲು ಇಷ್ಟಪ್ರಾಪ್ತಿಯನ್ನೂ ಅನಂತರ ಅನಿಷ್ಟನಿವೃತ್ತಿಯನ್ನೂ ಈ ಮನ್ತ್ರದಲ್ಲಿ ಪ್ರಾರ್ಥನೀಯವು ಎಂಬಾಕ್ಷೇಪಕ್ಕೆ ಸಮಾಧಾನವಾಗಿ, **ಪ್ರಾಧಾನ್ಯತ್ತಾಲೇ ಮುರ್ಪಡ ಇಷ್ಟಪ್ರಾಪ್ತಿಯೈ ಅಪೇಕ್ಷಿತ್ತು** ಎಂಬ ಪ್ರಯೋಗವು. ಇಷ್ಟಪ್ರಾಪ್ತಿಯು ಪ್ರಧಾನವಾದುದರಿಂದ ಮೊದಲು ಅದು ಹೇಳಲ್ಪಟ್ಟಿತು. ಇದು ಅನಿಷ್ಟ ನಿವೃತ್ತಿ ಇಲ್ಲದೆ ಆಗುವದಿಲ್ಲವಾಗಿ ಅದೂ ಅನಂತರ ಹೇಳಲ್ಪಟ್ಟಿತೆಂಬುದು ತಾತ್ಪರ್ಯವು.

ನಮಶ್ಶಬ್ದದಿಂದ ತೋರಿಬರುವ ವಿರೋಧಿಸ್ವರೂಪವನ್ನು ತನ್ನಿವೃತ್ತಿಪ್ರಕಾರವನ್ನೂ ಈ ಮುಂದಿನ ಶ್ಲೋಕದಿಂದ ಸಙ್ಗ್ರಹಿಸಿ ಹೇಳುತ್ತಾರೆ.

---

ಉತ್ತರಖಂಡದಲ್ಲಿ **ಶ್ರೀಮತೇ** ಮತ್ತು **ನಾರಾಯಣಾಯ** ಎಂಬ ಪದಗಳು **ಪೂರ್ವಖಂಡವಲ್ಲಿ** ಹೇಳಿದ್ದರೂ, ಹೇಗೆ ಅವು ಪ್ರಾಪ್ಯದಶೆಯನ್ನು **ಬೋಧಿಸಲು ಆವಶ್ಯಕವೆಂಬುದನ್ನೂ**, **ಇವುಗಳಲ್ಲಿರುವ** ಚತುರ್ಥಿಯಿಂದ **ಇಷ್ಟಪ್ರಾಪ್ತಿರೂಪ**

## ಶ್ಲೋಕೇನ ಸಂಗೃಹ್ಣಾತಿ.

**ಅಪ್ರಾಪ್ತಿತಃ ಪರಿಹರನ್ ಸ್ವಪರೈಸ್ಸ್ವರಕ್ಷಾಂ ತಾದರ್ಥ್ಯಧೀ ಪರಿಹೃತ**

ಕೈಙ್ಕರ್ಯವನ್ನೂ, ಆ ಕೈಙ್ಕರ್ಯವು ಇಬ್ಬರಿಗೂ ಉದ್ದೇಶ್ಯವು ಎಂಬುದನ್ನು, ಹೇಳಿ, ಇದು ಪ್ರಾರ್ಥನಾರೂಪವಾದುದರಿಂದ **"ಭವೇಯಂ"** ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕೆಂದು ತಿಳಿಸಿ, ಈಗ ನಮಶ್ಶಬ್ದವು ಸಖಂಡವಾಗಿ ಎರಡು ಪದಗಳುಳ್ಳದ್ದಾಗಿ, ನಮಃ ಎಂದರೆ **ಮಮನ, ಮಮನಸ್ಯಾಮ** ಎಂಬರ್ಥವನ್ನು ತಿಳಿಸುವರಾಗಿ, ನನಗೆ ಕೈಙ್ಕರ್ಯವಿರೋಧವು ಆಗಬೇಡವೆಂಬರ್ಥವೆಂದು ಮುಂದೆ ಉಪಪಾದಿಸುವರಾಗಿ, ಹಾಗೆ ಅಭಿಪ್ರಾಯವಾದರೆ ಪ್ರಪನ್ನನಾದ ತನಗೆ ಉಂಟಾಗುವ ಭೋಗಗಳಲ್ಲಿ ಹೇಗೆ ಭಾವನೆ ಇರಬೇಕೆಂಬುದನ್ನು ಈ ಕಾರಿಕೆಯಮೂಲಕ ತಿಳಿಸುತ್ತಾರೆ ವಿರೋಧಿವರ್ಗವು ಮೂರುವಿಧವು; (೧) ರಕ್ಷಣವಿರೋಧಿ, (೨) ಶೇಷತ್ವವಿರೋಧಿ, (೩) ಕೈಙ್ಕರ್ಯವಿರೋಧಿ ಎಂಬದಾಗಿ. ರಕ್ಷಣ ವಿರೋಧಿಯು ತೊಲಗುವದು ಹೇಗೆಂದರೆ? ತನ್ನ ರಕ್ಷಣದಲ್ಲಿ ತನಗೂ ಶಕ್ತಿಯಿಲ್ಲವು, ಇತರರಿಗೂ ಶಕ್ತಿಯಿಲ್ಲವು ಎಂಬ ಅನುಸಂಧಾನದಿಂದ ಪರಿಹರಿಸತಕ್ಕದ್ದಾಗಿರುತ್ತದೆ. ಶೇಷತ್ವ ವಿರೋಧಿಯು ತೊಲಗುವದು ಹೇಗೆಂದರೆ ತಾನು ಶ್ರಿಯಃಪತಿಗೆ ಮಾತ್ರವೇ ಶೇಷಭೂತನು, ಅನ್ಯದೇವತೆಗಳಿಗೆ ಯಾರಿಗೂ ಅಲ್ಲವೆಂಬ ಜ್ಞಾನದಿಂದ; ಕೈಙ್ಕರ್ಯವಿರೋಧಿ ತೊಲಗುವದು ಹೇಗೆಂದರೆ ಈ ಕೈಙ್ಕರ್ಯವು ತನ್ನ ಪ್ರಯೋಜನಕ್ಕೂ ಅಲ್ಲವು; ಇತರರ ಪ್ರಯೋಜನಕ್ಕೂ ಅಲ್ಲವು; ಎಂಬ ಬುದ್ಧಿಯಿಂದ ತೊಲಗುತ್ತದೆ. ಇಂತಹ ಬುದ್ಧಿಯನ್ನು ಹೊಂದಿ ಅನಿಷ್ಟನಿವೃತ್ತಿಯನ್ನು ಮಾಡಿಕೊಂಡು, ತನಗೆ ಉಂಟಾಗುವ ಭೋಗವು ಪರಮಸಾಧ್ವೀಶಿಖಾಮಣಿಯು ಪತಿಭೋಗ ಶೇಷವಾದುದನ್ನೂ ಪತಿಗೆ ಅದೂ ಅತಿಶಯಾವಹವೆಂದೇ ಭಾವಿಸಿದವಳಾಗಿ ಅನುಭವಿಸುವಳೋ ಹಾಗೆಯೇ ಪ್ರಪನ್ನನೂಕೂಡ ಅನುಭವಿಸತಕ್ಕದ್ದೆಂದು ಉಪದೇಶಿಸುತ್ತಾರೆ.—

**ಅರ್ಥ:—ಸ್ವಪರೈಃ**-ತನ್ನಿಂದಲೂ ಮತ್ತು ಇತರರಿಂದಲೂ, **ಸ್ವರಕ್ಷಾಂ**-ತನ್ನ ರಕ್ಷಣೆಯನ್ನು, **ಅಪ್ರಾಪ್ತಿತಃ** - ಹೊಂದುವದಕ್ಕೆ ವಿಘ್ನವಾದ ವಿರೋಧಿಯ ದೆಶೆಯಿಂದ, **ಪರಿಹರನ್**-ತಾನು ಪರಮಾತ್ಮನ ಸ್ವತ್ತಾಗಿ, ಇನ್ನು ಯಾರ ಸ್ವತ್ತೂ ಆಗದೆ, ಅದನ್ನು ರಕ್ಷಿಸುವ ಭಾರವು ಪರಮಾತ್ಮನಿಗೆ ಮಾತ್ರವೇ ಸೇರಿದುದಾಗಿ, ಇನ್ನು ಯಾರಿಗೂ ಸೇರಿದುದಲ್ಲವೆಂಬ ಭಾವನೆಯಿಂದ ಪರಿಹರಿಸುವವನಾಗಿ, ತನ್ನನ್ನು ರಕ್ಷಿಸಿಕೊಳ್ಳಲು ತನಗೂ ಇತರರಿಗೂ ಶಕ್ತಿಯಿಲ್ಲವೆಂಬುದರಿಂದ ಸ್ವರಕ್ಷಣ ವಿರೋಧಿಯು ನಿವೃತ್ತವೆಂಬ ಭಾವವು; **ತಾದರ್ಥ್ಯಧೀ ಪರಿಹೃತ ಸ್ವಪರಾರ್ಥಭಾವಃ**- ಶೇಷತ್ವ ವಿರೋಧಿಯು ತೊಲಗುವದನ್ನು ಹೇಳುತ್ತಾರೆ. **ತಾದರ್ಥ್ಯಧೀ**-ಶ್ರೀಮತೇ ನಾರಾಯಣಾಯ ಎಂಬೆರಡು ಪದಗಳಲ್ಲಿರುವ ಚತುರ್ಥೀ ವಿಭಕ್ತಿಯಿಂದ ಅವರುಗಳಿಗೆ ಶೇಷಭೂತನೆಂಬ ಜ್ಞಾನದಿಂದ, **ಪರಿಹೃತ**-ನಿವರ್ತಿಸಲ್ಪಟ್ಟ, **ಸ್ವಪರಾರ್ಥ**

**ಸ್ವಪರಾರ್ಥಭಾವಃ । ಅನ್ಯೋಪಭೋಗ ವಿರಹಾದನಘಃ ಪ್ರಪನ್ನೋ ಭುಙ್ಕ್ತೇ ಸ್ವಭೋಗ ಮಖಿಲಂ ಪತಿಭೋಗಶೇಷಮ್. ॥ ೧೦೩ ॥**

**ಇನ್ನಮುಸ್ಸುಕ್ಕುಮ್ ಕ್ರಿಯಾಪದಮ್ ಅಧ್ಯಾಹರಿತ್ತುಕ್ಕೊಳ್ಳವೇಣುಮ್ ; "ನಮುಮಸ್ಯಾಮ್" ಎನ್ರದು. "ಎನಕ್ಕಾನೇನಲ್ಲೇ" ಎನ್ರ**

---

**ಭಾವಃ**-ತನಗೂ ಇತರರಿಗೂ ತಾನು ಎಂಬ ಭಾವವುಳ್ಳವನಾಗಿ ಎಂದರೆ ತನಗಾಗಲಿ ಇತರರಿಗಾಗಲಿ ಶೇಷಭೂತನೆಂಬ ಭಾವವು ನಿವರ್ತಿಸಲ್ಪಟ್ಟವನಾಗಿ, ಮುಂದೆ ಕೈಂಕರ್ಯ ವಿರೋಧಿ ನಿವೃತ್ತಿಯು ಹೇಳಲ್ಪಡುತ್ತದೆ. **ಅನ್ಯೋಪಭೋಗವಿರಹಾತ್**-ಇತರಗಳಾದ ಐಶ್ವರ್ಯಕೈವಲ್ಯರೂಪ ಉಪಭೋಗಗಳಲ್ಲಿ ಭಾವವಿಲ್ಲದುದರಿಂದ, ಪತಿಶೇಷಭೋಗವಲ್ಲದೆ ಬೇರೆ ಇನ್ನು ಯಾವ ಭೋಗವೂ ಇಲ್ಲವಾದುದರಿಂದ ಎಂಬ ಭಾವವು. ಹೀಗೆ, **ಅನಘಃ ಪ್ರಪನ್ನಃ**-ಈ ಮೂರು ವಿಧ ಅನಿಷ್ಟ ನಿವೃತ್ತಿಯಿಂದ ಪರಿಶುದ್ಧನಾಗಿ ಪ್ರಪನ್ನನು, **ಸ್ವಭೋಗಮಖಿಲಮ್** - ತನಗೆ ಶೇಷಿದತ್ತವಾದ ಭೋಗವನ್ನೆಲ್ಲಾ, **ಪತಿಭೋಗಶೇಷಮ್** - ತನಗೆ ಪತಿಯಾದ ಶ್ರಿಯಃಪತಿಯು ಅನುಭವಿಸಿದ ಭೋಗ ಶೇಷವನ್ನಾಗಿ ಮಹಾಪತಿವ್ರತಾಶಿರೋಮಣಿಯು ಹೇಗೆ ಪತಿಯು ಅನುಭವಿಸಿ ಮಿಕ್ಕ ಭೋಗಗಳನ್ನು ಆ ಪತಿಯ ಪ್ರಯೋಜನಕ್ಕಾಗಿಯೇ ಎಂದು ಹೇಗೆ ಭಾವಿಸುವಳೋ, ಹಾಗೆ **ಭುಙ್ಕ್ತೇ** - ಅನುಭವಿಸುವನು ಸ್ವಪ್ರಯೋಜನಕ್ಕಾಗಿ ಎಂದು ಯಾವ ಭೋಗವನ್ನು ಅನುಭವಿಸುವದಿಲ್ಲವೆಂಬ ಭಾವವು. ಕೈಂಕರ್ಯ ಮಾಡುವದರಲ್ಲಿ ತನಗೊಂದು ಪ್ರಯೋಜನ ಉಂಟೆಂಬ ಭಾವವು ಕೂಡದೆಂಬುದು ತಾತ್ಪರ್ಯವು. ಆದುದರಿಂದ ಅನಿಷ್ಟನಿವೃತ್ತಿಯು ಹೇಗೆ ಎಂದರೆ (೧) ತನ್ನನ್ನು ರಕ್ಷಿಸಲು, ತನಗೂ ಶಕ್ತಿಯಿಲ್ಲವು, ಇತರರಿಗೂ ಶಕ್ತಿಯಿಲ್ಲವು ಎಂಬ ಜ್ಞಾನದಿಂದ, ಸ್ವರಕ್ಷಣವಿರೋಧಿಯನ್ನೂ, (೨) ತಾನು ತನಗೂ ಇತರರಿಗೆ ಶೇಷನಲ್ಲವು ಎಂಬುದರಿಂದ ಸ್ವಶೇಷತ್ವ ವಿರೋಧಿಯನ್ನೂ (೩) ಕೈಙ್ಕರ್ಯವು ತನಗೂ ಅಲ್ಲವು ಇತರರಿಗೂ ಅಲ್ಲವು, ತನ್ನ ಸ್ವಾಮಿಗೇ ಎಂಬುದರಿಂದ ಕೈಙ್ಕರ್ಯವಿರೋಧಿಯನ್ನೂ ನಿವರ್ತಿಸತಕ್ಕದ್ದು. ಇದೇ ನಖಂಡ ನಮಸ್ಸಿನಿಂದ, **ಮಮನ** ಎಂಬರ್ಥದಿಂದ ಉಂಟಾಗುತ್ತದೆಂದು ಹೇಳಿದರು. ಇದು ಹಿಂದೆಯೇ ಉಪಪಾದಿತವು.

ಹಿಂದೆ **ನಾರಾಯಣಾಯ** ಎಂಬಲ್ಲಿ **ಭವೇಯಂ** ಎಂಬ ಕ್ರಿಯಾಪದವನ್ನು ಹೇಗೆ ಅಧ್ಯಾಹಾರಮಾಡಿಕೊಂಡಿತೋ, ಹಾಗೆಯೇ **ನಮಃ** ಎಂಬುದರಿಂದ ಮುಂದೆ "**ಸ್ಯಾಮ್**" ಎಂಬ ಕ್ರಿಯಾಪದವನ್ನು ಅಧ್ಯಾಹಾರಮಾಡಿಕೊಳ್ಳತಕ್ಕದ್ದಾಗಿರುತ್ತದೆಂದು ಉಪದೇಶಿಸುತ್ತಾರೆ. ಇಲ್ಲದಿದ್ದರೆ ವಾಕ್ಯವು ಪೂರ್ಣವಾಗುವುದಿಲ್ಲವು. **ಇನ್ನಮುಸ್ಸುಕ್ಕುಮ್-ಮಃನ** ಎಂದರೆ **ಮಮನ** ಎಂಬರ್ಥವುಳ್ಳ ನಮಶ್ಶಬ್ದಕ್ಕೆ, **ಕ್ರಿಯಾಪದಮ್**—ಕ್ರಿಯಾಪದವನ್ನು, **ಅಧ್ಯಾಹರಿತ್ತುಕ್ಕೊಳ್ಳವೇಣುಮ್**—ಅಧ್ಯಾಹಾರಮಾಡಿಕೊಳ್ಳತಕ್ಕದ್ದಾಗಿರುತ್ತದೆ. ಅದು ಯಾವುದೆಂದರೆ ತಿಳಿಸುತ್ತಾರೆ.

**೫೮. "ನಮಮಕಿಂಚಿತ್ಸ್ಯಾತ್" ಎನ್ರು ಸರ್ವವಿಷಯ ಮಮಕಾರ ನಿವೃತ್ತಿ ಮುಖತ್ತಾಲೆ ಸರ್ವಾನಿಷ್ಟ ನಿವೃತ್ತಿಯ್ಯೈ ಪ್ರಾರ್ಥಿಕ್ಕಿರದಾಗವು ಮಾಮ್**

---

**"ನಮಮಸ್ಯಾಮ್" ಎನ್ರದು**-ನಮಮ ಎಂಬುದಕ್ಕೆ **"ಸ್ಯಾಮ್"** ಎಂಬ ಕ್ರಿಯಾಪದವನ್ನು ಸೇರಿಸಿ ಹೇಳುವದು, **"ಎನಕ್ಕಾವೇನಲ್ಲೇ"** ನನಗಾಗಿಯೇ ಯಾವುದೂ ಇಲ್ಲವು, ನಾನು ಮಾಡುವ ಕೈಙ್ಕರ್ಯವು ಯಾವುದೂ ನನ್ನ ಪ್ರಯೋಜನಕ್ಕಾಗಿ ಇಲ್ಲವು. ಅಥವಾ ಇನ್ನೊಂದು ವಿಧವಾಗಿಯೂ ಕ್ರಿಯಾಪದವನ್ನು ಅಧ್ಯಾಹಾರಮಾಡಿಕೊಳ್ಳಬಹುದು. ಹೇಗೆಂದರೆ ತಿಳಿಸುತ್ತಾರೆ. **ನಮಮಕಿಂಚಿತ್ಸ್ಯಾತ್** ನನ್ನ ಪ್ರಯೋಜನಕ್ಕಾಗಿ ಸ್ವಲ್ಪವೂ ಆಗುವುದಿಲ್ಲವು, **ಎನ್ರು**-ಎಂಬದಾಗಿ, **ಸರ್ವವಿಷಯಮಮಕಾರ ನಿವೃತ್ತಿಮುಖತ್ತಾಲೇ**-ಸಮಸ್ತ ವಿಷಯವಾದ ಮಮಕಾರದ ನಿವೃತ್ತಿಮೂಲಕವಾಗಿ ಎಂದರೆ ತನ್ನ ಮತ್ತು ತನಗೆ ಸಂಬಂಧಿಸಿದ ಮಮಕಾರ ನಿವೃತ್ತಿಗಾಗಿ, **ಸರ್ವಾನಿಷ್ಟನಿವೃತ್ತಿಯ್ಯೈ**—ಸಮಸ್ತ ಅನಿಷ್ಟ ನಿವೃತ್ತಿಯನ್ನು, **ಪ್ರಾರ್ಥಿಕ್ಕಿರದಾಗವುಮಾಮ್**-ನಮಶ್ಶಬ್ದದಿಂದ ಪ್ರಾರ್ಥಿಸೋಣ ವಾಗುತ್ತದೆ; ಅಥವಾ ಎರಡು ಯೋಜನೆಯನ್ನು ಭಾವಿಸಬಹುದು. ಮೊದಲಿನ ಯೋಜನೆಯಾದ **"ನಮಮಸ್ಯಾಮ್"** ಎಂಬುದರಿಂದ ಅಹಂಕಾರನಿವೃತ್ತಿಯು; ಹೀಗೆ ಎರಡು ವಿಧಗಳಾದ ಅನಿಷ್ಟನಿವೃತ್ತಿಯನ್ನೂ ನಮಶ್ಶಬ್ದದಿಂದ ಅನುಸಂಧಾನ ಮಾಡತಕ್ಕದ್ದಾಗಿರುತ್ತದೆ. ಯಾವಾಗ ಅನಿಷ್ಟವು ಕಳೆದು ಹೋಯಿತೋ, ಆಗ ಇಷ್ಟಪ್ರಾಪ್ತಿಯು ಉಂಟಾದಹಾಗೆ ಆಯಿತು. **"ಯಥಾ ನ ಕ್ರಿಯತೇಜ್ಯೋತ್ಸ್ನಾಮಲಪ್ರಕ್ಷಾಳನಾನ್ಮಣೇಃ । ದೋಷಪ್ರಹಾಣಾನ್ನಜ್ಞಾನಮಾತ್ಮನಃ ಕ್ರಿಯತೇ ತಥಾ"** ಎಂಬಲ್ಲಿ ರತ್ನವು ಕೆಸರಲ್ಲಿ ಬಿದ್ದು ಅದರಪ್ರಕಾಶಕ್ಕೆ ಅನಿಷ್ಟ ಸಂಬಂಧವುಂಟಾಯಿತು. ಅದನ್ನು ತೊಳೆಯುವದರ ಮೂಲಕ ಅನಿಷ್ಟವಾದ ಕೆಸರಿನ ಲೇಪನವು ತೊಲಗಿದರೆ, ಮೊದಲಿದ್ದ ಕಾನ್ತಿಯು ಸ್ವತಃ ಪ್ರಕಾಶಿಸುತ್ತದೆ. ಹಾಗೆಯೇ ಇಲ್ಲೂ ಅನಿಷ್ಟ ನಿವೃತ್ತಿಯಾವಾಗ ಆಯಿತೋ, ಇಷ್ಟಪ್ರಾಪ್ತಿಯು ತಾನಾಗಿಯೇ ಉಂಟಾಗುತ್ತದೆ. ಹೀಗಿರುವಾಗ ಎರಡು ಪ್ರಾರ್ಥನೆಗಳು ಏತಕ್ಕೆ? ನಮ್ಮ ಸಿದ್ಧಾನ್ತರೀತ್ಯಾ ಅಭಾವವೆಂದರೆ ಭಾವಾನ್ತರವು; ಆದುದರಿಂದ ಅನಿಷ್ಟನಿವೃತ್ತಿಯಿಂದ ಬೇರೆ ಅವಸ್ಥಾಪ್ರಾಪ್ತಿಯಾದ ಇಷ್ಟಪ್ರಾಪ್ತಿಯೇ ಭಾವ್ಯವು. ಆದುದರಿಂದ ಪುನರುಕ್ತಿದೋಷ ಉಂಟಾಗುವದಿಲ್ಲವೋ? ಎಂದರೆ ಈ ಪೂರ್ವಪಕ್ಷವು ಹಿಂದೆ ಮೂಲಮನ್ತ್ರಾಧಿಕಾರದಲ್ಲೇ ಮಾಡಲ್ಪಟ್ಟು, ಅದಕ್ಕೆ ಸಮಾಧಾನವನ್ನು ಅಲ್ಲಿಯೇ ಹೇಳಿರುವದರಿಂದ ಅದನ್ನೇ ಅವಲೋಕಿಸತಕ್ಕದ್ದೆಂದು ಮುಂದಿನವಾಕ್ಯದಿಂದ ತಿಳಿಸುತ್ತಾರೆ.—**ತಿರುಮನ್ತ್ರತ್ತಿಲ್**-ಮೂಲಮಂತ್ರದಲ್ಲಿ, **ಇಷ್ಟಪ್ರಾಪ್ತ್ಯನಿಷ್ಟನಿವೃತ್ತಿಗಳಿಲ್ಕೊನ್ನ** ಚತುರ್ಥಿನಮಶ್ಶಬ್ದಗಳಲ್ಲಿ ತೋರುವ ಇಷ್ಟಪ್ರಾಪ್ತಿ ಅನಿಷ್ಟನಿವೃತ್ತಿಗಳ ವಿಷಯವಾಗಿ ಹೇಳಲ್ಪಟ್ಟ, **ಚೋದ್ಯಪರಿಹಾರಙ್ಗಳ್**-ಪೂರ್ವಪಕ್ಷ ಮತ್ತು ಅದಕ್ಕೆ

**ತಿರುಮನ್ತ್ರತ್ತಿಲ್ ಇಷ್ಟಪ್ರಾಪ್ತ್ಯನಿಷ್ಟನಿವೃತ್ತಿಗಳಿಲ್ಲೊನ್ನ ಚೋದ್ಯಪರಿಹಾರಙ್ಗಳ್ ಇಙ್ಗುಮ್ ಅನುಸನ್ಧಿತ್ತುಕ್ಕೊಳ್ವದು.**

**ಅಥ ನಮಶ್ಶಬ್ದೇನ ಪ್ರಾರ್ಥಿತಾನಿಷ್ಟನಿವೃತ್ತೌ ಪ್ರಧಾನ ತಾತ್ಪರ್ಯಮಾಹ.**

---

**ಇನ್ನಮಶ್ಶಬ್ದತ್ತಾಲೇ ಅವಿದ್ಯಾಕರ್ಮತದುಭಯ ವಾಸನಾರುಚಿ ಪ್ರಕೃತಿಸಂಬಂಧಾದಿರೂಪಙ್ಗಳಾನ ಸರ್ವವಿರೋಧಿಹಳ್ಳೈಯುಮ್ ಕಳಿಯಾ ನಿರ್ಕಚ್ಚೇಯ್‌ದೇ, ಇದಕ್ಕು ನಿರ್ವಚನಂ ಪಣ್ಣುಗಿರ ಶ್ರುತಿಯಿನ್‌ಪಡಿಯೇ ಪರಿಪೂರ್ಣಕೈಙ್ಕರ್ಯರೂಪಫಲದಶೈಯಿಲ್ ಫಲಾನ್ತರಾನುಭವ ನ್ಯಾಯತ್ತಾಲೇ**

---

ಪರಿಹಾರವಾದ ಸಿದ್ಧಾನ್ತಗಳನ್ನು, **ಇಙ್ಗುಮ್**-ಈ ಸಂದರ್ಭದಲ್ಲೂ, **ಅನುಸನ್ಧಿತ್ತುಕ್ಕೊಳ್ವದು** - ಅನುಸಂಧಾನಮಾಡಿಕೊಳ್ಳತಕ್ಕದ್ದು. ೩೩೬ನೆಯ ಪುಟಗಳನ್ನು ನೋಡಿ.

ಮುಂದೆ ನಮಶ್ಶಬ್ದದಿಂದ ಪ್ರಾರ್ಥಿಸಲ್ಪಟ್ಟ ಅನಿಷ್ಟನಿವೃತ್ತಿಯಲ್ಲಿ ಪ್ರಧಾನತಾತ್ಪರ್ಯವನ್ನು ಹೇಳುತ್ತಾರೆ.

---

ಈ ಪ್ರಪನ್ನನಿಗೆ ಮುಕ್ತಿದೆಶೆಯಲ್ಲಿ ಉಂಟಾಗುವ ಕೈಂಕರ್ಯಪ್ರಾಪ್ತಿಯಲ್ಲಿ ನಮಶ್ಶಬ್ದದಿಂದ ಪ್ರಧಾನಗಳಾದ ನಾಲ್ಕು ಭ್ರಮದೋಷಗಳ ನಿವೃತ್ತಿಯನ್ನೂ ಪ್ರಾರ್ಥಿಸತಕ್ಕದ್ದು. ಅವು ಯಾವುವೆಂದರೆ ಈ ಕೈಙ್ಕರ್ಯದ ವಿಷಯದಲ್ಲಿ (೧) ಸ್ವಾಧೀನಕರ್ತೃತ್ವ, ಸ್ವಾರ್ಥಕರ್ತೃತ್ವ, ಸ್ವಾಧೀನ ಭೋಕ್ತೃತ್ವ, ಸ್ವಾರ್ಥಭೋಕ್ತೃತ್ವರೂಪಭ್ರಮನಿವೃತ್ತಿಗಳು ಮುಖ್ಯವಾಗಿ ಇರಬೇಕಾದ ಅನುಸಂಧಾನವಿರತಕ್ಕದ್ದೆಂದು ಉಪದೇಶಿಸುತ್ತಾರೆ—**ಇನ್ನಮಶ್ಶಬ್ದತ್ತಾಲೇ**-ಈ ನಮಶ್ಶಬ್ದದಿಂದ, **ಅವಿದ್ಯಾಕರ್ಮ**-ಅಜ್ಞಾನವೇನು, ಪಾಪಪುಣ್ಯರೂಪಕರ್ಮವೇನು, **ತದುಭಯವಾಸನಾ**-ಅವೆರಡರಿಂದುಂಟಾಗುವ ವಾಸನಾಯೇನು, **ರುಚಿ**-ಪ್ರಾಕೃತ ಪದಾರ್ಥಗಳಲ್ಲಿ ಅಭಿರುಚಿಯೇನು, **ಪ್ರಕೃತಿಸಂಬಂಧಾದಿರೂಪಙ್ಗಳಾನ**—ಪ್ರಕೃತಿಸಂಬಂಧವೇ ಮೊದಲಾದವುಗಳೇನು, **ಸರ್ವವಿರೋಧಿಗಳೈಯುಮ್**-ಹೀಗೆ ಎಲ್ಲಾ ವಿರೋಧಿವರ್ಗವು, **ಕಳಿಯಾನಿರ್ಕಚೇಯ್‌ದೇ**-ಈತನಿಗೆ ಮುಕ್ತದೆಶೆಯಲ್ಲಿ ಕಳೆದುಹೋಗುವಾಗ, **ಇದುಕ್ಕು**-ಇಲ್ಲಿನ ನಮಶ್ಶಬ್ದಕ್ಕೆ, **ನಿರ್ವಚನಮ್ಪಣ್ಣುಗಿರ**-ವ್ಯುತ್ಪತ್ತಿಮೂಲಕ ಅರ್ಥನಿರ್ಣಯವನ್ನು ಮಾಡುವ, **ಶ್ರುತಿಯಿನ್ಪಡಿಯೇ**-ಶ್ರುತಿಯಲ್ಲಿ ಹೇಳಿರುವಹಾಗೆ, **ಪರಿಪೂರ್ಣಕೈಙ್ಕರ್ಯರೂಪಫಲದಶೈಯಿಲ್**-ಮೋಕ್ಷಪ್ರಾಪ್ತಿರೂಪವಾದ ಪರಿಪೂರ್ಣಬ್ರಹ್ಮಾನುಭವದಿಂದ ಕೂಡಿದ ಶ್ರಿಯಃಪತಿಗೆ ಕೈಙ್ಕರ್ಯವನ್ನು ಮಾಡುವ ಫಲದೆಶೆಯಲ್ಲಿ, **ಫಲಾನ್ತರಾನುಭವನ್ಯಾಯತ್ತಾಲೇ**-ಇತರಫಲಗಳಾದ **ಐಶ್ವರ್ಯಾದಿಗಳನ್ನು** ಅನುಭವಿಸುವ ಕಾಲದಲ್ಲಿ ಹೇಗೆ

**ಶಙ್ಕಿತಮಾನ ಸ್ವಾಧೀನಸ್ವಾರ್ಥಕರ್ತೃತ್ವಸ್ವಾಧೀನ ಸ್ವಾರ್ಥ ಭೋಕ್ತೃತ್ವ ಮಾಗಿರ ಕಳ್ಳೈಗಳ್ಳೈಕ್ಕಳಿಕ್ಕೈಯಿಲೇ ಇಙ್ಗು ಪ್ರಧಾನ ತಾತ್ಪರ್ಯಮ್ ಎನ್ರು ಅನುಸನ್ಧಿಪ್ಪಾರ್ಗಳ್. ಇತ್ತಾಲ್ ಫಲಾನ್ತರದಶೈಯಿಲುಣ್ಡಾಮ್ ಸ್ವಾಧೀನ ಸ್ವಾರ್ಥ ಕರ್ತೃತ್ವ ಭೋಕ್ತೃತ್ವ ಭ್ರಮಙ್ಗಳ್ ಮುಕ್ತದಶೈಯಿಲ್ ಕೈಙ್ಕರ್ಯತ್ತಿಲ್ ಇಲ್ಲಾದಪಡಿಕಣ್ಡು ಅಕ್ಕಟ್ಟಳೈಯಿಲ್ ಪ್ರಾರ್ಥಿಕ್ಕಿರಾನೆನ್ರದಾಯಿತ್ತು.**

---

ಉಂಟಾಗುತ್ತದೋ, ಅಂತಹನ್ಯಾಯದಿಂದ **ಶಂಕಿತಮಾನ**-ಭ್ರಮಗಳುಂಟಾಗುತ್ತ ವೆಂದು ಶಂಕಿಸಲ್ಪಟ್ಟ, **ಸ್ವಾಧೀನಸ್ವಾರ್ಥಕರ್ತೃತ್ವ**-ಸ್ವಾಧೀನಕರ್ತೃತ್ವ, ಸ್ವಾರ್ಥ ಕರ್ತೃತ್ವವೆಂದರೆ ಈ ಕೈಙ್ಕರ್ಯವು ತನ್ನ ಅಧೀನವಾದುದೆಂಬ, ಮತ್ತು ತನ್ನ ಪ್ರಯೋಜನಕ್ಕಾಗಿ ಈ ಕೈಙ್ಕರ್ಯದಲ್ಲಿ ಕರ್ತೃತ್ವವೆಂದೂ, ಮತ್ತು **ಸ್ವಾಧೀನ ಸ್ವಾರ್ಥಭೋಕ್ತೃತ್ವಂ**-ಈ ಕೈಙ್ಕರ್ಯದ ಭೋಕ್ತೃತ್ವವು ತನಗೆ ಅಧೀನವಾದು ದೆಂದೂ ಮತ್ತು ಈ ಭೋಕ್ತೃತ್ವವು ತನ್ನ ಪ್ರಯೋಜನಕ್ಕಾಗಿ ಎಂದೂ, **ಆಗಿರ ಕಳ್ಳೈಗಳ್ಳೈ**-ಒಳ್ಳೇಫಲರೂಪವಾದ ಬೆಳೆಯಲ್ಲಿರುವ ಕಳೆಗಳಹಾಗಿರುವ ಈ ಭ್ರಮ ರೂಪದೋಷಗಳನ್ನು, **ಕಳಿಕ್ಕೈಯಿಲೇ**-ನಿವೃತ್ತಿಸುವದರಲ್ಲಿ, ಹೋಗಲಾಡಿಸು ವದರಲ್ಲಿ, **ಇಙ್ಗು**-ಈ ನಮಶ್ಶಬ್ದಾರ್ಥಾನುಸಂಧಾನದಲ್ಲಿ, **ಪ್ರಧಾನತಾತ್ಪರ್ಯಮ್**-ಮುಖ್ಯವಾದ ಅಭಿಪ್ರಾಯವು, **ಎನ್ರು ಅನುಸಂಧಿಪ್ಪಾರ್ಗಳ್**-ಎಂದು ಪ್ರಾಜ್ಞರು ಅನುಸಂಧಾನಮಾಡುವರು. ಈ ನಮಶ್ಶಬ್ದದಿಂದ ಅನಿಷ್ಟ ನಿವೃತ್ತಿ ಯನ್ನು ಅನುಸಂಧಾನಮಾಡುವಾಗ ತನಗೆ ಮುಂದೆ ಶ್ರಿಯಃಪತಿಯ ಅನುಗ್ರಹ ದಿಂದ ಪ್ರಾಪ್ತವಾಗುವ ಪರಿಪೂರ್ಣಬ್ರಹ್ಮಾನುಭವದೊಂದಿಗೆ ನಿತ್ಯ ಕೈಙ್ಕರ್ಯ ವನ್ನು ಮಾಡುವ ಸಂದರ್ಭದಲ್ಲಿ ನಾಲ್ಕರನಿವೃತ್ತಿಯು ಪ್ರಧಾನವಾಗಿರತಕ್ಕದ್ದು:- (೧) ಸ್ವಾಧೀನ ಕರ್ತೃತ್ವ, (೨) ಸ್ವಾರ್ಥಕರ್ತೃತ್ವ, (೩) ಸ್ವಾಧೀನಭೋಕ್ತೃತ್ವ, (೪) ಸ್ವಾರ್ಥಭೋಕ್ತೃತ್ವ ಈ ನಾಲ್ಕುವಿಧ ಅನಿಷ್ಟಗಳ ನಿವೃತ್ತಿಯ ಅನುಸನ್ಧಾನವು ಮುಖ್ಯವಾಗಿರತಕ್ಕದ್ದೆಂಬ ಭಾವವು. ಇದನ್ನೇ ಮುಂದಿನ ವಾಕ್ಯದಿಂದ ವ್ಯಕ್ತಪಡಿ ಸುತ್ತಾರೆ. ಹಾಗೆ ವ್ಯಕ್ತಪಡಿಸುವ ಸಂದರ್ಭದಲ್ಲಿ ಮೋಕ್ಷದೆಶೆಯಲ್ಲಿ ಅಂತಹ ಭ್ರಮ ರೂಪಕ್ಕೆ ಅವಕಾಶವೇ ಇಲ್ಲವಲ್ಲಾ? ಎಂದರೆ ಅಂತಹ ಅನಿಷ್ಟ ನಿವೃತ್ತಿ ಪ್ರಾರ್ಥನೆಯಿಂದ ಅಂತಹ ದೇಶವಿಶೇಷದಲ್ಲಿ ಇಂತಹ ದೋಷರಹಿತವಾದ ನಿರತಿ ಶಯಕೈಙ್ಕರ್ಯವು ಫಲಿತವೆಂದು ಹೇಳುತ್ತಾರೆ.—**ಇತ್ತಾಲ್**-ಇಂತಹ ಅನುಸಂಧಾನ ದಿಂದ **ಫಲಾನ್ತರಾನುಭವದಶೈಯಿಲ್**-ಮೋಕ್ಷವಲ್ಲದ ಐಶ್ವರ್ಯಾದಿ ಬೇರೇ ಫಲದ ದೆಶೆಯಲ್ಲಿ, **ಉಣ್ಡಾಮ್**-ಉಂಟಾಗಬಹುದಾದ, ಸ್ವಾಧೀನಕರ್ತೃತ್ವ, ಸ್ವಾರ್ಥ ಕರ್ತೃತ್ವ, ಸ್ವಾಧೀನಭೋಕ್ತೃತ್ವ, ಸ್ವಾರ್ಥಭೋಕ್ತೃತ್ವರೂಪ ಭ್ರಮಗಳು, **ಮುಕ್ತದಶೈಯಿಲ್ ಕೈಙ್ಕರ್ಯತ್ತಿಲ್**-ಮುಕ್ತದೆಶೆಯಲ್ಲಿ ಉಂಟಾಗುವ ಕೈಙ್ಕರ್ಯ ದಲ್ಲಿ, **ಇಲ್ಲಾದಪಡಿಕಣ್ಡು**-ಇಲ್ಲದಿರುವದನ್ನು ಅರಿತು, **ಅಕ್ಕಟ್ಟಳೈಯಿಲ್**-

## ಅರುಳಾಳ್ ಪೆರುಮಾಳೆಂಬೆರುಮಾನಾರ್ಯಸ್ಯ ದ್ವಯಾರ್ಥಮಾಹ

**" ಪರಮಾತ್ಮನಿ ನಾರಾಣಾಂ ಸರ್ವಭಾರಸಮರ್ಪಣಾತ್ । ಸಂಜಾತಂ ನೈರಪೇಕ್ಷ್ಯಂತು ನಮ ಇತ್ಯುಚ್ಯತೇ ಬುಧೈಃ "** ಎನ್ರು ಇಜ್ಜುಗತ್ತೈ ನಮ ಬೋಧಿತವಾಗಿರುವ ಪ್ರಕಾರ ಹೀಗೆ **ಪ್ರಾರ್ಥಿಕ್ಕಿರಾ-**ಚತುರ್ಥಿಯಿಂದ ಈ ವಿಧವಾದ ಇಷ್ಟಪ್ರಾಪ್ತಿಯನ್ನೂ, **ನಮಃ**-ಎಂಬುದರಿಂದ ಈ ವಿಧವಾದ ಅನಿಷ್ಟ ನಿವೃತ್ತಿಯನ್ನೂ ಪ್ರಾರ್ಥಿಸುತ್ತಾನೆ, **ಎನ್ರದಾಯಿತ್ತು**-ಎಂದು ಹೇಳಿದಂತಾಯಿತು. ಎಂದರೆ ಮುಕ್ತಿದೆಶೆಯಲ್ಲಿ ಈ ಉಪಾಯಾನುಷ್ಠಾನದ ಮೂಲಕ ಐಶ್ವರ್ಯಾದಿ ಪ್ರಾಪ್ತಿಗಳ ಸಮಯದಲ್ಲಿ ಉಂಟಾಗಬಹುದಾದ ಈ ನಾಲ್ಕುವಿಧ ಭ್ರಮಗಳೂ, ಇಲ್ಲದಹಾಗೆ, ಪರಮಫಲವಾದ ಪರಿಪೂರ್ಣಬ್ರಹ್ಮಾನುಭವದೊಂದಿಗೆ ಇಂತಹ ನಿರತಿಶಯ ಕೈಙ್ಕರ್ಯವನ್ನು ಯಾವಾಗಲೂ ಮಾಡುವ ಹಾಗೆ ಅನುಗ್ರಹಿಸಬೇಕೆಂಬ ಪ್ರಾರ್ಥನೆಯು ಈ ಚತುರ್ಥೀ ಮತ್ತು ನಮಸ್ಸುಗಳಿಂದ ತೋರಿಬರುತ್ತದೆಂಬುದು ತಾತ್ಪರ್ಯವು. ಹೀಗೆ ಹೇಳುವ ಶ್ರುತಿಯು ಯಾವುದೆಂದರೆ **"ಯಾಃ ಕಾಶ್ಚನ ಕೃಕಯೋ ಮಮ ಭಗವತಿ, ಮಮತಾ ನಾಸ್ತಿ ತಾಸು ಭಗವತ ಏವ ತಾಃ; ನಮಮಾಹಮಸ್ಮಿ ಭಗವತ ಏವಾಹಮಸ್ಮಿ"** ಎಂಬುದು.

ಮುಂದೆ ಪರಮಭಾಗವತೋತ್ತಮರಾದ ಅರುಳಾಳಪ್ಪೆರುಮಾಳೆಮ್ಬೆರುಮಾನರವರು ದಯಪಾಲಿಸಿದ ಈ ನಮಶ್ಶಬ್ದಕ್ಕೆ ಯೋಜನಾಂತರವನ್ನು ತಿಳಿಸುತ್ತಾರೆ. ಇವರು ಯಾರು ಎಂಬುದಕ್ಕೆ ನೆಯ ಪುಟವನ್ನು ನೋಡಿ. ಈ ಮಹನೀಯರು ನಮಶ್ಶಬ್ದವು ಸ್ವನೈರ್ಭರ್ಯಪರವೆಂದು ಅರ್ಥಮಾಡಿರುತ್ತಾರೆ. ಅದು ಹೇಗೆಂದರೆ–ಪೂರ್ವಖಂಡದಲ್ಲಿ ಈ ಉಪಾಯವು ಈ ಅಂಗಪಂಚಕಗಳಿಂದ ಯುಕ್ತವಾದುದೆಂದು ಇಷ್ಟುಮಾತ್ರವೇ ಬೋಧಿತವೆಂದೂ, ಉತ್ತರಖಂಡದಲ್ಲಿ ಸ್ವರೂಪಾದಿ ಸಮರ್ಪಣವು ಬೋಧಿತವೆಂದೂ ಅಭಿಪ್ರಾಯಪಡುತ್ತಾರೆ. ಅವರ ದಿವ್ಯಸೂಕ್ತಿಯನ್ನು ಉದಾಹರಿಸುತ್ತಾರೆ.

ಅರುಳಾಳ್ ಪೆರುಮಾಳ್ ಎಂಬರುಮಾನಾರ್ರವರ ದ್ವಯಾರ್ಥವು.

---

**"ಪರಮಾತ್ಮನಿ**-ಶ್ರಿಯಃಪತಿಯಲ್ಲಿ, **ನಾರಾಣಾಂ**-ಮೋಕ್ಷಾರ್ಥಿಗಳಾದ ಸಮಸ್ತ ಚೇತನರ, **ಸರ್ವಭಾರ ಸಮರ್ಪಣಾತ್**-ರಕ್ಷಣದ ಸಮಸ್ತ ಭಾರವನ್ನು ಸಮರ್ಪಿಸುವದರಿಂದ, ಇಷ್ಟಪ್ರಾಪ್ತ್ಯನಿಷ್ಟನಿವೃತ್ತಿಯ ವಿಷಯವಾದ ಸರ್ವ ಭರಸಮರ್ಪಣೆಯಿಂದ ಎಂಬ ಭಾವವು. **ಸಂಜಾತಂ**-ಉತ್ಪನ್ನವಾದ, **ನೈರಪೇಕ್ಷ್ಯಂತು**-ಇನ್ನು ಯಾವುದರ ಅಪೇಕ್ಷೆಯಿಲ್ಲದಿರೋಣವಾದರೋ, **ನಮ ಇತಿ**-ನಮಃ ಎಂಬದಾಗಿ ಎಂದರೆ **ಮಮನ**-ನನಗೆ ಇನ್ನು ಯಾವುದರ ಅಪೇಕ್ಷೆಯೂ ಇಲ್ಲವೆಂದು, **ಇಜ್ಜುಗತ್ತೈ ನಮಸ್ಸೈ**-ಈ ಉತ್ತರಖಂಡದಲ್ಲಿರುವ ನಮಶ್ಶಬ್ದವನ್ನು, **ಅರುಳಾಳ**

**ಸ್ಸೈ ಅರುಳಾಳಪ್ಪೆರುಮಾಳ್ ಎಂಬೆರುಮಾನಾರ್ ವ್ಯಾಖ್ಯಾನಮ್ ಪಣ್ಣಿನಾರ್. ಇನ್ದ ಶ್ಲೋಕತ್ತಿರ್ ಚೊನ್ನ ನೈರಪೇಕ್ಷ್ಯಮ್, ಸ್ವರಕ್ಷಣತ್ತಿಲ್ ನಿರ್ಭರತ್ವಮ್. ಇನ್ದ ನಿರ್ಭರತ್ವತ್ತಾಲೇ ಭರಸಮರ್ಪಣಮ್ ಸೂಚಿತಮಾದಲ್ ಸ್ವನಿರ್ಭರತ್ವಪರ್ಯನ್ತಮಾನ ಭರಸಮರ್ಪಣಂ ಇಪ್ಪಿಡತ್ತಿಲೇ ವಿವಕ್ಷಿತಮಾದಲಾಗಕ್ಕಡವದು. ಹವಿಸ್ಸಮರ್ಪಣತ್ತಿಲ್, "ಇದಮಿನ್ದ್ರಾಯ ನಮಮ" ಎನ್ನುಮಾಪ್ಪೋಲೆ "ಅಹಂ ಶ್ರೀಮತೇ ನಾರಾಯಣಾಯ" ಎನ್ರಿಙ್ಗು ಭರಗರ್ಭಮಾಗಸಮರ್ಪಿತ್ತು, "ನಮಃ" ಎನ್ರು ತನ್ನುಡೈ ತುವ**

---

**ಪ್ಪೆರುಮಾಳೆಮ್ಬೆರುಮಾನಾರರು, ವ್ಯಾಖ್ಯಾನಂ ಪಣ್ಣಿನಾರ್**-ವ್ಯಾಖ್ಯಾನವನ್ನು ಮಾಡಿದರು, **ಇನ್ದ ಶ್ಲೋಕತ್ತಿಲ್ ಚೊನ್ನನೈರಪೇಕ್ಷ್ಯಮ್, ಸ್ವರಕ್ಷಣತ್ತಿಲ್ ನಿರ್ಭರತ್ವಮ್**-ಈ ಮೇಲಿನ ಶ್ಲೋಕದಲ್ಲಿ ಹೇಳಲ್ಪಟ್ಟ ಯಾವುದರ ಅಪೇಕ್ಷೆಯು ಇಲ್ಲದಿರೋಣವೆಂಬುದು ತನ್ನ ರಕ್ಷಣ ವಿಷಯದಲ್ಲಿ ಪರಮಾತ್ಮನಲ್ಲೇ ಸರ್ವಭಾರವನ್ನು ಇಟ್ಟಿರೋಣದರಿಂದ ತನಗೆ ಸೇರಿದುದಾಗಿ ಯಾವ ಭಾರವೂ ಇಲ್ಲದಿರೋಣವು. **ಇನ್ದ ನಿರ್ಭರತ್ವತ್ತಾಲೇ**-ಹೀಗೆ ಸ್ವರಕ್ಷಣದಲ್ಲಿ ತನಗೆ ಯಾವುದೊಂದು ಭಾರವಿಲ್ಲವೆಂಬ ಅನುಸಂಧಾನದಿಂದ, **ಭರಸಮರ್ಪಣಂ**-ಆತ್ಮನಿಕ್ಷೇಪದೊಂದಿಗೆ ತನ್ನ ರಕ್ಷಣದಲ್ಲಿ ಸರ್ವಭಾರವನ್ನು ಪರಮಾತ್ಮನಲ್ಲಿ ಸಮರ್ಪಿಸೋಣವು, **ಇಪ್ಪಿಡತ್ತಿಲೇ**-ಈ ನಮಶ್ಶಬ್ದದಲ್ಲಿ, **ವಿವಕ್ಷಿತಮಾದಲಾಕ್ಕಡವದು**-ಹೇಳಲ್ಪಟ್ಟಿತೆಂದು ಭಾವಿಸಬಹುದಾಗುತ್ತದೆ. ಆದರೆ ಪೂರ್ವಖಂಡವು, ಹಿಂದಿನ ಯೋಜನೆಯಲ್ಲಿ ಭರಸಮರ್ಪಣಪರವೆಂದು ಭಾವಿಸಿದುದಕ್ಕೆ ಬದಲಾಗಿ ಈ ಉತ್ತರಖಂಡವೇ ಭರಸಮರ್ಪಣಪರವೆಂದು ಈ ಯೋಜನೆಯಲ್ಲಿ ಹೇಳಲ್ಪಟ್ಟಿತು. ಹಾಗಾದರೆ ಪೂರ್ವಖಂಡಾರ್ಥವೇನು? ಎಂಬ ಪ್ರಶ್ನೆಯು ಉದಿಸುತ್ತದೆ. ಅವರ ಅಭಿಪ್ರಾಯಾನುಸಾರ ಪೂರ್ವಖಂಡವು ಪರಿಕರಗಳನ್ನು ಮಾತ್ರ ಹೇಳುತ್ತದೆಂದೂ, ಎರಡು ಖಂಡಗಳೂ ಸೇರಿ ಸಾಙ್ಗಭರಸಮರ್ಪಣಪರವೆಂದೂ ಮುಂದಿನ ವಾಕ್ಯಗಳಿಂದ ಹೇಳುತ್ತಾರೆ.

**ಹವಿಸ್ಸಮರ್ಪಣತ್ತಿಲ್**-ಹವಿಸ್ಸನ್ನು ಸಮರ್ಪಿಸುವ ಸಂದರ್ಭದಲ್ಲಿ, **ಇದಂ**-ಈ ಹವಿಸ್ಸು, **ಇಂದ್ರಾಯ**-ಇಂದ್ರನಿಗೋಸ್ಕರವಾಗಿ, **ನಮಃ-ಮಃ ನ,** ನನಗಲ್ಲವು, **ಎನ್ನುಮಾಪ್ಪೋಲೇ**-ಎಂದು ಇಂದ್ರನಿಗೆ ಹವಿಸ್ಸನ್ನು ಸಮರ್ಪಿಸುವ ಹಾಗೆಯೇ, "**ಅಹಮ್**-ನನ್ನ ಆತ್ಮಾ, **ಶ್ರೀಮತೇ ನಾರಾಯಣಾಯ**-ಲಕ್ಷ್ಮಿಯೊಂದಿಗಿರುವ ನಾರಾಯಣನಿಗೆ **ಎನ್ರು**-ಎಂಬದಾಗಿ, **ಇಙ್ಗು**-ಈ ಸಂದರ್ಭದಲ್ಲೂ, **ಭರಗರ್ಭಮಾಗ ಸಮರ್ಪಿತ್ತು**-ತನ್ನ ರಕ್ಷಣದ ಭಾರದೊಂದಿಗೆ ತನ್ನ ಆತ್ಮಾವನ್ನು ಶಬ್ದತಃ ಸಮರ್ಪಿಸಿದನಂತರ, **ನಮಃ**-ಮಃ ನ. ಎಂದು ನನಗೆ ನಿರ್ಭರತ್ವನು ಸೇರಿದುದಲ್ಲವು. **ಎನ್ರು**-ಎಂಬದಾಗಿ, **ತನ್ನುಡೈ**-ತನ್ನ, **ತುವಕ್ಕರುಕ್ಕಿರದು**-ಸಮ್ಬನ್ಧವನ್ನು ತೆಗೆದುಹಾಕುವದು,

**ಕ್ಕರಿಕ್ಕಿರದೆನ್ರಾಲ್ ಇಸ್ಸಮರ್ಪಣಯೋಜನೈಕ್ಕು ಸ್ವರಸಮ್. ಇಂದ ಯೋಜನೈಯಿಲ್ ಪೂರ್ವಖಂಡಂ ಅಂಗಪಂಚಕಪರಮ್. ಉತ್ತರಖಂಡಂ ಅಂಗಿಪ್ರತಿಪಾದಕಮ್. (೧) "ಅಹಮದ್ಯೈವ ಮಯಾ ಸಮರ್ಪಿತಃ"**

**ಎನ್ರಾಲ್**-ಎಂಬ ಅರ್ಥವಾದರೆ, **ಇಸ್ಸಮರ್ಪಣಯೋಜನೈಕ್ಕು**-ಈ ಅರುಳಾಳ್ ಪೆರುಮಾಳ್ ಎಂಬೆರುಮಾನಾರರು ಮಾಡಿದ ಯೋಜನೆಗೆ, **ಸ್ವರಸಮ್**-ಸ್ವಾರಸ್ಯ ಉಂಟಾಗುತ್ತದೆ. ಇದರಿಂದ **ಶ್ರೀಮತೇ ನಾರಾಯಣಾಯ** ಎಂಬಲ್ಲಿ ಆತ್ಮ ಹವಿಸ್ಸಮರ್ಪಣೆಗೆ ಇಬ್ಬರೂ ಉದ್ದೇಶ್ಯರೆಂದೂ ಮತ್ತು ಆತ್ಮಹವಿಸ್ಸಮರ್ಪಣೆಯೇ ಮುಖ್ಯವಾದುದಾಗಿ ಆ ಅಭಿಪ್ರಾಯವು ಈ ಯೋಜನೆಯಲ್ಲಿ ಬರುವದರಿಂದ, ಕೈಂಕರ್ಯಪ್ರಾಪ್ತಿ ಕಾಮನಾರೂಪ ಪ್ರಾರ್ಥನೆಗಿಂತ ಇದೇ ಸ್ವಾರಸ್ಯವೆಂದೂ ಭಾವಿಸ ಬಹುದೆಂಬ ತಾತ್ಪರ್ಯವು. ಆಗಲಿ ಹೀಗೆ ಸ್ವರೂಪಸಮರ್ಪಣಪರವೆಂದು ಭಾವಿಸಿ ದರೆ ಭರಸಮರ್ಪಣಾರ್ಥವು ತಪ್ಪಿಹೋಯಿತೇ ಎಂದರೆ ಯಾವಾಗ ಸ್ವರೂಪ ಸಮರ್ಪಣವು ಮಾಡಲ್ಪಟ್ಟಿತೋ, ಅದರ ರಕ್ಷಾಭರಸಮರ್ಪಣೆಯು ಮಾಡಲ್ಪಟ್ಟಿ ತೆಂಬ ಭಾವವು ಅಂತರ್ಗತವು. ತನಗೆ ರಕ್ಷಿಸಲು ಸಾಧ್ಯವಿಲ್ಲದಿರುವ ಧನವನ್ನು ಒಬ್ಬನಲ್ಲಿ ಸಮರ್ಪಿಸಿದರೆ, ಅದನ್ನು ರಕ್ಷಿಸುವ ಭರವನ್ನೂ ಅವನಲ್ಲಿಟ್ಟಹಾಗೆ ಹೇಗಾಗುತ್ತದೋ ಹಾಗೆ ಎಂಬ ಭಾವವು, ಆದುದರಿಂದ ಭರಸಮರ್ಪಣೆಯು ಅರ್ಥವಾಗಿ ತೋರಿಬರುತ್ತದೆ. ಆವಾಗ ಅರ್ಥವೇನಾಯಿತು ಎಂದರೆ **"ಅಹಂ ಮದ್ರಕ್ಷಣಭರಶ್ಚ ಶ್ರೀಮತೇ ನಾರಾಯಣಾಯೈವ, ಮಮನ"** ನಾನೂ ಮತ್ತು ನನ್ನ ರಕ್ಷಣದ ಭಾರವೂ ಸಹ ಲಕ್ಷ್ಮೀನಾರಾಯಣರ ಪಾದಾರವಿಂದದಲ್ಲಿ ಸಮರ್ಪಿಸಲ್ಪಟ್ಟವು. ಅವುಗಳ ಸಂಬಂಧವು ನನಗಿಲ್ಲವು" ಎಂದು ತಾತ್ಪರ್ಯ ವಾಗುತ್ತದೆ. ಆದುದರಿಂದ **"ನಮಃ ಎನ್ರು ತನ್ನುರ್ಡ ತುವಕ್ಕರಿತ್ತು"** ಎಂದು ಪ್ರಯೋಗಿಸಿರುತ್ತಾರೆ. **ಇಂದ ಯೋಜನೈಯಿಲ್** - ಈ ಯೋಜನೆಯಲ್ಲಿ, **ಪೂರ್ವಖಂಡಂ**-ಪೂರ್ವಖಂಡವು, **ಅಂಗಪಂಚಕಪರಂ**-ಐದು ಅಂಗಗಳನ್ನು ಕುರಿತದ್ದು. ಉತ್ತರಖಂಡವು, **ಅಂಗಿಪ್ರತಿಪಾದಕಮ್**-ಅಂಗಿಯಾದ ಭರಸಮ ರ್ಪಣವನ್ನು ಪ್ರತಿಪಾದಿಸುವಂಥಾದ್ದು.

ಈ ಯೋಜನೆಯೂ ಸ್ವಾಮಿ ದೇಶಿಕರವರಿಗೆ ಇಷ್ಟವಾದುದರಿಂದ ಈ ಯೋಜನೆಯಲ್ಲಿ ಅರ್ಥವಾಗಿ ತೋರಿಬರುವ ಅಭಿಪ್ರಾಯಗಳನ್ನು ಉಪಪಾದಿ ಸುತ್ತಾರೆ. ಸ್ವರಕ್ಷಣದ ಭಾರವೂ, ಸ್ವರಕ್ಷಣ ಫಲವೂ ಶರಣ್ಯನದೇ ಎಂಬರ್ಥವು ತೋರಿಬರುತ್ತದೆಂದು ಉಪದೇಶಿಸುತ್ತಾರೆ. ಅನಂತರ **ನಮಶ್ಶಬ್ದ**ವಿರುವದರಿಂದ ಸ್ವರಕ್ಷಣ ಭರದಲ್ಲೂ ಸ್ವರಕ್ಷಣ ಫಲದಲ್ಲೂ ತನಗ ಈಷದಪಿ ಸಂಬಂಧವಿಲ್ಲವೆಂಬ ಅರ್ಥವು ಸರಸವಾಗಿ ತೋರಿಬರುತ್ತದೆಂದು ಹೇಳುತ್ತಾರೆ. **(೧) "ಅಹಮ**

(೧) ಆಳ. ಸ್ತೋತ್ರಂ. ೫೨.

**ಎಂಗಿರಪಡಿಯೇ, ಇವ್ವಿಡತ್ತಿಲ್, ನಾನ್ ಶ್ರೀಮಾನಾನ ನಾರಾಯಣನುಕ್ಕೆ ನ್ನ್ರುಮ್ ಸಮರ್ಪಿಕ್ಕ, (೨) "ಯತ್ಸಂರಕ್ಷ್ಯತಯಾರ್ಪ್ಯತೇ" (೩) "ತವೈವಾಸ್ಮಿ ಹಿ ಭರಃ" ಇತ್ಯಾದಿಗಳಿಲ್ಪಡಿಯೇ ಸ್ವರಕ್ಷಣ ಭರಮುಂ, ಸ್ವರಕ್ಷಣ**

---

**ದೈವ ಮಯಾ ಸಮರ್ಪಿತಃ"**—ಈ ಪೂರಾ ಶ್ಲೋಕಕ್ಕೂ ಅದರ ತಾತ್ಪರ್ಯಾರ್ಥಕ್ಕೂ ಹಿಂದೆ ೧೦೭೭ ರಿಂದ ೧೦೮೦ ನೆಯ ಪುಟಗಳನ್ನು ನೋಡಿ. ಆತ್ಮಸ್ವರೂಪ ಸ್ವಭಾವಗಳನ್ನು ಚನ್ನಾಗಿ ಪರಿಶೀಲಿಸಿ ತಿಳಿಯುವ ಸಾಮರ್ಥ್ಯವಿಲ್ಲದಿದ್ದರೂ, ಶಾಸ್ತ್ರಕ್ಕೆ ವಿರೋಧವಿಲ್ಲದೆ, **"ಸ್ವತ್ವಮಾತ್ಮನಿಸಂಜಾತಂ ಸ್ವಾಮಿತ್ವಂ ಬ್ರಹ್ಮಣಿಸ್ಥಿತಮ್ । ಉಭಯೋಃ ಶೇಷಸಂಬಂಧೋ ನ ಪರೋಽಭಿಮತೋ ಮಮ"** ಎಂದೂ, ವಿಷ್ಣುತತ್ವದಲ್ಲೂ **"ದಾಸೋಽಹಂ ವಾಸುದೇವಸ್ಯ ದೇವದೇವಸ್ಯ ಶಾರ್ಙ್ಗಿಣಃ"** ಎಂಬ ನಾರದೋಕ್ತಿಯಿಂದಲೂ, **"ದಾಸಭೂತಾಸ್ಸ್ವತಸ್ಸರ್ವೇ ಹ್ಯಾತ್ಮಾನಃ ಪರಮಾತ್ಮನಃ । ಅತೋಽಹಮಪಿತೇ ದಾಸಇತಿ ಮತ್ವಾ ನಮಾಮ್ಯಹಮ್"** ಎಂಬ ಈಶ್ವರಸಂಹಿತೆಯ ರುದ್ರವಾಕ್ಯದಿಂದಲೂ ತೋರಿಬರುವ ಶೇಷತ್ವ ಜ್ಞಾನ ಉಂಟಾದ ಸುಸಮಯದಲ್ಲೇ, ಶಾಸ್ತ್ರದಲ್ಲಿ ಬೋಧಿತವಾಗಿರುವಹಾಗೆ ನಿನ್ನ ಪಾದ ಪದ್ಮಗಳಲ್ಲಿ ಸಮರ್ಪಿಸಲ್ಪಟ್ಟವನಾದೆನು; ನಿನ್ನಿಂದ ದಯಪಾಲಿಸಲ್ಪಟ್ಟ ಕರಣ ಕಳೇಬರ ಬುದ್ಧಿಶ್ರದ್ಧಾಕಾರ್ಪಣ್ಯಾದಿಗಳಿಂದ ಕೂಡಿದ **ಮಯಾ**-ನನ್ನಿಂದ ಸಮರ್ಪಿಸಲ್ಪಟ್ಟವನಾದೆನು. (೨) ಇದು ಯಾರ ದಿವ್ಯಸೂಕ್ತಿ ಎಂಬುದು ವ್ಯಾಖ್ಯಾನಗಳಲ್ಲಿ ವ್ಯಕ್ತವಿಲ್ಲವು; ಈ ಆತ್ಮನು ಸಂರಕ್ಷಿಸಲ್ಪಡುವದಕ್ಕಾಗಿಯೇ ಭಗವನ್ತನಲ್ಲಿ ಸಮರ್ಪಿಸಲ್ಪಡುವನೆಂಬ ತಾತ್ಪರ್ಯವು ತೋರಿಬರುತ್ತದೆ. (೩) **ತವೈವಾಸ್ಮಿಹಿಭರಃ**-ಇದು **"ಪಿತಾತ್ವಂ"** ಎಂದಾರಂಭಿಸುವ ಶ್ಲೋಕವು ಮೂಲ ಮನ್ತ್ರಾಧಿಕಾರದಲ್ಲಿ ಉದಾಹೃತವು. ನೆಯ ಪುಟವನ್ನು ನೋಡಿ. ಶ್ಲೋಕ ತಾತ್ಪರ್ಯವು ಇಷ್ಟೇ.—ಲೋಕದಲ್ಲಿ ಯಾವ ಯಾವ ಹಿತಗಳನ್ನುಂಟುಮಾಡುವರೋ ಅಂತಹ ಪ್ರಯೋಜನಗಳಿಗೂ ಮೇಲಾದ ನಿರತಿಶಯ ತಾಯಿ ತಂದೆ ಮೊದಲಾದ ಸಕಲವಿಧ ಬಂಧುವಾಗಿ ನೀನಿರುತ್ತೀಯೇ, ನಾನಾದರೋ, ನಿನ್ನವನು, ನಿನಗೆ ಶೇಷಭೂತನು, ದಾಸನು ನಿನ್ನನ್ನೇ ಗತಿಯಾಗಿ ಉಳ್ಳವನು; ನೀನು ರಕ್ಷಕನು, ನಾನು ರಕ್ಷಣೀಯನು, **ಏವಂಸತಿ**-ಹೀಗಿರಲಾಗಿ, **ಅಹಮಪಿ**-ನಾನೂಕೂಡ **ತವಾಸ್ಮಿ**-ನಿನ್ನವನಾಗಿದ್ದೇನೆಂದು ಆತ್ಮಸ್ವರೂಪ ಸಮರ್ಪಣವು, **ತವೈವ ಭರಃ ಅಸ್ಮಿ**-ನನ್ನರಕ್ಷಣಾದಿ ಸರ್ವಭರವೂಸಹ ನಿನ್ನದೇಯಾಗಿರುತ್ತದೆ. ಅಥವಾ **ಅಪಿ** ಶಬ್ದದಿಂದ, ಹಿಂದಿನ ಪ್ರಾಜ್ಞರಾದ ಪ್ರಪನ್ನರು ಹೇಗೆ ನಿನ್ನನ್ನೇ ಸರ್ವಭರವೆಂದು ಭಾವಿಸಿ ಭರಸಮರ್ಪಣೆಯನ್ನು ಮಾಡಿದುದನ್ನು ನೀನು ಸ್ವೀಕರಿಸಿದೆಯೋ, ಹಾಗೆಯೇ **ಅಹಮಪಿ**-ನಾನೂ ಕೂಡ ಎಂಬ ಭಾವವು." **ಇತ್ಯಾದಿಗಳಿಲ್ ಪಡಿಯೇ**-ಇತ್ಯಾದಿಪ್ರಮಾಣಗಳಲ್ಲಿ ತೋರಿಬರುವ ಹಾಗೆ. **ಸ್ವರಕ್ಷಣ**

**ಫಲಮುಂ ಅವನದೆನ್ರಿಜ್ಞ್ಗೀ ಅಭಿಪ್ರೇತಮಾಗವುಮಾಮ್. ನಮಃ ಎಜ್ಞ್ಗರ ವಿತ್ತಾಲೇ ಆತ್ಮಾತ್ಮೀಯಂಗಳೋಡುಮ್, ಸ್ವರಕ್ಷಣತತ್ಫಲಂಗಳೋಡುಂ, ತನಕ್ಕುತ್ತುವಕ್ಕತ್ತನ್ಮೈ ಕಾಟ್ಟುಗಿರದು ಪರಸಂಬಂಧ ವಿಧಿಯಿಲುಂ, ಸ್ವ ಸಂಬಂಧ ನಿಷೇಧತ್ತಿಲುಂ, ತಾತ್ಪರ್ಯಮಾಗೈಯಾಲೇ ಇಚ್ಚತುರ್ಥಿ ನಮಸ್ಸು**

**ಭರಮುಂ**-ತನ್ನ ರಕ್ಷಣೆಯ ಭಾರವೂ, **ಸ್ವರಕ್ಷಣಫಲಮುಂ**-ತನ್ನನ್ನು ರಕ್ಷಿಸುವ ಫಲವೂ ಸಹ, **ಅವನದೇ**-ಅವನಿಗೆ ಎಂದರೆ ಭಗವಂತನಿಗೆ ಸೇರಿದುದೇ, ಏವಕಾರ ದಿಂದ ಇನ್ಯಾರಿಗಾಗಲಿ ತನಗಾಗಲಿ ಅಲ್ಲವೆಂಬುದು ಸಿದ್ಧವು ; **ಎನ್ರು**-ಎಂಬದಾಗಿ **ಇಜ್ಞ್ಗೀ**-ಈ ಸಂದರ್ಭದಲ್ಲಿ, ಈ ನಮಶ್ಶಬ್ದಾರ್ಥದ ಯೋಜನೆಯಲ್ಲಿ, **ಅಭಿಪ್ರೇತ ಮಾಗವುಮಾಮ್**-ಅರ್ಥವಾಗಿಯೇ ತೋರಿಬರುತ್ತದೆ. ಅದನ್ನೇ ವಿಶದೀಕರಿ ಸುತ್ತಾರೆ –**ನಮಃ ಎಜ್ಞ್ಗರವಿಡತ್ತಾಲೇ-ಮಮನ**-ಎಂಬರ್ಥವನ್ನು ಈ ನಮಶ್ಶಬ್ದ ದಿಂದ, **ಆತ್ಮಾತ್ಮೀಯಜ್ಞಳೋಡುಮ್**-ತಾನೂ ತನಗೆ ಸಂಬಂಧಿಸಿದವುಗಳೊಂ ದಿಗೂ, ಮತ್ತು **ಸ್ವರಕ್ಷಣತತ್ಫಲಜ್ಞಳೋಡುಮ್**-ತನ್ನ ರಕ್ಷಣವೇನು, ತನ್ನ ರಕ್ಷಣೆಯ ಫಲಗಳೇನು, ಇವುಗಳೊಂದಿಗೂ, **ತನಕ್ಕು**-ತನಗೆ, **ತುವಕ್ಕತ್ತನ್ಮೈ**-ಸಂ ಬಂಧವು ತೊಲಗಿ ಸ್ವಲ್ಪವೂ ಇಲ್ಲದಿರೋಣವನ್ನು, **ಕಾಟ್ಟುಗಿರಿದು**-ಪ್ರದರ್ಶಿಸುತ್ತದೆ, ಹೀಗೆ ಈ ಯೋಜನೆಯಲ್ಲಿ ಅರ್ಥವಾದರೆ ಒಂದು ಪೂರ್ವಪಕ್ಷವು ತೋರಬಹುದು. ಹೇಗೆಂದರೆ **ಶ್ರೀಮತೇನಾರಾಯಣಾಯ**-ಎಂಬುದರಿಂದ ಈ ಆತ್ಮಸಮರ್ಪ ಣೆಯೂ ರಕ್ಷಾವೊದಲಾದ ಭರವೂ ಲಕ್ಷ್ಮೀಯುಕ್ತನಾರಾಯಣನಿಗೇ ಎಂದರೆ, ಇನ್ನು ಯಾರಿಗೂ ಅಲ್ಲವೆಂಬುದು ಸ್ವತಃ ಏರ್ಪಡುತ್ತದೆ. ಆಗ ನಮಃ ಎಂಬ ಉಕ್ತಿಯು ಅನಾವಶ್ಯಕವು; **ನಮಃ**-ಎಂದರೆ ತನಗಲ್ಲವು ಎಂಬುದರಿಂದಲೂ, ಶ್ರೀಮನ್ನಾರಾಯಣನಿಗೇ ಎಂಬುದು ವ್ಯಕ್ತವು, ಆದುದರಿಂದ ಪುನರುಕ್ತಿದೋಷ ಉಂಟಾಗುವದಿಲ್ಲವೋ? ಎಂದರೆ ಪುನರುಕ್ತಿಯಾಗುವದಿಲ್ಲವೆಂದು ಹೇಳುತ್ತಾರೆ. **ಶ್ರೀಮತೇನಾರಾಯಣಾಯ** ಎಂಬಲ್ಲಿ ಭಗವಂತನಿಗೇ ಭರಸಮರ್ಪಣದಲ್ಲೇ ಅನ್ವಯವೆಂದೂ ಇನ್ನು ಯಾರಿಗೂ ಅನ್ವಯವಿಲ್ಲವೆಂದು ಹೇಳುವದಕ್ಕಾಗಿ ಅದೂ ಆವಶ್ಯಕವು; ತನಗೆ ಅದರಲ್ಲಿ ಅನ್ವಯವಿಲ್ಲವೆಂಬ ತನ್ನ ಅಹಂಕಾರ ಮಮಕಾರ ನಿಷೇಧಾರ್ಥವಾಗಿ ನಮಶಬ್ದವೂ ಆವಶ್ಯಕವೆಂದು ಮುಂದಿನ **ಪರಸಂಬಂಧ ವಿಧಿಯಿಲುಮ್**-ಎಂದಾರಂಭಿಸಿಹೇಳುತ್ತಾರೆ.- **ಪರಸಂಬಂಧವಿಧಿಯಿಲುಮ್**- **ಶ್ರೀಮತೇ ನಾರಾಯಣಾಯ** ಎಂಬಲ್ಲಿರುವ ಚತುರ್ಥೀ ವಿಭಕ್ತಿಗೆ ಪರಮಾತ್ಮನಿಗೆ ಮಾಡುವ ಕೈಂಕರ್ಯದಲ್ಲಿ ಅನ್ವಯವನ್ನು ಹೇಳುವದರಲ್ಲೂ, **ಸ್ವಸಂಬಂಧನಿಷೇಧ ತ್ತಿಲುಮ್-ನಮಃ** ಎಂಬಲ್ಲಿ ತನಗೆ ಅದರಲ್ಲಿ ಸಂಬಂಧವು ಯಾವುದೂ ಇಲ್ಲವೆಂಬ ಅಹಂಕಾರ ಮಮಕಾರಾದಿಗಳಿಲ್ಲವೆಂಬ ನಿಷೇಧದಲ್ಲೂ, **ತಾತ್ಪರ್ಯಮಾಗೈ ಯಾಲೇ** - ಹೀಗೆ ಇವೆರಡೂ ಭಿನ್ನವಾದ ಅಭಿಪ್ರಾಯವುಳ್ಳವುಗಳಾದುದರಿಂದ,

**ಕ್ಕಳ್ ಇರಣ್ಡುಕ್ಕುಂ ಫಲಮುಣ್ಡು. ಇಸ್ಸಮರ್ಪಣ ತನ್ನಿಲುಂ ಪರನಿರಪೇಕ್ಷಕರ್ತೃತ್ವಾದಿಗಳೈ ನಿಷೇಧಿಕ್ಕೈಕ್ಕಾಹ "ನಮಃ" ಎಙ್ಗಿರದಾಗುವುಮಾಮ್. ಸ್ಥೂಲಪ್ರಕ್ರಿಯೈಯೈಕೊಂಡಾಲುಂ, "ನಮಾಮಿ" ಎಂಗಿರ ಪದ**

---

**ಇಚ್ಚತುರ್ಥಿನಮಸ್ಸುಕಳ್ ಇರಣ್ಡುಕ್ಕುಮ್**-ಕ್ರಮವಾಗಿ ಈ ಚತುರ್ಥಿ ನಮಸ್ಸುಗಳೆರಡಕ್ಕೂ, **ಫಲಮುಣ್ಡು**-ಭಿನ್ನವಾಗಿ ಪ್ರಯೋಜನಗಳುಂಟು; ಎಂದರೆ ಎರಡೂ ಒಂದೇ ತಾತ್ಪರ್ಯವುಳ್ಳವುಗಳಾಗಿ ಒಂದಕ್ಕೆ ನೈರರ್ಥಕ್ಯವನ್ನು ಕಲ್ಪಿಸುವ ಆವಶ್ಯಕವಿಲ್ಲವು. ಪುನರುಕ್ತಿ ಎಂಬ ದೋಷಕ್ಕೆ ಅವಕಾಶವಿಲ್ಲವೆಂಬ ಭಾವವು.

ಪುನರುಕ್ತಿಗೆ ಕಾರಣವೇ ಇಲ್ಲವೆಂದು ಪ್ರದರ್ಶಿಸುವದಕ್ಕಾಗಿ ಇನ್ನೊಂದು ವಿಧವಾಗಿಯೂ ನಮಶ್ಶಬ್ದದ ತಾತ್ಪರ್ಯವನ್ನು ಬೋಧಿಸುತ್ತಾರೆ — **ಇಸ್ಸಮರ್ಪಣಮ್ ತನ್ನಿಲುಮ್**-ಈ ಸಮರ್ಪಣೆಯಿಂದ, ಚತುರ್ಥಿಯಲ್ಲಿ ತೋರುವ ಶ್ರೀಮನ್ನಾರಾಯಣನಿಗೇ ಈ ಸಮರ್ಪಣೆಯು ಎಂಬುದರಿಂದ, **ಪರನಿರಪೇಕ್ಷಕರ್ತೃತ್ವಾದಿಗಳೈ**-ಇತರ ಕರ್ತೃತ್ವ, ಆದಿಪದದಿಂದ ಫಲ, ಶೇಷತ್ವಗಳು ಯಾವುದೂ ಬೇಕಿಲ್ಲವೆಂಬುದನ್ನು, **ನಿಷೇಧಿಕ್ಕಾಹ**-ನಿಷೇಧಿಸುವದಕ್ಕಾಗಿ ಎಂದಾದರೂ, **ನಮಃ ಎಙ್ಗಿರದಾಗವುಮಾಮ್** - ನಮಶ್ಶಬ್ದ ಪ್ರಯೋಗವೆಂದಾದರೂ ಆಗಬಹುದು. ಆಗಲಿ, ಈಗ ಇಷ್ಟುದೂರ ಉತ್ತರಖಂಡದ ಅರ್ಥವನ್ನು ಶ್ರೀ ಅರುಳಾಳ್ ಪೆರುಮಾಳ್ ಎಂಬೆರುಮಾನಾರ್‌ರವರ ಇನ್ನೊಂದು ಯೋಜನೆಯ ಪ್ರಕಾರವಾಗಿ ಉಪಾಯವಾಗಿಯೇ ಹೇಳುವಾಗ ನಮಶ್ಶಬ್ದಕ್ಕೆ ಯೋಗರೀತಿಯಲ್ಲಿ ಹೇಳುವ ಅರ್ಥವೇ ಉಪಪಾದಿಸಲ್ಪಟ್ಟಿತೇ ವಿನಾ, ಸಾಧಾರಣವಾಗಿ ರೂಢಿಯಲ್ಲಿರುವ ಅರ್ಥವು ಹೇಳಲ್ಪಡಲಿಲ್ಲವು. **ನಮಃ** ಎಂದರೆ **ನಮಾಮಿ** ಎಂದು ಸಾಧಾರಣವಾಗಿ ನಮಸ್ಕಾರಾರ್ಥದಲ್ಲಿ ರೂಢಿಯು; ಮುಖ್ಯವಾಗಿ ಭರಸಮರ್ಪಣದಲ್ಲಿ ಪ್ರಣಾಮವು ಒಂದು ಅಂಗವಾಗಿರತಕ್ಕದ್ದು. ಅದೇ ಬಿಟ್ಟುಹೋಯಿತಲ್ಲವೇ? ಅದೂ ಅಲ್ಲದೇ ಈ ಉಪಾಯಾನುಷ್ಠಾನಕ್ಕೆ ಫಲವನ್ನು ಹೇಳುವದೂ ಬಿಟ್ಟುಹೋಯಿತಲ್ಲವೇ? ಎಂಬ ಆಕ್ಷೇಪಗಳು ತಂದರೆ ಇವೆರಡಕ್ಕೂ ಮುಂದಿನ ಎರಡು ವಾಕ್ಯಗಳಿಂದ "**ಸ್ಥೂಲಪ್ರಕ್ರಿಯೆಯೈ**" ಎಂದಾರಂಭಿಸಿ ಸಮಾಧಾನವನ್ನು ಹೇಳುತ್ತಾರೆ. ಈ ನಮಶ್ಶಬ್ದದಿಂದ ಭರಸಮರ್ಪಣಾರ್ಥವನ್ನು ಹೇಳುವಾಗ, ನಮಸ್ಕಾರಾರ್ಥವೂ ಸೂಚಿತವೆಂದೂ, ಯಾವ ಫಲಕ್ಕಾಗಿ ಈ ಆತ್ಮಸಮರ್ಪಣೆಯನ್ನು ಅಧಿಕಾರಿಯು ಮಾಡಿದನೋ, ಆ ಫಲವು ಸ್ವತಸಿದ್ಧವೆಂದೂ ಹೇಳುತ್ತಾರೆ. **ಸ್ಥೂಲಪ್ರಕ್ರಿಯೆಯೈಕ್ಕೊಂಡಾಲುಮ್** - ಹಿಂದೆ ಮೂಲಮಂತ್ರಾಧಿಕಾರದಲ್ಲಿ ನಮಶ್ಶಬ್ದಕ್ಕೆ ಅರ್ಥವನ್ನು ಹೇಳುವಾಗ ಸ್ಥೂಲರೂಪದಲ್ಲಿ ಹೇಳಿದ ತಾತ್ಪರ್ಯವನ್ನು ಮನಸ್ಸಿನಲ್ಲಿಟ್ಟು **ನಮಾಮಿ** - ನಮಸ್ಕಾರಮಾಡುವೆನು, **ಎಙ್ಗಿರಪದತ್ತೈ**-ಎಂಬುವ ಪದವನ್ನು, **ಆತ್ಮಸಮರ್ಪಣಾರ್ಥಮೆನ್ರು** - ಆತ್ಮಸಮರ್ಪಣಪರವೆಂದು,

**ತ್ತೈ ಆತ್ಮಸಮರ್ಪಣಾರ್ಥಮೆನ್ರು ವ್ಯಾಖ್ಯಾನಂ ಪಣ್ಣಿನ ಪದಸ್ತೋತ್ರ ಪ್ರಕ್ರಿಯೈಯಾಲೇ ಇನ್ನಮಶ್ಶಬ್ದಂ ಸಮರ್ಪಣ ಪ್ರೊರಳುಕ್ಕು ಸಂಗತಮ್. ಇಪ್ಪಡಿ ಉತ್ತರಖಂಡತ್ತೈ ಆತ್ಮಸಮರ್ಪಣಪರಮಾಗ ಅನುಸಂಧಿಪ್ಪಾರ್ಕ್ಕು ಇದುಕ್ಕು ಅನುರೂಪಮಾಯ್ ಸ್ವರೂಪಾನುಬಂಧಿಯಾನ ಫಲವಿಶೇಷಂ ಇಜ್ಗೇ ಸ್ವತಃ ಪ್ರಾಪ್ತಮ್.**

**ವ್ಯಾಖ್ಯಾನಂಪಣ್ಣಿನ** - ವ್ಯಾಖ್ಯಾನವನ್ನು ಮಾಡಿದ, **ಪದಸ್ತೋತ್ರಪ್ರಕ್ರಿಯೈಯಾಲೇ** - ಮಂತ್ರರಾಜಪದಸ್ತೋತ್ರದಲ್ಲಿ ಹೇಳಿರುವ ಮೇರೆಗೆ, **ಇನ್ನಮಶ್ಶಬ್ದಮ್**-ಈ ನಮಸ್ಸೆಂಬ ಶಬ್ದವು, **ಸಮರ್ಪಣಪ್ಪೊರಳುಕ್ಕು** - ಆತ್ಮಸಮರ್ಪಣಾಭಿಪ್ರಾಯಕ್ಕೆ, **ಸಂಗತಮ್** - ಉಚಿತವಾದುದು, ಸಮಂಜಸವಾದುದು. ಆ ಮಂತ್ರರಾಜಪದ ವಾಕ್ಯಗಳು ಯಾವುವೆಂದರೆ—"**ದಾಸಭೂತಾಸ್ಸ್ವತಸ್ಸರ್ವೇ ಹ್ಯಾತ್ಮಾನಃ ಪರಮಾತ್ಮನಃ। ಅತೋಽಹಮಪಿ ತೇ ದಾಸ ಇತಿಮತ್ವಾ ನಮಾಮ್ಯಹಮ್ ॥**" ಎಂದು ಹೇಳಿ "**ನಮಸ್ಕಾರಾತ್ಮಕಂ ಯಸ್ಮೈ ವಿಧಾಯಾತ್ಮನಿವೇದನಮ್**" ಎಂಬುದರಿಂದ ನಮಸ್ಸಿಗೆ ಆತ್ಮಸಮರ್ಪಣವಾಗಿ ಅಲ್ಲಿ ವ್ಯಾಖ್ಯಾನಮಾಡಲ್ಪಟ್ಟಿರುತ್ತದೆ. ಹಾಗೆಯೇ ಇಲ್ಲಿ ಭಾವಿಸತಕ್ಕದ್ದೆಂಬ ಭಾವವು. **ಇಪ್ಪಡಿ**-ಹೀಗೆ ಈಗ ಉಪಪಾದಿಸಿದ ರೀತಿಯಲ್ಲಿ, **ಉತ್ತರಖಂಡತ್ತೈ ಆತ್ಮಸಮರ್ಪಣಪರವಾಗಿ ಅನುಸಂಧಿಪ್ಪಾರ್ಕ್ಕು**-ಶ್ರೀ ಅರುಳಾಳ್ ಪೆರುಮಾಳ್ ಎಂಬೆರುಮಾನಾರ್ರವರ ಅಭಿಪ್ರಾಯದಹಾಗೆ ಉತ್ತರಖಂಡವು "**ದ್ವಯೇನ ಶರಣಂ ವ್ರಜೇತ್**" ಎಂಬಲ್ಲಿ ಹೇಳಿರುವಹಾಗೆ ಆತ್ಮಸಮರ್ಪಣಪರವೆಂದು ಅನುಸಂಧಾನ ಮಾಡುವವರಿಗೆ, **ಇದಕ್ಕೆ ಅನುರೂಪಮಾಯ್** - ಈ ಆತ್ಮಸಮರ್ಪಣರೂಪ ಶರಣಾಗತಿಗೆ ಅನುರೂಪವಾದ, **ಸ್ವರೂಪಾನುಬಂಧಿಯಾನ**-ಈ ಉಪಾಯಾನುಷ್ಠಾನದ ಸ್ವರೂಪಕ್ಕೆ ಸೇರಿದ, **ಫಲವಿಶೇಷಂ**-ಮೋಕ್ಷಪ್ರಾಪ್ತಿಯು, ಪರಿಪೂರ್ಣ ಬ್ರಹ್ಮಾನುಭವದೊಂದಿಗೆ ಕೈಂಕರ್ಯಪ್ರಾಪ್ತಿಯು, **ಸ್ವತಃಪ್ರಾಪ್ತಂ**-ಸ್ವತಸ್ಸಿದ್ಧವು, **ಏತಕ್ಕಾಗಿ** ಈ ಆತ್ಮಸಮರ್ಪಣೆಯನ್ನು ಮಾಡಿದನೋ, ಆ ಫಲವು ಶರಣಾಗತವತ್ಸಲನಾದುದರಿಂದ ಸ್ವತಸಿದ್ಧವು. ಈತನು ಮೋಕ್ಷಾರ್ಥಿಯಾಗಿ "**ಸ್ವರೂಪಫಲನಿಕ್ಷೇಪ ಸ್ತ್ವಧಿಕೋ ಮೋಕ್ಷಕಾಂಕ್ಷಿಣಾಮ್**" ಎಂದು ಆತ್ಮನಿಕ್ಷೇಪರೂಪವಾದ ಅಂಗಿಯ ಸ್ವರೂಪದಲ್ಲೇ, ಸ್ವರೂಪಫಲ ಆತ್ಮಾತ್ಮೀಯ ರಕ್ಷಾನಿಕ್ಷೇಪಗಳು ಸೇರಿದವಾದುದರಿಂದ ಆರ್ಥವಾಗಿ ತೋರಿಬರುವದರಿಂದ ಸ್ವತಸ್ಸಿದ್ಧವೆಂಬ ಭಾವವು. (೧೦೬೮ ನೆಯ ಪುಟವನ್ನು ನೋಡಿ.)

ಈ ಪೂರ್ವಾದ್ವಯವನ್ನು ಆತ್ಮರಕ್ಷಾಭರಸಮರ್ಪಣವೆಂಬ ಈ ಯೋಜನೆಗೂ, ಮೊದಲನೆಯ ಯೋಜನೆಯ ಪ್ರಕಾರ ಪೂರ್ವಖಂಡವನ್ನು ಆತ್ಮರಕ್ಷಾಭರಸಮರ್ಪಣರೂಪವಾದುದೆಂದೂ, ಉತ್ತರಖಂಡವು ಉಪೇಯಪರವಾಗಿ ಫಲರೂಪ

**ಅರ್ಥಫಲಯೋಜನಾಯಾ ಅಪಿಶಾಬ್ದ ಫಲಯೋಜನಾ ಉಚಿತಾ**

---

**ಪೂರ್ವೋಕ್ತಮಾನಪಡಿಯೇ ಫಲಪರಮಾಗ ಉತ್ತರಖಂಡತ್ತೈ ಅನುಸಂಧಿಪ್ಪಾರ್ಕ್ಕು ಇವ್ವಾತ್ಮರಕ್ಷಾಭರಸಮರ್ಪಣಂ ಉಪಾಯಪರಮಾನ ಪೂರ್ವಖಂಡತ್ತಿಲ್ ಶರಣಶಬ್ದಾನ್ವಿತಮಾನ ಕ್ರಿಯಾಪದತ್ತಿಲೇ ಅನುಸನ್ಧೇಯಮ್.**

**ದ್ವಯಪ್ರತಿಪಾದಿತಾರ್ಥಾ ಸುಖಾನುಸಂಧಾನಾಯ ಕ್ರಮೇಣ ದರ್ಶಯತಿ**

---

**ಇಪ್ಪಡಿ ದ್ವಯತ್ತಿಲ್ ಪದಂಗಳಿಲಡೈವೇಶಬ್ದಾರ್ಥಸ್ವಭಾವಂಗಳಾಲೇ**

ವಾದುದೆಂದು ಭಾವಿಸುವದಕ್ಕೂ ಏನು ವ್ಯತ್ಯಾಸವೆಂದರೆ ತಿಳಿಸುತ್ತಾರೆ. ಈ ಶ್ರೀ ಅರುಳಾಳ್ ಪೆರುಮಾಳ್ ಎಂಬೆರುಮಾನಾರ್ರವರ ಯೋಜನೆಯಲ್ಲಿ ಫಲವು ಶಾಬ್ದವಾಗಿ ಬೋಧಿತವಲ್ಲವು. ಆರ್ಥವಾಗಿ ತೋರುತ್ತದೆ ಹಿಂದಿನ ಯೋಜನೆಯಲ್ಲಾದರೋ ಶಾಬ್ದವಾಗಿಯೇ ತೋರುತ್ತದೆಂದು ಹಿಂದೆ ಹೇಳಿದುದನ್ನೇ ಹೇಳಿ, ದ್ವಯ ಶಬ್ದಾರ್ಥವನ್ನು ಜ್ಞಾಪಕಕ್ಕೆ ತರುತ್ತಾರೆ. ಇದರಿಂದ ಪೂರ್ವೋಕ್ತ ಯೋಜನೆಯಲ್ಲಿರುವ ತಮಗಿರುವ ಅಭಿಮತವನ್ನು ಸೂಚಿಸುತ್ತಾರೆ.

**ಪೂರ್ವೋಕ್ತಮಾನಪಡಿಯೇ**-ಹಿಂದಿನ ಯೋಜನೆಯಲ್ಲಿ ಪೂರ್ವಖಂಡವು ಉಪಾಯಪರವೆಂದೂ, ಉತ್ತರಖಂಡವು ಉಪೇಯಪರವೆಂದೂ ಎಂದರೆ ಫಲಪರವೆಂದೂ ಉಪಪಾದಿಸಿದ ರೀತಿಯಲ್ಲಿ, **ಉತ್ತರಖಂಡತ್ತೈ**-ಉತ್ತರಖಂಡವನ್ನು, **ಫಲಪರಮಾಗ** - ಪರಿಪೂರ್ಣಾನುಭವದೊಂದಿಗೆ ಸೇರಿದ ನಿತ್ಯಕೈಂಕರ್ಯಪ್ರಾಪ್ತಿರೂಪವಾದ ಫಲಪರವಾದುದೆಂದು, **ಅನುಸಂಧಿಪ್ಪಾರ್ಕ್ಕು**-ಅನುಸಂಧಾನಮಾಡುವವರಿಗೆ, **ಇವ್ವಾತ್ಮರಕ್ಷಾಭರಸಮರ್ಪಣಂ**-ಅಂಗಿಯಾದ ಈ ಆತ್ಮರಕ್ಷಾಭರಸಮರ್ಪಣವು, ಉಪಾಯಪರವಾದ ಪೂರ್ವಖಂಡದಲ್ಲಿ, **ಶರಣಶಬ್ದಾನ್ವಿತಮಾನ ಕ್ರಿಯಾಪದತ್ತಿಲ್**-ಶರಣ ಶಬ್ದದಿಂದ ಕೂಡಿದ ಪ್ರಪದ್ಯೇ ಎಂಬ ಕ್ರಿಯಾಪದದಲ್ಲಿ, **ಶರಣಂ ಪ್ರಪದ್ಯೇ** ಎಂಬಲ್ಲಿ ಅನುಸಂಧೇಯವು; ಶಾಬ್ದವಾಗಿಯೇ ಅನುಸಂಧೇಯವು ಎಂಬ ಭಾವವು. ಆದುದರಿಂದ ಈ ಯೋಜನೆಯು ಉಪಾದೇಯವು. ಎರಡು ಯೋಜನೆಯೂ ಸ್ವಾರಸ್ಯವಾಗಿಯೇ ಇದ್ದರೂ, ಇದರಲ್ಲಿ ಫಲವು ಶಾಬ್ದವಾಗಿಯೇ ತೋರಿ ದ್ವಯದ ತಾತ್ಪರ್ಯವನ್ನು ವ್ಯಕ್ತಪಡಿಸುವದರಿಂದ, ಇದೇ ಎರಡರಲ್ಲಿ ಉತ್ತಮವಾದುದೆಂದು ಭಾವಿಸಬಹುದೆಂಬ ಭಾವವು ಸೂಚಿತವು.

ಈ ದ್ವಯದಲ್ಲಿ ಪ್ರತಿಪಾದಿತಾರ್ಥಗಳನ್ನು ಸುಖವಾಗಿ ಜ್ಞಾಪಕದಲ್ಲಿಡಲು, ಕ್ರಮವಾಗಿ ತಿಳಿಸುತ್ತಾರೆ.

---

**ಇಪ್ಪಡಿ**-ಹಿಂದೆ ಈ ಅಧಿಕಾರದಲ್ಲಿ ಉಪಪಾದಿಸಿದ ರೀತಿಯಲ್ಲಿ **ಪದಂಗಳಿಲಡೈವೇ**- ದ್ವಯದಲ್ಲಿರುವ ಪದಗಳಿಂದ ಪ್ರಾಪ್ತವಾಗುವ, **ಶಬ್ದಾರ್ಥಸ್ವಭಾವಂಗ**

**(೧) ಪುರುಷಕಾರಯೋಗಮ್, (೨) ಅರ್ದಿ ನಿತ್ಯತ್ವಮ್, (೩) ಉಪಾಯ ವೈಶಿಷ್ಟ್ಯಮ್, (೪) ಶರಣ್ಯಗುಣಪೂರ್ಣತ್ವಮ್, (೫) ಸಂಬಂಧವಿಶೇಷಮ್, (೬) ದಿವ್ಯಮಂಗಳವಿಗ್ರಹಯೋಗಮ್. (೭) ಅದಿಲ್ ಶೇಷಭೂತ ನಿಳಿಯುಂಪುಕುರ್ರೈ, (೮) ಅದಿಲ್ ಉಪಾಯತ್ವಪ್ರಕಾರಮ್, (೯) ವಶೀಕರಣ ವಿಶೇಷಮ್, (೧೦) ತತ್ಪರಿಕರಂಗಳ್, (೧೧) ಅಧಿಕಾರಿ ವಿಶೇಷಮ್**

**ಳಾಲೇ**-ಶಬ್ದ ಮತ್ತು ಅರ್ಥ ಇವುಗಳ ಸ್ವಭಾವದಿಂದ, ಎಂದರೆ ಶಾಬ್ದವಾಗಿಯೂ, ಆರ್ಥವಾಗಿಯೂ, ವಾಕ್ಯಾಂಶದಲ್ಲಿ, **ಪ್ರಕಾಶಿತಮಾಯಿತ್ತು** ಎಂದು ಇದೆ – ಉಪಪಾದಿತವಾಯಿತು, ಪ್ರದರ್ಶಿಸಲ್ಪಟ್ಟವು ಎಂಬ **ತಾತ್ಪರ್ಯವು**. ಅವುಗಳು ಯಾವುವೆಂದರೆ—

(೧) **ಪುರುಷಕಾರಯೋಗಂ**—ಇದು **ಶ್ರೀಮನ್ನಾರಾಯಣಚರಣೌ** ಎಂಬಲ್ಲಿರುವ ಶ್ರೀ ಶಬ್ದಾರ್ಥವು; ಮತುಪ್ ಪ್ರತ್ಯಯದಿಂದ ಯೋಗವು ಬೋಧಿತವು. ಶ್ರಯತೇ ಭಗವಂತಂ ಇತಿ ಶ್ರೀಃ ಎಂಬ ವ್ಯುತ್ಪತ್ತಿಯಿಂದ ಪುರುಷಕಾರತ್ವವು ಸೂಚಿತವು. **(೨) ಅರ್ದಿ ನಿತ್ಯತ್ವಂ**—ಲಕ್ಷ್ಮಿಯು ಅನಪಾಯಿನಿಯಾಗಿ ಅಪೃಥಕ್ಸಿದ್ಧವಿಶೇಷಣಳಾಗಿ ಭಗವಂತನೊಂದಿಗೆ ಇರುತ್ತಾಳೆಂಬುದೂ ಮತುಪ್ಪ್ರತ್ಯಯದಿಂದ ತೋರಿಬರುವದರಿಂದ ಅದರ ನಿತ್ಯತ್ವವು ಏರ್ಪಟ್ಟಿತು. **(೩) ಉಪಾಯವೈಶಿಷ್ಟ್ಯಂ** — ಶ್ರೀಯತೇ ಚೇತನೈಃ, ಚೇತನರಿಂದ ಆಶ್ರಯಿಸಲ್ಪಡುವಳು ಇತ್ಯಾದಿ ಶ್ರೀ ಶಬ್ದಾರ್ಥದಿಂದ ಭಗವಂತನೊಂದಿಗೆ ಉಪಾಯಭೂತಳೆಂಬುದು ವ್ಯಕ್ತವು, **"ಲಕ್ಷ್ಮ್ಯಾಸಹ ಹೃಷೀಕೇಶೋ"** ಎಂಬಲ್ಲಿ ಹೇಳಿರುವ ಹಾಗೆ. **(೪) ಶರಣ್ಯಗುಣಪೂರ್ಣತ್ವಂ** — ಶ್ರೀಮನ್ನಾರಾಯಣನು ಕಲ್ಯಾಣಗುಣಗಳಿಂದ ಪೂರ್ಣನೆಂಬುದು, ನಾರಾಯಣ ಶಬ್ದದ ನಾರ ಶಬ್ದದಲ್ಲಿ ಅಂತರ್ಗತವಾದ ಅರ್ಥವು. **(೫) ಸಂಬಂಧವಿಶೇಷಂ**—ನಾರಾಯಣ ಶಬ್ದದ ತತ್ಪುರುಷ ಸಮಾಸದಿಂದ ತೋರುವ ಅರ್ಥದಲ್ಲಿ, **ನಾರಾಣಾಂ ಅಯನಮ್**. **(೬) ದಿವ್ಯಮಂಗಳ ವಿಗ್ರಹಯೋಗಂ**—ಇದು ಚರಣಶಬ್ದದಲ್ಲಿ ತೋರುವ ಅರ್ಥವೆಂದು ಹಿಂದೆಯೇ ಉಪಪಾದಿತವು. **(೭) ಅದಿಲ್ ಶೇಷಭೂತನಿಳಿಯುಂ ತುರ್ರೈ**—ಇದೂ ಚರಣ ಶಬ್ದದಲ್ಲಿ ತೋರುವ ಅರ್ಥವು. **(೮) ಅದಿಲ್ ಉಪಾಯತ್ವ ಪ್ರಕಾರಂ**—ಆ ದಿವ್ಯಮಂಗಳ ವಿಗ್ರಹದಲ್ಲಿ ಉಪಾಯಭಾವದ ಪ್ರಕಾರವು. ಇದು ಶರಣ ಶಬ್ದಾರ್ಥವು. **(೯) ವಶೀಕರಣ ವಿಶೇಷಂ**— **ಶರಣಂ ಪ್ರಪದ್ಯೇ** ಎಂಬಲ್ಲಿ ಇದು ತೋರಿಬರುತ್ತದೆ. **(೧೦) ತತ್ಪರಿಕರಂಗಳ್**—ಮಹಾವಿಶ್ವಾಸವು **ಪ್ರಪದ್ಯೇ** ಎಂಬ ಕ್ರಿಯಾಪದದಲ್ಲಿ ವ್ಯಕ್ತವು. ಇದರ ಪ್ರಕರ್ಷವು ಶ್ರೀಮಚ್ಛಬ್ದದಿಂದಲೂ ನಾರಾಯಣ ಶಬ್ದದಲ್ಲಿ ತೋರುವ ಕಲ್ಯಾಣಗುಣಾಕರತ್ವದಿಂದಲೂ ದ್ಯೋತಿತವು. **ಗೋಪ್ತೃತ್ವವರಣವು** ಪ್ರಾರ್ಥನಾಂತರ್ಭಾವವು **ಆಕಿಂಚನ್ಯವು**, ಪ್ರಪದ್ಯೇ

**(೧೨) ಪ್ರಾಪ್ಯವೈಶಿಷ್ಟ್ಯಮ್, (೧೩) ಗುಣವಿಭೂತಿ ವಿಶಿಷ್ಟ ಪ್ರಾಪ್ಯತ್ವಮ್, (೧೪) ಕೈಂಕರ್ಯ ಪ್ರತಿ ಸಂಬಂಧಿತ್ವಮ್, (೧೫) ಕೈಂಕರ್ಯ ಪ್ರಾರ್ಥನೈ, (೧೬) ಸರ್ವವಿಧ ಕೈಂಕರ್ಯ ಲಾಭಮ್, (೧೭) ಸರ್ವಾನಿಷ್ಟ ನಿವೃತ್ತಿ, (೧೮) ಅದಿನುಡೈಯ ಆತ್ಯಂತಿಕತ್ವಮ್, (೧೯) ಪರಾಧೀನ ಪರಾರ್ಥಕರ್ತೃತ್ವಮ್ (೨೦) ತಥಾವಿಧ ಭೋಕ್ತೃತ್ವಮ್, ಎನ್ರಿವೈ ಪ್ರಧಾನಮಾಯ್, ಇವತ್ತುಕ್ಕು ಅಪೇಕ್ಷಿತಂಗಳುಮೆಲ್ಲಾಮ್ ಸಿದ್ಧಸಾಧ್ಯ ವಿಭಾಗವತ್ತಾನ ಉಪಾಯಮೆನ್ರು**

ಎಂಬಲ್ಲೇ ತೋರಿಬರುತ್ತದೆ. ಆನುಕೂಲ್ಯಸಂಕಲ್ಪವೂ ಪ್ರಾತಿಕೂಲ್ಯವರ್ಜನೆಯೂ ನಾರಾಯಣ ಶಬ್ದದಲ್ಲಿ ಹೇಳಲ್ಪಟ್ಟವು. ಆತ್ಮನಿಕ್ಷೇಪವಾದ ಅಂಗಿಯೂ ಪ್ರಪದ್ಯೇ ಎಂಬಲ್ಲೇ ತೋರಿಬರುತ್ತದೆ. **(೧೧) ಅಧಿಕಾರಿವಿಶೇಷವೂ** ಸಹ ಪ್ರಪದ್ಯೇ ಎಂಬಲ್ಲೇ ಹೇಳಲ್ಪಟ್ಟಿತು. **(೧೨) ಪ್ರಾಪ್ಯವೈಶಿಷ್ಟ್ಯಂ**— ಉತ್ತರಖಂಡದ ಶ್ರೀಮತೇ ನಾರಾಯಣಾಯ ಎಂಬಲ್ಲಿ ಸೂಚಿತವು. **(೧೩) ಗುಣವಿಭೂತಿವಿಶಿಷ್ಟ ಪ್ರಾಪ್ಯತ್ವಂ**— ಇದೂ ನಾರಾಯಣಾಯ ಎಂಬಲ್ಲಿ ತೋರಿಬರುವ ಅರ್ಥವೇ **(೧೪) ಕೈಂಕರ್ಯ ಪ್ರತಿಸಂಬಂಧಿತ್ವಂ**—ಚತುರ್ಥಿಯ ಅರ್ಥವು. **(೧೫) ಕೈಂಕರ್ಯಪ್ರಾರ್ಥನೈ**—ಶ್ರೀಮತೇ ನಾರಾಯಣಾಯ **ಭವೇಯಂ** ಎಂದು ಅಧ್ಯಾಹಾರ ಮಾಡಿಕೊಳ್ಳುವದರಿಂದ ಉಂಟಾಗುತ್ತದೆ. **(೧೬) ಸರ್ವವಿಧ ಕೈಂಕರ್ಯ ಲಾಭಂ** — ಮೇಲಿನ ಯೋಜನೆಯಿಂದಲೇ ಅರ್ಥವಾಗಿ ತೋರಿಬರುತ್ತದೆ. **(೧೭) ಸರ್ವಾನಿಷ್ಟ ನಿವೃತ್ತಿ** — ಇದು ನಮಶ್ಶಬ್ದದಿಂದ ತೋರುವ ಅರ್ಥವು. **(೧೮) ಅದಿನುಡೈಯ ಆತ್ಯಂತಿಕತ್ವಂ**—ಆ ಅನಿಷ್ಟನಿವೃತ್ತಿಯು ಪುನಃ ಉಂಟಾಗದಿರೋಣವು. ಪೂರ್ವಖಂಡದಲ್ಲಿ ಅನನ್ಯಗತಿತ್ವವು ಸ್ಥಾಪಿತವಾಗುತ್ತದೆಂದು ಉಪಪಾದಿಸಿರುವದರಿಂದ ಸರ್ವಾನಿಷ್ಟನಿವೃತ್ತಿಯ ಆತ್ಯಂತಿಕತ್ವವು ಹೇಳಿದಂತಾಯಿತು. **(೧೯) ಪರಾಧೀನಪರಾರ್ಥಕರ್ತೃತ್ವಂ (೨೦) ತಥಾವಿಧ ಭೋಕ್ತೃತ್ವಮ್**—ಇವು ನಮಶ್ಶಬ್ದದಲ್ಲಿ ತೋರಿಬರುವೆಂದು ಉಪಪಾದಿಸಲ್ಪಟ್ಟಿರುತ್ತವೆ. **ಎನ್ರಿವೈ ಪ್ರಧಾನಂಗಳಾಯ್** - ಎಂಬೀ ಅರ್ಥಗಳೇ ಮುಖ್ಯವಾದುವುಗಳಾಗಿ, **ಇವತ್ತುಕ್ಕು ಅಪೇಕ್ಷಿತಂಗಳುಮ್ ಎಲ್ಲಾಮ್**-ಇವುಗಳಿಗೆ ಬೇಕಾದ ಅರ್ಥಗಳೆಲ್ಲವೂ, **ಸಿದ್ಧಸಾಧ್ಯವಿಭಾಗವತ್ತಾನ ಉಪಾಯಮೆನ್ರುಂ**-ಭಗವಂತನೇ ಸಿದ್ಧೋಪಾಯನಾಗಿ, ಆತ್ಮರಕ್ಷಾಭರಸಮರ್ಪಣವೇ ಸಾಧ್ಯೋಪಾಯವೆಂದು ಹೀಗೆ ವಿಭಾಗಿಸಲ್ಪಟ್ಟ ಎರಡುವಿಧ ಅಭಿಪ್ರಾಯಗಳೂ, **ಉಪಾಯಮೆನ್ರುಂ ಉಪೇಯಮೆನ್ರುಂ**-ಪೂರ್ವಖಂಡದಲ್ಲಿ ಈ ಎರಡು ವಿಧವಾದ ಉಪಾಯವೆಂದು ಉಪಪಾದಿತವೆಂದೂ ಎಂದರೆ ಶ್ರೀಮನ್ನಾರಾಯಣನೊಬ್ಬರೂ ಸಿದ್ಧೋಪಾಯರೆಂದೂ ಆತ್ಮನಿಕ್ಷೇಪವು ಸಾಧ್ಯೋಪಾಯವೆಂದೂ, **ಉಪೇಯಮೆನ್ರುಮ್**-ಶ್ರೀಮನ್ನಾ

**ಮ್ ಉಪೇಯಮುನ್ರುಮ್, ಇರಣ್ಡು ಪ್ರಧಾನ ಪ್ರತಿಪಾದ್ಯಂಗಳೋಡೇ ತುವಕ್ಕುಣ್ಡು ಪ್ರಕಾಶಿತಂಗಳಾಯಿತ್ತು.**

ರಾಯಣರಿಬ್ಬರೊಂದಿಗೆ ಪರಿಪೂರ್ಣಾನಂದವನ್ನು ಅನುಭವಿಸಿ ಅವರಿಗೆ ನಿತ್ಯ ಸರ್ವವಿಧ ಕೈಂಕರ್ಯಮಾಡುವದೇ ಪ್ರಾಪ್ಯವೆಂದೂ ಹೀಗೆ, **ಇರಣ್ಡು ಪ್ರಧಾನ ಪ್ರತಿಪಾದ್ಯಂಗಳೋಡು**-ಮುಖ್ಯಗಳಾದ ಉಪಾಯೋಪೇಯಗಳ ಅಭಿಪ್ರಾಯ ಗಳನ್ನು ತಿಳಿಸುವದರೊಂದಿಗೆ, **ತುವಕ್ಕುಣ್ಡು**-ಸಂಬಂಧವು ಇರುವದಾಗಿ, **ಪ್ರಕಾಶಿತಂಗಳಾಯಿತ್ತು**-ವ್ಯಕ್ತಪಡಿಸಲ್ಪಟ್ಟವು,

ದ್ವಯಮನ್ತ್ರದಲ್ಲಿ ಉಪಾಯಾನುಷ್ಠಾನವನ್ನು ಪೂರ್ವಖಂಡದಲ್ಲೂ ಫಲ ಪ್ರಾಪ್ತಿಯನ್ನು ಉತ್ತರಖಂಡದಲ್ಲೂ ಹೇಳಿರುತ್ತದೆಂದು ಹಿಂದೆ ಹೇಳಿ ಮುಗಿಸಿದರು. ಹೀಗಾದರೆ ಅನುಸಂಧಾನರೀತ್ಯಾ ಮೊದಲು ಉಪಾಯಾನುಷ್ಠಾನವೂ ಅನಂತರ ಫಲಪ್ರಾಪ್ತಿಯೂ ಎಂದು ಹೇಳಿದಂತಾಯಿತು. ಹೀಗೆ ಹೇಳಿದುದೇನೋ ಶಾರೀರಕಶಾಸ್ತ್ರರೀತ್ಯಾ ಮೊದಲು ತತ್ವ ಅನಂತರ ಹಿತವು ಎಂದರೆ ಉಪಾಯಾನುಷ್ಠಾನವು, ಅನಂತರ ಅದರಿಂದುಂಟಾಗುವ ಫಲವು, ಸರಿಹೋಯಿತು ಆದರೆ ಶ್ವೇತಾಶ್ವತರದಲ್ಲಿರುವ **"ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ"** ( ) ಎಂಬ ವಾಕ್ಯವೂ ಅನುಷ್ಠಾನಮನ್ತ್ರವಾಗಿ ಕೆಲವರು ಇಟ್ಟುಕೊಂಡಿರುವದರಲ್ಲಿ, **ಮುಮುಕ್ಷುಃ** ಎಂಬುದರಿಂದ ಫಲಾನುಸಂಧಾನ ಉಂಟಾಗಿ, ಅನಂತರ ಅದಕ್ಕಾಗಿ ಉಪಾಯಾನುಷ್ಠಾನವಾದ **ಶರಣಮಹಂ ಪ್ರಪದ್ಯೇ** ಎಂದು ಹೇಳಿರುತ್ತದೆ. ಈ ಕ್ರಮವೀಗ ನ್ಯಾಯವಾಗಿ ತೋರುತ್ತದೆ. ಏಕೆಂದರೆ ಅನುಷ್ಠಾನ ಪ್ರವೃತ್ತಿಗೆ ಪ್ರಥಮತಃ ಫಲಜ್ಞಾನವು ಆವಶ್ಯಕವು. ಇದರ ಅನುಸಂಧಾನ ಉಂಟಾದರೆ, ತತ್ಪ್ರಾಪ್ತಿಗಾಗಿ ಉಪಾಯಾನುಷ್ಠಾನವು ನ್ಯಾಯವು. ಆದರೆ ಈ ದ್ವಯಮನ್ತ್ರದಲ್ಲಿ ವ್ಯತ್ಯಸ್ತವಾಗಿದೆಯಲ್ಲಾ ಎಂಬ ಆಕ್ಷೇಪ ಉಂಟಾದೀತು. ಅದಕ್ಕೆ ಮುಂದಿನ **"ಇಪ್ಪಡಿ ಶಾರೀರಕ"**ವೆಂದಾರಂಭಿಸಿದ ವಾಕ್ಯಗಳಿಂದ ಸಮಾಧಾನವನ್ನು ಹೇಳುತ್ತಾರೆ. ಹೇಗೆಂದರೆ ಪಾಠಕ್ರಮದಲ್ಲಿ ಉಪಾಯಾನುಷ್ಠಾನವು ಮೊದಲೂ, ಫಲವು ಅನಂತರದಲ್ಲಿ ಹೇಳಿದ್ದರೂ, ಒಂದೇ ಮನ್ತ್ರವಾದುದರಿಂದ ಫಲವನ್ನೇ ಮೊದಲು ಅನುಸಂಧಾನವನ್ನು ಮಾಡಿ ಉಪಾಯಾನುಷ್ಠಾನ ಮಾಡುವದರಲ್ಲೇನೂ ತೊಂದರೆಯಿಲ್ಲವು. ಹಾಗೆಯೇ ಪೂರ್ವಾಚಾರ್ಯರುಗಳ ಅನುಸಂಧಾನವೆಂದು ಹೇಳುತ್ತಾರೆ. ಅನುಸಂಧಾನವನ್ನನುಸರಿಸಿ ಉತ್ತರಖಂಡವನ್ನು ಮೊದಲೂ ಪೂರ್ವಖಂಡವನ್ನು ಅನಂತರವೂ ಉಚ್ಚರಿಸತಕ್ಕದ್ದಲ್ಲವು ಎಂಬುದೂ ಸೂಚಿತವು. ಅನುಸಂಧಾನ ಮಾತ್ರ ಹಾಗಿರಬಹುದು. ಮೊದಲು ಫಲವು ನಿರತಿಶಯವಾದುದೆಂಬ ಜ್ಞಾನ ಉಂಟಾದರಲ್ಲವೇ ಅನುಷ್ಠಾನವೂ ತತ್ಫಲಪ್ರಾಪ್ತಿಯೂ ಎಂಬ ಭಾವವು. ಆದುದರಿಂದ ಅನುಸಂಧಾನ ಕ್ರಮವನ್ನು ತಿಳಿಸುತ್ತಾರೆ

## ಅನುಷ್ಠಾನಕಾಲೇ ಅನುಸಂಧಾನಕ್ರಮಂ ಶಿಕ್ಷಯಿತಿ.

---

**ಇಪ್ಪಡಿ ಶಾರೀರಕ ಶಾಸ್ತ್ರತ್ತಿಲ್ಪೋಲೇ ತತ್ತ್ವವಿಶೇಷಮುಂ, ಉಪಾಯ ವಿಶೇಷಮುಂ, ಫಲವಿಶೇಷಮುಂ ಇಮ್ಮಂತ್ರರತ್ನತ್ತಿಲೇ ಪ್ರತಿಪಾದಿತಮಾನಾಲುಂ ಇದು ಶ್ವೇತಾಶ್ವತರ ಮಂತ್ರಮ್ಪೋಲೇ ಫಲಾಪೇಕ್ಷಾಪೂರ್ವಕಮಾನ ಉಪಾಯಾನುಷ್ಠಾನಪ್ರಧಾನಮಾಗೈಯಾಗಿಲ್, ಉಪಾಯಫಲಂಗಳುಡೈಯ ಉತ್ಪತ್ತಿಕ್ರಮತ್ತೋಡೇ ಶೇರ್ನ್ದ ಪಾಠಕ್ರಮತ್ತಾಲೇ ಫಲಪ್ರತಿ**

---

### ಅನುಷ್ಠಾನಕಾಲದ ಅನುಸಂಧಾನಕ್ರಮವು.

---

**ಇಪ್ಪಡಿ**-ದ್ವಯಮನ್ತ್ರದಲ್ಲಿ ಉಪಪಾದಿತಗಳಾದ ಅರ್ಥಗಳನ್ನು ಪ್ರದರ್ಶಿಸಿದ ಹಾಗೆ, **ಶಾರೀರಕ ಶಾಸ್ತ್ರತ್ತಿಲ್ಪೋಲೇ**-ವ್ಯಾಸಸೂತ್ರಗಳಲ್ಲಿ ಹೇಳಿರುವ ಹಾಗೆ, ಈ ಸೂತ್ರಗಳಿಗೆ ಶಾರೀರಕ ಸೂತ್ರವೆಂಬ ಹೆಸರು ಎಂದರೆ, ಸಮಸ್ತ ಚಿದಚಿತ್ತುಗಳು ಪರಮಾತ್ಮನಿಗೆ ಶರೀರವೆಂದೂ, ಎಲ್ಲಕ್ಕೂ ಆತನು ಆತ್ಮಾವೆಂದೂ, ಶ್ರುತ್ಯನುಸಾರವಾಗಿ ಹೇಳುವವರಿಂದ ಹಾಗೆ ಹೆಸರು. ಅಲ್ಲಿ ಹೇಳಿರುವ ಕ್ರಮ ಹೇಗೆಂದರೆ- ಈ ದ್ವಯದಲ್ಲಿರುವಹಾಗೆ ಎಂದು ಹೇಳುತ್ತಾರೆ.—**ತತ್ತ್ವವಿಶೇಷವೂ, ಉಪಾಯ ವಿಶೇಷವೂ,** ಅನಂತರ **ಫಲವಿಶೇಷವೂ,** ಹೀಗೆಯೇ **ಈ ಮಂತ್ರರತ್ನತ್ತಿಲೇ ಪ್ರತಿಪಾದಿತಮಾನಾಲುಂ**-ಈ ಮಂತ್ರರತ್ನವಾದ ದ್ವಯದಲ್ಲಿ ಪ್ರತಿಪಾದಿತವಾಗಿದ್ದರೂ, ಎಂದರೆ **ಶ್ರೀಮನ್ನಾರಾಯಣ** ಶಬ್ದದಿಂದ ತತ್ತ್ವವನ್ನು ಹೇಳಿ, **ಶರಣಂ ಪ್ರಪದ್ಯೇ** ಎಂಬುದರಿಂದ ಉಪಾಯವನ್ನು ಅನುಷ್ಠಿಸಿ, **ಶ್ರೀಮತೇ ನಾರಾಯಣಾಯ ನಮಃ** - ಅನಿಷ್ಟನಿವೃತ್ತಿಯೂ ಇಷ್ಟಪ್ರಾಪ್ತಿಯನ್ನು ಪ್ರಾರ್ಥಿಸಿರುವದರಿಂದ, ಹೀಗೆ **ಈ** ಕ್ರಮದಲ್ಲಿ ಪ್ರತಿಪಾದಿತವಾಗಿದ್ದರೂ, **ಇದು ಶ್ವೇತಾಶ್ವತರ ಮಂತ್ರಮ್ಪೋಲೇ**-ಇದು **"ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ"** ಎಂದರೆ ಮೋಕ್ಷಾರ್ಥಿಯಾಗಿರುವ ಚತುರ್ಮುಖನಾದ ನಾನು ಭಗವಂತನನ್ನು ಉಪಾಯವಾಗಿ ವರಿಸುತ್ತೇನೆ ಎಂಬ ಅನುಷ್ಠಾನ ಮಂತ್ರದ ಹಾಗೆ, **ಫಲಾಪೇಕ್ಷಾಪೂರ್ವಕಮಾನ- "ಮುಮುಕ್ಷುಃ"** ಎಂಬ ಶಬ್ದದಿಂದ ತೋರಿಬರುವ ಫಲಾಪೇಕ್ಷೆಯಪೂರ್ವಕವಾದ, **ಉಪಾಯಾನುಷ್ಠಾನ ಪ್ರಧಾನಮಾಗೈಯಾಲೆ - "ಶರಣಮಹಂ ಪ್ರಪದ್ಯೇ"** ಎಂಬ ಉಪಾಯಾನುಷ್ಠಾನವು ಮುಖ್ಯವಾಗಿ ತೋರುವದರಿಂದ, **ಉಪಾಯ ಫಲಙ್ಗಳುಡೈಯ ಉತ್ಪತ್ತಿಕ್ರಮತ್ತೋಡು** - ಮೊದಲು ಉಪಾಯಾನುಷ್ಠಾನವು, ಅನಂತರ ಅದರಿಂದುಂಟಾಗುವ ಫಲವು, ಹೀಗೆಯುಳ್ಳವೇ ಉತ್ಪತ್ತಿಕ್ರಮವು, ಇಂತಹ ಕ್ರಮದೊಂದಿಗೆ, **ಶೇರ್ನ್ದ**-ಸಂಬಂಧಿಸಿದ, **ಪಾಠಕ್ರಮತ್ತಾಲೇ**-ದ್ವಯೋಚ್ಚಾರಣೆಯಲ್ಲಿ ತೋರುವ ಪಾಠಕ್ರಮದಿಂದ, **ಫಲಪ್ರತಿಪಾದಕವಾಕ್ಯಮ್**-

**ಸಾಧಕವಾಕ್ಯಂ ಪಿರ್ಪಟ್ಟಾಲುಂ, ಅರ್ಥಕ್ರಮತ್ತಾಲೇ ಇದು ಮುರ್ಪಡ ಅನುಸಂಧೇಯಮೆನ್ರು ಪೂರ್ವರ್‌ಗಳ್ ಅರುಳಿಚ್ಚೆಯ್‌ವರ್‌ಗಳ್. ಪುರುಷ ಪುರುಷಾರ್ಥತ್ತೈ ವಿಮರ್ಶಿತ್ತುಕ್ಕೊಂಡನ್ರಿ ಉಪಾಯವಿಮರ್ಶಮುಮ್, ಉಪಾಯಾನುಷ್ಠಾನಮುಮ್ ಪಣ್ಣಾನಿರೇ. ಇಪ್ಪಡಿ ತಿರುಮನ್ತ್ರತ್ತಿಲುಮ್,**

---

ಫಲವನ್ನು ಪ್ರತಿಪಾದಿಸುವ ಉತ್ತರಖಂಡ ವಾಕ್ಯವು, **ಪಿರ್ಪಟ್ಟಾಲುಮ್**-ಮುಂದೆ ಹೇಳದೆ ಅನಂತರ ಹೇಳಿದ್ದರೂ, **ಅರ್ಥಕ್ರಮತ್ತಾಲೇ**-ಅರ್ಥಕ್ರಮದಿಂದ, ಅದುಹೇಗೆಂದರೆ, ಮೊದಲು ಫಲದಜ್ಞಾನವು, ಅನಂತರ ಅಂತಹ ನಿರತಿಶಯ ಫಲಕ್ಕಾಗಿ ಅನುಷ್ಠಾನವೂ, ಅದರಿಂದ ಫಲಪ್ರಾಪ್ತಿಯೂ, ಹೀಗೀಗ ಅರ್ಥಕ್ರಮವು, ಇದನ್ನು ಮನಸ್ಸಿನಲ್ಲಿಟ್ಟು, **ಇದು**-ಈ ಫಲವು, **ಮುರ್ಪಡ**-ಮೊದಲು, **ಅನುಸಂಧೇಯಮೆನ್ರು**-ಅನುಸಂಧಾನಮಾಡತಕ್ಕದ್ದೆಂದು, **ಪೂರ್ವರ್‌ಗಳ್**-ಪೂರ್ವಾಚಾರ್ಯರುಗಳು, **ಅರುಳಿಚ್ಚೆಯ್‌ವರ್‌ಗಳ್**-ಕೃಪೆಯಾ ಅಪ್ಪಣೆ ಕೊಡಿಸಿರುತ್ತಾರೆ. ಹೀಗೆ ಹೇಳಿದುದರಿಂದ ಅವರುಗಳ ಅನುಸಂಧಾನವು ಗ್ರಾಹ್ಯವು, ಉಪಾದೇಯವೆಂದು ಹೇಳಿದಂತಾಯಿತು, ಅದನ್ನೇ ಮುಂದಿನ ವಾಕ್ಯಗಳಿಂದ ಸಮರ್ಥಿಸಿ ಹೇಳುತ್ತಾರೆ. ಪ್ರಪತ್ತಿಯದಲ್ಲಿ ಮುಖ್ಯವಾಗಿ, ಇಂತಹ ನಿರತಿಶಯಾನುಷ್ಠಾನವನ್ನು ಮಾಡಬೇಕೆಂದೂ, ಅದಕ್ಕೆ ನಿರತಿಶಯಫಲಪ್ರಾಪ್ತಿ ಎಂದೂ ಹೇಳಬೇಕಾದುದು. ಹೀಗೀಗ ಪಾಠಕ್ರಮವು, ಅನುಸಂಧಾನ ಕಾಲದಲ್ಲಿ ಫಲವನ್ನೇ ಪ್ರಥಮತಃ ಅನುಸಂಧಾನಮಾಡಿ, ಅದಕ್ಕಾಗಿ ಅನುಷ್ಠಾನವೂ ಫಲಪ್ರಾಪ್ತಿಯೂ ಎಂದು ಭಾವಿಸುವದು ಪೂರ್ವಾಚಾರ್ಯರುಗಳ ಸಮ್ಮತಿಯುಳ್ಳದೆಂದು ತಿಳಿಸಿದರು. ಇದರಿಂದ ಶ್ವೇತಾಶ್ವತರವಾಕ್ಯಕ್ಕೆ ವಿರೋಧ ವುಂಟಾಯಿತೆಂಬ ಭಾವವೂ ದೂರೀಕೃತವೆಂದೂ ಹೇಳಲ್ಪಟ್ಟಿತು. ಹಾಗೆ ಪೂರ್ವಾಚಾರ್ಯರು ಅನುಸಂಧಾನಮಾಡಿದ್ದು ನ್ಯಾಯವೇ ಎನ್ನುತ್ತಾರೆ, ಏಕೆಂದರೆ ಯಾವಪುರುಷಾರ್ಥವು ಯಾವ ಉಪಾಯಮೂಲಕವಾಗಿ ಸಿದ್ಧಿಸುತ್ತದೆ. ಎಂಬ ಜ್ಞಾನ ಉಂಟಾದರಲ್ಲವೇ, ಆಗ ತನಗೆ ಬೇಕಾದ ಪುರುಷಾರ್ಥಕ್ಕೆ ಇದೀಗ ಉಪಾಯಾನುಷ್ಠಾನವೆಂದು ತಿಳಿದು ಅದನ್ನು ಅನುಷ್ಠಿಸುವದು. ಆದುದರಿಂದ ಫಲಜ್ಞಾನದ ಅನುಸಂಧಾನವು ಪ್ರಥಮತಃ ಬೇಕಾದುದು ನ್ಯಾಯವೇ ಸರಿ ಎಂಬ ಭಾವದಿಂದ ಹೇಳುತ್ತಾರೆ. **ಪುರುಷ**-ಅಧಿಕಾರಿಯು, **ಪುರುಷಾರ್ಥತ್ತೈ ವಿಮರ್ಶಿತ್ತುಕ್ಕೊಂಡನ್ರಿ**-ತನಗೆಬೇಕಾದ ಪುರುಷಾರ್ಥವಿದು ಎಂದು ವಿಮರ್ಶಿಸಿ ತಿಳಿಯದೆ, **ಉಪಾಯವಿಮರ್ಶಮುಮ್**-ಅದನ್ನು ಹೊಂದಲು ಇದೀಗ ಉಪಾಯವೆಂದು ವಿಮರ್ಶಿಸಿ ತಿಳಿಯೋಣವನ್ನೂ, **ಉಪಾಯಾನುಷ್ಠಾನಮುಮ್**-ಅಂತಹ ಉಪಾಯದ ಅನುಷ್ಠಾನವನ್ನು ನಹ, **ಪಣ್ಣಾನಿರೇ**-ಮಾಡಲಾರನಷ್ಟೇ. ಎಂದರೆ ತನಗೆ ಬೇಕಾದ ಪುರುಷಾರ್ಥಕ್ಕೆ ಇದೀಗ ಉಪಾಯವೆಂದು ತಿಳಿದೇ

**ಉಪಾಯಫಲಪ್ರತಿಪಾದಿಕಾಂಶಙ್ಗಳಿಲ್ ಕ್ರಮಪ್ರಕಾರಙ್ಗಳೈಕ್ಕಣ್ಡುಕೊಳ್ವದು. ಫಲಾರ್ಥಿಯಾಯ್, ಅಧಿಕಾರಿಯಾನಾಲಿರೇ ಇವನುಕ್ಕುವ್ಪಾಯಾನುಷ್ಠಾನಮ್ ವರುವದು.**

---

ಅಂತಹ ಉಪಾಯವನ್ನು ಅನುಷ್ಠಿಸುವನು ಎಂಬ ಭಾವವು ಅಂತಹ ಜ್ಞಾನವಿಲ್ಲದೆ ಇದ್ದರೆ ಅಂತಹ ಉಪಾಯಾನುಷ್ಠಾನವನ್ನೂ ಮಾಡನು ಎಂಬ ತಾತ್ಪರ್ಯವು. **“ಅಗ್ನಿಹೋತ್ರಂಜುಹೋತಿ ಯವಾಗೂಂ ಪಚತಿ”** ಎಂಬಲ್ಲಿ ಹೋಮದ್ರವ್ಯವಾದ ಯವಾಗೂ ಪಾಕವು ಅಗ್ನಿಹೋತ್ರಕ್ಕೆ ಸಾಧಕವಾದುದರಿಂದ,ಪಾಠಕ್ರಮವೇನೋ ಸರಿಯಲ್ಲವು; ಅರ್ಥಕ್ರಮಪ್ರಕಾರ ವ್ಯತ್ಯಸ್ತವಾದುದೇನೋ ನ್ಯಾಯವೆಂಬ ಭಾವವು. ಆದರೂ ಮೂಲಮನ್ತ್ರದಲ್ಲೂ ಈ ದ್ವಯದಲ್ಲಿರುವ ಕ್ರಮವೇ ಇರುತ್ತದೆ ಎಂದು ಮುಂದೆ ಹೇಳಿ, ಹಾಗೆ ಹೇಳಿದುದರಲ್ಲಿ ಏನೊಂದೂ ವಿರೋಧವಿಲ್ಲವು; ಏಕೆಂದರೆ ಉಪಾಯ ಫಲಗಳೆರಡೂ ಸಾಧಕ ಸಾಧ್ಯಭಾವದಿಂದ ಈ ಮನ್ತ್ರಗಳಲ್ಲಿ ಹೇಳಲ್ಪಟ್ಟಿವೆ. ಮೋಕ್ಷಾರ್ಥಿಗೆ ಉಪಾಯವಿದು, ಅದರಿಂದ ಫಲವಿದು, ಎಂದು ಹೇಳುವದು ಸರಿಯೇ ಎಂದು ಹೇಳಿ ಮುಗಿಸುತ್ತಾರೆ. ಮುಂದೆ ಈ ದ್ವಯದಲ್ಲಿರುವ ಕ್ರಮವೇ ಮೂಲಮನ್ತ್ರದಲ್ಲೂ ತೋರಿಬರುತ್ತದೆನ್ನುತ್ತಾರೆ.—**ಇಪ್ಪಡಿ**-ಈ ದ್ವಯದಲ್ಲಿ ಪಾಠಕ್ರಮವು ಹೇಗೋ ಹಾಗೆಯೇ, **ತಿರುಮನ್ತ್ರತ್ತಿಲುಮ್**-ಮೂಲಮನ್ತ್ರದಲ್ಲೂ, **ಉಪಾಯಫಲಪ್ರತಿಪಾದಿಕಾಂಶಙ್ಗಳಿಲ್**-ಉಪಾಯವನ್ನೂ, ಮತ್ತು ಫಲವನ್ನೂ ಪ್ರತಿಪಾದಿಸುವ ಶಬ್ದಗಳಲ್ಲಿ, **ಕ್ರಮಪ್ರಕಾರಂಗಳೈ**-ಈ ದ್ವಯದ ಕ್ರಮಪ್ರಕಾರಗಳನ್ನು ಅನುಸಂಧಾನಕ್ರಮ ಪ್ರಕಾರಗಳನ್ನು ಎಂದೂ ಅರ್ಥಮಾಡಬಹುದು. **ಕಂಡುಕೊಳ್ವದು** - ತಿಳಿದುಕೊಳ್ಳತಕ್ಕದ್ದು. ಮೂಲಮನ್ತ್ರದಲ್ಲೂ, **ಅಖಂಡನಮಃ**-ಎಂಬುದರಿಂದ, ಉಪಾಯಾನುಷ್ಠಾನವೂ, **ನಾರಾಯಣಾಯ**, ಎಂಬಲ್ಲಿರುವ ಚತುರ್ಥಿಯಿಂದ, ಆತನಿಗೆ ಮಾಡುವಕೈಙ್ಕರ್ಯವೂ ಹೇಳಲ್ಪಟ್ಟವು. ಇದರಿಂದ ಪಾಠಕ್ರಮವು ಮೂಲಮನ್ತ್ರದ್ವಯವೆರಡರಲ್ಲೂ ಒಂದೇ ವಿಧವು. ಅನುಸಂಧಾನ ಕ್ರಮವು ಅರ್ಥಕ್ರಮವಾಗಿ ಎರಡರಲ್ಲೂ ಆಗಬಹುದು. ಆದರೆ ಮನ್ತ್ರಗಳು ಹೀಗೆ ವ್ಯತ್ಯಸ್ತಗಳಾಗಿ ಹೇಳಿದವೆಂದು ಭಾವಿಸತಕ್ಕದ್ದಲ್ಲವು. ಈ ಮನ್ತ್ರಗಳಲ್ಲಿ ಹೇಳಬೇಕಾದುದು ಇಷ್ಟೇ. ಮೋಕ್ಷಾರ್ಥಿಗಳಿಗೆ ಸಾಧನೋಪಾಯವು ಇದು ಎಂದು ಮೊದಲು ಹೇಳಿ, ಅದರಿಂದ ಸಾಧ್ಯವಾದಫಲವು ಇದು ಎಂದು ಹೇಳತಕ್ಕದ್ದರಲ್ಲಿ ಏನೂ ವಿರೋಧವಿಲ್ಲವೆಂದು ಮುಂದಿನವಾಕ್ಯದಿಂದ ತಿಳಿಸುತ್ತಾರೆ.—**ಫಲಾರ್ಥಿಯಾಯ್**-ಗೋಪ್ತೃತ್ವವರಣ ಅಂಗದಿಂದಕೂಡಿ ಫಲಾರ್ಥಿಯಾಗಿ, **ಅಧಿಕಾರಿಯಾನಾಲಿರೇ** - ಅಂಗಗಳಿಂದಕೂಡಿದ ಅಧಿಕಾರಿಯಾದವನಲ್ಲವೇ, **ಇವನುಕ್ಕು**-ಈತನಿಗೆ, **ಉಪಾಯಾನುಷ್ಠಾನಮ್ ವರುವದು**-ಅಂಗಿರೂಪವಾದ ಆತ್ಮ

## ದ್ವಯಸ್ಯ ಪ್ರಾಧಾನ್ಯ ಉಪಾಯಾನುಷ್ಠಾನಪರತ್ವೇ ಸಮ್ಮತಿಮಾಹ.

**೧. "ದ್ವಯೇನ ಶರಣಂವ್ರಜೇತ್ ೨ ದ್ವಯಾರ್ಥಶ್ಶರಣಾಗತಿಃ" ಎಙ್ಗಿರ ಅಭಿಯುಕ್ತರ್ ಪಾಶುರಙ್ಗಳಾಲುಮ್ ದ್ವಯಮ್ ಉಪಾಯಾನುಷ್ಠಾನತ್ತೈ ಪ್ರಧಾನಮಾಗ ಪ್ರಕಾಶಿಪ್ಪಿಕ್ಕಿರದು.**

**ದ್ವಯೇ ಅವಾನ್ತರವಾಕ್ಯತ್ರಯೇಽಪಿಪ್ರಧಾನತಯಾ ಏಕವಾಕ್ಯಮೇವ.**

---

ಸಿಕ್ಷೇಪರೂಪ ಅನುಷ್ಠಾನದಲ್ಲಿ ಯೋಗ್ಯತೆಯುಂಟಾಗುತ್ತದೆ ಆದುದರಿಂದ ಅನುಸಂಧಾನಕ್ಕೇನೋ ಅರ್ಥಕ್ರಮವು. ಮನ್ತ್ರಗಳಲ್ಲಿರುವದು ಪಾಠಕ್ರಮವು, ಎರಡೂ ಸರಿಯೇ ಎಂಬ ಭಾವವು. ಹಾಗಾದರೆ ಈ ದ್ವಯವೇನು ಅನುಸಂಧಾನ ಮನ್ತ್ರವೇ ಅಥವಾ ಉಪಾಯಾನುಷ್ಠಾನ ಮನ್ತ್ರವೇ ಎಂಬ ವಿಚಾರದಲ್ಲಿ ದ್ವಯವು ಪ್ರಧಾನವಾಗಿ ಉಪಾಯಾನುಷ್ಠಾನಮನ್ತ್ರವೆಂದು ಹೇಳುತ್ತಾರೆ.—

ದ್ವಯವು ಮುಖ್ಯವಾಗಿ ಅನುಷ್ಠಾನಮನ್ತ್ರವು.

---

**(೧) "ದ್ವಯೇನ ಶರಣಂವ್ರಜೇತ್"** "ದ್ವಯಮನ್ತ್ರವನ್ನು ಉಚ್ಚರಿಸಿ ಭಗವಂತನಲ್ಲಿ ಶರಣಾಗತಿಯನ್ನು ಅನುಷ್ಠಿಸತಕ್ಕದ್ದು," **(೨) "ದ್ವಯಾರ್ಥಶ್ಶರಣಾಗತಿಃ"** — ದ್ವಯಮನ್ತ್ರಾಭಿಪ್ರಾಯವು ಶರಣಾಗತ್ಯನುಷ್ಠಾನವು," **ಎಙ್ಗಿರ ಅಭಿಯುಕ್ತರ್**-ಎನ್ನುವ ಪೂಜ್ಯರುಗಳ, **ಪಾಶುರಙ್ಗಳಾಲುಮ್**-ಇಂತಹ ಸೂಕ್ತಿಗಳಿಂದಲೂ, ಎನ್ನುವದರಿಂದ ಇತರ ಪ್ರಮಾಣಗಳು ಬೇರೆ ಉಂಟು; ಶ್ರುತಿವಾಕ್ಯಗಳೂ, ಪುರಾಣವಾಕ್ಯಗಳೂ ಭಗವಚ್ಛಾಸ್ತ್ರೋಕ್ತಿಗಳೂ ಉಂಟೆಂಬಭಾವವು ತೋರಿಬರುತ್ತದೆ, **ದ್ವಯಮ್**-ದ್ವಯಮನ್ತ್ರವು, **ಉಪಾಯಾನುಷ್ಠಾನತ್ತೈ**—ಉಪಾಯಾನುಷ್ಠಾನವನ್ನು, **ಪ್ರಧಾನಮಾಗ**—ಮುಖ್ಯವಾಗಿ **ಪ್ರಕಾಶಿಪ್ಪಿಕ್ಕಿರದು**-ಪ್ರದರ್ಶಿಸುತ್ತದೆ. ಕೇವಲ ಮಹತ್ತಾದ ಪುರುಷಾರ್ಥವನ್ನು ಪ್ರದರ್ಶಿಸುವ ಮಹಾಮನ್ತ್ರವೆಂಬ ಅನುಸಂಧಾನಕ್ಕಾಗಿ ಈ ಮನ್ತ್ರವನ್ನು ಭಾವಿಸತಕ್ಕದಲ್ಲವು. ಸಾಙ್ಗಭರಸಮರ್ಪಣ ಪೂರ್ವಕವಾದ ಅನುಷ್ಠಾನಮನ್ತ್ರವೆಂದೇ ಭಾವಿಸತಕ್ಕದ್ದು. ಈ ಮನ್ತ್ರದ ಪ್ರಧಾನವಾದ ಭಾವನೇ ಅನುಷ್ಠಾನಪರತ್ವವೆಂಬುದು ಮುಖ್ಯತಾತ್ಪರ್ಯವು.

ದ್ವಯದಲ್ಲ ಅವಾನ್ತರ ಮೂರು ವಾಕ್ಯಗಳಾದರೂ ಪ್ರಧಾನವಾಗಿ
ಒಂದು ಮಹಾವಾಕ್ಯವೇ

---

**ಇಙ್ಗು**-ಈ ದ್ವಯಮನ್ತ್ರದಲ್ಲಿ, **ಪೂರ್ವಖಂಡಮುಮ್**-ಶ್ರೀಮನ್ನಾರಾಯ

---

(೧) (೨) ಅರುಳಾಳ್ ಪೆರುಮಾಳ್ ಎಂಬೆರುಮಾನಾರ್

**ಇಙ್ಙ ಪೂರ್ವಖಂಡಮುಮ್, ಚತುರ್ಥ್ಯನ್ತಪದಙ್ಗಳುಮ್, ನಮಸ್ಸಮಾಗಮೂನ್ರು ಅವಾಂತರವಾಕ್ಯಙ್ಗಳಾನಾಲುಮ್ ತಿರಳಉಪಾಯ ಪ್ರಧಾನಮಾನ ಒರುವಾಕ್ಯಮಾಯ್ ತ್ತಲೈಕ್ಕಟ್ಟಕ್ಕಡವದು. ಎಙ್ಙನೇ ಎನ್ನಿಲ್ ?—ಸರ್ವಸ್ವಾಮಿಯಾಯ್, ಸರ್ವಪ್ರಕಾರ ನಿರತಿಶಯ ಭೋಗ್ಯನಾಯ್, ಪೆರಿಯ ಪಿರಾಟ್ಟಿಯಾರೋಡು ಪಿರಿವಿಲ್ಲಾದ ನಾರಾಯಣ್ ತಿರುವಡಿಗಳಿಲ್**

**ಏ ಚರಣೌಶರಣಂಪ್ರಪದ್ಯೇ**-ಎಂಬ ಪೂರ್ವಖಂಡವು ಒಂದುವಾಕ್ಯವು, **ಚತುರ್ಥ್ಯನ್ತಪದಙ್ಗಳುಮ್**-ಉತ್ತರಖಂಡದ ಚತುರ್ಥೀವಿಭಕ್ತಿ ಇರುವ ಪದಗಳಾದ **ಶ್ರೀಮತೇನಾರಾಯಣಾಯ** ಎಂಬುದು ಎರಡನೆಯ ವಾಕ್ಯವು, **ನಮಸ್ಸಮಾಗ**-**ನಮಃಭವೇಯುಮ್**-ಎಂದು ಮೂರನೆಯ ವಾಕ್ಯವು, **ಮೂನ್ರುಅವಾಂತರವಾಕ್ಯಙ್ಗಳಾಲುಮ್**-ಹೀಗೆ ಮಧ್ಯೆ ಇರುವ ಮೂರು ವಾಕ್ಯಗಳಾಗಿ ತೋರಿದರೂ, **ತಿರಳ**-ಅವುಗಳನ್ನು ಸೇರಿಸಿ, ಅಥವಾ ಸಮುಚ್ಚಯದಿಂದ, **ಉಪಾಯಪ್ರಧಾನಮಾನ**-ಉಪಾಯಾನುಷ್ಠಾನವನ್ನು ಮುಖ್ಯವಾಗಿ ಪ್ರದರ್ಶಿಸುವ, **ಒರುವಾಕ್ಯಮಾಯ್** ಒಂದುಮಹಾವಾಕ್ಯವಾಗಿ, **ತಲೈಕ್ಕಟ್ಟಕ್ಕಡವದು** - ಉಪಕಾರಕವಾಗುವುದು. ಮೂರುವಾಕ್ಯಗಳು ಹೇಗೆ ? ಶ್ರೀಮನ್ನಾರಾಯಣ ಪಾದಕಮಲದಲ್ಲಿ ಸಪರಿಕರವಾದ ಆತ್ಮನಿಕ್ಷೇಪದೊಂದಿಗೆ ಭರಸಮರ್ಪಣೆಯನ್ನು ಪ್ರಾರ್ಥಿಸುವೆನು ಎಂಬುದು ಒಂದುವಾಕ್ಯವು; ತಾನುಮಾಡುವಕೈಂಕರ್ಯವೆಲ್ಲವೂ ಲಕ್ಷ್ಮೀಯುಕ್ತನಾದ ನಾರಾಯಣನಿಗೆ ಆಗತಕ್ಕದ್ದು ಎಂಬುದು ಎರಡನೆಯ ವಾಕ್ಯವು ; ಅದು ತನಗಲ್ಲವು ಅಥವಾ ಸರ್ವಾನಿಷ್ಟ ನಿವೃತ್ತಿಯೂ ಉಂಟಾಗಲಿ ಎಂಬುದು ಮೂರನೆಯ ವಾಕ್ಯವು. **ದ್ವಯಕ್ಕೆ**-ಈ ಮೂರು ಅವಾಂತರವಾಕ್ಯಾಭಿಪ್ರಾಯಗಳೆಲ್ಲಾ ಸೇರಿದ ಒಂದು ಮಹಾವಾಕ್ಯದಲ್ಲೇ ಅಭಿಪ್ರಾಯವು ಎಂದು ಭಾವವು. ಇದು ಹೇಗೆ ಎಂಬುದನ್ನು ವಿಶದವಾಗಿ ತಿಳಿಸುತ್ತಾರೆ. **ಸರ್ವಸ್ವಾಮಿಯಾಯ್**-ವಿಶ್ವದ ಸಮಸ್ತಕ್ಕೂ ಸ್ವಾಮಿಯಾಗಿ, **ಸರ್ವಪ್ರಕಾರ ನಿರತಿಶಯಭೋಗ್ಯನಾಯ್,** (ಇವುಗಳು ನಾರಾಯಣಶಬ್ದದಿಂದ ಉಪಪಾದಿತಾರ್ಥಗಳು) ಸರ್ವಪ್ರಕಾರದಿಂದಲೂ ನಿರತಿಶಯಭೋಗ್ಯಭೂತನಾಗಿ, ಸರ್ವಸ್ವಾಮಿಯಾದುದರಿಂದ ಉಪಾಯವಾಗಿರಲು ಯೋಗ್ಯನು, ಸರ್ವಪ್ರಕಾರ ನಿರತಿಶಯ ಭೋಗ್ಯನಾಗಿರುವದು ಕಲ್ಯಾಣಗುಣಗಣಯೋಗ, ವಿಭೂತಿದ್ವಯಯೋಗ, ದಿವ್ಯಮಙ್ಗಳವಿಗ್ರಹ ದಿವ್ಯಾಭರಣ ದಿವ್ಯಾಯುಧಗಳಿಂದ ಯುಕ್ತನಾಗಿ ಸರ್ವಲಾವಣ್ಯವನ್ನು ಹೊಂದಿದವನಾದುದರಿಂದ ಪರಮಭೋಗ್ಯನಾಗಿ, **ಪೆರಿಯಪಿರಾಟ್ಟಿಯರೋಡು**-ಪಟ್ಟಮಹಿಷಿಯಾದ ಲಕ್ಷ್ಮೀಯೊಂದಿಗೆ, **ಪಿರಿವಿಲ್ಲಾದ**-ಆಕೆಯು ಅಪೃಥಕ್ಸಿದ್ಧವಿಶೇಷಣವಾಗಿ ಎಂದಿಗೂ ಅಗಲದೇ ಇರುವ. (**ಶ್ರೀಮತ್**-ಎಂಬಲ್ಲಿರುವ ಮತುಪ್‌ಪ್ರತ್ಯಯಾರ್ಥವು) **ನಾರಾಯಣ್ ತಿರುವಡಿಗಳಿಲೇ** - ನಾರಾಯಣನ ಪಾದಗಳಲ್ಲಿ (ಚರಣಶಬ್ದಾ

**ಸ್ವರೂಪಸ್ಪ್ರಾಪ್ತಮಾನ, ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತ ಸರ್ವವಿಧ ಕೈಙ್ಕರ್ಯತ್ತುಕ್ಕುಮ್ ವಿರೋಧಿಯಾನ ಸರ್ವಮುಮ್ ಕಳಿತ್ತು, ಪರಿಪೂರ್ಣ ಕೈಙ್ಕರ್ಯಮ್ ಪೆರುಗೈಕ್ಕು ಅಕಿಂಚನನಾನ ಅಡಿಯೇನ್ ಸ್ವರಕ್ಷಣ ಭರಾದಿಗಳಿಲ್ ಎನಕ್ಕು ಅನ್ವಯಮುರುವ್ವಡಿ, ಶ್ರೀಮಾನಾನ ನಾರಾಯಣನ್ ತಿರುವಡಿಗಳಿಲೇ ಅಙ್ಗಪಂಚಕ ಸಂಪನ್ನಮಾನ ಆತ್ಮರಕ್ಷಾಭರ ಸಮರ್ಪಣಂ ಪಣ್ಣುಗಿರೇನ್ ಎನ್ರು ದ್ವಯತ್ತಿಲ್ ತಿರಣ್ಣಪೊರುಳ್.**

ರ್ಥವು) **ಸ್ವರೂಪಸ್ಪ್ರಾಪ್ತಮಾನ** - ಶೇಷಭೂತನಾದತನಗೆ ಸ್ವರೂಪತಃ ಪ್ರಾಪ್ತವಾದ (ನಾರಾಯಣಾಯ ಎಂಬುದರಲ್ಲೇ ಶೇಷತ್ವವು ಅಂತರ್ಗತವು) **ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತಗಳಾದ ಸರ್ವವಿಧಕೈಙ್ಕರ್ಯಕ್ಕೆ** (ಇದು ಉತ್ತರ ಖಂಡದ ಚತುರ್ಥೀವಿಭಕ್ತಿಗಳ ಅರ್ಥವು) **ವಿರೋಧಿಯಾನ ಸರ್ವಮುಮ್ ಕಳಿನ್ದು**—ವಿರೋಧವಾದ ಸಮಸ್ತವನ್ನು ಹೋಗಲಾಡಿಸಿಕೊಂಡು (ನಮಶ್ಶಬ್ದಾರ್ಥವು) **ಪರಿಪೂರ್ಣಕೈಙ್ಕರ್ಯಂಪೆರುಗೈಕ್ಕು**-ಪರಿಪೂರ್ಣವಾದ ಕೈಙ್ಕರ್ಯಗಳನ್ನು ಹೊಂದುವದಕ್ಕಾಗಿ (ಚತುರ್ಥಿಗಳ ಅರ್ಥವು) **ಅಕಿಂಚನಾನಅಡಿಯೇನ್**—ಅಕಿಂಚನನಾದ ದಾಸನಾದ ನಾನು (ಇದುಪ್ರಪದ್ಯೇ ಎಂಬಲ್ಲಿರುವ ಉತ್ತಮಪುರುಷಾರ್ಥವು) **ಸ್ವರಕ್ಷಣಭರಾದಿಗಳಿಲ್** - ತನ್ನನ್ನುರಕ್ಷಿಸಿಕೊಳ್ಳುವ ಭಾರವೇ ಮೊದಲಾದವುಗಳಲ್ಲಿ **ಎನಕ್ಕು**-ನನಗೆ, **ಅನ್ವಯಮುರುವ್ವಡಿ**-ಸಂಬಂಧವು ನಿಶ್ಶೇಷವಾಗಿ ತೊಲಗುವಹಾಗೆ, (ನಮಃ ಎಂಬಲ್ಲಿ ಈ ಅರ್ಥವು ದ್ಯೋತಿತವು) **ಶ್ರೀಮಾನಾನನಾರಾಯಣನ್ ತಿರುವಡಿಗಳಿಲೇ**-ಲಕ್ಷ್ಮೀಯುಕ್ತನಾದ ನಾರಾಯಣನ ಚರಣಗಳಲ್ಲಿ (ಶ್ರೀಮನ್ನಾರಾಯಣಚರಣೌ ಎಂಬುದರ ಅರ್ಥವು) **ಅಙ್ಗಪಂಚಕ ಸಂಪನ್ನಮಾನ**-ಅಂಗಪಂಚಕದಿಂದ ಸೇರಿದ, **ಆತ್ಮರಕ್ಷಾಭರಸಮರ್ಪಣವನ್ನು ಪಣ್ಣುಕಿರೇನ್**-ಮಾಡುತ್ತೇನೆ ಪ್ರಪದ್ಯೇ ಎಂಬುದರ ಅರ್ಥವು, **ಎನ್ರು**-ಎಂಬುದು **ತಿರಣ್ಣಪೊರಳ್**-ಸಾರಭೂತವಾದ ನಿಷ್ಕೃಷ್ಟವಾದ ಅರ್ಥವು. ಹೀಗೀಗ ಏಕವಾಕ್ಯವಾಗಿ ಭಾವಿಸತಕ್ಕದೆಂದು ಉಪದೇಶಿಸಿರುತ್ತಾರೆ. ಈ ಏಕವಾಕ್ಯದಲ್ಲಿ ಉತ್ತರ ಖಂಡದಲ್ಲಿ ಹೇಳಲ್ಪಟ್ಟ ಪ್ರಾಪ್ತಿಗಾಗಿ ಪೂರ್ವಖಂಡದಲ್ಲಿ ಹೇಳಲ್ಪಟ್ಟ ಸಾಙ್ಗಪ್ರಪದನವನ್ನು ಅನುಷ್ಠಿಸಿರುತ್ತೇನೆಂದು ಅನ್ವಯಿಸಿರುತ್ತಾರೆ ಸರ್ವಸ್ವಾಮಿಯಾಗಿ ನಿರತಿಶಯಭೋಗ್ಯನಾಗಿ ಲಕ್ಷ್ಮಿಯೊಂದಿಗೇ ಯಾವಾಗಲೂ ಸೇರಿ, ಲೋಕದಂಪತಿಗಳ ಚರಣಾರವಿಂದದಲ್ಲಿ ಸದಾ ಸರ್ವವಿಧ ಕೈಂಕರ್ಯಮಾಡಬೇಕೆಂಬ ಅಭಿಲಾಷೆಯಿಂದ, ಅದಕ್ಕೆ ವಿರೋಧಿಯಾನ ಸರ್ವಪಾಪವೂ ಕಳೆದುಹೋಗಿ ತತ್ಪ್ರಾಪ್ತಿಗಾಗಿ, ಸ್ವರಕ್ಷಣಭರಾದಿಗಳಲ್ಲಿ ನಾನು ಅಕಿಂಚನನಾಗಿರುವದರಿಂದ ನನಗೆ ಯಾವ ಸಂಬಂಧವೂ ಇಲ್ಲದಹಾಗೆ, ಸರ್ವಭರವನ್ನೂ ಶ್ರಿಯಃಪತಿಯಾದ ನಾರಾಯಣನಾದ ನೀನೇ ವಹಿಸತಕ್ಕದೆಂದು ಈ ಆತ್ಮರಕ್ಷಣಭರಸಮರ್ಪಣವನ್ನು ಮಾಡಿರುತ್ತೇನೆ ಎಂಬುದು ದ್ವಯದ ನಿಷ್ಕೃಷ್ಟಾರ್ಥವೆಂದು ಬೋಧಿಸಿರುತ್ತಾರೆ.

**ವೈರಾಗ್ಯವಿಜಿತಸ್ವಾಂತೈಃ ಪ್ರಪತ್ತಿವಿಜಿತೇಶ್ವರೈಃ ।**
**ಅನುಕ್ರೋಶೈಕವಿಜಿತೈರಿತ್ಯುಪಾದೇಶಿ ದೇಶಿಕೈಃ** ॥ ೧೦೮ ॥

ದ್ವಯಮನ್ತ್ರಾರ್ಥಗಳನ್ನೆಲ್ಲಾ ಉಪಪಾದಿಸಿ ಅದರ ಸಾರಭೂತಾರ್ಥವನ್ನು ತಿಳಿಸಿದರು. ಇತರರ ಪೂರ್ವಪಕ್ಷಗಳನ್ನೆಲ್ಲಾ ನಿರಾಕರಿಸಿ ಸಿದ್ಧಾನ್ತಾರ್ಥವನ್ನು ಸ್ಥಾಪಿಸಲು ಬರೀತರ್ಕಬಲಮಾತ್ರವೇ ಅಲ್ಲವು; ಮತ್ತು ಹಿಂದೆ ಹೇಳಿದಹಾಗೆ ಬರೀಶಾಸ್ತ್ರಪ್ರಮಾಣ ಬಲಮಾತ್ರವೇ ಅಲ್ಲವು; ತಮಗೆ ಸದಾಚಾರ್ಯಕಟಾಕ್ಷದಿಂದ ಲಬ್ಧವಾದ ಸತ್ಸಂಪ್ರದಾಯ ಬಲವೂ ಉಂಟೆಂಬುದಕ್ಕೆ ಮುಂದೆ ಒಂದು ಕಾರಿಕೆಯನ್ನು ಅನುಗ್ರಹಿಸುತ್ತಾರೆ.—ಸಾಕ್ಷಾತ್ತಾಗಿ ಶ್ರೀಭಾಷ್ಯಕಾರರವರೇ ಶ್ರೀ ತಿರುಕೋಟ್ಟಿಯೂರು ನಂಬಿಗಳಿಂದ ಬಹುಕಷ್ಟಪಟ್ಟು ಪ್ರಾರ್ಥಿಸಿತಿಳಿದ ಗೂಢವಾದ ಅಭಿಪ್ರಾಯಗಳು. ಇವು ಗುರುಶಿಷ್ಯಕ್ರಮದಿಂದ ಶ್ರೀನಡಾದೂರ್ ಅಮ್ಮಾಳ್‌ರವರಿಗೂ, ಅವರಿಂದ ತಮ್ಮ ಗುರುಗಳಾದ ವಾದಿಹಂಸಾಂಬುವಾಹಾಚಾರ್ಯರಿಗೂ, ಅವರಿಂದ ತಮಗೂ ಹೀಗೆ ಗುರುಶಿಷ್ಯಪರಂಪರೆಯಿಂದ ಲಭಿಸಿದ ರಹಸ್ಯಾರ್ಥಗಳಾದುದರಿಂದ ಪರಮಗ್ರಾಹ್ಯಗಳೆಂದು ಹೇಳುತ್ತಾರೆ.—ಅರ್ಥವು – ಈ ದ್ವಯಮನ್ತ್ರದ ಅರ್ಥಗಳನ್ನು ತಾವು ತರ್ಕಬಲದಿಂದಲೂ ಯುಕ್ತಿಯಿಂದಲೂ ಮಾತ್ರ ಭಾವಿಸಿದುದಲ್ಲವು. ಸದ್ಗುರುಕಟಾಕ್ಷ ಬಲದಿಂದುಂಟಾದ ಸದಾಚಾರ್ಯರಿಂದ ಸತ್ಸಂಪ್ರದಾಯರೀತ್ಯಾ ತಮಗೆ ಲಭಿಸಿದ ಅರ್ಥಗಳೆಂದು ಹೇಳುತ್ತಾರೆ.—**ದೇಶಿಕೈಃ**– ಪರಮದಯಾಳುಗಳಾದ ತಮ್ಮ ಆಚಾರ್ಯರಾದ ವಾದಿಹಂಸಾಂಬುವಾಹಾಚಾರ್ಯರಿಂದ, **ಇತ್ಯುಪಾದೇಶಿ**- ಮೇಲೆ ಉಪಪಾದಿಸಿದರೀತಿಯಲ್ಲಿ ಉಪದೇಶಿಸಲ್ಪಟ್ಟಿತು. ಈ ದ್ವಯಮನ್ತ್ರದ ಸ್ವಾರಸ್ಯಾರ್ಥವು; ಗೌರವಾರ್ಥಕದಿಂದ ಬಹುವಚನವೆಂದು ಭಾವಿಸತಕ್ಕದ್ದು. ಸ್ವಾಚಾರ್ಯರನ್ನು ಬೋಧಿಸುವಾಗ ಬಹುವಚನವೇ ಇರತಕ್ಕದ್ದೆಂಬುದು ನಿಯಮವು. ಅಥವಾ ಅವರ ಆಚಾರ್ಯರನ್ನೂ ಪ್ರಾಚಾರ್ಯಾದಿಪರಂಪರೆಯನ್ನು ಮನಸ್ಸಿನಲ್ಲಿ ಇಟ್ಟಾದರೂ ದೇಶಿಕೈಃ ಎಂಬ ಬಹುವಚನವು. ಇದು ಸತ್ಸಂಪ್ರದಾಯತ್ವವನ್ನು ಸ್ಥಾಪಿಸುತ್ತದೆ. ಈ ಆಚಾರ್ಯರು ಎಂತವರೆಂದರೆ ಮೂರುವಿಶೇಷಣಗಳಿಂದ ತಿಳಿಸುತ್ತಾರೆ. **ವೈರಾಗ್ಯವಿಜಿತಸ್ವಾಂತೈಃ** - ಇಂದ್ರಿಯಗಳಲ್ಲೂ, ವಿಷಯಗಳಲ್ಲೂ ಪ್ರವರ್ತಿಸದಹಾಗೆ ಅವುಗಳಲ್ಲಿ ವೈರಾಗ್ಯಭಾವದಿಂದ ಜಯಿಸಲ್ಪಟ್ಟ ಮನಸ್ಸುಳ್ಳವರು, ಐಹಿಕಭೋಗಗಳಲ್ಲಾಗಲಿ, ಖ್ಯಾತಿಲಾಭ ಪೂಜೆಗಳಲ್ಲಾಗಲಿ ಮನಸ್ಸಿಲ್ಲದವರು; **ಇಂದ್ರಿಯೇಭ್ಯಃ ಪರಾಹ್ಯರ್ಥಾಃ ಅರ್ಥೇಭ್ಯಶ್ಚ ಪರಂಮನಃ**- ಇಂದ್ರಿಯಗಳನ್ನು ವಶಮಾಡಿಕೊಳ್ಳುವದಕ್ಕಿಂತ ವಿಷಯಗಳನ್ನು ವಶಮಾಡಿಕೊಳ್ಳುವದುತ್ತಮವೆಂದೂ, ವಿಷಯಗಳನ್ನು ವಶಮಾಡಿಕೊಳ್ಳುವದಕ್ಕಿಂತ ಮನಸ್ಸನ್ನೇ ಜಯಿಸಿ ವಶಮಾಡಿಕೊಂಡವರು; **ನಿರ್ವಿಷಯಂ ಮನಃ** ಎಂಬಲ್ಲಿ ಹೇಳಿರುವಹಾಗೆ, ಮುಕ್ತಿಗೆ ಮನಸ್ಸು ನಿರ್ವಿಷಯವಾಗಿರತಕ್ಕದ್ದು.

**" ಪರಮಾತ್ಮನಿಯೋರಕ್ತಃ ವಿರಕ್ತೋಽ ಪರಮಾತ್ಮನಿ "** ಪರಮಾತ್ಮನನ್ನು ಹೊಂದಬೇಕೆಂಬುವನಿಗೆ ಪರಮಾತ್ಮನಲ್ಲದ ಐಹಿಕಗಳಲ್ಲಿ ಸಂಗಕೂಡದೆಂದೂ ಹೇಳಿರುವಹಾಗೆ ಮನಸ್ಸನ್ನು ಜಯಿಸಿದವರು. **" ಮನೋಹಿಹೇತು ಸ್ಸರ್ವೇಷಾಂ ಇನ್ದ್ರಿಯಾಣಾಂ ಪ್ರವರ್ತನೇ "** (ರಾ. ಸುಂದರ) ಇಂದ್ರಿಯಗಳ ವಿಷಯೋಪಭೋಗಗಳಲ್ಲಿ ಪ್ರವರ್ತಿಸಬೇಕಾದರೆ ಮನಸ್ಸೇ ಮುಖ್ಯಹೇತುವು. ಹಾಗೆ ಪ್ರವರ್ತಿಸದ ಹಾಗೆ ಮನಸ್ಸನ್ನು ಗೆದ್ದವರು ತಮ್ಮ ಆಚಾರ್ಯರು ಎಂದು ಹೇಳಿಕೊಂಡರು. ಇನ್ನು ಎಂತವರೆಂದರೇ **ಪ್ರಪತ್ತಿ ವಿಜಿತೇಶ್ವರೈಃ**-ದ್ವಯದ ಮೂಲಕ ಅನುಷ್ಠಿಸಿದ ಪ್ರಪತ್ತಿಯಿಂದ ಸರ್ವೇಶ್ವರನನ್ನೇ ಜಯಿಸಿ ವಶಮಾಡಿಕೊಂಡಿರುವರು. ಪ್ರಪದನವು ಅಷ್ಟು ಮಾಹಾತ್ಮ್ಯೆಯುಳ್ಳದು. ಸರ್ವೇಶ್ವರನನ್ನೇ ವಶಮಾಡಿಕೊಡುತ್ತದೆ. ಹಿಂದೆ ಉದಾಹರಿಸಿದ ವಶೀಕರಣಪರಂಪರೆಯನ್ನು ಬೋಧಿಸುವ ಶ್ರುತಿಯು ಹೀಗೆಯೇ **ಮನಸಶ್ಚ ಪರಾಬುದ್ಧಿ ರ್ಬುದ್ಧೇರಾತ್ಮಾ ಮಹಾನ್ಪರಃ । ಮಹತಃ ಪರಮವ್ಯಕ್ತ ಮವ್ಯಕ್ತಾತ್ಪುರುಷಃ ಪರಃ । ಪುರುಷಾನ್ನ ಪರಂ ಕಿಂಚಿತ್ಸಾ ಕಾಷ್ಠಾ ಸಾ ಪರಾಗತಿಃ"** (ಕಠ. ೧-೩-೧೦) ಮನಸ್ಸಿಗಿಂತ ಬುದ್ಧಿ, ಬುದ್ಧಿಗಿಂತ ಆತ್ಮಾ, ಹೀಗೆ ಹೇಳುತ್ತಾಹೋಗಿ ಪರಮಪುರುಷನನ್ನು ವಶಮಾಡಿಕೊಳ್ಳುವದೇ ಸರ್ವೋತ್ತಮವೆಂದು ತಿಳಿದವರು ಹಾಗೆ ಪರಮ ಪುರುಷನನ್ನು ವಶಮಾಡಿಕೊಳ್ಳುವದಕ್ಕೆ, **ತಸ್ಯ ಚ ವಶೀಕರಣಂ ತಚ್ಛರಣಾಗತಿರೇವ** ಎಂದು ತಿಳಿದು ಭಗವಂತನ ಪಾವಕಮಲದಲ್ಲಿ ಶರಣಾಗತಿಯನ್ನು ಅನುಷ್ಠಿಸಿ ಸರ್ವೇಶ್ವರನನ್ನೇ ಜಯಿಸಿ **" ಅಹಂಭಕ್ತಪರಾಧೀನಃ "** ಎಂದು ಹೇಳುವಹಾಗೆ ಮಾಡಿಕೊಂಡು, **"ಶಾಸನಂಕರಪಾವಕಿಮ್ "** ಎಂದು ಭಗವಂತನು ಹೇಳುವಹಾಗೆ ಮಾಡಿಕೊಂಡವರು. ಹೀಗೆ ಐಹಿಕವನ್ನು ಜಯಿಸಿ ತ್ಯಾಗಮಾಡಿದವರು ; ಮತ್ತು ಆಮುಷ್ಮಿಕ ಪ್ರಾಪ್ತಿಗಾಗಿ ಈಶ್ವರನನ್ನೇ ಜಯಿಸಿದವರು. ಹೀಗೆ ತಮ್ಮ ಮನಸ್ಸನ್ನೂ ಪರಮಾತ್ಮನನ್ನೂ ಜಯಿಸಿದವರು. ಈ ಉಪದೇಶವು ದೊರೆತದ್ದು ಖ್ಯಾತಿ ಲಾಭ ಪೂಜೆಗಳಿಗೆ ಆಶೆಪಡುವವರ ಉಪದೇಶವೂ ಅಲ್ಲವು. ಐಹಿಕದಲ್ಲೇ ಬಿದ್ದುನರಳುವವ ಉಪದೇಶವೂ ಅಲ್ಲವು. ಪರಮಪುರುಷನನ್ನು ವಶಮಾಡಿಕೊಳ್ಳದೆ ಭಗವನ್ನಿಗ್ರಹಕ್ಕೆ ಒಳಗಾದವರ ಉಪದೇಶವೂ ಅಲ್ಲವು. ಪರಮ ವೈರಾಗ್ಯವುಳ್ಳವರು, ಭಗವಂತನನ್ನು ವಶಮಾಡಿಕೊಂಡವರು. ಇನ್ನೂ ಎಂತವರೆಂದರೆ. **ಅನುಕ್ರೋಶೈಕವಿಜಿತೈಃ**-ಇವರುಗಳು ಭಗವಂತನನ್ನೇ ಜಯಿಸಿದವರು, ಅಂತವರನ್ನು ನಾವು ನಮಗೆ ಅನುಕೂಲವಾಗಿ ಜಯಿಸುವದು ಸಾಧ್ಯವೇ ಎಂದರೆ, ಅತಿಸುಲಭರು, ಅವರು ಎನ್ನುತ್ತಾರೆ.—ಅವರನ್ನು ನಾವು ಆಶ್ರಯಿಸಿದರೆ ಸಾಕು, ಅದರಿಂದುಂಟಾಗುವ ಅವರ ಕೃಪೆಯಿಂದಲೇ ಅವರು ಜಿತರು ಎನ್ನುತ್ತಾರೆ **ಅನುಕ್ರೋಶೈಕ**-ಅವರಿಗೆ ಶಿಷ್ಯರುಗಳ ವಿಷಯದಲ್ಲಿರುವ ಕೃಪಾಮಾತ್ರದಿಂದಲೇ ಅವರು ಜಿತರು. ಪರಮಾತ್ಮನನ್ನೂ ವಿಷಯು

**ಇದಮಷ್ಟಪದಂವ್ಯಾಸೇ ಸಮಾಸೇಷಟ್ಪದಂವಿದುಃ ।**
**ವಾಕ್ಯಂಪಂಚಪದೈರ್ಯುಕ್ತ ಮಿತ್ಯಾಖ್ಯಾತಃ ಪ್ರಧಾನಕಮ್ ॥ ೧೦೯ ॥**

ನಿವೃತ್ತಿಯನ್ನೂ ಉಂಟುಮಾಡಬಹುದಾದ ಮಹನೀಯರು, ನಮಗೆ ಅತಿ ಸುಲಭ ರಾಗಿ " **ದೇಶಿಕೋಮೇದಯಾಳುಃ** " ಎಂಬಲ್ಲಿ ಹೇಳಿರುವ ಹಾಗೆ ತಮ್ಮ ದಯೆ ಯಿಂದಲೇ ತಾವೇಜಿತರು, ಇಂತಹ ಮಹಾನುಭಾವರುಗಳಾದ ತಮ್ಮ ಗುರುಗ ಳಿಂದ ಇದು ಉಪದಿಷ್ಟವಾದುದರಿಂದ ಸಾರ್ವತ್ರಿಕವಾಗಿ ಉಪಾದೇಯವೆಂದು ಹೇಳಿರುತ್ತಾರೆ. ಸ್ವಬುದ್ಧಿಕಲ್ಪಿತವಲ್ಲವೆಂಬ ಭಾವವು. ಇದರಿಂದ ಶ್ರೀದೇಶಿಕ ರವರಿಗೆ ಇರುವ ಗುರುಭಕ್ತಿಯು ನಿರುಪಮವಾದುದೆಂಬುದು ವ್ಯಕ್ತಪಡುತ್ತದೆ. ಹೀಗಲ್ಲವೇ ಎಲ್ಲರಿಗೂ ಆಚಾರ್ಯಭಕ್ತಿಯು ಇರತಕ್ಕದ್ದು. " **ಸಾಕ್ಷಾನ್ನಾರಾಯ ಣೋದೇವಃಕೃತ್ವಾಮರ್ತ್ಯಮಯೀಂತನುಮ್ । ಮಗ್ನಾನುದ್ಧರತೇ ಲೋ ಕಾನ್ ಕಾರುಣ್ಯಾಚ್ಛಾಸ್ತ್ರಪಾಣಿನಾ** " ಎಂಬುದು ಅನುಸಂಧೇಯವು. ಆದುದ ರಿಂದ ಆಳ್ವಾರಾಚಾರ್ಯರುಗಳಿಂದುಂಟಾದ ಉಪಕಾರವಿಷ್ಟು ಎಂದು ಹೇಳಲು ಅಳವಿಲ್ಲವು. ಅರ್ಥವು.—ಹಿಂದೆಯೇ ಈ ದ್ವಯಮನ್ತ್ರದ ಪೂರ್ವಖಂಡದ ವಿವರಣದಲ್ಲಿ ಎರಡುವಿಧ ಯೋಜನೆಯನ್ನು ಪ್ರದರ್ಶಿಸಿದರು. ಹೇಗೆಂದರೆ ಶ್ರೀಮನ್ ನಾರಾಯಣ, ಎಂದು ಭಿನ್ನಪದಗಳಾಗಿಟ್ಟುಕೊಂಡು ಎರಡು ಸಂಬೋ ಧನೆಗಳೆಂದು ಭಾವಿಸಿ, ಚರಣೌ, ಶರಣಂ ಪ್ರಪದ್ಯೇ ಎಂದು ಪೂರ್ವಖಂಡ ದಲ್ಲಿ ಐದುಪದಗಳೆಂದು ಉತ್ತರಖಂಡದಲ್ಲಿ ಮೂರು ಪದವು ಹೀಗೆ ಎಲ್ಲಾಸೇರಿ ಎಂಟುಪದಗಳಾಗುತ್ತವೆಂದೂ, ಹಾಗಲ್ಲದೆ ಇನ್ನೊಂದು ಯೋಜನೆಯಲ್ಲಿ ಶ್ರೀ ಮನ್ನಾರಾಯಣ ಚರಣೌ ಎಂದು ಒಂದೇ ಸಮಾಸಪದವೆಂದಿಟ್ಟುಕೊಂಡರೆ ಆರುಪದವೆಂದೂ ಭಾವಿಸಬಹುದು ಎಂದು ಹೇಳಿದರಷ್ಟೇ; ಅದನ್ನೇ ಪುನಃ ಇಲ್ಲಿ ಜ್ಞಾಪಿಸಿ, ಇಲ್ಲಿಹೇಳಬೇಕಾದುದು ಮುಖ್ಯವಾಗಿ ಮನ್ತ್ರವು ಅನುಷ್ಠಾನಪರ ವಾದುದರಿಂದ, ಕ್ರಿಯೆಯು ಕಾರಿಕಾನ್ವಿತವಾಗಿರಬೇಕೆಂಬ ನ್ಯಾಯದಿಂದ ಆಖ್ಯಾ ತವಾದ ಪ್ರಪದ್ಯೇ ಎಂಬುದನ್ನೇ ಮುಖ್ಯವಾಗಿ ಉಳ್ಳದೆಂದು ಭಾವಿಸತಕ್ಕದ್ದೆಂದು ಹೇಳುತ್ತಾರೆ —**ಇದಂ**-ಈ ದ್ವಯಮನ್ತ್ರವನ್ನು **ವ್ಯಾಸೇ**-ಬೇರೆ ಬೇರೆ ಪದಗಳಾಗಿ ಭಾವಿಸಿ, ಎಂದರೆ ಸಮಾಸಪದವಲ್ಲವೆಂದು ಭಾವಿಸಿದರೆ, **ಅಷ್ಟಪದಂ**-ಶ್ರೀಮನ್, ನಾರಾಯಣ, ಚರಣೌ, ಶರಣಂ, ಪ್ರಪದ್ಯೇ ಎಂದು ಪೂರ್ವಖಂಡದಲ್ಲಿ ಐದುಪದ ಗಳುಳ್ಳದ್ದಾಗಿಯೂ ಉತ್ತರಖಂಡದಲ್ಲಿ, ಶ್ರೀಮತೇ, ನಾರಾಯಣಾಯ, ನಮಃ ಎಂದು ಮೂರುಪದಗಳನ್ನುಳ್ಳದ್ದಾಗಿಯೂ ಹೀಗೆ ಎಂಟುಪದಗಳನ್ನುಳ್ಳದ್ದಾಗಿ **ವಿದುಃ**-ತಿಳಿದುಕೊಂಡರು, ಇನ್ನು ಕೆಲವರು, **ಸಮಾಸೇ ಶ್ರೀಮನ್ನಾರಾಯಣ ಚರಣೌ**-ಎಂದು ಇದೇಸಮಾಸಪದವೆಂದು ಭಾವಿಸಿ **ಷಟ್ಪದಂವಿದುಃ**-ಪೂರ್ವ ಖಂಡದಲ್ಲೂ ಮೂರು ಪದಗಳು, ಉತ್ತರಖಂಡದಲ್ಲೂ ಮೂರು ಪದಗಳು, ಹೀಗೆ

## ಅಥದ್ವಯಂ ಪ್ರಶಂಸತಿ

**ಏಕಂದ್ವಯಂ ತ್ರ್ಯವಯವಂ ಸುಖಲಭ್ಯತುರ್ಯಂ ।**
**ವ್ಯಕ್ತಾರ್ಥಪಂಚಕ ಮುಪಾತ್ತಷಡಂಗ ಯೋಗಮ್ ॥**

ಆರುಪದಗಳನ್ನುಳ್ಳದೆಂದು, **ವಿದುಃ**-ತಿಳಿದರು, ಯಾರು ಎಂದರೆ ಪ್ರಾಜ್ಞರು. ಈ ಎರಡನೆಯ ಭಾವನೆಯಲ್ಲಿ ಇನ್ನೂ ಏನು ಸ್ವಾರಸ್ಯವನ್ನು ಗ್ರಹಿಸಿದರು ಎಂದರೆ ತಿಳಿಸುತ್ತಾರೆ. **ಪಂಚಪದ್ಯೈರ್ಯುಕ್ತಮ್**-ಐದು ಪದಗಳಿಂದ ಕೂಡಿ ದುದಾಗಿಯೂ, ಮತ್ತೂ **ಆಖ್ಯಾತಪ್ರಧಾನಕಮ್**-**ಪ್ರಪದ್ಯೇ** ಎಂಬ ಕ್ರಿಯಾಪ ದವೇ ಅಂಗಿಯಾಗಿ ಆತ್ಮನಿಕ್ಷೇಪರೂಪ ಅನುಷ್ಠಾನ ಪ್ರದರ್ಶಕವಾಗಿ ತದ್ವಾರಾ ಪ್ರಧಾನವಾಗಿವುಳ್ಳ ಆರನೆಯಪದವನ್ನುಳ್ಳದ್ದಾಗಿಯೂ **ಇತಿವಾಕ್ಯಂವಿದುಃ**-ಇರುವ ಒಂದು ಮಹಾವಾಕ್ಯವಾಗಿಯೂ ತಿಳಿದರು. ಪಂಚಪದ್ಯೈಃ, ಒಂದು ಆಖ್ಯಾತವೆಂದು ಏಕೆ ಹೇಳಿದರು ಎಂದರೆ **ಪ್ರಪದ್ಯೇ**-ಎಂಬುದೊಂದೇ ಪ್ರಧಾನ ವಾದ ಆಖ್ಯಾತವು. ಮಿಕ್ಕ ಐದು ಪದಗಳು ಸುಬಂತಗಳೆಂಬ ಭಾವವು. ಆಗ ನಮಃ ಎಂಬುದಕ್ಕೆ ಯಾವ ಅರ್ಥವೆಂದು ವಿಚಾರ ಮಾಡಬೇಕಾಗುತ್ತದೆ. **ನಮಃ**-ಎಂಬುದಕ್ಕೆ **ವಿರೋಧಿನಿವೃತ್ತಿಗಾಗಿ** ಎಂದು ಅರ್ಥವನ್ನು ಮಾಡಿರುತ್ತಾರೆ. ಹೀಗೆ ಆರುಪದಗಳನ್ನುಳ್ಳದೆಂದು ಪ್ರಮಾಣವೂ ಇರುವದರಿಂದ ಶ್ರೀ ನಿಗಮಾಂತ ದೇಶಿಕರವರಿಗೆ ಎರಡನೆಯ ಅಭಿಪ್ರಾಯವೇ ಅಭಿಮತವಾದುದೆಂದು ತೋರಿಬರು ತ್ತದೆ.—ಪ್ರಮಾಣವು ಯಾವುದೆಂಬುದು ಹಿಂದೆಯೇ ಉದಾಹೃತವು.—**ಅಥಾತ ಶ್ರೀಮದ್ದ್ವಯೋತ್ಪತ್ತಿಃ । ವಾಕ್ಯೋದ್ವಿತೀಯಃ। ಷಟ್ಪದಾನಿ । ಅರ್ಥಾದಶ। ಪಂಚವಿಂಶತ್ಯಕ್ಷರಾಣಿ। ಪಂಚದಶಾಕ್ಷರಂಪ್ರಥಮಂ। ದಶಾಕ್ಷರಂ ದ್ವಿತೀಯಂ। ನವಾಕ್ಷರಂ ಪ್ರಥಮಂದ್ವಿತೀಯೆತೃತೀಯ ಚತುರ್ಥಾಃತ್ರ್ಯಕ್ಷರಾಣಿ। ಪಂಚಾ ಕ್ಷರಂ ಪಂಚಮಂ । ದ್ವ್ಯಕ್ಷರಷ್ಷಷ್ಠಃ । ನವಾರ್ಣವಂ ವಿದ್ಧಿಹೃದಯಂ । ತೃತೀ ಯಾರ್ಣವಂ ಶಿರೋಕ್ತಮ್ ಶಿಖಾರ್ಣಂತ್ರ್ಯಕ್ಷರಂ । ವಿದ್ಧಿಕವಚಂ ತದ್ವದೇ ವಹಿ। ನೇತ್ರಂಪಂಚಾಕ್ಷರಂ। ಪಶ್ಚಾದಸ್ತ್ರಂದ್ವ್ಯಕ್ಷರ ಮೀರಿತಮ್** ಎಂಬುದು." ಇಂತಹ ಅರ್ಥವನ್ನು ವ್ಯಕ್ತಪಡಿಸುವದರಿಂದ ಎಲ್ಲಾ ಸೇರಿ ಮೇಲೆ ಉಪಪಾದಿಸಿ ದರೀತಿಯಲ್ಲಿ ಒಂದು ಮಹಾವಾಕ್ಯಾರ್ಥವನ್ನುಳ್ಳದು ಈ ಮನ್ತ್ರವೆಂದೇ ಭಾವಿಸ ತಕ್ಕದ್ದು ಎಂಬ ಅಭಿಪ್ರಾಯವು.

ಮುಂದಿನ ಶ್ಲೋಕದಿಂದ ಈ ಮನ್ತ್ರದ ಮಾಹಾತ್ಮ್ಯೆಯನ್ನು ಪ್ರದರ್ಶಿಸುತ್ತಾರೆ.

---

ದ್ವಯ ಮನ್ತ್ರಕ್ಕೆ ಹಿಂದೆ ಉಪಪಾದಿಸಿದ ಮಾಹಾತ್ಮ್ಯೆಯನ್ನೇ ಸಙ್ಗ್ರಹಿಸಿ ಹೇಳುತ್ತಾರೆ. **ಏಕಂ**-ಈ ಮನ್ತ್ರವು ಒಂದೇ ವಾಕ್ಯವುಳ್ಳದ್ದು, ಅಥವಾ ಮೋಕ್ಷವನ್ನು ಸಂಪಾದಿಸಿಕೊಡುವ ಅನುಷ್ಠಾನ ಮನ್ತ್ರವಾದುದರಿಂದ ಮನ್ತ್ರಗಳಲ್ಲಿ ಮುಖ್ಯವು,

**ಸಪ್ತಾರ್ಣವೀಮಹಿಮವದ್ವಿವೃತಾರ್ಷವರ್ಣಂ ।**
**ರಂಗೇಶತಾಮಿಹರಸಂ ನವಮಂ ಪ್ರಸೂತೇ** ॥ ೬೬ ॥

ಅಥವಾ ಅಂತಹ ಅನುಷ್ಠಾನಮಂತ್ರಗಳಲ್ಲೂ ಮುಖ್ಯವಾದುದು. **ದ್ವಯಂ**— ಉಪಾಯೋಪೇಯಗಳನ್ನು ತಿಳಿಸುವ ಪೂರ್ವೋತ್ತರಖಂಡಗಳನ್ನುಳ್ಳದ್ದಾಗಿ ದ್ವಯವೆಂದು ಹೆಸರುಳ್ಳದು. **ತ್ರ್ಯವಯವಂ**—ಮೂರು ಅವಾಂತರ ವಾಕ್ಯಗಳುಳ್ಳದ್ದು; ಅಥವಾ ಮೋಕ್ಷಾರ್ಥಿಗೆ ಬೇಕಾದ ತತ್ತ್ವಹಿತ ಪುರುಷಾರ್ಥ ಹೀಗೆ ಮೂರನ್ನೂ ತಿಳಿಸುವಂತಾದ್ದು. ಅಥವಾ ಇಷ್ಟಪ್ರಾಪ್ತಿ, ಅನಿಷ್ಟನಿವೃತ್ತಿಗಳನ್ನು ಸಾಧಿಸಿಕೊಡುವ ಉಪಾಯಾನುಷ್ಠಾನವೆಂದು ಹೀಗೆ ಮೂರು ಅಭಿಪ್ರಾಯಗಳನ್ನುಳ್ಳದು. **ಸುಖಲಭ್ಯತುರ್ಯಮ್**—ಕರ್ಮಯೋಗಾದಿ ಪರಂಪರೆಗಳ ಅನುಷ್ಠಾನದ ಕ್ಲೇಶಗಳಿಲ್ಲದೆ, ಸಕೃದನುಷ್ಠಾನದಿಂದಲೇ ಸುಲಭವಾಗಿ ಹೊಂದಬಹುದಾದ ನಾಲ್ಕನೆಯ ಪುರುಷಾರ್ಥವಾದ ಮೋಕ್ಷವನ್ನುಳ್ಳದು, **ವ್ಯಕ್ತಾರ್ಥಪಂಚಕಮ್**- ವ್ಯಕ್ತವಾದ ಅರ್ಥಪಂಚಕಗಳ ಅರ್ಥವುಳ್ಳದ್ದು, ಮೋಕ್ಷದಾಯಕನಾದ ಶ್ರಿಯಃ ಪತಿಯೇ ಪ್ರಾಪ್ಯದಸ್ವರೂಪವನ್ನೂ (ಶ್ರೀಮನ್ನಾರಾಯಣ), ಅಕಿಂಚನಾಧಿಕಾರಿಯಾದ ಪ್ರಾಪ್ತಾವಿನ ಸ್ವರೂಪವನ್ನೂ (ಉತ್ತಮಪುರುಷ,) ಪ್ರಾಪ್ತಿಗೆ ಉಪಾಯವು,ಸಿದ್ಧೋಪಾಯನು, ಶ್ರೀಮನ್ನಾರಾಯಣನು ಸಾಧ್ಯೋಪಾಯವು ಪ್ರಪದ್ಯೆ ಎಂಬಲ್ಲಿ ತೋರಿಬರುವ ಸಾಙ್ಗಪ್ರಪದನರೂಪ ಆತ್ಮನಿಕ್ಷೇಪವೂ,ಫಲವೂ ಶ್ರೀಮತೇ ನಾರಾಯಣಾಯ ಎಂಬಲ್ಲೂ, ಪ್ರಾಪ್ತಿವಿರೋಧಿಯನ್ನು ನಮಃ ಎಂಬಲ್ಲೂ ಹೀಗೆ ಅರ್ಥಪಂಚಕಗಳ ಅರ್ಥಗಳನ್ನುಳ್ಳದು, **ಉಪಾತ್ತಷಡಂಗಯೋಗಮ್**— ಹೊಂದಲ್ಪಟ್ಟ ಐದು ಅಂಗಗಳ ಮತ್ತು ಒಂದು ಅಂಗಿಯ ಸಂಬಂಧವುಳ್ಳದು, ಅಥವಾ **ಉಪಾತ್ತಷಡಂಗಯೋಗಃ**—ಐದು ಅಂಗಗಳು ಒಂದು ಅಂಗಿಯು ಹೀಗೆ ಆರನ್ನು ಹೊಂದಿರುವ **ಯೋಗಃ**—ಪ್ರಪತ್ತಿರೂಪವಾದ ಯೋಗವು; ಯಾವುದರಿಂದುಂಟಾಗುತ್ತದೋ ಅದು, ಭಕ್ತಿಮಾರ್ಗವು ಹೇಗೆ ಯೋಗವೋ, ಈ ಪ್ರಪತ್ತಿಯೂ ಸಹ ಯೋಗವೇ ಎಂಬ ಭಾವವು: **"ನಜಾತಿಭೇದಂ ನಕುಲಂ ನಲಿಂಗಂ ನಗುಣಾಃಕ್ರಿಯಾಃ । ನ ದೇಶಕಾಲೌ ನಾವಸ್ಥಾಂಯೋಗೋಹ್ಯಯಮಪೇಕ್ಷತೇ"** ಎಂಬಲ್ಲಿ ಪ್ರಪತ್ತಿಯು **"ಅಯಂಯೋಗಃ"** ಎಂದು ಹೇಳಲ್ಪಟ್ಟಿರುತ್ತದೆ. ಆನುಕೂಲ್ಯಸಙ್ಕಲ್ಪಾದಿ ಐದು ಅಂಗಗಳಿಂದ ಕೂಡಿದ ಆತ್ಮನಿಕ್ಷೇಪವಾದ ಅಂಗಿಯಾದ ಶರಣಾಗತಿ ಪ್ರತಿಪಾದಕಮಂತ್ರವೆಂಬ ಭಾವವು, ಇನ್ನೂ ಎಂತಾದ್ದೆಂದರೆ, **ಸಪ್ತಾರ್ಣವೀಮಹಿಮವತ್, ಸಪ್ತಾರ್ಣವೀ**-ಎಂದರೆ ಏಳು ಸಮುದ್ರಗಳ ಸಮೂಹವು ಇವುಗಳ ಮಹಿಮೆಯುಳ್ಳದು; ಎಂದರೆ ಅದರ ಹಾಗೆ ಅನೇಕರತ್ನ ಸದೃಶಗಳಾದ ಅಮೋಘಾರ್ಥಗಳನ್ನುಳ್ಳದು, ಅಥವಾ

ಅದರಹಾಗೆ ಗಂಭೀರವಾಗಿಯೂ ವಿಸ್ತಾರವಾಗಿರುವ ಅನೇಕಾರ್ಥಗಳನ್ನುಳ್ಳದು ಅಥವಾ ಸಾಗರಕ್ಕೆ ಯಾವುದು ಮಹಿಮೆಯಲ್ಲಿ ಸದೃಶವೆಂದು ಕೇಳಿದರೆ, **"ಸಾಗರಸ್ಸಾಗರೋಪಮಃ"** (ಶ್ರೀರಾಮಾಯಣದ ೧೧೦-೨೩) ಎಂಬ **ಮಹರ್ಷಿ**ಯ ಉಕ್ತಿಪ್ರಕಾರ ದ್ವಯಮನ್ತ್ರಕ್ಕೆ ಸದೃಶವಾದ, ಮಹಿಮೆಯುಳ್ಳ ಮನ್ತ್ರವು ಯಾವುದೆಂದರೆ ದ್ವಯವೇ ಎಂದು ಹೇಳುವ ಅಸದೃಶಮಹಿಮೆಯುಳ್ಳದೆಂಬ ಭಾವವು, **ವಿವೃತಾಪ್ಯರ್ಣವಮ್** — ವ್ಯಾಖ್ಯಾನಮಾಡಲ್ಪಟ್ಟ ಮೂಲಮನ್ತ್ರವನ್ನುಳ್ಳದು ಎಂದರೆ ಮೂಲಮನ್ತ್ರದ ವ್ಯಾಖ್ಯಾನರೂಪವಾದುದು ಈ ಮನ್ತ್ರವು ಎಂಬ ತಾತ್ಪರ್ಯವು. ಇಂತಹ ಅಮೋಘಮನ್ತ್ರವು, **ಇಹ**-ಈ ಜಗತ್ತಿನಲ್ಲಿ, **ರಙ್ಗೇಶತಾಂ**-ಶ್ರೀರಂಗವಾಸಿಗಳಿಗೆ, ಅವರು ಎಂತವರು ಎಂದರೆ ಈ ಮನ್ತ್ರದ ಮೂಲಕ ಗುರುವ ಮುಖೇನ ಉಪಾಯಾನುಷ್ಠಾನವನ್ನನುಷ್ಠಿಸಿದ ಪ್ರಪನ್ನರುಗಳಿಗೆ, **ನವಮಂರಸಂ**-ಒಂಬತ್ತನೆಯ ರಸವಾದ ಶಾನ್ತಿರಸವನ್ನು, ಎಂದರೆ ಸಂಸಾರದಲ್ಲಿ ಜಿಹಾಸೆಯನ್ನು ಹುಟ್ಟಿಸಿ ವೈರಾಗ್ಯದ ಮೂಲಕ ಉಂಟಾಗುವ ಮನಶ್ಶಾನ್ತಿಯನ್ನು, **ಪ್ರಸೂತೇ**-ಹೆರುತ್ತದೆ ಎಂದರೆ ಉಂಟುಮಾಡುತ್ತದೆ ಐಹಿಕಸುಖದುಃಖಗಳನ್ನು ಪರಿಗಣಿಸದೆ ಮುಂದೆ ಬರುವ ಉತ್ಕೃಷ್ಟಪದವಿಯನ್ನು ಚಿನ್ತಿಸುವ ಸಮಚಿತ್ತತೆಯನ್ನುಂಟುಮಾಡುತ್ತದೆ, ಎಂದರೆ ಪರಮಾನಂದವನ್ನುಂಟು ಮಾಡುತ್ತದೆ. **"ಇಙ್ಗೇತಿರುಯುಮೋ"** ಇಲ್ಲೇ ಇದ್ದುಬಿಡೋಣವೇ ಎಂಬಷ್ಟು ಶಾಂತಿರಸವಾದ ಆನಂದವನ್ನುಂಟುಮಾಡುತ್ತದೆಂಬ ಭಾವವು. **ರಂಗೇಶತಾಂ**-ಎಂಬ ಪ್ರಯೋಗದಿಂದ ಎರಡು ಅರ್ಥಗಳು ತೋರಿಬರುತ್ತದೆ —(೧) **"ದ್ವಯಮರ್ಥಾನುಸಂಧಾನೇನ ಸಹ ಸದೈವಂ ವಕ್ತಾ ಅತ್ರೈವ ಶ್ರೀರಂಗೇಸುಖಮಾಸ್ವ"** ಎಂಬ ಆಜ್ಞೆಯು ಶ್ರೀರಂಗನಾಥನಿಂದ ದೊರೆತತೆರದಿ, ಈ ದ್ವಯಾರ್ಥವನ್ನು ಗ್ರಹಿಸಿ ತನ್ಮೂಲಕ ಉಪಾಯಾನುಷ್ಠಾನ ಮಾಡಿದವನು, ಈ ಮನ್ತ್ರಾರ್ಥವನ್ನು ಅನುಸಂಧಾನಮಾಡುತ್ತಾ ಉಚ್ಚರಿಸುತ್ತಾ ದಿವ್ಯದೇಶವಾದ ಶ್ರೀರಂಗದಲ್ಲಿ ದ್ದುಕೊಂಡಿರತಕ್ಕದ್ದೆಂಬ ಭಾವವನ್ನು ಸ್ಮರಿಸುವ ಹಾಗೆ ಮಾಡುತ್ತದೆ. (೨) ಅಥವಾ ಪ್ರಪನ್ನನು ಎಲ್ಲಿ ವಸಿಸಬೇಕೆಂಬ ಸಂದರ್ಭದಲ್ಲಿ ಹೇಳುತ್ತಾರೇನೆಂದರೆ **ರಙ್ಗೇಶತಾಮ್**-ಪರಮಾತ್ಮನಿಗೆ ವಿಹಾರಕ್ಕೆ ಯೋಗ್ಯವಾದ ರಂಗಸ್ಥಳಗಳು ದಿವ್ಯದೇಶಗಳು, ಅವುಗಳಲ್ಲಿ ಎಲ್ಲಿಯಾದರೂ ಒಂದರಲ್ಲಿ ಇದ್ದುಕೊಂಡು ಉಪಾಯಾನುಷ್ಠಾನವನ್ನು ಮಾಡಿದವರಿಗೆ ಶಾಂತಿರಸವನ್ನುಂಟು ಮಾಡುತ್ತದೆಂದಾದರೂ ಅರ್ಥವಾಗಬಹುದು ಒಂದು, ಎರಡು ಮೂರು ಎಂದು ಒಂಬತ್ತರವರೆಗೂ ಸಂಖ್ಯಾಕ್ರಮವು ಆಲಂಕಾರಿಕವಾಗಿ ಹೇಳಲ್ಪಟ್ಟಿರುತ್ತದೆ.

## ದ್ವಯಾರ್ಥಂ ದ್ರಾವಿಡಗಾಥಯಾ ಸಂಗೃಹ್ಣಾತಿ.

**ಒದುಮಿರಣ್ಡೇ (ಒದಿಯಿರಣ್ಡೆ)ಯಿಶೈನ್ದರುಳಾಲುದವುನ್ತಿರುಮಾಲ್ ।**
**ಪಾದಮಿರಣ್ಡುಮ್ ಶರಣೆನಪ್ಪತ್ತಿ ನಮ್ಪುಜ್ಞಯತ್ತಾಳ್ ॥**
**ನಾತನ್ನೈನಣ್ಣಿನಲನ್ತಿಗಳ್ ನಾಟ್ಟಲಡಿಮ್ಮೈಯಿಲ್ಲಾಮ್ ।**
**ಕೋದಿಲುಣರ್ತ್ತಿಯುಡೆ ಕೊಳ್ಳುವಾರು ಕುರಿತ್ತನಮೇ ॥ ೩ ॥**

ದ್ವಯದ ಅರ್ಥವನ್ನು ಒಂದು ಪಾಶುರದ ಮೂಲಕ ಸಂಗ್ರಹಿಸಿ ಹೇಳುತ್ತಾರೆ.

ಅರ್ಥವು. — **"ಸಕೃಜ್ಜಪ್ತೇನ ಮಂತ್ರೇಣ" "ಅಹೋದ್ವಯಸ್ಯ ಮಾಹಾತ್ಮ್ಯಮ್" "ಸಕೃದುಚ್ಚಾರಸ್ಸಂಸಾರವಿಮೋಚನಂ ಭವತಿ"** ಇತ್ಯಾದಿ ಪ್ರಮಾಣಗಳಿಂದ ತೋರಿಬರುವ ಮಾಹಾತ್ಮ್ಯೆಯನ್ನು ತಿಳಿಸುತ್ತಾರೆ. **ಒದುಂ**—ಶ್ರುತಿಪ್ರಮಾಣವಾಗಿರುವ, ಕಠವಲ್ಲಿಯಲ್ಲಿ ಅಧ್ಯಯನಮಾಡಲ್ಪಟ್ಟ, ಇದರಿಂದ ಈ ಮನ್ತ್ರವು ಬರೀತಾಂತ್ರಿಕವಲ್ಲವು ಶ್ರುತಿಪ್ರತಿಪಾದ್ಯವೆಂದು ಹೇಳಲ್ಪಟ್ಟಿರುವದರಿಂದ ಮಾಹಾತ್ಮ್ಯೆಯುಂಟೆಂಬ ಭಾವವು, **ಇರಣ್ಡೈ**-ಪೂರ್ವಖಂಡ ಉತ್ತರಖಂಡ ಎರಡು ಭಾಗಗಳನ್ನುಳ್ಳದ್ದಾಗಿ ಉಪಾಯೋಪೇಯಗಳನ್ನು, **ಇಶೈನ್ದು**-ಅಙ್ಗೀಕರಿಸಿ,ಅಥವಾ ಒಟ್ಟುಕೂಡಿಸಿ,**ಅರುಳಾಲ್**-ಕೃಪೆಯಿಂದ, **ಉದವುಮ್**-**"ಸಕೃದುಚ್ಚಾರಃ"** ಎಂದು ಮೇಲೆ ಉದಾಹರಿಸಿರುವ ಪ್ರಮಾಣರೀತ್ಯಾ ಒಂದುಸಲಉಚ್ಚರಿಸಿ, **ತಿರಮಾಲ್ಪಾದಮಿರಣ್ಡುಮ್**-ಲಕ್ಷ್ಮೀವಲ್ಲಭನ ಪಾದದ್ವಂದ್ವವನ್ನು, **ಶರಣೆನಪ್ಪತ್ತಿ**-ತನ್ನರಕ್ಷಣೆಗೆ ಉಪಾಯವೆಂದು ಆಶ್ರಯಿಸಿ, ಸಾಪರಾಧಿಯಾಗಿದ್ದರೂ ಯಾವಾಗ ಆಶ್ರಯಿಸಿದನೋ ಆತನ ಶತಾಪರಾಧಗಳಿದ್ದರೇನು ಮನ್ನಿಸಿ ಪರಿಗ್ರಹಿಸಿ ಎಂದು ಪುರುಷಕಾರತ್ವವನ್ನು ಅನುಗ್ರಹಿಸುವ ಲಕ್ಷ್ಮಿಗೆ ಪತಿಯಾದವನ ಪಾದದ್ವಂದ್ವವನ್ನಾಶ್ರಯಿಸಿ ಎಂಬರ್ಥವು, **ಪಾದಮಿರಣ್ಡು**—ಎಂದಿಲ್ಲಿರುವದರಿಂದ ಲಕ್ಷ್ಮಿಯ ಪಾದವನ್ನೂ ನಾರಾಯಣಪಾದವನ್ನೂ, ಪಾದಶಬ್ದವನ್ನು ಜಾತ್ಯೇಕವಚನವಾಗಿ ಭಾವಿಸಿ ಹೀಗೆ ಅರ್ಥವನ್ನು ಹೇಳಬಹುದು, ಅಥವಾ ತಾಯಿಯಾದ ಲಕ್ಷ್ಮಿಗೆ ಕೇವಲ ಕೃಪೆಯಿಂದ ರಕ್ಷಿಸಬೇಕೆಂದಿರುವವಳಿಗೆ ವಾತ್ಸಲ್ಯಾತಿಶಯದಿಂದ ಪ್ರೇರಿತನಾದ ನಾರಾಯಣನ ಪಾದಗಳನ್ನಾಶ್ರಯಿಸಿ, **ನಮ್ಪುಜ್ಞಯತ್ತಾಳ್ ನಾತನ್ನೈನಣ್ಣಿ**-ನಮಗೆ ಅನುಗ್ರಹಮಯಳಾಗಿರುವ ಲಕ್ಷ್ಮಿಗೆನಾಥನಾದವನನ್ನು ಪ್ರಾಪ್ಯವಾಗಿ ಹೊಂದಿ, **ನಲಂತಿಗಳ್ನಾಟ್ಟಲೇ**-ಆನಂದಭರಿತವಾದ ಅಪ್ರಾಕೃತವಾದ ದಿವ್ಯವೈಕುಂಠದಲ್ಲಿ, **ಅಡಿಮ್ಮೈಎಲ್ಲಾಮ್**-ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತ ಸರ್ವವಿಧಕೈಙ್ಕರ್ಯಗಳನ್ನೆಲ್ಲವನ್ನೂ, **ಕೋದಿಲುಣರ್ತ್ತಿಯುಡೆ, ಕೋದಿಲ್**-ದೋಷವಿಲ್ಲದ, ಸ್ವಾರ್ಥಕರ್ತೃತ್ವಭೋಕ್ತೃತ್ವರೂಪ ಭ್ರಮಗಳು ಯಾವುವೂ ಇಲ್ಲದಿರುವ, **ಉಣರ್ತ್ತಿಯುಡೆ**-ಪರಿಪೂರ್ಣಬ್ರಹ್ಮಾನು ಭವ

## ದ್ವಯಸ್ಯ ಹಿತತಮತ್ವ ಮುಪಪಾದಯತಿ.

**ನ ವೇದಾಂತಾಚ್ಛಾಸ್ತ್ರಂ ನ ಮಧುಮಥನಾತ್ತತ್ತ್ವ ಮಧಿಕಮ್ ।**
**ನ ತದ್ಭುಕ್ತ್ಯಾತ್ತೀರ್ಥಂ ನ ತದಭಿಮತಾ ತ್ಸಾತ್ವಿಕಪದಮ್ ॥**

ದೊಂದಿಗೆ, **ಕೊಳ್ಳುಮಾರು**-ಮಾಡುವ ಪ್ರಕಾರವನ್ನು, **ಕುರಿತ್ತನಮೋ**-ದ್ವಯ ಮನ್ತ್ರದಲ್ಲಿರುವ ಪದಗಳ ಅರ್ಥಾನು ಸಂಧಾನದ ಮೂಲಕ ಹೊಂದಿದೆವಲ್ಲವೇ **ತಿಳಿ**ದೆವು ಎಂಬರ್ಥವು.

ದ್ವಯಮನ್ತ್ರದ ಹಿತತಮತ್ವವನ್ನು ಸ್ಥಾಪಿಸುತ್ತಾರೆ.

ಅರ್ಥವು.—ಮೂರುಪಾದಗಳಿಂದ ಹಿತವಾದುವುಗಳನ್ನು ಹೇಳಿ ಅವುಗಳ ಶ್ರೈಷ್ಠ್ಯವನ್ನು ಪಪಾದಿಸಿ ಹೇಳಿ ನಾಲ್ಕನೆಯ ಪಾದದಲ್ಲಿ ನಿರತಿಶಯ ಫಲವು ಮೋಕ್ಷಸುಖವಾಗಿ, ತತ್ಸಾಕ್ಷಾತ್ಸಾಧಕವಾಗಿ ಹಿತತಮವಾದುದು ದ್ವಯ ವೆಂದು ಅದರ ಸರ್ವೋತ್ಕೃಷ್ಟಮಹಿಮೆಯನ್ನು ಸಮರ್ಥಿಸಿ ಹೇಳುತ್ತಾರೆ.—**ನವೇದಾಂತಾಚ್ಛಾಸ್ತ್ರಂ**-ಉಪನಿಷತ್ತುಗಳಲ್ಲಿ ಉಪಪಾದಿತವಾಗಿರುವ ವೇದಾಂತ ಶಾಸ್ತ್ರಕ್ಕಿಂತಲೂ ಹೆಚ್ಚಾದ ಶಾಸ್ತ್ರವಿಲ್ಲವು. **"ವೇದಶಾಸ್ತ್ರಾತ್ಪರಂನಾಸ್ತಿ "** ಎಂದ **ಲ್ಲವೇ** ಪ್ರಮಾಣವಿರುವದು. ಇಲ್ಲಿ ವೇದಶಾಸ್ತ್ರವೆಂಬ ಪ್ರಯೋಗದಿಂದ ವೇದಾಂ ತವೇ ಹೇಳಲ್ಪಟ್ಟದುದು, ಏಕೆಂದರೆ ಶ್ರೀಕೃಷ್ಣಭಗವಾನರವರೇ **" ತ್ರೈಗುಣ್ಯ ವಿಷಯಾವೇದಾಃನಿಸ್ತ್ರೈಗುಣ್ಯೋಭವಾರ್ಜುನ "** ಎಂಬಲ್ಲಿ ಸರ್ವವೇದಾರ್ಥ ಗಳೂ ಉಪಾದೇಯವಲ್ಲವು. **"ಬ್ರಾಹ್ಮಣಸ್ಯ ವಿಜಾನತಃ"** ಪ್ರಾಜ್ಞನಾಗಿ ಬ್ರಹ್ಮವಿತ್ತಾಗಬೇಕೆಂಬುವನಿಗಾದರೋ **ನಿಸ್ತ್ರೈಗುಣ್ಯಭಾಗವೇ** ಉಪಾದೇಯವು ಅದು ಉಪನಿಷತ್ತುಗಳಲ್ಲೇ ದೊರೆಯುತಕ್ಕದ್ದು. **"ಸಾ ವಿದ್ಯಾ ಯಾ ವಿಮು ಕ್ತಯೇ"** ಎಂದು ಹೇಳಿರುವಹಾಗೆ ತತ್ವಹಿತ ಪುರುಷಾರ್ಥಗಳು ವಿಶದವಾಗಿ ಉಪನಿಷತ್ತುಗಳಲ್ಲಿ ಹೇಳಲ್ಪಡುವದರಿಂದ, ಅವುಗಳ ಜ್ಞಾನಕ್ಕಿಂತಲೂ ಹೆಚ್ಚಾದ ವಿದ್ಯೆ ಇಲ್ಲವು ಎಂಬ ಭಾವವು. ನಮ್ಮ ವೇದಾಂತಶಾಸ್ತ್ರವಾದ ಉಪನಿಷತ್ತುಗಳ ನ್ನು ಆಮೂಲಾಗ್ರವಾಗಿ ಗ್ರಹಿಸಿದ ಒಬ್ಬ ಪಾಶ್ಚಾತ್ಯ, ಪಂಡಿತನನ್ನು ಕುರಿತು ವೇದಾಂತವನ್ನು ಕುರಿತೇ ಯಾವಾಗಲೂ ಚಿನ್ತಿಸುತ್ತೀಯಲ್ಲಾ ಇದು ಏಕೆ ? ಎಂದು ಪ್ರಶ್ನಿಸಲು. ವೇದಾಂತದಹಾಗೆ ದುಃಖವನ್ನು ಹೋಗಲಾಡಿಸಿ ಮನಸ್ಸಿಗೆ ಶಾನ್ತಿಯನ್ನೂ, ಆನಂದವನ್ನೂ ಕೊಡುವಂತಹದ್ದು ಬೇರೆ ಇಲ್ಲವು. ಜೀವದೆಶೆ ಯಲ್ಲೂ ಆನಂದದಾಯಕವು, ಅನಂತರವೂ ಆನಂದದಾಯಕವು ಎಂದು ಹೇಳಿದರು. **ನ ಮಧುಮಥನಾತ್ತತ್ವಮಧಿಕಮ್**—ಶ್ರೀಮನ್ನಾರಾಯಣನಿಗಿಂತ ಹೆಚ್ಚಾದ ಪರತತ್ವವು ಯಾವುದೂ ಇಲ್ಲವು. ಇದು **ನದೈವಂ ಕೇಶವಾತ್ಪರಮ್**—ಬ್ರಹ್ಮ ರುದ್ರಾದಿಗಳಿಗೂ ಸ್ವಾಮಿಯಾದ ನಾರಾಯಣನಿಗಿಂತ ಅಧಿಕನಾದ ಪರದೇವತೆ

**ನ ಸತ್ವಾದಾರೋಗ್ಯಂ ನ ಬುಧಭಜನಾದ್ಭೋಽಥ ಜನಕಮ್ ।**
**ನಮುಕ್ತೇ ಸೌಖ್ಯಂ ನ ದ್ವಯವಚನತಃ ಕ್ಷೇಮಕರಣಮ್ ॥**

ಯಿಲ್ಲವು. ಇದು ಪರದೇವತಾ ಪಾರಮಾರ್ಥ್ಯಾಧಿಕಾರದಲ್ಲಿ ಸಪ್ರಮಾಣವಾಗಿ ಉಪಪಾದಿತವು. **ನತದ್ಭಕ್ತಾತ್ತೀರ್ಥಮ್**-ಶ್ರೀ ಮಹಾವಿಷ್ಣುವಿನ ಭಕ್ತರುಗಳಿಂದ ಪಾವನಕರವಾದವುಗಳು ಯಾವುವೂ ಇಲ್ಲವು. ಯಾವ ಗಂಗಾ ಕಾವೇರಿ ಮೊದಲಾದ ಪುಣ್ಯತೀರ್ಥಗಳೂ ಪಾವನತ್ವವನ್ನುಂಟುಮಾಡುವದರಲ್ಲಿ ಆ ಭಕ್ತರಿಗೆ ಸಮನಾಗಲಾರವು **"ನಹ್ಯಮ್ಮಯಾನಿ ತೀರ್ಥಾನಿ ನ ದೇವಾಮೃಚ್ಛಿಲಾಮಯಾಃ । ತೇ ಪುನನ್ತ್ಯುರುಕಾಲೇನ ದರ್ಶನಾದೇವ ಸಾಧವಃ" "ಅಘಂ ವಿಸಕ್ತಿ ಕೋಽಘ್ನಂತಿ ಮುಹೂರ್ತಸೇವಯಾ"** ಪುಣ್ಯತೀರ್ಥಗಳೂ, ಮೃತ್ತಿಲೆ ಇವುಗಳಿಂದ ಮಾಡಲ್ಪಟ್ಟು ಪ್ರತಿಷ್ಠಿತಗಳಾದ ದಿವ್ಯಕ್ಷೇತ್ರಗಳಲ್ಲಿ ನೆಲಸಿರುವ ವಿಗ್ರಹಗಳೂ ಬಹುಕಾಲಾನಂತರ ಸೇವಿಸುವವರನ್ನು ಪವಿತ್ರೀಕರಿಸುತ್ತವೆ. ಸಾಧುಗಳಾದರೆ ದರ್ಶನಮಾತ್ರದಿಂದಲೇ ಪವಿತ್ರೀಕರಿಸುತ್ತಾರೆ, ಎಂಬುದು ಅನುಸಂಧೇಯವು. ಮತ್ತು ಒಂದು ಮುಹೂರ್ತಸೇವೆಯಿಂದಲೇ ಪಾಪವನ್ನೆಲ್ಲಾ ಹೋಗಲಾಡಿಸಲು ಶಕ್ತರು. ಎಂದು ಹೇಳಲ್ಪಟ್ಟಿರುತ್ತವೆ. ಆದುದರಿಂದಲೇ **" ಶ್ರೀ ಮದ್ಭಾಗವತಾರ್ಚನಂ ಭಗವತಃ ಪೂಜಾವಿಧೇರುತ್ತಮಮ್ "** ಎಂದು ಶ್ಲಾಘಿಸಲ್ಪಟ್ಟಿರುತ್ತದೆ. ಹಾಗೆಯೇ ಭಾಗವತದಲ್ಲಿ **"ಭವದ್ವಿಧಾಭಾಗವತಾಸ್ತೀರ್ಥಭೂತಾಸ್ಸ್ವಯಂಪ್ರಭೋ ತೀರ್ಥೀ ಕುರ್ವಂತಿ ತೀರ್ಥಾನಿ ಸ್ವಾಂತಸ್ಥೇನ ಗದಾಭೃತಾ"** ತುಂಬಾ ಪರಿಶುದ್ಧರಾದ ತಮ್ಮಂತಹ ಭಾಗವತರು ಪುಣ್ಯತೀರ್ಥಗಳನ್ನು ಪಾವನಕರಗಳನ್ನಾಗಿ ಮಾಡುತ್ತಾರೆ. ಏಕೆಂದರೆ ಅವರುಗಳ ಮನಸ್ಸಿನಲ್ಲಿ ಶ್ರೀಮಹಾವಿಷ್ಣುವು ಸದಾ ನೆಲಸಿರುವದರಿಂದ ಎಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ **"ಯತ್ರ ಯತ್ರ ಚ ಮದ್ಭಕ್ತಾಃ ಪ್ರಶಾನ್ತಾ ಸ್ಸಮದರ್ಶಿನಃ । ಸಾಧವ ಸ್ಸಮುದಾಚಾರಾ ಸ್ತೇ ಪೂಯನ್ತೇ ಪಿ ಕೀಕಟಾಃ** (ಭಾಗ. 7-10-18) ಇಂತಹ ಭಕ್ತರು ಮಹಾಪತಿತರಿರುವ ಸ್ಥಳಗಳನ್ನು ಸಹ ಪವಿತ್ರೀಕರಿಸುತ್ತಾರೆಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ ಇನ್ನೊಂದು ಕಡೆಯಲ್ಲೂ **" ಪುನಾತಿ ಲೋಕತ್ರಯಮಂಘ್ರಿರೇಣುಭಿ ಶ್ಯುದ್ಧಸ್ವಭಾವ ಸ್ಸ್ಮರಣೆ ರ್ಕಥೋದಿತಃ "** (ಭಾಗ ೧೧-೨-೪೪) ಎಂದು ಹೇಳಲ್ಪಟ್ಟಿರುತ್ತದೆ **ನಿಗೃಹೀತೇಂದ್ರಿಯ ಗ್ರಾಮೋ ಯತ್ರ ಯತ್ರ ವಸೇನ್ನರಃ । ತತ್ರ ತತ್ರ ಕುರುಕ್ಷೇತ್ರಂ ನೈಮಿಶಂ ಪುಷ್ಕರಂ ತಥಾ"** ಇಂದ್ರಿಯಗಳನ್ನೆಲ್ಲಾ ಜಯಿಸಿದ ಮಹಾನುಭಾವನು ಎಲ್ಲೆಲ್ಲಿವಸಿಸುತ್ತಾನೋ, ಅವೆಲ್ಲವೂ ಕುರುಕ್ಷೇತ್ರ, ನೈಮಿಶಾರಣ್ಯ, ಪುಷ್ಕರ ಮೊದಲಾದ ಪುಣ್ಯಕ್ಷೇತ್ರಗಳಹಾಗೆ ಪಾವನರೂಪವಾದುವು ಆದುದರಿಂದ ಅಂತಹ ಸತ್ಪುಗಳೊಂದಿಗೆ ಸಹವಾಸವು ಯುಕ್ತವೆಂದೂ **" ಸದ್ಭಿ ರೇವ ಸಹಾಸೀತ ಸದ್ಭಿಃ ಕುರ್ವೀತಸಂ**

**ಗಮಮ್, । ಸದ್ಭಿರ್ವಿವಾದಂ ಮೈತ್ರೀಂ ಚ ನಾಸದ್ಭಿಃ ಕಿಂಚಿದಾಚರೇತ್"** ಅಸತ್ತುಗಳೊಂದಿಗೆ ಕೂಡದೆಂದೂ ಹೇಳಲ್ಪಟ್ಟಿರುತ್ತದೆ. **ನತದಭಿಮತಾತ್ಸಾತ್ವಿಕಪದಮ್**–ಅಂತಹ ಭಾಗವತೋತ್ತಮರಿಗೆ ಇಷ್ಟವಾದ ವಾಸಸ್ಥಾನಕ್ಕಿಂತ ಬೇರೆ ಇರುವುದಿಲ್ಲವು ಆದುದರಿಂದಲೇ **"ಸಂಸಾರೇಽಸ್ಮಿನ್ ಕ್ಷಣಾರ್ಧೋಽಪಿ ಸತ್ಸಂಗಶ್ಶೇವಧಿರ್ನೃಣಾಂ "** (ಭಾಗ ೧೧-೨-೩೦) ಈ ಸಂಸಾರದಲ್ಲಿ ಒಂದು ಕ್ಷಣಾರ್ಧವಾದಾಗಲಿ ಸತ್ಸಂಗವು ಮನುಷ್ಯರಿಗೆ ಪರಮಪುರುಷಾರ್ಥ ಲಾಭವನ್ನುಂಟುಮಾಡುವಂತಾದ್ದು ಎಂದು ಹೇಳಲ್ಪಟ್ಟಿರುತ್ತದೆ. ಅಧೀತಿಸ್ತವದಲ್ಲಿ **"ತದಕ್ಷತತಪೋವನಂ ತವ ಚ ರಾಜಧಾನೀಸ್ಥಿರಾ "** ಅಂತವರು ವಾಸಿಸುವ ಸ್ಥಳವೇ ಬದರಿಕಾಶ್ರಮಾದಿ ದಿವ್ಯಕ್ಷೇತ್ರಗಳೆಂದು ದಿವ್ಯವೈಕುಂಠಕ್ಕೇ ಸಮಾನವೆಂದೂ ಹೇಳಲ್ಪಟ್ಟಿರುತ್ತದೆ. ಅಂತವರಿಲ್ಲದ ಸ್ಥಳವು ಕಾಶೀ, ಕಾಂಚೀ ಮೊದಲಾದ ಸ್ಥಳಗಳಾಗಿದ್ದರೂ ತಮಗೆ ಅವು ರುಚಿಸುವದಿಲ್ಲವು ಎಂದು **ಸಾಕಾಶೀತಿ ನಚಾಕಶೀತಿ** ಎಂಬ ಶ್ಲೋಕದಲ್ಲಿ ಹೇಳಿರುತ್ತಾರೆ. **ಯತ್ರಾಕ್ಷರ ಸ್ಸಂಸಿದ್ಧೋ ಮಹಾಭಾಗೋ ಮಹೀಯತೇ । ನ ತತ್ರ ಸಂಚರಿಷ್ಯಂತಿ ವ್ಯಾಧಿದುರ್ಭಿಕ್ಷತಸ್ಕರಾಃ "** ಎಂದು ಅತಸಿರುವ ಪ್ರದೇಶಕ್ಕೆ ಮಾಹಾತ್ಮ್ಯೆಯು ಹೇಳಲ್ಪಟ್ಟಿರುತ್ತದೆ. ಮೂಲಮನಸ್ತ್ರಾಧಿಕಾರಾಂತ್ಯದಲ್ಲಿ ( ಪುಟ) ಶ್ರೀ ಗುರುಗಳೇ ಈ ಶ್ಲೋಕಕ್ಕೆ ಅರ್ಥವನ್ನು ಅನುಗ್ರಹಿಸಿರುತ್ತಾರೆ. ಶ್ರೀರಾಮಚಂದ್ರಪ್ರಭುವು ಚಿತ್ರಕೂಟವನ್ನು ತಮಗೆ ಉಪಾದೇಯವಾಸಸ್ಥಳವನ್ನಾಗಿ ಭಾವಿಸುವುದಕ್ಕೆ ಕಾರಣವನ್ನು **"ಮುನಯಶ್ಚ ಮಹಾತ್ಮಾನೋ ವಸಂತ್ಯಸ್ಮಿನ್ ಶಿಲೋಚ್ಚಯೇ। ಅಯಂವಾಸೋ ಭವೇತ್ತಾವದತ್ರ ಸೌಮ್ಯವಸೇಮಹಿ "** ಎಂದು ಹೇಳಿರುತ್ತಾರೆ. ಆದುದರಿಂದ, ಸಾತ್ವಿಕರು ವಾಸಿಸುವಸ್ಥಳವೆಂತಾದ್ದಾಗಿರುತ್ತ ಎಂದರೆ ಅದು ದಿವ್ಯದೇಶವಾಗಿ ಮಹಾನುಭಾವರಾದ ಆಚಾರ್ಯರು ವಾಸಿಸತಕ್ಕದ್ದಾಗಿರಬೇಕೆಂಬ ಭಾವದಿಂದ **ನತದಭಿಮತಾತ್ಸಾತ್ವಿಕಪದಮ್** ಎಂದು ಹೇಳಿ, ಇಂತಹಸ್ಥಳವನ್ನೇ **ತದ್ಭಕ್ತನು** ವಾಸ ಯೋಗ್ಯವೆಂದು ಭಾವಿಸುವನೆಂದು ಹೇಳಲ್ಪಟ್ಟಿತು. ಸ್ಥಾನವಿಶೇಷಾಧಿಕಾರದಲ್ಲಿ ಈ ವಿಷಯವು ವಿಪುಲವಾಗಿ ಉಪಪಾದಿಸಲ್ಪಟ್ಟಿರುತ್ತದೆ. (೧೭೧೫ ನೆಯ ಪುಟವನ್ನುನೋಡಿ).

**ನಸತ್ವಾದಾರೋಗ್ಯಮ್**—ಸತ್ವಗುಣಪ್ರಾಚುರ್ಯವಿರುವವರ ಸಙ್ಗವೇನು. ಅವರೊಂದಿಗೆ ಸಂಭಾಷಣೆಯೇನು, ಸತ್ವಗುಣವಿರುವ ಪದಾರ್ಥಗಳನ್ನೇ ಆಹಾರವಾಗಿ ಸೇವಿಸುವದೇನು, ಇವುಗಳಿಂದಲೇ ಪ್ರಪನ್ನನಿಗೆ ಆರೋಗ್ಯವಾದುದರಿಂದ **ನಸತ್ವಾದಾರೋಗ್ಯಮ್** ಎಂದು ಹೇಳಲ್ಪಟ್ಟಿತು.

(೧) **" ತತ್ರಸತ್ವಂನಿರ್ಮಲತ್ವಾತ್ಪ್ರಕಾಶಕ ಮನಾಮಯಮ್ ।**
**ಸುಖಸಂಗೇನ ಬಧ್ನಾತಿ ಜ್ಞಾನಸಂಗೇನ ಚಾನಘ** (ಗೀ ೧೪-೬)

(೨) **ಸತ್ವಂಸುಖೇ ಸಂಜಯತಿ ರಜಃಕರ್ಮಣಿಭಾರತ ।**(ಗೀ ೧೪-೯)

**(೩) ಸತ್ತ್ವಾತ್ಸಂಜಾಯತೇ ಜ್ಞಾನಂ ರಜಸೋ ಲೋಭ ಏವ ಚ** (ಗೀ.೧೪,೧೭) ಸಾರಾಸ್ವಾದಿನಿಯವರು **ಆರೋಗ್ಯ** ವೆಂದರೆ **ಅರೋಗತಾ ಸಾಧನಂ** ಎಂದರ್ಥ ಮಾಡಿ, ಮೋಕ್ಷಸಾಧನವೆಂದು ಅರ್ಥಮಾಡಿ, **"ಊರ್ಧ್ವಂ ಗಚ್ಛನ್ತಿ ಸತ್ತ್ವಸ್ಥಾಃ"** (ಗೀ ೧೪-೧೮) ಎಂಬುದನ್ನು ಉದಾಹರಿಸಿರುತ್ತಾರೆ. ಸಾರದೀಪಿಕೆಯವರೂ ಹಾಗೆಯೇ ಸತ್ತ್ವಗುಣಾಧಿಕ್ಯವು ಮೋಕ್ಷ ಹೇತುವಾಗುವದರಿಂದ, ಸಂಸಾರರೋಗ ರಾಹಿತ್ಯವೇ ಆರೋಗ್ಯವೆಂದು ಅರ್ಥಮಾಡಿರುತ್ತಾರೆ. ಇದಕ್ಕೆ ಸಾತ್ತ್ವಿಕಸಂಬಂಧವೂ, ಸಾತ್ತ್ವಿಕಾಹಾರ ಸೇವನೆಯೂ ಸಾಧನಗಳೆಂದು ಭಾವಿಸಿ ಹೀಗೆ ಅರ್ಥಮಾಡುವದರಲ್ಲಿ ಏನೂ ವಿರೋಧವಿಲ್ಲವು. **ನ ಬುಧಭಜನಾದ್ಬೋಧಜನಕಮ್**— ಮೋಕ್ಷಹೇತುವಾದ ಜ್ಞಾನದ ಉಪದೇಶವು ಪ್ರಾಜ್ಞನ ಸೇವೆಯಿಂದಲ್ಲದೆ ದೊರೆಯಲಾರದು ಆದುದರಿಂದ ಅಂತಹ ಪ್ರಾಜ್ಞನನ್ನಾಶ್ರಯಿಸಿ ಹೊಂದುವ ಉಪದೇಶಕ್ಕಿಂತ ಮೇಲಾದ ಯಥಾರ್ಥಜ್ಞಾನವನ್ನೀಯುವದು ಇನ್ನು ಯಾವುದೂ ಇಲ್ಲವೆಂಬ ಭಾವವು. ಶಾಸ್ತ್ರಗಳನ್ನು ತಾನೇ ಓದಿ ತಿಳಿದ ಜ್ಞಾನವಾದರೋ ಸಂಸ್ಕಾರಶೂನ್ಯವಾದುದಾಗಿ ವಿಪರೀತಮಾರ್ಗದಲ್ಲಿ ಪ್ರವರ್ತಿಸುವಹಾಗೆ ಮಾಡಿಬಿಟ್ಟೀತು. ಆದುದರಿಂದ ಸದಾಚಾರ್ಯೋಪದೇಶವು ಆವಶ್ಯಕವು. ಆದುದರಿಂದ ಗೀತೆಯಲ್ಲಿ

**ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।**
**ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ (ಗೀ ೪-೩೪)**

ಎಂದು ಹೇಳಲ್ಪಟ್ಟಿರುತ್ತದೆ ಆಚಾರ್ಯನು ಆವಶ್ಯಕವೆಂಬುದು ಹಿಂದೆ ಗುರುಪರಂಪರಾಸಾರದಲ್ಲೂ ಮುಂದೆಯೂ ಉಪಪಾದಿತವು. ಹಾಗೆ ಆಶ್ರಯಿಸಿದವನಿಗೆ ಅನುಗ್ರಹಿಸುವದು ಆಚಾರ್ಯಕೃತ್ಯವೆಂದು ಮುಂಡಕದಲ್ಲಿ **"ತಸ್ಮೈ ಸ ವಿದ್ವಾನ್"** ಎಂಬ ವಾಕ್ಯದಲ್ಲಿ ಹೇಳಲ್ಪಟ್ಟಿರುತ್ತದೆ.

**"ಅನುಗಂತವ್ಯಾಸ್ಸಂತೋ ಯದ್ಯಪಿ ಕುರ್ವನ್ತಿ ನೈಕ ಮುಪದೇಶಮ್ । ಯಾಸ್ತೇಷಾಂ ಸ್ವೈರಕಥಾ ಸ್ತಾ ಸ್ತಾ ಏವ ಭವನ್ತಿ ಶಾಸ್ತ್ರಾರ್ಥಾಃ ॥ ಜ್ಞಾನಾಂಕುರಂ ತತ್ಪರಿವರ್ಧಯನ್ತಿ ಯೇ ಶಾಸ್ತ್ರಸತ್ಸಂಗತಿತೋಯಸೇಕೈಃ ॥ ಏಕೇನ ಹೀನಃ ಕಾಣಸ್ಸ್ಯಾತ್ ದ್ವಾಭ್ಯಾಮಂಧಃ ಪ್ರಕೀರ್ತ್ಯತೇ ॥"**

ಎಂಬ ಪ್ರಮಾಣವನ್ನು ಸಾರವಿವರಣಿಯವರು ಉದಾಹರಿಸಿರುತ್ತಾರೆ. ಇಂತಹ ಪರಮಾಚಾರ್ಯರುಗಳು ಪ್ರಣಾಮಪೂರ್ವಕವಾಗಿ ಪ್ರಾರ್ಥಿಸಿದ ಹೊರತು ಉಪದೇಶಿಸುವರಲ್ಲವು ಆದುದರಿಂದ ಅಂತವರನ್ನು ಆಶ್ರಯಿಸಿ ಹೊಂದಬೇಕಲ್ಲದೆ ಬೀದಿಯಲ್ಲಿ ಎಲ್ಲರಿಗೂ ಲೆಕ್ಚರುಗಳನ್ನು ಕೊಡುವ ಅಜ್ಞಾನಿಗಳನ್ನು ಆಶ್ರಯಿಸತಕ್ಕದ್ದಲ್ಲವು. **ನ ಮುಕ್ತೇಃ ಸೌಖ್ಯಮ್** — ಐಹಿಕಸುಖಗಳೆಲ್ಲಾ ದುಃಖಮಿಶ್ರಗಳಾಗಿಯೂ, ಅನಂತರ ದುಃಖಗಳನ್ನುಂಟುಮಾಡುವುವುಗಳಾಗಿಯೂ ಅಶಾಶ್ವತವಾಗಿಯೂ ಇರುವದರಿಂದ ಸುಖಶಬ್ದದಿಂದ ವ್ಯವಹರಿಸಲು ಯೋಗ್ಯವೇ ಅಲ್ಲವಾದುದರಿಂದ,

ಇಂತಹಕ್ಲೇಶಗಳ ಗಂಧವೇ ಇಲ್ಲದೆ ನಿರತಿಶಯ ಸುಖರೂಪವಾಗಿರುವ **ಪರಿಪೂರ್ಣ** ಬ್ರಹ್ಮವನ್ನನುಭವಿಸುವ ಆನಂದಕ್ಕಿಂತ ಹೆಚ್ಚಿನಸುಖವಿಲ್ಲವು. ಯಾವಾಗಲೂ ಎಲ್ಲವೂ ಅನುಕೂಲವಾಗಿರುವಿಕೆಯೇ ಸೌಖ್ಯವು, ಅದು ಮುಕ್ತಿದೆಶೆಯಲ್ಲಿ ಮಾತ್ರವೇ ಲಭ್ಯವು. **"ಮುಕ್ತಿರ್ಮೋಕ್ಷೋ ಮಹಾನಂದಃ," "ನಿರಸ್ತಾತಿಶಯಾಹ್ಲಾದಸುಖಭಾವೈಕ ಲಕ್ಷಣಾಃ" "ಭೇಷಜಂ ಭಗವತ್ಪ್ರಾಪ್ತಿಃ" "ಯತ್ರನಾನ್ಯತ್ಪಶ್ಯತಿ. ನಾನ್ಯಚ್ಛೃಣೋತಿ, ನಾನ್ಯದ್ವಿಜಾನಾತಿ,"** ಇತ್ಯಾದಿ ಪ್ರಮಾಣಗಳು ಅನುಸಂಧೇಯಗಳು. **ತದ್ದ್ವಯವಚನತಃ ಕ್ಷೇಮಕರಣಮ್**– ದ್ವಯಮನ್ತ್ರಾರ್ಥಗಳನ್ನು ಚನ್ನಾಗಿ ವಿಮರ್ಶಿಸಿ ತಿಳಿದು ಅದನ್ನು ಯಾವಾಗಲೂ ಪಠನಮಾಡುವುದರ ಮೂಲಕ ಅನುಸಂಧಾನಕ್ಕಿಂತಲೂ ಹೆಚ್ಚಾದ ಕ್ಷೇಮವನ್ನುಂಟುಮಾಡುವದು ಬೇರೆ ಇಲ್ಲವು **"ಯೇನಕೇನಾಪಿ ಪ್ರಕಾರೇಣದ್ವಯವಕ್ತಾತ್ವಮ್"** ಎಂಬುದು ಶ್ರೀರಂಗನಾಥನೇ ನಮ್ಮ ಯತಿವರ್ಯರಿಗೆ ಉಪದೇಶಿಸಿರುವದರಿಂದ ಸರ್ವೋತ್ತಮವಾದ ಹಿತಕಾರಕವಾದುದು, **"ದ್ವಯಾತ್ಪರತರಂ ಮನ್ತ್ರಂನಾಸ್ತಿ ನಾರಾಯಣಾತ್ಪರಮ್"** ಎಂದು ಹೇಳಿರುವದು ಮುಕ್ತಿಗಿಂತಲೂ ಹೆಚ್ಚಿನಸೌಖ್ಯವಿಲ್ಲದೆ, ಅಂತಹಸೌಖ್ಯವನ್ನು ಸಾಧಿಸಿ ಕೊಡುವ ದ್ವಯೋಚ್ಚಾರಣೆಗಿಂತ ಹೆಚ್ಚಿನ ಹಿತಕರವಾದುದು ಯಾವುದೂಇಲ್ಲವೆಂಬ ಭಾವವು, ಇದು ಇಂತಹ ಮನ್ತ್ರವಾದುದರಿಂದಲೇ ಸಾತ್ವಿಕತನ್ತ್ರದಲ್ಲಿ **ಲಬ್ಧ್ವೈವ ಮನ್ತ್ರರಾಜಾನಂ"** ಎಂದೂ, ಪಾದ್ಮದಲ್ಲಿ ಮನ್ತ್ರರತ್ನವೆಂದೂ, **ಅಹೋದ್ವಯಸ್ಯ ಮಾಹಾತ್ಮ್ಯಮ್"** ಎಂದೂ, **"ದ್ವಯಾತ್ಪರತರೋಮನ್ತ್ರೋ ನಾಸ್ತಿಸರ್ವಪ್ರದೋನೃಣಾಮ್"** ಎಂದೂ ಹೇಳಲ್ಪಟ್ಟಿರುತ್ತದೆ ಆದುದರಿಂದ ಈ ದ್ವಯಮನ್ತ್ರವು ಅರ್ಥಾನುಸಂಧಾನಪೂರ್ವಕ ಅನುಕೂಲವಾದ ಹಾಗೆಲ್ಲಾ ಪಠನೀಯವು.

ಎಂಬಲ್ಲಿಗೆ ಶ್ರೀ ನಿಗಮಾನ್ತ ಮಹಾದೇಶಿಕವಿರಚಿತ **ಶ್ರೀಮದ್ರಹಸ್ಯತ್ರಯಸಾರದ** ಇಪ್ಪತ್ತೆಂಟನೆಯ ದ್ವಯಾಧಿಕಾರಕ್ಕೆ ರಿಟೈರ್ಡು ಸರ್ಕಲ್ ಇನ್ಸ್‌ಪೆಕ್ಟರು ತಿರುನಾರಾಯಣಪುರಂ ವಿಜಯರಾಘವ ಶರ್ಮನಿಂದ ರಚಿಸಲ್ಪಟ್ಟ ಆಚಾರ್ಯಹೃದಯಾನ್ವೇಷಿಣೀ ಎಂಬ ಕನ್ನಡ ಅರ್ಥತಾತ್ಪರ್ಯಗಳು ಸಂಪೂರ್ಣವು.

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯನಮಃ

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯನಮಃ

ಮೈಸೂರು ಸಿಟಿ ರಾಮಚಂದ್ರ ಅಗ್ರಹಾರದಲ್ಲಿರುವ ಶ್ರೀಕಾಂತ ಪವರ್ ಪ್ರೆಸ್‌ನಲ್ಲಿ ಪಂಡಿತ್ ಕೆ. ಎಸ್. ವರದರಾಜಯ್ಯಂಗಾರ್ರಿಂದ ಮುದ್ರಿಸಲ್ಪಟ್ಟಿತು.